[illegible]

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವಿರಚಿತವಾದ
ಭಾವಪ್ರಕಾಶವ್ಯಾಖ್ಯಾನದಿಂದ ಅಲಂಕೃತವಾದುದು.

(೨೦೦೦ ಪ್ರತಿಗಳು)

೧೯೩೬
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್
ಮೈಸೂರು

ಬೆಲೆ ೨ ರೂ.

ಶ್ರೀಜಗದ್ಗುರುಪಂಚಾಚಾರ್ಯಾಃ ಪ್ರಸೀದಂತು.

ಶ್ರೀಕಾಶೀನಾಥಗ್ರಂಥಮಾಲಾ

ತ್ರಿಂಶತ್ತಮಪುಷ್ಪ

ಸಿದ್ಧಾಂತಶಿಖಾಮಣಿ

ನಾಗನೂರು ಬೃಹನ್ಮಠಾಧ್ಯಕ್ಷ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವಿರಚಿತವಾದ

ಭಾವಪ್ರಕಾಶವ್ಯಾಖ್ಯಾನದಿಂದ ಅಲಂಕೃತವಾದುದು.

(೨೦೦೦ ಪ್ರತಿಗಳು)

೧೯೩೬

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಮೈಸೂರು

(ಕ [illegible] ಬೆಲೆ ೨ ರೂ.

[illegible]

ಶ್ರೀಜಗದ್ಗುರುಪಂಚಾಚಾರ್ಯಾಃ ಪ್ರಸೀದಂತು.

ಪ್ರಸ್ತಾವನೆ.

ಶ್ರೀಜಗದ್ಗುರುರೇಣುಕಾದಿಪಂಚಾಚಾರ್ಯರು ಪರಶಿವನ ಅಪ್ಪಣೆಯ ಮೇರೆಗೆ ಚತುರ್ಯುಗಗಳಲ್ಲಿಯೂ ಶ್ರೀಸೋಮನಾಥಾದಿಪಂಚಶಿವಲಿಂಗಗಳಿಂದವತರಿಸಿ, ವೀರಶೈವಮತವನ್ನು ಸ್ಥಾಪಿಸಿರುವ ವಿಷಯವು—ವೀರಾಗಮ-ವಿಜಯಾಗಮ-ಸ್ವಾಯಂಭುವಾಗಮ-ಸಿದ್ಧಾಗಮ-ಸುಪ್ರಭೇದಾಗಮಾದಿಶಿವಾಗಮಗಳಲ್ಲಿ ಘಂಟಾಘೋಷವಾಗಿ ಉಕ್ತವಾಗಿರುವುದು ಸುಪ್ರಸಿದ್ಧವಷ್ಟೆ! ಈ ಪೂಜ್ಯಪಾದರು ನಿಗಮಾಗಮವಿಖ್ಯಾತವಾದ ಶಿವಾದ್ವೈತಸಿದ್ಧಾಂತವನ್ನು ಸರ್ವತ್ರ ನೆಲೆಗೊಳಿಸಿದರು. ಶಿವಜೀವೈಕ್ಯರೂಪ ಲಿಂಗಾಂಗಸಾಮರಸ್ಯವನ್ನು ಬೋಧಿಸುವುದೇ ಈ ಸಿದ್ಧಾಂತದ ರಹಸ್ಯವು. ಮುಕ್ತಿಮಂದಿರವನ್ನು ಪ್ರವೇಶಿಸುವುದಕ್ಕಾಗಿ ಈ ಸಿದ್ಧಾಂತದಲ್ಲಿ ಭಗವತ್ಪಾದರಿಂದ, ಭಕ್ತ-ಮಹೇಶ-ಪ್ರಸಾದಿ-ಪ್ರಾಣಲಿಂಗಿ-ಶರಣ-ಐಕ್ಯ ಎಂಬ ಹೆಸರಿನ ಆರು ಸೋಪಾನರೂಪ ಸ್ಥಲಗಳು ರಚಿಸಲ್ಪಟ್ಟಿರುವುವು. ಇವೇ ಷಟ್‌ಸ್ಥಲಗಳೆಂದು ಪ್ರಸಿದ್ಧವಾಗಿರುವುವು. ಈ ಷಟ್‌ಸ್ಥಲಜ್ಞಾನವೇ ಮೋಕ್ಷಕ್ಕೆ ಮೂಲಭೂತವಾಗಿರುವುದು. ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ಈ ಷಟ್‌ಸ್ಥಲಸಿದ್ಧಾಂತವನ್ನುಪದೇಶಿಸಿ, ಆ ಮಹರ್ಷಿಪುಂಗವರನ್ನು ಮುಕ್ತರನ್ನಾಗಿ ಮಾಡಿದರು. ಈ ಗ್ರಂಥದಲ್ಲಿ ಇದೇ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ಈ ಗ್ರಂಥದಲ್ಲಿ ಒಟ್ಟಿಗೆ ೨೧ ಪರಿಚ್ಛೇದಗಳಿದ್ದು, ಒಟ್ಟು ೧೩೩೦ ಶ್ಲೋಕಗಳಿರುವುವು. ಇವುಗಳಲ್ಲಿ ೧-೨-೩-೪ ಮತ್ತು ೨೧ ನೆಯ ಪರಿಚ್ಛೇದಗಳು ಮಾತ್ರ ಚಾರಿತ್ರಿಕಾದಿ ವಿಷಯಗಳನ್ನು ಪ್ರತಿಪಾದಿಸುತ್ತಿದ್ದು, ೨೩೪ ಶ್ಲೋಕಗಳಿಂದೊಡಗೂಡಿರುವುವು.* ೫ ರಿಂದ ೨೦ ರ ವರೆಗಿರುವ ೧೬ ಪರಿಚ್ಛೇದಗಳು ಷಟ್ಸ್ಥಲಸಿದ್ಧಾಂತವನ್ನು ಪ್ರತಿಪಾದಿಸುತ್ತಿದ್ದು, ೧೦೯೬ ಶ್ಲೋಕಗಳಿಂದೊಡಗೂಡಿರುವುವು. ಈ ೧೬ ಪರಿಚ್ಛೇದಗಳಲ್ಲಿ ೧೦೧ ಸ್ಥಲಗಳ ಸಮಗ್ರಸ್ವರೂಪವು ನಿರೂಪಿಸಲ್ಪಟ್ಟಿರುವುದು. ವೀರಶೈವಸಿದ್ಧಾಂತದಲ್ಲಿ ಪರಬ್ರಹ್ಮವು ಸ್ಥಲಶಬ್ದದಿಂದ ಪ್ರತಿಪಾದಿತವಾಗಿರುವುದು. ಈ ಸ್ಥಲವು ಅಂಗಸ್ಥಲ-ಲಿಂಗಸ್ಥಲಭೇದದಿಂದ ಎರಡು ಪ್ರಕಾರವಾಗಿದ್ದು, ಅಂಗಸ್ಥಲವು ೪೪ ಪ್ರಕಾರವಾಗಿಯೂ, ಲಿಂಗಸ್ಥಲವು ೫೭ ಪ್ರಕಾರವಾಗಿಯೂ ವಿಭಾಗವನ್ನು ಹೊಂದಿ, ಒಟ್ಟು ೧೦೧ ಸ್ಥಲಗಳಾಗಿರುವುವು. ಈ ನೂರೊಂದುಸ್ಥಲಗಳಲ್ಲಿ—ಪ್ರಮಾಣವಿಚಾರ,

---

* ಈ ಗ್ರಂಥದಲ್ಲಿ ಶ್ರೀರೇಣುಕಾಚಾರ್ಯರ ವಿಷಯದಲ್ಲುಕ್ತವಾಗಿರುವ ಚರಿತ್ರಭಾಗವು ತ್ರೇತಾಯುಗಕ್ಕೆ ಸಂಬಂಧಪಟ್ಟುದಾಗಿರುವುದು.

ಗುರುಮಾಹಾತ್ಮ್ಯವಿಚಾರ, ಲಿಂಗಧಾರಣ-ಭಸ್ಮಧಾರಣ-ರುದ್ರಾಕ್ಷಧಾರಣವಿಚಾರ, ಪಂಚಾಕ್ಷರಮಂತ್ರವಿಚಾರ, ವರ್ಣಾಶ್ರಮಧರ್ಮವಿಚಾರ, ಕ್ರಿಯಾಜ್ಞಾನಸಮುಸಮುಚ್ಚಯವಿಚಾರ, ದ್ವೈತಾದ್ವೈತವಿಚಾರ, ಜೀವಾತ್ಮ-ಪರಮಾತ್ಮವಿಚಾರ, ಶಕ್ತಿವಿಚಾರ, ಜಗತ್ಸತ್ಯತ್ವವಿಚಾರ, ಪರಿಣಾಮವಾದವಿಚಾರ, ಲಿಂಗಾಂಗಸಾಮರಸ್ಯವಿಚಾರ ಇವೇ ಮೊದಲಾದ ಅನಂತವಿಷಯಗಳು ಚನ್ನಾಗಿ ಪ್ರತಿಪಾದಿಸಲ್ಪಟ್ಟಿರುವುವು. ಈ ಗ್ರಂಥವು ಮುಮುಕ್ಷುಗಳ ಕಲ್ಯಾಣಕ್ಕಾಗಿ ಪಾರಮಾರ್ಥಿಕತತ್ತ್ವಪ್ರತಿಪಾದಕವಾದ ಮತಸಿದ್ಧಾಂತವನ್ನೇ ವಿಶೇಷವಾಗಿ ಬೋಧಿಸುತ್ತಿರುವುದು. ತತ್ತ್ವಾರ್ಥಪೂರಿತವಾದ ಈ ಮಹಾಪ್ರಬಂಧದ ರಚನಾಶೈಲಿಯು ಅತ್ಯಂತಹೃದಯಂಗಮವಾಗಿದ್ದು, ಭಗವದ್ಗೀತೆಯಂತೆ ಬಹುಭಾವಗರ್ಭಿತವಾಗಿರುವುದು. ವ್ಯಾಸಮಹರ್ಷಿಗಳು ಶ್ರೀಕೃಷ್ಣಾರ್ಜುನರ ಸಂವಾದವನ್ನು ಸಂಗ್ರಹಿಸಿ, ಅದಕ್ಕೆ "**ಭಗವದ್ಗೀತಾ**" ಎಂಬ ನಾಮವನ್ನಿಟ್ಟಂತೆ, ಶ್ರೀಶಿವಯೋಗಿಶಿವಾಚಾರ್ಯರು ಶ್ರೀರೇಣುಕಾಗಸ್ತ್ಯರ ಸಂವಾದವನ್ನು ಸಂಗ್ರಹಿಸಿ, ಇದಕ್ಕೆ "**ಸಿದ್ಧಾಂತಶಿಖಾಮಣಿ**" ಎಂಬ ನಾಮವನ್ನಿಟ್ಟರು. ಇದೇ ಕಾರಣದಿಂದಲೇ ಈ ಗ್ರಂಥರತ್ನವು "**ರೇಣುಕಗೀತಾ-ರೇಣುಕಾಗಸ್ತ್ಯ ಸಂವಾದ**" ಎಂಬ ಪವಿತ್ರನಾಮಾಂತರಗಳಿಂದಲೂ ಪ್ರಸಿದ್ಧವಾಗಿದೆ. ವೇದಾಂತಸಾರ ವೀರಶೈವಚಿಂತಾಮಣಿ ಮೊದಲಾದ ಗ್ರಂಥಕಾರರು ಇದನ್ನು "**ರೇಣುಕಾಗಮ**" ಎಂಬ ನಾಮಾಂತರದಿಂದಲೂ ಉಲ್ಲೇಖಿಸಿರುವರು. ಈ ಗ್ರಂಥವು ಸಿದ್ಧಾಂತಾಗಮ ಪರ್ಯಾಯನಾಮಕಸಿದ್ಧಾಗಮದ ಸಾರರೂಪವಾಗಿರುವುದೆಂಬ ವಿಷಯವು, ಶ್ರೀಕರ ಭಾಷ್ಯದಿಂದ ತಿಳಿದುಬರುತ್ತದೆ. ಶ್ರೀಪತಿಪಂಡಿತರು "**ಪತ್ಯುರಸಾಮಂಜಸ್ಯಾತ್**" (೨-೨-೩೭) ಎಂಬ ಬ್ರಹ್ಮಸೂತ್ರದ ಭಾಷ್ಯದಲ್ಲಿ, ಈ ಗ್ರಂಥದ ೫ ನೆಯ ಪರಿಚ್ಛೇದ ದಲ್ಲುಕ್ತವಾಗಿರುವ—

ಅಗಸ್ತ್ಯ ಮುನಿಶಾರ್ದೂಲ ಸಮಸ್ತಾಗಮಪಾರಗ ।
ಶಿವಜ್ಞಾನಕರಂ ವಕ್ಷ್ಯೇ ಸಿದ್ಧಾಂತಂ ಶೃಣು ಸಾದರಂ ॥
ಅಗಸ್ತ್ಯ ಖಲು ಸಿದ್ಧಾಂತಾ ವಿಖ್ಯಾತಾ ರುಚಿಭೇದತಃ ।
ಭಿನ್ನಾಚಾರಸಮಾಯುಕ್ತಾ ಭಿನ್ನಾರ್ಥಪ್ರತಿಪಾದಕಾಃ ॥

ಇವೇ ಮೊದಲಾದ ೮ ಶ್ಲೋಕಗಳನ್ನು ಅನುಕ್ರಮವಾಗಿ ಉದಾಹರಿಸಿ, ಈ ಶ್ಲೋಕಗಳು ಸಿದ್ಧಾಂತಾಗಮಪ್ರೋಕ್ತಗಳೆಂದು ಉಲ್ಲೇಖಿಸಿರುವರು. ಇದರಿಂದ ಈ ಗ್ರಂಥರತ್ನವು ಸಿದ್ಧಪದವಾಚ್ಯರೇವಣಸಿದ್ಧರ ವಿಷಯಕವಾಗಿರುವ ಸಿದ್ಧಾಗಮದ ಸಾರರೂಪವಾಗಿರುವುದೆಂದು ಸ್ಪಷ್ಟವಾಗುವುದು. ಈ ಗ್ರಂಥರತ್ನದ ಯೋಗ್ಯತೆಯು

ಅಸಾಧಾರಣವಾಗಿರುವುದು. ಈ ಗ್ರಂಥವು ತನ್ನ ನಾಮಕ್ಕೆ ತಕ್ಕಂತೆ, ಸಿದ್ಧಾಂತತತ್ತ್ವವನ್ನು ಪ್ರತಿಪಾದಿಸತಕ್ಕ ಸಮಸ್ತಗ್ರಂಥಗಳಲ್ಲಿ ಶಿಖಾಮಣಿಯಂತೊಪ್ಪುತ್ತಿರುವುದು. ಆದುದರಿಂದಲೇ ಈ ಗ್ರಂಥಕಾರರು ಗ್ರಂಥಾಂತ್ಯದಲ್ಲಿ—

ಶ್ರೀವೇದಾಗಮವೀರಶೈವಸರಣಿಂ ಶ್ರೀಷಟ್‌ಸ್ಥಲೋದ್ಯನ್ಮಣಿಂ
ಶ್ರೀಜೀವೇಶ್ವರಯೋಗಪದ್ಮತರಣಿಂ ಶ್ರೀಗೋಪ್ಯಚಿಂತಾಮಣಿಂ ।
ಶ್ರೀಸಿದ್ಧಾಂತಶಿಖಾಮಣಿಂ ಲಿಖತಿ ಯಸ್ತಂ ಲೇಖಯತ್ಯಾದರಾತ್
ಶ್ರೋತಾ ಶ್ರಾವಯಿತಾ ಸ ಯಾತಿ ವಿಮಲಾಂ ಭುಕ್ತಿಂ ಚ ಮುಕ್ತಿಂ ಪರಾಂ ॥

ಈ ರೀತಿಯಾಗಿ ಈ ಗ್ರಂಥದ ಪ್ರಾಶಸ್ತ್ಯವನ್ನು ಮುಕ್ತಕಂಠದಿಂದ ಉದ್ಘೋಷಿಸಿರುವರು. ಈ ಉದ್ಘೋಷಣವು ಸ್ವಾಭಾವಿಕವಾಗಿರುವುದಲ್ಲದೆ, ಅತಿಶಯೋಕ್ತಿಯುತವಾದುದಲ್ಲ.

ವೀರಶೈವಮತಗ್ರಂಥಗಳಲ್ಲೆಲ್ಲ ಈ ಗ್ರಂಥವು ಅತ್ಯಂತಪ್ರಾಚೀನವಾದುದು. ವೀರಶೈವಸಿದ್ಧಾಂತವನ್ನು ಪ್ರತಿಪಾದಿಸತಕ್ಕ ಗ್ರಂಥಗಳು ಈ ಪ್ರಪಂಚದಲ್ಲಿ ಎಷ್ಟಿರುವುವೋ, ಆ ಸಮಸ್ತಗ್ರಂಥಗಳಲ್ಲಿಯೂ ಈ ಗ್ರಂಥರತ್ನದ ಪವಿತ್ರನಾಮವು ಪ್ರಕಾಶಿಸುತ್ತಿರುವುದು. ಕ್ರಿಸ್ತಶಕ **೧೧೬೦** ರಲ್ಲಿದ್ದ ಶ್ರೀಪತಿಪಂಡಿತರಿಂದ ರಚಿಸಲ್ಪಟ್ಟಿರುವ "**ಶ್ರೀಕರಭಾಷ್ಯ**" ದಲ್ಲಿಯೂ ಸಹ ಈ ಗ್ರಂಥದ ವಾಕ್ಯಗಳು ಅನೇಕ ಕಡೆಗೆ ಪ್ರಮಾಣರೂಪವಾಗಿ ಉದಾಹರಿಸಲ್ಪಟ್ಟಿರುವುವು. ಶ್ರೀಪತಿಪಂಡಿತರು "**ಅಥಾತೋ ಬ್ರಹ್ಮಜಿಜ್ಞಾಸಾ**" (೧-೧-೧) ಎಂಬ ಬ್ರಹ್ಮಸೂತ್ರಕ್ಕೆ ಭಾಷ್ಯವನ್ನು ಬರೆಯುವ ಸಂದರ್ಭದಲ್ಲಿ—

"ಪವಿತ್ರಂ ತೇ—ಇತಿ ಋಗ್ವೇದಮಂತ್ರಸ್ಯ ಸಿದ್ಧಾಂತಶಿಖಾಮಣೌ ಶ್ರೀರೇಣುಕಾಚಾರ್ಯೇಣ ಲಿಂಗಧಾರಣಪರತ್ವೇನ ನಿರ್ದೇಶಾತ್"

"ರೇಣುಕಭಗವತ್ಪಾದಾಚಾರ್ಯೇಣಾಪಿ—"ಪಿಂಡತಾ ಪಿಂಡವಿಜ್ಞಾನಮಿತ್ಯಾರಭ್ಯ, ಏತಾನಿ ಶಿವಭಕ್ತಸ್ಯ ಕರ್ತವ್ಯಾನಿ ಪ್ರಯತ್ನತಃ ।" ಇತ್ಯಂತೇನ ಸಿದ್ಧಾಂತಶಿಖಾಮಣೌ ತಸ್ಯೈವೋಪದೇಶಾತ್."

ಇತ್ಯಾದಿವಾಕ್ಯಗಳನ್ನು ಬರೆದು ಸಿದ್ಧಾಂತಶಿಖಾಮಣಿಯ ಪವಿತ್ರನಾಮವನ್ನು ಉಲ್ಲೇಖಿಸಿರುವರು. ಇದಲ್ಲದೆ ಸುಪ್ರಸಿದ್ಧ "**ಶ್ರೀಕಂಠಭಾಷ್ಯ**" ಕಾರರಾದ ಶ್ರೀಕಂಠಶಿವಾಚಾರ್ಯರೂ ಸಹ "**ಅವಿಭಾಗೇನ ದೃಷ್ಟತ್ವಾತ್**" (೪-೪-೪) ಎಂಬ ಬ್ರಹ್ಮಸೂತ್ರದ ಭಾಷ್ಯದಲ್ಲಿ ಸಿದ್ಧಾಂತಶಿಖಾಮಣಿಯ ೯ನೆಯ ಪರಿಚ್ಛೇದದಲ್ಲುಕ್ತ

ವಾಗಿರುವ " **ಮುಕ್ತೇಃ ಶಿವಸಮೋ ಭವೇತ್** " ಎಂಬ ಶ್ಲೋಕವನ್ನು ಪ್ರಮಾಣವನ್ನಾಗಿ ಉದಾಹರಿಸಿದ್ದಾರೆ. ಈ ರೀತಿಯಾಗಿ ಜಗತ್ಪ್ರಸಿದ್ಧರಾದ ಭಾಷ್ಯಕಾರರೇ ಈ ಗ್ರಂಥವನ್ನು ಪ್ರಮಾಣವನ್ನಾಗಿ ಸ್ವೀಕರಿಸಿದ ಮೇಲೆ, ಇದರ ಯೋಗ್ಯತೆಯು ಎಷ್ಟು ಘನವಾದುದಾಗಿರಬಹುದೆನ್ನುವುದನ್ನು ಬೇರೆ ವರ್ಣಿಸಬೇಕಾಗಿಲ್ಲ. ಈ ಭಾಷ್ಯಕಾರರಲ್ಲದೆ, ಅನೇಕಜನ ಪ್ರಾಚೀನಪರಮತೀಯಪಂಡಿತರೂ ಸಹ ಈ ಗ್ರಂಥದ ಪ್ರಮಾಣಗಳನ್ನು ತಮ್ಮತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿರುತ್ತಾರೆ. ಸಿದ್ಧಾಂತಕೌಮುದಿಯೆಂಬ ವ್ಯಾಕರಣಗ್ರಂಥವನ್ನು ರಚಿಸಿ ಜಗದ್ವಿಖ್ಯಾತರಾದ ಭಟ್ಟೋಜಿದೀಕ್ಷಿತರಿಂದ ವಿರಚಿತವಾಗಿರುವ " **ತಂತ್ರಾಧಿಕಾರನಿರ್ಣಯ** " ಎಂಬ ಗ್ರಂಥದಲ್ಲಿಯೂ, ಕಮಲಾಕರಭಟ್ಟರಿಂದ ವಿರಚಿತವಾಗಿರುವ " **ನಿರ್ಣಯಸಿಂಧು** " ಎಂಬ ಗ್ರಂಥದಲ್ಲಿಯೂ, " **ಶಾರದಾತಿಲಕ** " " **ನಿರ್ಮಾಲ್ಯರತ್ನಾಕರ** " " **ಶೈವಬ್ರಾಹ್ಮಣೋತ್ಪತ್ತಿ** " ಮೊದಲಾದ ಗ್ರಂಥಗಳಲ್ಲಿಯೂ ಈ ಗ್ರಂಥದ ಪ್ರಮಾಣಗಳು ಉದಾಹರಿಸಲ್ಪಟ್ಟಿರುವುವು. ಈ ರೀತಿಯಾಗಿ ಸ್ವಮತಪರಮತಪಂಡಿತಮಂಡಲಿಯಿಂದ ಅಂಗೀಕೃತವಾಗಿರುವ ಈ ಗ್ರಂಥದ ಪ್ರಾಶಸ್ತ್ಯವನ್ನು ಪಾಠಕರೇ ಅರಿತುಕೊಳ್ಳಬಹುದಾಗಿದೆ. ಅಸ್ತು!

ಇಂತಹ ಅಮೂಲ್ಯವಾದ ಗ್ರಂಥವನ್ನು ರಚಿಸಿದ ಶ್ರೀಶಿವಯೋಗಿಶಿವಾಚಾರ್ಯರು ಯಾವ ದೇಶದಲ್ಲಿ ಜನ್ಮವೆತ್ತಿದರು ? ಎಷ್ಟನೆಯ ಶತಮಾನದಲ್ಲಿದ್ದರು ? ಎಂಬುದು ಈ ಗ್ರಂಥದಿಂದ ಸ್ಪಷ್ಟವಾಗಿ ತಿಳಿಯುವುದಿಲ್ಲ. ಆದರೆ ಗ್ರಂಥಕಾರರು ೧ನೆಯ ಪರಿಚ್ಛೇದದಲ್ಲಿ— ತಮ್ಮ ವಂಶದ ಮೂಲಪುರುಷನು " **ಶಿವಯೋಗಿಶಿವಾಚಾರ್ಯ** " ನೆಂದೂ, ಅವನ ವಂಶದಲ್ಲಿ " **ಮುದ್ದದೇವಶಿವಾಚಾರ್ಯ** " ನೆಂಬ ಆಚಾರ್ಯನು ಜನಿಸಿದನೆಂದೂ, ಅವನಿಗೆ " **ಸಿದ್ಧನಾಥಶಿವಾಚಾರ್ಯ** " ನೆಂಬ ಪುತ್ರನು ಜನಿಸಿದನೆಂದೂ, ಆ ಸಿದ್ಧನಾಥಶಿವಾಚಾರ್ಯನ ಪುತ್ರರೇ ತಾವೆಂದೂ ಮಾತ್ರ ಹೇಳಿಕೊಂಡಿದ್ದಾರೆ. ಇದರಿಂದ ಈ ಗ್ರಂಥಕಾರರು ವೀರಶೈವಮತದ ಆಚಾರ್ಯವಂಶ (ಗುರುವಂಶ) ಸಂಭೂತರೆಂಬ ವಿಷಯವು ಮಾತ್ರ ಸ್ಪಷ್ಟವಾಗುವುದಲ್ಲದೆ, ದೇಶಕಾಲಗಳ ವಿಷಯವು ಸ್ಪಷ್ಟವಾಗುವುದಿಲ್ಲ. ಆದರೆ ಇವರು ತಮ್ಮ ವಂಶಪರಂಪರೆಯಲ್ಲಿ ಉಲ್ಲೇಖಿಸಿರುವ " **ಮುದ್ದದೇವ** " ಎಂಬ ಹೆಸರನ್ನು ವಿಚಾರಮಾಡಿನೋಡಿದರೆ, ಇವರು ಕರ್ಣಾಟಕದೇಶದವರೆಂದು ಹೇಳಬಹುದಾಗಿದೆ. ಏಕೆಂದರೆ—ಕರ್ಣಾಟಕದೇಶದಲ್ಲಿ ಈಗಲೂ " **ಮುದ್ದ-ಮುದ್ದವೀರ-ಮುದ್ದಣ-ಮುದ್ದದೇವ** " ಎಂಬ ಹೆಸರುಗಳು ವಿಶೇಷವಾಗಿ ರೂಢಿಯಲ್ಲಿರುತ್ತವಲ್ಲದೆ, ಇನ್ನಾವ ದೇಶಗಳಲ್ಲಿಯೂ ರೂಢಿಯಲ್ಲಿರುವುದಿಲ್ಲ. ಮುಖ್ಯವಾಗಿ " **ಮುದ್ದು** " ಎಂಬ ಶಬ್ದವು ಕರ್ಣಾಟಕಭಾಷೆಯದಾಗಿರುವುದು. ಇದು " ಪ್ರೀತಿ " ಎಂಬ ಅರ್ಥವನ್ನು ಬೋಧಿಸುತ್ತಿರುವುದು.

ಈ ಕರ್ಣಾಟಕಶಬ್ದವನ್ನೇ ಈ ಗ್ರಂಥಕಾರರು ತಮ್ಮ ಪಾಂಡಿತ್ಯಪ್ರಭಾವದಿಂದ "ಮುದಂ-ದದಾತೀತಿ, ಮುದ್ದಃ" ಎಂದು ವಿಗ್ರಹಮಾಡಿ, ಸಂಸ್ಕೃತವನ್ನಾಗಿ ಮಾಡಿರುವರು. ಒಟ್ಟಿಗೆ ವಿಮರ್ಶಾತ್ಮಕದೃಷ್ಟಿಯಿಂದ ವಿಚಾರಮಾಡಿನೋಡಿದರೆ, ಈ ಹೆಸರು ಕನ್ನಡಭಾಷೆಯದೆಂದೂ, ಇವರು ಕನ್ನಡದೇಶದ ವೀರಶೈವಗುರುಸಂತತಿಯವರೆಂದೂ ಸ್ಪಷ್ಟವಾಗುತ್ತದೆ. ಇನ್ನು ಇವರು ಯಾವ ಕಾಲದಲ್ಲಿದ್ದರೆಂಬ ವಿಷಯವನ್ನು ಪರ್ಯಾಲೋಚಿಸಬೇಕಾಗಿದೆ. ಕ್ರಿ. ಶ. ೧೦೬೦ ರಲ್ಲಿದ್ದ ಶ್ರೀಪತಿಪಂಡಿತರು ತಮ್ಮಿಂದ ರಚಿಸಲ್ಪಟ್ಟಿರುವ ಶ್ರೀಕರಭಾಷ್ಯದಲ್ಲಿ, ಅನೇಕಕಡೆಗೆ ಈ ಗ್ರಂಥದ ನಾಮವನ್ನು ಉಲ್ಲೇಖಿಸಿರುವುದರಿಂದ, ಈ ಗ್ರಂಥವು ಶ್ರೀಕರಭಾಷ್ಯಕ್ಕಿಂತಲೂ ಎಷ್ಟೋ ಪುರಾತನವಾದುದೆಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ. ಇದಲ್ಲದೆ ಶ್ರೀಪತಿಪಂಡಿತರಿಗಿಂತಲೂ ಪ್ರಾಚೀನರಾಗಿರುವ ಶ್ರೀಕಂಠಶಿವಾಚಾರ್ಯರೂ ಸಹ, ತಮ್ಮ ಭಾಷ್ಯದಲ್ಲಿ ಈ ಗ್ರಂಥದ ಪ್ರಮಾಣವನ್ನು ಉಲ್ಲೇಖಿಸಿರುವುದನ್ನು ನೋಡಿದರೆ, ಈ ಗ್ರಂಥವು ಶ್ರೀಕಂಠಭಾಷ್ಯಕ್ಕಿಂತಲೂ ಪುರಾತನವಾದುದೆಂಬುದು ನಿರ್ವಿವಾದವು. ಇದಲ್ಲದೆ ಈ ಗ್ರಂಥಕಾರರು ೧ ನೆಯ ಪರಿಚ್ಛೇದದಲ್ಲಿ ಉಲ್ಲೇಖಿಸಿರುವ—

ಯೇನ ರಕ್ಷಾವತೀ ಜಾತಾ ಶಿವಭಕ್ತಿಃ ಸನಾತನೀ ।
ಬೌದ್ಧಾದಿಪ್ರತಿಸಿದ್ಧಾಂತಮಹಾಧ್ವಾಂತಾಂಶುಮಾಲಿನಾ ॥೨೩॥

ಈ ಶ್ಲೋಕದ ಅಭಿಪ್ರಾಯವನ್ನು ವಿಚಾರಮಾಡಿನೋಡಿದರೆ—ಈ ಗ್ರಂಥಕಾರರ ಕಾಲದಲ್ಲಿ ಬೌದ್ಧರ ಉಪದ್ರವದಿಂದ, ಅನಾದಿಕಾಲದಿಂದ ಬಂದ ಶಿವಭಕ್ತಿಗೆ ವಿಶೇಷವಾದ ತೊಂದರೆಯುಂಟಾಗಿತ್ತೆಂದೂ, ಇವರು ಬೌದ್ಧಸಿದ್ಧಾಂತವನ್ನು ಚನ್ನಾಗಿ ಖಂಡಿಸಿ, ಶಿವಭಕ್ತಿಯನ್ನು ರಕ್ಷಿಸಿದರೆಂದೂ ತಿಳಿದುಬರುತ್ತದೆ. ನಮ್ಮ ಭರತಖಂಡದಲ್ಲಿ ಬೌದ್ಧಸಿದ್ಧಾಂತವು ಈಗ್ಗೆ ೨ ಸಾವಿರ ವರ್ಷಗಳ ಪೂರ್ವದಲ್ಲಿ ವಿಶೇಷಪ್ರಚಾರದಲ್ಲಿದ್ದಿತೆಂಬ ವಿಷಯವು ಎಲ್ಲರಿಗೂ ತಿಳಿದುದಾಗಿದೆ. ಬೌದ್ಧರ ಪ್ರಾಬಲ್ಯಸಮಯದಲ್ಲಿಯೇ ಈ ಮಹನೀಯರು ಜನ್ಮವೆತ್ತಿದರೆಂಬ ವಿಷಯವು ಇವರ ಬರವಣಿಗೆಯಿಂದಲೇ ತೋರಿಬರುವುದರಿಂದ, ಇವರು ಈಗ್ಗೆ ೨. ಸಾವಿರವರ್ಷಗಳ ಪೂರ್ವದಲ್ಲಿ ಇದ್ದರೆಂಬುದು ನಿರ್ವಿವಾದವು. ಇದೇ ರೀತಿಯಾಗಿ ಅನೇಕಜನ ವಿದ್ವಾಂಸರು ಇವರು ೨ ಸಾವಿರ ವರ್ಷಗಳ ಪೂರ್ವದಲ್ಲಿದ್ದರೆಂದು ಅಭಿಪ್ರಾಯಪಡುತ್ತಾರೆ. ಅಸ್ತು!

ಈ ಗ್ರಂಥವು ಶ್ರೀರೇಣುಕಾಗಸ್ತ್ಯರ ಸಂವಾದರೂಪವಾಗಿರುವುದಷ್ಟೆ! ಶ್ರೀರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗಳಿಗೆ ಷಟ್ಸ್ಥಲಸಿದ್ಧಾಂತವನ್ನೆಲ್ಲ ಬೋಧಿಸಿ, ಅಂತ್ಯದಲ್ಲಿ—

ಅಗಸ್ತ್ಯ ಮುನಿಶಾರ್ದೂಲ ತಪಸ್ಸಿದ್ಧಮನೋರಥ ।
ತ್ವಾಂ ವಿನಾ ಶಿವಶಾಸ್ತ್ರಸ್ಯ ಕಃ ಶ್ರೋತುಮಧಿಕಾರವಾನ್ ॥೭೨॥
ಪಾತ್ರಂ ಶಿವಪ್ರಸಾದಸ್ಯ ಭವಾನೇಕೋ ನ ಚಾಪರಃ ।
ಇತಿ ನಿಶ್ಚಿತ್ಯ ಕಥಿತಂ ಮಯಾ ತೇ ತಂತ್ರಮೀದೃಶಂ ॥
ಸ್ಥಾಪ್ಯತಾಂ ಸರ್ವಲೋಕೇಷು ತಂತ್ರಮೇತತ್ತ್ವಯಾ ಮುನೇ॥೭೩॥

(ಪರಿ—೨೦)

ಎಲೈ, ಅಗಸ್ತ್ಯಮುನೀಶ್ವರನೇ! ನಾನು ನಿನಗೆ ಉಪದೇಶಿಸಿರುವ ಈ ಸಿದ್ಧಾಂತತಂತ್ರವನ್ನು, ನೀನು ಸಮಸ್ತಪ್ರಪಂಚದಲ್ಲಿಯೂ ಪ್ರಕಾಶಪಡಿಸು; ಎಂದು ಅಪ್ಪಣೆಮಾಡಿರುವರು. ಅವರ ಅಪ್ಪಣೆಯ ಮೇರೆಗೆ ಅಗಸ್ತ್ಯರು ಈ ಪ್ರಪಂಚದಲ್ಲಿ ವೀರಶೈವಸಿದ್ಧಾಂತವನ್ನು ಪ್ರಚಾರಮಾಡಿದರೆಂಬ ವಿಷಯದಲ್ಲಿ, ಇವರು ಬ್ರಹ್ಮಸೂತ್ರಗಳ ಮೇಲೆ ಶಿವಾದ್ವೈತಸಿದ್ಧಾಂತಪ್ರತಿಪಾದಕವಾದ ವೃತ್ತಿಯನ್ನು ಬರೆದಿರುವುದೇ ಬಲವಾದ ಸಾಕ್ಷಿಯಾಗಿದೆ. ಅಗಸ್ತ್ಯರು ಬ್ರಹ್ಮಸೂತ್ರಗಳಿಗೆ ವೃತ್ತಿಯನ್ನು ಬರೆದಿರುವ ವಿಷಯವು ಶ್ರೀಕರಭಾಷ್ಯದಿಂದ ತಿಳಿದುಬರುತ್ತದೆ.

ಶ್ರೀಪತಿಪಂಡಿತರು ಶ್ರೀಕರಭಾಷ್ಯದ ಪ್ರಾರಂಭದಲ್ಲಿ —

ಅಗಸ್ತ್ಯಮುನಿಚಂದ್ರೇಣ ಕೃತಾಂ ವೈಯಾಸಿಕೀಂ ಶುಭಾಂ ।
ಸೂತ್ರವೃತ್ತಿಂ ಸಮಾಲೋಕ್ಯ ಕೃತಂ ಭಾಷ್ಯಂ ಶಿವಂಕರಂ ॥

ಅಗಸ್ತ್ಯರಿಂದ ರಚಿಸಲ್ಪಟ್ಟಿರುವ ಬ್ರಹ್ಮಸೂತ್ರವೃತ್ತಿಯ ಆಧಾರದ ಮೇಲೆಯೇ ಶ್ರೀಕರಭಾಷ್ಯವನ್ನು ಬರೆದಿರುವೆನೆಂದು ಉಲ್ಲೇಖಿಸಿರುವರು. ಮುನಿಚಂದ್ರಪದವೀ ಭೂಷಿತರಾಗಿದ್ದ ಅಗಸ್ತ್ಯರಿಂದ ರಚಿಸಲ್ಪಟ್ಟಿರುವ "**ಮುನಿಚಂದ್ರವೃತ್ತಿ**" ಯು ಕುಂಭಕೋಣದಲ್ಲಿ ಸಂಸ್ಕೃತಾಕ್ಷರಗಳಲ್ಲಿ ಮುದ್ರಿಸಲ್ಪಟ್ಟಿರುವುದು. ಈ ಸೂತ್ರವೃತ್ತಿಯು ಅತ್ಯಂತಗೂಢಾರ್ಥಗರ್ಭಿತವಾಗಿರುವುದು. ಈ ಸೂತ್ರವೃತ್ತಿಯಲ್ಲಿರುವ ವಾಕ್ಯಗಳು, ಶ್ರೀಕರಭಾಷ್ಯದ ಪ್ರತಿಯೊಂದು ಸೂತ್ರಭಾಷ್ಯದಲ್ಲಿಯೂ ಉದಾಹರಿಸಲ್ಪಟ್ಟಿರುವುವು. ಆದುದರಿಂದಲೇ ಶ್ರೀಪತಿಪಂಡಿತರು ತಮ್ಮ ಭಾಷ್ಯಕ್ಕೆ ಅಗಸ್ತ್ಯಮುನಿಪ್ರಣೀತವೃತ್ತಿಯೇ ಮೂಲಾಧಾರವಾಗಿರುವುದೆಂದು ಉಲ್ಲೇಖಿಸಿರುವುದು ಯಥಾರ್ಥವಾಗಿದೆ. ಈ ವಿಷಯವನ್ನು ವಿಚಾರಮಾಡಿನೋಡಿದರೆ, ಅಗಸ್ತ್ಯಮಹರ್ಷಿಗಳು ಶ್ರೀರೇಣುಕರ ಆಜ್ಞಾನುಸಾರವಾಗಿ, ಶಿವಾದ್ವೈತಸಿದ್ಧಾಂತವನ್ನು ಸರ್ವತ್ರ ಪ್ರಚಾರಮಾಡಿದರೆಂದು ಸ್ಪಷ್ಟವಾಗಿ ತೋರಿಬರುತ್ತದೆ. ಅಸ್ತು!

ಶಿವಾದ್ವೈತಸಿದ್ಧಾಂತಪ್ರತಿಪಾದಕಗ್ರಂಥಗಳಲ್ಲಿ ಶಿಖಾಮಣಿಯಂತೊಪ್ಪುತ್ತಿರುವೀ ಸಿದ್ಧಾಂತಶಿಖಾಮಣಿಯು, ಈ ಮೊದಲು ಅನೇಕಕಡೆಗೆ ಮುದ್ರಿಸಲ್ಪಟ್ಟಿರುವುದು. ಆದರೆ ಮುದ್ರಾಪಕರು ಶಾಸ್ತ್ರಜ್ಞರೂ ಸಂಶೋಧನದೃಷ್ಟಿಯುಳ್ಳವರೂ ಆಗದಿದ್ದುದರಿಂದ, ಅವರು ಮುದ್ರಣಮಾಡಿಸಿದ ಗ್ರಂಥಗಳಲ್ಲಿ ಅಶುದ್ಧವಾಕ್ಯಗಳು ಹೇರಳವಾಗಿ ಬಿದ್ದಿರುವುವಲ್ಲದೆ, ವೀರಶೈವಸಿದ್ಧಾಂತಕ್ಕೆ ಅತ್ಯಂತವಿರುದ್ಧವಾಗಿರುವ ಕೆಲವು ಶ್ಲೋಕಗಳೂ ಸಹ ಮುದ್ರಿತವಾಗಿರುವುವು. ವೀರಶೈವಸಿದ್ಧಾಂತವು ಪರಿಣಾಮವಾದವನ್ನೂ ಜಗತ್ಸತ್ಯತ್ವವಾದನ್ನೂ ಘಂಟಾಘೋಷವಾಗಿ ಸಾರುತ್ತಿದ್ದರೂ, ಇದಕ್ಕೆ ಅತ್ಯಂತವಿರುದ್ಧವಾಗಿರುವ ವಿವರ್ತವಾದ-ಮಿಥ್ಯಾತ್ವವಾದಪ್ರತಿಪಾದಕಶ್ಲೋಕಗಳು ಅಲ್ಲಲ್ಲಿ ಸೇರಿಹೋಗಿವೆ. ಇದಲ್ಲದೆ ಭಗವತ್ಪಾದರ ಭೂಲೋಕಾವತಾರವಿಷಯದಲ್ಲಿ ಶಿವಾಗಮಾಭಿಪ್ರಾಯಕ್ಕೆ ಅತ್ಯಂತವಿರುದ್ಧವಾಗಿರುವ ಕೆಲವು ಶ್ಲೋಕಗಳೂ ಮುದ್ರಿತವಾಗಿವೆ. ಆದುದರಿಂದ ವೀರಶೈವಸಿದ್ಧಾಂತಕ್ಕೂ ಶಿವಾಗಮಾಭಿಪ್ರಾಯಕ್ಕೂ ಅತ್ಯಂತವಿರುದ್ಧವಾಗಿದ್ದು, ಅಲ್ಲಲ್ಲಿ ಸೇರ್ಪಡೆಯಾಗಿರುವ ಶ್ಲೋಕಗಳನ್ನೆಲ್ಲ ಬೇರ್ಪಡಿಸಿ, ಈ ಗ್ರಂಥಾಂತ್ಯದಲ್ಲಿ ಒತ್ತಟ್ಟಿಗೆ ಶೇಖರಿಸಿದೆ. ಈ ಗ್ರಂಥದ ೨ ನೆಯ ಪರಿಚ್ಛೇದದಲ್ಲುಕ್ತವಾಗಿರುವ ಜಗತ್ಸೃಷ್ಟಿವಿಚಾರಪ್ರತಿಪಾದಕಶ್ಲೋಕಗಳೆಲ್ಲವೂ ವಿಜಯಾಗಮದ ಶ್ಲೋಕಗಳಾಗಿದ್ದು, ಅವೆಲ್ಲವೂ ವೀರಶೈವಸದಾಚಾರಸಂಗ್ರಹದ ೬ ನೆಯ ಪ್ರಕರಣದಲ್ಲಿ ಉಲ್ಲೇಖಿಸಲ್ಪಟ್ಟಿವೆ. ೨ ನೆಯ ಪರಿಚ್ಛೇದದ ಶೋಧನದಲ್ಲಿ ವೀರಶೈವಸದಾಚಾರಸಂಗ್ರಹವು ವಿಶೇಷಸಹಾಯವನ್ನುಂಟುಮಾಡಿತು. ಈ ಗ್ರಂಥಶೋಧನದಲ್ಲಿ ಶ್ರೀಜಗದ್ಗುರು ಉಜ್ಜಯಿನೀಮಹಾಸಂಸ್ಥಾನದ ಪ್ರಾಚೀನಗ್ರಂಥಭಂಡಾರದಲ್ಲಿ ದೊರೆತ ತಾಳಪತ್ರಗ್ರಂಥವೂ, ಈಗ್ಗೆ ಬಹುದಿವಸಗಳ ಪೂರ್ವದಲ್ಲಿ ಆಂಧ್ರಾಕ್ಷರಗಳಿಂದ ಮುದ್ರಿತವಾದ "ಶೈವಸಿದ್ಧಾಂತಪಂಚಕ" ದಲ್ಲಿರುವ ಪ್ರತಿಯೂ ವಿಶೇಷಸಹಾಯವನ್ನುಂಟುಮಾಡಿದವು. ಈ ಗ್ರಂಥಕ್ಕೆ ಇಲ್ಲಿಯವರೆಗೆ ಅನೇಕಜನರು ಕನ್ನಡ-ಸಂಸ್ಕೃತ-ಮಹಾರಾಷ್ಟ್ರಾದಿಭಾಷೆಗಳಲ್ಲಿ ವ್ಯಾಖ್ಯಾನವನ್ನು ಬರೆದಿದ್ದಾರೆ. ಆದರೆ ಅವರೆಲ್ಲರೂ ಕೆಲಕೆಲವು ಸ್ಥಲಗಳಲ್ಲಿ ಭಗವತ್ಪಾದರ ಹಾರ್ದಿಕಾಭಿಪ್ರಾಯವನ್ನು ತಿಳಿಯದೆ, ಮನಸ್ಸಿಗೆ ಬಂದಂತೆ ವ್ಯಾಖ್ಯಾನವನ್ನು ಬರೆದು, ಈ ಮತಸಿದ್ಧಾಂತವೇ ಜನರಿಗೆ ತಿಳಿಯದಂತೆ ಮಾಡಿಬಿಟ್ಟಿದ್ದಾರೆ. ಕೆಲವು ಸ್ಥಲಗಳಲ್ಲಿ ಮೂಲಶ್ಲೋಕಗಳನ್ನೇ ಬಿಟ್ಟುಬಿಟ್ಟಿದ್ದಾರೆ. ಇದಲ್ಲದೆ ವ್ಯಾಕರಣರೀತ್ಯಾ ಶುದ್ಧಾಶುದ್ಧತೆಗಳನ್ನಂತೂ ಕಣ್ತೆರೆದು ನೋಡಿಯೇ ಇರುವುದಿಲ್ಲ. ಇದನ್ನೆಲ್ಲ ಕೂಲಂಕಷವಾಗಿ ಪರಾಮರ್ಶಿಸಿದರೆ ಪ್ರತಿಯೊಬ್ಬ ಮತಾಭಿಮಾನಿಗೂ ವ್ಯಸನವಾಗದಿರದು. ಈ ವಿಷಯವು ಸರ್ವರಿಗೂ ತಿಳಿಯಲೆಂಬ ಉದ್ದೇಶ

ದಿಂದ, ಕೆಲವು ಶ್ಲೋಕಗಳು ಈ ಕೆಳಗೆ ಉದಾಹರಿಸಲ್ಪಟ್ಟಿರುತ್ತವೆ. ಪಾಠಕರು ಪರಾಮರ್ಶಿಸಬೇಕು.

ಶಿವಾದ್ಯಾದಿಸಮುತ್ಪನ್ನ[1]ಶಾಂತ್ಯತೀತಪರೋತ್ತರಾಂ[2] ।
ಮಾತರಂ ತಾಂ ಸಮಸ್ತಾನಾಂ ವಂದೇ ಶಿವಕರೀಂ ಶಿವಾಂ ॥

ಶಿವಭಕ್ತಿಃ ಸ್ಥಿರಾ ಯಸ್ಮಿನ್ ಯಜ್ಞೇ ವಿಗತವಿಘ್ನವಾಃ[3] ॥

ವಿದಧತು ಮತಿಮಸ್ಮಿನ್ ವೀರಶೈವೇ[4] ವಿಶಿಷ್ಟಾಃ ।

(ಪರಿಚ್ಛೇದ ೧)

ಆಚಾಂತೇ[5] ಭವತಾ ಪೂರ್ವಂ ಪಂಕಶೇಷಾಃ ಪಯೋಧಯಃ ॥

(ಪರಿಚ್ಛೇದ ೪)

ಏತಾನಿ ಮಾನಭೂತಾನಿ ನೋಪಹನ್ಯಾನಿ[6] ಯುಕ್ತಿಭಿಃ ॥

(ಪರಿಚ್ಛೇದ ೫)

ಪೃಥ್ವ್ಯಾದಿಕಮಿದಂ ಸರ್ವಂ ಕಾರ್ಯಂ ಕರ್ತಾ ಮಹೇಶ್ವರಃ ।
ನೈತತ್ ಸಾಕ್ಷಾನ್ಮಹೇಶೋಽಯಂ ಕುಲಾಲೋ ಮೃತ್ತಿಕಾ ಯಥಾ[7] ॥

(ಪರಿಚ್ಛೇದ ೧೦)

ಪ್ರಾಣೋ ಯತ್ರ ಲಯಂ ಯಾತಿ ಭಾಸ್ಕರೇ ತುಹಿನಂ ಯಥಾ[8] ।
ತತ್ಪ್ರಾಣಲಿಂಗಮುದ್ದಿಷ್ಟಂ ತದ್ಧಾರೀ ಸ್ಯಾತ್ತದಾಕೃತಿಃ ॥

ಏವಂವಿಧೈರ್ಭಾವಪುಷ್ಪೈ[9]ರುಪಚಾರೈರದೂಷಿತೈಃ ।
ಪ್ರತ್ಯನ್ಮುಖ[10]ಮನಾ ಭೂತ್ವಾ ಪೂಜಯೇಲ್ಲಿಂಗಮಾಂತರಂ ॥

(ಪರಿಚ್ಛೇದ ೧೨)

ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತುಪ್ರಕಾಶಿನೀ ।
ತಥಾ ಶಕ್ತಿರ್ವಿಮರ್ಶಾತ್ಮಾ[11] ಪ್ರಕಾರೇ[12] ಬ್ರಹ್ಮಣಿ ಸ್ಥಿತಾ[13] ॥

ಇದಾನೀಮೇವ ಮೇ ಜಾತಂ ಮುನಿರಾಜೋತ್ತಮೋತ್ತಮಂ[14] ॥

ಶ್ರುತ್ವಾ ಮೇ ಮೋದತೇ ಚಿತ್ತಂ ಜ್ಯೋತಿಃ ಪಶ್ಯೇ[15] ಶಿವಾಭಿಧಂ ॥

(ಪರಿಚ್ಛೇದ ೨೦)

ಈ ಶ್ಲೋಕಗಳಲ್ಲಿ ಕೆಳಗೆ ರೂಲು ಹಾಕಿರುವಂಥವುಗಳು ಕೇವಲ ತಪ್ಪಾಗಿರುವುವು. ಇವು ತಾಳಪತ್ರಗ್ರಂಥಗಳ ಸಹಾಯದಿಂದ ಈ ಕೆಳಗೆ ಉಲ್ಲೇಖಿಸಿದಂತೆ ಅನುಕ್ರಮವಾಗಿ ಸರಿಮಾಡಲ್ಪಟ್ಟಿರುವುವು.

1 ಸಮುತ್ಪನ್ನಾ 2 ಪದೋತ್ತರಾ 3 ಜಜ್ಞೇ ವಿಗತವಿಪ್ಲವಾ 4 ವೀರಶೈವಾಃ 5 ಆಚಾಂತಾಃ 6 ನ ಹಂತವ್ಯಾನಿ 7 ಕುಲಾಲಃ ಕಲಶೋ ಯಥಾ 8 ಭಾಸ್ಕರೇಂದು ವಿಘಟ್ಟನಾತ್ 9 ಭಾವಶುದ್ಧೈಃ 10 ಪ್ರತ್ಯಙ್ಮುಖ 11 ವಿಮರ್ಶಾಖ್ಯಾ 12 ಪ್ರಕಾಶೇ 13 ಸ್ಥಿರಾ 14 ಮುನಿರಾಜತ್ವಮುತ್ತಮಂ 15 ಪಶ್ಯತ್.

ಇದೇ ರೀತಿಯಾಗಿ ಈ ಮೊದಲು ಮುದ್ರಿತವಾದ ಗ್ರಂಥಗಳಲ್ಲಿ ಅನಂತಾನಂತ ಅರ್ಥದೋಷಗಳೂ, ವ್ಯಾಕರಣದೋಷಗಳೂ, ತುಂಬಿರುವುವು. ಈಗ ಮುದ್ರಿತವಾಗಿರುವೀ ಗ್ರಂಥವನ್ನು ಪರಿಶೀಲಿಸಿದರೆ ಸಿದ್ಧಾಂತಶಿಖಾಮಣಿಯು ಎಷ್ಟುಮಟ್ಟಿಗೆ ಪರಿಶುದ್ಧಿಗೊಂಡಿರುವುದೆಂಬುದು ಧರ್ಮಶಾಸ್ತ್ರಜ್ಞರಿಗೆ ವೇದ್ಯವಾಗುವುದು. ಅಸ್ತು!

ಈ ಗ್ರಂಥದಲ್ಲಿ ಈ ರೀತಿಯಾಗಿರತಕ್ಕ ಲೋಪಗಳನ್ನೆಲ್ಲ ಸರಿಪಡಿಸಿ, ಶಿವಾದ್ವೈತಸಿದ್ಧಾಂತಾನುಸಾರವಾಗಿ ಸರಿಯಾದ ವ್ಯಾಖ್ಯಾನವನ್ನು ಬರೆದು, ಶುದ್ಧಸಂಪ್ರದಾಯಾನುಗತರಾದ ವೀರಶೈವರ ಕಲ್ಯಾಣಕ್ಕೋಸ್ಕರ ವಿಶೇಷಶುದ್ಧರೀತಿಯಿಂದ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು, ಅನೇಕಜನ ಮತತತ್ತ್ವಜಿಜ್ಞಾಸಾಭಿಮಾನಿಗಳು ಉತ್ಕಟಾಭಿಲಾಷವನ್ನು ತೋರಿಸಿದುದರಿಂದ, ನಾನು ಈ ಮಹಾಕಾರ್ಯದಲ್ಲಿ ಪ್ರವೃತ್ತನಾಗಿ, ನನ್ನ ಕೈಲಾದಮಟ್ಟಿಗೂ ವಿಶೇಷಶ್ರಮವನ್ನು ವಹಿಸಿ ಸಂಶೋಧನಮಾಡಿ, "**ಭಾವಪ್ರಕಾಶ**" ಎಂಬ ಹೆಸರಿನಿಂದ ಯಥಾರ್ಥತತ್ತ್ವಪ್ರತಿಪಾದಕವಾದ ಸರಲ ವ್ಯಾಖ್ಯಾನವನ್ನು ರಚಿಸಿ, ಈ ಮಹಾಕಾರ್ಯವನ್ನು ಪೂರೈಸಿದೆನು. ಇದಕ್ಕೆ ತ್ರಿಭುವನ ಗುರುವಾದ ಶ್ರೀರೇಣುಕಗಣನಾಥನ ಆಶೀರ್ವಾದಪ್ರಭಾವವೇ ಮೂಲಕಾರಣವೆಂದು ಹೇಳಬೇಕಾಗಿದೆಯಲ್ಲದೆ, ನನ್ನ ಬುದ್ಧಿಯ ಪ್ರಭಾವವೆಂದು ನಾನೆಂದೂ ಹೇಳಲಾರೆನು. ಅಸ್ತು! ಈ ಮಹಾಗ್ರಂಥದ ಉಪಯೋಗವು ಸಾಮಾನ್ಯವಾಗಿ ಸರ್ವರಿಗೂ ಆಗಲೆಂಬ ಉದ್ದೇಶದಿಂದ ಬಹುಶ್ರಮವನ್ನು ವಹಿಸಿ, ವಿಷಯಾನುಕ್ರಮಣಿಕೆಯನ್ನೂ ಶ್ಲೋಕಾನುಕ್ರಮಣಿಕೆಯನ್ನೂ ತೆಗೆದು ಮುದ್ರಿಸಿದ್ದಾಗಿದೆ. ಆದುದರಿಂದ ತತ್ತ್ವಶಾಸ್ತ್ರಾಭಿಮಾನಿಗಳಾದ ಪ್ರತಿಯೊಬ್ಬರೂ, ಕೈವಲ್ಯಕಲ್ಪತರುವಿನಂತಿರುವ ಈ ಮಹಾಗ್ರಂಥವನ್ನು ಸಂಗ್ರಹಿಸಿ, ಜಗದಾಚಾರ್ಯರ ಉಪದೇಶಾಮೃತವನ್ನು ಪಾನಮಾಡಿ, ಧನ್ಯಾತ್ಮರಾಗಬೇಕೆಂದು ಕೋರಿಕೆ.

ಪಂ|| ಕಾಶೀನಾಥಶಾಸ್ತ್ರೀ.

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಸಿದ್ಧಾಂತಶಿಖಾಮಣಿಯ ವಿಷಯಾನುಕ್ರಮಣಿಕೆ.

೧ ನೆಯ ಪರಿಚ್ಛೇದ

೨ ನೆಯ ಪರಿಚ್ಛೇದ

೩ ನೆಯ ಪರಿಚ್ಛೇದ

೪ ನೆಯ ಪರಿಚ್ಛೇದ

೫ ನೆಯ ಪರಿಚ್ಛೇದ

(ಅಂಗಸ್ಥಲಗಳು—೪೪)

೬ ನೆಯ ಪರಿಚ್ಛೇದ

ಶಿವಂಭೂಯಾತ್.



ನಾಗನೂರು ಬೃಹನ್ಮಠಾಧ್ಯಕ್ಷರಾದ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು.

ಶ್ರೀಜಗದ್ಗುರುಪಂಚಾಚಾರ್ಯಾಃ ಪ್ರಸೀದಂತು.

ಸಿದ್ಧಾಂತಶಿಖಾಮಣಿಃ

ಪ್ರಥಮಪರಿಚ್ಛೇದಃ

ತ್ರೈಲೋಕ್ಯಸಂಪದಾಲೇಖ್ಯಸಮುಲ್ಲೇಖನಭಿತ್ತಯೇ ।
ಸಚ್ಚಿದಾನಂದರೂಪಾಯ ಶಿವಾಯ ಬ್ರಹ್ಮಣೇ ನಮಃ ॥೧॥

ಭಾವಪ್ರಕಾಶವ್ಯಾಖ್ಯಾನಂ

ನಮಃ ಸಾಂಬಾಯ ನಿತ್ಯಾಯ ಶಿವಾಯ ಪರಮಾತ್ಮನೇ ।
ಷಟ್ತ್ರಿಂಶತ್ತತ್ತ್ವಬೀಜಾಯ ಲಿಂಗರೂಪಾಯ ಶಂಭವೇ ॥೧॥
ಪಂಚಾಸ್ಯವದನೋದ್ಭೂತಾನ್ ಪಂಚತತ್ತ್ವಾಧಿನಾಯಕಾನ್ ।
ಪಂಚಬ್ರಹ್ಮಮಯಾನ್ನೌಮಿ ಪಂಚಾಚಾರ್ಯಾನ್ ಜಗದ್ಗುರೂನ್ ॥೨॥
ವಂದಾರುಜನಮಂದಾರಂ ಸಚ್ಚಿದಾನಂದಮಂದಿರಂ ।
ಮುಕ್ತಿಮಾಕಂದಮುತ್ಕೀರಂ ವಂದೇ ಶ್ರೀರೇಣುಕೇಶ್ವರಂ ॥೩॥
ರೇಣುಕಾಗಸ್ತ್ಯಸಂವಾದಂ ಶ್ರೀಸಿದ್ಧಾಂತಶಿಖಾಮಣಿಂ ।
ನಿಗಮಾಗಮತತ್ತ್ವಾರ್ಥಭೂಷಿತಂ ಭಾವಗರ್ಭಿತಂ ॥೪॥
ನಾಗನೂರುಮಠಾಧೀಶಃ ಕಾಶೀನಾಥಸುಧೀಮಣಿಃ ।
ಕರ್ಣಾಟಭಾಷಯಾ ಸಮ್ಯಗ್ವಿವೃಣೋತಿ ಮುದಾನ್ವಿತಃ ॥೫॥

ಒಂದನೆಯ ಪರಿಚ್ಛೇದವು.

ಶ್ರೀರೇಣುಕಾಗಸ್ತ್ಯಸಂವಾದರೂಪವಾದ ಸಿದ್ಧಾಂತಶಿಖಾಮಣಿಯನ್ನು ವಿರಚಿಸಿದ ಶ್ರೀಶಿವಯೋಗಿಶಿವಾಚಾರ್ಯರು, ಗ್ರಂಥಾದಿಯಲ್ಲಿ ಪರಶಿವನನ್ನು ಕುರಿತು ಏಳು ಶ್ಲೋಕಗಳಿಂದ ನಮಸ್ಕಾರಾತ್ಮಕಮಂಗಲವನ್ನಾಚರಿಸುತ್ತಾರೆ.

ಶಿವಸ್ತುತಿ.

ವ್ಯಾಖ್ಯಾನ—ತ್ರೈಲೋಕ್ಯಸಂಪದ್ರೂಪಚಿತ್ರಲೇಖನಕ್ಕೆ ಭಿತ್ತಿಸ್ವರೂಪನೂ, ಸಚ್ಚಿದಾನಂದಸ್ವರೂಪನೂ, ಪರಬ್ರಹ್ಮಸ್ವರೂಪನೂ ಆಗಿರುವ ಶಿವನಿಗೆ ನಮಸ್ಕಾರವು. ॥೧॥

ಬ್ರಹ್ಮೇತಿವ್ಯಪದೇಶಸ್ಯ ವಿಷಯಂ ಯಂ ಪ್ರಚಕ್ಷತೇ ।
ವೇದಾಂತಿನೋ ಜಗನ್ಮೂಲಂ ತಂ ನಮಾಮಿ ಪರಂ ಶಿವಂ ॥೨॥
ಯಸ್ಯೋರ್ಮಿಬುದ್ಬುದಾಭಾಸಃ ಷಟ್ತ್ರಿಂಶತ್ತತ್ತ್ವಸಂಚಯಃ ।
ನಿರ್ಮಲಂ ಶಿವನಾಮಾನಂ ತಂ ವಂದೇ ಚಿನ್ಮಹೋದಧಿಂ ॥೩॥

ವೇದಾಂತಿಗಳು 'ಪರಬ್ರಹ್ಮ' ಎಂಬ ಶಬ್ದಕ್ಕೆ ಯಾವನನ್ನು ವಿಷಯನನ್ನಾಗಿ ಹೇಳುತ್ತಾರೆಯೋ, ಚರಾಚರಜಗತ್ಕಾರಣನಾದ ಆ ಪರಶಿವನನ್ನು ನಮಸ್ಕರಿಸುತ್ತೇನೆ. ॥೨॥ ಶಿವಾದಿಭೂಮ್ಯಂತವಾದ ಮೂವತ್ತಾರು ತತ್ತ್ವಗಳ ಸಮೂಹವು ಯಾವ ಪರಶಿವಬ್ರಹ್ಮನಾಮಕಚಿತ್ಸಮುದ್ರದಲ್ಲಿ ತರಂಗಾದಿಗಳಂತೆ ಭಾಸಿಸುತ್ತದೆಯೋ, ಆ ಆಣವಾದಿಮಲತ್ರಯರಹಿತವಾದ ಶಿವನಾಮಕಮಹಾಜ್ಞಾನಸಮುದ್ರವನ್ನು ನಮಸ್ಕರಿಸುತ್ತೇನೆ. ॥ ವೀರಶೈವಸಿದ್ಧಾಂತದಲ್ಲಿ ೩೬ ತತ್ತ್ವಗಳು ಅಂಗೀಕೃತವಾಗಿರುವುವು. ಆದುದರಿಂದಲೇ ಗ್ರಂಥಕಾರರು ಆ ಛಾಯೆಯನ್ನು ಈ ಮಂಗಲಶ್ಲೋಕದಲ್ಲಿ ತೋರಿಸಿರುತ್ತಾರೆ. ಈ ೩೬ ತತ್ತ್ವಗಳ ಸ್ವರೂಪವು ಸರ್ವರಿಗೂ ಮುಖ್ಯವಾಗಿ ತಿಳಿಯಬೇಕಾದುದರಿಂದ, ಈ ವಿಷಯವನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸುವುದಾಗುವುದು.

ಸಚ್ಚಿದಾನಂದಸ್ವರೂಪವಾದ ಪರಶಿವಬ್ರಹ್ಮದಲ್ಲಿ ಅವಿನಾಭಾವಸಂಬಂಧದಿಂದಿರುವ ವಿಮರ್ಶಶಕ್ತಿಯ ಸ್ಫುರಣವೇ "ಶಿವ-ಶಕ್ತಿ-ಸದಾಶಿವ-ಈಶ್ವರ-ಶುದ್ಧವಿದ್ಯಾ-ಮಾಯಾ-ಕಲಾ-ವಿದ್ಯಾ-ರಾಗ-ಕಾಲ-ನಿಯತಿ-ಪುರುಷ-ಪ್ರಕೃತಿ-ಬುದ್ಧಿ-ಅಹಂಕಾರ-ಮನಃ-ಶ್ರೋತ್ರ-ತ್ವಕ್-ನೇತ್ರ-ಜಿಹ್ವಾ-ಘ್ರಾಣ-ವಾಕ್-ಪಾಣಿ-ಪಾದ-ಪಾಯು-ಉಪಸ್ಥ-ಶಬ್ದ-ಸ್ಪರ್ಶ-ರೂಪ-ರಸ-ಗಂಧ-ಆಕಾಶ-ವಾಯು-ಅಗ್ನಿ-ಜಲ-ಪೃಥಿವಿ"ಗಳೆಂಬ ಮೂವತ್ತಾರು ತತ್ತ್ವಗಳ ರೂಪವಾಗಿ ಪರಿಣಮಿಸುವುದು.

ಶಕ್ತಿವಿಶಿಷ್ಟಪರಶಿವಬ್ರಹ್ಮವು "ಬಹು ಸ್ಯಾಂ ಪ್ರಜಾಯೇಯ"(೬-೨-೩) ಎಂಬ ಛಾಂದೋಗ್ಯಶ್ರುತಿವಾಕ್ಯಾಭಿಪ್ರಾಯಾನುಸಾರವಾಗಿ ಸೃಷ್ಟಿಗುನ್ಮುಖವಾಗಲು, ತನ್ನಿಷ್ಠವಾದ ವಿಮರ್ಶಶಕ್ತಿಯೇ ಇಚ್ಛಾಶಕ್ತಿರೂಪವಾಗಿ ಪರಿಣಮಿಸುವುದು.

ಅನಾದಿನಿಧನಾಚ್ಛಾಂತಾಚ್ಛಿವಾತ್ ಪರಮಕಾರಣಾತ್ । ಇಚ್ಛಾಶಕ್ತಿರ್ವಿನಿಷ್ಕ್ರಾಂತಾ
ತತೋ ಜ್ಞಾನಂ ತತಃ ಕ್ರಿಯಾ ॥ ತತ್ರೋತ್ಪನ್ನಾನಿ ಭೂತಾನಿ ಭುವನಾನಿ ಚತುರ್ದಶ ॥

ಎಂಬ ಶಿವಾಗಮಪ್ರಮಾಣಾನುಸಾರವಾಗಿ ಉತ್ಪತ್ತಿನಾಶರಹಿತವೂ, ಪರಮಕಾರಣವೂ, ಶಾಂತವೂ ಆದ ಪರಶಿವಬ್ರಹ್ಮದಿಂದ ಮೊದಲು ಇಚ್ಛಾಶಕ್ತಿಯೂ, ಅದರಿಂದ ಜ್ಞಾನಶಕ್ತಿಯೂ, ಕ್ರಿಯಾಶಕ್ತಿಯೂ ಆವಿರ್ಭವಿಸುವುವು. ಆ ಇಚ್ಛಾಶಕ್ತಿಗೆ ಜ್ಞಾನಶಕ್ತಿಯು ಅಂತರಂಗವಾಗಿಯೂ, ಕ್ರಿಯಾಶಕ್ತಿಯು ಬಹಿರಂಗವಾಗಿಯೂ

ಇರುವುವು. ಪರಶಿವಬ್ರಹ್ಮವು ಜ್ಞಾನಶಕ್ತಿಯಲ್ಲಿ ಬೆರೆತು 'ನಾನು ಸರ್ವಜ್ಞನು' ಎಂಬ ಅಭಿಮಾನವನ್ನು ಪಡೆಯಲು, "ಶಿವತತ್ತ್ವ"ವೆನಿಸಿಕೊಳ್ಳುವುದು. ಜೇಡರಹುಳವು ಜಾಲಕ್ಕೆ ನಿಮಿತ್ತಕಾರಣವಾಗುವಂತೆ, ಈ ಶಿವತತ್ತ್ವಾತ್ಮಕವಾದ ಪರಶಿವಬ್ರಹ್ಮವೇ ಜ್ಞಾನವಿಶಿಷ್ಟತ್ವಾಕಾರದಿಂದ ಭಾವಿಪ್ರಪಂಚಕ್ಕೆ ನಿಮಿತ್ತಕಾರಣವಾಗುವುದು.

ಪರಶಿವಬ್ರಹ್ಮವು ಕ್ರಿಯಾಶಕ್ತಿಯಲ್ಲಿ ಬೆರೆತು 'ನಾನು ಸರ್ವಕರ್ತೃವು' ಎಂಬ ಅಭಿಮಾನವನ್ನು ಪಡೆಯಲು, "ಶಕ್ತಿತತ್ತ್ವ"ವೆನಿಸಿಕೊಳ್ಳುವುದು. ಜೇಡರಹುಳವು ಜಾಲೋತ್ಪತ್ತಿಯೋಗ್ಯಶರೀರವಿಶೇಷವಿಶಿಷ್ಟತ್ವಾಕಾರದಿಂದ ಜಾಲಕ್ಕೆ ಉಪಾದಾನ ಕಾರಣವಾಗುವಂತೆ, ಈ ಶಕ್ತಿತತ್ತ್ವಾತ್ಮಕವಾದ ಪರಶಿವಬ್ರಹ್ಮವೇ ಕ್ರಿಯಾ ವಿಶಿಷ್ಟತ್ವಾಕಾರದಿಂದ ಭಾವಿಪ್ರಪಂಚಕ್ಕೆ ಉಪಾದಾನಕಾರಣವೂ ಆಗುವುದು.

ಪರಶಿವಬ್ರಹ್ಮವೊಂದೇ ಪ್ರಪಂಚಕ್ಕೆ ಅಭಿನ್ನನಿಮಿತ್ತೋಪಾದಾನಕಾರಣವಾಗುವುದೆಂಬುದನ್ನು ಮುಂಡಕಶ್ರುತಿಯು—"ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ"(೧-೧-೭) ಎಂಬೀ ವಾಕ್ಯದಿಂದ ಪ್ರತಿಪಾದಿಸುತ್ತಿರುವುದು.

ಈ ಶಕ್ತಿತತ್ತ್ವವು ಇಚ್ಛಾಶಕ್ತಿಗೆ ಅಂತರಂಗವಾದ ಜ್ಞಾನಶಕ್ತಿಯಲ್ಲಿ ಪ್ರವೇಶಿಸಿ, ಜಲಾಧಿವಾಸದಿಂದ ಅಂಕುರೋನ್ಮುಖವಾದ ಕಡಲೆಯಂತೆ ಉಬ್ಬಿ, ಅಂಕುರಾಯಣವಾದ ಭಾವಿಪ್ರಪಂಚವನ್ನು ಕುರಿತು—'ಅಹಮಿದಂ'—'ನಾನು ಈ ಪ್ರಪಂಚವು' ಎಂದು ಅಭಿಮಾನವನ್ನು ಪಡೆಯಲು, "ಸದಾಶಿವತತ್ತ್ವ"ವೆನಿಸಿಕೊಳ್ಳುವುದು.

ಈ ಶಕ್ತಿತತ್ತ್ವವು ಇಚ್ಛಾಶಕ್ತಿಗೆ ಬಹಿರಂಗವಾದ ಕ್ರಿಯಾಶಕ್ತಿಯಲ್ಲಿ ಪ್ರವೇಶಿಸಿ, ಸುಕ್ಷೇತ್ರದಲ್ಲಿ ಬಿತ್ತಿದ ಸುಬೀಜದಂತೆ ಅಂಕುರಿಸಿ, ಅಂಕುರಿತವಾದ ಪ್ರಪಂಚವನ್ನು ಕುರಿತು— 'ಅಹಮಿದಂ'—'ನಾನು ಈ ಪ್ರಪಂಚವು' ಎಂದು ಅಭಿಮಾನವನ್ನು ಪಡೆಯಲು, "ಈಶ್ವರತತ್ತ್ವ"ವೆನಿಸಿಕೊಳ್ಳುವುದು.

ಈ ಶಕ್ತಿತತ್ತ್ವವು, ಸಾಗರತರಂಗನ್ಯಾಯದಂತೆ (ಸಮುದ್ರಕ್ಕೂ ಸಮುದ್ರದಲ್ಲಿರುವ ತೆರೆಗಳಿಗೂ ಅಭೇದವಿರುವಂತೆ) 'ಅಹಮಿದಂ'—'ನಾನು' ಎಂಬ ಅಹಂಕಾರಕ್ಕೂ 'ಇದು' ಎಂಬ ಪ್ರಪಂಚಕ್ಕೂ ಅಭೇದಜ್ಞಾನವನ್ನು ಪಡೆಯಲು, "ಶುದ್ಧವಿದ್ಯಾತತ್ತ್ವ"ವೆನಿಸಿಕೊಳ್ಳುವುದು.

ಶುದ್ಧವಿದ್ಯಾತತ್ತ್ವರೂಪವಾಗಿ ಪರಿಣಮಿಸಿರುವೀ ಶಕ್ತಿತತ್ತ್ವವು, ಮಯೂರಾಂಡರಸನ್ಯಾಯದಂತೆ (ನವಿಲಿನ ತತ್ತಿಯ ರಸದಲ್ಲಿ ಪಾದ-ಪಕ್ಷ-ವರ್ಣವೈಚಿತ್ರ್ಯಾದಿಗಳು ವಿಭಾಗರೂಪವಾಗಿ ಸೂಕ್ಷ್ಮರೂಪದಿಂದಿರುವಂತೆ) ತನ್ನಲ್ಲಡಕವಾಗಿರುವ ಭಾವಿ ಪ್ರಪಂಚನಿರ್ಮಾಣಕಾರಣೀಭೂತಸೂಕ್ಷ್ಮಪದಾರ್ಥಗಳಲ್ಲಿ, ಅನ್ಯೋನ್ಯಾಭಾವರೂಪ ಭೇದಬುದ್ಧಿಪ್ರಾಧಾನ್ಯದಿಂದ "ಮಾಯಾತತ್ತ್ವ"ವೆನಿಸಿಕೊಳ್ಳುವುದು.

ಕಲಾ-ವಿದ್ಯಾ-ರಾಗ-ಕಾಲ-ನಿಯತಿಗಳೆಂಬ ಪಂಚತತ್ತ್ವಗಳು ಪುರುಷನಿಗೆ ಕಂಚುಕರೂಪವಾಗಿರುವುದರಿಂದ, ಮೊದಲು ಕಂಚುಕಿಯಾದ ಪುರುಷತತ್ತ್ವವನ್ನು ನಿರೂಪಿಸಿ, ಬಳಿಕ ಕಲಾದಿಪಂಚತತ್ತ್ವಗಳನ್ನು ನಿರೂಪಿಸುವುದಾಗುವುದು.

ಕಾಷ್ಠಯೋಗದಿಂದ ಅಗ್ನಿಕಣಗಳು ಆವಿರ್ಭವಿಸುವಂತೆ, ಪರಶಿವನ ಇಚ್ಛಾಶಕ್ತಿಯ ಯೋಗದಿಂದ ಆವಿರ್ಭವಿಸುವ ಶಿವಾಂಶವೇ ಮಾಯಾಶಕ್ತಿಯಲ್ಲಿ ಪ್ರವೇಶಿಸಿ, "ಪುರುಷತತ್ತ್ವ" ವೆನಿಸಿಕೊಳ್ಳುವುದು. ಈ ಪುರುಷತತ್ತ್ವಕ್ಕೆ ಮಾಯಾಮಲಸಂಬಂಧವುಂಟಾಗುವುದರಿಂದ, ಆತ್ಮನಲ್ಲಿ ಅನಾತ್ಮತ್ವಜ್ಞಾನವೂ, ಅನಾತ್ಮವಸ್ತುಗಳಲ್ಲಿ ಆತ್ಮತ್ವಜ್ಞಾನವೂ, 'ನಾನು ಸುಖಿಯು — ನಾನು ದುಃಖಿಯು' ಎಂಬ ಬುದ್ಧಿಯೂ ಉತ್ಪನ್ನವಾಗುವುವು. ಪುರುಷನು ಈ ರೀತಿಯಾಗಿ ಆಣವಾದಿಮಲಗಳಿಂದ ಯುಕ್ತನಾಗುವುದರಿಂದ ಸಂಸಾರಿಯೆನಿಸುವನು.

ಪುರುಷನು ಮಾಯಾಮಲಾವೃತನಾಗಿ ತನ್ನ ಸರ್ವಕರ್ತೃತ್ವ-ಸರ್ವಜ್ಞತ್ವ-ಪೂರ್ಣತ್ವ-ನಿತ್ಯತ್ವ-ವ್ಯಾಪಕತ್ವರೂಪಶಕ್ತಿಗಳನ್ನು ಕಳೆದುಕೊಂಡು, ಕಿಂಚಿತ್ಕರ್ತೃತ್ವಾದಿಶಕ್ತಿಗಳಿಂದ ಯುಕ್ತನಾಗುವನು. ಪುರುಷನ ಈ ಕಿಂಚಿತ್ಕರ್ತೃತ್ವರೂಪಶಕ್ತಿಯೇ, "ಕಲಾತತ್ತ್ವ"ವೆನಿಸಿಕೊಳ್ಳುವುದು. ಕಿಂಚಿಜ್ಜ್ಞತ್ವರೂಪಶಕ್ತಿಯೇ "ವಿದ್ಯಾತತ್ತ್ವ" ವೆನಿಸಿಕೊಳ್ಳುವುದು. ಅಪೂರ್ಣತ್ವರೂಪಶಕ್ತಿಯೇ, ಸ್ರಕ್ಚಂದನವನಿತಾದಿವಿಷಯಕಪ್ರೀತಿರೂಪವಾದ "ರಾಗತತ್ತ್ವ" ವೆನಿಸಿಕೊಳ್ಳುವುದು. ಅನಿತ್ಯತ್ವರೂಪಶಕ್ತಿಯೇ, ಭೂತಭವಿಷ್ಯದ್ವರ್ತಮಾನಕಾಲಗಳ ವ್ಯವಹಾರಕ್ಕೆ ಅಸಾಧಾರಣಕಾರಣವಾದ "ಕಾಲತತ್ತ್ವ" ವೆನಿಸಿಕೊಳ್ಳುವುದು. ಅವ್ಯಾಪಕತ್ವರೂಪಶಕ್ತಿಯೇ, ಈ ಕಾರಣದಿಂದ ಈ ಕಾರ್ಯವೇ ಹುಟ್ಟುವುದು; ಮತ್ತೊಂದು ಹುಟ್ಟುವುದಿಲ್ಲವೆಂಬ ನಿಯಮಕ್ಕೆ ಅಸಾಧಾರಣಕಾರಣವಾದ "ನಿಯತಿತತ್ತ್ವ" ವೆನಿಸಿಕೊಳ್ಳುವುದು.

ಕಾರ್ಯೌನ್ಮುಖ್ಯಗರ್ಭಿತವಾದ ಇಚ್ಛಾಶಕ್ತಿಯು, ಸ್ವಗತವಾದ ಜ್ಞಾನಶಕ್ತಿಕ್ರಿಯಾಶಕ್ತಿಗಳಲ್ಲಿರುವ 'ಜ್ಞಾನಂ ಕ್ರಿಯಾ ನ ಭವತಿ ಕ್ರಿಯಾ ಜ್ಞಾನಂ ನ ಭವತಿ' ಎಂಬ ಅನ್ಯೋನ್ಯಾಭಾವರೂಪಭೇದಬುದ್ಧಿಪ್ರಧಾನವಾದ ಮಾಯಾತತ್ತ್ವದಲ್ಲಿ ಪ್ರತಿಸ್ಫುರಿಸಲು, "ಪ್ರಕೃತಿತತ್ತ್ವ" ವೆನಿಸಿಕೊಳ್ಳುವುದು. ಈ ಪ್ರಕೃತಿತತ್ತ್ವವು ಸುಖದುಃಖಮೋಹಗಳಿಗೆ ಕಾರಣಗಳಾದ ಸತ್ತ್ವರಜಸ್ತಮೋಗುಣಗಳ ಸಾಮ್ಯಾವಸ್ಥಾರೂಪವಾಗಿದ್ದು, ಮಹತ್ತತ್ತ್ವವೇ ಮೊದಲ್ಗೊಂಡು ಪೃಥಿವ್ಯಂತವಾಗಿರುವ ೨೩ ತತ್ತ್ವಗಳಿಗೆ ಮೂಲಕಾರಣವಾಗಿರುವುದು.

ಪ್ರಕೃತಿತತ್ತ್ವರೂಪವಾದೀ ಶಕ್ತಿತತ್ತ್ವವೇ, 'ಇದಮಿತ್ಥಂ' ಇದು ಹೀಗೆಯೇ ಸರಿ! ಎಂಬ ನಿಶ್ಚಯಕ್ಕೆ ಕಾರಣವಾದುದಾಗಿ "ಬುದ್ಧಿತತ್ತ್ವ" ವೆನಿಸಿಕೊಳ್ಳುವುದು.

ಇದಕ್ಕೆ ಮಹತ್ತತ್ತ್ವವೆಂಬ ನಾಮಾಂತರವೂ ಉಂಟು. ಬುದ್ಧಿತತ್ತ್ವರೂಪವಾದೀ ಶಕ್ತಿತತ್ತ್ವವೇ 'ನಾನು–ನನ್ನದು' ಎಂಬ ಅಹಂಕಾರ-ಮಮಕಾರಗಳಿಗೆ ಕಾರಣವಾದುದಾಗಿ "ಅಹಂಕಾರತತ್ತ್ವ" ವೆನಿಸಿಕೊಳ್ಳುವುದು. ಅಹಂಕಾರತತ್ತ್ವರೂಪವಾದೀ ಶಕ್ತಿತತ್ತ್ವವೇ, 'ಸ್ಥಾಣುರ್ವಾ ಪುರುಷೋ ವಾ' ಎಂಬ ಸಂಕಲ್ಪವಿಕಲ್ಪಗಳಿಗೆ ಕಾರಣವಾದುದಾಗಿ "ಮನಸ್ತತ್ತ್ವ" ವೆನಿಸಿಕೊಳ್ಳುವುದು. ಬುದ್ಧ್ಯಹಂಕಾರ ಮನಸ್ತತ್ತ್ವಗಳು ಶರೀರದೊಳಗಿರುವುದರಿಂದ ಈ ಮೂರೂ "ಅಂತಃಕರಣ" ವೆನಿಸುವುವು. ಈ ಅಂತಃಕರಣವು ಇಚ್ಛಾಶಕ್ತಿಪ್ರಧಾನವಾಗಿರುವುದು.

ಅಂತಃಕರಣರೂಪವಾಗಿ ಪರಿಣಮಿಸಿದ ಈ ಶಕ್ತಿತತ್ತ್ವವೇ, ಬಾಹ್ಯಶರೀರವನ್ನವಲಂಬಿಸಿ ಶಬ್ದಜ್ಞಾನಕ್ಕೆ ಸಾಧನವಾಗಿ "ಶ್ರೋತ್ರತತ್ತ್ವ" ವೆಂದೂ, ಸ್ಪರ್ಶಜ್ಞಾನಕ್ಕೆ ಸಾಧನವಾಗಿ "ತ್ವಕ್‌ತತ್ತ್ವ" ವೆಂದೂ, ರೂಪಜ್ಞಾನಕ್ಕೆ ಸಾಧನವಾಗಿ "ನೇತ್ರತತ್ತ್ವ" ವೆಂದೂ, ರಸಜ್ಞಾನಕ್ಕೆ ಸಾಧನವಾಗಿ "ಜಿಹ್ವಾತತ್ತ್ವ" ವೆಂದೂ, ಗಂಧಜ್ಞಾನಕ್ಕೆ ಸಾಧನವಾಗಿ "ಘ್ರಾಣತತ್ತ್ವ" ವೆಂದೂ ಹೇಳಿಸಿಕೊಳ್ಳುವುದು. ಈ ಐದು ಇಂದ್ರಿಯಗಳು ಜ್ಞಾನಶಕ್ತಿಪ್ರಧಾನವಾದುದರಿಂದ ಜ್ಞಾನೇಂದ್ರಿಯಗಳೆಂದು ಹೇಳಿಸಿಕೊಳ್ಳುವುವು.

ಜ್ಞಾನೇಂದ್ರಿಯರೂಪವಾಗಿ ಪರಿಣಮಿಸಿದ ಈ ಶಕ್ತಿತತ್ತ್ವವೇ, ಉಚ್ಚಾರಣಕ್ರಿಯೆಗೆ ಸಾಧನವಾಗಿ "ವಾಕ್ತತ್ತ್ವ" ವೆಂದೂ, ದಾನಾದಾನಾದಿಕ್ರಿಯೆಗಳಿಗೆ ಸಾಧನವಾಗಿ "ಪಾಣಿತತ್ತ್ವ" ವೆಂದೂ, ಗಮನಾಗಮನಾದಿಕ್ರಿಯೆಗಳಿಗೆ ಸಾಧನವಾಗಿ "ಪಾದತತ್ತ್ವ" ವೆಂದೂ, ಮಲಪರಿತ್ಯಾಗಕ್ಕೆ ಸಾಧನವಾಗಿ "ಪಾಯುತತ್ತ್ವ" ವೆಂದೂ, ರೇತೋಮೂತ್ರಪರಿತ್ಯಾಗಕ್ಕೆ ಸಾಧನವಾಗಿ "ಉಪಸ್ಥತತ್ತ್ವ" ವೆಂದೂ ಹೇಳಿಸಿಕೊಳ್ಳುವುದು. ಈ ಐದು ಇಂದ್ರಿಯಗಳು ಕ್ರಿಯಾಶಕ್ತಿಪ್ರಧಾನವಾದುದರಿಂದ ಕರ್ಮೇಂದ್ರಿಯಗಳೆಂದು ಹೇಳಿಸಿಕೊಳ್ಳುವುವು. ಈ ಮೇಲೆ ಹೇಳಿದ ಬುದ್ಧಿತತ್ತ್ವಾದಿ ತ್ರಯೋದಶತತ್ತ್ವಗಳು, ಇಚ್ಛಾಶಕ್ತಿ-ಜ್ಞಾನಶಕ್ತಿ-ಕ್ರಿಯಾಶಕ್ತಿಪ್ರಧಾನವಾಗಿರುವುವು.

ಈ ಶಕ್ತಿತತ್ತ್ವವೇ, ಕೇವಲಶ್ರೋತ್ರೇಂದ್ರಿಯಗ್ರಾಹ್ಯವಾದ "ಶಬ್ದತತ್ತ್ವ" ರೂಪವಾಗಿಯೂ, ಕೇವಲತ್ವಗಿಂದ್ರಿಯಗ್ರಾಹ್ಯವಾದ "ಸ್ಪರ್ಶತತ್ತ್ವ" ರೂಪವಾಗಿಯೂ, ಕೇವಲನೇತ್ರೇಂದ್ರಿಯಗ್ರಾಹ್ಯವಾದ "ರೂಪತತ್ತ್ವ" ರೂಪವಾಗಿಯೂ, ಕೇವಲಜಿಹ್ವೇಂದ್ರಿಯಗ್ರಾಹ್ಯವಾದ "ರಸತತ್ತ್ವ" ರೂಪವಾಗಿಯೂ, ಕೇವಲಘ್ರಾಣೇಂದ್ರಿಯಗ್ರಾಹ್ಯವಾದ "ಗಂಧತತ್ತ್ವ" ರೂಪವಾಗಿಯೂ ಪರಿಣಮಿಸುವುದು. ಶಬ್ದದಲ್ಲಿ ಧ್ವನ್ಯಾತ್ಮಕ-ವರ್ಣಾತ್ಮಕಶಬ್ದವೆಂದೂ, ಸ್ಪರ್ಶದಲ್ಲಿ ಶೀತೋಷ್ಣಸ್ಪರ್ಶವೆಂದೂ, ರೂಪದಲ್ಲಿ ನೀಲಪೀತಾದಿರೂಪವೆಂದೂ, ರಸದಲ್ಲಿ ಮಧುರಾಮ್ಲಾದಿರಸ

ಯದ್ಭಾಸಾ ಭಾಸತೇ ವಿಶ್ವಂ ಯತ್ಸುಖೇನಾನುಮೋದತೇ ।
ನಮಸ್ತಸ್ಮೈ ಗುಣಾತೀತವಿಭವಾಯ ಪರಾತ್ಮನೇ ॥೪॥

ಸದಾಶಿವಮುಖಾಶೇಷತತ್ತ್ವೋನ್ಮೇಷವಿಧಾಯಿನೇ ।
ನಿಷ್ಕಲಂಕಸ್ವಭಾವಾಯ ನಮಃ ಶಾಂತಾಯ ಶಂಭವೇ ॥೫॥

ಸ್ವೇಚ್ಛಾವಿಗ್ರಹಯುಕ್ತಾಯ ಸ್ವೇಚ್ಛಾವರ್ತನವರ್ತಿನೇ ।
ಸ್ವೇಚ್ಛಾಕೃತತ್ರಿಲೋಕಾಯ ನಮಃ ಸಾಂಬಾಯ ಶಂಭವೇ ॥೬॥

ವೆಂದೂ, ಗಂಧದಲ್ಲಿ ಸುಗಂಧ-ದುರ್ಗಂಧವೆಂದೂ ವಿಭಾಗವು ವ್ಯಕ್ತವಾಗದೆ ಸಾಮಾನ್ಯ ರೂಪವಾಗಿರುವುದರಿಂದ, ಶಬ್ದಾದಿಗಳು "ತನ್ಮಾತ್ರ" ಗಳೆಂದು ಹೇಳಿಸಿಕೊಳ್ಳುವುವು.

ಪೂರ್ವೋಕ್ತವಾದೀ ಶಕ್ತಿತತ್ತ್ವವೇ, ಶಬ್ದೈಕಗುಣವುಳ್ಳ "ಆಕಾಶತತ್ತ್ವ" ರೂಪವಾಗಿಯೂ, ಸ್ಪರ್ಶವೆಂಬ ಪ್ರಧಾನಗುಣವುಳ್ಳ "ವಾಯುತತ್ತ್ವ" ರೂಪವಾಗಿಯೂ, ರೂಪವೆಂಬ ಪ್ರಧಾನಗುಣವುಳ್ಳ "ತೇಜಸ್ತತ್ತ್ವ" ರೂಪವಾಗಿಯೂ, ರಸವೆಂಬ ಪ್ರಧಾನಗುಣವುಳ್ಳ "ಜಲತತ್ತ್ವ" ರೂಪವಾಗಿಯೂ, ಗಂಧವೆಂಬ ಪ್ರಧಾನಗುಣವುಳ್ಳ "ಪೃಥಿವೀತತ್ತ್ವ" ರೂಪವಾಗಿಯೂ ಪರಿಣಮಿಸುವುದು. ಈ ಪಂಚಭೂತಗಳೊಳಗೆ ಉತ್ತರೋತ್ತರಭೂತಗಳಲ್ಲಿ ಪೂರ್ವಪೂರ್ವಭೂತಗಳ ಗುಣಗಳು ಅನುವರ್ತಿಸುವುವು. ನಿಗಮಾಗಮಪ್ರಸಿದ್ಧವಾದೀಮೂವತ್ತಾರುತತ್ತ್ವಗಳು ಸಚ್ಚಿದಾನಂದರೂಪವಾದ ಶಕ್ತಿವಿಶಿಷ್ಟಪರಶಿವಬ್ರಹ್ಮದ ಪರಿಣಾಮರೂಪವಾಗಿರುವುದರಿಂದ, ವೀರಶೈವಮತವು ಪರಿಣಾಮವಾದವನ್ನೂ, ಜಗತ್ಸತ್ಯತ್ವವಾದವನ್ನೂ ಬೋಧಿಸುತ್ತಿರುವುದು. ॥೩॥

"ತಸ್ಯ ಭಾಸಾ ಸರ್ವಮಿದಂ ವಿಭಾತಿ" (೫.೧೫) ಎಂಬ ಕಠವಲ್ಲೀಶ್ರುತಿಪ್ರಮಾಣಾನುಸಾರವಾಗಿ ಸಮಸ್ತಪ್ರಪಂಚವು ಯಾವ ಪರಶಿವಬ್ರಹ್ಮದ ಪ್ರಕಾಶದಿಂದ ಪ್ರಕಾಶಿಸುತ್ತದೆಯೋ, ಯಾವ ಪರಶಿವಬ್ರಹ್ಮದ ಆನಂದದಿಂದ ಆನಂದಿಸುತ್ತದೆಯೋ, ಆ ಹೇಯಗುಣರಹಿತವೈಭವನಾದ ಪರಮಾತ್ಮನಿಗೆ ನಮಸ್ಕಾರವು. ॥೪॥ ಶಿವಾದಿಭೂವ್ಯಂತವಾದ ಮೂವತ್ತಾರು ತತ್ತ್ವಗಳನ್ನು ತನ್ನಲ್ಲಿ ಅಡಕವಾಗಿರುವ ವಿಮರ್ಶಶಕ್ತಿಯಿಂದ ಮಯೂರಾಂಡರಸನ್ಯಾಯದಂತೆ ವಿಕಾಸಗೊಳಿಸುವವನೂ, ನಿಷ್ಕಲಂಕಸ್ವಭಾವವುಳ್ಳವನೂ, ಶಾಂತನೂ ಆದ ಶಿವನಿಗೆ ನಮಸ್ಕಾರವು. ॥೫॥ ಭಕ್ತಾನುಗ್ರಹಕ್ಕಾಗಿ ಸ್ವೇಚ್ಛೆಯಿಂದ ನಾನಾವಿಧದಿವ್ಯಮಂಗಲವಿಗ್ರಹರೂಪವನ್ನು ಧರಿಸುವವನೂ, ಸ್ವೇಚ್ಛಾವರ್ತನವುಳ್ಳವನೂ, ತನ್ನಲ್ಲಿ ಅಡಕವಾಗಿರುವ ಇಚ್ಛಾಶಕ್ತಿಯಿಂದ ತ್ರಿಲೋಕಗಳನ್ನು ನಿರ್ಮಿಸುವವನೂ, ಪಾರ್ವತೀವಲ್ಲಭನೂ ಆದ ಶಂಕರನಿಗೆ ನಮಸ್ಕಾರವು. ॥೬॥

ಯತ್ರ ವಿಶ್ರಾನ್ತ್ಯತೀಶತ್ವಂ ಸ್ವಾಭಾವಿಕಮನುತ್ತಮಂ ।
ನಮಸ್ತಸ್ಮೈ ಮಹೇಶಾಯ ಮಹಾದೇವಾಯ ಶೂಲಿನೇ ॥೭॥
ಯಾಮಾಹುಃ ಸರ್ವಲೋಕಾನಾಂ ಪ್ರಕೃತಿಂ ಶಾಸ್ತ್ರಪಾರಗಾಃ ।
ತಾಂ ಧರ್ಮಚಾರಿಣೀಂ ಶಂಭೋಃ ಪ್ರಣಮಾಮಿ ಪರಾಂ ಶಿವಾಂ ॥೮॥

ಯಾವ ಪರಶಿವಬ್ರಹ್ಮದಲ್ಲಿ ಸರ್ವಶ್ರೇಷ್ಠವೂ ಸ್ವಭಾವಸಿದ್ಧವೂ ಆದ ಈಶತ್ವವು (ಒಡೆತನವು) ವಿಶ್ರಾಂತಿಯನ್ನು ಹೊಂದುತ್ತದೆಯೋ, ಆ ಇಚ್ಛಾಜ್ಞಾನಕ್ರಿಯಾಶಕ್ತಿ ರೂಪತ್ರಿಶೂಲಧಾರಿಯಾವ ಮಹಾದೇವನಿಗೆ ನಮಸ್ಕಾರವು. ॥೭॥

ಇನ್ನು ಗ್ರಂಥಕಾರರು ಪರಶಿವನಲ್ಲಿ ಸದಾ ಅವಿನಾಭಾವಸಂಬಂಧದಿಂದಿರುವ ಶಕ್ತಿಯನ್ನು ಐದು ಶ್ಲೋಕಗಳಿಂದ ಸ್ತುತಿಸುತ್ತಾರೆ.

ಶಕ್ತಿಸ್ತುತಿ.

ಸಕಲಶಾಸ್ತ್ರಕೋವಿದರು ಸಮಸ್ತಲೋಕಗಳ ಉತ್ಪತ್ತಿಗೆ ಯಾವಳನ್ನು ಮೂಲ ಕಾರಣೀಭೂತಳನ್ನಾಗಿ ಹೇಳುತ್ತಾರೆಯೋ, ಶಂಕರನ ಧರ್ಮಸ್ವರೂಪಳಾದ ಆ ಸರ್ವಮಂಗಲಾದೇವಿಯನ್ನು ನಮಸ್ಕರಿಸುತ್ತೇನೆ. ॥ ಗ್ರಂಥಕಾರರು ಈ ಮಂಗಲ ಶ್ಲೋಕದಲ್ಲಿ ಶಿವನಿಗೂ ಶಕ್ತಿಗೂ ಅವಿನಾಭಾವಸಂಬಂಧವನ್ನು ತೋರಿಸಿರುತ್ತಾರೆ. ಇದೇ ವೀರಶೈವಸಿದ್ಧಾಂತದ ಮೂಲರಹಸ್ಯವಾಗಿದ್ದು, ಶಕ್ತಿವಿಶಿಷ್ಟಾದ್ವೈತವೆನಿಸುವುದು. ಈ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ಸ್ವರೂಪವನ್ನು ಮುಮುಕ್ಷುಗಳೆಲ್ಲರೂ ಅವಶ್ಯವಾಗಿ ತಿಳಿಯಬೇಕಾದುದರಿಂದ, ಅದನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸುವುದಾಗುವುದು.

ಶಕ್ತಿವಿಶಿಷ್ಟಾದ್ವೈತವೆಂದರೆ—ಶಕ್ತಿವಿಶಿಷ್ಟಜೀವನಿಗೂ ಶಕ್ತಿವಿಶಿಷ್ಟಶಿವನಿಗೂ ಸಾಮರಸ್ಯವೆಂದರ್ಥವು. “ಶಕ್ತಿಶ್ಚ ಶಕ್ತಿಶ್ಚ-ಶಕ್ತೀ-ತಾಭ್ಯಾಂ ವಿಶಿಷ್ಟೌ ಜೀವೇಶೌ, ತಯೋಃ ಅದ್ವೈತಂ ಶಕ್ತಿವಿಶಿಷ್ಟಾದ್ವೈತಂ” ಎಂದು ಪೂರ್ವಾಚಾರ್ಯರು ಶಕ್ತಿವಿಶಿಷ್ಟಾದ್ವೈತಪದದ ವ್ಯುತ್ಪತ್ತಿಯನ್ನು ತೋರಿಸಿರುವರು. ಶಕ್ತಿಯು ಸ್ಥೂಲಚಿದಾತ್ಮಕಶಕ್ತಿ-ಸೂಕ್ಷ್ಮಚಿದಚಿದಾತ್ಮಕಶಕ್ತಿ ಎಂದು ಎರಡು ಪ್ರಕಾರವಾಗಿರುವುದು. ಜೀವನು ಸ್ಥೂಲಚಿದಚಿದಾತ್ಮಕಶಕ್ತಿಯುಕ್ತನಾಗಿರುವನು ; ಶಿವನು ಸೂಕ್ಷ್ಮಚಿದಚಿದಾತ್ಮಕಶಕ್ತಿಯುಕ್ತನಾಗಿರುವನು. ಜೀವನ ಸ್ಥೂಲಚಿಚ್ಛಕ್ತಿಯು ಕಿಂಚಿಜ್ಜ್ಞತಾರೂಪವಾಗಿರುವುದು. ಸ್ಥೂಲಾಚಿಚ್ಛಕ್ತಿಯು ಕಿಂಚಿತ್ಕರ್ತೃತಾರೂಪವಾಗಿರುವುದು. ಶಿವನ ಸೂಕ್ಷ್ಮಚಿಚ್ಛಕ್ತಿಯು ಸರ್ವಜ್ಞತಾರೂಪವಾಗಿರುವುದು. ಸೂಕ್ಷ್ಮಾಚಿಚ್ಛಕ್ತಿಯು ಸರ್ವಕರ್ತೃತಾರೂಪವಾಗಿರುವುದು. ಈ ಉಭಯವಿಧಶಕ್ತಿಗಳಿಂದ ಯುಕ್ತರಾದ ಜೀವ ಮತ್ತು ಶಿವ ಇವರ

ಅದ್ವೈತವೇ (ಸಾಮರಸ್ಯವೇ) ಶಕ್ತಿವಿಶಿಷ್ಟಾದ್ವೈತವೆನಿಸುವುದು. ಶಕ್ತಿಯು ಪರಶಿವ ಬ್ರಹ್ಮದಲ್ಲಿ ಅವಿನಾಭಾವಸಂಬಂಧದಿಂದಿದ್ದು ನಿತ್ಯವೆನಿಸಿರುವುದು. ಈ ವಿಷಯವನ್ನು ಶ್ವೇತಾಶ್ವತರಶ್ರುತಿಯು—

ಪರಾಽಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ ॥ (೬-೮)

ಎಂಬ ವಾಕ್ಯದಿಂದ ಸಾರುತ್ತಿರುವುದು. ಈ ಮಂತ್ರಾರ್ಥವನ್ನು ಪರ್ಯಾಲೋಚಿಸಿದರೆ, ಪರಬ್ರಹ್ಮದಲ್ಲಿ ಶಕ್ತಿಯು ಸ್ವಭಾವಸಿದ್ಧವಾಗಿರುವುದೆಂದೂ, ಈ ಶಕ್ತಿಯು ಜ್ಞಾನಶಕ್ತಿ-ಕ್ರಿಯಾಶಕ್ತ್ಯಾದಿರೂಪದಿಂದ ನಾನಾಪ್ರಕಾರವಾಗಿರುವುದೆಂದೂ ಸಿದ್ಧವಾಗುತ್ತದೆ. "ಸ್ವಾಭಾವಿಕೀ" ಎಂಬ ಪದವು ಶಕ್ತಿನಿತ್ಯತ್ವವನ್ನು ಘಂಟಾಘೋಷವಾಗಿ ಉದ್ಘೋಷಿಸುತ್ತಿರುವುದು. ಇದೇ ವಿಷಯವನ್ನು ಇದೇ ಶ್ರುತಿಯು ಮತ್ತೊಂದೆಡೆಯಲ್ಲಿ—

ಯದಾ ತಮಸ್ತನ್ನ ದಿವಾ ನ ರಾತ್ರಿರ್ನಸನ್ನ ಚಾಸಚ್ಛಿವ ಏವ ಕೇವಲಃ ।
ತದಕ್ಷರಂ ತತ್ಸವಿತುರ್ವರೇಣ್ಯಂ ಪ್ರಜ್ಞಾ ಚ ತಸ್ಮಾತ್ ಪ್ರಸೃತಾ ಪುರಾಣೀ ॥ (೪-೧೮)

ಎಂಬ ವಾಕ್ಯದಿಂದ ಪ್ರತಿಪಾದಿಸುತ್ತಿರುವುದು. ಪುರಾಣೀ-ಅನಾದಿಸಂಸಿದ್ಧವಾದ, ಪ್ರಜ್ಞಾ-ಚಿಚ್ಛಕ್ತಿಯು, ಆ ಪರಶಿವಬ್ರಹ್ಮದಿಂದ, ಪ್ರಸೃತಾ-ಕ್ರಿಯಾಶಕ್ತ್ಯಾದ್ಯನಂತರೂಪದಿಂದ ಪ್ರಸೃತವಾಯಿತು; ಎಂದು ಬೋಧಿಸುತ್ತಿರುವುದು. ಈ ಶ್ರುತಿವಾಕ್ಯದಲ್ಲಿ ಶಕ್ತಿವಿಕಾಸವು ಸ್ಫುಟವಾಗಿ ತೋರಿಸಲ್ಪಟ್ಟಿರುವುದು.

ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಂ । (೪-೧೦)

ಎಂಬ ಮಂತ್ರವೂ ಸಹ ಪರಮಾತ್ಮನು ಶಕ್ತಿವಿಶಿಷ್ಟನಾಗಿರುವನೆಂದು ಬೋಧಿಸುತ್ತಿರುವುದು. ಪೂರ್ವಾಚಾರ್ಯರು ಮಾಯಾಶಬ್ದಕ್ಕೆ "ಮಂ ಶಿವಂ-ಅಯತಿ-ಸ್ವಭಾವತಃ ಪ್ರಾಪ್ನೋತೀತಿ ಮಾಯಾ" ಎಂದು ವಿಗ್ರಹಮಾಡಿರುವುದರಿಂದ, ಈ ಮಾಯೆಯು ಅದ್ವೈತಿಗಳು ಹೇಳುವಂತೆ ಮೂಲಾವಿದ್ಯಾರೂಪಮಾಯೆಯಾಗಿರದೆ, ವಿಮರ್ಶಶಕ್ತಿರೂಪಮಾಯೆಯಾಗಿರುವುದೆಂದು ತಿಳಿಯಬೇಕು. ಈ ಮಂತ್ರಾಭಿಪ್ರಾಯವನ್ನು ಸಿದ್ಧಾಗಮವು—

ಮಂ ಶಿವಂ ಪರಮಂ ಬ್ರಹ್ಮ ಪ್ರಾಪ್ನೋತೀತಿ ಸ್ವಭಾವತಃ ।
ಮಾಯೇತಿ ಪ್ರೋಚ್ಯತೇ ಲೋಕೇ ಬ್ರಹ್ಮನಿಷ್ಠಾ ಸನಾತನೀ ॥

ಎಂಬೀ ಶ್ಲೋಕದಿಂದ ಬೋಧಿಸುತ್ತಿರುವುದು. ಯಜುರ್ವೇದತೈತ್ತಿರೀಯಸಂಹಿತೆಯು—

ಆಖುಸ್ತೇ ರುದ್ರ ಪಶುಸ್ತಂ ಜುಷಸ್ವೈಷ ತೇ ರುದ್ರಭಾಗಃ
ಸಹ ಸ್ವಸ್ರಾಂಬಿಕಯಾ ತಂ ಜುಷಸ್ವ (೧-೮-೬)

ಎಂಬೀ ಮಂತ್ರದಿಂದ ಶಕ್ತಿನಿತ್ಯತ್ವವನ್ನು ಪ್ರತಿಪಾದಿಸುತ್ತಿರುವುದು. ಈ ಮಂತ್ರದಲ್ಲಿರುವ "ಸ್ವಸ್ರಾ--ಅಂಬಿಕಯಾ" ಎಂಬ ಪದಗಳನ್ನು ಪರ್ಯಾಲೋಚಿಸಿದರೆ, ಪರಮಾತ್ಮನಲ್ಲಿ ಶಕ್ತಿಯು ಸ್ವಾಭಾವಿಕವಾಗಿರುವುದೆಂದು ಸಿದ್ಧವಾಗುವುದು.

"ನಮಃ ಸೋಮಾಯ ಚ ರುದ್ರಾಯ ಚ" (ತೈ. ಸಂ. ೪-೫-೮)

ಎಂಬ ಶ್ರೀರುದ್ರಮಂತ್ರವೂ ಸಹ, ಪರಮೇಶ್ವರನು ಉಮಾರೂಪಶಕ್ತಿಯುಕ್ತನಾಗಿರುವನೆಂದು ಬೋಧಿಸುತ್ತಿರುವುದು. ಇದೇ ಅಭಿಪ್ರಾಯವನ್ನು ಕೈವಲ್ಯಶ್ರುತಿಯು—

"ಉಮಾಸಹಾಯಂ ಪರಮೇಶ್ವರಂ ಪ್ರಭುಂ" (೧-೭)

ಎಂಬ ಮಂತ್ರದಿಂದ ಸಮರ್ಥಿಸುತ್ತಿರುವುದು. ಇದೇ ರೀತಿಯಾಗಿ ಅನೇಕಶ್ರುತಿವಾಕ್ಯಗಳು ಶಕ್ತಿನಿತ್ಯತ್ವವನ್ನೂ, ಶಿವಸಮವೇತತ್ವವನ್ನೂ ಪ್ರತಿಪಾದಿಸುತ್ತಿರುವುವು.

ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತುಪ್ರಕಾಶಿನೀ ।
ತಥಾ ಶಕ್ತಿರ್ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿ ಸ್ಥಿರಾ ॥೩೨॥
ಅಂತಃಕರಣರೂಪೇಣ ಜಗದಂಕುರರೂಪತಃ ।
ಯಸ್ಮಿನ್ ವಿಭಾತಿ ಚಿಚ್ಛಕ್ತಿರ್ಬ್ರಹ್ಮಭೂತಃ ಸ ಉಚ್ಯತೇ ॥೩೬॥
(ಸಿ. ಶಿ. ಪರಿಚ್ಛೇದ ೨೦)

ಸಮಸ್ತವಸ್ತುಗಳನ್ನು ಪ್ರಕಾಶಪಡಿಸುವ ಚಂದ್ರಿಕೆಯು ಚಂದ್ರನಲ್ಲಿ ಹೇಗೆ ಸ್ಥಿರವಾಗಿರುವುದೋ, ಹಾಗೆಯೇ ಚರಾಚರಾತ್ಮಕಸಕಲಪದಾರ್ಥಗಳನ್ನು ಪ್ರಕಾಶಪಡಿಸುವ ವಿಮರ್ಶಶಕ್ತಿಯು ಪ್ರಕಾಶಸ್ವರೂಪವಾದ ಪರಬ್ರಹ್ಮದಲ್ಲಿ ಸ್ಥಿರವಾಗಿರುವುದೆಂದೂ, ವಿಮರ್ಶಶಕ್ತಿಯು ಮೂಲಾಹಂಕಾರರೂಪದಿಂದಲೂ ಸೂಕ್ಷ್ಮಜಗದ್ರೂಪದಿಂದಲೂ ಯಾವನಲ್ಲಿ ಪ್ರಕಾಶಿಸುತ್ತಿರುವುದೋ, ಅವನೇ ಪರಬ್ರಹ್ಮಸ್ವರೂಪನೆಂದೂ ಸಿದ್ಧಾಂತಶಿಖಾಮಣಿಯಲ್ಲಿ ಶಕ್ತಿಸ್ವರೂಪವು ಸ್ಫುಟವಾಗಿ ಪ್ರತಿಪಾದಿಸಲ್ಪಟ್ಟಿರುವುದು.

ಲೋಕವಿಖ್ಯಾತನಾದ ಕಾಲಿದಾಸಮಹಾಕವಿಯು ತನ್ನಿಂದ ರಚಿಸಲ್ಪಟ್ಟ ರಘುವಂಶಕಾವ್ಯದ ಆರಂಭದಲ್ಲಿ—

ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ ।
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ ॥

ಎಂದು ಮಂಗಲವನ್ನಾಚರಿಸಿ, ಈ ಮಂಗಲಶ್ಲೋಕದಲ್ಲಿ ಪಾರ್ವತೀಪರಮೇಶ್ವರರು ಶಬ್ದಾರ್ಥದಂತೆ ನಿತ್ಯಸಂಬಂಧದಿಂದಿರುವರೆಂದು ಉಲ್ಲೇಖಿಸಿರುತ್ತಾನೆ. ಪಾರ್ವತೀಪರಮೇಶ್ವರರೆಂದರೆ ಶಕ್ತಿ-ಶಿವರೆಂದರ್ಥವು. ಶಬ್ದವನ್ನು ಬಿಟ್ಟು ಅರ್ಥವೂ, ಅರ್ಥವನ್ನು ಬಿಟ್ಟು ಶಬ್ದವೂ ಹೇಗೆ ಇರುವುದಿಲ್ಲವೋ, ಹಾಗೆಯೇ ಶಿವನನ್ನು ಬಿಟ್ಟು ಶಕ್ತಿಯೂ, ಶಕ್ತಿಯನ್ನು ಬಿಟ್ಟು ಶಿವನೂ ಇರುವುದಿಲ್ಲವೆಂದು ಈ ಮಹಾಕವಿಯ ಅಭಿಪ್ರಾಯವಾಗಿರುವುದು.

ಕನ್ನಡ ಸ್ಕ್ರಿಪ್ಟ್ T.V.

ವೀರಶೈವಸಿದ್ಧಾಂತದಲ್ಲಿ ಬ್ರಹ್ಮವು ನಿರ್ವಿಶೇಷವಾಗಿರದೆ ಸವಿಶೇಷವಾಗಿರುವುದು. ಪರಬ್ರಹ್ಮವು ಶಕ್ತಿವಿಶಿಷ್ಟವಾದುದರಿಂದ ಸವಿಶೇಷವೆನಿಸಿಕೊಳ್ಳುವುದು. ಬ್ರಹ್ಮವು ಸವಿಶೇಷವಾದುದರಿಂದಲೇ ಚರಾಚರಾತ್ಮಕಜಗದುತ್ಪತ್ತಿಕಾರಣೀಭೂತವಾಗಿರುವುದು. ಶಕ್ತಿವಿಶಿಷ್ಟಬ್ರಹ್ಮದಿಂದುತ್ಪನ್ನವಾದ ಜಗತ್ತೂ ಕೂಡ ಶಕ್ತಿವಿಶಿಷ್ಟವಾಗಿರುವುದು. ಈ ಜಗತ್ತಿನಲ್ಲಿರತಕ್ಕ ಪ್ರತಿಯೊಂದು ಪದಾರ್ಥವನ್ನೂ ಪರ್ಯಾಲೋಚಿಸಿದ್ದಾದರೆ, ಪ್ರತಿಯೊಂದು ಪದಾರ್ಥದಲ್ಲಿಯೂ ಒಂದೊಂದು ವಿಧವಾದ ಶಕ್ತಿಯಿರುವುದಾಗಿ ಕಂಡುಬರುವುದು. ಪೃಥಿವಿಯಲ್ಲಿ ಧಾರಣಶಕ್ತಿಯೂ, ಜಲದಲ್ಲಿ ಆಪ್ಯಾಯನಶಕ್ತಿಯೂ, ತೇಜಸ್ಸಿನಲ್ಲಿ ಉಜ್ಜ್ವಲನಶಕ್ತಿಯೂ, ವಾಯುವಿನಲ್ಲಿ ಸ್ಪಂದನಶಕ್ತಿಯೂ, ಆಕಾಶದಲ್ಲಿ ವ್ಯಾಪನಶಕ್ತಿಯೂ, ಆತ್ಮನಲ್ಲಿ ಬುದ್ಧಿಶಕ್ತಿಯೂ ಇರುವುವಷ್ಟೆ ! ಅಲ್ಲದೆ ವೃಕ್ಷಾದಿಗಳಲ್ಲಿ ಜಲಾಕರ್ಷಣಾದಿಶಕ್ತಿಗಳೂ, ಅಗ್ನ್ಯಾದಿಗಳಲ್ಲಿ ದಾಹಾದಿಶಕ್ತಿಗಳೂ, ವನಸ್ಪತಿಗಳಲ್ಲಿ ಮಹಾಮಹಾರೋಗಗಳನ್ನು ಗುಣಪಡಿಸುವ ಶಕ್ತಿಯೂ, ಪಾದರಸದಲ್ಲಿ ತಾಮ್ರವನ್ನು ಸುವರ್ಣವನ್ನಾಗಿ ಮಾಡುವ ಶಕ್ತಿಯೂ, ವಜ್ರದಲ್ಲಿ ಶಿಲೆಯನ್ನು ಭೇದಿಸುವ ಶಕ್ತಿಯೂ, ಮಣಿಮಂತ್ರಾದಿಗಳಲ್ಲಿ ವಿಷಬಾಧೆಯನ್ನೂ, ಭೂತ-ಪ್ರೇತ-ಪಿಶಾಚಾದಿಗಳಿಂದುಂಟಾಗುವ ಬಾಧೆಯನ್ನೂ ಪರಿಹರಿಸುವ ಶಕ್ತಿಯೂ, ಧ್ವನ್ಯಾಕರ್ಷಕಯಂತ್ರ (ರೇಡಿಯೋ) ದಲ್ಲಿ ಧ್ವನಿಯನ್ನು ಆಕರ್ಷಿಸಿ ಅದನ್ನು ವಿಸ್ತಾರಗೊಳಿಸುವ ಶಕ್ತಿಯೂ, ವಿದ್ಯುತ್ತಿನಲ್ಲಿ ನಾನಾವಿಧಯಂತ್ರಚಾಲನಶಕ್ತಿಯೂ, ಸೂಜಿಗಲ್ಲಿನಲ್ಲಿ ಸೂಜಿಯನ್ನು ಆಕರ್ಷಿಸುವ ಶಕ್ತಿಯೂ, ಶಿಂಗಳಿಕಪ್ರಾಣಿಯಲ್ಲಿ ವಿಷವನ್ನು ಪರೀಕ್ಷಿಸುವ ಶಕ್ತಿಯೂ, ಇರುವೆಗಳಲ್ಲಿ ವೃಕ್ಷಮೂಲಾಘ್ರಾಣನದಿಂದ ವೃಕ್ಷಾಗ್ರದಲ್ಲಿರುವ ಫಲವನ್ನು ಕಂಡುಹಿಡಿಯುವ ಶಕ್ತಿಯೂ, ಒಂಟೆಯಲ್ಲಿ ಶ್ವಾಸದ್ವಾರಾ ಸರ್ಪವನ್ನು ಆಕರ್ಷಿಸುವ ಶಕ್ತಿಯೂ ಇದೇ ರೀತಿಯಾಗಿ ಬ್ರಹ್ಮಸೃಷ್ಟ್ಯಂತರ್ಗತಸಕಲಪದಾರ್ಥಗಳಲ್ಲಿಯೂ ಒಂದೊಂದು ವಿಧವಾದ ಶಕ್ತಿಯು ಇರುವುದು ಲೋಕದಲ್ಲಿ ಪ್ರತಿಯೊಬ್ಬರಿಗೂ ಪ್ರತ್ಯಕ್ಷವಾಗಿ ಕಂಡುಬರುವುದಷ್ಟೆ! ಇದರಿಂದ ಸಕಲಚರಾಚರಾತ್ಮಕವಾದ ಜಗತ್ತು ಶಕ್ತಿವಿಶಿಷ್ಟವಾಗಿರುವುದೆಂದೂ, ಇಂಥ ಶಕ್ತಿವಿಶಿಷ್ಟಜಗತ್ತನ್ನು ನಿರ್ಮಿಸಿದ ಬ್ರಹ್ಮವು ಅರ್ಥಾತ್ ಶಕ್ತಿವಿಶಿಷ್ಟವಾದುದೆಂದೂ ಸರ್ವರಿಗೂ ಅನುಭವದಿಂದ ವೇದ್ಯವಾಗುವುದು.

ಸತ್-ಚಿತ್-ಆನಂದಸ್ವರೂಪವಾದ ಪರಬ್ರಹ್ಮವು "ಅಸ್ಮಿ - ಪ್ರಕಾಶೇ - ನಂದಾಮಿ" ಅಂದರೆ 'ನಾನು ಇದ್ದೇನೆ-ಪ್ರಕಾಶಿಸುತ್ತೇನೆ-ಆನಂದಿಸುತ್ತೇನೆ' ಎಂಬ ಅನುಭವದಿಂದ ಕೂಡಿರುವುದಷ್ಟೆ! ಈ ಅನುಭವವೇ ಪರಬ್ರಹ್ಮದ ವಿಮರ್ಶಶಕ್ತಿಯು. ಈ ಅನುಭವವು ಆ ಪರಬ್ರಹ್ಮದಲ್ಲಿರದಿದ್ದರೆ, ಆ ಬ್ರಹ್ಮಕ್ಕೆ ಪ್ರಕಾಶರೂಪವಾದ ಸ್ಫಟಿಕಶಿಲೆಯಂತೆ ಜಡ

ಯಯಾ ಮಹೇಶ್ವರಃ ಶಂಭುರ್ನಾಮರೂಪಾದಿಸಂಯುತಃ ।
ತಸ್ಯೈ ಮಾಯಾಸ್ವರೂಪಾಯೈ ನಮಃ ಪರಮಶಕ್ತಯೇ ॥೯॥
ಶಿವಾದ್ಯಾऽऽದಿಸಮುತ್ಪನ್ನಾ ಶಾಂತ್ಯತೀತಪದೋತ್ತರಾ ।
ಮಾತರಂ ತಾಂ ಸಮಸ್ತಾನಾಂ ವಂದೇ ಶಿವಕರೀಂ ಶಿವಾಂ ॥೧೦॥
ಇಚ್ಛಾಜ್ಞಾನಾದಿರೂಪೇಣ ಯಾ ಶಂಭೋರ್ವಿಶ್ವಭಾವಿನೀ ।
ವಂದೇ ತಾಂ ಪರಮಾನಂದಪ್ರಬೋಧಲಹರೀಂ ಶಿವಾಂ ॥೧೧॥
ಅಮೃತಾರ್ಥಂ ಪ್ರಪನ್ನಾನಾಂ ಯಾ ಸುವಿದ್ಯಾಪ್ರದಾಯಿನೀ ।
ಅಹರ್ನಿಶಮಹಂ ವಂದೇ ತಾಮೀಶಾನಮನೋರಮಾಂ ॥೧೨॥

ವೆಂದು ಹೇಳಬೇಕಾಗುವ ಪ್ರಸಂಗವು ಬರುವುದು. ಸೌಂದರ್ಯವಿಶಿಷ್ಟನಾದ ಅಂಧನಿಗೆ ತನ್ನ ಸೌಂದರ್ಯವನ್ನು ತಿಳಿಯುವ ಶಕ್ತಿಯಿಲ್ಲದಿರುವುದರಿಂದ ಅವನಿಗೆ ಅವನ ಸೌಂದರ್ಯವು ವ್ಯರ್ಥವಾಗುವಂತೆ, ಬ್ರಹ್ಮಕ್ಕೆ ತನ್ನ ಸಚ್ಚಿದಾನಂದಸ್ವರೂಪವನ್ನು ತಿಳಿಯುವ ಶಕ್ತಿಯಿಲ್ಲದಿದ್ದರೆ, ತನ್ನಲ್ಲಿರುವ ಸಚ್ಚಿದಾನಂದಸ್ವರೂಪವು ವ್ಯರ್ಥವಾಗುವದಷ್ಟೆ! ಆದುದರಿಂದ ಬ್ರಹ್ಮದಲ್ಲಿ ಸಚ್ಚಿದಾನಂದರೂಪಾನುಭವಶಕ್ತಿಯನ್ನು ಒಪ್ಪಲೇಬೇಕಾಗುವುದು. ಇದರಿಂದ ಬ್ರಹ್ಮವು ಶಕ್ತಿವಿಶಿಷ್ಟವೆಂದು ಸಿದ್ಧವಾಗುವುದು. ಇಂತಹ ಶಕ್ತಿವಿಶಿಷ್ಟಪರಬ್ರಹ್ಮವು "ಅಥಾತೋ ಬ್ರಹ್ಮಜಿಜ್ಞಾಸಾ" "ಚೈತನ್ಯಮಾತ್ಮಾ" ಇತ್ಯಾದಿಬ್ರಹ್ಮಸೂತ್ರ-ಶಿವಸೂತ್ರಮಯವೇದಾಂತಶಾಸ್ತ್ರಪ್ರತಿಪಾದ್ಯವಾಗಿರುವುದು.॥೮॥

ತನ್ನಲ್ಲಿ ನಿತ್ಯಸಂಬಂಧದಿಂದಿರುವ ಯಾವ ಶಕ್ತಿಯಿಂದ ಪರಮೇಶ್ವರನು ನಾಮರೂಪಕ್ರಿಯಾದಿಗಳಿಂದ ಕೂಡಿದವನಾಗಿರುವನೋ, ಜಗದುತ್ಪತ್ತಿಕಾರಣೀಭೂತಮೂಲಪ್ರಕೃತಿಸ್ವರೂಪಳಾದ ಆ ಪರಮಶಕ್ತಿಗೆ ನಮಸ್ಕಾರವು. ॥೯॥ ಶಾಂತ್ಯತೀತೋತ್ತರಕಲಾ (ವಿಮರ್ಶಶಕ್ತಿ) ಸ್ವರೂಪಳಾದ ಯಾವಳು ಪರಶಿವನಿಂದ ಸೃಷ್ಟ್ಯಾದಿಯಲ್ಲಿ ಆವಿರ್ಭವಿಸಿದಳೋ, ಸಮಸ್ತಜಗತ್ತುಗಳಿಗೆ ಮಾತೃಸ್ವರೂಪಳೂ ಮಂಗಲಕರಳೂ ಆದ ಆ ಸರ್ವಮಂಗಲಾದೇವಿಯನ್ನು ನಮಸ್ಕರಿಸುತ್ತೇನೆ. ॥೧೦॥ ಯಾವಳು ಪರಶಿವನ ಜ್ಞಾನಶಕ್ತಿ - ಕ್ರಿಯಾಶಕ್ತಿ - ಇಚ್ಛಾಶಕ್ತ್ಯಾದಿರೂಪದಿಂದ ಜಗತ್ತನ್ನು ಪ್ರಕಾಶಪಡಿಸುತ್ತಿರುವಳೋ, ಚಿದಾನಂದಲಹರೀಸ್ವರೂಪಳಾದ ಆ ಉಮಾದೇವಿಯನ್ನು ನಮಸ್ಕರಿಸುತ್ತೇನೆ. ॥೧೧॥ ಮುಕ್ತಿಗೋಸುಗ ತನ್ನನ್ನಾಶ್ರಯಿಸಿ ಶರಣಾಗತರಾದವರಿಗೆ ಯಾವಳು ತತ್ತ್ವಮಸ್ಯಾದಿಮಹಾವಾಕ್ಯಪ್ರಕಾಶಿತಶಿವಜೀವೈಕ್ಯವಿದ್ಯೆಯನ್ನು ಅನುಗ್ರಹಿಸುವಳೋ, ಆ ಪರಶಿವಶಕ್ತಿಯನ್ನು ಹಗಲಿರುಳೂ ನಮಸ್ಕರಿಸುತ್ತೇನೆ. ॥೧೨॥

ಆಸೀದಾಚಾರಸಿದ್ಧಾನಾಮಗ್ರಣೀಃ ಶಿವಯೋಗಿನಾಂ ।
ಶಿವಯೋಗೀತಿ ವಿಖ್ಯಾತಃ ಶಿವಜ್ಞಾನಮಹೋದಧಿಃ ॥೧೩॥

ಶಿವಭಕ್ತಿಸುಧಾಸಿಂಧುಜೃಂಭಣಾಮಲಚಂದ್ರಿಕಾ ।
ಭಾರತೀ ಯಸ್ಯ ವಿದಧೇ ಪ್ರಾಯಃ ಕುವಲಯೋತ್ಸವಂ ॥೧೪॥

ತಸ್ಯ ವಂಶೇ ಸಮುತ್ಪನ್ನೋ ಮುಕ್ತಾಮಣಿರಿವಾಮಲಃ ।
ಮುದ್ದದೇವಾಭಿಧಾಚಾರ್ಯೋ ಮೂರ್ಧನ್ಯಶ್ಶಿವಯೋಗಿನಾಂ ॥೧೫॥

ಮುದ್ದಾನಾತ್ಸರ್ವಜಂತೂನಾಂ ಪ್ರಣತಾನಾಂ ಪ್ರಬೋಧತಃ ।
ಮುದ್ದದೇವ ಇತಿ ಖ್ಯಾತಾ ಸಮಾಖ್ಯಾ ಯಸ್ಯ ವಿಶ್ರುತಾ ॥೧೬॥

ತಸ್ಯಾಸೀನ್ನಂದನಃ ಶಾಂತಃ ಸಿದ್ಧನಾಥಾಭಿಧಃ ಶುಚಿಃ ।
ಶಿವಸಿದ್ಧಾಂತನಿರ್ಣೇತಾ ಶಿವಾಚಾರ್ಯಃ ಶಿವಾತ್ಮಕಃ ॥೧೭॥

ಈ ಗ್ರಂಥಕರ್ತರಾದ
ಶ್ರೀಶಿವಯೋಗಿಶಿವಾಚಾರ್ಯರ ವಂಶವರ್ಣನೆ.

ಸದಾಚಾರಸಂಪನ್ನರಾದ ಶಿವಯೋಗಿಗಳಲ್ಲಿ ಅಗ್ರಗಣ್ಯನೂ, ಶಿವಜ್ಞಾನಕ್ಕೆ ಸಮುದ್ರಸ್ವರೂಪನೂ ಆದ "**ಶಿವಯೋಗಿಶಿವಾಚಾರ್ಯ**" ನೆಂಬ ಆಚಾರ್ಯನು ಈ ಗ್ರಂಥಕರ್ತನ ವಂಶದಲ್ಲಿ ಪ್ರಸಿದ್ಧನಾದನು. ॥೧೩॥ ಯಾವ ಶಿವಾಚಾರ್ಯನ ದಿವ್ಯವಾಣಿಯು ಶಿವಭಕ್ತಿರೂಪಸುಧಾಸಮುದ್ರವನ್ನು ಉಕ್ಕೇರಿಸುವುದರಲ್ಲಿ ಸ್ವಚ್ಛವಾದ ಚಂದ್ರಿಕಾಸ್ವರೂಪವಾಗಿದ್ದು, ಭೂಮಂಡಲವೆಂಬ ಕುವಲಯಕ್ಕೆ ಸಂತೋಷವನ್ನುಂಟುಮಾಡಿತೋ, ಆ ಶಿವಯೋಗಿಶಿವಾಚಾರ್ಯನ ವಂಶಾಬ್ಧಿಯಲ್ಲಿ ನಿರ್ಮಲವಾದ ಮುತ್ತಿನಂತೆ, ಶಿವಯೋಗಿಶಿಖಾಮಣಿಯಾದ "**ಮುದ್ದದೇವಶಿವಾಚಾರ್ಯ**" ನೆಂಬ ಆಚಾರ್ಯನು ಜನಿಸಿದನು. ॥೧೪-೧೫॥ ಶರಣಾಗತವಾದ ಸಮಸ್ತಪ್ರಾಣಿವರ್ಗಕ್ಕೆ ಸದ್ಬೋಧೆಯಿಂದ ಸಂತೋಷವನ್ನುಂಟುಮಾಡುವುದರಿಂದ, ಯಾವ ಆಚಾರ್ಯನಿಗೆ "ಮುದ್ದದೇವ" ಎಂಬ ಹೆಸರು ಸರ್ವತ್ರ ಪ್ರಸಿದ್ಧವಾಯಿತೋ, ಆ ಮುದ್ದದೇವಶಿವಾಚಾರ್ಯನಿಗೆ ಶಾಂತನೂ, ಪವಿತ್ರನೂ, ಶಿವಸ್ವರೂಪನೂ, ಶಿವಾದ್ವೈತಸಿದ್ಧಾಂತನಿರ್ಣಾಯಕನೂ ಆದ "**ಸಿದ್ಧನಾಥಶಿವಾಚಾರ್ಯ**" ನೆಂಬ ಹೆಸರಿನ ಪುತ್ರನು ಜನಿಸಿದನು. ॥೧೬-೧೭॥

ವೀರಶೈವಶಿಖಾರತ್ನಂ ವಿಶಿಷ್ಟಾಚಾರಸಂಪದಂ ।
ಶಿವಜ್ಞಾನಮಹಾಸಿಂಧುಂ ಯಂ ಪ್ರಶಂಸಂತಿ ದೇಶಿಕಾಃ ॥೧೮॥

ಯದಾಚಾರ್ಯಕುಲೇ ಜಾತಾ ಸತಾಮಾಚಾರಮಾತೃಕಾ ।
ಶಿವಭಕ್ತಿಃ ಸ್ಥಿರಾ ಯಸ್ಮಿನ್ ಜಜ್ಞೇ ವಿಗತವಿಪ್ಲವಾ ॥೧೯॥

ತಸ್ಯ ವೀರಶಿವಾಚಾರ್ಯಶಿಖಾರತ್ನಸ್ಯ ನಂದನಃ ।
ಅಭವಚ್ಛಿವಯೋಗೀತಿ ಸಿಂಧೋರಿವ ಸುಧಾಕರಃ ॥೨೦॥

ಚಿದಾನಂದಪರಾಕಾಶಶಿವಾನುಭವಯೋಗತಃ ।
ಶಿವಯೋಗೀತಿ ನಾಮೋಕ್ತಿರ್ಯಸ್ಯ ಯಾಥಾರ್ಥ್ಯಯೋಗಿನೀ ॥೨೧॥

ಶಿವಾಗಮಪರಿಜ್ಞಾನಪರಿಪಾಕಸುಗಂಧಿನಾ ।
ಯದೀಯಕೀರ್ತಿಪುಷ್ಪೇಣ ವಾಸಿತಂ ಹರಿತಾಂ ಮುಖಂ ॥೨೨॥

ಯೇನ ರಕ್ಷಾವತೀ ಜಾತಾ ಶಿವಭಕ್ತಿಃ ಸನಾತನೀ ।
ಬೌದ್ಧಾದಿಪ್ರತಿಸಿದ್ಧಾಂತಮಹಾಧ್ವಾಂತಾಂಶುಮಾಲಿನಾ ॥೨೩॥

ಯಾವನನ್ನು ಆಚಾರ್ಯರು ವೀರಶೈವವೃಂದಕ್ಕೆ ಶಿಖಾಮಣಿಸ್ವರೂಪನನ್ನಾಗಿಯೂ, ಶ್ರೇಷ್ಠವಾದ ಆಚಾರವೇ ಸಂಪತ್ತುಳ್ಳವನನ್ನಾಗಿಯೂ, ಶಿವಜ್ಞಾನಕ್ಕೆ ಮಹಾಸಾಗರಸ್ವರೂಪನನ್ನಾಗಿಯೂ ಮುಕ್ತಕಂಠದಿಂದ ಹೊಗಳುತ್ತಾರೆಯೋ, ಯಾವ ಆಚಾರ್ಯನ ವಂಶದಲ್ಲಿ ಸದಾಚಾರಗಳ ಮೂಲವು ಉತ್ಪನ್ನವಾಯಿತೋ, ಯಾವ ಆಚಾರ್ಯನಲ್ಲಿ ನಿರುಪದ್ರವವಾದ ಶಿವಭಕ್ತಿಯು ಸ್ಥಿರವಾಯಿತೋ, ವೀರಶೈವಾಚಾರ್ಯರಿಗೆ ಶಿಖಾರತ್ನಸ್ವರೂಪನಾದ ಆ ಸಿದ್ಧನಾಥಶಿವಾಚಾರ್ಯನಿಗೆ, ಸಮುದ್ರದಿಂದ ಚಂದ್ರನು ಉದಯಿಸುವಂತೆ, "**ಶಿವಯೋಗಿಶಿವಾಚಾರ್ಯ**"ನೆಂಬ ಹೆಸರಿನ ಪುತ್ರನು ಉದಯಿಸಿದನು. ॥೧೮-೧೯-೨೦॥

ಶ್ರೀಶಿವಯೋಗಿಶಿವಾಚಾರ್ಯರ ವರ್ಣನೆ.

ಚಿದಾನಂದಸ್ವರೂಪನೂ ಪರಾಕಾಶಸ್ವರೂಪನೂ ಆದ ಪರಶಿವನ ಸ್ವರೂಪಾನುಭವದಿಂದ "**ಶಿವಯೋಗಿ**" ಎಂಬ ನಾಮವು ಯಾವ ಆಚಾರ್ಯನಲ್ಲಿ ಯಥಾರ್ಥವಾಗಿ ಅನ್ವಯಿಸುವುದೋ, ಶಿವಾಗಮಜ್ಞಾನದ ಪರಿಪಾಕದಿಂದ ಅತ್ಯಂತ ಸುಗಂಧಿತವಾದ ಯಾವ ಆಚಾರ್ಯನ ಕೀರ್ತಿಕುಸುಮವು ದಶದಿಕ್ಕುಗಳನ್ನು ಸುಗಂಧವಿಶಿಷ್ಟವನ್ನಾಗಿ ಮಾಡಿತೋ, ಬೌದ್ಧಾದಿಪ್ರತಿಕೂಲಸಿದ್ಧಾಂತಗಳೆಂಬ ಮಹಾಂಧಕಾರಕ್ಕೆ ಸೂರ್ಯನಂತಿರುವ ಯಾವ ಆಚಾರ್ಯನಿಂದ ಸನಾತನವಾದ ಶಿವಭಕ್ತಿಯು

ಸ ಮಹಾವೀರಶೈವಾನಾಂ ಧರ್ಮಮಾರ್ಗಪ್ರವರ್ತಕಃ ।
ಶಿವತತ್ತ್ವಪರಿಜ್ಞಾನಚಂದ್ರಿಕಾವೃತಚಂದ್ರಮಾಃ ॥೨೪॥

ಆಲೋಕ್ಯ ಶೈವತಂತ್ರಾಣಿ ಕಾಮಿಕಾದ್ಯಾನಿ ಸಾದರಂ ।
ವಾತುಲಾಂತಾನಿ ಶೈವಾನಿ ಪುರಾಣಾನ್ಯಖಿಲಾನಿ ತು ॥೨೫॥

ವೇದಮಾರ್ಗಾವಿರೋಧೇನ ವಿಶಿಷ್ಟಾಚಾರಸಿದ್ಧಯೇ ।
ಅಸನ್ಮಾರ್ಗನಿರಾಸಾಯ ಪ್ರಮೋದಾಯ ವಿವೇಕಿನಾಂ ॥೨೬॥

ಸರ್ವಸ್ವಂ ವೀರಶೈವಾನಾಂ ಸಕಲಾರ್ಥಪ್ರಕಾಶಕಂ ।
ಅಸ್ಪೃಷ್ಟಮಖಿಲೈರ್ದೋಷೈರಾದೃತಂ ಶುದ್ಧಮಾನಸೈಃ ॥೨೭॥

ಶೈವಾಗಮೇಷು ಸರ್ವೇಷು ಪುರಾಣೇಷ್ವಖಿಲೇಷು ಚ ।
ಪುರಾ ದೇವೇನ ಕಥಿತಂ ದೇವ್ಯೈ ತನ್ನಂದನಾಯ ಚ ॥೨೮॥

ತತ್ಸಂಪ್ರದಾಯಸಿದ್ಧೇನ ರೇಣುಕೇನ ಮಹಾತ್ಮನಾ ।
ಗಣೇಶ್ವರೇಣ ಕಥಿತಮಗಸ್ತ್ಯಾಯ ಪುನಃ ಕ್ಷಿತೌ ॥೨೯॥

ವೀರಶೈವಮಹಾತಂತ್ರಮೇಕೋತ್ತರಶತಸ್ಥಲಂ ।
ಅನುಗ್ರಹಾಯ ಲೋಕಾನಾಮಭ್ಯಧಾತ್ ಸುಧಿಯಾಂವರಃ ॥೩೦॥

ರಕ್ಷಿಸಲ್ಪಟ್ಟಿತೋ, ಶಿವತತ್ತ್ವಜ್ಞಾನವೆಂಬ ಚಂದ್ರಿಕೆಯಿಂದಾವೃತನಾದ ಚಂದ್ರನಂತಿರುವವನೂ, ವೀರಶೈವಧರ್ಮಮಾರ್ಗಪ್ರವರ್ತಕನೂ ಆದ ಆ ಶಿವಯೋಗಿ ಶಿವಾಚಾರ್ಯನು, ಕಾಮಿಕಾದಿವಾತುಲಾಂತವಾದ ಇಪ್ಪತ್ತೆಂಟು ಶಿವಾಗಮಗಳನ್ನೂ, ಸಮಸ್ತಪುರಾಣಗಳನ್ನೂ ಕೂಲಂಕಷವಾಗಿ ಪರಾಮರ್ಶಿಸಿ, ವೇದಮಾರ್ಗಕ್ಕೆ ಅನುಕೂಲವಾಗಿರುವ ಸಮಸ್ತಧರ್ಮಾಚಾರಗಳ ಸಿದ್ಧಿಗಾಗಿಯೂ, ಅಸತ್ಯಮಾರ್ಗಪ್ರವಿಷ್ಟ ಬೌದ್ಧಾದಿಸಿದ್ಧಾಂತಗಳ ನಿರಸನಕ್ಕಾಗಿಯೂ, ಜ್ಞಾನಿಗಳ ಮನಸ್ಸಂತೋಷಕ್ಕಾಗಿಯೂ, ಸಕಲನಿಗಮಾಗಮಾರ್ಥಪ್ರಕಾಶಕವಾದ, ನಿರ್ಮಲಹೃದಯರಾದ ಜ್ಞಾನಿಗಳಿಂದ ಅಂಗೀಕೃತವಾದ, ಸಮಸ್ತದೋಷಗಳಿಂದ ದೂರೀಕೃತವಾದ, ಸಮಸ್ತಪುರಾಣಾಗಮಾದಿಗಳಲ್ಲಿ ಶಿವನಿಂದ ಪಾರ್ವತಿಗೂ ಷಣ್ಮುಖನಿಗೂ ಉಪದಿಷ್ಟವಾದ, ಶಿವಸಂಪ್ರದಾಯಸ್ಥಾಪಕನೂ ಮಹಾತ್ಮನೂ ಆದ ಶ್ರೀರೇಣುಕಗಣಾಧೀಶ್ವರನು ಈ ಭೂಮಂಡಲದಲ್ಲಿ ದಿವ್ಯದೇಹಧಾರಿಯಾಗಿ ಅವತರಿಸಿ ಅಗಸ್ತ್ಯಮಹರ್ಷಿಗೆ ಉಪದೇಶಿಸಿದ, ನೂರೊಂದು ಸ್ಥಲಗಳಿಂದ ಕೂಡಿದ ವೀರಶೈವಮಹಾಶಾಸ್ತ್ರವನ್ನು ಲೋಕಾನುಗ್ರಹಕ್ಕಾಗಿ ಬೋಧಿಸಿದನು. ॥೨೧-೨೨-೨೩-೨೪-೨೫-೨೬-೨೭-೨೮-೨೯-೩೦॥

ಸರ್ವೇಷಾಂ ಶೈವತಂತ್ರಾಣಾಮುತ್ತರತ್ವಾನ್ನಿರುತ್ತರಂ ।
ನಾಮ್ನಾ ಪ್ರತೀಯತೇ ಲೋಕೇ ಯತ್ಸಿದ್ಧಾಂತಶಿಖಾಮಣಿಃ ॥೩೧॥

ಅನುಗತಸಕಲಾರ್ಥೇ ಶೈವತಂತ್ರೈಃ ಸಮಸ್ತೈಃ
ಪ್ರಕಟಿತಶಿವಬೋಧಾದ್ವೈತಭಾವಪ್ರಸಾದೇ ।
ವಿದಧತು ಮತಿಮಸ್ಮಿನ್ ವೀರಶೈವಾ ವಿಶಿಷ್ಟಾಃ
ಪಶುಪತಿಮತಸಾರೇ ಪಂಡಿತಶ್ಲಾಘನೀಯೇ ॥೩೨॥

ಇತಿ ಶ್ರೀಸಿದ್ಧಾಂತಶಿಖಾಮಣೌ ಶಿವಯೋಗಿಶಿವಾಚಾರ್ಯ
ವಂಶವರ್ಣನಂ ನಾಮ
ಪ್ರಥಮಪರಿಚ್ಛೇದಃ ಪರಿಸಮಾಪ್ತಃ

ಯಾವ ಈ ವೀರಶೈವಮಹಾತಂತ್ರವು ಸಮಸ್ತಶೈವತಂತ್ರಗಳಲ್ಲಿ ಶ್ರೇಷ್ಠವಾಗಿರುವುದರಿಂದ ಅತ್ಯಂತಶ್ರೇಷ್ಠವಾದುದಾಗಿ, ಲೋಕದಲ್ಲಿ "**ಸಿದ್ಧಾಂತಶಿಖಾಮಣಿ**" ಎಂಬ ಹೆಸರಿನಿಂದ ಪ್ರಖ್ಯಾತವಾಗಿರುವುದು. ॥೩೧॥ ಸಮಸ್ತಶಿವಾಗಮಗಳನ್ನನುಸರಿಸುತ್ತಿರುವ ರಹಸ್ಯಾರ್ಥವನ್ನು ಪ್ರತಿಪಾದಿಸತಕ್ಕುದೂ, ಶಿವಜ್ಞಾನದಿಂದುಂಟಾಗುವ ಶಿವಾದ್ವೈತಭಾವರೂಪಪ್ರಸಾದವನ್ನು ಪ್ರಕಟಿಸತಕ್ಕುದೂ, ಶಿವಮತದ ಸಾರವುಳ್ಳುದೂ, ಪಂಡಿತಮಂಡಲಿಯಿಂದ ಶ್ಲಾಘನೀಯವಾದುದೂ ಆಗಿರುವ ಈ ಸಿದ್ಧಾಂತಶಿಖಾಮಣಿಯಲ್ಲಿ ವೀರಶೈವೋತ್ತಮರು ಪೂಜ್ಯಬುದ್ಧಿಯನ್ನಿಡಬೇಕು. ॥೩೨॥

ಇಂತು ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಶಿವಯೋಗಿಶಿವಾಚಾರ್ಯ
ವಂಶವರ್ಣನಾತ್ಮಕವಾದ
ಒಂದನೆಯ ಪರಿಚ್ಛೇದವು ಪರಿಸಮಾಪ್ತವಾದುದು.

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ದ್ವಿತೀಯಪರಿಚ್ಛೇದಃ

ಸಚ್ಚಿದಾನಂದರೂಪಾಯ ಸದಸದ್ವ್ಯಕ್ತಿಹೇತವೇ ।
ನಮಃ ಶಿವಾಯ ಸಾಂಬಾಯ ಸಗಣಾಯ ಸ್ವಯಂಭುವೇ ॥೧॥

ಸದಾಶಿವಮುಖಾಶೇಷತತ್ತ್ವಮೌಕ್ತಿಕಶುಕ್ತಿಕಾಂ ।
ವಂದೇ ಮಾಹೇಶ್ವರೀಂ ಶಕ್ತಿಂ ಮಹಾಮಾಯಾದಿರೂಪಿಣೀಂ ॥೨॥

ಅಸ್ತಿ ಸಚ್ಚಿತ್ಸುಖಾಕಾರಮಲಕ್ಷಣಪದಾಸ್ಪದಂ ।
ನಿರ್ವಿಕಲ್ಪಂ ನಿರಾಕಾರಂ ನಿರಸ್ತಾಶೇಷವಿಪ್ಲವಂ ॥೩॥

ಪರಿಚ್ಛೇದಕಥಾಶೂನ್ಯಂ ಪ್ರಪಂಚಾತೀತವೈಭವಂ ।
ಪ್ರತ್ಯಕ್ಷಾದಿಪ್ರಮಾಣಾನಾಮಗೋಚರಪದೇ ಸ್ಥಿತಂ ॥೪॥

ಸ್ವಪ್ರಕಾಶಂ ಪರಾಕಾಶಮನೌಪಮ್ಯಮನಾಮಯಂ ।
ಸರ್ವಜ್ಞಂ ಸರ್ವಗಂ ಶಾಂತಂ ಸರ್ವಶಕ್ತಿ ನಿರಂಕುಶಂ ॥೫॥

ಎರಡನೆಯ ಪರಿಚ್ಛೇದವು.

ಜಗತ್ಸೃಷ್ಟಿವಿಚಾರ.

ವ್ಯಾಖ್ಯಾನ—ಸಚ್ಚಿದಾನಂದಸ್ವರೂಪನೂ, ಚೇತನಾಚೇತನಾತ್ಮಕಪ್ರಪಂಚ ನಿರ್ಮಾಣಕಾರಣೀಭೂತನೂ, ಪ್ರಮಥಗಣಸಹಿತನೂ, ಪಾರ್ವತೀಯುತನೂ, ಸ್ವಯಂಭುವೂ ಆಗಿರುವ ಪರಶಿವನಿಗೆ ನಮಸ್ಕಾರವು. ॥೧॥ ಶಿವಾದಿಭೂಮ್ಯಂತವಾದ ಮೂವತ್ತಾರುತತ್ತ್ವಗಳೆಂಬ ಮುತ್ತುಗಳಿಗೆ ಶುಕ್ತಿಕಾಸ್ವರೂಪಳೂ, ವಿಮರ್ಶಶಕ್ತಿ ರೂಪೋರ್ಧ್ವಮಾಯಾದಿಸ್ವರೂಪಳೂ ಆಗಿರುವ ಶಕ್ತಿಯನ್ನು ನಮಸ್ಕರಿಸುತ್ತೇನೆ. ॥೨॥ ಸಚ್ಚಿದಾನಂದಸ್ವರೂಪವೂ, ಮೋಕ್ಷಸ್ಥಾನಭೂತವೂ, ನಿರ್ವಿಕಲ್ಪವೂ, ನಿರಾಕಾರವೂ, (ಹೇಯಾಕಾರರಹಿತವೂ) ಸಮಸ್ತೋಪದ್ರವದೂರವೂ, ಪರಿಚ್ಛೇದವಾರ್ತಾ ಶೂನ್ಯವೂ, ಸೀಮಾತೀತವೈಭವಯುತವೂ, ಪ್ರತ್ಯಕ್ಷಾದಿಪ್ರಮಾಣಗಳಿಗೆ ಅಗೋಚರವೂ, ಸ್ವತಃಪ್ರಕಾಶಮಾನವೂ, ಪರಾಕಾಶಸ್ವರೂಪವೂ, ಉಪಮಾತೀತವೂ, ಜನನಮರಣಾದಿದೋಷರಹಿತವೂ, ಸರ್ವಜ್ಞವೂ, ಸಕಲಚರಾಚರಾತ್ಮಕಪ್ರಪಂಚ ವ್ಯಾಪಕವೂ, ಶಾಂತವೂ, ನಾನಾವಿಧಶಕ್ತಿಸಮನ್ವಿತವೂ, ಪ್ರತಿಬಂಧರಹಿತವೂ

ಶಿವರುದ್ರಮಹಾದೇವಭವಾದಿಪದಸಂಜ್ಞಿತಂ ।
ಅದ್ವಿತೀಯಮನಿರ್ದೇಶ್ಯಂ ಪರಂ ಬ್ರಹ್ಮ ಸನಾತನಂ ॥೬॥

ತತ್ರ ಲೀನಮಭೂತ್ ಪೂರ್ವಂ ಚೇತನಾಚೇತನಂ ಜಗತ್ ।
ಸ್ವಾತ್ಮಲೀನಂ ಜಗತ್ಕಾರ್ಯಂ ಸ್ವಪ್ರಕಾಶ್ಯಂ ತದದ್ಭುತಂ ॥೭॥

ಶಿವಾಭಿಧಂ ಪರಂ ಬ್ರಹ್ಮ ಜಗನ್ನಿರ್ಮಾತುಮಿಚ್ಛಯಾ ।
ಸ್ವರೂಪಮಾದಧೇ ಕಿಂಚಿತ್ ಸುಖಸ್ಫೂರ್ತಿವಿಜೃಂಭಿತಂ ॥೮॥

ನಿರಸ್ತದೋಷಸಂಬಂಧಂ ನಿರುಪಾಧಿಕಮವ್ಯಯಂ ।
ದಿವ್ಯಮಪ್ರಾಕೃತಂ ನಿತ್ಯಂ ನೀಲಕಂಠಂ ತ್ರಿಲೋಚನಂ ॥೯॥

ಚಂದ್ರಾರ್ಧಶೇಖರಂ ಶುದ್ಧಂ ಶುದ್ಧಸ್ಫಟಿಕಸನ್ನಿಭಂ ।
ಶುದ್ಧಮುಕ್ತಾಫಲಾಭಾಸಮುಪಾಸ್ಯಂ ಗುಣಮೂರ್ತಿಭಿಃ ॥೧೦॥

ವಿಶುದ್ಧಜ್ಞಾನಕರಣಂ ವಿಷಯಂ ಸರ್ವಯೋಗಿನಾಂ ।
ಕೋಟಿಸೂರ್ಯಪ್ರತೀಕಾಶಂ ಚಂದ್ರಕೋಟಿಸಮಪ್ರಭಂ ॥
ಅಪ್ರಾಕೃತಗುಣಾಧಾರಮನಂತಮಹಿಮಾಸ್ಪದಂ ॥೧೧॥

ಶಿವ-ರುದ್ರ-ಮಹಾದೇವ-ಭವಾದಿನಾಮಯುತವೂ, ಸನಾತನವೂ, ಅನಿರ್ದೇಶ್ಯವೂ, ಅದ್ವಿತೀಯವೂ ಆದ ಪರಬ್ರಹ್ಮವು ಪ್ರಕಾಶಿಸುತ್ತಿರುವುದು.॥೩-೪-೫-೬॥ ಆ ಪರಬ್ರಹ್ಮದಲ್ಲಿ ಸೃಷ್ಟಿಗಿಂತಲೂ ಮೊದಲು ಚೇತನಾಚೇತನಾತ್ಮಕವಾದ ಜಗತ್ತು ಉಭಯೇಂದ್ರಿಯಗಳಿಗೆ ಅಗೋಚರವಾಗಿ ಅಡಗಿಕೊಂಡಿದ್ದಿತು; ಈ ರೀತಿಯಾಗಿ ತನ್ನಲ್ಲಿಯೇ ಅಡಗಿಕೊಂಡುದುದಾಗಿಯೂ, ಅದ್ಭುತವಾದುದಾಗಿಯೂ, ಕಾರ್ಯರೂಪವಾದುದಾಗಿಯೂ ಇರುವ ಆ ಜಗತ್ತು, ತನ್ನಿಂದಲೇ ಪ್ರಕಾಶಪಡಿಸಲ್ಪಡಲು ಯೋಗ್ಯವಾಗುವುದು. ॥೭॥ ಶಿವನಾಮಕವಾದ ಆ ಪರಬ್ರಹ್ಮವು ಜಗತ್ತನ್ನು ನಿರ್ಮಾಣಮಾಡಬೇಕೆಂಬ ಇಚ್ಛೆಯಿಂದ, ಜನನಮರಣಾದಿಸಕಲದೋಷಶೂನ್ಯವೂ, ಉಪಾಧಿದೂರವೂ, ನಾಶರಹಿತವೂ, ದಿವ್ಯವೂ, ಅಪ್ರಾಕೃತವೂ, ನಿತ್ಯವೂ, ನೀಲಕಂಠಯುತವೂ, ತ್ರಿಲೋಚನಯುತವೂ, ಚಂದ್ರಧಾರಣಯುತವೂ, ಶುದ್ಧವೂ, ಶುದ್ಧಸ್ಫಟಿಕಸದೃಶವೂ, ಶುದ್ಧಮೌಕ್ತಿಕಸಮಾನಕಾಂತಿಯುತವೂ, ಬ್ರಹ್ಮಾದಿಗುಣಮೂರ್ತಿಗಳಿಂದ ಉಪಾಸ್ಯವೂ, ಶುದ್ಧಜ್ಞಾನಕಾರಣೀಭೂತವೂ, ಸಮಸ್ತಯೋಗಿಗಳಿಗೆ ವಿಷಯವೂ, ಕೋಟಿಸೂರ್ಯಸಮಾನಪ್ರಕಾಶಯುತವೂ, ಕೋಟಿಚಂದ್ರಸಮಾನಕಾಂತಿಮಯವೂ, ಅಪ್ರಾಕೃತ

ತದೀಯಾ ಪರಮಾಶಕ್ತಿಃ ಸಚ್ಚಿದಾನಂದಲಕ್ಷಣಾ ।
ಸಮಸ್ತಲೋಕನಿರ್ಮಾಣಸಮವಾಯಸ್ವರೂಪಿಣೀ ॥
ತದಿಚ್ಛಯಾಽಭವತ್ ಸಾಕ್ಷಾತ್ತತ್ಸ್ವರೂಪಾನುಕಾರಿಣೀ ॥೧೨॥

ಸ ಶಂಭುರ್ಭಗವಾನ್ ದೇವಃ ಸರ್ವಜ್ಞಃ ಸರ್ವಶಕ್ತಿಕಃ ।
ಜಗತ್ಸಿಸೃಕ್ಷುಃ ಪ್ರಥಮಂ ಬ್ರಹ್ಮಾಣಂ ಸರ್ವದೇಹಿನಾಂ ॥
ಕರ್ತಾರಂ ಸರ್ವಲೋಕಾನಾಂ ವಿದಧೇ ವಿಶ್ವನಾಯಕಃ ॥೧೪॥

ತಸ್ಮೈ ಪ್ರಥಮಪುತ್ರಾಯ ಶಂಕರಃ ಶಕ್ತಿಮಾನ್ ವಿಭುಃ ।
ಸರ್ವಜ್ಞಃ ಸಕಲಾ ವಿದ್ಯಾಃ ಸಾನುಗ್ರಹಮುಪಾದಿಶತ್ ॥೧೫॥

ಪ್ರಾಪ್ತವಿದ್ಯೋ ಮಹಾದೇವಾದ್ಬ್ರಹ್ಮಾ ವಿಶ್ವನಿಯಾಮಕಾತ್ ।
ಸಮಸ್ತಲೋಕನಿರ್ಮಾಣಸಮುದ್ಯೋಗಪರೋಽಭವತ್ ॥೧೬॥

ಕೃತೋದ್ಯೋಗೋಽಪಿ ನಿರ್ಮಾಣೇ ಜಗತಾಂ ಶಂಕರಾಜ್ಞಯಾ ।
ಅಜ್ಞಾತೋಪಾಯಸಂಪತ್ತಿರಭವನ್ಮಾಯಯಾ ವೃತಃ ॥೧೭॥

ಗುಣಾಧಾರವೂ, ಅನಂತಮಹಿಮಾಕರವೂ, ಆನಂದಸ್ಫೂರ್ತಿಯುತವೂ ಆದ ಒಂದಾನೊಂದು ಸ್ವರೂಪವನ್ನು ಧರಿಸಿತು. ॥೮-೯-೧೦-೧೧॥ ಸಮಸ್ತಲೋಕಗಳ ನಿರ್ಮಾಣದಲ್ಲಿ ಸಮವಾಯಸ್ವರೂಪದಿಂದಿರುವ ಪರಶಿವಸಂಬಂಧಿನಿಯಾದ ವಿಮರ್ಶಶಕ್ತಿಯು ಪರಶಿವನ ಇಚ್ಛಾನುಸಾರವಾಗಿ, ಸಾಕ್ಷಾತ್ ಅವನ ಸ್ವರೂಪವನ್ನೇ ಅನುಕರಿಸುವಂಥದಾಯಿತು. ॥೧೨॥ ಭಗವಂತನೂ, ಸರ್ವಶಕ್ತಿಸಮನ್ವಿತನೂ, ಜಗನ್ನಾಯಕನೂ, ಸರ್ವಜ್ಞನೂ ಆದ ಆ ಪರಶಿವನು ಜಗತ್ತನ್ನು ನಿರ್ಮಿಸಲಿಚ್ಛೆಯುಳ್ಳವನಾಗಿ, “ ವಿಶ್ವಾಧಿಕೋ ರುದ್ರೋ ಮಹರ್ಷಿಃ, ಹಿರಣ್ಯಗರ್ಭಂ ಜನಯಾಮಾಸ ಪೂರ್ವಂ ” ಎಂಬ ಶ್ರುತಿವಾಕ್ಯಪ್ರಮಾಣಾನುಸಾರವಾಗಿ, ಆದಿಯಲ್ಲಿ ಚತುರ್ದಶಲೋಕಗಳನ್ನೂ ಹಾಗೂ ಆ ಲೋಕಗಳಲ್ಲಿರುವ ಸಮಸ್ತಪ್ರಾಣಿಗಳನ್ನೂ ನಿರ್ಮಿಸುವ ಚತುರ್ಮುಖಬ್ರಹ್ಮನನ್ನು ಸೃಷ್ಟಿಸಿದನು. ॥೧೪॥ ಸರ್ವಶಕ್ತಿಸಮನ್ವಿತನೂ, ವ್ಯಾಪಕನೂ, ಸರ್ವಜ್ಞನೂ ಆದ ಶಿವನು ತನ್ನ ಪ್ರಥಮಪುತ್ರನಾದ ಬ್ರಹ್ಮನಿಗೆ ಅನುಗ್ರಹಪೂರ್ವಕವಾಗಿ ಸಮಸ್ತವಿದ್ಯೆಗಳನ್ನೂ ಉಪದೇಶಿಸಿದನು. ॥೧೫॥ ವಿಶ್ವನಿಯಾಮಕನಾದ ಮಹಾದೇವನಿಂದ ಬ್ರಹ್ಮನು ಸೃಷ್ಟಿರಚನಾದಿವಿದ್ಯೆಯನ್ನು ಪಡೆದುಕೊಂಡು, ಸಮಸ್ತಲೋಕನಿರ್ಮಾಣೋದ್ಯೋಗದಲ್ಲಿ ನಿರತನಾದನು. ॥೧೬॥ ಶಂಕರನ ಆಜ್ಞೆಗನುಸಾರವಾಗಿ ಬ್ರಹ್ಮನು ಜಗನ್ನಿರ್ಮಾಣದಲ್ಲಿ ಉದ್ಯುಕ್ತನಾದರೂ, ಮಾಯಾಪರಿವೃತನಾದುದರಿಂದ ನಿರ್ಮಾ

ವಿಧಾತುಮಖಿಲಾನ್ ಲೋಕಾನುಪಾಯಂ ಪ್ರಾಪ್ತುಮಿಚ್ಛಯಾ ।
ಪುನಸ್ತಂ ಪ್ರಾರ್ಥಯಾಮಾಸ ದೇವದೇವಂ ತ್ರಿಲೋಚನಂ ॥೧೮॥

ನಮಸ್ತೇ ದೇವದೇವೇಶ ನಮಸ್ತೇ ಕರುಣಾಕರ ।
ಅಸ್ಮದಾದಿಜಗಜ್ಜಾಲನಿರ್ಮಾಣವಿಧಿಷು ಕ್ಷಮ ॥೧೯॥

ಉಪಾಯಂ ವದ ಮೇ ಶಂಭೋ ಜಗತ್ಸೃಷ್ಟೌ ಜಗತ್ಪತೇ ।
ಸರ್ವಜ್ಞಃ ಸರ್ವಶಕ್ತಿಸ್ತ್ವಂ ಸರ್ವಕರ್ತಾ ಸನಾತನಃ ॥೨೦॥

ಇತಿ ಸಂಪ್ರಾರ್ಥಿತಃ ಶಂಭುರ್ಬ್ರಹ್ಮಣಾ ವಿಶ್ವನಾಯಕಃ ।
ಉಪಾಯಮವದತ್ತಸ್ಮೈ ಲೋಕಸೃಷ್ಟಿಪ್ರವರ್ತಕಂ ॥೨೧॥

ಉಪಾಯಮೀಶ್ವರೇಣೋಕ್ತಂ ಲಬ್ಧ್ವಾಽಪಿ ಚತುರಾನನಃ ।
ನ ಸಮರ್ಥೋಽಭವತ್ಕರ್ತುಂ ನಾನಾರೂಪಮಿದಂ ಜಗತ್ ॥೨೨॥

ಪುನಸ್ತಂ ಪ್ರಾರ್ಥಯಾಮಾಸ ಬ್ರಹ್ಮಾ ವಿಹ್ವಲಮಾನಸಃ ।
ದೇವದೇವ ಮಹಾದೇವ ಜಗತ್ಪ್ರಥಮಕಾರಣ ॥೨೩॥

ನಮಸ್ತೇ ಸಚ್ಚಿದಾನಂದ ಸ್ವೇಚ್ಛಾವಿಗ್ರಹರಾಜಿತ ।
ಭವ ಶರ್ವ ಮಹೇಶಾನ ಸರ್ವಕಾರಣಕಾರಣ ॥೨೪॥

ಣೋಪಾಯವನ್ನು ತಿಳಿಯದವನಾದನು. ॥೧೭॥ ಆಗ ಬ್ರಹ್ಮನು ಲೋಕನಿರ್ಮಾಣೋಪಾಯವನ್ನು ತಿಳಿದುಕೊಳ್ಳುವ ಇಚ್ಛೆಯಿಂದ, ಪುನಃ ಶ್ರೀಶಂಕರನನ್ನು ಪ್ರಾರ್ಥಿಸಿದನು. ॥೧೮॥ ದೇವಾಧಿದೇವನೇ! ಕರುಣಾಸಮುದ್ರನೇ! ನನ್ನನ್ನು ಮೊದಲ್ಗೊಂಡು ಸಮಸ್ತಜಗತ್ತುಗಳ ನಿರ್ಮಾಣವಿಧಿಯಲ್ಲಿ ಸಮರ್ಥನೇ! ಜಗತ್ಪತಿಯೇ! ಶಂಭುವೇ! ನೀನು ಸರ್ವಜ್ಞನೂ, ಸರ್ವಶಕ್ತಿಸಮನ್ವಿತನೂ, ಸರ್ವಕರ್ತನೂ, ಸನಾತನನೂ ಆಗಿರುವುದರಿಂದ ನನಗೆ ಜಗನ್ನಿರ್ಮಾಣೋಪಾಯವನ್ನು ಬೋಧಿಸು; ಎಂದು ಬ್ರಹ್ಮನು ಶಿವನನ್ನು ನಾನಾರೀತಿಯಿಂದ ಸ್ತುತಿಸಲು, ಆಗ ಶಿವನು ಬ್ರಹ್ಮನಿಗೆ ಲೋಕನಿರ್ಮಾಣೋಪಾಯವನ್ನು ತಿಳುಹಿಸಿದನು. ॥೧೯-೨೦-೨೧॥ ಬ್ರಹ್ಮನು ಶಿವನು ಬೋಧಿಸಿದ ಉಪಾಯವನ್ನು ತಿಳಿದವನಾದರೂ, ನಾನಾರೂಪವಾದ ಜಗತ್ತನ್ನು ನಿರ್ಮಿಸಲು ಅಸಮರ್ಥನಾದನು. ॥೨೨॥ ಆಗ ಬ್ರಹ್ಮನು ವ್ಯಾಕುಲಮನಸ್ಸುಳ್ಳವನಾಗಿ ಪುನಃ ಶಿವನನ್ನು ಪ್ರಾರ್ಥಿಸಿದನು. ದೇವದೇವನೇ! ಮಹಾದೇವನೇ! ಜಗದಾದಿಕಾರಣನೇ! ಸಚ್ಚಿದಾನಂದಸ್ವರೂಪನೇ! ಸ್ವೇಚ್ಛಾವಿಗ್ರಹಧಾರಿಯೇ! ಭವನೇ! ಶರ್ವನೇ! ಮಹೇಶ್ವರನೇ! ಸರ್ವಕಾರಣಕಾರಣನೇ!

ಭವದುಕ್ತೋಽಪ್ಯುಪಾಯೋ ಮೇ ನ ಕಿಂಚಿದ್ಜ್ಞಾಯತೇಽಧುನಾ ।
ಸೃಷ್ಟಿಂ ವಿಧೇಹಿ ಭಗವನ್ ಪ್ರಥಮಂ ಪರಮೇಶ್ವರ ॥
ಜ್ಞಾತೋಪಾಯಸ್ತತಃ ಕುರ್ಯಾಂ ಜಗತ್ಸೃಷ್ಟಿಮುಮಾಪತೇ ॥೨೫॥
ಇತ್ಯೇವಂ ಪ್ರಾರ್ಥಿತಃ ಶಂಭುರ್ಬ್ರಹ್ಮಣಾ ವಿಶ್ವಯೋನಿನಾ ।
ಸಸರ್ಜಾತ್ಮಸಮಪ್ರಖ್ಯಾನ್ ಸರ್ವಜ್ಞಾನ್ ಸರ್ವಶಕ್ತಿಕಾನ್ ॥೨೬॥
ಪ್ರಬೋಧಪರಮಾನಂದಪರಿವಾಹಿತಮಾನಸಾನ್ ।
ಪ್ರಮಥಾನ್ ವಿಶ್ವನಿರ್ಮಾಣಪ್ರಲಯಾದಿವಿಧಿಕ್ಷಮಾನ್ ॥೨೭॥
ಸೃಷ್ಟಪ್ರಮಥವರ್ಗೇಷು ವರ್ಣಾಶ್ರಮಪರಿಕ್ರಮಾನ್ ।
ಅಪ್ರಾಕೃತಸದಾಚಾರಾನುಪಾದಿಶದಥ ಪ್ರಭುಃ ॥೨೮॥

ಇತಿ ಶ್ರೀಸಿದ್ಧಾಂತಶಿಖಾಮಣೌ ಜಗತ್ಸೃಷ್ಟಿವಿಚಾರೋ ನಾಮ
ದ್ವಿತೀಯಪರಿಚ್ಛೇದಃ ಪರಿಸಮಾಪ್ತಃ.

ನೀನು ಉಪಾಯವನ್ನು ಹೇಳಿದರೂ ನನಗೆ ಚನ್ನಾಗಿ ತಿಳಿಯಲೊಲ್ಲದು ; ಆದುದರಿಂದ ಪರಮೇಶ್ವರನೇ ! ನೀನು ಮೊದಲು ಸೃಷ್ಟಿಯನ್ನು ಮಾಡು; ಆ ಉಪಾಯವನ್ನು ತಿಳಿದುಕೊಂಡು ಆ ಮೇಲೆ ನಾನು ಜಗತ್ಸೃಷ್ಟಿಯನ್ನು ಮಾಡುವೆನು ಎಂದು ಪ್ರಾರ್ಥಿಸಲು, ಆಗ ಶಂಕರನು ತನಗೆ ಸಮಾನವಾದ ಪ್ರತಿಭೆಯುಳ್ಳವರೂ, ಸರ್ವಜ್ಞರೂ, ಸರ್ವಶಕ್ತಿಸಮನ್ವಿತರೂ, ಜ್ಞಾನಾನಂದಮಯಮನಸ್ಕರೂ, ಜಗನ್ನಿರ್ಮಾಣಲಯಾದಿಕಾರ್ಯವಿಧಾನದಲ್ಲಿ ಸಮರ್ಥರೂ ಆದ ಶ್ರೀರೇಣುಕದಾರುಕಾದ್ಯನಂತಜನಪ್ರಮಥರನ್ನು ನಿರ್ಮಿಸಿದನು. ॥೨೩-೨೪-೨೫-೨೬-೨೭॥ ಶಿವನು ತನ್ನಿಂದ ಸೃಷ್ಟಿಸಲ್ಪಟ್ಟ ಪ್ರಮಥಸಮೂಹಕ್ಕೆ ಶಿವವರ್ಣಾಶ್ರಮಧರ್ಮಗಳ ಕ್ರಮವನ್ನೂ, ಅಪ್ರಾಕೃತಸದಾಚಾರಗಳನ್ನೂ ಉಪದೇಶಿಸಿದನು. ಬ್ರಹ್ಮನು ಶಿವನಿಂದ ಮಾಡಲ್ಪಟ್ಟ ಸೃಷ್ಟಿಯ ಉಪಾಯವನ್ನು ತಿಳಿದುಕೊಂಡು ಆ ಮೇಲೆ ಸೃಷ್ಟಿಯನ್ನು ಮಾಡಿದನೆಂದು ಭಾವವು. ॥೨೮॥

ಇಂತು ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ಜಗತ್ಸೃಷ್ಟಿವಿಚಾರಾತ್ಮಕವಾದ
ಎರಡನೆಯ ಪರಿಚ್ಛೇದವು ಪರಿಸಮಾಪ್ತವಾದುದು.

ಶ್ರೀಜಗದ್ಗುರುರೇಣುಕಾಚಾರ್ಯಃ ಪ್ರಸೀದತು.

ತೃತೀಯಪರಿಚ್ಛೇದಃ

ಕದಾಚಿದಥ ಕೈಲಾಸೇ ಕಲಧೌತಶಿಲಾಮಯೇ ।
ಗಂಧರ್ವವಾಮನಯನಾಕ್ರೀಡಾಮೌಕ್ತಿಕದರ್ಪಣೇ ॥೧॥
ಮಂದಾರಬಕುಲಾಶೋಕಮಾಕಂದಪ್ರಾಯಭೂರುಹೇ ।
ಮಲ್ಲೀಮರಂದನಿಷ್ಯಂದಪಾನಪೀನಮಧುವ್ರತೇ ॥೨॥
ಕುಂಕುಮಸ್ತಬಕಾಮೋದಕೂಲಂಕಷಹರಿನ್ಮುಖೇ ।
ಕಲಕಂಠಕುಲಾಲಾಪಕಂದಲದ್ರಾಗಬಂಧುರೇ ॥೩॥
ಕಿನ್ನರೀಗೀತಮಾಧುರ್ಯಪರಿವಾಹಿತಗಹ್ವರೇ ।
ಸಾನಂದವರಯೋಗೀಂದ್ರಬೃಂದಾಲಂಕೃತಕಂದರೇ ॥೪॥

ಮೂರನೆಯ ಪರಿಚ್ಛೇದವು

ಶ್ರೀರೇಣುಕದಾರುಕಾದಿಪ್ರಮಥಸಮೂಹವು ಅವತರಿಸಿದ ಮೇಲೆ ಶಿವನ ವಾಸಸ್ಥಾನವಾದ ಕೈಲಾಸಪರ್ವತದ ವರ್ಣನೆಯೂ, ಶಿವಶಕ್ತಿಯರ ವರ್ಣನೆಯೂ ವಿಶದವಾಗಿ ಮಾಡಲ್ಪಟ್ಟಿದೆ

ಕೈಲಾಸಪರ್ವತದ ವರ್ಣನೆ.

ವ್ಯಾಖ್ಯಾನ—ರಜತಮಯಶಿಲಾವಿಶಿಷ್ಟವಾದುದೂ, ಗಂಧರ್ವಸ್ತ್ರೀಯರ ಕ್ರೀಡೆಗೆ ಮುತ್ತಿನಕನ್ನಡಿಯಂತಿರುವುದೂ ॥೧॥ ಮಂದಾರ - ಬಕುಲ - ಅಶೋಕ - ಮಾವು ಮೊದಲಾದ ವೃಕ್ಷವಿಶೇಷಗಳಿಂದ ನಿಬಿಡವಾದುದೂ, ಮಲ್ಲಿಕಾಕುಸುಮಗಳಿಂದ ಹೊರಡುತ್ತಿರುವ ಮಕರಂದದ ಪಾನದಿಂದ ಪರಿಪುಷ್ಟಗಳಾದ ಭೃಂಗಗಳುಳ್ಳುದೂ ॥೨॥ ಕೆಂಪುಹೂವುಗಳ ಗುಚ್ಛದ ಸುವಾಸನೆಯಿಂದ ತುಂಬಿದ ಸಮಸ್ತದಿಕ್ಪ್ರದೇಶವುಳ್ಳುದೂ, ಕೋಗಿಲೆಗಳ ಸಮೂಹದ ಮಧುರಧ್ವನಿಯಿಂದುತ್ಪನ್ನವಾದ ಪಂಚಮಸ್ವರದಿಂದ ಮನೋಹರವಾದುದೂ ॥೩॥ ಕಿನ್ನರಸ್ತ್ರೀಯರ ಗಾನದ ಮಾಧುರ್ಯದಿಂದ ವ್ಯಾಪ್ತವಾದ ಗಹ್ವರ (ಗವಿ) ಗಳುಳ್ಳುದೂ, ಸಾನಂದಾದಿಯೋಗೀಂದ್ರರ ಸಮುದಾಯದಿಂದ ಅಲಂಕೃತವಾದ ಗುಹೆಗಳುಳ್ಳುದೂ ॥೪॥ ಸುವರ್ಣಕಮಲಗಳ

ಹೇಮಾರವಿಂದಕಲಿಕಾಸುಗಂಧಿರಸಮಾನಸೇ ।
ಶಾತಕುಂಭಮಯೋತ್ತುಂಗಶತಸ್ತಂಭವಿರಾಜಿತೇ ॥೫॥
ಮಾಣಿಕ್ಯದೀಪಕಲಿಕಾಮರೀಚಿದ್ಯೋತಿತಾಂತರೇ ।
ದ್ವಾರತೋರಣಸಂರೂಢಶಂಖಪದ್ಮನಿಧಿದ್ವಯೇ ॥೬॥
ಮುಕ್ತಾತಾರಕಿತೋದಾರವಿತಾನಾಂಬರಮಂಡಿತೇ ।
ಸ್ಪರ್ಶಲಕ್ಷಿತವೈಡೂರ್ಯಮಯಭಿತ್ತಿಪರಂಪರೇ ॥೭॥
ಸಂಚರತ್ಪ್ರಮಥಶ್ರೇಣೀಪದವಾಚಾಲನೂಪುರೇ ।
ಪ್ರವಾಲವಲಭೀಶೃಂಗಶೃಂಗಾರಮಣಿಮಂಟಪೇ ॥೮॥
ವಂದಾರುದೇವಮುಕುಟಮಂದಾರರಸವಾಸಿತಂ ।
ರತ್ನಸಿಂಹಾಸನಂ ದಿವ್ಯಮಧ್ಯಸ್ತಂ ಪರಮೇಶ್ವರಂ ॥೯॥
ತಮಾಸ್ಥಾನಗತಂ ದೇವಂ ಸರ್ವಲೋಕಮಹೇಶ್ವರಂ ।
ತ್ರ್ಯಂಬಕಮುಲಾರಣ್ಯವಿಹಾರಕಲಹಂಸಕಂ ॥೧೦॥

ಸುಗಂಧರಸದಿಂದ ತುಂಬಿದ ಮಾನಸಸರೋವರವುಳ್ಳುದೂ, ದೊಡ್ಡ ದೊಡ್ಡ ನೂರಾರು ಸುವರ್ಣಸ್ತಂಭಗಳಿಂದ ವಿರಾಜಿಸುತ್ತಿರುವುದೂ ॥೫॥ ರತ್ನದೀಪಶಿಖೆಯಿಂದ ಹೊರ ಹೊರಟ ಕಿರಣಗಳಿಂದ ಪ್ರಕಾಶಮಾನವಾದ ಅಂತಃಪುರವುಳ್ಳುದೂ, ಮಹಾದ್ವಾರ ಸ್ತಂಭಗಳ ಉಭಯಪ್ರದೇಶದಲ್ಲಿ ಶಂಖಪದ್ಮಗಳೆಂಬ ನಿಧಿಗಳಿಂದ ಯುಕ್ತವಾದುದೂ ॥೬॥ ನಕ್ಷತ್ರದಂತಿರುವ ಮುತ್ತುಗಳಿಂದ ವಿರಚಿತವಾದ ವಿಶಾಲವಿತಾನಾಂಬರ (ಛತ್ತು) (ಮೇಲ್ಕಟ್ಟಿನ ವಸ್ತ್ರ) ದಿಂದ ಅಲಂಕೃತವಾದುದೂ, ಸ್ಪರ್ಶದಿಂದಲೇ ಕಂಡುಹಿಡಿಯ ಬೇಕಾದ ವೈಡೂರ್ಯಮಣಿಮಯವಾದ ಗೋಡೆಗಳ ಸಾಲುಗಳಿಂದ ಕೂಡಿದುದೂ ॥೭॥ ಅಲ್ಲಲ್ಲಿ ಸಂಚರಿಸುತ್ತಿರುವ ಪ್ರಮಥಸಮುದಾಯದ ಚರಣಗಳಲ್ಲಿರುವ ಗೆಜ್ಜೆಯಸರ ಗಳಿಂದ ಶಬ್ದಾಯಮಾನವಾದುದೂ, ಹವಳಗಳಿಂದ ವಿರಚಿತವಾದ ಪ್ರಾಕಾರಶೃಂಗ ಗಳಿಂದ ಕೂಡಿದ ಕ್ರೀಡಾಮಂಟಪವುಳ್ಳುದೂ ಆದ ಕೈಲಾಸಪರ್ವತವು ಶೋಭಿಸು ತ್ತಿರುವುದು. ॥೮॥

ಶಿವವರ್ಣನೆ.

ಇಂತಹ ಮನೋಹರವಾದ ಕೈಲಾಸಪರ್ವತದಲ್ಲಿ ನಮಸ್ಕರಿಸುತ್ತಿರುವ ಸಮಸ್ತದೇವತೆಗಳ ಕಿರೀಟದಲ್ಲಿ ವಿರಾಜಿತಗಳಾದ ಪಾರಿಜಾತಪುಷ್ಪಗಳ ರಸದಿಂದ ಸುವಾಸಿತವಾದ ದಿವ್ಯರತ್ನಸಿಂಹಾಸನವನ್ನಲಂಕರಿಸಿರುವವನೂ, ದೇವಾಧಿದೇವನೂ,

ಉದಾರಗುಣಮೋಂಕಾರಶುಕ್ತಿಕಾಪುಟಮೌಕ್ತಿಕಂ ।
ಸರ್ವಮಂಗಲಸೌಭಾಗ್ಯಸಮುದಾಯನಿಕೇತನಂ ||೧೧||

ಸಂಸಾರವಿಷಮೂರ್ಛಾರ್ತಜೀವಸಂಜೀವನೌಷಧಂ ।
ನಿತ್ಯಪ್ರಕಾಶನೈರ್ಮಲ್ಯಂ ಕೈವಲ್ಯಸುರಪಾದಪಂ ||೧೨||

ಅನಂತಪರಮಾನಂದಮಕರಂದಮಧುವ್ರತಂ ।
ಆತ್ಮಶಕ್ತಿಲತಾಪುಷ್ಯತ್ತ್ರಿಲೋಕೀಪುಷ್ಪಕೋರಕಂ ||೧೩||

ಬ್ರಹ್ಮಾಂಡಕುಂಡಿಕಾಷಂಡಪಿಂಡೀಕರಣಪಂಡಿತಂ ।
ಸಮಸ್ತದೇವತಾಚಕ್ರಚಕ್ರವರ್ತಿಪದೇ ಸ್ಥಿತಂ ||೧೪||

ಚಂದ್ರಬಿಂಬಾಯುತಚ್ಛಾಯಾದಾಯಾದದ್ಯುತಿವಿಗ್ರಹಂ ।
ಮಾಣಿಕ್ಯಮುಕುಟಜ್ಯೋತಿರ್ಮಂಜರೀಪಿಂಜರಾಂಬರಂ ||೧೫||

ಚೂಡಾಲಂ ಸೋಮಕಲಯಾ ಸುಕುಮಾರಬಿಸಾಭಯಾ ।
ಕಲ್ಯಾಣಪುಷ್ಪಕಲಿಕಾಕರ್ಣಪೂರಮನೋಹರಂ ||೧೬||

ಸರ್ವಲೋಕಾಧಿಪತಿಯೂ, ವೇದಾಂತರೂಪವಾದ ಕಮಲವನದ ವಿಹಾರದಲ್ಲಿ ರಾಜಹಂಸಸ್ವರೂಪನೂ ||೧೦|| ಉದಾರಗುಣಯುತನೂ, ಓಂಕಾರವೆಂಬ ಶುಕ್ತಿಕಾ ಪುಟಕ್ಕೆ ಮುಕ್ತಾ (ಮುತ್ತು) ಸ್ವರೂಪನೂ, ಸರ್ವಮಂಗಲಗಳಿಗೂ ಸಮಸ್ತ ಸೌಭಾಗ್ಯಗಳಿಗೂ ಮಂದಿರಸ್ವರೂಪನೂ ||೧೧|| ಸಂಸಾರರೂಪವಿಷದಿಂದ ಮೂರ್ಛಿತವಾದ ಜೀವಕೋಟಿಗೆ ಸಂಜೀವನೌಷಧಸ್ವರೂಪನೂ, ಸ್ವಪ್ರಕಾಶದಿಂದ ನಿರ್ಮಲನೂ, ಮೋಕ್ಷಕಲ್ಪವೃಕ್ಷನೂ ||೧೨|| ಅಪಾರವಾದ ಪರಮಾನಂದವೆಂಬ ಮಕರಂದವನ್ನು ಪಾನಮಾಡುವುದರಲ್ಲಿ ಭೃಂಗಸ್ವರೂಪನೂ, ತನ್ನಲ್ಲಿ ನಿತ್ಯಸಂಬಂಧದಿಂದಿರುವ ಶಕ್ತಿರೂಪಲತೆಯಿಂದ ತ್ರಿಲೋಕಗಳೆಂಬ ಪುಷ್ಪಕೋರಕ (ಮೊಗ್ಗೆ) ಗಳನ್ನು ರಕ್ಷಿಸುವವನೂ ||೧೩|| ಅನಂತಬ್ರಹ್ಮಾಂಡಗಳೆಂಬ ಪಾತ್ರೆಗಳ ಸಮೂಹವನ್ನು ಒಂದುಗೂಡಿಸುವುದರಲ್ಲಿ ಕುಶಲನೂ, ಸಮಸ್ತದೇವತಾಸಮೂಹಕ್ಕೆ ಸಾರ್ವಭೌಮನಾಗಿರುವವನೂ ||೧೪|| ಹತ್ತುಸಾವಿರಚಂದ್ರರ ಬಿಂಬಚ್ಛಾಯೆಗೆ ಸಮಾನವಾದ ತೇಜೋಮಯಶರೀರವುಳ್ಳವನೂ, ಸಮಸ್ತದೇವತೆಗಳ ರತ್ನಮಯಕಿರೀಟದಿಂದ ಹೊರಹೊರಟ ಕಿರಣಗಳಿಂದ ವಿಚಿತ್ರಿತವಾದ ವಸ್ತ್ರವುಳ್ಳವನೂ ||೧೫|| ಕೋಮಲವಾದ ಕಮಲತಂತುವಿನಂತೆ ಪ್ರಕಾಶಿಸುತ್ತಿರುವ ಚಂದ್ರಕಲೆಯೇ ಶಿರೋಭೂಷಣವಾಗುಳ್ಳವನೂ, ಮಂಗಲರೂಪಕುಸುಮಕೋರಕ (ಹೂವಿನಮೊಗ್ಗೆ) ವೆಂಬ ಕರ್ಣಾಭರಣದಿಂದ

ಮುಕ್ತಾವಲಯಸಂಬದ್ಧರುಂಡಮಾಲಾವಿರಾಜಿತಂ ।
ಪರ್ಯಾಪ್ತಚಂದ್ರಸೌಂದರ್ಯಪರಿಪಂಥಿಮುಖಶ್ರಿಯಂ ॥೧೭॥

ಪ್ರಾತಃಸಂಫುಲ್ಲಕಮಲಪ್ರತೀಕಾಶತ್ರಿಲೋಚನಂ ।
ಮಂದಸ್ಮಿತಮಿತಾಲಾಪಮಧುರಾಧರಪಲ್ಲವಂ ॥೧೮॥

ಗಂಡಮಂಡಲಪರ್ಯಂತಕ್ರೀಡನ್ಮಕರಕುಂಡಲಂ ।
ಕಾಲಿಮ್ನಾ ಕಾಲಕೂಟಸ್ಯ ಕಂಠನಾಲೇ ಕಲಂಕಿತಂ ॥೧೯॥

ಮಣಿಕಂಕಣಕೇಯೂರಮರೀಚಿಕರಪಲ್ಲವೈಃ ।
ಚತುರ್ಭಿಃ ಸಂವಿರಾಜಂತಂ ಬಾಹುಮಂದಾರಶಾಖಿಭಿಃ ॥೨೦॥

ಗೌರೀಪಯೋಧರಾಶ್ಲೇಷಕೃತಾರ್ಥಭುಜಮಧ್ಯಮಂ ।
ಸುವರ್ಣಬ್ರಹ್ಮಸೂತ್ರಾಂಕಂ ಸೂಕ್ಷ್ಮಕೌಶೇಯವಾಸಸಂ ॥೨೧॥

ನಾಭಿಸ್ಥಾನಾವಲಂಬಿನ್ಯಾ ನವಮೌಕ್ತಿಕಮಾಲಯಾ ।
ಗಂಗಯೇವ ಕೃತಾಶ್ಲೇಷಂ ಮೌಲಿಭಾಗಾವತೀರ್ಣಯಾ ॥೨೨॥

ಮನೋಹರನಾದವನೂ ॥೧೬॥ ಮುತ್ತಿನ ಸರಗಳಿಂದ ಯುಕ್ತವಾದ ರುಂಡಮಾಲೆಯಿಂದ ವಿರಾಜಿಸುವವನೂ, ಪೂರ್ಣಚಂದ್ರನ ಸೌಂದರ್ಯವನ್ನು ತಿರಸ್ಕರಿಸುತ್ತಿರುವ ಮುಖಕಾಂತಿಯುಳ್ಳವನೂ ॥೧೭॥ ಪ್ರಾತಃಕಾಲದಲ್ಲಿ ಅರಳಿದ ಕಮಲಗಳಿಗೆ ಸಮಾನವಾದ ಮೂರು ನೇತ್ರಗಳುಳ್ಳವನೂ, ಮುಗುಳ್ನಗೆಯಿಂದಲೂ ಮಿತಭಾಷಣದಿಂದಲೂ ಯುಕ್ತವಾದ ಸುಂದರಾಧರವುಳ್ಳವನೂ ॥೧೮॥ ಗಲ್ಲದವರೆಗೆ ಜೋಲಾಡುತ್ತಿರುವ ಮಿಾನಾಕಾರದಂತಿರುವ ಕರ್ಣಕುಂಡಲಗಳುಳ್ಳವನೂ, ಕಾಲಕೂಟವಿಷದ ಕಪ್ಪು ಬಣ್ಣದಿಂದ ಕಲಂಕಿತವಾದ ಕಂಠವುಳ್ಳವನೂ ॥೧೯॥ ರತ್ನಕಂಕಣ ಮತ್ತು ರತ್ನಮಯಭುಜಕಿರೀಟಗಳ ಕಾಂತಿಯಿಂದ ಕೂಡಿದ ಕರಪಲ್ಲವಗಳುಳ್ಳ ಮಂದಾರವೃಕ್ಷಶಾಖೆಗಳಿಗೆ ಸಮಾನವಾದ ನಾಲ್ಕು ಹಸ್ತಗಳಿಂದ ಪರಿಶೋಭಿಸುತ್ತಿರುವವನೂ ॥೨೦॥ ಪಾರ್ವತೀದೇವಿಯ ಕುಚಾಲಿಂಗನದಿಂದ ಕೃತಾರ್ಥವಾದ ಭುಜಗಳುಳ್ಳವನೂ, ಸುವರ್ಣಮಯಯಜ್ಞೋಪವೀತದಿಂದ ಯುಕ್ತನಾದವನೂ, ಅತ್ಯಂತಸೂಕ್ಷ್ಮವಾದ ರೇಷ್ಮೆಯ ವಸ್ತ್ರವನ್ನು ಧರಿಸಿರುವವನೂ ॥೨೧॥ ನಾಭಿಸ್ಥಾನದವರೆಗೆ ಜೋಲಾಡುತ್ತಿರುವುದರಿಂದ ಮಸ್ತಕಪ್ರದೇಶದಿಂದ ಕೆಳಕ್ಕೆ ಇಳಿದುಬಂದಿರುವ ಗಂಗೆಯೋ ಎಂಬಂತೆ ತೋರುತ್ತಿರುವ ನೂತನವಾದ ಮುತ್ತಿನಸರದಿಂದ ಆಲಿಂಗಿತನಾಗಿರುವವನೂ ॥೨೨॥

ಪದೇನ ಮಣಿಮಂಜೀರಪ್ರಭಾಪಲ್ಲವಿತಶ್ರಿಯಾ ।
ಚಂದ್ರವತ್ ಸ್ಫಾಟಿಕಂ ಪೀಠಂ ಸಮಾವೃತ್ಯ ಸ್ಥಿತಂ ಪುರಃ ॥೨೩॥
ವಾಮಪಾರ್ಶ್ವನಿವಾಸಿನ್ಯಾ ಮಂಗಲಪ್ರಿಯವೇಷಯಾ ।
ಸಮಸ್ತಲೋಕನಿರ್ಮಾಣಸಮವಾಯಸ್ವರೂಪಯಾ ॥೨೪॥
ಇಚ್ಛಾಜ್ಞಾನಕ್ರಿಯಾರೂಪಬಹುಶಕ್ತಿವಿಲಾಸಯಾ ।
ವಿದ್ಯಾತತ್ತ್ವಪ್ರಕಾಶಿನ್ಯಾ ವಿನಾಭಾವವಿಹೀನಯಾ ॥೨೫॥
ಸಂಸಾರವಿಷಕಾಂತಾರದಾಹದಾವಾಗ್ನಿಲೇಖಯಾ ।
ಧಮ್ಮಿಲ್ಲಮಲ್ಲಿಕಾಮೋದಝುಂಕುರ್ವದ್ಭೃಂಗಮಾಲಯಾ ॥೨೬॥
ಸಂಪೂರ್ಣಚಂದ್ರಸೌಭಾಗ್ಯಸಂವಾದಿಮುಖಪದ್ಮಯಾ ।
ನಾಸಾಮೌಕ್ತಿಕಲಾವಣ್ಯನಾಸೀರಸ್ಮಿತಶೋಭಯಾ ॥೨೭॥
ಮಣಿತಾಟಂಕರಂಗಾಂತರ್ವಲಿತಾಪಾಂಗಲೀಲಯಾ ।
ನೇತ್ರದ್ವಿತಯಸೌಂದರ್ಯನಿಂದಿತೇಂದೀವರತ್ವಿಷಾ ॥೨೮॥

ರತ್ನನೂಪುರಗಳ ಪ್ರಭೆಯಿಂದ ಪಲ್ಲವಾಕಾರಶೋಭೆಯನ್ನು ಧರಿಸಿದ ಚರಣಗಳಿಂದ, ಚಂದ್ರನಂತೆ ಶುಭ್ರವಾಗಿರುವ ಸ್ಫಟಿಕಪೀಠವನ್ನು ಅಲಂಕರಿಸಿರುವವನೂ ಆದ ಪರಮೇಶ್ವರನು ಪರಿಶೋಭಿಸುತ್ತಿರುವನು. ॥೨೩॥

ಶಕ್ತಿವರ್ಣನೆ.

ಪರಮೇಶ್ವರನ ವಾಮಭಾಗದಲ್ಲಿ ವಾಸಿಸುತ್ತಿರುವವಳೂ, ಮಂಗಲವೇಷವುಳ್ಳವಳೂ, ಸಮಸ್ತಲೋಕಗಳ ನಿರ್ಮಾಣದಲ್ಲಿ ಸಮವಾಯಸ್ವರೂಪದಿಂದಿರುವವಳೂ ॥೨೪॥ ಇಚ್ಛಾ-ಜ್ಞಾನ-ಕ್ರಿಯಾರೂಪವಾದ ಅನೇಕವಿಧಶಕ್ತಿಗಳಿಂದ ವಿರಾಜಿಸುವವಳೂ, ಆತ್ಮವಿದ್ಯಾಸ್ವರೂಪವನ್ನು ಪ್ರಕಾಶಪಡಿಸುವವಳೂ, ಶಿವನೊಡನೆ ಅವಿನಾಭಾವ (ನಿತ್ಯ) ಸಂಬಂಧದಿಂದಿರುವವಳೂ ॥೨೫॥ ಸಂಸಾರವೆಂಬ ವಿಷಾರಣ್ಯವನ್ನು ದಹನಮಾಡುವುದರಲ್ಲಿ ದಾವಾಗ್ನಿಸ್ವರೂಪಳೂ, ತುರುಬಿನಲ್ಲಿ ಧರಿಸಿದ ಮಲ್ಲಿಗೆಹೂವುಗಳ ಸುಗಂಧದಿಂದ ಝೇಂಕರಿಸುತ್ತಿರುವ ಭೃಂಗಪಂಕ್ತಿಯುಳ್ಳವಳೂ ॥೨೬॥ ಪೂರ್ಣಚಂದ್ರಸೌಭಾಗ್ಯವನ್ನು ಅನುಕರಿಸುತ್ತಿರುವ ಮುಖಕಮಲವುಳ್ಳವಳೂ, ಮುತ್ತಿನ ನತ್ತಿನ ಲಾವಣ್ಯವಿಶೇಷದಿಂದುಂಟಾದ ಮಂದಸ್ಮಿತಶೋಭೆಯಿಂದ ಶೋಭಿಸುತ್ತಿರುವವಳೂ ॥೨೭॥ ರತ್ನದ ವಾಲೆಗಳೆಂಬ ರಂಗಮಂಟಪದ ಮಧ್ಯದಲ್ಲಿ ಚಲಿಸುವ ಕಟಾಕ್ಷವುಳ್ಳವಳೂ,

ಕುಸುಮಾಯುಧಕೋದಂಡಕುಟಿಲಭ್ರೂವಿಲಾಸಯಾ ।
ಬಂಧೂಕಕುಸುಮಚ್ಛಾಯಾಬಂಧುಭೂತಾಧರಶ್ರಿಯಾ ॥೨೯॥

ಕಂಠನಾಲಜಿತಾನಂಗಕಂಬುಬಿಬ್ಬೋಕಸಂಪದಾ ।
ಬಾಹುದ್ವಿತಯಸೌಭಾಗ್ಯವಂಚಿತೋತ್ಪಲಮಾಲಯಾ ॥೩೦॥

ಸ್ಥಿರಯೌವನಲಾವಣ್ಯಶೃಂಗಾರಿತಶರೀರಯಾ ।
ಅತ್ಯಂತಕಠಿನೋತ್ತುಂಗಪೀವರಸ್ತನಭಾರಯಾ ॥೩೧॥

ಮೃಣಾಲವಲ್ಲರೀತಂತುಬಂಧುಭೂತಾವಲಗ್ನಯಾ ।
ಶೃಂಗಾರತಟಿನೀತುಂಗಪುಲಿನಶ್ರೋಣಿಭಾರಯಾ ॥೩೨॥

ಕುಸುಂಭಕುಸುಮಚ್ಛಾಯಾಕೋಮಲಾಂಬರಶೋಭಯಾ ।
ಶೃಂಗಾರೋದ್ಯಾನಸಂರಂಭರಂಭಾಸ್ತಂಭೋರುಕಾಂಡಯಾ ॥೩೩॥

ಚೂತಪ್ರವಾಲಸುಷಮಾಸುಕುಮಾರಪದಾಬ್ಜಯಾ ।
ಸ್ಥಿರಮಂಗಲಶೃಂಗಾರಭೂಷಣಾಲಂಕೃತಾಂಗಯಾ ॥೩೪॥

ನೇತ್ರಗಳ ಸೌಂದರ್ಯದಿಂದ ಕನ್ನೈದಿಲೆಗಳ ಕಾಂತಿಯನ್ನು ತಿರಸ್ಕರಿಸುತ್ತಿರುವವಳೂ ॥೨೮॥ ಮನ್ಮಥನ ಧನುಸ್ಸಿನಂತೆ ಮಣಿದಿರುವ ಹುಬ್ಬುಗಳಿಂದ ಶೋಭಿಸುವವಳೂ, ಬಂಧೂಕಪುಷ್ಪದ ಶೋಭೆಯನ್ನನುಕರಿಸುತ್ತಿರುವ ಅಧರಶೋಭೆಯುಳ್ಳವಳೂ ॥೨೯॥ ಮನ್ಮಥನ ಜಯಶಂಖದ ಧ್ವನಿಯನ್ನು ತನ್ನ ಕಂಠದ ಮಧುರಧ್ವನಿಯಿಂದ ಜಯಿಸಿದವಳೂ, ಬಾಹುಗಳ ಸೌಭಾಗ್ಯದಿಂದ ಕನ್ನೈದಿಲೆಯ ಮಾಲಿಕೆಯನ್ನು ತಿರಸ್ಕರಿಸುತ್ತಿರುವವಳೂ ॥೩೦॥ ನಿತ್ಯವಾದ ತಾರುಣ್ಯದ ಲಾವಣ್ಯದಿಂದ ಪರಿಶೋಭಿಸುತ್ತಿರುವ ಶರೀರವುಳ್ಳವಳೂ, ಅತ್ಯಂತಕಠಿನವಾದ ಉನ್ನತಕುಚಗಳ ಭಾರದಿಂದ ಕೂಡಿರುವವಳೂ ॥೩೧॥ ಕಮಲದಬಳ್ಳಿಯ ತಂತುವಿಗೆ ಸಮಾನವಾದ ಮಧ್ಯ (ನಡು) ವುಳ್ಳವಳೂ, ಶೃಂಗಾರರೂಪನದಿಗೆ ಉನ್ನತವಾದ ಉಸುಕಿನ ದಿನ್ನೆಗಳಂತಿರುವ ಜಘನವುಳ್ಳವಳೂ ॥೩೨॥ ಕುಸುಬೆಯಹೂವಿನ ಶೋಭೆಯಂತಿರುವ ಮನೋಹರವಾದ ವಸ್ತ್ರದಿಂದ ಶೋಭಿಸುವವಳೂ, ಶೃಂಗಾರವೆಂಬ ಉದ್ಯಾನದ ಶೋಭೆಗೆ ರಂಭಾಸ್ತಂಭದಂತಿರುವ ತೊಡೆಗಳುಳ್ಳವಳೂ ॥೩೩॥ ಕೋಮಲವಾದ ಮಾವಿನ ಚಿಗುರಿನ ಬಣ್ಣದಂತೆ ಮನೋಹರವಾದ ಪಾದಕಮಲಗಳುಳ್ಳವಳೂ, ನಿತ್ಯಮಂಗಲಾತ್ಮಕಗಳಾದ ಅಲಂಕಾರಗಳಿಂದ ಅಲಂಕೃತವಾದ ಶರೀರವುಳ್ಳವಳೂ ॥೩೪॥ ಮುತ್ತಿನ

ಹಾರನೂಪುರಕೇಯೂರಚಮತ್ಕೃತಶರೀರಯಾ ।
ಚಕ್ಷುರಾನಂದಲತಯಾ ಸೌಭಾಗ್ಯಕುಲವಿದ್ಯಯಾ ॥೩೫॥
ಉಮಯಾ ಸಮುಪಾಸೀನಂ ಲೋಕಜಾಲಕುಟುಂಬಯಾ ।
ಅಪೂರ್ವರೂಪಮಭಜನ್ ಪರಿವಾರಾಃ ಸಮಂತತಃ ॥೩೬॥

ಪುಂಡರೀಕಾಕೃತಿಸ್ವಚ್ಛಂ ಪೂರ್ಣಚಂದ್ರಸಹೋದರಂ ।
ದಧೌ ತಸ್ಯ ಮಹಾಲಕ್ಷ್ಮೀಃ ಸಿತಮಾತಪವಾರಣಂ ॥೩೭॥

ತಂತ್ರೀರ್ಝುಂಕಾರಶಾಲಿನ್ಯಾ ಸಂಗೀತಾಮೃತವಿದ್ಯಯಾ ।
ಉಪತಸ್ಥೇ ಮಹಾದೇವಮುಪಾಂತೇ ಚ ಸರಸ್ವತೀ ॥೩೮॥

ಝುಣತ್ಕಂಕಣಜಾತೇನ ಹಸ್ತೇನೋಪನಿಷದ್ವಧೂಃ ।
ಓಂಕಾರತಾಲವೃಂತೇನ ವೀಜಯಾಮಾಸ ಶಂಕರಂ ॥೩೯॥

ಚಲಚ್ಚಾಮರಿಕಾಹಸ್ತಾ ಝುಂಕುರ್ವನ್ಮಣಿಕಂಕಣಾಃ ।
ಆಸೇವಂತ ತಮೀಶಾನಮಭಿತೋ ದಿವ್ಯಕನ್ಯಕಾಃ ॥೪೦॥

ಹಾರ-ಕಾಲಸರಪಣಿ-ವಂಕಿಗಳಿಂದ ಪರಿಶೋಭಿಸುತ್ತಿರುವ ಶರೀರವುಳ್ಳವಳೂ, ನೋಡುವವರ ಕಣ್ಣುಗಳಿಗೆ ಆನಂದಲತೆಯಂತಿರುವವಳೂ, ಸೌಭಾಗ್ಯಕುಲವಿದ್ಯಾಸ್ವರೂಪಳೂ ॥೩೫॥ ಸಮಸ್ತಲೋಕಗಳೇ ಕುಟುಂಬವಾಗುಳ್ಳವಳೂ ಆದ ಉಮಾದೇವಿಯೊಡನೆ ದಿವ್ಯಸಿಂಹಾಸನವನ್ನಲಂಕರಿಸಿರುವವನೂ, ಅಸಾಧಾರಣರೂಪದಿಂದ ಕೂಡಿರುವವನೂ ಆದ ಪರಮೇಶ್ವರನನ್ನು ಮೂವತ್ತುಮೂರುಕೋಟಿ ದೇವತೆಗಳೂ ಸುತ್ತಲೂನಿಂತು ಸ್ತುತಿಸಿದರು. ॥೩೬॥

ದೇವತಾಸಮೂಹಕೃತಶಿವಸೇವಾವರ್ಣನೆ.

ಮಹಾಲಕ್ಷ್ಮೀದೇವಿಯು ಪರಮೇಶ್ವರನಿಗೆ ಶ್ವೇತಕಮಲದಂತೆ ಶುಭ್ರವೂ, ಪೂರ್ಣಚಂದ್ರನಂತೆ ಶೋಭಿಸುತ್ತಿರುವುದೂ ಆದ ಶ್ವೇತಚ್ಛತ್ರವನ್ನು ಹಿಡಿದಿದ್ದಳು. ॥೩೭॥ ಸರಸ್ವತೀದೇವಿಯು ಪರಮೇಶ್ವರನ ಸಮೀಪದಲ್ಲಿ ನಿಂತು ತನ್ನ ವೀಣೆಯ ಮಂಜುಳಧ್ವನಿಯಿಂದ ಶೋಭಿತವಾದ ಅಮೃತಸದೃಶಸಂಗೀತವಿದ್ಯೆಯಿಂದ ಸೇವಿಸುತ್ತಿದ್ದಳು. ॥೩೮॥ ಉಪನಿಷದ್ರೂಪಸ್ತ್ರೀಯಳು ಶಬ್ದಾಯಮಾನಗಳಾದ ಬಳೆಗಳಿಂದ ಕೂಡಿದ ಹಸ್ತದಿಂದ ಓಂಕಾರರೂಪವ್ಯಜನದಿಂದ ಬೀಸುತ್ತಿದ್ದಳು. ॥೩೯॥ ಶಬ್ದಾಯಮಾನಗಳಾದ ರತ್ನಮಯಕಂಕಣಗಳುಳ್ಳವರೂ, ಅಲ್ಲಾಡುತ್ತಿರುವ ಚಾಮರಗಳಿಂದ ಕೂಡಿದ ಹಸ್ತಗಳುಳ್ಳವರೂ ಆದ ದೇವಕನ್ಯೆಯರು ಪರಮೇಶ್ವರನ ಸುತ್ತಲೂ ನಿಂತು

ಚಾಮರಾಣಾಂ ವಿಲೋಲಾನಾಂ ಮಧ್ಯೇ ತನ್ಮುಖಮಂಡಲಂ ।
ರರಾಜ ರಾಜಹಂಸಾನಾಂ ಭ್ರಮತಾಮಿವ ಪಂಕಜಂ ॥೪೧॥

ಮಂತ್ರೇಣ ತಮಸೇವಂತ ವೇದಾಃ ಸಾಂಗವಿಭೂತಯಃ ।
ಭಕ್ತ್ಯಾ ಚೂಡಾಮಣಿಂ ಕಾಂತಂ ವಹಂತ ಇವ ಮೌಲಿಭಿಃ ॥೪೨॥

ತದೀಯಾಯುಧಧಾರಿಣ್ಯಸ್ತತ್ಸಮಾನವಿಭೂಷಣಾಃ ।
ಅಂಗಭೂತಾಃ ಸ್ತ್ರಿಯಃ ಕಾಶ್ಚಿದಾಸೇವಂತ ತಮೀಶ್ವರಂ ॥೪೩॥

ಆಪ್ತಾಧಿಕಾರಿಣಃ ಕೇಚಿದನಂತಪ್ರಮುಖಾ ಅಪಿ ।
ಅಷ್ಟೌ ವಿದ್ಯೇಶ್ವರಾ ದೇವಮಭಜಂತ ಸಮಂತತಃ ॥೪೪॥

ತತೋ ನಂದೀ ಮಹಾಕಾಲಶ್ಚಂಡೋ ಭೃಂಗಿರಿಟಿಸ್ತತಃ ।
ಘಂಟಾಕರ್ಣಃ ಪುಷ್ಪದಂತಃ ಕಪಾಲೀ ವೀರಭದ್ರಕಃ ॥೪೫॥

ಏವಮಾದ್ಯಾ ಮಹಾಭಾಗಾ ಮಹಾಬಲಪರಾಕ್ರಮಾಃ ।
ನಿರಂಕುಶಮಹಾಸತ್ತ್ವಾ ಭೇಜಿರೇ ತಂ ಮಹೇಶ್ವರಂ ॥೪೬॥

ಸೇವಿಸುತ್ತಿದ್ದರು. ॥೪೦॥ ಸಂಚರಿಸುತ್ತಿರುವ ರಾಜಹಂಸಗಳ ಮಧ್ಯದಲ್ಲಿ ಕಮಲವು ಹೇಗೆ ಶೋಭಿಸುತ್ತಿರುವುದೋ, ಹಾಗೆ ಚಲಿಸುತ್ತಿರುವ ಚಾಮರಗಳ ಮಧ್ಯದಲ್ಲಿ ಶಿವನ ಮುಖಮಂಡಲವು ಶೋಭಿಸುತ್ತಿದ್ದಿತು. ॥೪೧॥ ಶಿಕ್ಷಾವ್ಯಾಕರಣಾದಿಷಡಂಗ ಯುಕ್ತಗಳಾದ ಋಗಾದಿವೇದಗಳು ಉಪನಿಷದ್ರೂಪಮಸ್ತಕಗಳಿಂದ ಆ ಪರಮೇಶ್ವರ ನನ್ನು ಮನೋಹರವಾದ ಚೂಡಾಮಣಿಯಂತೆ ವಹಿಸುವಂಥವುಗಳಾಗಿ ಮಂತ್ರದಿಂದ ಭಕ್ತಿಪೂರ್ವಕವಾಗಿ ಸೇವಿಸುತ್ತಿದ್ದುವು. ॥೪೨॥ ಆ ಶಿವಸಂಬಂಧಿಗಳಾದ ಆಯುಧ ಗಳನ್ನು ಧರಿಸಿರುವವರೂ, ಶಿವಸಮಾನವೇಷಾಲಂಕೃತರೂ, ಶಿವನಿಗೆ ಅಂಗಭೂತರೂ ಆದ ಕೆಲಜನಸ್ತ್ರೀಯರು ಪರಮೇಶ್ವರನನ್ನು ಸೇವಿಸುತ್ತಿದ್ದರು. ॥೪೩॥ ಶಿವನಿಗೆ ಆಪ್ತಾಧಿಕಾರಿಗಳಾದ ಅನಂತ - ಸೂಕ್ಷ್ಮ - ಶಿವೋತ್ತಮ - ಏಕನೇತ್ರ - ಏಕರುದ್ರ - ತ್ರಿಮೂರ್ತಿ - ಶ್ರೀಕಂಠ - ಶಿಖಂಡಿ - ನಾಮಕರಾದ ಎಂಟು ಜನ ವಿದ್ಯೇಶ್ವರರು ಆ ಪರಶಿವನನ್ನು ಸೇವಿಸುತ್ತಿದ್ದರು. ॥೪೪॥ ನಂದಿ - ಮಹಾಕಾಲ - ಚಂಡ - ಭೃಂಗಿರಿಟಿ- ಘಂಟಾಕರ್ಣ - ಪುಷ್ಪದಂತ - ಕಪಾಲಿ - ವೀರಭದ್ರ ಇವರೇಮೊದಲಾದ ನಿರಂಕುಶ ಸತ್ತ್ವಶಾಲಿಗಳೂ ಮಹಾಬಲಪರಾಕ್ರಮಶಾಲಿಗಳೂ ಆದ ಪ್ರಮಥರು ಪರಮೇಶ್ವರ ನನ್ನು ಸೇವಿಸುತ್ತಿದ್ದರು. ॥೪೫-೪೬॥ ಯಾರ ಸಿದ್ಧಿಯ ಮುಂದೆ ಅಣಿಮಾ

ಅಣಿಮಾದಿಕಮೈಶ್ವರ್ಯಂ ಯೇಷಾಂ ಸಿದ್ಧೇರಪೋಹನಂ ।
ಬ್ರಹ್ಮಾದಯಃ ಸುರಾ ಯೇಷಾಮಾಜ್ಞಾಲಂಘನಭೀರವಃ ॥೪೭॥
ಮೋಕ್ಷಲಕ್ಷ್ಮೀಪರಿಷ್ವಂಗಮುದಿತಾ ಯೇಽಂತರಾತ್ಮನಾ ।
ಯೇಷಾಮೀಷತ್ಕರಂ ವಿಶ್ವಸರ್ಗಸಂಹಾರಕಲ್ಪನಂ ॥೪೮॥
ಜ್ಞಾನಶಕ್ತಿಃ ಪರಾ ಯೇಷಾಂ ಸರ್ವವಸ್ತುಪ್ರಕಾಶಿನೀ ।
ಆನಂದಕಣಿಕಾ ಯೇಷಾಂ ಹರಿಬ್ರಹ್ಮಾದಿಸಂಪದಃ ॥೪೯॥
ಆಕಾಂಕ್ಷಂತೇ ಪದಂ ಯೇಷಾಂ ಯೋಗಿನೋ ಯೋಗತತ್ಪರಾಃ ।
ಕಾಂಕ್ಷಣೀಯಫಲೋ ಯೇಷಾಂ ಸಂಕಲ್ಪಃ ಕಲ್ಪಪಾದಪಃ॥೫೦॥
ಕರ್ಮಕಾಲಾದಿಕಾರ್ಪಣ್ಯಚಿಂತಾ ಯೇಷಾಂ ನ ವಿದ್ಯತೇ ।
ಯೇಷಾಂ ವಿಕ್ರಮಸನ್ನಾಹಾ ಮೃತ್ಯೋರಪಿ ಚ ಮೃತ್ಯವಃ ॥
ತೇ ಸಾರೂಪ್ಯಪದಂ ಪ್ರಾಪ್ತಾಃ ಪ್ರಮಥಾ ಭೇಜಿರೇ ಶಿವಂ ॥೫೧॥
ಬ್ರಹ್ಮೋಪೇಂದ್ರಮಹೇಂದ್ರಾದ್ಯಾ ವಿಶ್ವತಂತ್ರಾಧಿಕಾರಿಣಃ ।
ಆಯುಧಾಲಂಕೃತಪ್ರಾಂತಾಃ ಪರಿತಸ್ತಂ ಸಿಷೇವಿರೇ ॥೫೨॥

ಮಹಿಮಾದ್ಯಷ್ಟಸಿದ್ಧಿಗಳು ತುಚ್ಛವಾದುವುಗಳೋ, ಬ್ರಹ್ಮಾದಿಸಮಸ್ತದೇವತೆಗಳು ಯಾರ ಆಜ್ಞೆಯನ್ನು ಉಲ್ಲಂಘಿಸಲು ಭಯಪಡುವರೋ, ಯಾರು ಮೋಕ್ಷಲಕ್ಷ್ಮಿಯ ಆಲಿಂಗನದಿಂದ ಸಂತುಷ್ಟಚಿತ್ತರಾಗಿರುವರೋ, ಯಾರಿಗೆ ಜಗತ್ತಿನ ಸೃಷ್ಟಿಸಂಹಾರಗಳು ಅತಿಸುಲಭಸಾಧ್ಯವಾದುವುಗಳೋ, ಯಾರ ಜ್ಞಾನಶಕ್ತಿಯು ಸರ್ವವಸ್ತುಗಳ ಯಥಾರ್ಥಜ್ಞಾನವನ್ನುಂಟುಮಾಡಿಕೊಡುವುದೋ, ಹರಿಬ್ರಹ್ಮಾದಿದೇವತೆಗಳ ಸಂಪತ್ತುಗಳು ಯಾರಿಗೆ ಲೇಶಮಾತ್ರಗಳೋ, ಶಿವಯೋಗತತ್ಪರರಾದ ಮಹಾಯೋಗಿಗಳು ಯಾರ ಸ್ಥಾನವನ್ನು ಇಚ್ಛಿಸುತ್ತಾರೆಯೋ, ಯಾರ ಸಂಕಲ್ಪವು ಸರ್ವರಿಂದಲೂ ಅಪೇಕ್ಷಿಸಲ್ಪಡುವ ಫಲವುಳ್ಳುದಾಗಿ ಕಲ್ಪವೃಕ್ಷಸದೃಶವಾಗಿದೆಯೋ, ಸಂಚಿತಾಗಾಮಿ ಪ್ರಾರಬ್ಧಕರ್ಮಗಳೂ, ಭೂತಭವಿಷ್ಯದ್ವರ್ತಮಾನಕಾಲಗಳೂ, ಕಾಮಾದಿಗಳಿಂದ ಉತ್ಪನ್ನವಾದ ಕಾರ್ಪಣ್ಯಚಿಂತೆಯೂ ಯಾರಿಗೆ ಇರುವುದಿಲ್ಲವೋ, ಯಾರ ಪರಾಕ್ರಮೋದ್ಯೋಗಗಳು ಮೃತ್ಯುವಿಗೆ ಮೃತ್ಯುಸ್ವರೂಪಗಳಾಗಿವೆಯೋ; ಶಿವಸಾರೂಪ್ಯವನ್ನು ಹೊಂದಿದ ಆ ಪ್ರಮಥರು ಪರಮೇಶ್ವರನನ್ನು ಸೇವಿಸುತ್ತಿದ್ದರು. ॥೪೭-೪೮-೪೯-೫೦-೫೧॥ ಬ್ರಹ್ಮ-ವಿಷ್ಣು-ಇಂದ್ರ ಮೊದಲಾದ ಮೂವತ್ತುಮೂರುಕೋಟಿದೇವತೆಗಳು ತಮ್ಮ ತಮ್ಮ ಆಯುಧಗಳಿಂದ ಅಲಂಕೃತರಾಗಿ ವಿಶ್ವಸೂತ್ರಾಧಿಕಾರಿಯಾದ

ಆದಿತ್ಯಾ ವಸವೋ ರುದ್ರಾ ಯಕ್ಷಗಂಧರ್ವಕಿನ್ನರಾಃ ।
ದಾನವಾ ರಾಕ್ಷಸಾ ದೈತ್ಯಾಃ ಸಿದ್ಧಾ ವಿದ್ಯಾಧರೋರಗಾಃ ॥
ಅಭಜಂತ ಮಹಾದೇವಮಪರಿಚ್ಛಿನ್ನಸೈನಿಕಾಃ ॥೫೩॥

ವಸಿಷ್ಠೋ ವಾಮದೇವಶ್ಚ ವಿಶ್ವಾಮಿತ್ರಾತ್ರಿಶೌನಕಾಃ ।
ದಧೀಚಿರ್ಗೌತಮಶ್ಚೈವ ಸಾನಂದಶುಕನಾರದಾಃ ॥೫೪॥

ಉಪಮನ್ಯುಭೃಗುವ್ಯಾಸಪರಾಶರಮರೀಚಯಃ ।
ಇತ್ಯಾದ್ಯಾ ಮುನಯಃ ಸರ್ವೇ ನೀಲಕಂಠಂ ಸಿಷೇವಿರೇ ॥೫೫॥

ಪಾರ್ಶ್ವಸ್ಥಪರಿವಾರಾಣಾಂ ವಿಮಲಾಂಗೇಷು ಬಿಂಬಿತಃ ।
ಸರ್ವಾಂತರ್ಗತಮಾತ್ಮಾನಂ ಸ ರೇಜೇ ದರ್ಶಯನ್ನಿವ ॥೫೬॥

ಕ್ಷಣಂ ಸ ಶಂಭುರ್ದೇವಾನಾಂ ಕಾರ್ಯಭಾಗಂ ನಿರೂಪಯನ್ ।
ಕ್ಷಣಂ ಗಂಧರ್ವರಾಜಾನಾಂ ಗಾನವಿದ್ಯಾಂ ವಿಭಾವಯನ್ ॥೫೭॥

ಪರಮೇಶ್ವರನನ್ನು ಸುತ್ತುಗಟ್ಟಿಕೊಂಡು ಸೇವಿಸುತ್ತಿದ್ದರು. ॥೫೨॥ ದ್ವಾದಶಾದಿತ್ಯರೂ, ಅಷ್ಟವಸುಗಳೂ, ಏಕಾದಶರುದ್ರರೂ, ಕುಬೇರಮೊದಲಾದ ಯಕ್ಷರೂ, ಹಾಹಾಮೊದಲಾದ ಗಂಧರ್ವರೂ, ಅಶ್ವಮುಖನೇಮೊದಲಾದ ಕಿನ್ನರರೂ, ದಾನವರೂ, ರಾಕ್ಷಸರೂ, ದೈತ್ಯರೂ, ಆದಿನಾಥನೇಮೊದಲಾದ ಸಿದ್ಧರೂ, ಮಣಿಭದ್ರಾದಿ ವಿದ್ಯಾಧರರೂ, ಶೇಷನೇಮೊದಲಾದ ಸರ್ಪಗಳೂ ಅಸಂಖ್ಯಪರಿವಾರದಿಂದೊಡಗೂಡಿ ಪರಮೇಶ್ವರನನ್ನು ಭಜಿಸುತ್ತಿದ್ದರು. ॥೫೩॥ ವಸಿಷ್ಠ-ವಾಮದೇವ-ವಿಶ್ವಾಮಿತ್ರ-ಅತ್ರಿ-ಶೌನಕ-ದಧೀಚಿ-ಗೌತಮ-ಸಾನಂದ-ಶುಕ-ನಾರದ ಉಪಮನ್ಯು-ಭೃಗು-ವ್ಯಾಸ-ಪರಾಶರ-ಮರೀಚಿಮೊದಲಾದ ಮಹರ್ಷಿಗಳು ಪರಮೇಶ್ವರನನ್ನು ಸೇವಿಸುತ್ತಿದ್ದರು. ॥೫೪-೫೫॥ ತನ್ನ ಎಡಬಲಭಾಗದಲ್ಲಿ ನಿಂತಿದ್ದ ಸಮಸ್ತಪರಿವಾರದವರ ಅತ್ಯಂತ ನಿರ್ಮಲವಾದ ಶರೀರಗಳಲ್ಲಿ ಪ್ರತಿಬಿಂಬಿತನಾದ ಶ್ರೀಪರಮೇಶ್ವರನು ತಾನು ಸರ್ವಾಂತರ್ಯಾಮಿಯೆಂಬುದನ್ನು ತೋರಿಸುವನೋ ಎನ್ನುವಂತೆ ಪರಿಶೋಭಿಸುತ್ತಿದ್ದನು. ॥೫೬॥

ಶ್ರೀಪರಮೇಶ್ವರನ ರಾಜವ್ಯಾಪಾರವರ್ಣನೆ.

ಪರಮೇಶ್ವರನು ಕ್ಷಣಕಾಲ ದೇವತೆಗಳಿಗೆ ನೀವು ಇಂತಹ ಇಂತಹ ಕಾರ್ಯಗಳನ್ನು ಮಾಡಬೇಕೆಂದು ಆಜ್ಞಾಪಿಸುತ್ತಿದ್ದನು. ಕ್ಷಣಕಾಲ ಗಂಧರ್ವರ ಮನೋಹರವಾದ ಗಾನವನ್ನು ಕೇಳುತ್ತಿದ್ದನು. ॥೫೭॥ ಕ್ಷಣಕಾಲ ಬ್ರಹ್ಮವಿಷ್ಣುಮೊದಲಾದ

ಬ್ರಹ್ಮವಿಷ್ಣ್ವಾದಿಭಿರ್ದೇವೈಃ ಕ್ಷಣಮಾಲಾಪಮಾಚರನ್ ।
ಕ್ಷಣಂ ದೇವಮೃಗಾಕ್ಷೀಣಾಂ ಲಾಲಯನ್ ನೃತ್ಯವಿಭ್ರಮಂ ॥೫೮॥

ವ್ಯಾಸಾದೀನಾಂ ಕ್ಷಣಂ ಕುರ್ವನ್ ವೇದೋಚ್ಚಾರೇಷು ಗೌರವಂ ।
ನಿದಧಾನಃ ಕ್ಷಣಂ ದೇವ್ಯಾ ಮುಖೇ ಬಿಂಬಾಧರೇ ದೃಶಃ ॥
ಹಾಸ್ಯನೃತ್ಯಂ ಕ್ಷಣಂ ಪಶ್ಯನ್ ಭೃಂಗಿಣಾ ಪರಿಕಲ್ಪಿತಂ ॥೫೯॥

ನಂದಿನಾ ವೇತ್ರಹಸ್ತೇನ ಸರ್ವತಂತ್ರಾಧಿಕಾರಿಣಾ ।
ಅಮುಂಚತಾ ಸದಾ ಪಾರ್ಶ್ವಮಾತ್ಮಾಭಿಪ್ರಾಯವೇದಿನಾ ॥೬೦॥

ಚೋದಿತಾನಾನಯನ್ ಕಾಂಶ್ಚಿದ್ವಿಸೃಜನ್ ಭ್ರೂವಿಲಾಸತಃ ।
ಸಂಭಾವಯಂಸ್ತಥಾ ಚಾನ್ಯಾನನ್ಯಾನಪಿ ನಿಯಾಮಯನ್ ॥೬೧॥

ಸಮಸ್ತಭುವನಾಧೀಶಮೌಲಿಲಾಲಿತಶಾಸನಃ ।
ಅಕುಂಠಶಕ್ತಿರವ್ಯಾಜಲಾವಣ್ಯಲಲಿತಾಕೃತಿಃ ॥೬೨॥

ಸ್ಥಿರಯೌವನಸೌರಭ್ಯಶೃಂಗಾರಿತಕಲೇವರಃ ।
ಆತ್ಮಶಕ್ತ್ಯಮೃತಾಸ್ವಾದರಸೋಲ್ಲಾಸಿತಮಾನಸಃ ॥೬೩॥

ದೇವತೆಗಳೊಡನೆ ಮಾತನಾಡುತ್ತಿದ್ದನು. ಕ್ಷಣಕಾಲ ದೇವತಾಸ್ತ್ರೀಯರ ನರ್ತನ ವೈಭವವನ್ನು ನೋಡುತ್ತಿದ್ದನು. ॥೫೮॥ ಕ್ಷಣಕಾಲ ವ್ಯಾಸಾದಿಮಹರ್ಷಿಗಳು ಮಾಡುತ್ತಿರುವ ವೇದೋಚ್ಚಾರಣವನ್ನು ಪರಾಮರ್ಶಿಸಿ ಅವರನ್ನು ಗೌರವಿಸುತ್ತಿದ್ದನು. ಕ್ಷಣಕಾಲ ಪಾರ್ವತೀದೇವಿಯ ಮುಖಕಮಲದಲ್ಲಿ ದೃಷ್ಟಿಯನ್ನಿಡುತ್ತಿದ್ದನು. ಕ್ಷಣಕಾಲ ಭೃಂಗಿಯು ಆಚರಿಸುತ್ತಿದ್ದ ಹಾಸ್ಯಮಯನರ್ತನವನ್ನು ನೋಡುತ್ತಿದ್ದನು. ॥೫೯॥ ಸಮಸ್ತಕಾರ್ಯಾಧಿಕಾರಿಯೂ, ದಂಡಧಾರಿಯೂ, ಯಾವಾಗಲೂ ಎಡಬಿಡದೆ ಪರಮೇಶ್ವರನ ಸನ್ನಿಧಿಯಲ್ಲಿರುವವನೂ, ಪರಮೇಶ್ವರನ ಅಭಿಪ್ರಾಯವನ್ನು ತಿಳಿದು ಅದರಂತೆ ವರ್ತಿಸುವವನೂ ಆದ ನಂದಿಕೇಶ್ವರನಿಂದ ಕೆಲವರನ್ನು ಕರೆಯಿಸುತ್ತಿದ್ದನು. ಕೆಲವರನ್ನು ನೇತ್ರಸಂಜ್ಞೆಯಿಂದ ಕಳುಹಿಸುತ್ತಿದ್ದನು. ಕೆಲವರನ್ನು ಪ್ರಿಯೋಕ್ತಿಗಳಿಂದ ಸಂತೋಷಪಡಿಸುತ್ತಿದ್ದನು. ಕೆಲವರನ್ನು ಬಂಧಿಸುತ್ತಿದ್ದನು. ॥೬೦-೬೧॥ ತಾನು ಚತುರ್ದಶಲೋಕಾಧಿಪತಿಯಾದುದರಿಂದ ತನ್ನ ಆಜ್ಞೆಯನ್ನು ದೇವತೆಗಳ ದ್ವಾರಾ ನೆರವೇರಿಸತಕ್ಕವನೂ, ಅಪ್ರತಿಹತವಾದ ಶಕ್ತಿಯುಳ್ಳವನೂ, ಸ್ವಾಭಾವಿಕವಾದ ಸೌಂದರ್ಯದಿಂದ ಮನೋಹರಾಕಾರವುಳ್ಳವನೂ, ಯಾವಾಗಲೂ ಸ್ಥಿರವಾಗಿರುವ ತಾರುಣ್ಯದಿಂದ ಪರಿಶೋಭಿಸುತ್ತಿರುವ ಅವಯವಗಳುಳ್ಳವನೂ, ತನ್ನಲ್ಲಿ ನಿತ್ಯ ಸಂಬಂಧದಿಂದ ನೆಲಸಿರುವ ಶಕ್ತಿರೂಪಮಹಾನಂದರಸಾಸ್ವಾದನದಿಂದ ಸಂತುಷ್ಟವಾದ

ಸ್ವಾಭಾವಿಕಮಹೈಶ್ವರ್ಯವಿಶ್ರಾಂತಿಪರಮಾವಧಿಃ ।
ನಿಷ್ಕಲಂಕಮಹಾಸತ್ತ್ವನಿರ್ಮಿತಾನೇಕವಿಗ್ರಹಃ ||೬೪||

ಅಖಂಡಾರಾತಿದೋರ್ದಂಡಕಂಡೂಖಂಡನಪಂಡಿತಃ ।
ಚಿಂತಾಮಣಿಃ ಪ್ರಪನ್ನಾನಾಂ ಶ್ರೀಕಂಠಃ ಪರಮೇಶ್ವರಃ ||೬೫||

ಸಭಾಂತರಗತಂ ತಂತ್ರಂ ರೇಣುಕಂ ಗಣನಾಯಕಂ ।
ಪ್ರಸಾದಂ ಸುಲಭಂ ದಾತುಮಾಹೂಯೇತ್ಥಂ ಸಮಾದಿಶತ್ ||೬೬||

ಶ್ರೀಶೈಲಸ್ಯೋತ್ತರೇ ಭಾಗೇ ತ್ರಿಲಿಂಗವಿಷಯೇ ಶುಭೇ ।
ಕುಲ್ಯಪಾಕಾಭಿಧಂ ಪುಣ್ಯಕ್ಷೇತ್ರಮೇಕಂ ವಿರಾಜತೇ ||೬೭||

ಸೋಮೇಶ್ವರಾಭಿಧಾನಸ್ಯ ತತ್ರ ವಾಸವತೋ ಮಮ ।
ಅಸ್ಪೃಶನ್ಮಾನುಷಂ ಭಾವಂ ಲಿಂಗಾತ್ ಪ್ರಾದುರ್ಭವಿಷ್ಯಸಿ ||೬೮||

ಮದೀಯಲಿಂಗಸಂಭೂತಂ ಮದ್ಭಕ್ತಪರಿಪಾಲಕಂ ।
ವಿಸ್ಮಿತಾ ಮಾನುಷಾಃ ಸರ್ವೇ ತ್ವಾಂ ಭಜಂತು ಮದಾಜ್ಞಯಾ ||೬೯||

ಮನಸ್ಸುಳ್ಳವನೂ, ತನ್ನಲ್ಲಿ ಸ್ವಾಭಾವಿಕವಾಗಿ ನೆಲಸಿರುವ ಸರ್ವಜ್ಞತ್ವಾದಿಮಹೈಶ್ವರ್ಯಗಳ ವಿಶ್ರಾಂತಿಗೆ ಪರ್ಯಂತಭೂಮಿಸ್ವರೂಪನೂ, ನಿಷ್ಕಲಂಕವಾದ ಮಹಾಶಕ್ತಿಯಿಂದ ಅನೇಕಾನೇಕಮಂಗಲಮೂರ್ತಿಗಳನ್ನು ನಿರ್ಮಿಸುವವನೂ, ಅಸಂಖ್ಯರಾದ ಸಜ್ಜನ ವೈರಿಗಳ ಭುಜಕಂಡೂತಿ (ತಿಂಡಿ-ನವೆ) ಯನ್ನು ನಾಶಮಾಡುವುದರಲ್ಲಿ ಸಮರ್ಥನೂ, ಶರಣಾಗತರಿಗೆ ಚಿಂತಾಮಣಿಸ್ವರೂಪನೂ ಆಗಿರುವ ಪರಮೇಶ್ವರನು ಪರಿಶೋಭಿಸುತ್ತಿದ್ದನು. ||೬೨-೬೩-೬೪-೬೫|| ಇಂತಹ ಭವ್ಯವಾದ ಶಿವಸಭೆಯನ್ನು ಅಲಂಕರಿಸಿದವನೂ, ಸಭಾಪ್ರಮುಖನೂ, ಪ್ರಮಥನಾಯಕನೂ ಆದ ರೇಣುಕಗಣನಾಥನನ್ನು, ಪರಮೇಶ್ವರನು ತಾಂಬೂಲಪ್ರಸಾದವನ್ನು ಅನುಗ್ರಹಿಸುವುದಕ್ಕೋಸ್ಕರ ಕರೆದು, ಈ ರೀತಿಯಾಗಿ ಆಜ್ಞಾಪಿಸಿದನು. ||೬೬|| ಎಲೈ ರೇಣುಕನೇ! ಶ್ರೀಶೈಲಕ್ಷೇತ್ರಕ್ಕೆ ಉತ್ತರಭಾಗದಲ್ಲಿರುವ ಆಂಧ್ರ (ತೆಲಗು) ದೇಶದಲ್ಲಿ, "ಕುಲ್ಯಪಾಕ" ಎಂಬ ಹೆಸರಿನ ಒಂದಾನೊಂದು ಪುಣ್ಯಕ್ಷೇತ್ರವು ವಿರಾಜಿಸುತ್ತಿರುವುದು. ||೬೭|| ಆ ಪರಮಪವಿತ್ರ ಕ್ಷೇತ್ರದಲ್ಲಿ "ಸೋಮೇಶ್ವರ" ಎಂಬ ಅಭಿಧಾನದಿಂದ ನೆಲಸಿರುವ ನನ್ನ ಲಿಂಗರೂಪ ಶರೀರದಿಂದ, ನೀನು ಮಾನವರೂಪವನ್ನು ಧರಿಸದೆ (ತೇಜೋಮಯಶರೀರಿಯಾಗಿ) ಅವತರಿಸು. ||೬೮|| ಶಿವಲಿಂಗಾವತಾರಿಯೂ, ಶಿವಭಕ್ತಪಾಲಕನೂ ಆದ ನಿನ್ನನ್ನು ನೋಡಿ ಮಾನವರೆಲ್ಲರೂ ಚಕಿತರಾಗಿ, ನನ್ನ ಆಜ್ಞಾನುಸಾರವಾಗಿ ಸೇವಿಸುವರು. ||೬೯||

ಮದದ್ವೈತಪರಂ ಶಾಸ್ತ್ರಂ ವೇದವೇದಾಂತಸಮ್ಮತಂ ।
ಸ್ಥಾಪಯಿಷ್ಯಸಿ ಭೂಲೋಕೇ ಸರ್ವೇಷಾಂ ಹಿತಕಾರಕಂ ॥೭೦॥

ಮಮ ಪ್ರತಾಪಮತುಲಂ ಮದ್ಭಕ್ತಾನಾಂ ವಿಶೇಷತಃ ।
ಪ್ರಕಾಶಯ ಮಹೀಭಾಗೇ ವೇದಮಾರ್ಗಾನುಸಾರತಃ ॥೭೧॥

ಇತ್ಯುಕ್ತ್ವಾ ಪರಮೇಶ್ವರಃ ಸ ಭಗವಾನ್ ಭದ್ರಾಸನಾದುತ್ಥಿತೋ
ಬ್ರಹ್ಮೋಪೇಂದ್ರಮುಖಾನ್ವಿಸೃಜ್ಯ ವಿಬುಧಾನ್ ಭ್ರೂಸಂಜ್ಞಯಾ ಕೇವಲಂ।
ಪಾರ್ವತ್ಯಾ ಸಹಿತೋ ಗಣೈರಭಿಮತೈಃ ಪ್ರಾಪ ಸ್ವಮಂತಃಪುರಂ
ಕ್ಷೋಣೀಭಾಗಮವಾತರತ್ ಪಶುಪತೇರಾಜ್ಞಾವಶಾದ್ರೇಣುಕಃ ॥೭೨॥

ಇತಿ ಶ್ರೀಸಿದ್ಧಾಂತಶಿಖಾಮಣೌ ಶಿವಸಭಾವರ್ಣನಂ ನಾಮ

ತೃತೀಯಪರಿಚ್ಛೇದಃ ಪರಿಸಮಾಪ್ತಃ

ಸಮಸ್ತಮಾನವರಿಗೆ ಮಂಗಲ (ಮೋಕ್ಷ) ದಾಯಕವೂ, ವೇದವೇದಾಂತಸಮ್ಮತವೂ ಆದ ಶಿವಾದ್ವೈತಸಿದ್ಧಾಂತವನ್ನು ಭೂಲೋಕದಲ್ಲಿ ಸ್ಥಾಪಿಸು. ॥೭೦॥ ನೀನು ಭೂವಲಯದಲ್ಲಿ ನನ್ನ ಮಹಿಮೆಯನ್ನೂ, ವಿಶೇಷವಾಗಿ ನನ್ನ ಭಕ್ತರ ಮಹಿಮೆಯನ್ನೂ ವೇದಮಾರ್ಗಾನುಸಾರವಾಗಿ ಪ್ರಕಾಶಪಡಿಸು. ॥೭೧॥ ಈ ಪ್ರಕಾರವಾಗಿ ಪರಮೇಶ್ವರನು ಶ್ರೀರೇಣುಕಗಣಾಧೀಶ್ವರನಿಗೆ ಆಜ್ಞೆಯನ್ನು ಮಾಡಿ, ಭದ್ರಾಸನದಿಂದ ಎದ್ದು, ಭ್ರೂಸಂಜ್ಞೆಯಿಂದ ಬ್ರಹ್ಮವಿಷ್ಣುಮೊದಲಾದ ದೇವತೆಗಳಿಗೆ ಹೋಗಲಿಕ್ಕೆ ಅಪ್ಪಣೆಯನ್ನು ಕೊಟ್ಟು, ನಂದ್ಯಾದಿಪ್ರಮಥಗಣದೊಡನೆ ಪಾರ್ವತೀಸಹಿತನಾಗಿ ತನ್ನ ಅಂತಃಪುರವನ್ನು ಪ್ರವೇಶಿಸಿದನು. ಇತ್ತ ಶ್ರೀರೇಣುಕಗಣಾಧೀಶ್ವರನು ಪರಮೇಶ್ವರನ ಆಜ್ಞಾನುಸಾರವಾಗಿ ಭೂಮಂಡಲದಲ್ಲಿ ಅವತರಿಸಿದನು. ॥೭೨॥

ಇಂತು ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಶಿವಸಭಾವರ್ಣನಾತ್ಮಕವಾದ

ಮೂರನೆಯ ಪರಿಚ್ಛೇದವು ಪರಿಸಮಾಪ್ತವಾದುದು.

ಶ್ರೀಜಗದ್ಗುರುರೇಣುಕಾಚಾರ್ಯಃ ಪ್ರಸೀದತು.

ಚತುರ್ಥಪರಿಚ್ಛೇದಃ

ಅಥ ತ್ರಿಲಿಂಗವಿಷಯೇ ಕುಲ್ಯಪಾಕಾಭಿಧೇ ಸ್ಥಲೇ ।
ಸೋಮೇಶ್ವರಮಹಾಲಿಂಗಾತ್ಪ್ರಾದುರಾಸೀತ್ ಸ ರೇಣುಕಃ ॥೧॥

ಪ್ರಾದುರ್ಭೂತಂ ತಮಾಲೋಕ್ಯ ಶಿವಲಿಂಗಾತ್ತ್ರಿಲಿಂಗಜಾಃ ।
ವಿಸ್ಮಿತಾಃ ಪ್ರಾಣಿನಃ ಸರ್ವೇ ಬಭೂವುರತಿತೇಜಸಂ ॥೨॥

ಭಸ್ಮೋದ್ಧೂಲಿತಸರ್ವಾಂಗಂ ಸಾರರುದ್ರಾಕ್ಷಭೂಷಣಂ ।
ಜಟಾಮುಕುಟಸಂಯುಕ್ತಂ ತ್ರಿಪುಂಡ್ರಾಂಕಿತಮಸ್ತಕಂ ॥೩॥

ಕಟೀತಟೀಸಟೀಭೂತಕಂಥಾಪಟಲಬಂಧುರಂ ।
ದಧಾನಂ ಯೋಗದಂಡಂ ಚ ಭಸ್ಮಾಧಾರಂ ಕಮಂಡಲುಂ ॥೪॥

ಶಿವಾದ್ವೈತಪರಿಜ್ಞಾನಪರಮಾನಂದಮೋದಿತಂ ।
ನಿರ್ಧೂತಸರ್ವಸಂಸಾರವಾಸನಾದೋಷಪಂಜರಂ ॥೫॥

ನಾಲ್ಕನೆಯ ಪರಿಚ್ಛೇದವು.

ಶ್ರೀರೇಣುಕಗಣಾಧೀಶ್ವರನ ಲಿಂಗಾವತಾರವರ್ಣನೆ.

ವ್ಯಾಖ್ಯಾನ—ಪರಮೇಶ್ವರನ ಅಪ್ಪಣೆಯಮೇರೆಗೆ ಶ್ರೀರೇಣುಕಗಣಾಧೀಶ್ವರನು ತ್ರಿಲಿಂಗ (ತೆಲಗು) ದೇಶದಲ್ಲಿ ಸುಪ್ರಸಿದ್ಧ ಶಿವಕ್ಷೇತ್ರವಾದ ಶ್ರೀಕುಲ್ಯಪಾಕಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಶ್ರೀಸೋಮೇಶ್ವರನಾಮಕಮಹಾಲಿಂಗದಿಂದ ಅವತರಿಸಿದನು. ॥೧॥ ತ್ರಿಲಿಂಗದೇಶದ ಜನರೆಲ್ಲರೂ, ಶಿವಲಿಂಗದಿಂದ ಅವತರಿಸಿದ ಮಹಾತೇಜಃಶಾಲಿಯಾದ ಶ್ರೀರೇಣುಕಗಣಾಧೀಶ್ವರನನ್ನು ನೋಡಿ, ಆಶ್ಚರ್ಯದಿಂದ ಕೂಡಿದವರಾದರು. ॥೨॥ ಭಸ್ಮಲಿಪ್ತವಾದ ಶರೀರವುಳ್ಳವನೂ, ರುದ್ರಾಕ್ಷಾಲಂಕೃತನೂ, ಜಟಾಮುಕುಟಮಂಡಿತನೂ, ತ್ರಿಪುಂಡ್ರಾಂಕಿತಮಸ್ತಕನೂ, ನಡುವಿನಲ್ಲಿ ವಸ್ತ್ರದಂತಿದ್ದ ಕಂಥೆಯಿಂದ ಮನೋಹರನಾದವನೂ, ಯೋಗದಂಡ-ಕಮಂಡಲು-ಭಸ್ಮಘುಂಟಿಕೆಗಳನ್ನು ಧರಿಸಿದವನೂ, ಶಿವಾದ್ವೈತಸಿದ್ಧಾಂತಜ್ಞಾನದಿಂದುಂಟಾದ ಪರಮಾನಂದವಲ್ಲಿ ಲೀನನಾದವನೂ, ಸಮಸ್ತಸಂಸಾರವಾಸನಾದೋಷಗಳ ಸಮೂಹದಿಂದ ದೂರನಾದವನೂ, ಶಿವಾಗಮ



ಶ್ರೀಕೊಸಲುಪಾಕಕ್ಷೇತ್ರವಿರಾಜಮಾನ ಶ್ರೀಸೋಮನಾಥಲಿಂಗದಿಂದ
ಶ್ರೀಜಗದ್ಗುರುರೇಣುಕಾಚಾರ್ಯರ ಅವತಾರ.

ಶಿವಾಗಮಸುಧಾಸಿಂಧುಸಮುನ್ಮೇಷಸುಧಾಕರಂ ।
ಚಿತ್ತಾರವಿಂದಸಂಗೂಢಶಿವಪಾದಾಂಬುಜದ್ವಯಂ ||೬||

ಯಮಾದಿಯೋಗತಂತ್ರಜ್ಞಂ ಸ್ವತಂತ್ರಂ ಸರ್ವಕರ್ಮಸು ।
ಸಮಸ್ತಸಿದ್ಧಸಂತಾನಸಮುದಾಯಶಿಖಾಮಣಿಂ ||೭||

ವೀರಸಿದ್ಧಾಂತನಿರ್ವಾಹಕೃತಪಟ್ಟನಿಬಂಧನಂ ।
ಆಲೋಕಮಾತ್ರನಿರ್ಭಿನ್ನಸಮಸ್ತಪ್ರಾಣಿಪಾತಕಂ ||೮||

ತಮಪೃಚ್ಛನ್ ಜನಾಃ ಸರ್ವೇ ನಮಂತಃ ಕೋ ಭವಾನಿತಿ ।
ಇತಿ ಪೃಷ್ಟೋ ಮಹಾಯೋಗೀ ಜನೈರ್ವಿಸ್ಮಿತಮಾನಸೈಃ ||೯||

ಪ್ರತ್ಯುವಾಚ ಶಿವಾದ್ವೈತಮಹಾನಂದಪರಾಯಣಃ ।
ಪಿನಾಕಿನಃ ಪಾರ್ಶ್ವವರ್ತೀ ರೇಣುಕಾಖ್ಯೋ ಗಣೇಶ್ವರಃ ||೧೦||

ಶಿವಾದೇಶಾನುಸಾರೇಣ ಶಿವಲಿಂಗಾದಿಹಾಭವಂ ।
ನಾಮ್ನಾ ರೇಣುಕಸಿದ್ಧೋಽಹಂ ಸಿದ್ಧಸಂತಾನನಾಯಕಃ ॥
ಸ್ವಚ್ಛಂದಚಾರೀ ಲೋಕೇಽಸ್ಮಿನ್ ಶಿವಸಿದ್ಧಾಂತಪಾಲಕಃ ||೧೧||

ರೂಪವಾದ ಅಮೃತಸಮುದ್ರದ ಅಭಿವೃದ್ಧಿಗೆ ಚಂದ್ರಸ್ವರೂಪನೂ, ತನ್ನ ಹೃದಯಕಮಲದಲ್ಲಿ ಪರಶಿವನ ಪಾದಕಮಲಗಳನ್ನು ಸದಾ ಸಂಬಂಧಿಸಿಕೊಂಡಿರುವವನೂ, ಯಮನಿಯಮಾದ್ಯಷ್ಟಾಂಗಯೋಗಸ್ವರೂಪವನ್ನು ತಿಳಿದವನೂ, ಸಮಸ್ತಸಿದ್ಧಕುಲಸಮುದಾಯಕ್ಕೆ ಶಿಖಾರತ್ನಸ್ವರೂಪನೂ, ವೀರಶೈವಸಿದ್ಧಾಂತವನ್ನು ನೆಲೆಗೊಳಿಸುವುದರಲ್ಲಿ ಪಟ್ಟವನ್ನು ಕಟ್ಟಿಕೊಂಡವನೂ, ದರ್ಶನಮಾತ್ರದಿಂದ ಸಮಸ್ತಪ್ರಾಣಿಗಳ ಪಾಪವನ್ನು ನಾಶಮಾಡತಕ್ಕವನೂ ಆದ ಶ್ರೀರೇಣುಕಾಚಾರ್ಯನನ್ನು ಕುರಿತು—ಆ ದೇವಾಲಯದಲ್ಲಿದ್ದ ಸಮಸ್ತಜನರು ಆಶ್ಚರ್ಯದಿಂದೊಡಗೂಡಿ ನಮಸ್ಕರಿಸುವಂಥವರಾಗಿ, ಎಲೈ ಮಹನೀಯನೇ! ನೀನು ಯಾರು ? ಎಂದು ಪ್ರಶ್ನಮಾಡಿದರು. ||೩-೪-೫-೬-೭-೮-೯ || ಶಿವಾದ್ವೈತಮಹಾನಂದದಲ್ಲಿ ಲೀನನಾದವನೂ, ಪರಮೇಶ್ವರನ ಪಾರ್ಶ್ವವರ್ತಿಯೂ ಆದ ಶ್ರೀರೇಣುಕಗಣೇಶ್ವರನು ಆ ಜನರನ್ನು ಕುರಿತು, ಈ ರೀತಿಯಾಗಿ ನುಡಿದನು. ||೧೦|| ಎಲೈ, ಜನಗಳಿರಾ! ನಾನು ಶ್ರೀಪರಮೇಶ್ವರನ ಅಪ್ಪಣೆಯಮೇರೆಗೆ ಪರಮಪವಿತ್ರವಾದೀ ಶಿವಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಈ ಶಿವಲಿಂಗದಿಂದ ಅವತರಿಸಿದೆನು. ನನ್ನ ಹೆಸರು "ರೇವಣಸಿದ್ಧ" ಎಂದಿರುವುದು. ನಾನು ಸಿದ್ಧರ ಸಮುದಾಯಕ್ಕೆಲ್ಲ ಅಧಿಪತಿಯಾಗಿದ್ದೇನೆ. ನಾನು ಈ ಲೋಕದಲ್ಲಿ ಸ್ವತಂತ್ರನಾಗಿದ್ದೇನೆ; ಮತ್ತು ಶಿವಾದ್ವೈತಸಿದ್ಧಾಂತವನ್ನು ರಕ್ಷಿಸುವವನಾಗಿದ್ದೇನೆ;

ಇತ್ಯುಕ್ತ್ವಾ ಪಶ್ಯತಾಂ ತೇಷಾಂ ವಿಷಯಸ್ಥಿರಚಕ್ಷುಷಾಂ ।
ಉತ್ಥಾಯ ವ್ಯೋಮಮಾರ್ಗೇಣ ಮಲಯಾದ್ರಿಮುಪಾಗಮತ್ ॥೧೨॥

ನವಚಂದನಕಾಂತಾರಕಂದಲನ್ಮಂದಮಾರುತಂ ।
ಅಭಂಗುರಭುಜಂಗಸ್ತ್ರೀಸಂಗೀತರಸಸಂಕುಲಂ ॥೧೩॥

ಕರಿಪೋತಕರಾಕೃಷ್ಟಸ್ಫುರದೇಲಾತಿವಾಸಿತಂ ।
ವರಾಹದಂಷ್ಟ್ರಿಕಾಧ್ವಸ್ತಮುಸ್ತಾಸುರಭಿಕಂದರಂ ॥೧೪॥

ಪಟೀರದಲಪರ್ಯಂಕಪ್ರಸುಪ್ತವ್ಯಾಧದಂಪತಿಂ ।
ಮಾಧವೀಮಲ್ಲಿಕಾಜಾತೀಮಂಜರೀರೇಣುರಂಜಿತಂ ॥೧೫॥

ತತ್ರ ಕುತ್ರಚಿದಾಭೋಗೇ ಸರ್ವರ್ತುಕುಸುಮದ್ರುಮೇ ।
ಅಪಶ್ಯದಾಶ್ರಮಂ ದಿವ್ಯಮಗಸ್ತ್ಯಸ್ಯ ಮಹಾಮುನೇಃ ॥೧೬॥

ಎಂದು ನುಡಿದು, ಆ ಜನರು ಅನಿಮಿಷದೃಷ್ಟಿಯಿಂದ ನೋಡುತ್ತಿರಲು, ಗಗನಮಾರ್ಗದಿಂದ ಮಲಯಪರ್ವತವನ್ನು ಕುರಿತು ಪ್ರಯಾಣಮಾಡಿದನು. ॥ ೧೧-೧೨ ॥

ಮಲಯಪರ್ವತದ ವರ್ಣನೆ.

ಆ ಮಲಯಪರ್ವತವು ನೂತನವಾದ ಶ್ರೀಗಂಧದ ವನದಲ್ಲಿ ಸಂಚರಿಸುತ್ತಿರುವ ಮಂದಮಾರುತದಿಂದ ಕೂಡಿರುವುದಾಗಿಯೂ, ಹೆಣ್ಣುಸರ್ಪಗಳ ಗಾನರಸದಿಂದ ವ್ಯಾಪ್ತವಾದುದಾಗಿಯೂ, ಆನೆಯ ಮರಿಗಳ ಸೊಂಡಿಲುಗಳಿಂದ ಎಳೆಯಲ್ಪಟ್ಟ ಯಾಲಕ್ಕಿಯ ಬಳ್ಳಿಗಳಿಂದ ಬಹುಸುಗಂಧವುಳ್ಳದಾಗಿಯೂ, ಕಾಡುಹಂದಿಗಳ ಕೋರೆಗಳಿಂದ ನಾಶಮಾಡಲ್ಪಟ್ಟ ಜೇಕಿನಗಡ್ಡೆಗಳಿಂದ ಸುಗಂಧಿತವಾದ ಗವಿಗಳುಳ್ಳದಾಗಿಯೂ, ಚಂದನವೃಕ್ಷದ ಎಲೆಗಳಿಂದ ರಚಿಸಲ್ಪಟ್ಟ ಮಂಚದಲ್ಲಿ ಮಲಗಿದ ವ್ಯಾಧದಂಪತಿಗಳಿಂದ ಕೂಡಿದುದಾಗಿಯೂ, ಮಾಧವೀಕುಸುಮ-ಮಲ್ಲಿಕಾ (ಮಲ್ಲಿಗೆ) ಕುಸುಮ-ಜಾಜೀಕುಸುಮಗಳ ಗೊಂಚಲುಗಳಿಂದ ಹೊರಹೊರಟ ಧೂಳಿಯಿಂದ ಸುಗಂಧಿತವಾಗಿಯೂ ಪರಿಶೋಭಿಸುತ್ತಿರುವುದು. ॥೧೩-೧೪-೧೫॥

ಅಗಸ್ತ್ಯಮಹರ್ಷಿಯ ಆಶ್ರಮದ ವರ್ಣನೆ.

ವಸಂತಾದಿಷಡೃತುಗಳಲ್ಲಾಗತಕ್ಕ ಸಕಲವಿಧಪುಷ್ಪಗಳಿಂದ ಯುಕ್ತವಾದ ವೃಕ್ಷಗಳಿಂದ ಪರಿಶೋಭಿಸುತ್ತಿರುವ ಆ ಮಲಯಪರ್ವತದ ಒಂದಾನೊಂದು ಪ್ರದೇಶದಲ್ಲಿ, ಶ್ರೀಜಗದ್ಗುರುರೇಣುಕಾಚಾರ್ಯನು ಅಗಸ್ತ್ಯಮಹರ್ಷಿಯ ಭವ್ಯವಾದ ಆಶ್ರಮವನ್ನು

ಮಂದಾರಚಂದನಪ್ರಾಯೈರ್ಮಂಡಿತಂ ತರುಮಂಡಲೈಃ ।
ಶಾಖಾಶಿಖರಸಂಲೀನತಾರಕಾಗಣಕೋರಕೈಃ ॥೧೭॥
ಮುನಿಕನ್ಯಾಕರಾನೀತಕಲಶಾಂಬುವಿವರ್ಧಿತೈಃ ।
ಆಲವಾಲಜಲಾಸ್ವಾದಮೋದಮಾನಮೃಗೀಗಣೈಃ ॥೧೮॥
ಹೇಮಾರವಿಂದನಿಷ್ಯಂದಮಕರಂದಸುಗಂಧಿಭಿಃ ।
ಮರಾಲಾಲಾಪವಾಚಾಲವೀಚಿಮಾಲಾಮನೋಹರೈಃ ॥೧೯॥
ಇಂದೀವರವರಜ್ಯೋತಿರಂಧೀಕೃತಹರಿನ್ಮುಖೈಃ ।
ಲೋಪಾಮುದ್ರಾಪದನ್ಯಾಸಚರಿತಾರ್ಥತಟಾಂಕಿತೈಃ ॥೨೦॥
ಹಾರನೀಹಾರಕರ್ಪೂರಹರಹಾಸಾಮಲೋದಕೈಃ ।
ನಿತ್ಯನೈಮಿತ್ತಿಕಸ್ನಾನನಿಯಮಾರ್ಥೈಸ್ತಪಸ್ವಿನಾಂ ॥೨೧॥
ಪ್ರಕೃಷ್ಟಮಣಿಸೋಪಾನೈಃ ಪರಿವೀತಂ ಸರೋವರೈಃ ।
ವಿಮುಕ್ತಸತ್ವವೈರಸ್ಯಂ ಬ್ರಹ್ಮಲೋಕಮಿವಾಪರಂ ॥೨೨॥

ನೋಡಿದನು. ||೧೬|| ಆ ಆಶ್ರಮವು ಟೊಂಗೆಗಳ ಅಗ್ರಭಾಗಗಳಲ್ಲಿ ನಕ್ಷತ್ರಸಮೂಹದಂತಿರುವ ಮೊಗ್ಗೆಗಳಿಂದ ಕೂಡಿದವುಗಳಾಗಿಯೂ, ಮುನಿಕನ್ಯೆಯರ ಹಸ್ತದಿಂದೆರೆದ ನೀರಿನಿಂದ ಬೆಳೆದವುಗಳಾಗಿಯೂ, ಪಾತಿ (ಮಡಿ) ಗಳಲ್ಲಿ ನಿಂತಿರುವ ನೀರನ್ನು ಕುಡಿದು ಸಂತೋಷದಿಂದಿರುವ ಹೆಣ್ಣುಜಿಗರೆಗಳ ಗುಂಪಿನಿಂದ ಕೂಡಿದವುಗಳಾಗಿಯೂ ಇರುವ ವೃಕ್ಷಗಳ ಸಮುದಾಯದಿಂದ ಅಲಂಕೃತವಾಗಿದ್ದಿತು. || ೧೭-೧೮ || ಸುವರ್ಣಕಮಲಗಳಿಂದ ಸೋರುತ್ತಿರುವ ಮಕರಂದದಿಂದ ಸುಗಂಧವಿಶಿಷ್ಟವಾದುವುಗಳೂ, ರಾಜಹಂಸಗಳ ಮಧುರಧ್ವನಿಯಿಂದ ಶಬ್ದಾಯಮಾನವಾದ ತರಂಗಗಳ ಪಂಕ್ತಿಯಿಂದ ಮನೋಹರವಾದುವುಗಳೂ || ೧೯ || ನೀಲಕಮಲಗಳ ಕಾಂತಿಯಿಂದ ದಶದಿಕ್ಕುಗಳನ್ನು ಅಂಧಕಾರವಿಶಿಷ್ಟವನ್ನಾಗಿ ಮಾಡಿದುವುಗಳೂ, ಅಗಸ್ತ್ಯಮಹರ್ಷಿಯ ಧರ್ಮಪತ್ನಿಯಾದ ಲೋಪಾಮುದ್ರೆಯ ಚರಣಸಂಚರಣದಿಂದ ಕೃತಾರ್ಥವಾದ ದಂಡೆಗಳುಳ್ಳವುಗಳೂ ||೨೦|| ಮುತ್ತಿನಸರ-ಮಂಜಿನಗಡ್ಡೆ-ಕರ್ಪೂರ-ಶಿವನ ಮಂದಹಾಸ ಇವುಗಳಂತೆ ಅತ್ಯಂತಶುಭ್ರವಾದ ಉದಕವುಳ್ಳವುಗಳೂ, ತಪಸ್ವಿಗಳ ನಿತ್ಯನೈಮಿತ್ತಿಕಸ್ನಾನಕ್ಕಾಗಿ ನಿಯಮಿತವಾದುವುಗಳೂ ||೨೧|| ಶ್ರೇಷ್ಠವಾದ ರತ್ನಗಳಿಂದ ವಿರಚಿತವಾದ ಸೋಪಾನವುಳ್ಳವುಗಳೂ ಆದ ಸರೋವರಗಳಿಂದ ಆವರಿಸಲ್ಪಟ್ಟಿದ್ದೂ, ನಾನಾವಿಧಪ್ರಾಣಿಗಳ ಪರಸ್ಪರವೈರಭಾವದಿಂದ ದೂರೀಕೃತ

ಹೂಯಮಾನಾಜ್ಯಸಂತಾನಧೂಮಗಂಧಿಮಹಾಸ್ಥಲಂ ।
ಶುಕಸಂಸತ್ಸಮಾರಬ್ಧಶ್ರುತಿಶಾಸ್ತ್ರೋಪಬೃಂಹಣಂ ॥೨೩॥

ತಸ್ಯ ಮಧ್ಯೇ ಸಮಾಸೀನಂ ಮೂಲೇ ಚಂದನಭೂರುಹಃ ।
ಸುಕುಮಾರದಲಚ್ಛಾಯಾವಾರಿತಾದಿತ್ಯತೇಜಸಃ ॥೨೪॥

ತಡಿತ್ಪಿಂಗಜಟಾಭಾರೈಸ್ತ್ರಿಪುಂಡ್ರಾಂಕಿತಮಸ್ತಕೈಃ ।
ಭಸ್ಮೋದ್ಧೂಲಿತಸರ್ವಾಂಗೈಃ ಸ್ಫುರದ್ರುದ್ರಾಕ್ಷಭೂಷಣೈಃ ॥೨೫॥

ನವವಲ್ಕಲವಾಸೋಭಿರ್ನಾನಾನಿಯಮಧಾರಿಭಿಃ ।
ಪರಿವೀತಂ ಮುನಿಗಣೈಃ ಪ್ರಮಥೈರಿವ ಶಂಕರಂ ॥೨೬॥

ಸಮುಜ್ಜ್ವಲಜ್ಜಟಾಜಾಲೈಸ್ತಪಃಪಾದಪಪಲ್ಲವೈಃ ।
ಸ್ಫುರತ್ಸೌದಾಮಿನೀಕಲ್ಪೈರ್ಜ್ವಾಲಾಜಾಲೈರಿವಾನಲಂ ॥೨೭॥

ವಿಶುದ್ಧಭಸ್ಮಕೃತಯಾ ತ್ರಿಪುಂಡ್ರಾಂಕಿತರೇಖಯಾ ।
ತ್ರಿಸ್ರೋತಸೇವ ಸಂಬದ್ಧಶಿಲಾಭಾಗಂ ಹಿಮಾಚಲಂ ॥೨೮॥

ವಾದುದೂ, ಎರಡನೆಯ ಬ್ರಹ್ಮಲೋಕದಂತೊಪ್ಪುತ್ತಿರುವುದೂ ॥೨೨॥ ಯಜ್ಞದಲ್ಲಿ ಹವನಮಾಡತಕ್ಕ ತುಪ್ಪದಿಂದ ಉತ್ಪನ್ನವಾದ ಹೊಗೆಯಿಂದ ಸುಗಂಧಿತವಾದ ಮಹಾಸ್ಥಲವುಳ್ಳುದೂ, ಗಿಣಿಗಳ ಸಮೂಹದಿಂದ ಮಾಡಲ್ಪಡುತ್ತಿರುವ ವೇದವಿಚಾರ ಶಾಸ್ತ್ರಾರ್ಥವಿಚಾರಗಳುಳ್ಳುದೂ ಆಗಿ ವಿರಾಜಿಸುತ್ತಿದ್ದಿತು. ॥೨೩॥

ಅಗಸ್ತ್ಯಮಹರ್ಷಿಯ ವರ್ಣನೆ.

ಆ ಆಶ್ರಮದ ಮಧ್ಯದಲ್ಲಿರುವ ಕೋಮಲವಾದ ಎಲೆಗಳ ನೆರಳಿನಿಂದ ಸೂರ್ಯರಶ್ಮಿಯನ್ನು ನಿವಾರಿಸುತ್ತಿದ್ದ ಶ್ರೀಗಂಧವೃಕ್ಷದ ಬುಡದಲ್ಲಿ ಕುಳಿತಿರುವವನೂ ॥೨೪॥ ಮಿಂಚಿನಂತೆ ಪಿಂಗಲವರ್ಣವುಳ್ಳ ಜಡೆಗಳಿಂದ ಯುಕ್ತರಾದವರೂ, ಮಸ್ತಕದಲ್ಲಿ ಭಸ್ಮತ್ರಿಪುಂಡ್ರವನ್ನು ಧರಿಸಿರುವವರೂ, ಸರ್ವಾವಯವಗಳಲ್ಲಿ ಭಸ್ಮೋದ್ಧೂಲನವನ್ನು ಮಾಡಿಕೊಂಡವರೂ, ಪ್ರಕಾಶಮಾನವಾದ ರುದ್ರಾಕ್ಷಗಳೇ ಆಭರಣವಾಗುಳ್ಳವರೂ ॥೨೫॥ ನೂತನವಾದ ನಾರುಬಟ್ಟೆಗಳನ್ನುಟ್ಟುಕೊಂಡವರೂ, ನಾನಾವ್ರತಧಾರಿಗಳೂ ಆದ ಮುನಿಗಳಿಂದ, ಪ್ರಮಥರಿಂದ ಪರಮೇಶ್ವರನು ಆವೃತನಾದಂತೆ ಆವೃತನಾದವನೂ ॥೨೬॥ ಮಿಂಚಿಗೆ ಸಮಾನವಾದ ಜ್ವಾಲಾಮಾಲೆಯಿಂದ ಅಗ್ನಿಯು ಶೋಭಿಸುತ್ತಿರುವಂತೆ ಪ್ರಕಾಶಮಾನವಾದ ಜಟಾಜಾಲದಿಂದ ಶೋಭಿಸುವವನೂ ॥೨೭॥ ಗಂಗಾನದಿಯ ಮೂರು ಪ್ರವಾಹಗಳಿಂದ ಕೂಡಿದ ಶಿಲಾಪ್ರದೇಶ

ಭಸ್ಮಾಲಂಕೃತಸರ್ವಾಂಗಂ ಶಶಾಂಕಮಿವ ಭೂಗತಂ ।
ವಸಾನಂ ವಲ್ಕಲಂ ನವ್ಯಂ ಬಾಲಾತಪಸಮಪ್ರಭಂ ॥೨೯॥

ವಡವಾಗ್ನಿಶಿಖಾಜಾಲಸಮಾಲೀಢಮಿವಾರ್ಣವಂ ।
ಸರ್ವಾಸಾಮಪಿ ವಿದ್ಯಾನಾಂ ಸಮುದಾಯನಿಕೇತನಂ ॥೩೦॥

ನ್ಯಕ್ಕೃತಪ್ರಾಕೃತಾಹಂತಂ ನಿರೂಢಶಿವಭಾವನಂ ।
ತೃಣೀಕೃತಜಗಜ್ಜಾಲಂ ಸಿದ್ಧೀನಾಮುದಯಸ್ಥಲಂ ॥೩೧॥

ಮೋಹಾಂಧಕಾರತಪನಂ ಮೂಲಬೋಧಮಹೀರುಹಂ ।
ದದರ್ಶ ಸ ಮಹಾಯೋಗೀ ಮುನಿಂ ಕಲಶಸಂಭವಂ ॥೩೨॥

ತಮಾಗತಂ ಮಹಾಸಿದ್ಧಂ ಸಮೀಕ್ಷ್ಯ ಕಲಶೋದ್ಭವಃ ।
ಗಣೇಂದ್ರಂ ರೇಣುಕಾಭಿಖ್ಯಂ ವಿವೇದ ಜ್ಞಾನಚಕ್ಷುಷಾ ॥
ತಸ್ಯಾನುಭಾವಂ ವಿಜ್ಞಾಯ ಸಹಸೈವ ಸಮುತ್ಥಿತಃ ॥೩೩॥

ದಿಂದ ಹಿಮವತ್ಪರ್ವತವು ಶೋಭಿಸುತ್ತಿರುವಂತೆ, ಅತ್ಯಂತಶುಭ್ರವಾದ ಭಸ್ಮದಿಂದ ವಿರಚಿತವಾದ ಮೂರು ರೇಖೆಗಳಿಂದ ಶೋಭಿಸುತ್ತಿರುವವನೂ ॥೨೮॥ ಭಸ್ಮದಿಂದ ಅಲಂಕೃತವಾದ ಸರ್ವಾವಯವಗಳುಳ್ಳವನೂ, ಭೂಮಿಗವತರಿಸಿದ ಚಂದ್ರನಂತಿರುವವನೂ, ಹೊಸನಾರುಬಟ್ಟೆಯನ್ನುಟ್ಟುಕೊಂಡವನೂ, ಹೂಬಿಸಿಲಿಗೆ ಸಮಾನವಾದ ಕಾಂತಿಯುಳ್ಳವನೂ ॥೨೯॥ ವಡವಾಗ್ನಿಯ ಜ್ವಾಲಾಜಾಲದಿಂದ ವ್ಯಾಪ್ತವಾದ ಸಮುದ್ರದಂತಿರುವವನೂ, ಸಮಸ್ತವಿದ್ಯೆಗಳಿಗೆ ಮಂದಿರಸ್ವರೂಪನೂ ॥೩೦॥ ಪ್ರಾಕೃತಶರೀರಾಹಂಕಾರವನ್ನು ತಿರಸ್ಕರಿಸಿದವನೂ, ಶಿವಭಾವದಲ್ಲಿ ಲೀನನಾದವನೂ, ಜಗಜ್ಜಾಲವನ್ನು ತೃಣೀಕರಿಸಿದವನೂ, ಸಮಸ್ತಸಿದ್ಧಿಗಳಿಗೆ ಉತ್ಪತ್ತಿಸ್ಥಾನಭೂತನೂ ॥೩೧॥ ಮೋಹವೆಂಬ ಅಂಧಕಾರಕ್ಕೆ ಸೂರ್ಯಸ್ವರೂಪನೂ, ಸ್ವಸ್ವರೂಪ ಜ್ಞಾನಕ್ಕೆ ಕಲ್ಪವೃಕ್ಷಸದೃಶನೂ ಆದ ಅಗಸ್ತ್ಯಮಹರ್ಷಿಯನ್ನು ಶ್ರೀರೇಣುಕಗಣಾಧೀಶ್ವರನು ಕಂಡನು. ॥೩೨॥ ಅಗಸ್ತ್ಯನು, ತನ್ನ ಆಶ್ರಮಕ್ಕೆ ಆಗಮಿಸಿದ ಸಿದ್ಧಕುಲಪತಿಯನ್ನು ನೋಡಿ, ಜ್ಞಾನನೇತ್ರದಿಂದ ಈತನು ಶ್ರೀರೇಣುಕಗಣಾಧೀಶ್ವರನೆಂದು ತಿಳಿದುಕೊಂಡನಲ್ಲದೆ, ಈತನ ಮಹಿಮೆಯನ್ನು ತಿಳಿದು ಕೂಡಲೆ ಎದ್ದು ನಿಂತನು. ॥೩೩॥ ಲೋಪಾಮುದ್ರೆಯ ಹಸ್ತದಿಂದ ತರಲ್ಪಟ್ಟ ಪರಮಪವಿತ್ರವಾದ

ಲೋಪಾಮುದ್ರಾಕರಾನೀತೈರುದಕೈರತಿಪಾವನೈಃ ।
ಪಾದೌ ಪ್ರಕ್ಷಾಲಯಾಮಾಸ ಸ ತಸ್ಯ ಶಿವಯೋಗಿನಃ ॥೩೪॥

ಸಂಪೂಜ್ಯ ತಂ ಯಥಾಶಾಸ್ತ್ರಂ ತನ್ನಿಯೋಗಪುರಸ್ಸರಂ ।
ಮುನಿರ್ವಿನಯಸಂಪನ್ನೋ ನಿಷಸಾದಾಸನಾಂತರೇ ॥೩೫॥

ಸಮಾಸೀನಂ ಮುನಿವರಂ ಸರ್ವತೇಜಸ್ವಿನಾಂ ವಿಭುಂ ।
ಉವಾಚ ಶಾಂತಯಾ ವಾಚಾ ರೇವಣಃ ಸಿದ್ಧಶೇಖರಃ ॥೩೬॥

ನಿರ್ವಿಘ್ನಂ ವರ್ತಸೇ ಕಿಂ ನು ನಿತ್ಯಾ ತೇ ನಿಯಮಕ್ರಿಯಾ ? ।
ಅಥವಾಽಗಸ್ತ್ಯ ತೇಜಸ್ವಿನ್ ಕುತಃ ಸ್ಯುಸ್ತೇಽಂತರಾಯಕಾಃ ॥೩೭॥

ವಿಂಧ್ಯೋ ನಿರುದ್ಧೋ ಭವತಾ ವಿಶ್ವೋಲ್ಲಂಘನವಿಭ್ರಮಃ ।
ನಹುಷೋ ರೋಷಲೇಶಾತ್ತೇ ಸದ್ಯಃ ಸರ್ಪತ್ವಮಾಗತಃ ॥೩೮॥

ಆಚಾಂತಾ ಭವತಾ ಪೂರ್ವಂ ಪಂಕಶೇಷಾಃ ಪಯೋಧಯಃ ।
ಜೀರ್ಣಸ್ತೇ ಜಾಠರೇ ವಹ್ನೌ ದೃಪ್ತೋ ವಾತಾಪಿದಾನವಃ ॥೩೯॥

ಉದಕದಿಂದ ಅಗಸ್ತ್ಯಮಹರ್ಷಿಯು ಶಿವಯೋಗಿಶಿಖಾಮಣಿಯಾದ ಶ್ರೀರೇಣುಕಾಚಾರ್ಯನ ಪಾದಕಮಲಗಳನ್ನು ತೊಳೆದು ಶಾಸ್ತ್ರವಿಧಿಗನುಸಾರವಾಗಿ ಪೂಜಿಸಿದನು. ಬಳಿಕ ಅಸಾಧಾರಣವಿನಯದಿಂದ ಕೂಡಿದ ಅಗಸ್ತ್ಯಮಹರ್ಷಿಯು ಶ್ರೀರೇಣುಕಾಚಾರ್ಯನ ಅಪ್ಪಣೆಯಮೇರೆಗೆ ಬೇರೆ ಆಸನದಲ್ಲಿ ಕುಳಿತನು. ॥೩೪-೩೫॥ ಸಿದ್ಧಕುಲಶಿಖಾಮಣಿಯಾದ ಶ್ರೀರೇವಣಸಿದ್ಧನು ಸಮಸ್ತತೇಜಸ್ವಿಪುರುಷರಲ್ಲಿ ಅಗ್ರಗಣ್ಯನಾದ ಆ ಮುನಿಶ್ರೇಷ್ಠನನ್ನು ಕುರಿತು ಶಾಂತವಾಣಿಯಿಂದ ಈ ರೀತಿಯಾಗಿ ನುಡಿದನು. ॥೩೬॥ ಎಲೈ, ತೇಜಸ್ವಿಯಾದ ಅಗಸ್ತ್ಯನೇ! ಸುಖವಾಗಿ ಇರುವೆಯಾ ? ನಿನ್ನ ನಿತ್ಯನಿಯಮಕ್ರಿಯೆಗಳು ಸರಿಯಾಗಿ ನಡೆಯುತ್ತಿವೆಯೋ ? ಅಥವಾ ನಿನಗೆ ವಿಘ್ನಗಳು ಎಲ್ಲಿಂದ ಬರಬಹುದು ? ॥೩೭॥ ಅಸಾಧ್ಯವಾಗಿ ಬೆಳೆಯುತ್ತ ಬೆಳೆಯುತ್ತ ಜಗತ್ತಿನ ಉಲ್ಲಂಘನದಲ್ಲಿ ಆಸಕ್ತವಾದ ವಿಂಧ್ಯಪರ್ವತವನ್ನು ನೀನು ಭೂಮಿಯಲ್ಲಿ ಮಲಗಿಸಿಬಿಟ್ಟೆ; ನಹುಷಚಕ್ರವರ್ತಿಯು ನಿನ್ನ ಸ್ವಲ್ಪ ಕೋಪಕ್ಕೀಡಾಗಿ ಕೂಡಲೆ ಸರ್ಪಶರೀರವನ್ನು ಧರಿಸಿದನು. ॥೩೮॥ ಪೂರ್ವದಲ್ಲಿ ಸಮಸ್ತ ಸಮುದ್ರಗಳು ನಿನ್ನಿಂದ ಕೆಸರು ಮಾತ್ರ ಉಳಿಯುವಂಥವುಗಳಾಗಿ ಪಾನಮಾಡಲ್ಪಟ್ಟವು. ಮದೋನ್ಮತ್ತನಾದ ವಾತಾಪಿನಾಮಕ ದೈತ್ಯನು ನಿನ್ನ ಜಠರಾಗ್ನಿಯಲ್ಲಿ ಸಿಲುಕಿ ಬೆಂದುಹೋದನು. ॥೩೯॥

ಏವಂವಿಧಾನಾಂ ಚಿತ್ರಾಣಾಂ ಸರ್ವಲೋಕಾತಿಶಾಯಿನಾಂ ।
ಕೃತ್ಯಾನಾಂ ತು ಭವಾನ್ ಕರ್ತಾ ಕಸ್ತೇಽಗಸ್ತ್ಯ ಸಮಪ್ರಭಃ ॥೪೦॥
ಶಿವಾದ್ವೈತಪರಾನಂದಪ್ರಕಾಶನಪರಾಯಣಂ ।
ಭವಂತಮೇಕಂ ಶಂಸಂತಿ ಪ್ರಕೃತ್ಯಾ ಸಂಗವರ್ಜಿತಂ ॥೪೧॥
ಪುರಾ ಹೈಮವತೀಸೂನುರವದತ್ತೇ ಷಡಾನನಃ ।
ಶಿವಧರ್ಮೋತ್ತರಂ ನಾಮ ಶಾಸ್ತ್ರಮೀಶ್ವರಭಾಷಿತಂ ॥೪೨॥
ಭಕ್ತಿಃ ಶೈವೀ ಮಹಾಘೋರಸಂಸಾರಭಯಹಾರಿಣೀ ।
ತ್ವಯಾ ರಾಜನ್ವತೀ ಲೋಕೇ ಜಾತಾಽಗಸ್ತ್ಯಮಹಾಮುನೇ ॥೪೩॥
ಇತಿ ತಸ್ಯ ವಚಃ ಶ್ರುತ್ವಾ ಸಿದ್ಧಸ್ಯ ಮುನಿಪುಂಗವಃ ।
ಗಂಭೀರಗುಣಯಾ ವಾಚಾ ಬಭಾಷೇ ಭಕ್ತಿಪೂರ್ವಕಂ ॥೪೪॥
ಅಹಮೇವ ಮುನೀಂದ್ರಾಣಾಂ ಲಾಲನೀಯೋಽಸ್ಮಿ ಸರ್ವದಾ ।
ಭವದಾಗಮಸಂಪತ್ತಿರ್ಮಾಂ ವಿನಾ ಕಸ್ಯ ಸಂಭವೇತ್ ? ॥೪೫॥

ಎಲೈ, ಅಗಸ್ತ್ಯನೇ! ಈ ಪ್ರಕಾರವಾಗಿರುವ ಅಲೌಕಿಕವಾದ ವಿಚಿತ್ರಕಾರ್ಯಗಳನ್ನು ನೀನು ಮಾಡಿರುವೆ; ಆದುದರಿಂದ ನಿನಗೆ ಈ ಭೂಲೋಕದಲ್ಲಿ ಸಮಾನರು ಯಾರೂ ಇರುವುದಿಲ್ಲ. ॥೪೦॥ ಈ ಲೋಕವಲ್ಲಿರುವ ಜನರು ನಿನ್ನೊಬ್ಬನನ್ನೇ ಶಿವಾದ್ವೈತಾನುಭವದಿಂದುಂಟಾದ ಆನಂದವನ್ನು ಪ್ರಕಾಶಪಡಿಸುವುದರಲ್ಲಿ ಆಸಕ್ತನನ್ನಾಗಿಯೂ, ಪ್ರಕೃತಿಸಂಬಂಧರಹಿತನನ್ನಾಗಿಯೂ ಹೊಗಳುತ್ತಿರುವರು. ॥೪೧॥ ಪೂರ್ವದಲ್ಲಿ ಪಾರ್ವತೀಪುತ್ರನಾದ ಷಣ್ಮುಖನು ನಿನಗೆ ಶಿವಪ್ರೋಕ್ತವಾದ ಶಿವಧರ್ಮೋತ್ತರನಾಮಕಶಾಸ್ತ್ರವನ್ನು ಉಪದೇಶಿಸಿದನು. ॥೪೨॥ ಎಲೈ, ಅಗಸ್ತ್ಯಮಹರ್ಷಿಯೇ! ಘೋರವಾದ ಸಂಸಾರಭಯವನ್ನು ನಾಶಮಾಡತಕ್ಕಂಥ ಶಿವಭಕ್ತಿಯು ನಿನ್ನಿಂದಲೇ ಈ ಲೋಕದಲ್ಲಿ ಪ್ರಕಾಶಿಸುವಂಥದಾಯಿತು. ॥೪೩॥ ಈ ಪ್ರಕಾರವಾಗಿ ನುಡಿದ ಶ್ರೀರೇಣುಕಗಣಾಧೀಶ್ವರನ ಮಾತುಗಳನ್ನು ಕೇಳಿ, ಅಗಸ್ತ್ಯಮಹರ್ಷಿಯು ಅತ್ಯಂತಭಕ್ತಿಪೂರ್ವಕವಾಗಿ ಗಂಭೀರವಾಣಿಯಿಂದ ಈ ರೀತಿಯಾಗಿ ಮಾತನಾಡಿದನು. ॥೪೪॥

ಅಗಸ್ತ್ಯಮಹರ್ಷಿಯ ವಿಜ್ಞಾಪನೆ.

ಎಲೈ, ಆಚಾರ್ಯನೇ! ನಿನ್ನ ಆಗಮನರೂಪವಾದ ಸಂಪತ್ತು ನನ್ನ ಹೊರತು ಇನ್ನಾರಿಗೆ ಸಂಭವಿಸುವುದು? ಆದುದರಿಂದಲೇ ಮುನಿಶ್ರೇಷ್ಠರಿಗೆಲ್ಲಾ ಯಾವಾಗಲೂ ನಾನೇ ಶ್ಲಾಘನೀಯನಾಗಿದ್ದೇನೆ. ॥೪೫॥ ನಿನ್ನ ದರ್ಶನದಿಂದೊದಗಿದ

ಸ್ಥಿರಮದ್ಯ ಶಿವಜ್ಞಾನಂ ಸ್ಥಿರಾ ಮೇ ತಾಪಸಕ್ರಿಯಾ ।
ಭವದ್ದರ್ಶನಪುಣ್ಯೇನ ಸ್ಥಿರಾ ಮೇ ಮುನಿರಾಜತಾ ॥೪೬॥

ಸಂಸಾರಸರ್ಪದಷ್ಟಾನಾಂ ಮೂರ್ಛಿತಾನಾಂ ಶರೀರಿಣಾಂ ।
ಕಟಾಕ್ಷಸ್ತವ ಕಲ್ಯಾಣಂ ಸಮುಜ್ಜೀವನಭೇಷಜಂ ॥೪೭॥

ಸಮಸ್ತಲೋಕಸಂದಾಹತಾಪತ್ರಯಮಹಾನಲಃ ।
ತ್ವತ್ಪದಾಂಬುಕಣಾಸ್ವಾದಾದುಪಶಾಮ್ಯತಿ ದೇಹಿನಾಂ ॥೪೮॥

ರೇಣುಕಂ ತ್ವಾಂ ವಿಜಾನಾಮಿ ಗಣನಾಥಂ ಶಿವಪ್ರಿಯಂ ।
ಅವತೀರ್ಣಮಿಮಾಂ ಭೂಮಿಂ ಮದನುಗ್ರಹಕಾಂಕ್ಷಯಾ ॥೪೯॥

ಭವಾದೃಶಾನಾಂ ಸಿದ್ಧಾನಾಂ ಪ್ರಬೋಧಧ್ವಸ್ತಜನ್ಮನಾಂ ।
ಪ್ರವೃತ್ತಿರೀದೃಶೀ ಲೋಕೇ ಪರಾನುಗ್ರಹಕಾರಿಣೀ ॥೫೦॥

ತ್ವನ್ಮುಖಾಚ್ಛ್ರೋತುಮಿಚ್ಛಾಮಿ ಸಿದ್ಧಾಂತಂ ಶ್ರುತಿಸಮ್ಮತಂ ।
ಸರ್ವಜ್ಞ ವದ ಮೇ ಸಾಕ್ಷಾಚ್ಛೈವಂ ಸರ್ವಾರ್ಥಸಾಧಕಂ ॥೫೧॥

ಪುಣ್ಯವಿಶೇಷದಿಂದ ಇಂದಿಗೆ ನನ್ನ ಶಿವಜ್ಞಾನವು ಸ್ಥಿರವಾಯಿತು. ಇಂದಿಗೆ ನನ್ನ ತಪಃಕ್ರಿಯೆಯು ಸ್ಥಿರವಾಯಿತು. ಇಂದಿಗೆ ನನ್ನ ಮುನಿಸಾರ್ವಭೌಮತ್ವವು ಸ್ಥಿರವಾಯಿತು. ॥೪೬॥ ಸಂಸಾರರೂಪವಾದ ಸರ್ಪದಿಂದ ಕಡಿಸಿಕೊಂಡು ಮೂರ್ಛಿತರಾಗಿರುವ ಮಾನವರಿಗೆ ನಿನ್ನ ಕಲ್ಯಾಣಕಟಾಕ್ಷವೇ ಸಂಜೀವನೌಷಧವಾಗಿದೆ. ॥೪೭॥ ಸಮಸ್ತಲೋಕಗಳನ್ನು ಸುಡತಕ್ಕ ಆಧ್ಯಾತ್ಮಿಕ-ಆಧಿಭೌತಿಕ-ಆಧಿದೈವಿಕತಾಪರೂಪವಾದ ಪ್ರಚಂಡಾಗ್ನಿಯು ನಿನ್ನ ಪಾದೋದಕದ ಒಂದು ಬಿಂದುಮಾತ್ರಸೇವನೆಯಿಂದಲೇ ಶಾಂತವಾಗುತ್ತದೆ. ॥೪೮॥ ಶಿವಪ್ರೀತಿಪಾತ್ರನೂ ಪ್ರಮಥಾಧಿಪತಿಯೂ ಆದ ಎಲೈ, ರೇಣುಕಗಣಾಧೀಶ್ವರನೇ! ನನ್ನನ್ನು ಅನುಗ್ರಹಿಸಬೇಕೆಂಬ ಅಭಿಲಾಷೆಯಿಂದ ನೀನು ಈ ಭೂಮಂಡಲದಲ್ಲಿ ಅವತರಿಸಿರುವೆ; ಎಂಬುದನ್ನು ಬಲ್ಲೆನು. ॥೪೯॥ ಶಿವಜ್ಞಾನದಿಂದ ಜನನಮರಣಗಳನ್ನು ನಾಶಮಾಡಿದ ನಿನ್ನಂಥ ಸಿದ್ಧಾಗ್ರೇಸರರ ಈ ರೀತಿಯಾದ ಸಂಚಾರವೇ ಮಾನವಪ್ರಾಣಿಗಳಿಗೆ ಅನುಗ್ರಹವನ್ನುಂಟುಮಾಡತಕ್ಕುದಾಗಿರುತ್ತದೆ. ॥೫೦॥ ಎಲೈ, ರೇಣುಕಾಚಾರ್ಯನೇ! ವೇದಸಮ್ಮತವಾದ ಸಿದ್ಧಾಂತಶಾಸ್ತ್ರವನ್ನು ನಿನ್ನ ಮುಖದಿಂದ ಕೇಳಬೇಕೆಂಬ ಇಚ್ಛೆಯುಳ್ಳವನಾಗಿದ್ದೇನೆ; ಆದುದರಿಂದ ಸರ್ವಜ್ಞಮೂರ್ತಿಯೇ! ಸರ್ವಾರ್ಥಸಾಧಕವಾದುದೂ, ಶಿವಸಂಬಂಧವಾದುದೂ,

ಸದ್ಯಃ ಸಿದ್ಧಿಕರಂ ಪುಂಸಾಂ ಸರ್ವಯೋಗೀಂದ್ರಸೇವಿತಂ ।
ದುರಾಚಾರೈರನಾಘ್ರಾತಂ ಸ್ವೀಕೃತಂ ವೇದವೇದಿಭಿಃ ॥
ಶಿವಾತ್ಮೈಕ್ಯಮಹಾಬೋಧಸಂಪ್ರದಾಯಪ್ರವರ್ತಕಂ ॥೫೨॥

ಉಕ್ತ್ವಾ ಭವಾನ್ ಸಕಲಲೋಕಮಹೋಪಕಾರಂ
ಸಿದ್ಧಾಂತಸಂಗ್ರಹಮನಾದೃತಬಾಹ್ಯತಂತ್ರಂ ।
ಸದ್ಯಃ ಕೃತಾರ್ಥಯಿತುಮರ್ಹತಿ ದಿವ್ಯಯೋಗಿನ್
ನಾನಾಗಮಶ್ರವಣವರ್ತಿತಸಂಶಯಂ ಮಾಂ ॥೫೩॥

ಇತಿ ಶ್ರೀಸಿದ್ಧಾಂತಶಿಖಾಮಣೌ ಶ್ರೀರೇಣುಕಾಗಸ್ತ್ಯಸಂಭಾಷಣ ಪ್ರಸಂಗೋ ನಾಮ

ಚತುರ್ಥಪರಿಚ್ಛೇದಃ ಪರಿಸಮಾಪ್ತಃ.

ತತ್‌ಕ್ಷಣದಲ್ಲಿ ಸಿದ್ಧಿಯನ್ನುಂಟುಮಾಡತಕ್ಕದ್ದೂ, ಸಮಸ್ತಯೋಗೀಂದ್ರರಿಂದ ಸೇವಿತವಾದುದೂ, ದುರಾಚಾರಿಗಳಿಂದ ಅನಾಘ್ರಾತವಾದುದೂ, ವೇದಜ್ಞರಿಂದ ಸ್ವೀಕೃತವಾದುದೂ, ಶಿವಜೀವೈಕ್ಯಮಹಾಜ್ಞಾನಸಂಪ್ರದಾಯಪ್ರವರ್ತಕವಾದುದೂ ಆದ ಸಿದ್ಧಾಂತಶಾಸ್ತ್ರವನ್ನು ನನಗೆ ಉಪದೇಶಮಾಡು. ॥೫೧–೫೨॥ ಎಲೈ, ಮಹಾಯೋಗಿಯೇ! ನಾನಾವಿಧವಾದ ಆಗಮಗಳ ಶ್ರವಣದಿಂದ ಸಂಶಯವಿಶಿಷ್ಟನಾದ ನನಗೆ ನೀನು ವೇದಬಾಹ್ಯತಂತ್ರಗಳನ್ನು ಖಂಡಿಸತಕ್ಕದ್ದೂ ಸಕಲಪ್ರಾಣಿವರ್ಗಕ್ಕೆ ಅನುಗ್ರಹವನ್ನುಂಟುಮಾಡತಕ್ಕದ್ದೂ ಆದ ಸಿದ್ಧಾಂತಶಾಸ್ತ್ರವನ್ನು ಉಪದೇಶಮಾಡಿ, ಸದ್ಯಃ ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕು. ॥೫೩॥

ಇಂತು ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಶ್ರೀರೇಣುಕಾಗಸ್ತ್ಯ ಸಂಭಾಷಣಾತ್ಮಕವಾದ

ನಾಲ್ಕನೆಯ ಪರಿಚ್ಛೇದವು ಪರಿಸಮಾಪ್ತವಾದುದು.

ಶ್ರೀಜಗದ್ಗುರುರೇಣುಕಾಚಾರ್ಯಃ ಪ್ರಸೀದತು.

ಪಂಚಮಪರಿಚ್ಛೇದಃ

ಅಥಾಗಸ್ತ್ಯವಚಃ ಶ್ರುತ್ವಾ ರೇಣುಕೋ ಗಣನಾಯಕಃ ।
ಧ್ಯಾತ್ವಾ ಕ್ಷಣಂ ಮಹಾದೇವಂ ಸಾಂಬಮಾಹ ಸಮಾಹಿತಃ ॥೧॥
ಅಗಸ್ತ್ಯಮುನಿಶಾರ್ದೂಲ ಸಮಸ್ತಾಗಮಪಾರಗ ।
ಶಿವಜ್ಞಾನಕರಂ ವಕ್ಷ್ಯೇ ಸಿದ್ಧಾಂತಂ ಶೃಣು ಸಾದರಂ ॥೨॥
ಅಗಸ್ತ್ಯ ಬಹುಧಾ ಖ್ಯಾತಾಃ ಸಿದ್ಧಾಂತಾ ರುಚಿಭೇದತಃ ।
ಭಿನ್ನಾಚಾರಸಮಾಯುಕ್ತಾ ಭಿನ್ನಾರ್ಥಪ್ರತಿಪಾದಕಾಃ ॥೩॥
ಸಾಂಖ್ಯಂಯೋಗಃಪಾಂಚರಾತ್ರಂವೇದಾಃಪಾಶುಪತಂ ತಥಾ ।
ಏತಾನಿ ಮಾನಭೂತಾನಿ ನ ಹಂತವ್ಯಾನಿ ಯುಕ್ತಿಭಿಃ ॥೪॥

ಐದನೆಯ ಪರಿಚ್ಛೇದವು.

ಅಗಸ್ತ್ಯಮಹರ್ಷಿಗೆ ಉಪದೇಶ.

ವ್ಯಾಖ್ಯಾನ—ಪ್ರಮಥಾಧಿಪತಿಯಾದ ಶ್ರೀರೇಣುಕಾಚಾರ್ಯನು ಅಗಸ್ತ್ಯ ಮಹರ್ಷಿಯು ವಿಜ್ಞಾಪಿಸಿಕೊಂಡ ವಚನಗಳನ್ನೆಲ್ಲಾ ಕೇಳಿ, ಕ್ಷಣಕಾಲ ಏಕಾಗ್ರಚಿತ್ತ ನಾಗಿ ಶಕ್ತಿಸಮೇತನಾದ ಪರಶಿವನನ್ನು ಧ್ಯಾನಿಸಿ, ಉಪದೇಶಮಾಡಲು ಪ್ರಾರಂಭಿಸಿದನು. ॥೧॥ ಸರ್ವಾಗಮನಿಷ್ಣಾತನಾದ ಎಲೈ, ಅಗಸ್ತ್ಯಮಹರ್ಷಿಯೇ! ಶಿವಜ್ಞಾನವನ್ನುಂಟುಮಾಡತಕ್ಕ ಸಿದ್ಧಾಂತಶಾಸ್ತ್ರವನ್ನು ಉಪದೇಶಿಸುತ್ತೇನೆ ; ಆದರಪೂರ್ವಕವಾಗಿ ಶ್ರವಣಮಾಡು. ॥೨॥ ಎಲೈ, ಅಗಸ್ತ್ಯನೇ! ಕಪಿಲಪತಂಜಲ್ಯಾದಿಮಹರ್ಷಿಗಳ ಪ್ರೀತಿವೈಚಿತ್ರ್ಯದಿಂದ ಭಿನ್ನಭಿನ್ನಾಚಾರಗಳಿಂದ ಯುಕ್ತವಾದುವುಗಳೂ, ಭಿನ್ನಭಿನ್ನಾರ್ಥಗಳನ್ನು ಪ್ರತಿಪಾದಿಸತಕ್ಕವುಗಳೂ ಆದ ಸಿದ್ಧಾಂತಗಳು ಅನೇಕವಾಗಿರುತ್ತವೆ. ॥೩॥ ಕಪಿಲಮಹರ್ಷಿಯಿಂದ ವಿರಚಿತವಾದ ಸಾಂಖ್ಯಶಾಸ್ತ್ರವು, ಪ್ರಕೃತಿ ಮತ್ತು ಪುರುಷ ಎಂಬ ಎರಡು ಪದಾರ್ಥಗಳನ್ನು ಪ್ರತಿಪಾದಿಸುವಂಥದಾಗಿ ಅನೀಶ್ವರವಾದಿಯಾಗಿರುವುದು. ಪತಂಜಲಿಮಹರ್ಷಿಯಿಂದ ವಿರಚಿತವಾದ ಯೋಗಶಾಸ್ತ್ರವು, ಅತ್ಯಂತ ಕಷ್ಟಕರಗಳಾದ ಯಮ - ನಿಯಮ - ಆಸನ-ಪ್ರಾಣಾಯಾಮ - ಪ್ರತ್ಯಾಹಾರ - ಧ್ಯಾನ -



ಶ್ರೀಜಗದ್ಗುರುರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗಳಿಗೆ
ಶಿವಸಿದ್ಧಾಂತವನ್ನು ಪದೇಶಿಸುತ್ತಿರುವರು.

ವೇದಃ ಪ್ರಧಾನಂ ಸರ್ವೇಷಾಂ ಸಾಂಖ್ಯಾದೀನಾಂ ಮಹಾಮುನೇ ।
ವೇದಾನುಸರಣಾದೇಷಾಂ ಪ್ರಮಾಣಮಿತಿ ನಿಶ್ಚಿತಂ ॥೫॥

ಪಾಂಚರಾತ್ರಸ್ಯ ಸಾಂಖ್ಯಸ್ಯ ಯೋಗಸ್ಯಚ ತಥಾ ಮುನೇ ।
ವೇದೈಕದೇಶವರ್ತಿತ್ವಂ ಶೈವಂ ವೇದಮಯಂ ಮತಂ ॥೬॥

ವೇದೈಕದೇಶವರ್ತಿಭ್ಯಃ ಸಾಂಖ್ಯಾದಿಭ್ಯೋ ಮಹಾಮುನೇ ।
ಸರ್ವವೇದಾನುಸಾರಿತ್ವಾಚ್ಛೈವತಂತ್ರಂ ವಿಶಿಷ್ಯತೇ ॥೭॥

ಶೈವತಂತ್ರಮಿತಿ ಪ್ರೋಕ್ತಂ ಸಿದ್ಧಾಂತಾಖ್ಯಂ ಶಿವೋದಿತಂ ।
ಸರ್ವವೇದಾರ್ಥರೂಪತ್ವಾತ್ ಪ್ರಮಾಣಂ ವೇದವತ್ಸದಾ ॥೮॥

ಧಾರಣ-ಸಮಾಧಿಗಳೆಂಬ ಅಷ್ಟಾಂಗಗಳನ್ನು ಪ್ರತಿಪಾದಿಸುವಂಥದಾಗಿ, ಸೇಶ್ವರವಾದಿಯಾಗಿರುವುದು. ವಾಸುದೇವವಿರಚಿತವಾದ ಪಾಂಚರಾತ್ರಶಾಸ್ತ್ರವು, ವೈಷ್ಣವದೀಕ್ಷಾಂಗಭೂತತಪ್ತಮುದ್ರಾಧಾರಣಾದಿಕ್ರಿಯಾಪ್ರತಿಪಾದನದ್ವಾರಾ ಚಿತ್-ಅಚಿತ್-ಈಶ್ವರರೂಪಪದಾರ್ಥತ್ರಯವನ್ನು ಪ್ರತಿಪಾದಿಸುವುದಾಗಿರುವುದು. ಶಿವಪ್ರಣೀತವಾದ ಪಾಶುಪತಶಾಸ್ತ್ರವು, ಪಶು-ಪಾಶ-ಪತಿರೂಪಪದಾರ್ಥತ್ರಯವನ್ನು ಪ್ರತಿಪಾದಿಸುವುದಾಗಿರುವುದು. ಶಿವನ ಅಪ್ರಯತ್ನಸಿದ್ಧನಿಶ್ವಾಸರೂಪಋಗ್ಯಜುಃಸಾಮವೇದಗಳ ಪೂರ್ವಕಾಂಡಾನುಸಾರವಾಗಿ ಜೈಮಿನಿಮಹರ್ಷಿಯಿಂದ ವಿರಚಿತವಾಗಿರುವ ಪೂರ್ವಮೀಮಾಂಸಾಶಾಸ್ತ್ರವು, ಯಾಗಾದಿಕರ್ಮಗಳನ್ನು ಪ್ರತಿಪಾದಿಸುವಂಥದಾಗಿ, ಅನೀಶ್ವರವಾದಿಯಾಗಿರುವುದು. ಈ ಶಾಸ್ತ್ರಗಳೆಲ್ಲವೂ ಪ್ರಮಾಣಭೂತವಾಗಿರುವುವು. ಆದುದರಿಂದ ಇವುಗಳನ್ನು ಯುಕ್ತಿಪ್ರಯುಕ್ತಿಗಳಿಂದ ಖಂಡಿಸಬಾರದು. ॥೪॥ ಇಲ್ಲಿ ಹೇಳಿದ ಸಾಂಖ್ಯಾದಿಶಾಸ್ತ್ರಗಳಲ್ಲಿ ವೇದವು ಪ್ರಧಾನವಾದುದು. ಈ ಎಲ್ಲ ಶಾಸ್ತ್ರಗಳೂ ವೇದಗಳನ್ನನುಸರಿಸಿ ವರ್ತಿಸುವುದರಿಂದ ಪ್ರಮಾಣಭೂತವಾಗಿರುವುವು. ॥೫॥ ಪಾಂಚರಾತ್ರಶಾಸ್ತ್ರವೂ, ಸಾಂಖ್ಯಶಾಸ್ತ್ರವೂ, ಯೋಗಶಾಸ್ತ್ರವೂ, ವೇದದ ಒಂದೊಂದು ಭಾಗದಲ್ಲಿರುವುವು; ಶೈವಶಾಸ್ತ್ರವು ವೇದಮಯವಾಗಿರುವುದು. ॥೬॥ ಎಲೈ, ಮಹರ್ಷಿಯೇ! ವೇದದ ಒಂದೊಂದು ಭಾಗದಲ್ಲಿರತಕ್ಕ ಸಾಂಖ್ಯಾದಿಶಾಸ್ತ್ರಗಳಿಗಿಂತಲೂ, ಸರ್ವವೇದಗಳನ್ನು ಅನುಸರಿಸುವ ಶೈವಶಾಸ್ತ್ರವು ವಿಶೇಷವಾಗಿ ಮಹತ್ತ್ವವುಳ್ಳುದಾಗಿರುವುದು. ॥೭॥ ಶಿವಪ್ರಣೀತವಾದ ಶೈವಶಾಸ್ತ್ರವು ಸಿದ್ಧಾಂತಶಾಸ್ತ್ರವೆಂದು ಹೇಳಿಸಿಕೊಳ್ಳುವುದು. ಈ ಸಿದ್ಧಾಂತಶಾಸ್ತ್ರವು ಸಮಸ್ತವೇದಾರ್ಥಮಯವಾಗಿರುವುದರಿಂದ, ಯಾವಾಗಲೂ ವೇದಗಳಂತೆ ಪ್ರಮಾಣಭೂತವಾಗಿರುವುದು. ॥೮॥

ಆಗಮಾ ಬಹುಧಾ ಪ್ರೋಕ್ತಾಃ ಶಿವೇನ ಪರಮಾತ್ಮನಾ ।
ಶೈವಂ ಪಾಶುಪತಂ ಸೋಮಂ ಲಾಕುಲಂ ಚೇತಿ ಭೇದತಃ ॥೯॥
ತೇಷು ಶೈವಂ ಚತುರ್ಭೇದಂ ತಂತ್ರಂ ಸರ್ವವಿನಿಶ್ಚಿತಂ ।
ವಾಮಂ ಚ ದಕ್ಷಿಣಂ ಚೈವ ಮಿಶ್ರಂ ಸಿದ್ಧಾಂತಸಂಜ್ಞಕಂ ॥೧೦॥
ಶಕ್ತಿಪ್ರಧಾನಂ ವಾಮಾಖ್ಯಂ ದಕ್ಷಿಣಂ ಭೈರವಾತ್ಮಕಂ ।
ಸಪ್ತಮಾತೃಪರಂ ಮಿಶ್ರಂ ಸಿದ್ಧಾಂತಂ ವೇದಸಂಮತಂ ॥೧೧॥
ವೇದಧರ್ಮಾಭಿಧಾಯಿತ್ವಾತ್ ಸಿದ್ಧಾಂತಾಖ್ಯಃ ಶಿವಾಗಮಃ ।
ವೇದಬಾಹ್ಯವಿರೋಧಿತ್ವಾದ್ವೇದಸಂಮತ ಉಚ್ಯತೇ ॥೧೨॥
ವೇದಸಿದ್ಧಾಂತಯೋರೈಕ್ಯಮೇಕಾರ್ಥಪ್ರತಿಪಾದನಾತ್ ।
ಪ್ರಾಮಾಣ್ಯಂ ಸದೃಶಂ ಜ್ಞೇಯಂ ಪಂಡಿತೈರೇತಯೋಃ ಸದಾ ॥೧೩॥
ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ ।
ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಂ ॥೧೪॥

ಶಿವಪರಮಾತ್ಮನಿಂದ ಆಗಮಗಳು ಶೈವ-ಪಾಶುಪತ-ಸೋಮ-ಲಾಕುಲ ಎಂಬ ಭೇದದಿಂದ ಅನೇಕಪ್ರಕಾರವಾಗಿ ಹೇಳಲ್ಪಟ್ಟಿವೆ. ॥೯॥ ಆ ಆಗಮಗಳಲ್ಲಿ ಶೈವತಂತ್ರವು ವಾಮ-ದಕ್ಷಿಣ-ಮಿಶ್ರ-ಸಿದ್ಧಾಂತ ಎಂಬ ಹೆಸರುಗಳಿಂದ ನಾಲ್ಕು ಭೇದಗಳುಳ್ಳದಾಗಿರುವುದೆಂದು ಸರ್ವತಂತ್ರಜ್ಞರಿಂದ ನಿಶ್ಚಯಿಸಲ್ಪಟ್ಟಿದೆ. ॥೧೦॥ ವಾಮತಂತ್ರವು ಶಕ್ತಿಪ್ರಧಾನವಾಗಿಯೂ, ದಕ್ಷಿಣತಂತ್ರವು ಭೈರವದೇವತಾತ್ಮಕವಾಗಿಯೂ, ಮಿಶ್ರತಂತ್ರವು ಸಪ್ತಮಾತೃದೇವತಾತ್ಮಕವಾಗಿಯೂ, ಸಿದ್ಧಾಂತತಂತ್ರವು ವೇದಸಂಮತವಾಗಿಯೂ ಇರುವುವು. ॥೧೧॥ ಸಿದ್ಧಾಂತನಾಮಕವಾದ ಶಿವಾಗಮವು ವೇದೋಕ್ತವಾದ ಭಸ್ಮಧಾರಣ-ರುದ್ರಾಕ್ಷಧಾರಣ-ಲಿಂಗಧಾರಣಾದಿಧರ್ಮಗಳನ್ನು ಪ್ರತಿಪಾದಿಸುತ್ತಿರುವುದರಿಂದಲೂ, ವೇದಬಾಹ್ಯಗಳಾದ ಚಾರ್ವಾಕಾದಿಮತಗಳನ್ನು ವಿರೋಧಿಸುತ್ತಿರುವುದರಿಂದಲೂ ವೇದಸಮ್ಮತವೆಂದು ಹೇಳಲ್ಪಡುವುದು. ॥೧೨॥ "ಸರ್ವವೇದೇಷು ಯದ್ದೃಷ್ಟಂ ತತ್ಸರ್ವಂ ತು ಶಿವಾಗಮೇ ॥" ಎಂಬ ವೀರಾಗಮಪ್ರಮಾಣಾನುಸಾರವಾಗಿ, ವೇದಶಾಸ್ತ್ರ ಮತ್ತು ಸಿದ್ಧಾಂತಶಾಸ್ತ್ರ ಇವೆರಡೂ ಒಂದೇ ಅರ್ಥವನ್ನು ಪ್ರತಿಪಾದಿಸುತ್ತಿರುವುದರಿಂದ, ಪಂಡಿತರಾದವರು ಇವೆರಡಕ್ಕೂ ಒಂದೇ ವಿಧವಾದ ಪ್ರಾಮಾಣ್ಯವನ್ನು ತಿಳಿಯಬೇಕು. ॥೧೩॥ ಶಿವನಿಂದ ಹೇಳಲ್ಪಟ್ಟ ಕಾಮಿಕಾದಿವಾತುಲಾಂತವಾದ ಸಿದ್ಧಾಂತನಾಮಕಮಹಾತಂತ್ರದ ಉತ್ತರಭಾಗದಲ್ಲಿ, ಪರಮಪವಿತ್ರವಾದ ವೀರಶೈವಮತದ ಸ್ವರೂಪವು ಹೇಳಲ್ಪಟ್ಟಿರುವುದು. ॥೧೪॥

ವಿಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯಬೋಧಿಕಾ ।
ತಸ್ಯಾಂ ರಮಂತೇ ಯೇ ಶೈವಾ ವೀರಶೈವಾಸ್ತು ತೇ ಮತಾಃ ॥೧೫॥

ವೇದಾಂತಜನ್ಯಂ ಯದ್‌ಜ್ಞಾನಂ ವಿದ್ಯೇತಿ ಪರಿಕೀರ್ತ್ಯತೇ ।
ವಿದ್ಯಾಯಾಂ ರಮತೇ ಯಃ ಸ ವೀರ ಇತ್ಯಭಿಧೀಯತೇ ॥೧೬॥

ವಿದ್ಯಾಯಾಂ ಶಿವರೂಪಾಯಾಂ ರಮಂತೇ ಯೇ ವಿಶೇಷತಃ ।
ತಸ್ಮಾದೇತೇ ಮಹಾಭಾಗಾ ವೀರಶೈವಾ ಇತಿ ಸ್ಮೃತಾಃ ॥೧೭॥

ವಿದ್ಯಾಯಾಂ ರಮತೇ ಯಸ್ಮಾನ್ಮಾಯಾಂ ಹೇಯಾಂ ಶ್ವವದ್ವಹೇತ್ ।
ಅನೇನೈವ ನಿರುಕ್ತೇನ ವೀರಮಾಹೇಶ್ವರಃ ಸ್ಮೃತಃ ॥೧೮॥

ಶೈವೈರ್ಮಾಹೇಶ್ವರೈಶ್ಚೈವ ಕಾರ್ಯಮಂತರ್ಬಹಿಃ ಕ್ರಮಾತ್ ।
ಶಿವೋ ಮಹೇಶ್ವರಶ್ಚೇತಿ ನಾತ್ಯಂತಮಿಹ ಭಿದ್ಯತೇ ॥
ಯಥಾ ತಥಾ ನ ಭಿದ್ಯಂತೇ ಶೈವಾ ಮಾಹೇಶ್ವರಾ ಅಪಿ ॥೧೯॥

"ವಿ" ಎಂಬ ಶಬ್ದವು ಲಿಂಗಾಂಗಸಾಮರಸ್ಯರೂಪಶಿವಜೀವೈಕ್ಯವಿದ್ಯೆಯನ್ನು ಬೋಧಿಸುತ್ತದೆ. ಇಂತಹ ಲಿಂಗಾಂಗಸಾಮರಸ್ಯರೂಪಶಿವಜೀವೈಕ್ಯವಿದ್ಯೆಯಲ್ಲಿ ಯಾರು ವಿನೋದದಿಂದ ಕ್ರೀಡಿಸುತ್ತಾರೆಯೋ, ಅವರು ವೀರಶೈವರೆಂದು ಹೇಳಿಸಿಕೊಳ್ಳುವರು. **"ಅನ್ಯೇಷಾಮಪಿ ದೃಶ್ಯತೇ"** (೬-೩-೧೩೭) ಎಂಬ ಪಾಣಿನೀಯಸೂತ್ರಾನುಸಾರವಾಗಿ, "**ವಿ**" ಶಬ್ದಕ್ಕೆ ದೀರ್ಘವು ಪ್ರಾಪ್ತವಾಗುವುದರಿಂದ, "**ವೀರ**" ಎಂಬ ಶಬ್ದವು ಸಿದ್ಧವಾಗುತ್ತದೆ. ॥೧೫॥ ಯಾವ ಜ್ಞಾನವು ವೇದಾಂತಜನ್ಯವಾದುದೋ, ಅದು ವಿದ್ಯೆಯೆಂದು ಹೇಳಿಸಿಕೊಳ್ಳುವುದು. ಇಂತಹ ವಿದ್ಯೆಯಲ್ಲಿ ಯಾವನು ರಮಿಸುವನೋ ಅವನು "ವೀರ" ಎಂದು ಹೇಳಿಸಿಕೊಳ್ಳುವನು. ॥೧೬॥ ಪರಶಿವಬ್ರಹ್ಮಸ್ವರೂಪವಾದ ವಿದ್ಯೆಯಲ್ಲಿ ವಿಶೇಷವಾಗಿ ಯಾರು ಪ್ರೀತಿಯನ್ನಿಡುವರೋ, ಅವರು ವೀರಶೈವರೆಂದು ಹೇಳಿಸಿಕೊಳ್ಳುವರು. ॥೧೭॥ ಲಿಂಗಾಂಗಸಾಮರಸ್ಯರೂಪವಾದ ಶಿವಜೀವೈಕ್ಯವಿದ್ಯೆಯಲ್ಲಿ ಪ್ರೀತಿಯುಳ್ಳವನೂ, ಹೇಯವಾದ ಮಾಯೆಯನ್ನು ನಾಯಿಯಂತೆ ನಿವಾರಿಸುವವನೂ ವೀರಮಾಹೇಶ್ವರನೆಂದು ಹೇಳಿಸಿಕೊಳ್ಳುವನು. ॥೧೮॥ ವೀರಶೈವರು ಶಿವಲಿಂಗಪೂಜೆಯನ್ನು ಅಂತರಂಗದಲ್ಲಿಯೂ, ವೀರಮಾಹೇಶ್ವರರು ಬಹಿರಂಗದಲ್ಲಿಯೂ ಮಾಡಬೇಕು. ಶಿವ ಮತ್ತು ಮಹೇಶ್ವರ ಎಂಬೀಶಬ್ದಗಳಲ್ಲಿ ಹೇಗೆ ವಿಶೇಷಭೇದವಿರುವುದಿಲ್ಲವೋ, ಹಾಗೆಯೇ ವೀರಶೈವರಲ್ಲಾಗಲಿ, ವೀರಮಾಹೇಶ್ವರರಲ್ಲಾಗಲಿ ವಿಶೇಷಭೇದವಿರುವುದಿಲ್ಲ. ॥೧೯॥

ಶಿವಾಶ್ರಿತೇಷು ತೇ ಶೈವಾ ಜ್ಞಾನಯಜ್ಞರತಾ ನರಾಃ ।
ಮಾಹೇಶ್ವರಾಃ ಸಮಾಖ್ಯಾತಾಃ ಕರ್ಮಯಜ್ಞರತಾ ಭುವಿ ॥
ತಸ್ಮಾದಭ್ಯಂತರೇ ಕುರ್ಯುಃ ಶೈವಾ ಮಾಹೇಶ್ವರಾ ಬಹಿಃ ॥೨೦॥

ವೀರಶೈವಾಸ್ತು ಷಡ್ಭೇದಾಃ ಸ್ಥಲಧರ್ಮವಿಭೇದತಃ ।
ಭಕ್ತಾದಿವ್ಯವಹಾರೇಣ ಪ್ರೋಚ್ಯಂತೇ ಶಾಸ್ತ್ರಪಾರಗೈಃ ॥೨೧॥

ಶಾಸ್ತ್ರಂ ತು ವೀರಶೈವಾನಾಂ ಷಡ್ವಿಧಂ ಸ್ಥಲಭೇದತಃ ।
ಧರ್ಮಭೇದಸಮಾಯೋಗಾದಧಿಕಾರಿವಿಭೇದತಃ ॥೨೩॥

ಆದೌ ಭಕ್ತಸ್ಥಲಂ ಪ್ರೋಕ್ತಂ ತತೋ ಮಾಹೇಶ್ವರಸ್ಥಲಂ ।
ಪ್ರಸಾದಿಸ್ಥಲಮನ್ಯತ್ತು ಪ್ರಾಣಲಿಂಗಿಸ್ಥಲಂ ತತಃ ॥
ಶರಣಸ್ಥಲಮಾಖ್ಯಾತಂ ಷಷ್ಠಮೈಕ್ಯಸ್ಥಲಂ ಮತಂ ॥೨೪॥

ಶಿವಾಶ್ರಿತರಲ್ಲಿ ಯಾವ ಮಾನವರು ಜ್ಞಾನಯಜ್ಞದಲ್ಲಿ ಪ್ರೀತಿಯುಳ್ಳವರೋ, ಅವರು ವೀರಶೈವರೆಂದು ಹೇಳಿಸಿಕೊಳ್ಳುವರು. ಕರ್ಮಯಜ್ಞದಲ್ಲಿ ಪ್ರೀತಿಯುಳ್ಳವರು ಮಾಹೇಶ್ವರರೆಂದು ಹೇಳಿಸಿಕೊಳ್ಳುವರು. ಆದುದರಿಂದ ವೀರಶೈವರು ಲಿಂಗಪೂಜೆಯನ್ನು ಪ್ರಧಾನವಾಗಿ ಅಂತರಂಗದಲ್ಲಿಯೂ, ಮಾಹೇಶ್ವರರು ಪ್ರಧಾನವಾಗಿ ಬಹಿರಂಗದಲ್ಲಿಯೂ ಮಾಡಬೇಕು. ॥೨೦॥ ವೀರಶೈವರು ಭಕ್ತ-ಮಾಹೇಶ್ವರ-ಪ್ರಸಾದಿ-ಪ್ರಾಣಲಿಂಗಿ-ಶರಣ-ಐಕ್ಯ ಎಂಬ ಸ್ಥಲಸಂಜ್ಞಕನಾಮಧೇಯಗಳಿಂದ ಆರು ವಿಧವಾಗಿದ್ದಾರೆ. ॥೨೧॥ ವೀರಶೈವಶಾಸ್ತ್ರವು ಸ್ಥಲಭೇದದಿಂದಲೂ, ಆಯಾ ಸ್ಥಲಗಳಲ್ಲಿ ಹೇಳಲ್ಪಟ್ಟಿರುವ ಆಚಾರಭೇದದಿಂದಲೂ, ಅಧಿಕಾರಭೇದದಿಂದಲೂ ಆರು ಪ್ರಕಾರವಾಗಿರುವುದು. ಈ ಶಾಸ್ತ್ರಕ್ಕೆ ವೀರಶೈವಧರ್ಮನಿಷ್ಠನಾದ ಮುಮುಕ್ಷುವೇ ಅಧಿಕಾರಿಯು ; ಶಿವಜೀವೈಕ್ಯರೂಪಸಾಯುಜ್ಯಮುಕ್ತಿಯೇ ಪ್ರಯೋಜನವು; ಷಟ್ಸ್ಥಲಾಂತರ್ಗತೈಕೋತ್ತರಶತಸ್ಥಲಗಳೇ ವಿಷಯವು ; ಈ ವಿಷಯಕ್ಕೂ ಶಾಸ್ತ್ರಕ್ಕೂ ಪ್ರತಿಪಾದ್ಯಪ್ರತಿಪಾದಕಭಾವವೇ ಸಂಬಂಧವು; ವೀರಶೈವಶಾಸ್ತ್ರವು ಈ ಪ್ರಕಾರವಾದ ಅನುಬಂಧಚತುಷ್ಟಯದಿಂದ ಕೂಡಿರುವುದು. ॥೨೩॥ ವೀರಶೈವಶಾಸ್ತ್ರಪ್ರಸಿದ್ಧವಾಗಿರುವ ಷಟ್ಸ್ಥಲಗಳಲ್ಲಿ ಒಂದನೆಯದು ಭಕ್ತಸ್ಥಲವು, ಎರಡನೆಯದು ಮಾಹೇಶ್ವರಸ್ಥಲವು, ಮೂರನೆಯದು ಪ್ರಸಾದಿಸ್ಥಲವು, ನಾಲ್ಕನೆಯದು ಪ್ರಾಣಲಿಂಗಿಸ್ಥಲವು, ಐದನೆಯದು ಶರಣಸ್ಥಲವು, ಆರನೆಯದು ಐಕ್ಯಸ್ಥಲವು ; ಈ ರೀತಿಯಾಗಿ ಸ್ಥಲವು ಆರುಪ್ರಕಾರವಾಗಿರುವುದು. ॥

ವೀರಶೈವಸಿದ್ಧಾಂತದಲ್ಲಿ ಪರಶಿವಬ್ರಹ್ಮವು "ಸ್ಥಲ"ವೆಂದು ಹೇಳಿಸಿಕೊಳ್ಳುವುದು. ಸ್ಥೀಯತೇ ಲೀಯತೇ ಯತ್ರ ಜಗದೇತಚ್ಚರಾಚರಂ | ತದ್ಬ್ರಹ್ಮ ಸ್ಥಲಮಿತ್ಯುಕ್ತಂ ಸ್ಥಲತತ್ತ್ವವಿಶಾರದೈಃ || ಎಂಬ ಪ್ರಮಾಣದಂತೆ, ಚರಾಚರಾತ್ಮಕವಾದೀ ಜಗತ್ತು ಯಾವುದರಲ್ಲಿ ಉತ್ಪತ್ತಿಲಯಗಳನ್ನು ಹೊಂದುವುದೋ, ಆ ಬ್ರಹ್ಮವು "ಸ್ಥಲ" ವೆಂದು ಹೇಳಿಸಿಕೊಳ್ಳುವುದು. ಆ ಸ್ಥಲರೂಪಪರಶಿವಬ್ರಹ್ಮವು ಸ್ವಲೀಲೆಯಿಂದ ಅಂಗ-ಲಿಂಗವೆಂದು ಎರಡು ಪ್ರಕಾರವಾಗುವುದು. ಚಿತ್ತಶಕ್ತಿವಿಶಿಷ್ಟಜೀವನೇ "ಅಂಗ" ವೆನಿಸುವನು. ಚಿಚ್ಛಕ್ತಿವಿಶಿಷ್ಟಪರಶಿವನೇ "ಲಿಂಗ" ವೆನಿಸುವನು. ಲಿಂಗಾಂಗಪದವಾಚ್ಯರಾದ ಶಿವಜೀವರ ಐಕ್ಯವೇ "ಲಿಂಗಾಂಗಸಾಮರಸ್ಯ" ವೆನಿಸುವುದು. ಸ್ಥಲವು ಭಕ್ತ-ಮಹೇಶ-ಪ್ರಸಾದಿ-ಪ್ರಾಣಲಿಂಗಿ-ಶರಣ-ಐಕ್ಯ ಎಂಬ ಭೇದದಿಂದ ಆರುಪ್ರಕಾರವಾಗಿರುವುದು.

ಶಿವೇ ಭಕ್ತಿಸ್ಸಮುತ್ಪನ್ನಾ ಯಸ್ಯಾಸೌ ಭಕ್ತ ಉಚ್ಯತೇ | ತಸ್ಯಾನುಷ್ಠೇಯಧರ್ಮಾಣಾಮುಕ್ತಿರ್ಭಕ್ತಸ್ಥಲಂ ಮತಂ || ಕೇವಲಂ ಸಹಜೇ ದಾನೇ ನಿಷ್ಣಾತಃ ಶಿವತತ್ಪರಃ | ಬ್ರಹ್ಮಾದಿಸ್ಥಾನವಿಮುಖೋ ಭಕ್ತೋ ಮಾಹೇಶ್ವರಃ ಸ್ಮೃತಃ || ಮನಃಪ್ರಸಾದಸಿದ್ಧ್ಯರ್ಥಂ ನಿರ್ಮಲಜ್ಞಾನಕಾರಣಂ | ಶಿವಪ್ರಸಾದಂ ಸ್ವೀಕುರ್ವನ್ ಪ್ರಸಾದೀತ್ಯೇಷ ಕಥ್ಯತೇ || ಲಿಂಗಂ ಚಿದಾತ್ಮಕಂ ಬ್ರಹ್ಮ ತಚ್ಛಕ್ತಿಃ ಪ್ರಾಣರೂಪಿಣೀ | ತದ್ರೂಪಲಿಂಗವಿಜ್ಞಾನೀ ಪ್ರಾಣಲಿಂಗೀತಿ ಕಥ್ಯತೇ || ಸತೀವ ರಮಣೇ ಯಸ್ತು ಶಿವೇ ಶಕ್ತಿಂ ವಿಭಾವಯನ್ | ತದನ್ಯವಿಮುಖಃ ಸೋಽಯಂ ಜ್ಞಾತಃ ಶರಣನಾಮವಾನ್ || ಪ್ರಾಣಲಿಂಗಾದಿಯೋಗೇನ ಸುಖಾತಿಶಯಮೇಯಿವಾನ್ | ಶರಣಾಖ್ಯಃ ಶಿವೇ ನೈಕ್ಯಭಾವನಾದೈಕ್ಯವಾನ್ ಭವೇತ್ ||

ಯಾವನಲ್ಲಿ ನಿಜವಾದ ಶಿವಭಕ್ತಿಯು ಉತ್ಪನ್ನವಾಗುತ್ತದೆಯೋ, ಅವನು "ಭಕ್ತ" ನೆನಿಸುವನು. ಸಹಜದಾನದಲ್ಲಿ ನಿಷ್ಣಾತನೂ, ಶಿವಾಸಕ್ತನೂ, ಬ್ರಹ್ಮಾದಿಸ್ಥಾನವಿಮುಖನೂ ಆದವನೇ "ಮಹೇಶ್ವರ" ನೆನಿಸುವನು. ಈ ಮಹೇಶ್ವರನು ತನ್ನ ಮನಃಪ್ರಸನ್ನತೆಗಾಗಿ ನಿರ್ಮಲಜ್ಞಾನಕಾರಣವಾದ ಶಿವಪ್ರಸಾದವನ್ನು ಸ್ವೀಕರಿಸುವುದರಿಂದ "ಪ್ರಸಾದಿ" ಯೆನಿಸುವನು. ಪರಶಿವಬ್ರಹ್ಮವು ಚಿತ್ಸ್ವರೂಪವೆಂದೂ, ಆ ಪರಶಿವಬ್ರಹ್ಮದಲ್ಲಿರುವ ಶಕ್ತಿಯು ಪ್ರಾಣಸ್ವರೂಪವೆಂದೂ, ಲಿಂಗವು ಈ ಎರಡರ ಸ್ವರೂಪವಾಗಿರುವುದೆಂದೂ ತಿಳಿಯುವ ಪ್ರಸಾದಿಯೇ "ಪ್ರಾಣಲಿಂಗಿ" ಯೆನಿಸುವನು. ತನ್ನ ಪತಿಯ ಹೊರತು ಪರಪುರುಷರಲ್ಲಿ ವಿಮುಖಳಾದ ಪತಿವ್ರತಾಸ್ತ್ರೀಯಳಂತೆ, ಯಾವನು ತನ್ನನ್ನು ಶಿವನ ವಿಷಯದಲ್ಲಿ ಸತಿಯಳನ್ನಾಗಿ ಭಾವಿಸಿಕೊಂಡು ಅನ್ಯದೇವತೆಗಳ ವಿಷಯದಲ್ಲಿ ವಿಮುಖನಾಗುವನೋ ಆ ಪ್ರಾಣಲಿಂಗಿಯೇ "ಶರಣ" ನೆನಿಸುವನು. ಈ ಶರಣನು ಪ್ರಾಣಲಿಂಗಾದಿಯೋಗದಿಂದ ಸುಖಾತಿಶಯವನ್ನುಹೊಂದಿ ಶಿವೋಹಂಭಾವನೆಯಿಂದ ಶಿವನಲ್ಲಿ ಏಕತ್ವವನ್ನು ಹೊಂದುವುದರಿಂದ "ಐಕ್ಯ" ನೆನಿಸುವನು. ಎಂದು ಇದೇ ಗ್ರಂಥದಲ್ಲಿಯೇ ಶ್ರೀರೇಣುಕಭಗವತ್ಪಾದರು ಷಟ್ಸ್ಥಲಗಳ ಸ್ವರೂಪವನ್ನು ನಿರೂಪಿಸಿರುವರು. ||೨೪||

ಭಕ್ತಸ್ಥಲಂ

(ಅಂಗಸ್ಥಲಾನಿ—೪೪)

ಭಕ್ತಸ್ಥಲಂ ಪ್ರವಕ್ಷ್ಯಾಮಿ ಪ್ರಥಮಂ ಕಲಶೋದ್ಭವ ।
ತದವಾಂತರಭೇದಾಂಶ್ಚ ಸಮಾಹಿತಮನಾಃ ಶೃಣು ॥೨೫॥

ಶಿವೇ ಭಕ್ತಿಃ ಸಮುತ್ಪನ್ನಾ ಯಸ್ಯಾಸೌ ಭಕ್ತ ಉಚ್ಯತೇ ।
ತಸ್ಯಾನುಷ್ಠೇಯಧರ್ಮಾಣಾಮುಕ್ತಿರ್ಭಕ್ತಸ್ಥಲಂ ಮತಂ ॥೨೬॥

ಅವಾಂತರಸ್ಥಲಾನ್ಯತ್ರ ಪ್ರಾಹುಃ ಪಂಚದಶೋತ್ತಮಾಃ ।
ಪಿಂಡತಾ ಪಿಂಡವಿಜ್ಞಾನಂ ಸಂಸಾರಗುಣಹೇಯತಾ ॥೨೭॥

ದೀಕ್ಷಾ ಲಿಂಗಧೃತಿಶ್ಚೈವ ವಿಭೂತೇರಪಿ ಧಾರಣಂ ।
ರುದ್ರಾಕ್ಷಧಾರಣಂ ಚೈವ ಪಂಚಾಕ್ಷರಜಪಸ್ತಥಾ ॥೨೮॥

ಭಕ್ತಮಾರ್ಗಕ್ರಿಯಾಚೈವ ಗುರೋರ್ಲಿಂಗಸ್ಯಚಾರ್ಚನಂ ।
ಜಂಗಮಸ್ಯ ತಥಾ ಹ್ಯೇಷಾಂ ಪ್ರಸಾದಸ್ವೀಕೃತಿಸ್ತಥಾ ॥೨೯॥

ಅತ್ರ ದಾನತ್ರಯಂ ಪ್ರೋಕ್ತಂ ಸೋಪಾಧಿ ನಿರುಪಾಧಿಕಂ ।
ಸಹಜಂ ಚೇತಿ ನಿರ್ದಿಷ್ಟಂ ಸಮುಸ್ತಾಗಮಪಾರಗೈಃ ।
ಏತಾನಿ ಶಿವಭಕ್ತಸ್ಯ ಕರ್ತವ್ಯಾನಿ ಪ್ರಯತ್ನತಃ ॥೩೦॥

ಭಕ್ತಸ್ಥಲ.

(ಅಂಗಸ್ಥಲಗಳು—೪೪)

ಎಲೈ, ಅಗಸ್ತ್ಯಮಹರ್ಷಿಯೇ! ಮೊದಲು ಭಕ್ತಸ್ಥಲವನ್ನೂ, ಆ ಸ್ಥಲದಲ್ಲಿರುವ ಅವಾಂತರಭೇದಗಳನ್ನೂ ಬೋಧಿಸುತ್ತೇನೆ; ನಿಶ್ಚಲಮನಸ್ಸಿನಿಂದ ಶ್ರವಣ ಮಾಡು. ॥೨೫॥ ಯಾವನಲ್ಲಿ ನಿಜವಾದ ಶಿವಭಕ್ತಿಯು ಉತ್ಪನ್ನವಾಗುತ್ತದೆಯೋ ಅವನು ಭಕ್ತನೆಂದು ಹೇಳಿಸಿಕೊಳ್ಳುವನು. ಆ ಭಕ್ತನು ಅನುಷ್ಠಾನಮಾಡತಕ್ಕ ಧರ್ಮಗಳ ಉಪದೇಶವೇ ಭಕ್ತಸ್ಥಲವೆನಿಸಿಕೊಳ್ಳುವುದು. ॥೨೬॥ ಈ ಭಕ್ತಸ್ಥಲವು—ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ದೀಕ್ಷಾಲಕ್ಷಣಗುರುಕಾರುಣ್ಯಸ್ಥಲ, ಲಿಂಗಧಾರಣಸ್ಥಲ, ಭಸ್ಮಧಾರಣಸ್ಥಲ, ರುದ್ರಾಕ್ಷಧಾರಣಸ್ಥಲ, ಪಂಚಾಕ್ಷರಜಪಸ್ಥಲ, ಭಕ್ತಮಾರ್ಗಕ್ರಿಯಾಸ್ಥಲ, ಉಭಯಸ್ಥಲ, ತ್ರಿವಿಧಸಂಪತ್ತಿಸ್ಥಲ, ಪ್ರಸಾದಸ್ವೀಕಾರಸ್ಥಲ, ಸೋಪಾಧಿದಾನಸ್ಥಲ, ನಿರುಪಾಧಿದಾನಸ್ಥಲ, ಸಹಜದಾನಸ್ಥಲ ಎಂಬ

೧ ಪಿಂಡಸ್ಥಲಂ

ಬಹುಜನ್ಮಕೃತೈಃ ಪುಣ್ಯೈಃ ಪ್ರಕ್ಷೀಣೇ ಪಾಪಪಂಜರೇ ।
ಶುದ್ಧಾಂತಃಕರಣೋ ದೇಹೀ ಪಿಂಡಶಬ್ದೇನ ಗೀಯತೇ ॥೩೧॥

ಶಿವಶಕ್ತಿಸಮುತ್ಪನ್ನೇ ಪ್ರಪಂಚೇಽಸ್ಮಿನ್ ವಿಶಿಷ್ಯತೇ ।
ಪುಣ್ಯಾಧಿಕಃ ಕ್ಷೀಣಪಾಪಃ ಶುದ್ಧಾತ್ಮಾ ಪಿಂಡನಾಮಕಃ ॥೩೨॥

ಏಕ ಏವ ಶಿವಃ ಸಾಕ್ಷಾಚ್ಚಿದಾನಂದಮಯೋ ವಿಭುಃ ।
ನಿರ್ವಿಕಲ್ಪೋ ನಿರಾಕಾರೋ ನಿರ್ಗುಣೋ ನಿಷ್ಪ್ರಪಂಚಕಃ ॥೩೩॥

ಅನಾದ್ಯವಿದ್ಯಾಸಂಬಂಧಾತ್ತದಂಶೋ ಜೀವನಾಮಕಃ ।
ದೇವತಿರ್ಯಙ್ಮನುಷ್ಯಾದಿಜಾತಿಭೇದೇ ವ್ಯವಸ್ಥಿತಃ ॥
ಮಾಯೀ ಮಹೇಶ್ವರಸ್ತೇಷಾಂ ಪ್ರೇರಕೋ ಹೃದಿ ಸಂಸ್ಥಿತಃ ॥೩೪॥

ಚಂದ್ರಕಾಂತೇ ಯಥಾ ತೋಯಂ ಸೂರ್ಯಕಾಂತೇ ಯಥಾಽನಲಃ ।
ಬೀಜೇ ಯಥಾಂಕುರಃ ಸಿದ್ಧಸ್ತಥಾಽಽತ್ಮನಿ ಶಿವಃ ಸ್ಥಿತಃ ॥೩೫॥

ಭೇದದಿಂದ ೧೫ ಪ್ರಕಾರವಾಗಿರುವುದು. ಶಿವಭಕ್ತನಾದವನು ಈ ೧೫ ಸ್ಥಲಗಳಲ್ಲುಕ್ತವಾದ ಧರ್ಮಗಳನ್ನು ಪ್ರಯತ್ನಪೂರ್ವಕವಾಗಿ ಆಚರಿಸಬೇಕು. ॥೨೭-೨೮-೨೯-೩೦॥

೧ ಪಿಂಡಸ್ಥಲ.

ಬಹುಜನ್ಮಗಳಲ್ಲಿ ಮಾಡಿದ ಪುಣ್ಯಗಳಿಂದ ಪಾಪಸಮೂಹವು ನಷ್ಟವಾಗಲು, ಜೀವನು ಶುದ್ಧಾಂತಃಕರಣಯುಕ್ತನಾಗಿ "ಪಿಂಡ" ಎಂದು ಹೇಳಿಸಿಕೊಳ್ಳುವನು. ॥೩೧॥ ಶಕ್ತಿವಿಶಿಷ್ಟಪರಶಿವನಿಂದ ಉತ್ಪನ್ನವಾದೀ ಪ್ರಪಂಚದಲ್ಲಿ ಪುಣ್ಯಾಧಿಕ್ಯದಿಂದ ಪಾಪಸಮೂಹವನ್ನು ನಾಶಗೊಳಿಸಿಕೊಂಡು ಶುದ್ಧಾತ್ಮನಾದ ಪಿಂಡನಾಮಕಜೀವನು ಸರ್ವರಿಗಿಂತಲೂ ಶ್ರೇಷ್ಠನೆನಿಸಿಕೊಳ್ಳುವನು. ॥೩೨॥ ಪರಶಿವನು ಚಿದಾನಂದಸ್ವರೂಪನೂ, ಸರ್ವವ್ಯಾಪಕನೂ, ಭೇದರಹಿತನೂ, ನೀಲಪೀತಾದ್ಯಾಕಾರರಹಿತನೂ, ಮಾಯಿಕಸತ್ವರಜಸ್ತಮೋಗುಣಶೂನ್ಯನೂ, ಮಾಯಿಕಪ್ರಪಂಚದೂರನೂ, "ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ" "ಏಕಮೇವಾದ್ವಿತೀಯಂ ಬ್ರಹ್ಮ" ಇತ್ಯಾದಿಶ್ರುತಿಪ್ರಮಾಣಾನುಸಾರವಾಗಿ ಒಬ್ಬನೇ ಒಬ್ಬನೂ ಆಗಿರುವನು. ॥೩೩॥ ತನ್ನಲ್ಲಿ ನಿತ್ಯಸಂಬಂಧದಿಂದಿರುವ ವಿಮರ್ಶಶಕ್ತಿಯಲ್ಲಿ ಅಡಕವಾಗಿರುವ ಅನಾದಿಮಾಯೆಯ ಸಂಬಂಧ

ದಿಂದ ಆ ಪರಶಿವನ ಅಂಶವು "ಜೀವ" ನೆನಿಸಿಕೊಳ್ಳುವುದು. ಆ ಜೀವನು ದೇವ-ಮನುಷ್ಯ-ಪಶು-ಪಕ್ಷಿ-ಮೃಗ-ಜಲಚರ ಇತ್ಯಾದ್ಯನಂತಾನಂತಭೇದಗಳಿಂದ ಕೂಡಿದ ಪ್ರಾಣಿವರ್ಗದಲ್ಲಿ ವಾಸಿಸುವನು. ''ಮಾಯಾಂತು ಪ್ರಕೃತಿಂವಿದ್ಯಾನ್ಮಾಯಿನಂತು ಮಹೇಶ್ವರಂ'' ಎಂಬ ಶ್ರುತಿಪ್ರಮಾಣಾನುಸಾರವಾಗಿ ಆ ಪರಶಿವನು ಮಾಯಾಶಕ್ತಿ (ವಿಮರ್ಶಶಕ್ತಿ) ಯಿಂದೊಡಗೂಡಿ ಪ್ರೇರಕನಾಗಿ ಸಮಸ್ತಪ್ರಾಣಿಗಳ ಹೃದಯದಲ್ಲಿ ವಾಸಿಸುವನು. ||

ಜೀವನು ಶಿವಾಂಶರೂಪನಾಗಿರುವನೆಂಬ ಅಭಿಪ್ರಾಯವನ್ನು ಬ್ರಹ್ಮಸೂತ್ರವು— '' ಅಂಶೋ ನಾನಾವ್ಯಪದೇಶಾತ್ '' ಎಂಬ ಸೂತ್ರದಿಂದ ಸಮರ್ಥಿಸುತ್ತಿರುವುದು.

ಯಥಾ ಸುದೀಪ್ತಾತ್ಪಾವಕಾತ್ ವಿಸ್ಫುಲಿಂಗಾಃ ಸಹಸ್ರಶಃ ಪ್ರಭವಂತೇ ಸರೂಪಾಃ
ತಥಾಽಕ್ಷರಾದ್ವಿವಿಧಾಃ ಸೋಮ್ಯ ಭಾವಾಃ ಪ್ರಜಾಯಂತೇ ತತ್ರ ಚೈವಾಪಿಯಂತಿ ||

ಅಗ್ನಿಯಿಂದ ಅಗ್ನ್ಯಂಶರೂಪಗಳಾದ ಅನಂತಾನಂತಾಗ್ನಿಕಣಗಳು ಹೇಗೆ ಆವಿರ್ಭವಿಸುವುವೋ, ಹಾಗೆಯೇ ಪರಬ್ರಹ್ಮದಿಂದ ತದಂಶಭೂತರಾದ ಅನಂತಾನಂತ ಜೀವರು ಆವಿರ್ಭವಿಸುವರೆಂದೂ, ಅಲ್ಲಿಯೇ ಲಯವನ್ನು ಹೊಂದುವರೆಂದೂ ಮುಂಡಕ ಶ್ರುತಿಯು ಸಾರುತ್ತಿರುವುದು.

ಜೀವನು ಸ್ಥೂಲಚಿದಚಿದಾತ್ಮಕಶಕ್ತಿವಿಶಿಷ್ಟನಾಗಿರುವನು. ಜೀವನ ಸ್ಥೂಲ ಚಿಚ್ಛಕ್ತಿಯು ಕಿಂಚಿದ್‍ಜ್ಞತಾರೂಪವಾಗಿರುವುದು. ಸ್ಥೂಲಾಚಿಚ್ಛಕ್ತಿಯು ಕಿಂಚಿತ್ ಕರ್ತೃತಾರೂಪವಾಗಿರುವುದು. ಜೀವನು ಈ ಎರಡುವಿಧಶಕ್ತಿಗಳಿಗೆ ಆಶ್ರಯವಾದ ಇಚ್ಛಾಶಕ್ತಿಯಿಂದ ಕೂಡಿಕೊಂಡಿರುವನು ಅರ್ಥಾತ್ ಇಚ್ಛಾಶಕ್ತಿವಿಶಿಷ್ಟನಾಗಿರುವನು. ಶಿವಾಂಶೀಭೂತನಾದ ಜೀವನು ಕಿಂಚಿದ್‍ಜ್ಞನೂ, ಕಿಂಚಿತ್ಕರ್ತೃವೂ, ಕಿಂಚಿಚ್ಛಕ್ತಿ ಯುತನೂ, ಅವಿದ್ಯಾಮೋಹಿತನೂ, ಬ್ರಹ್ಮೈಕ್ಯಜ್ಞಾನವರ್ಜಿತನೂ, ಘೋರಾಪಾರ ನಿಸ್ಸಾರಸಂಸಾರತಾಪತ್ರಯಾನಲದಂದಹ್ಯಮಾನನೂ, ಬದ್ಧನೂ ಆಗಿರುವನು. ಪರಶಿವನು ಸಚ್ಚಿದಾನಂದಸ್ವರೂಪನೂ, ಸರ್ವಜ್ಞನೂ, ಸರ್ವಕರ್ತೃವೂ, ಸರ್ವಶಕ್ತಿ ಸಮನ್ವಿತನೂ, ಉಪಮಾತೀತನೂ, ಜನನಮರಣರಹಿತನೂ, ಚರಾಚರಪ್ರಪಂಚ ವ್ಯಾಪಕನೂ, ನಿತ್ಯನೂ ಆಗಿರುವನು.

ವೀರಶೈವಸಿದ್ಧಾಂತದಲ್ಲಿ ಶಿವಜೀವರಿಗೆ ಪಾರಮಾರ್ಥಿಕಭೇದಾಭೇದವು ಅಂಗೀ ಕೃತವಾಗಿರುವುದು. ಅಗ್ನಿಯಿಂದಾವಿರ್ಭವಿಸಿದ ಅಗ್ನಿಕಣಗಳಿಗೂ ಅಗ್ನಿಗೂ ಅತ್ಯಂತ ಭೇದವನ್ನಾಗಲಿ ಅಥವಾ ಅತ್ಯಂತಾಭೇದವನ್ನಾಗಲಿ ಹೇಳಲಿಕ್ಕೆ ಬಾರದಿರುವಂತೆ, ಶಿವನಿಂದಾವಿರ್ಭವಿಸಿ ಶಿವಾಂಶರೆನಿಸಿದ ಜೀವರಿಗೂ ಶಿವನಿಗೂ ಅತ್ಯಂತಭೇದವನ್ನಾಗಲಿ ಅಥವಾ ಅತ್ಯಂತಾಭೇದವನ್ನಾಗಲಿ ಹೇಳಲಿಕ್ಕೆ ಬರುವುದಿಲ್ಲ. ಆದರೆ ಭೇದಾಭೇದವನ್ನು ಮಾತ್ರ ಹೇಳಬೇಕಾಗುವುದು. ಅಂಶಾಂಶಿಗಳಿಗೆ ಅತ್ಯಂತಾಭೇದವನ್ನು ಹೇಳಿದರೆ,

ಅಗ್ನಿಯಿಂದಾಗುವ ಪಾಕಾದಿಕ್ರಿಯೆಗಳು ಅಗ್ನ್ಯಂಶಗಳಾದ ಕಿಡಿಗಳಿಂದಲೂ ಆಗಬೇಕಾದೀತು? ಅತ್ಯಂತಭೇದವನ್ನು ಹೇಳಿದರೆ ಅಗ್ನಿಗೆ ಅತ್ಯಂತಭಿನ್ನಗಳಾದ ಜಲಾದಿಗಳಿಂದ ದಾಹಕಾರ್ಯವಾಗದಿರುವಂತೆ, ಅಗ್ನಿಯ ಕಿಡಿಗಳಿಂದಲೂ ದಾಹಕಾರ್ಯವಾಗದೆ ಹೋಗಬೇಕಾದೀತು? ಅಗ್ನಿಯ ಕಿಡಿಗಳು ಅರಳೆಯನ್ನು ಪ್ರವೇಶಿಸಿ ದಾಹಕಾರ್ಯವನ್ನುಂಟುಮಾಡುವುದು ಲೋಕಪ್ರಸಿದ್ಧವಷ್ಟೆ! ಇದರಂತೆ ಶಿವನಿಗೂ ಶಿವಾಂಶರೂಪರಾದ ಜೀವರಿಗೂ ಅತ್ಯಂತಾಭೇದವನ್ನು ಹೇಳಿದರೆ, ಶಿವನಲ್ಲಿರುವ ಸರ್ವಜ್ಞತ್ವ-ಸರ್ವಕರ್ತೃತ್ವಾದಿಗಳು ಜೀವರಲ್ಲಿಯೂ ಇರಬೇಕಾದೀತು? ಅತ್ಯಂತಭೇದವನ್ನು ಹೇಳಿದರೆ ಶಿವನಿಗೆ ಭಿನ್ನಗಳಾದ ಘಟಪಟಾದಿಗಳಿಂದ ಜ್ಞಾನರೂಪಕಾರ್ಯವಾಗದಿರುವಂತೆ ಜೀವರಿಂದಲೂ ಆಗಬಾರದಾದೀತು? ಜೀವರಿಗೆ ಘಟಪಟಾದಿವಸ್ತುಗಳ ಜ್ಞಾನವಿರುವುದು ಸರಿಯಷ್ಟೆ! ಆದುದರಿಂದ ವೀರಶೈವಾಚಾರ್ಯರು ಶಿವನಿಗೂ ಜೀವನಿಗೂ ಪಾರಮಾರ್ಥಿಕವಾದ ಭೇದಾಭೇದವನ್ನು ಒಪ್ಪಿರುವರು. ಇದರಿಂದಲೇ ವೀರಶೈವಮತಕ್ಕೆ ದ್ವೈತಾದ್ವೈತಮತವೆಂತಲೂ ನಾಮಾಂತರವು ಪ್ರಾಪ್ತವಾಗಿರುವುದು. ಶ್ರುತಿಗಳಲ್ಲಿ "ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ" ಇತ್ಯಾದಿವಾಕ್ಯಗಳು ದ್ವೈತವನ್ನು ಪ್ರತಿಪಾದಿಸತಕ್ಕವುಗಳಾಗಿರುವುವು. "ತತ್ತ್ವಮಸಿ" "ಅಹಂ ಬ್ರಹ್ಮಾಸ್ಮಿ" "ನೇಹ ನಾನಾಸ್ತಿ ಕಿಂಚನ" ಇತ್ಯಾದಿವಾಕ್ಯಗಳು ಅದ್ವೈತವನ್ನು ಪ್ರತಿಪಾದಿಸತಕ್ಕವುಗಳಾಗಿರುವುವು. ಈ ಉಭಯವಿಧವಾಕ್ಯಗಳಿಗೂ ಸುಗಮಮಾರ್ಗದಿಂದ ಸಾಮಂಜಸ್ಯವನ್ನುಂಟುಮಾಡುವುದು ವೈದಿಕಮತಾನುಯಾಯಿಗಳ ಮುಖ್ಯಕರ್ತವ್ಯವಾಗಿರುವುದರಿಂದಲೂ, ಇದೇ ಮಾರ್ಗವನ್ನು ವೀರಶೈವಮತಾಚಾರ್ಯರು ಅನುಸರಿಸಿರುವುದರಿಂದಲೂ ವೀರಶೈವಸಿದ್ಧಾಂತವು ಸರ್ವಶ್ರುತಿಸಮ್ಮತವಾಗಿರುವುದು.

ಇದೇ ವಿಷಯವನ್ನು ವೀರಶೈವಮತಭಾಷ್ಯಕಾರರಾದ ಶ್ರೀಪತಿಪಂಡಿತರು ತಮ್ಮಿಂದ ರಚಿಸಲ್ಪಟ್ಟ ಶ್ರೀಕರಭಾಷ್ಯದಲ್ಲಿ—

> ದ್ವೈತಾದ್ವೈತಮತೇ ಶುದ್ಧೇ ವಿಶೇಷಾದ್ವೈತಸಂಜ್ಞಕೇ ।
> ವೀರಶೈವೈಕಸಿದ್ಧಾಂತೇ ಸರ್ವಶ್ರುತಿಸಮನ್ವಯಃ ॥

ಎಂದು ಉಲ್ಲೇಖಿಸಿರುವರು. ಇದರಿಂದ ವೀರಶೈವಮತವು ಭೇದಾಭೇದಾತ್ಮಕವಾದುದೆಂದು ಸಿದ್ಧವಾಗುವುದು. ॥೩೪॥ ಚಂದ್ರಕಾಂತಶಿಲೆಯಲ್ಲಿ ನೀರು ಹೇಗೆ ಸ್ವಾಭಾವಿಕವಾಗಿರುವುದೋ, ಸೂರ್ಯಕಾಂತಶಿಲೆಯಲ್ಲಿ ಅಗ್ನಿಯು ಹೇಗೆ ಸ್ವಾಭಾವಿಕವಾಗಿರುವುದೋ, ಬೀಜದಲ್ಲಿ ಅಂಕುರವು ಹೇಗೆ ಸ್ವಾಭಾವಿಕವಾಗಿರುವುದೋ, ಹಾಗೆ ಜೀವನಲ್ಲಿ ಪರಶಿವನು ಸ್ವಾಭಾವಿಕವಾಗಿರುವನು. ॥೩೫॥

ಗುಣತ್ರಯಾತ್ಮಿಕಾ ಶಕ್ತಿರ್ಬ್ರಹ್ಮನಿಷ್ಠಾ ಸನಾತನೀ ।
ತದ್ವೈಷಮ್ಯಾತ್ಸಮುತ್ಪನ್ನಾ ತಸ್ಮಿನ್ ವಸ್ತುತ್ರಯಾಭಿಧಾ ॥೩೬॥

"ಔಷ್ಣ್ಯಂ ಹುತಾಶ ಇವ ಶೀತಲಿಮಾನಮಿಂದೌ ಶಯ್ಯಾಸು ಮಾರ್ದವಮಿವಾಶ್ಮಸು ಕರ್ಕಶತ್ವಂ ||" ಎಂಬ ಪ್ರಮಾಣಾನುಸಾರವಾಗಿ – ಅಗ್ನಿಯಲ್ಲಿ ಉಷ್ಣತ್ವವು ಸ್ವಭಾವ ಸಿದ್ಧವಾಗಿರುವಂತೆಯೂ, ಚಂದ್ರನಲ್ಲಿ ಶೀತಲತ್ವವು ಸ್ವಭಾವಸಿದ್ಧವಾಗಿರುವಂತೆಯೂ, ಹಾಸಿಗೆಯಲ್ಲಿ ಮೃದುತ್ವವು ಸ್ವಭಾವಸಿದ್ಧವಾಗಿರುವಂತೆಯೂ, ಕಲ್ಲಿನಲ್ಲಿ ಕರ್ಕಶತ್ವವು ಸ್ವಭಾವಸಿದ್ಧವಾಗಿರುವಂತೆಯೂ ಸಚ್ಚಿದಾನಂದರೂಪಪರಶಿವಬ್ರಹ್ಮದಲ್ಲಿ ಅನಾದಿಯಾದ ವಿಮರ್ಶಶಕ್ತಿಯು ಸ್ವಭಾವಸಿದ್ಧವಾಗಿರುವುದು. "ಮಯೂರಾಂಡರಸನ್ಯಾಯ" ದಂತೆ (ನವಿಲಿನ ತತ್ತಿಯ ರಸದಲ್ಲಿ ಮುಂದೆ ಉತ್ಪನ್ನವಾಗುವ ನವಿಲಿನ ಪಾದ-ರೆಕ್ಕೆ-ನಾನಾವಿಧ ಬಣ್ಣಗಳು ಅಡಕವಾಗಿರುವಂತೆ) ಆ ವಿಮರ್ಶಶಕ್ತಿಯಲ್ಲಿ ಸಕಲಚರಾಚರಾತ್ಮಕವಾದ ಜಗತ್ತು ಅಡಕವಾಗಿರುವುದು. ಚರಾಚರವಿಶ್ವಾತ್ಮಕವಾದ ವಿಮರ್ಶಶಕ್ತಿಯು ಸ್ವವಿಭಾಗಪರಾಮರ್ಶದಶೆಯಲ್ಲಿ ಸತ್ತ್ವಗುಣ-ರಜೋಗುಣ-ತಮೋಗುಣರೂಪವುಳ್ಳದಾಗುವುದು. ಆ ವಿಮರ್ಶಶಕ್ತಿಯ ಅಂಶದಲ್ಲಿ ಉತ್ತಮಕರ್ತೃತ್ವವಿನಿರ್ಮುಕ್ತಜ್ಞಾನಾಂಶದಿಂದ ಸತ್ತ್ವಗುಣಾತ್ಮಕವಾದ ವಿದ್ಯಾಶಕ್ತಿಯು ಉತ್ಪನ್ನವಾಗುವುದು. ಉತ್ತಮಜ್ಞಾತೃತ್ವವಿನಿರ್ಮುಕ್ತಕ್ರಿಯಾಂಶದಿಂದ ಕಿಂಚಿತ್ಸತ್ತ್ವತಮೋಗುಣಮಿಶ್ರವಾದ ರಜೋಗುಣಶಕ್ತಿಯು ಉತ್ಪನ್ನವಾಗುವುದು. ಜ್ಞಾನಕ್ರಿಯೆಗಳಿಗೆ ಸ್ವಾಭಾವಿಕವಾಗಿ ಐಕ್ಯವಿದ್ದರೂ ಸೃಷ್ಟಿದಶೆಯಲ್ಲಿ ಜ್ಞಾನಶಕ್ತಿಕ್ರಿಯಾಶಕ್ತಿಗಳು ಪರಸ್ಪರವಾಗಿ ವಿಭಾಗವನ್ನು ಹೊಂದುವುದರಿಂದ "ಜ್ಞಾನಂ ಕ್ರಿಯಾ ನ ಭವತಿ ಕ್ರಿಯಾ ಜ್ಞಾನಂ ನ ಭವತಿ" ಜ್ಞಾನವು ಕ್ರಿಯೆಯಾಗುವುದಿಲ್ಲ, ಕ್ರಿಯೆಯು ಜ್ಞಾನವಾಗುವುದಿಲ್ಲವೆಂಬ ಭೇದಬುದ್ಧಿರೂಪವಾದ ತಮೋಗುಣಶಕ್ತಿಯು ಉತ್ಪನ್ನವಾಗುವುದು. ಈ ತಮೋಗುಣಶಕ್ತಿಯೇ ಜಡವಾದ ಮಾಯೆಯೆನಿಸುವುದು. ಸೂರ್ಯಕಿರಣವು ಸೂರ್ಯಕಾಂತಶಿಲೆಗೆ ಸ್ಪರ್ಶಿಸಿ ಪ್ರತಿಸ್ಫುರಣ (ಎದುರು) ಗತಿಯಿಂದ ಅಗ್ನಿಕಣರೂಪವಾಗಿ ಅರಳೆಯನ್ನು ಸೇರಿ ಅಗ್ನ್ಯಾಕಾರವನ್ನು ಧರಿಸುವಂತೆ, ಶಿವನ ವಿಮರ್ಶಶಕ್ತಿಯು ಜಡಮಾಯಾಶಕ್ತಿಯನ್ನು ಪ್ರತಿಸ್ಫುರಣಗತಿಯಿಂದ ಪ್ರವೇಶಿಸಿ ಸುಖದುಃಖಮೋಹಗಳನ್ನುಂಟುಮಾಡುವ ಸತ್ತ್ವರಜಸ್ತಮೋಗುಣಾತ್ಮಕವಾದ ಪ್ರಕೃತಿಯ ಆಕಾರವನ್ನು ಧರಿಸುವುದು.

ಸತ್ತ್ವರಜಸ್ತಮೋಗುಣಗಳ ವೈಷಮ್ಯ (ತಾರತಮ್ಯ)ದಿಂದ ಆ ವಿಮರ್ಶಶಕ್ತಿಯು ಶುದ್ಧಚಿದ್ರೂಪನಾದ ಪರಶಿವನಲ್ಲಿ ಭೋಕ್ತೃ-ಭೋಜ್ಯ-ಪ್ರೇರಕರೂಪವಾಗಿ ಪರಿಣಮಿಸುವುದು.

ಕಿಂಚಿತ್ಸತ್ತ್ವರಜೋರೂಪಂ ಭೋಕ್ತೃಸಂಜ್ಞಕಮುಚ್ಯತೇ ।
ಅತ್ಯಂತತಾಮಸೋಪಾಧಿರ್ಭೋಜ್ಯಮಿತ್ಯಭಿಧೀಯತೇ ॥೩೭॥
ಪರತತ್ತ್ವಮಯೋಪಾಧಿರ್ಬ್ರಹ್ಮಚೈತನ್ಯಮೀಶ್ವರಃ ।
ಭೋಕ್ತಾ ಭೋಜ್ಯಂ ಪ್ರೇರಯಿತಾ ವಸ್ತುತ್ರಯಮಿದಂ ಸ್ಮೃತಂ ॥೩೮॥

ತದೀಯಾ ಪರಮಾ ಶಕ್ತಿಃ ಸಚ್ಚಿದಾನಂದಲಕ್ಷಣಾ ।
ಸಮಸ್ತಲೋಕನಿರ್ಮಾಣಸಮವಾಯಸ್ವರೂಪಿಣೀ ॥
ತದಿಚ್ಛಯಾಽಭವತ್ಸಾಕ್ಷಾತ್ತತ್ಸ್ವರೂಪಾನುಕಾರಿಣೀ ॥

ಪರಶಿವಸಂಬಂಧಿನಿಯಾದ ಆ ಶಕ್ತಿಯು ಸಮಸ್ತಲೋಕಗಳ ನಿರ್ಮಾಣದಲ್ಲಿ ಸಮವಾಯಸ್ವರೂಪದಿಂದಿದ್ದು, ಅವನ ಇಚ್ಛೆಗನುಸಾರವಾಗಿ ಸಾಕ್ಷಾತ್ ಅವನ ಸ್ವರೂಪವೇ ಆಗುವುದು. ಎಂಬ ಪ್ರಮಾಣಾನುಸಾರವಾಗಿ ಶಕ್ತಿಯು ಪರಶಿವನಿಗೆ ಅಭಿನ್ನವಾಗಿದ್ದು ವಿಶ್ವೋತ್ಪಾದನಕಾರಣೀಭೂತವಾಗಿರುವುದು.

ಚಿದಾತ್ಮೈವ ಹಿ ದೇವೋಽಂತಃಸ್ಥಿತಮಿಚ್ಛಾವಶಾದ್ಬಹಿಃ ।
ಯೋಗೀವ ನಿರುಪಾದಾನಮರ್ಥಜಾತಂ ಪ್ರಕಾಶಯೇತ್ ॥

ಈ ಲೋಕದಲ್ಲಿ ಯೋಗಿಯು ತನ್ನ ಇಚ್ಛಾನುಸಾರವಾಗಿ ಪದಾರ್ಥಗಳನ್ನು ಪ್ರಕಾಶಪಡಿಸುವಂತೆ, ಪರಶಿವನು ತನ್ನಲ್ಲಿ ಅಡಕವಾಗಿರುವ ಜಗತ್ತನ್ನು ವಿಮರ್ಶಶಕ್ತಿಯಿಂದ ಪ್ರಕಾಶಪಡಿಸುವನು; ಎಂದು ಪ್ರಮಾಣವಿರುವುದರಿಂದ ಚರಾಚರಾತ್ಮಕವಾದ ಜಗತ್ತು ಅನಾದಿಕಾಲದಿಂದಲೂ ಆ ಪರಬ್ರಹ್ಮದಲ್ಲಿ ಸದ್ರೂಪವಾಗಿರುವುದೆಂದು ಸಿದ್ಧವಾಗುವುದು. ಇದೇ ವಿಷಯವನ್ನು ಗೀತೆಯೂ ಕೂಡ "ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ॥" ಎಂಬ ವಾಕ್ಯದಿಂದ ಸಮರ್ಥಿಸುತ್ತಿರುವುದು. ಇದರಿಂದ ಚರಾಚರಾತ್ಮಕವಾದೀಜಗತ್ತು ಮಾಯಾವಾದಿಗಳು ಹೇಳುವಂತೆ ಮಿಥ್ಯೆಯಾಗಿರದೆ ಸತ್ಯವಾದುದೆಂದು ಸಿದ್ಧಾಂತವಾಗುವುದು. ॥೩೬॥

ಕಿಂಚಿತ್ಸತ್ತ್ವರಜೋಗುಣರೂಪವಾದ ಜೀವಚೈತನ್ಯವು "ಭೋಕ್ತೃ"ವೆನಿಸಿಕೊಳ್ಳುವುದು. ಅತ್ಯಂತತಾಮಸೋಪಾಧಿವಿಶಿಷ್ಟವಾದ ಚೈತನ್ಯವು ರಸಾದಿರೂಪವಾದ "ಭೋಜ್ಯ"ವೆನಿಸಿಕೊಳ್ಳುವುದು. ॥೩೭॥ ಪರತತ್ತ್ವರೂಪಶುದ್ಧಸತ್ತ್ವಗುಣೋಪಾಧಿವಿಶಿಷ್ಟಬ್ರಹ್ಮಚೈತನ್ಯವುಳ್ಳ ಮಹೇಶ್ವರನು "ಪ್ರೇರಕ"ನೆನಿಸಿಕೊಳ್ಳುವನು. "ಭೋಕ್ತೃ-ಭೋಜ್ಯ-ಪ್ರೇರಕ" ಇವೇ ಮೂರು ವಸ್ತುಗಳೆನಿಸಿಕೊಳ್ಳುವುವು. ॥೩೮॥ ಇವುಗಳಲ್ಲಿ ಶುದ್ಧೋಪಾಧಿವಿಶಿಷ್ಟನಾದ ಮಹೇಶ್ವರನು "ಪ್ರೇರಕ"

ಅತ್ರ ಪ್ರೇರಯಿತಾ ಶಂಭುಃ ಶುದ್ಧೋಪಾಧಿರ್ಮಹೇಶ್ವರಃ ।
ಸಮಿಶ್ರೋಪಾಧಯಃ ಸರ್ವೇ ಭೋಕ್ತಾರಃ ಪಶವಃ ಸ್ಮೃತಾಃ ॥
ಭೋಜ್ಯಮವ್ಯಕ್ತಮಿತ್ಯುಕ್ತಂ ಶುದ್ಧತಾಮಸರೂಪಕಂ ॥೩೯॥

ಅತ್ಯಂತಗೂಢಚೈತನ್ಯಂ ಜಡಮವ್ಯಕ್ತಮುಚ್ಯತೇ ।
ಸರ್ವಜ್ಞಃ ಪ್ರೇರಕಃ ಶಂಭುಃ ಕಿಂಚಿದ್‌ಜ್ಞೋ ಜೀವ ಉಚ್ಯತೇ ॥೪೦॥

ಉಪಾಧಿಃ ಪುನರಾಖ್ಯಾತಃ ಶುದ್ಧಾಶುದ್ಧವಿಭೇದತಃ ।
ಶುದ್ಧೋಪಾಧಿಃ ಪರಾಮಾಯಾ ಸ್ವಾಶ್ರಯಾಽಮೋಹಕಾರಿಣೀ ॥೪೧॥

ಅಶುದ್ಧೋಪಾಧಿರಪ್ಯೇವಮವಿದ್ಯಾಽಽಶ್ರಯಮೋಹಿನೀ ।
ಅವಿದ್ಯಾಶಕ್ತಿಭೇದೇನ ಜೀವಾ ಬಹುವಿಧಾಃ ಸ್ಮೃತಾಃ ॥೪೨॥

ಮಾಯಾಶಕ್ತಿವಶಾದೀಶೋ ನಾನಾಮೂರ್ತಿಧರಃ ಪ್ರಭುಃ ।
ಸರ್ವಜ್ಞಃ ಸರ್ವಕರ್ತಾ ಚ ನಿತ್ಯಮುಕ್ತೋ ಮಹೇಶ್ವರಃ ॥೪೩॥

ನೆನಿಸುವನು. ಮಿಶ್ರೋಪಾಧಿಗಳಿಂದ ಕೂಡಿದ ಸಮಸ್ತಭೋಕ್ತೃಗಳು (ಜೀವರು) "ಪಶು"ಗಳೆಂದು ಹೇಳಿಸಿಕೊಳ್ಳುವರು. ಶುದ್ಧತಾಮಸರೂಪವಾದ ಭೋಜ್ಯವು "ಅವ್ಯಕ್ತ"ವೆಂದು ಅರ್ಥಾತ್ ಪ್ರಕೃತಿಯೆಂದು ಹೇಳಿಸಿಕೊಳ್ಳುವುದು. ॥೩೯॥ ಈ ಅವ್ಯಕ್ತವು (ಮಾಯೆಯು ಅಥವಾ ಪ್ರಕೃತಿಯು) ಜಡವಾಗಿದ್ದು, ಅತ್ಯಂತ ಗೂಢಚೈತನ್ಯವುಳ್ಳುದಾಗಿರುವುದು. ಲೋಕದಲ್ಲಿ ಜಡವಸ್ತುಗಳಾದ ಸಸಿಗಳೂ, ಶಿಲೆಗಳೂ ಅವ್ಯಕ್ತಚೈತನ್ಯದಿಂದ ಕೂಡಿ ಬೆಳೆಯುತ್ತಿರುವುದು ಸುಪ್ರಸಿದ್ಧವಷ್ಟೆ! ಸರ್ವಜ್ಞನಾದ ಮಹೇಶ್ವರನು "ಪ್ರೇರಕ" ನೆನಿಸಿಕೊಳ್ಳುವನು. ಕಿಂಚಿದ್‌ಜ್ಞನು "ಜೀವ" ನೆನಿಸಿಕೊಳ್ಳುವನು. ॥೪೦॥ ಪೂರ್ವೋಕ್ತಮಾಯೋಪಾಧಿಯು ಪುನಃ ಶುದ್ಧ ಮತ್ತು ಅಶುದ್ಧ ಎಂದು ಎರಡು ಪ್ರಕಾರವಾಗುವುದು. ಶುದ್ಧೋಪಾಧಿರೂಪ ಪರಾಮಾಯೆಯು ತನ್ನನ್ನು (ಶಿವನನ್ನು) ಆಶ್ರಯಿಸಿಕೊಂಡಿದ್ದು, ಅವನಿಗೆ ಮೋಹ ವನ್ನುಂಟುಮಾಡತಕ್ಕುದಾಗಿರುವುದಿಲ್ಲ. ಇದೇ "ಊರ್ಧ್ವಮಾಯೆ" ಯೆನಿಸಿಕೊಳ್ಳು ವುದು. ॥೪೧॥ ಅಶುದ್ಧೋಪಾಧಿರೂಪವಾದ ಅವಿದ್ಯೆಯು ಜೀವರನ್ನಾಶ್ರಯಿಸಿಕೊಂಡು ಅವರನ್ನು ಮೋಹಗೊಳಿಸುವಂಥದಾಗುವುದು. ಇದೇ "ಅಧೋಮಾಯೆ" (ಪ್ರಕೃತಿ) ಯೆನಿಸಿಕೊಳ್ಳುವುದು. ಅವಿದ್ಯಾಶಕ್ತಿಭೇದದಿಂದ ಜೀವರು ಅನೇಕವಿಧರಾಗುವರು.॥೪೨॥ ಪರಮೇಶ್ವರನು ಮಾಯಾಶಕ್ತಿಯ ಸಂಬಂಧದಿಂದ ನಾನಾವಿಧದಿವ್ಯಮಂಗಲವಿಗ್ರಹ ರೂಪವನ್ನು ಧರಿಸುವಂಥವನಾಗಿ, ಕರ್ತುಮಕರ್ತುಮನ್ಯಥಾಕರ್ತುಂ ಸಮರ್ಥನೂ,

ಕಿಂಚಿತ್ಕರ್ತಾ ಚ ಕಿಂಚಿದ್‌ಜ್ಞೋ ಬದ್ಧೋಽನಾದಿಶರೀರವಾನ್ ।
ಅವಿದ್ಯಾಮೋಹಿತಾ ಜೀವಾ ಬ್ರಹ್ಮೈಕ್ಯಜ್ಞಾನವರ್ಜಿತಾಃ ॥೪೪॥
ಪರಿಭ್ರಮಂತಿ ಸಂಸಾರೇ ನಿಜಕರ್ಮಾನುಸಾರತಃ ।
ದೇವತಿರ್ಯಙ್ಮನುಷ್ಯಾದಿನಾನಾಯೋನಿವಿಭೇದತಃ ॥೪೫॥
ಚಕ್ರನೇಮಿಕ್ರಮೇಣೈವ ಭ್ರಮಂತಿ ಹಿ ಶರೀರಿಣಃ ।
ಜಾತ್ಯಾಯುರ್ಭೋಗವೈಷಮ್ಯಕಾರಣಂ ಕರ್ಮ ಕೇವಲಂ ॥೪೬॥
ಏತೇಷಾಂ ದೇಹಿನಾಂ ಸಾಕ್ಷೀ ಪ್ರೇರಕಃ ಪರಮೇಶ್ವರಃ ।
ಸಂಸಾರೇ ಭ್ರಮತಾಂ ನಿತ್ಯಂ ಕರ್ಮಯಂತ್ರನಿಯಂತ್ರಣೇ ॥೪೭॥
ದೇಹಿನಾಂ ಪ್ರೇರಕಃ ಶಂಭುರ್ಹಿತಮಾರ್ಗೋಪದೇಶಕಃ ।
ಪುನರಾವೃತ್ತಿರಹಿತಮೋಕ್ಷಮಾರ್ಗೋಪದೇಶಕಃ ॥೪೮॥

ಸರ್ವಜ್ಞನೂ, ಸಕಲಪ್ರಪಂಚನಿರ್ಮಾಣಕಾರಣೀಭೂತನೂ, ನಿತ್ಯಮುಕ್ತನೂ ಆಗಿರುವನು. ॥೪೩॥ ಜೀವನು ಕಿಂಚಿತ್ಕರ್ತೃವೂ, ಕಿಂಚಿದ್‌ಜ್ಞನೂ, ಆಣವಾದ್ಯನಾದಿಮಲಪಾಶಬದ್ಧನೂ, ಅನಾದಿಕಾಲದಿಂದ ಪ್ರಾಪ್ತವಾದ ಶರೀರಾಭಿಮಾನವುಳ್ಳವನೂ ಆಗಿರುವನು. ಅವಿದ್ಯೆಯಿಂದ ಮೋಹಿತರಾದ ಜೀವರು "ಅಹಂ ಬ್ರಹ್ಮಾಸ್ಮಿ" ಎಂಬ ತಾದಾತ್ಮ್ಯಜ್ಞಾನಶೂನ್ಯರಾಗಿರುವರು. ॥೪೪॥ ಜೀವರು ತಮ್ಮ ತಮ್ಮ ಕರ್ಮಾನುಸಾರವಾಗಿ ದೇವ-ಮನುಷ್ಯ-ಪಶು-ಪಕ್ಷಿ ಮೊದಲಾದ ೮೪ ಲಕ್ಷ ಜೀವರಾಶಿ ಯೋನಿಗಳಲ್ಲಿ ಜನಿಸಿ, ಚಕ್ರನೇಮಿಕ್ರಮದಿಂದ ಸಂಸಾರದಲ್ಲಿ ಯಾವಾಗಲೂ ಸುತ್ತುತ್ತಿರುವರು. ಜಾತಿ-ಆಯುಷ್ಯ-ಸುಖ-ದುಃಖ-ಇತ್ಯಾದಿಗಳಿಗೆಲ್ಲಾ ಜೀವರ ಕರ್ಮವೇ ಮೂಲಕಾರಣವಾಗಿದೆ. ಬ್ರಾಹ್ಮಣಾದ್ಯುತ್ತಮಜಾತಿಗಳಲ್ಲಿ ಜನಿಸುವುದಕ್ಕೂ, ಶೂದ್ರಾದಿಕನಿಷ್ಠಜಾತಿಗಳಲ್ಲಿ ಜನಿಸುವುದಕ್ಕೂ ಜೀವರ ಕರ್ಮವೇ ಮುಖ್ಯಕಾರಣವಾಗಿದ್ದು, ಬ್ರಾಹ್ಮಣಾದಿಜಾತಿಗಳು ಜನ್ಮಸಿದ್ಧವಾದವುಗಳೆನ್ನುವುದೇ ಭಗವತ್ಪಾದರ ಮುಖ್ಯಾಭಿಪ್ರಾಯವಾಗಿದೆ. ಇದೇ ಅಭಿಪ್ರಾಯವನ್ನು ಯೋಗಶಾಸ್ತ್ರಪ್ರಣೇತೃಗಳಾದ ಪತಂಜಲಿಮಹರ್ಷಿಗಳು—"ಸತಿ ಮೂಲೇ ತದ್ವಿಪಾಕೋ ಜಾತ್ಯಾಯುರ್ಭೋಗಾಃ" ಎಂಬ ಯೋಗಸೂತ್ರದಲ್ಲಿ ಪ್ರತಿಪಾದಿಸುತ್ತಿರುವರು. ॥೪೫-೪೬॥ ಕರ್ಮಯಂತ್ರನಿಯಂತ್ರಿತವಾದ ಸಂಸಾರಚಕ್ರದಲ್ಲಿ ಯಾವಾಗಲೂ ಸುತ್ತುತ್ತಿರುವ ಜೀವರಿಗೆ ಪರಮೇಶ್ವರನು ಪ್ರೇರಕನೂ ಸಾಕ್ಷಿಭೂತನೂ ಆಗಿರುವನು. ॥೪೭॥ ಪ್ರೇರಕನಾದ ಪರಮೇಶ್ವರನು ಜೀವರಿಗೆ ಹಿತಕಾರಕಮಾರ್ಗವನ್ನುಪದೇಶಿಸುವವನೂ, ಪುನರಾವೃತ್ತಿರಹಿತವಾದ

ಸ್ವಕರ್ಮಪರಿಪಾಕೇನ ಪ್ರಕ್ಷೀಣಮಲವಾಸನಃ ।
ಶಿವಪ್ರಸಾದಾಜ್ಜೀವೋಽಯಂ ಜಾಯತೇ ಶುದ್ಧಮಾನಸಃ ॥೪೯॥

ಶುದ್ಧಾಂತಃಕರಣೇ ಜೀವೇ ಶುದ್ಧಕರ್ಮವಿಪಾಕತಃ ।
ಜಾಯತೇ ಶಿವಕಾರುಣ್ಯಾತ್ ಪ್ರಸ್ಫುಟಾ ಭಕ್ತಿರೈಶ್ವರೀ ॥
ಜಂತುರಂತ್ಯಶರೀರೋಽಸೌ ಪಿಂಡಶಬ್ದಾಭಿಧೇಯಕಃ ॥೫೦॥

೨ ಪಿಂಡಜ್ಞಾನಸ್ಥಲಂ

ಶರೀರಾತ್ಮವಿವೇಕೇನ ಪಿಂಡಜ್ಞಾನೀ ಸ ಕಥ್ಯತೇ ।
ಶರೀರಮೇವ ಚಾರ್ವಾಕೈರಾತ್ಮೇತಿ ಪರಿಕೀರ್ತ್ಯತೇ ॥೫೧॥

ಮೋಕ್ಷಮಾರ್ಗವನ್ನು ತೋರಿಸುವವನೂ ಆಗಿರುವನು. ॥೪೮॥ ಜೀವನು ತನ್ನ ಕರ್ಮಪರಿಪಾಕದಿಂದ ಅನಾದಿಮಲವಾಸನೆಯನ್ನು ಕಳೆದುಕೊಂಡು, ಶಿವಪ್ರಸಾದದಿಂದ ಶುದ್ಧಾಂತಃಕರಣವುಳ್ಳವನಾಗುವನು. ॥೪೯॥ ಜೀವನು ಶುದ್ಧಾಂತಃಕರಣವುಳ್ಳವನಾಗಲು, ಶಿವಕಾರುಣ್ಯದಿಂದ ಶಿವಸಂಬಂಧವಾದ ಶುದ್ಧಭಕ್ತಿಯು ಉತ್ಪನ್ನವಾಗುವುದು. ಈ ಪ್ರಕಾರವಾದ ಶುದ್ಧಶಿವಭಕ್ತಿಯುಕ್ತನಾದ ಜೀವನು ಚರಮಶರೀರಿಯಾಗಿ "ಪಿಂಡ" ಶಬ್ದವಾಚ್ಯನಾಗುವನು. ॥೫೦॥

೨ ಪಿಂಡಜ್ಞಾನಸ್ಥಲ

ದೇಹ ಮತ್ತು ಆತ್ಮ ಇವುಗಳ ವಿವೇಕವುಳ್ಳವನೇ ಪಿಂಡಜ್ಞಾನಿಯೆನಿಸಿಕೊಳ್ಳುವನು. ಲೋಕದಲ್ಲಿ ಮಾನವರಿಗೆ ಗೃಹಕ್ಷೇತ್ರಾದಿಗಳು (ಮನೆ-ಹೊಲ-ಧನ-ಧಾನ್ಯಾದಿಗಳು) ಅಭಿವೃದ್ಧಿಯಾಗಲು ಸುಖವೂ, ಇವು ನಾಶವಾಗಲು ದುಃಖವೂ ಆಗುತ್ತಿರುವುದು ಸ್ವಾಭಾವಿಕವಾಗಿರುವುದರಿಂದ, ವಿಷಯಾತ್ಮವಾದಿಗಳಾದ ಲೌಕಿಕರು ಗೃಹಕ್ಷೇತ್ರಾದಿಗಳೇ ಆತ್ಮನೆಂದು ತಿಳಿಯುತ್ತಿರುವರು. ಇವರಿಗಿಂತಲೂ ಸ್ವಲ್ಪಮಟ್ಟಿಗೆ ಹೆಚ್ಚಿನ ಜ್ಞಾನವುಳ್ಳ ಚಾರ್ವಾಕರು — ಮನೆ-ಹೊಲ ಮೊದಲಾದವುಗಳಿಗೆ, ಇದು ಪಶು, ಇದು ಪಕ್ಷಿ, ಇದು ಗ್ರಾಮ ಎಂಬ ವಿವೇಕವಿಲ್ಲದಿರುವುದರಿಂದಲೂ, ಶರೀರಕ್ಕೆ ಆ ವಿಧವಾದ ಜ್ಞಾನವಿರುವುದರಿಂದಲೂ ಶರೀರವೇ ಆತ್ಮನೆಂದು ನುಡಿಯುತ್ತಿರುವರು. ॥೫೧॥ ಶರೀರದಲ್ಲಿ ಪ್ರಾಣವಾಯುವಿನ ಸಂಚಾರವಿಲ್ಲದಿರುವಾಗ ಯಾವ ಜ್ಞಾನವೂ ಉತ್ಪನ್ನವಾಗದಿರುವುದರಿಂದ ಪ್ರಾಣವೇ ಆತ್ಮನೆಂದು ಕೆಲವರು ಹೇಳುತ್ತಿರುವರು. ಮಲಗಿರುವ ಸಮಯದಲ್ಲಿ ಪ್ರಾಣವಾಯುವಿನ ಸಂಚಾರವಿದ್ದರೂ ಇಂದ್ರಿಯಗಳ ವ್ಯಾಪಾರವಿಲ್ಲದಿರುವಕಾರಣ ಯಾವ ಜ್ಞಾನವೂ ಉಂಟಾಗದಿರುವುದರಿಂದ, ಇಂದ್ರಿಯ

ಇಂದ್ರಿಯಾಣಾಂ ತಥಾತ್ಮತ್ವಮುಪರೈಃ ಪರಿಭಾಷ್ಯತೇ ।
ಬುದ್ಧಿತತ್ತ್ವಗತೈರ್ಬೌದ್ಧೈರ್ಬುದ್ಧಿರಾತ್ಮೇತಿ ಗೀಯತೇ ॥೫೨॥

ನೇಂದ್ರಿಯಾಣಾಂ ನ ದೇಹಸ್ಯ ನ ಬುದ್ಧೇರಾತ್ಮತಾ ಭವೇತ್ ।
ಅಹಂಪ್ರತ್ಯಯವೇದ್ಯತ್ವಾದನುಭೂತಸ್ಮೃತೇರಪಿ ॥೫೩॥

ಶರೀರೇಂದ್ರಿಯಬುದ್ಧಿಭ್ಯೋ ವ್ಯತಿರಿಕ್ತಃ ಸನಾತನಃ ।
ಆತ್ಮಸ್ಥಿತಿವಿವೇಕೀ ಯಃ ಪಿಂಡಜ್ಞಾನೀ ಸ ಕಥ್ಯತೇ ॥೫೪॥

ನಶ್ವರಾಣಿ ಶರೀರಾಣಿ ನಾನಾರೂಪಾಣಿ ಕರ್ಮಣಾ ।
ಆಶ್ರಿತೋ ನಿತ್ಯ ಏವಾಸಾವಿತಿ ಜಂತೋರ್ವಿವೇಕಿತಾ ॥೫೫॥

ಶರೀರಾತ್ಪೃಥಗಾತ್ಮಾನಮಾತ್ಮನಃ ಪೃಥಗೀಶ್ವರಂ ।
ಪ್ರೇರಕಂ ಯೋ ವಿಜಾನಾತಿ ಪಿಂಡಜ್ಞಾನೀ ಸ ಕಥ್ಯತೇ ॥೫೬॥

ಗಳೇ ಆತ್ಮನೆಂದು ಬೇರೆ ಕೆಲವರು ನುಡಿಯುತ್ತಿರುವರು. ಚಕ್ಷುರಾದೀಂದ್ರಿಯಗಳು ಜಡವಾಗಿದ್ದು, ಬುದ್ಧಿಯ ಅಧೀನಗಳಾಗಿರುವುದರಿಂದ ಬುದ್ಧಿಯೇ ಆತ್ಮನೆಂದು ಬೌದ್ಧರು ಹೇಳುತ್ತಿರುವರು. ॥೫೨॥ "ನಾನು ಸ್ಥೂಲನು, ನಾನು ಕೃಶನು, ನಾನು ಸುಖಿಯು, ನಾನು ದುಃಖಿಯು, ಪೂರ್ವದಲ್ಲಿ ನಾನು ಬಾಲನಾಗಿದ್ದೆನು, ಈಗ ತರುಣನಾಗಿದ್ದೇನೆ, ವೃದ್ಧನಾಗಿದ್ದೇನೆ" ಎಂಬ ವ್ಯವಹಾರವು ಸಾಮಾನ್ಯವಾಗಿ ಸರ್ವರಲ್ಲಿಯೂ ಕಂಡುಬರುವುದರಿಂದ—ಶರೀರವೂ ಆತ್ಮನಲ್ಲ, ಇಂದ್ರಿಯಗಳೂ ಆತ್ಮನಲ್ಲ; ಬುದ್ಧಿಯೂ ಆತ್ಮನಲ್ಲ; ॥೫೩॥ ಶರೀರ-ಇಂದ್ರಿಯ-ಬುದ್ಧಿ ಇವೆಲ್ಲವುಗಳಿಗಿಂತಲೂ ವ್ಯತಿರಿಕ್ತನೂ, 'ಅಹಂ—ನಾನು' ಎಂಬ ಜ್ಞಾನಕ್ಕೆ ವಿಷಯಭೂತನೂ, ಅನಾದಿ ಸಂಸಿದ್ಧನೂ ಆದ ಆತ್ಮನು ಬೇರೊಬ್ಬನಿರುವನೆಂದು ಯಾವನು ಆತ್ಮಸ್ವರೂಪವನ್ನು ತಿಳಿಯುವನೋ, ಅವನೇ ಪಿಂಡಜ್ಞಾನಿಯೆಂದು ಹೇಳಿಸಿಕೊಳ್ಳುವನು. ॥೫೪॥ ಪೂರ್ವಕರ್ಮಾನುಸಾರವಾಗಿ ನಾನಾಯೋನಿಗಳಲ್ಲಿ ಜನಿಸಿ ನಾನಾರೂಪಗಳನ್ನು ಧರಿಸಿದ ಶರೀರಗಳು ನಾಶವುಳ್ಳವುಗಳು; ಆದರೆ ಇಂಥ ಶರೀರಗಳನ್ನು ಆಶ್ರಯಿಸಿರುವ ಆತ್ಮನು ಮಾತ್ರ ನಾಶರಹಿತನಾಗಿದ್ದು ನಿತ್ಯನಾಗಿದ್ದಾನೆಂದು ತಿಳಿಯುವುದೇ ವಿವೇಕವಾಗಿದೆ. ॥೫೫॥ ಶರೀರಕ್ಕಿಂತಲೂ ಆತ್ಮನು ಭಿನ್ನನಾಗಿರುವನೆಂದೂ, ಆತ್ಮನಿಗಿಂತಲೂ ಪ್ರೇರಕನಾದ ಈಶ್ವರನು ಭಿನ್ನನಾಗಿರುವನೆಂದೂ, ಯಾವನು ಜೀವಾತ್ಮಪರಮಾತ್ಮರ ಸ್ವರೂಪವನ್ನು ತಿಳಿಯುತ್ತಾನೆಯೋ ಅವನು "ಪಿಂಡಜ್ಞಾನಿ" ಯೆಂದು ಹೇಳಿಸಿಕೊಳ್ಳುವನು. ॥೫೬॥

೩ ಸಂಸಾರಹೇಯಸ್ಥಲಂ

ನಿರಸ್ತಹೃತ್ಕಲಂಕಸ್ಯ ನಿತ್ಯಾನಿತ್ಯವಿವೇಕಿನಃ ।
ಸಂಸಾರಹೇಯತಾಬುದ್ಧಿರ್ಜಾಯತೇ ವಾಸನಾಬಲಾತ್ ॥೫೭॥

ಐಹಿಕೇ ಕ್ಷಣಿಕೇ ಸೌಖ್ಯೇ ಪುತ್ರದಾರಾದಿಸಂಭವೇ ।
ಕ್ಷಯಿತ್ವಾದಿಯುತೇ ಸ್ವರ್ಗೇ ಕಸ್ಯ ವಾಂಛಾ ವಿವೇಕಿನಃ ? ॥೫೮॥

ಜಾತಸ್ಯ ಹಿ ಧ್ರುವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯ ಚ ।
ಜಂತುರ್ಮರಣಜನ್ಮಭ್ಯಾಂ ಪರಿಭ್ರಮತಿ ಚಕ್ರವತ್ ॥೫೯॥

ಮತ್ಸ್ಯಕೂರ್ಮವರಾಹಾಂಗೈರ್ನೃಸಿಂಹಮನುಜಾದಿಭಿಃ ।
ಜಾತೇನ ನಿಧನಂ ಪ್ರಾಪ್ತಂ ವಿಷ್ಣುನಾಽಪಿ ಮಹಾತ್ಮನಾ ॥೬೦॥

ಭೂತ್ವಾ ಕರ್ಮವಶಾಜ್ಜಂತುರ್ಬ್ರಾಹ್ಮಣಾದಿಷು ಜಾತಿಷು ।
ತಾಪತ್ರಯಮಹಾವಹ್ನಿಸಂತಾಪಾದ್ದಹ್ಯತೇ ಭೃಶಂ ॥೬೧॥

---

೩ ಸಂಸಾರಹೇಯಸ್ಥಲ

ಅನೇಕಜನ್ಮಾರ್ಜಿತಪುಣ್ಯವಿಶೇಷದಿಂದ ಮನೋದೋಷವನ್ನು ಕಳೆದುಕೊಂಡ ನಿತ್ಯಾನಿತ್ಯವಿವೇಕಬುದ್ಧಿಯುಳ್ಳವನಿಗೆ ಪುಣ್ಯವಾಸನಾಬಲದಿಂದ ಸಂಸಾರದಲ್ಲಿ ಹೇಯತಾಬುದ್ಧಿಯುತ್ಪನ್ನವಾಗುವುದು. ॥೫೭॥ ಈ ಲೋಕದಲ್ಲಿ ಹೆಂಡರು-ಮಕ್ಕಳು ಮೊದಲಾದವರಿಂದ ಉತ್ಪನ್ನವಾಗುವ ಕ್ಷಣಿಕಸುಖದಲ್ಲಿಯೂ, "ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ" ಎಂಬ ಪ್ರಮಾಣಾನುಸಾರವಾಗಿ ನಾಶಶೀಲವಾದ ಸ್ವರ್ಗದಲ್ಲಿಯೂ ವಿವೇಕಿಯಾದ ಯಾವ ಮಾನವನಿಗೆ ಇಚ್ಛೆಯು ಉತ್ಪನ್ನವಾದೀತು ? ಯಾರಿಗೂ ಇಚ್ಛೆಯು ಉತ್ಪನ್ನವಾಗುವುದಿಲ್ಲವೆಂದು ಭಾವವು. ॥೫೮॥ ಜನ್ಮವನ್ನು ಧರಿಸಿದ ಪ್ರಾಣಿಗೆ ಎಂದಾದರೂ ಮರಣವು ಸಿದ್ಧವು; ಮರಣಹೊಂದಿದ ಪ್ರಾಣಿಗೆ ಪುನಃ ಜನ್ಮಧಾರಣವೂ ಸಿದ್ಧವು. ಆದುದರಿಂದೀಲೋಕದಲ್ಲಿ ಪ್ರಾಣಿಯು ಜನನಮರಣಗಳಿಂದಕೂಡಿ ಚಕ್ರದಂತೆ ಸುತ್ತುತ್ತಿರುವುದು. ॥೫೯॥ ಮತ್ಸ್ಯ-ಕೂರ್ಮ-ವರಾಹ-ನೃಸಿಂಹ-ರಾಮ-ಕೃಷ್ಣ ಇತ್ಯಾದಿರೂಪದಿಂದ ನಾನಾಜನ್ಮಧಾರಣಮಾಡಿದ ವಿಷ್ಣುವಿಗೂ ಕೂಡ ಮರಣವು ಪ್ರಾಪ್ತವಾಯಿತು. ॥೬೦॥ ಮಾನವನು ಪೂರ್ವ ಕರ್ಮಾನುಸಾರವಾಗಿ ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರ ಮೊದಲಾದ ಜಾತಿಗಳಲ್ಲಿ ಜನಿಸಿ ತಾಪತ್ರಯರೂಪಮಹಾಗ್ನಿಯ ಸಂತಾಪದಿಂದ ಬೆಂದುಹೋಗುವನು. ॥೬೧॥

ಕರ್ಮಮೂಲೇನ ದುಃಖೇನ ಪೀಡ್ಯಮಾನಸ್ಯ ದೇಹಿನಃ ।
ಆಧ್ಯಾತ್ಮಿಕಾದಿನಾ ನಿತ್ಯಂ ಕುತ್ರ ವಿಶ್ರಾಂತಿರಾಪ್ಯತೇ ? ॥೬೨॥

ಆಧ್ಯಾತ್ಮಿಕಂ ತು ಪ್ರಥಮಂ ದ್ವಿತೀಯಂ ಚಾಧಿಭೌತಿಕಂ ।
ಆಧಿದೈವಿಕಮನ್ಯಚ್ಚ ದುಃಖತ್ರಯಮಿದಂ ಸ್ಮೃತಂ ॥೬೩॥

ಆಧ್ಯಾತ್ಮಿಕಂ ದ್ವಿಧಾ ಪ್ರೋಕ್ತಂ ಬಾಹ್ಯಾಭ್ಯಂತರಭೇದತಃ ।
ವಾತಪಿತ್ತಾದಿಜಂ ದುಃಖಂ ಬಾಹ್ಯಮಾಧ್ಯಾತ್ಮಿಕಂ ಮತಂ ।
ರಾಗದ್ವೇಷಾದಿಸಂಪನ್ನಮಾಂತರಂ ಪರಿಕೀರ್ತ್ಯತೇ ॥೬೪॥

ಆಧಿಭೌತಿಕಮೇತದ್ಧಿ ದುಃಖಂ ರಾಜಾದಿಭೂತಜಂ ।
ಆಧಿದೈವಿಕಮಾಖ್ಯಾತಂ ಗ್ರಹಯಕ್ಷಾದಿಸಂಭವಂ ॥೬೫॥

ದುಃಖೈರೇತೈರುಪೇತಸ್ಯ ಕರ್ಮಬದ್ಧಸ್ಯ ದೇಹಿನಃ ।
ಸ್ವರ್ಗೇ ವಾ ಯದಿ ವಾ ಭೂಮೌ ಸುಖಲೇಶೋ ನ ವಿದ್ಯತೇ ॥೬೬॥

ತಟಿತ್ಸು ವೀಚಿಮಾಲಾಸು ಪ್ರದೀಪಸ್ಯ ಪ್ರಭಾಸು ಚ ।
ಸಂಪತ್ಸು ಕರ್ಮಮೂಲಾಸು ಕಸ್ಯ ವಾ ಸ್ಥಿರತಾಮತಿಃ ? ॥೬೭॥

ಪೂರ್ವಕರ್ಮವೇ ಮೂಲಕಾರಣವಾಗುಳ್ಳ ಆಧ್ಯಾತ್ಮಿಕಾದಿದುಃಖಗಳಿಂದ ಪೀಡಿತನಾಗಿರುವವನಿಗೆ ವಿಶ್ರಾಂತಿಯು ಎಲ್ಲಿ ದೊರೆಯುವುದು ? ॥೬೨॥ ಮೊದಲನೆಯದು ಆಧ್ಯಾತ್ಮಿಕದುಃಖವು, ಎರಡನೆಯದು ಆಧಿಭೌತಿಕದುಃಖವು, ಮೂರನೆಯದು ಆಧಿದೈವಿಕದುಃಖವು; ಇವೇ ಮೂರುವಿಧವಾದ ದುಃಖಗಳೆಂದು ಹೇಳಿಸಿಕೊಳ್ಳುವುವು. ॥೬೩॥ ಆಧ್ಯಾತ್ಮಿಕದುಃಖವು ಬಾಹ್ಯಾಧ್ಯಾತ್ಮಿಕದುಃಖ-ಆಭ್ಯಂತರಾಧ್ಯಾತ್ಮಿಕದುಃಖವೆಂದು ಎರಡುಬಗೆಯಾಗಿರುವುದು. ವಾತ-ಪಿತ್ತ-ಶ್ಲೇಷ್ಮಾದಿಗಳಿಂದ ಉತ್ಪನ್ನವಾದ ದುಃಖವು ಬಾಹ್ಯಾಧ್ಯಾತ್ಮಿಕದುಃಖವೆನಿಸಿಕೊಳ್ಳುವುದು. ರಾಗ-ದ್ವೇಷ-ಕಾಮ-ಕ್ರೋಧಾದಿಗಳಿಂದ ಉತ್ಪನ್ನವಾದ ದುಃಖವು ಆಭ್ಯಂತಾರಾಧ್ಯಾತ್ಮಿಕದುಃಖವೆನಿಸಿಕೊಳ್ಳುವುದು. ॥೬೪॥ ರಾಜನೇ ಮೊದಲಾದವರಿಂದ ಉತ್ಪನ್ನವಾದ ದುಃಖವು ಆಧಿಭೌತಿಕದುಃಖವೆನಿಸುವುದು. ಗ್ರಹ-ಯಕ್ಷ-ಭೂತ-ಪಿಶಾಚಾದಿಗಳಿಂದ ಉತ್ಪನ್ನವಾದ ದುಃಖವು ಆಧಿದೈವಿಕದುಃಖವೆನಿಸುವುದು. ॥೬೫॥ ಈ ದುಃಖಗಳಿಂದ ಯುಕ್ತನಾದವನೂ ಕರ್ಮಬದ್ಧನೂ ಆದ ಮಾನವನಿಗೆ ಸ್ವರ್ಗದಲ್ಲಾಗಲಿ, ಭೂಮಿಯಲ್ಲಾಗಲಿ ಎಷ್ಟೂ ಸುಖವುಂಟಾಗುವುದಿಲ್ಲ. ॥೬೬॥ ಮಿಂಚು-ತರಂಗಮಾಲೆ-ದೀಪಶಿಖೆ-ಕರ್ಮಮೂಲವಾದ ಸಂಪತ್ತು ಇವುಗಳಲ್ಲಿ ಯಾವನಿಗೆ ಸ್ಥಿರತ್ವ

ಮಲಕೋಶೇ ಶರೀರೇಽಸ್ಮಿನ್ ಮಹಾದುಃಖವಿವರ್ಧನೇ ।
ತಡಿದಂಕುರಸಂಕಾಶೇ ಕೋ ವಾ ಮೋದೇತ ಪಂಡಿತಃ ॥೬೮॥

ನಿತ್ಯಾನಂದಚಿದಾಕಾರಮಾತ್ಮತತ್ತ್ವಂ ವಿಹಾಯ ಕಃ ।
ವಿವೇಕೀ ರಮತೇ ದೇಹೇ ನಶ್ವರೇ ದುಃಖಭಾಜನೇ ॥೬೯॥

ವಿವೇಕೀ ಶುದ್ಧಹೃದಯೋ ನಿಶ್ಚಿತಾತ್ಮಸುಖೋದಯಃ ।
ದುಃಖಹೇತೌ ಶರೀರೇಽಸ್ಮಿನ್ ಕಲತ್ರೇ ಚ ಸುತೇಷು ಚ ॥೭೦॥

ಸುಹೃತ್ಸು ಬಂಧುವರ್ಗೇಷು ಧನೇಷು ಕುಲಪದ್ಧತೌ ।
ಅನಿತ್ಯಬುದ್ಧ್ಯಾ ಸರ್ವತ್ರ ವೈರಾಗ್ಯಂ ಪರಮಶ್ನುತೇ ॥೭೧॥

ವಿವೇಕಿನೋ ವಿರಕ್ತಸ್ಯ ವಿಷಯೇಷ್ವಾತ್ಮರಾಗಿಣಃ ।
ಸಂಸಾರದುಃಖವಿಚ್ಛೇದಹೇತೌ ಬುದ್ಧಿಃ ಪ್ರವರ್ತತೇ ॥೭೨॥

ಬುದ್ಧಿಯು ಉಂಟಾದೀತು? ಇವೆಲ್ಲವುಗಳೂ ಕ್ಷಣಿಕಗಳೆಂದೇ ಭಾವವು. ॥೬೭॥ ಮಹಾದುಃಖಗಳನ್ನುಂಟುಮಾಡತಕ್ಕದ್ದೂ, ಮಿಂಚಿಗೆ ಸಮಾನವಾದುದೂ ಅರ್ಥಾತ್ ಕ್ಷಣಿಕವಾದುದೂ, ಮಲಕ್ಕೆ ಭಂಡಾರವಾದುದೂ ಆದ ಈ ಶರೀರದಲ್ಲಿ ಯಾವ ವಿವೇಕಿಯು ಪ್ರೀತಿಯುಳ್ಳವನಾಗಬಲ್ಲನು? ವಿವೇಕಿಯಾದವನು ಈ ಶರೀರದ ವಿಷಯದಲ್ಲಿ ಅಭಿಮಾನವನ್ನಿಡುವುದಿಲ್ಲವೆಂದೇ ಭಾವವು. ॥೬೮॥ ಸಚ್ಚಿದಾನಂದ ರೂಪವಾದ ಆತ್ಮತತ್ತ್ವವನ್ನು ಬಿಟ್ಟು, ದುಃಖಮಯವೂ ನಾಶಶೀಲವೂ ಆದ ಶರೀರದಲ್ಲಿ ಯಾವ ವಿವೇಕಿಯು ಪ್ರೇಮವನ್ನು ವಹಿಸುವನು? ವಿವೇಕಿಯಾದವನು ದುಃಖಮಯವಾದ ಈ ಶರೀರದ ವಿಷಯದಲ್ಲಿ ಎಂದೂ ಪ್ರೀತಿಯನ್ನು ತೋರಿಸುವುದಿಲ್ಲವೆಂದು ಭಾವವು. ॥೬೯॥ ಶುದ್ಧಹೃದಯನೂ, ಶ್ರುತಿ-ಗುರು-ಸ್ವಾನುಭವಗಳಿಂದ ನಿತ್ಯಾನಿತ್ಯಸ್ವರೂಪವನ್ನು ತಿಳಿದುಕೊಂಡು ಸುಖಸ್ಫೂರ್ತಿಯುಳ್ಳವನೂ ಆದ ವಿವೇಕಿಯು ಸಮಸ್ತದುಃಖಗಳಿಗೆ ಮೂಲಕಾರಣೀಭೂತವಾದ ಈ ಶರೀರದಲ್ಲಿಯೂ, ಪತ್ನಿಯಲ್ಲಿಯೂ, ಮಕ್ಕಳಲ್ಲಿಯೂ, ಮಿತ್ರರಲ್ಲಿಯೂ, ಬಂಧುವರ್ಗದವರಲ್ಲಿಯೂ, ಐಶ್ವರ್ಯದಲ್ಲಿಯೂ, ಕುಲಪದ್ಧತಿಯಲ್ಲಿಯೂ, ಇವುಗಳಿಗೆ ಹೊರತಾದ ಇತರ ಸಮಸ್ತವಸ್ತುಗಳಲ್ಲಿಯೂ ಅನಿತ್ಯತ್ವಬುದ್ಧಿಯನ್ನಿಟ್ಟು ಶ್ರೇಷ್ಠವಾದ ವೈರಾಗ್ಯವನ್ನು ಅವಲಂಬಿಸುತ್ತಾನೆ. ॥೭೦-೭೧॥ ಸಾಂಸಾರಿಕವಿಷಯಗಳಲ್ಲಿ ವಿರಕ್ತ (ಆಶಾಶೂನ್ಯ)ನಾದವನೂ, ಪರಮಾತ್ಮನಲ್ಲಿ ಪ್ರೀತಿಯುಳ್ಳವನೂ ಆದ ಜ್ಞಾನಿಯ ಬುದ್ಧಿಯು ಸಾಂಸಾರಿಕದುಃಖವನ್ನು ನಾಶಮಾಡುವುದರಲ್ಲಿ ಪ್ರವರ್ತಿಸುತ್ತದೆ. ॥೭೨॥

**ನಿತ್ಯಾನಿತ್ಯವಿವೇಕಿನಃ ಸುಕೃತಿನಃ ಶುದ್ಧಾಶಯಸ್ಯಾತ್ಮನೋ
ಬ್ರಹ್ಮೋಪೇಂದ್ರಮಹೇಂದ್ರಮುಖ್ಯವಿಭವೇಷ್ವಸ್ಥಾಯಿತಾಂ ಪಶ್ಯತಃ।
ನಿತ್ಯಾನಂದಪದೇ ನಿರಾಕೃತಜಗತ್ಸಂಸಾರದುಃಖೋದಯೇ
ಸಾಂಬೇ ಚಂದ್ರಶಿರೋಮಣೌ ಸಮುದಯೇದ್ಭಕ್ತಿರ್ಭವಧ್ವಂಸಿನೀ ॥೭೩॥**

**ಇತಿ ಶ್ರೀಸಿದ್ಧಾಂತಶಿಖಾಮಣೌ ಭಕ್ತಸ್ಥಲೇ ಪಿಂಡಾದಿಸ್ಥಲತ್ರಯ
ಪ್ರಸಂಗೋ ನಾಮ**

ಪಂಚಮಪರಿಚ್ಛೇದಃ ಪರಿಸಮಾಪ್ತಃ.

ನಿತ್ಯಾನಿತ್ಯವಸ್ತುವಿವೇಕವುಳ್ಳವನೂ, ನಿಗಮಾಗಮೋಕ್ತ ಸತ್ಕರ್ಮಾಚರಣಪರಾಯಣನೂ, ಶುದ್ಧಾಂತಃಕರಣಶೀಲನೂ, ಬ್ರಹ್ಮ-ವಿಷ್ಣು-ಇಂದ್ರ ಮೊದಲಾದ ದೇವತೆಗಳ ಸಂಪತ್ತುಗಳೆಲ್ಲಾ ಅಸ್ಥಿರಗಳೆಂದು ತಿಳಿಯುವವನೂ ಆದ ಪಿಂಡಜ್ಞಾನಿಗೆ ನಿತ್ಯಾನಂದ ಸ್ಥಾನಭೂತನೂ, ಜಗತ್ಸಂಸಾರದುಃಖವನ್ನು ನಿರಾಕರಿಸಿದವನೂ, ಚಂದ್ರಚೂಡಾಮಣಿಯೂ ಆದ ಶಿವನಲ್ಲಿ ಭವನಾಶಕವಾದ ಶುದ್ಧಭಕ್ತಿಯು ಉತ್ಪನ್ನವಾಗುವುದು. ॥೭೩॥

**ಇಂತು ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಪಿಂಡಾದಿಸ್ಥಲತ್ರಯ
ವಿಚಾರಾತ್ಮಕವಾದ**

ಐದನೆಯ ಪರಿಚ್ಛೇದವು ಪರಿಸಮಾಪ್ತವಾದುದು.

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಷಷ್ಠಪರಿಚ್ಛೇದಃ

೪ ಗುರುಕಾರುಣ್ಯಸ್ಥಲಂ

ತತೋ ವಿವೇಕಸಂಪನ್ನೋ ವಿರಾಗೀ ಶುದ್ಧಮಾನಸಃ ।
ಜಿಜ್ಞಾಸುಃ ಸರ್ವಸಂಸಾರದೋಷಧ್ವಂಸಕರಂ ಶಿವಂ ॥೧॥

ಉಪೈತಿ ಲೋಕವಿಖ್ಯಾತಂ ಲೋಭಮೋಹವಿವರ್ಜಿತಂ ।
ಆತ್ಮತತ್ತ್ವವಿಚಾರಜ್ಞಂ ವಿಮುಕ್ತವಿಷಯಭ್ರಮಂ ॥೨॥

ಶಿವಸಿದ್ಧಾಂತತತ್ತ್ವಜ್ಞಂ ಛಿನ್ನಸಂದೇಹವಿಭ್ರಮಂ ।
ಸರ್ವತಂತ್ರಪ್ರಯೋಗಜ್ಞಂ ಧಾರ್ಮಿಕಂ ಸತ್ಯವಾದಿನಂ ॥೩॥

ಕುಲಕ್ರಮಾಗತಾಚಾರಂ ಕುಮಾರ್ಗಾಚಾರವರ್ಜಿತಂ ।
ಶಿವಧ್ಯಾನಪರಂ ಶಾಂತಂ ಶಿವತತ್ತ್ವವಿವೇಕಿನಂ ॥೪॥

ಆರನೆಯ ಪರಿಚ್ಛೇದವು

೪ ಗುರುಕಾರುಣ್ಯಸ್ಥಲ

ವ್ಯಾಖ್ಯಾನ—ಸಂಸಾರದಲ್ಲಿ ಹೇಯತಾಬುದ್ಧಿಯು ಉತ್ಪನ್ನವಾದನಂತರ ನಿರ್ಮಲಾಂತಃಕರಣನೂ, ಶರೀರಾತ್ಮವಿವೇಕವುಳ್ಳವನೂ, ವಿರಾಗಿಯೂ ಆದ ಸಾಧಕನು ಸಮಸ್ತಸಂಸಾರದೋಷಗಳನ್ನು ನಾಶಮಾಡುವ ಮಹಾಲಿಂಗವನ್ನು ತಿಳಿಯಲಿಚ್ಛೆಯುಳ್ಳವನಾಗಿ – ||೧|| ಜಗದ್ವಿಖ್ಯಾತನೂ, ಲೋಭಮೋಹವಿದೂರನೂ, ಜೀವಾತ್ಮಪರಮಾತ್ಮರ ಯಥಾರ್ಥಸ್ವರೂಪವನ್ನು ತಿಳಿದವನೂ, ವಿಷಯಭ್ರಮದಿಂದ ವಿಮುಕ್ತನಾದವನೂ, ಶಿವಾದ್ವೈತಸಿದ್ಧಾಂತಸ್ವರೂಪವನ್ನು ತಿಳಿದವನೂ, ನಾನಾವಿಧ ಸಂಶಯಗಳಿಂದುತ್ಪನ್ನವಾದ ವಿಭ್ರಮಗಳನ್ನು ದೂರಮಾಡುವವನೂ, ಸಮಸ್ತ ತಂತ್ರಗಳ ಪ್ರಯೋಗವನ್ನು ಬಲ್ಲವನೂ, ಶಿವಧರ್ಮನಿಷ್ಠನೂ, ಸತ್ಯವಾದಿಯೂ, ಶಿಷ್ಯಸಂಪ್ರದಾಯವಿಶಿಷ್ಟಪವಿತ್ರಗುರುಸ್ಥಲ (ಆಚಾರ್ಯ) ವಂಶಪರಂಪರೆಯಿಂದ ಪ್ರಾಪ್ತವಾದ ಆಚಾರಧರ್ಮಗಳುಳ್ಳವನೂ, ಕುತ್ಸಿತಾಚಾರಗಳಿಂದ ದೂರೀಕೃತನಾದವನೂ, ಶಿವಧ್ಯಾನಾಸಕ್ತನೂ, ಶಾಂತನೂ, ಶಿವಸ್ವರೂಪವನ್ನು ಬಲ್ಲವನೂ,

ಭಸ್ಮೋದ್ಧೂಲನನಿಷ್ಣಾತಂ ಭಸ್ಮತತ್ತ್ವವಿವೇಕಿನಂ ।
ತ್ರಿಪುಂಡ್ರಧಾರಣೋತ್ಕಂಠಂ ಧೃತರುದ್ರಾಕ್ಷಮಾಲಿಕಂ ॥೫॥
ಲಿಂಗಧಾರಣಸಂಯುಕ್ತಂ ಲಿಂಗಪೂಜಾಪರಾಯಣಂ ।
ಲಿಂಗಾಂಗಯೋಗತತ್ತ್ವಜ್ಞಂ ನಿರೂಢಾದ್ವೈತವಾಸನಂ ॥
ಲಿಂಗಾಂಗಸ್ಥಲಭೇದಜ್ಞಂ ಶ್ರೀಗುರುಂ ಶಿವವಾದಿನಂ ॥೬॥
ಸೇವೇತ ಪರಮಾಚಾರ್ಯಂ ಶಿಷ್ಯೋ ಭಕ್ತಿಭಯಾನ್ವಿತಃ ।
ಷಣ್ಮಾಸಾನ್ ವತ್ಸರಂ ವಾಪಿ ಯಾವದೇಷ ಪ್ರಸೀದತಿ ॥೭॥
ಪ್ರಸನ್ನಂ ಪರಮಾಚಾರ್ಯಂ ಭುಕ್ತಿಮುಕ್ತಿಪ್ರದಾಯಕಂ ।
ಪ್ರಾರ್ಥಯೇದಗ್ರತಃ ಶಿಷ್ಯಃ ಪ್ರಾಂಜಲಿರ್ವಿನಯಾನ್ವಿತಃ ॥೮॥
ಭೋ ಕಲ್ಯಾಣ ಮಹಾಭಾಗ ಶಿವಜ್ಞಾನಮಹೋದಧೇ ।
ಆಚಾರ್ಯವರ್ಯ ಸಂಪ್ರಾಪ್ತಂ ರಕ್ಷ ಮಾಂ ಭವರೋಗಿಣಂ ॥೯॥

ಭಸ್ಮೋದ್ಧೂಲನದಲ್ಲಿ ನಿಷ್ಣಾತನೂ, ಭಸ್ಮಸ್ವರೂಪವನ್ನು ಬಲ್ಲವನೂ, ಭಸ್ಮತ್ರಿಪುಂಡ್ರ ಧಾರಣದಲ್ಲಿ ಇಚ್ಛೆಯುಳ್ಳವನೂ, ರುದ್ರಾಕ್ಷಮಾಲಿಕೆಗಳನ್ನು ಧರಿಸಿದವನೂ, ಶಿವಲಿಂಗಧಾರಣದಿಂದ ಯುಕ್ತನಾದವನೂ, ಶಿವಲಿಂಗಪೂಜೆಯಲ್ಲಿ ನಿರತನಾದವನೂ, ಲಿಂಗಾಂಗಸಾಮರಸ್ಯ (ಶಿವಜೀವೈಕ್ಯ) ಸ್ವರೂಪವನ್ನು ತಿಳಿದವನೂ, ಶಿವಾದ್ವೈತ ವಾಸನೆಯಲ್ಲಿ ಮಗ್ನನಾದವನೂ, ಅಂಗಸ್ಥಲ-ಲಿಂಗಸ್ಥಲಾತ್ಮಕಗಳಾದ ನೂರೊಂದು ಸ್ಥಲಗಳ ಭೇದಸ್ವರೂಪವನ್ನು ತಿಳಿದವನೂ, ಸದಾ ಮಂಗಲವಚನಗಳನ್ನಾಡುವವನೂ ಆದ ಶ್ರೀಗುರುವನ್ನು ಆಶ್ರಯಿಸಬೇಕು. ॥೨-೩-೪-೫-೬॥ ಶಿಷ್ಯನು ಭಯಭಕ್ತಿಗಳಿಂದೊಡಗೂಡಿ ಆರುತಿಂಗಳುಗಳ ವರೆಗಾಗಲಿ, ಒಂದು ವರ್ಷದ ವರೆಗಾಗಲಿ, ಎಲ್ಲಿಯವರೆಗೆ ಗುರುವು ಪ್ರಸನ್ನನಾಗುವನೋ ಅಲ್ಲಿಯವರೆಗೆ ಆ ಗುರುವರ್ಯನನ್ನು ಸೇವಿಸಬೇಕು. ॥೭॥ ಶಿಷ್ಯನು ಪ್ರಸನ್ನನೂ ಭೋಗಮೋಕ್ಷಪ್ರದನೂ ಆದ ಆಚಾರ್ಯನ ಮುಂದೆ ವಿನಯದೊಡನೆ ಅಂಜಲಿಬದ್ಧನಾಗಿ ನಿಂತುಕೊಂಡು ಈ ರೀತಿಯಾಗಿ ಪ್ರಾರ್ಥಿಸಬೇಕು. ॥೮॥ ಎಲೈ, ಕಲ್ಯಾಣಮೂರ್ತಿಯೇ! ಮಹಾಭಾಗನೇ! ಶಿವಜ್ಞಾನಸಮುದ್ರನೇ! ಗುರುವರ್ಯನೇ! ಭವರೋಗದಿಂದ ನರಳುತ್ತಿರುವ ನನ್ನನ್ನು ಕಾಪಾಡು. ॥೯॥ ಎಂದು ಶುದ್ಧಾಂತಃಕರಣನಾದ ಶಿಷ್ಯನು ಪರಮಾಚಾರ್ಯನನ್ನು ಪ್ರಾರ್ಥಿಸಲು, ಆಗ್ಗೆ ಶ್ರೀಗುರುವು ಶಿಷ್ಯನ ಶಕ್ತಿಪಾತವನ್ನು ಪರಾಮರ್ಶಿಸಿ, ಅವನಿಗೆ

ಇತಿ ಶುದ್ಧೇನ ಶಿಷ್ಯೇಣ ಪ್ರಾರ್ಥಿತಃ ಪರಮೋ ಗುರುಃ ।
ಶಕ್ತಿಪಾತಂ ಸಮಾಲೋಕ್ಯ ದೀಕ್ಷಯಾ ಯೋಜಯೇದಮುಂ ॥೧೦॥

ದೀಯತೇ ಚ ಶಿವಜ್ಞಾನಂ ಕ್ಷೀಯತೇ ಪಾಶಬಂಧನಂ ।
ಯಸ್ಮಾದತಃ ಸಮಾಖ್ಯಾತಾ ದೀಕ್ಷೇತೀಯಂ ವಿಚಕ್ಷಣೈಃ ॥೧೧॥

ಸಾ ದೀಕ್ಷಾ ತ್ರಿವಿಧಾ ಪ್ರೋಕ್ತಾ ಶಿವಾಗಮವಿಶಾರದೈಃ ।
ವೇಧಾರೂಪಾ ಕ್ರಿಯಾರೂಪಾ ಮಂತ್ರರೂಪಾ ಚ ತಾಪಸ ॥೧೨॥

ಗುರೋರಾಲೋಕಮಾತ್ರೇಣ ಹಸ್ತಮಸ್ತಕಯೋಗತಃ ।
ಯಃ ಶಿವತ್ವಸಮಾವೇಶೋ ವೇಧಾದೀಕ್ಷೇತಿ ಸಾ ಮತಾ ॥೧೩॥

ಶಿವದೀಕ್ಷೆಯನ್ನು ಅನುಗ್ರಹಿಸಬೇಕು. ಶಕ್ತಿಪಾತಲಕ್ಷಣವು ಮೃಗೇಂದ್ರಾಗಮದಲ್ಲಿ ಈ ರೀತಿಯಾಗಿ ಹೇಳಲ್ಪಟ್ಟಿದೆ—

ಯೇಷಾಂ ಶರೀರಿಣಾಂ ಶಕ್ತಿಃ ಪತತ್ಯವಿನಿವೃತ್ತಯೇ । ತೇಷಾಂ ತಲ್ಲಿಂಗಮೌತ್ಸುಕ್ಯಂ ಮುಕ್ತೌ ದ್ವೇಷೋ ಭವಸ್ಥಿತೌ ॥ ಭಕ್ತಿಶ್ಚ ಶಿವಭಕ್ತೇಷು ಶ್ರದ್ಧಾ ತಚ್ಛಾಸಕೇ ವಿಧೌ ॥

ಸಂಸಾರಿಗಳಾದ ಜೀವರಿಗೆ—ದುಃಖಮಯವಾದ ಸಂಸಾರಮಾರ್ಗದಲ್ಲಿ ಪುನರಾವೃತ್ತಿಯನ್ನು ತಪ್ಪಿಸುವುದಕ್ಕಾಗಿ ಅವರ ವಿಷಯದಲ್ಲಿ ಈಶ್ವರಶಕ್ತಿಯ ಪ್ರಾಪ್ತಿಯೇ (ಬೀಳುವಿಕೆಯೇ) ಶಕ್ತಿಪಾತವೆನಿಸಿಕೊಳ್ಳುವುದು. ಚಕ್ಷುರ್ಗೋಚರವಾಗದಿರುವ ಈ ಶಕ್ತಿಪಾತವನ್ನು ಕಂಡುಹಿಡಿಯುವುದಕ್ಕೆ—ಮುಕ್ತಿಯಲ್ಲಿ ಪ್ರೀತಿಯೂ, ಸಂಸಾರದಲ್ಲಿ ದ್ವೇಷವೂ, ಶಿವಭಕ್ತರಲ್ಲಿ ಭಕ್ತಿಯೂ, ಶೈವಶಾಸ್ತ್ರದಲ್ಲಿ ಶ್ರದ್ಧೆಯೂ ಚಿಹ್ನೆಗಳಾಗಿರುವುವು. ಯಾವ ಮಾನವರಲ್ಲಿ ಈ ಚಿಹ್ನೆಗಳು ತೋರುವುವೋ ಅವರಲ್ಲಿ ಈಶ್ವರಶಕ್ತಿಪಾತವುಂಟಾಗಿದೆಯೆಂದು ಭಾವಿಸಬೇಕು. ಶ್ರೀಗುರುವು ಶಿಷ್ಯನಲ್ಲಿ ಈ ವಿಧವಾದ ಶಕ್ತಿಪಾತವನ್ನು ಪರಾಮರ್ಶಿಸಿ ಶಿವದೀಕ್ಷೆಯನ್ನು ಅನುಗ್ರಹಿಸಬೇಕೆಂದು ಭಾವವು. ॥೧೦॥ ಯಾವುದು ಶಿವಜ್ಞಾನವನ್ನುಂಟುಮಾಡುವುದೋ ಮತ್ತು ಮಲಮಾಯಾಕರ್ಮಬಂಧವನ್ನು ನಾಶಮಾಡುವುದೋ ಅದಕ್ಕೆ ಶಾಸ್ತ್ರಜ್ಞರು "ದೀಕ್ಷೆ" ಯೆಂದು ಹೇಳುವರು. ॥೧೧॥ ಎಲೈ, ಅಗಸ್ತ್ಯಮಹರ್ಷಿಯೇ! ಆ ದೀಕ್ಷೆಯು ವೇಧಾದೀಕ್ಷೆ-ಮಂತ್ರದೀಕ್ಷೆ-ಕ್ರಿಯಾದೀಕ್ಷೆ ಎಂದು ಮೂರು ಪ್ರಕಾರವಾಗಿರುವುದು. ॥೧೨॥ ಶ್ರೀಗುರುವಿನ ಕೃಪಾಕಟಾಕ್ಷವೀಕ್ಷಣಮಾತ್ರದಿಂದಲೂ ಹಸ್ತಮಸ್ತಕಸಂಯೋಗದಿಂದಲೂ ಯಾವ ಜ್ಞಾನಕ್ರಿಯಾತ್ಮಕಶಿವತತ್ತ್ವಸಮಾವೇಶವು ಉತ್ಪನ್ನವಾಗುವುದೋ, ಅದು ವೇಧಾದೀಕ್ಷೆಯೆನಿಸುವುದು. ॥೧೩॥ ಶಿವಪಂಚಾಕ್ಷರೀಮಂತ್ರೋಪ

ಮಂತ್ರದೀಕ್ಷೇತಿ ಸಾ ಪ್ರೋಕ್ತಾ ಮಂತ್ರಮಾತ್ರೋಪದೇಶಿನೀ ।
ಕುಂಡಮಂಡಲಿಕೋಪೇತಾ ಕ್ರಿಯಾದೀಕ್ಷಾ ಕ್ರಿಯೋತ್ತರಾ ॥೧೪॥

ಶುಭಮಾಸೇ ಶುಭತಿಥೌ ಶುಭಕಾಲೇ ಶುಭೇಽಹನಿ ।
ವಿಭೂತಿಂ ಶಿವಭಕ್ತೇಭ್ಯೋ ದತ್ವಾ ತಾಂಬೂಲಪೂರ್ವಕಂ ॥೧೫॥

ಯಥಾವಿಧಿ ಯಥಾಯೋಗಂ ಶಿಷ್ಯಮಾನೀಯ ದೇಶಿಕಃ ।
ಸ್ನಾತಂ ಶುಕ್ಲಾಂಬರಧರಂ ದಂತಧಾವನಪೂರ್ವಕಂ ॥೧೬॥

ಮಂಡಲೇ ಸ್ಥಾಪಯೇಚ್ಛಿಷ್ಯಂ ಪ್ರಾಙ್ಮುಖಂ ತಮುದಙ್ಮುಖಃ ।
ಶಿವಸ್ಯ ನಾಮಸಂಕೀರ್ತಿಂ ಚಿಂತಾಮಪಿ ಚ ಕಾರಯೇತ್ ॥೧೭॥

ವಿಭೂತಿಪಟ್ಟಂ ಕೃತ್ವಾಽಗ್ರೇ ಯಥಾಸ್ಥಾನಂ ಯಥಾವಿಧಿ ।
ಪಂಚಬ್ರಹ್ಮಮಯೈಸ್ತತ್ರ ಸ್ಥಾಪಿತೈಃ ಕಲಶೋದಕೈಃ ॥
ಆಚಾರ್ಯಃ ಸಮಮೃತ್ವಿಗ್ಭಿಸ್ತ್ರಿವಾರಮಭಿಷೇಚಯೇತ್ ॥೧೮॥

ದೇಶವನ್ನು ಮಾಡುವುದರಿಂದ ಅದು ಮಂತ್ರದೀಕ್ಷೆಯೆನಿಸಿಕೊಳ್ಳುವುದು. ಹೋಮಕುಂಡ-ಸ್ವಸ್ತಿಕಮಂಡಲ-ಪಂಚಕಲಶ ಮೊದಲಾದ ದೀಕ್ಷಾಂಗಭೂತಕ್ರಿಯೆಗಳಿಂದ ಯುಕ್ತವಾದುದು ಕ್ರಿಯಾದೀಕ್ಷೆಯೆನಿಸಿಕೊಳ್ಳುವುದು. ॥೧೪॥ ಶುಭಮಾಸ-ಶುಭತಿಥಿ-ಶುಭಕಾಲ-ಶುಭದಿವಸಗಳಲ್ಲಿ ಶಿವಭಕ್ತರಿಗೆ ತಾಂಬೂಲಪೂರ್ವಕವಾಗಿ ವಿಭೂತಿಯನ್ನು ಕೊಟ್ಟು, ವಿಧ್ಯುಕ್ತವಾಗಿಯೂ ಶಾಸ್ತ್ರೋಕ್ತವಾಗಿಯೂ ದಂತಧಾವನಪೂರ್ವಕ ಸ್ನಾನಮಾಡಿದ ಶ್ವೇತವಸ್ತ್ರಧಾರಿಯಾದ ಶಿಷ್ಯನನ್ನು ಶ್ರೀಗುರುವು ತನ್ನ ಸಮೀಪಕ್ಕೆ ಕರೆದು, ಸ್ವಸ್ತಿಕಮಂಡಲದಲ್ಲಿ ಪೂರ್ವಾಭಿಮುಖವುಳ್ಳವನನ್ನಾಗಿ ಕುಳ್ಳಿರಿಸಿ, ತಾನು ಉತ್ತರಾಭಿಮುಖನಾಗಿ ಕುಳಿತುಕೊಂಡು, ಶಿಷ್ಯನಿಂದ ಶಿವನಾಮಸಂಕೀರ್ತನವನ್ನೂ, ಶಿವಧ್ಯಾನವನ್ನೂ ಮಾಡಿಸಬೇಕು. ॥೧೬-೧೭॥ ಭಸ್ಮಧಾರಣಯೋಗ್ಯವಾದ ಎಲ್ಲಾ ಸ್ಥಾನಗಳಲ್ಲಿ ವಿಧಿಗನುಸಾರವಾಗಿ ಶಿಷ್ಯನಿಗೆ ಭಸ್ಮವನ್ನು ಧರಿಸಿ, ಸದ್ಯೋಜಾತ-ವಾಮದೇವ-ಅಘೋರ-ತತ್ಪುರುಷ-ಈಶಾನನಾಮಕಪಂಚಬ್ರಹ್ಮರೂಪಪಂಚಕಲಶಗಳನ್ನು ಸ್ಥಾಪಿಸಿ, ಆ ಕಲಶಗಳಲ್ಲಿದ್ದ ಪವಿತ್ರೋದಕದಿಂದ ಆಚಾರ್ಯನು ಸಮಸ್ತ ಭುವನಪ್ರಸಿದ್ಧಶ್ರೀಮಜ್ಜಗದ್ಗುರುಪಂಚಾಚಾರ್ಯರ ಸಂಪ್ರದಾಯಾನುಗತರಾದ ನಾಲ್ವರು ಋತ್ವಿಜರೊಡನೆ ಶಿಷ್ಯನನ್ನು ಮೂರುಸಾರೆ ಅಭಿಷೇಕಿಸಬೇಕು. ಆಚಾರ್ಯನು ತನ್ನ ಮುಂದೆ ಕುಳಿತಿರುವ ಪರಿಶುದ್ಧನಾದ ಶಿಷ್ಯನಿಗೆ ಅಭಿಷೇಕಿಸಿದ ಮೇಲೆ ಸಂಸಾರ ಭಯನಾಶಕವಾದ ಶಿವಪಂಚಾಕ್ಷರೀಮಹಾಮಂತ್ರವನ್ನು ಅವನ ಬಲಗಿವಿಯಲ್ಲಿ

ಅಭಿಷಿಚ್ಯ ಗುರುಃ ಶಿಷ್ಯಮಾಸೀನಂ ಪುರತಃ ಶುಚಿಂ |
ತತಃ ಪಂಚಾಕ್ಷರೀಂ ಶೈವೀಂ ಸಂಸಾರಭಯತಾರಿಣೀಂ ||೧೯||
ತಸ್ಯ ದಕ್ಷಿಣಕರ್ಣೇ ತು ನಿಗೂಢಮಪಿ ಕೀರ್ತಯೇತ್ |
ಛಂದೋ ರೂಪಮೃಷಿಂ ಚಾಸ್ಯ ದೇವತಾಂ ನ್ಯಾಸಪದ್ಧತಿಂ ||೨೦||

ಗುಪ್ತವಾಗಿ ಉಪದೇಶಿಸಬೇಕು. ಮತ್ತು ಆ ಮಹಾಮಂತ್ರದ ಸ್ವರೂಪವನ್ನೂ, ಋಷಿ-ದೇವತಾ-ಛಂದಸ್ಸು-ಶಕ್ತಿ-ಬೀಜ ಮೊದಲಾದುವುಗಳನ್ನೂ, ಅಂಗನ್ಯಾಸ-ಕರನ್ಯಾಸ-ದೇಹನ್ಯಾಸಪದ್ಧತಿಯನ್ನೂ ಬೋಧಿಸಬೇಕು. ||

ಶ್ರೀಪಂಚಾಚಾರ್ಯಮಧ್ಯೇ ತು ಯಃ ಪೀಠಮಧಿರೋಹತಿ | ತದಾಽಸೌ ಗುರುಶಬ್ದೇನ ವಾಚ್ಯ ಇತ್ಯಭಿಧೀಯತೇ || ಶೇಷಾಶ್ಚತ್ವಾರ ಆಚಾರ್ಯಾ ಉಪದೇಶಸ್ಯ ಸಾಕ್ಷಿಣಃ || ಈಶ್ವರಸ್ಯ ಮುಖಾನ್ಯೇವ ಕಲಶಾ ಹಿ ನ ಸಂಶಯಃ | ಏತಾದೃಕ್ಕಲಶಾನ್ ಪಂಚ ನವಸೂತ್ರೇಣ ವೇಷ್ಟಯೇತ್ || ಪ್ರತ್ಯೇಕಂ ನವವಸ್ತ್ರೇಣ ವೇಷ್ಟಯೇದ್ದೇಶಿಕೋತ್ತಮಃ | ಗಂಗಾದಿಪುಣ್ಯತೀರ್ಥಾನಾಮಂಭಸಾ ಪರಿಪೂರಯೇತ್ || ಸಂಪೂರ್ಯ ಪಂಚ ಕಲಶಾನಿಮಂ ಮೇ ಇತಿ ಮಂತ್ರತಃ | ತೇಷು ತೀರ್ಥಾಂಬುಪೂರ್ಣೇಷು ಸನ್ನಿಧಾಯಾಮ್ರಪಲ್ಲವಾನ್ || ನಾನಾವಿಧೈಶ್ಚ ಕುಸುಮೈರ್ಗಂಧಪತ್ರಾಕ್ಷತಾದಿಭಿಃ | ಏವಂ ಶಾಸ್ತ್ರೋಕ್ತವಿಧಿನಾ ಕಲಶಾನ್ ಪಂಚ ಪೂಜಯೇತ್ || ಶಿಷ್ಯಲಿಂಗಗುರೂಣಾಂ ಚ ಕಲಶಾನಾಂ ತಥೈವ ಚ | ಏಕಸೂತ್ರಂ ವೇಷ್ಟಯಿತ್ವಾ ಶಿಷ್ಯಸ್ಯಾಭಿಮುಖೋ ಗುರುಃ || ಶುದ್ಧಿಂ ಕೃತ್ವಾ ಪಂಚಗವ್ಯೈರ್ಲಿಂಗಂ ಶಿಷ್ಯಕರೌ ತಥಾ | ಲಿಂಗಂ ತಥಾಽರ್ಚಯೇದ್ಧೀಮಾನೇಕವಿಂಶತಿಪೂಜನೈಃ || ಮಸ್ತಕೇ ಸಪ್ತ ಪೂಜಾಶ್ಚ ಕೃತ್ವಾ ಹಸ್ತಂ ತಥಾಽರ್ಚಯೇತ್ | ಸಂಸ್ಕಾರಾನ್ ವಿಧಿವತ್ಕೃತ್ವಾ ಚತುರ್ಭಿಸ್ತೈಶ್ಚ ಸಂಯುತಃ || ಪಂಚಾಕ್ಷರೀಮಂತ್ರರಾಜಮುಪದಿಶ್ಯ ಯಥಾವಿಧಿ | ಶಿವಲಿಂಗಂ ಧಾರಯಿತ್ವಾ ಶಿವತತ್ತ್ವಂ ಸಮಾದಿಶೇತ್ ||

ಶ್ರೀಮಜ್ಜಗದ್ಗುರು ಪಂಚಾಚಾರ್ಯರಲ್ಲಿ ಯಾವ ಆಚಾರ್ಯನು ಮಧ್ಯಸ್ಥಾನವನ್ನು ಅಲಂಕರಿಸುವನೋ, ಆ ಆಚಾರ್ಯನು ಗುರುಶಬ್ದವಾಚ್ಯನಾಗುವನೆಂದೂ, ಉಳಿದ ನಾಲ್ವರು ಆಚಾರ್ಯರು ಸಾಕ್ಷೀಭೂತರಾಗುವರೆಂದೂ, ಪರಮೇಶ್ವರನ ಪಂಚಮುಖಗಳೇ ಪಂಚಕಲಶಗಳೆಂದೂ, ಗುರುವು ಈ ಪಂಚಕಲಶಗಳನ್ನು ನೂತನವಾದ ದಾರದಿಂದ ಸುತ್ತಿ ಗಂಗಾದಿಪವಿತ್ರೋದಕದಿಂದ ತುಂಬಿ ಪೂಜಿಸಬೇಕೆಂದೂ, ಶಿಷ್ಯನಿಗೂ ಲಿಂಗಕ್ಕೂ ಗುರುವಿಗೂ ಕಲಶಗಳಿಗೂ ಒಂದೇ ಸೂತ್ರವನ್ನು ಸಂಬಂಧಿಸಬೇಕೆಂದೂ, ಶಿಷ್ಯನ ಹಸ್ತಮಸ್ತಕಪೂಜಾದಿಗಳನ್ನು ನೆರವೇರಿಸಿ, ಚತುರಾಚಾರ್ಯರೊಡನೆ ಶಾಸ್ತ್ರವಿಧಿಗನುಸಾರವಾಗಿ ದೀಕ್ಷಾಂಗಭೂತಸಕಲಸಂಸ್ಕಾರಗಳನ್ನು ಮಾಡಿ, ಪಂಚಾಕ್ಷರಮಹಾಮಂತ್ರವನ್ನುಪದೇಶಿಸಿ, ಶಿಷ್ಯನ ದೇಹದಲ್ಲಿ ಶಿವಲಿಂಗವನ್ನು ಧರಿಸಿ, ಶಿವತತ್ತ್ವವನ್ನು ಬೋಧಿಸಬೇಕೆಂದೂ ಪಾಶುಪತತಂತ್ರವು ಸಾರುತ್ತಿರುವುದು.

೫ ಲಿಂಗಧಾರಣಸ್ಥಲಂ

ಸ್ಫಾಟಿಕಂ ಶೈಲಜಂ ವಾಪಿ ಚಂದ್ರಕಾಂತಮಯಂ ತು ವಾ ।
ಬಾಣಂ ವಾ ಸೂರ್ಯಕಾಂತಂ ವಾ ಲಿಂಗಮೇಕಂ ಸಮಾಹರೇತ್ ॥೨೧॥

ಸರ್ವಲಕ್ಷಣಸಂಪನ್ನೇ ತಸ್ಮಿನ್ ಲಿಂಗೇ ವಿಶೋಧಿತೇ ।
ಪೀಠಸ್ಥಿತೇऽಭಿಷಿಕ್ತೇ ಚ ಗಂಧಪುಷ್ಪಾದಿಪೂಜಿತೇ ॥೨೨॥

ಮಂತ್ರಪೂತೇ ಕಲಾಂ ಶೈವೀಂ ಯೋಜಯೇದ್ವಿಧಿನಾ ಗುರುಃ ।
ಶಿಷ್ಯಸ್ಯ ಪ್ರಾಣಮಾದಾಯ ಲಿಂಗೇ ತತ್ರ ನಿಧಾಪಯೇತ್ ॥೨೩॥

ಶ್ರೀಗುರುವು ಶಿಷ್ಯನಿಗೆ ವೀರಶೈವದೀಕ್ಷಾವಿಧಿಗನುಸಾರವಾಗಿ ಮೋಕ್ಷದಾಯಕವಾದ ಶಿವದೀಕ್ಷೆಯನ್ನು ಅನುಗ್ರಹಿಸಬೇಕೆಂದು ಭಾವವು. ॥೧೮-೧೯-೨೦॥

೫ ಲಿಂಗಧಾರಣಸ್ಥಲ.

ಆಮೇಲೆ ಆಚಾರ್ಯನು ಶಿಷ್ಯನಿಗಾಗಿ ಸ್ಫಟಿಕಲಿಂಗ-ಶ್ರೀಶೈಲಲಿಂಗ-ಚಂದ್ರಕಾಂತಶಿಲಾಲಿಂಗ-ಸೂರ್ಯಕಾಂತಶಿಲಾಲಿಂಗ ಅಥವಾ ನರ್ಮದಾಬಾಣಲಿಂಗ ಇವುಗಳಲ್ಲಿ ಯಾವುದಾದರೊಂದು ಲಿಂಗವನ್ನು ತೆಗೆದುಕೊಳ್ಳಬೇಕು. ॥೨೧॥ ಶಿಲ್ಪಶಾಸ್ತ್ರಾನುಸಾರವಾಗಿ ಸರ್ವಲಕ್ಷಣಸಂಪನ್ನವೂ, ಜಲಾಧಿವಾಸ-ಧಾನ್ಯಾಧಿವಾಸ-ಶಯನಾಧಿವಾಸ-ಅಷ್ಟತ್ರಿಂಶತ್ಕಲಾನ್ಯಾಸ-ಷಡಧ್ವಶುದ್ಧಿ ಮೊದಲಾದುವುಗಳಿಂದ ವಿಶೋಧಿತವೂ, ಪಂಚಾಮೃತಾದಿಗಳಿಂದ ಅಭಿಷಿಕ್ತವೂ, ಗಂಧ-ಪತ್ರ-ಪುಷ್ಪ-ಧೂಪ-ದೀಪಾದಿಗಳಿಂದ ಪೂಜಿತವೂ, ಶಿವಪಂಚಾಕ್ಷರೀಮಹಾಮಂತ್ರದಿಂದ ಪರಿಪೂತವೂ, ಕರಪೀಠವಿರಾಜಿತವೂ ಆದ ಶಿವಲಿಂಗದಲ್ಲಿ ಶ್ರೀಗುರುವು ಶಿಷ್ಯನ ಮಸ್ತಕದಲ್ಲಿರುವ ಶಿವಕಲೆಯನ್ನು ಶಾಸ್ತ್ರವಿಧಿಗನುಸಾರವಾಗಿ ಸಂಬಂಧಿಸಬೇಕು. ಆ ಕ್ರಮವೆಂತೆಂದರೆ—"ಶ್ರೀಗುರುವು ಶಿಷ್ಯನ ಮಸ್ತಕದಲ್ಲಿ ಐದುದಲಗಳುಳ್ಳ ಚಕ್ರವನ್ನು ಬರೆದು ಆ ಐದುದಲಗಳಲ್ಲಿ ನಕಾರಾದಿಪಂಚಾಕ್ಷರಗಳನ್ನೂ ಮಧ್ಯದಲ್ಲಿ ಓಂಕಾರವನ್ನೂ ಲಿಖಿಸಿ—

ನಿತ್ಯಾನಂದಸ್ವರೂಪಾಂ ನಿರುಪಮವಿಭವಾಂ ನಿಷ್ಕಲಾಂ ನಿರ್ವಿಶೇಷಾಂ ।
ನಿತ್ಯಾಗ್ರಜೋರ್ಧ್ವಮಾಯಾವಿರಚಿತವಪುಷಂ ವಿಶ್ವವಂದ್ಯಾಂ ಪರಾಂ ತಾಂ ॥
ಆಧಾರಾಮಾದಿಶಕ್ತಿಂ ಗುಣಗಣಸಹಿತಾಂ ದೇವದೇವೀಂ ಶಿವಾಖ್ಯಾಂ ।
ವಂದೇ ಹೃತ್ಪದ್ಮಪೀಠೇ ಪರಮಶಿವಪದಾಂ ಶ್ರೀಮತೀಮೂರ್ಧ್ವಸಂಜ್ಞಾಂ ॥

ಎಂದು ಚರಾಚರಪ್ರಪಂಚತೇಜೋರೂಪಿಯಾದ ಶಿವಕಲೆಯನ್ನು ಧ್ಯಾನಿಸಿ,

ತಲ್ಲಿಂಗಂ ತಸ್ಯ ತು ಪ್ರಾಣೇ ಸ್ಥಾಪಯೇದೇಕಭಾವತಃ ।
ಏವಂ ಕೃತ್ವಾ ಗುರುರ್ಲಿಂಗಂ ಶಿಷ್ಯಹಸ್ತೇ ನಿಧಾಪಯೇತ್ ॥೨೪॥

ಪ್ರಾಣವದ್ಧಾರಣೀಯಂ ತತ್ಪ್ರಾಣಲಿಂಗಮಿದಂ ತವ ।
ಕದಾಚಿತ್ಕುತ್ರಚಿದ್ವಾಪಿ ನ ವಿಯೋಜಯ ದೇಹತಃ ॥೨೫॥

ಯದಿ ಪ್ರಮಾದಾತ್ಪತಿತೇ ಲಿಂಗೇ ದೇಹಾನ್ಮಹೀತಲೇ ।
ಪ್ರಾಣಾನ್ ವಿಮುಂಚ ಸಹಸಾ ಪ್ರಾಪ್ತಯೇ ಮೋಕ್ಷಸಂಪದಃ ॥೨೬॥

ಇತಿ ಸಂಬೋಧಿತಃ ಶಿಷ್ಯೋ ಗುರುಣಾ ಶಾಸ್ತ್ರವೇದಿನಾ ।
ಧಾರಯೇಚ್ಛಾಂಕರಂ ಲಿಂಗಂ ಶರೀರೇ ಪ್ರಾಣಯೋಗತಃ ॥೨೭॥

ಲಿಂಗಸ್ಯ ಧಾರಣಂ ಪುಣ್ಯಂ ಸರ್ವಪಾಪಪ್ರಣಾಶನಂ ।
ಆದೃತಂ ಮುನಿಭಿಃ ಸರ್ವೈರಾಗಮಾರ್ಥವಿಶಾರದೈಃ ॥೨೮॥

ಆ ಚಕ್ರವನ್ನು ಗಂಧಪುಷ್ಪಾದಿಗಳಿಂದ ಪೂಜಿಸಿ, "ಕ್ರೋಂ" ಎಂದು ಅಂಕುಶಮುದ್ರೆಯಿಂದ ಶಿವಕಲೆಯನ್ನು ಆಕರ್ಷಣಪೂರ್ವಕ ಆವಾಹಿಸಿ ಸ್ಥಾಪಿಸಿ, ಪುನಃ ಗಂಧಾದ್ಯುಪಚಾರಗಳಿಂದ ಪೂಜಿಸಬೇಕು." ಶಿಷ್ಯನ ಪ್ರಾಣವನ್ನು ಸರ್ವಸಂಸ್ಕಾರಸಂಸ್ಕೃತವಾದ ಶಿವಲಿಂಗದಲ್ಲಿ ನಿಯೋಜಿಸಬೇಕು; ಹಾಗೂ ಆ ಶಿವಲಿಂಗವನ್ನು ಶಿಷ್ಯನ ಪ್ರಾಣಕಲೆಯಲ್ಲಿ ಏಕಾಕಾರದಿಂದ ನಿಯೋಜಿಸಬೇಕು. ಈ ಪ್ರಕಾರವಾಗಿ ಆಚಾರ್ಯನು ಶಿವಕಲಾಜೀವಕಲಾಸಾಮರಸ್ಯವನ್ನಾಗಿಮಾಡಿ ಶಿವಲಿಂಗವನ್ನು ಶಿಷ್ಯನ ಹಸ್ತದಲ್ಲಿ ಸ್ಥಾಪಿಸಿ ಈ ರೀತಿಯಾಗಿ ಆಜ್ಞಾಪಿಸಬೇಕು. ॥೨೨-೨೩-೨೪॥ ಎಲೈ, ಶಿಷ್ಯನೇ! ಈ ಶಿವಲಿಂಗವನ್ನು ನಿನ್ನ ಪ್ರಾಣಲಿಂಗವೆಂದು ತಿಳಿ; ಈ ಶಿವಲಿಂಗವನ್ನು ಪ್ರಾಣದಂತೆ ಧರಿಸು; ಯಾವಕಾಲದಲ್ಲಿಯೂ, ಯಾವಸ್ಥಳದಲ್ಲಿಯೂ ಈ ಶಿವಲಿಂಗವನ್ನು ನಿನ್ನ ಶರೀರದಿಂದ ಅಗಲಿಸಬೇಡ; ನಿನ್ನ ದೇಹದಿಂದ ಈ ಶಿವಲಿಂಗವು ಒಂದುವೇಳೆ ಪ್ರಮಾದದಿಂದ ಭೂಮಿಯಮೇಲೆ ಬಿದ್ದುದಾದರೆ, ಕೂಡಲೇ ಮೋಕ್ಷಸಂಪತ್ಪ್ರಾಪ್ತಿಗೋಸ್ಕರ ಪ್ರಾಣವನ್ನು ಬಿಡು; ಈ ಪ್ರಕಾರವಾಗಿ ಶಾಸ್ತ್ರಜ್ಞನಾದ ಆಚಾರ್ಯನಿಂದ ಉಪದಿಷ್ಟನಾದ ಶಿಷ್ಯನು ಪ್ರಾಣವಿರುವವರೆಗೂ ತನ್ನ ಶರೀರದಲ್ಲಿ ಶಿವಲಿಂಗವನ್ನು ಅಸಾಧಾರಣವಾದ ಭಕ್ತಿಭಾವದಿಂದ ಧರಿಸಿಕೊಳ್ಳಬೇಕು. ॥೨೫-೨೬-೨೭॥ ಶರೀರದಲ್ಲಿ ಸದಾ ಶಿವಲಿಂಗವನ್ನು ಧರಿಸಿಕೊಳ್ಳುವುದು ಪುಣ್ಯಕರವೂ ಸರ್ವಪಾಪನಾಶಕವೂ ಆಗಿರುವುದು; ಆದುದರಿಂದಲೇ ನಿಗಮಾಗಮಾರ್ಥಜ್ಞರಾದ ಸಮಸ್ತ ಮುನಿಗಳು ಈ ಶಿವಲಿಂಗವನ್ನು ಧರಿಸಿಕೊಂಡಿರುವರು. ॥೨೮॥ ಮೋಕ್ಷಾಪೇಕ್ಷಿಗಳಾದ

ಲಿಂಗಧಾರಣಮಾಖ್ಯಾತಂ ದ್ವಿಧಾ ಸರ್ವಾರ್ಥಸಾಧಕಂ ।
ಬಾಹ್ಯಮಾಭ್ಯಂತರಂ ಚೇತಿ ಮುನಿಭಿರ್ಮೋಕ್ಷಕಾಂಕ್ಷಿಭಿಃ ॥೨೯॥

ಚಿದ್ರೂಪಂ ಪರಮಂ ಲಿಂಗಂ ಶಾಂಕರಂ ಸರ್ವಕಾರಣಂ ।
ಯತ್ತಸ್ಯ ಧಾರಣಂ ಚಿತ್ತೇ ತದಾಂತರಮುದಾಹೃತಂ ॥೩೦॥

ಚಿದ್ರೂಪಂ ಹಿ ಪರಂ ತತ್ತ್ವಂ ಶಿವಾಖ್ಯಂ ವಿಶ್ವಕಾರಣಂ ।
ನಿರಸ್ತವಿಶ್ವಕಾಲುಷ್ಯಂ ನಿಷ್ಕಲಂ ನಿರ್ವಿಕಲ್ಪಕಂ ॥೩೧॥

ಸತ್ತಾನಂದಪರಿಸ್ಫೂರ್ತಿಸಮುಲ್ಲಾಸಕಲಾಮಯಂ ।
ಅಪ್ರಮೇಯಮನಿರ್ದೇಶ್ಯಂ ಮುಮುಕ್ಷುಭಿರುಪಾಸಿತಂ ॥೩೨॥

ಪರಂ ಬ್ರಹ್ಮ ಮಹಾಲಿಂಗಂ ಪ್ರಪಂಚಾತೀತಮವ್ಯಯಂ ।
ತದೇವ ಸರ್ವಭೂತಾನಾಮಂತಸ್ತ್ರಿಸ್ಥಾನಗೋಚರಂ ॥೩೩॥

ಮೂಲಾಧಾರೇ ಚ ಹೃದಯೇ ಭ್ರೂಮಧ್ಯೇ ಸರ್ವದೇಹಿನಾಂ ।
ಜ್ಯೋತಿರ್ಲಿಂಗಂ ಸದಾ ಭಾತಿ ಯದ್ಬ್ರಹ್ಮೇತ್ಯಾಹುರಾಗಮಾಃ ॥೩೪॥

ಮಹರ್ಷಿಗಳು ಸರ್ವಾರ್ಥಸಾಧಕವಾದ ಲಿಂಗಧಾರಣವು ಬಾಹ್ಯ ಮತ್ತು ಆಂತರ ಭೇದದಿಂದ ಎರಡುಪ್ರಕಾರವಾಗಿದೆಯೆಂದು ಹೇಳುತ್ತಿರುವರು. ॥೨೯॥ ಶಿವಲಿಂಗವು ಸಚ್ಚಿದಾನಂದರೂಪವೂ, ಸಮಸ್ತಪ್ರಪಂಚಕಾರಣೀಭೂತವೂ ಆಗಿರುವುದು; ಹೃತ್ಕಮಲದಲ್ಲಿ ಆ ಮಹಾಲಿಂಗವನ್ನು ಧ್ಯಾನರೂಪವಾಗಿ ಧರಿಸುವುದೇ ಆಂತರಲಿಂಗ ಧಾರಣವೆನಿಸುವುದು. ॥೩೦॥ ಪರಬ್ರಹ್ಮನಾಮಕನಾದ ಮಹಾಲಿಂಗವು ಸಚ್ಚಿದಾನಂದ ಸ್ವರೂಪವಾಗಿಯೂ, ಪರತತ್ತ್ವಸ್ವರೂಪವಾಗಿಯೂ, "ಶಿವ" ಎಂಬ ನಾಮದಿಂದ ಕೂಡಿರುವುದಾಗಿಯೂ, ಸಮಸ್ತಪ್ರಪಂಚೋತ್ಪತ್ತಿಲಯಕಾರಣೀಭೂತವಾಗಿಯೂ, ಸಮಸ್ತದೋಷಗಳಿಂದ ದೂರೀಕೃತವಾಗಿಯೂ, ಹೇಯಕಲಾರಹಿತವಾಗಿಯೂ, ವಿಕಲ್ಪಶೂನ್ಯವಾಗಿಯೂ, ನಿತ್ಯಾನಂದಪರಿಸ್ಫುರಣಪ್ರಕಾಶಕಕಲಾಸ್ವರೂಪವಾಗಿಯೂ, ಪ್ರತ್ಯಕ್ಷಾದಿಪ್ರಮಾಣಗಳಿಗೆ ಅಗೋಚರವಾಗಿಯೂ, ಅನಿರ್ದೇಶ್ಯವಾಗಿಯೂ, ಮುಮುಕ್ಷುಜನಪೂಜಿತವಾಗಿಯೂ, ಪ್ರಪಂಚಾತೀತವಾಗಿಯೂ, ನಾಶರಹಿತ ವಾಗಿಯೂ ಇರುವುದು. ಆ ಮಹಾಲಿಂಗವೇ ಸಮಸ್ತಪ್ರಾಣಿಗಳ ಆಧಾರ-ಹೃದಯ-ಭ್ರೂಮಧ್ಯಗಳೆಂಬ ಮೂರು ಸ್ಥಾನಗಳಲ್ಲಿ ಪ್ರಕಾಶಿಸುತ್ತಿರುವುದು. ॥೩೧-೩೨-೩೩॥ ಶಿವಾಗಮಗಳು ಯಾವುದನ್ನು ಬ್ರಹ್ಮವೆಂದು ಹೇಳುತ್ತವೆಯೋ, ಆ ಜ್ಯೋತಿರ್ಲಿಂಗವು ಸಮಸ್ತಪ್ರಾಣಿಗಳ ಮೂಲಾಧಾರಚಕ್ರದಲ್ಲಿಯೂ, ಹೃದಯದಲ್ಲಿಯೂ, ಭ್ರೂಮಧ್ಯ

ಅಪರಿಚ್ಛಿನ್ನಮವ್ಯಕ್ತಂ ಲಿಂಗಂ ಬ್ರಹ್ಮ ಸನಾತನಂ ।
ಉಪಾಸನಾರ್ಥಮಂತಃಸ್ಥಂ ಪರಿಚ್ಛಿನ್ನಂ ಸ್ವಮಾಯಯಾ ||೩೫||

ಲಯಂ ಗಚ್ಛತಿ ಯತ್ರೈವ ಜಗದೇತಚ್ಚರಾಚರಂ ।
ಪುನಃಪುನಃ ಸಮುತ್ಪತ್ತಿಂ ತಲ್ಲಿಂಗಂ ಬ್ರಹ್ಮ ಶಾಶ್ವತಂ ||೩೬||

ತಸ್ಮಾಲ್ಲಿಂಗಮಿತಿ ಖ್ಯಾತಂ ಸತ್ತಾನಂದಚಿದಾತ್ಮಕಂ ।
ಬೃಹತ್ತ್ವಾದ್ಬೃಂಹಣತ್ವಾಚ್ಚ ಬ್ರಹ್ಮಶಬ್ದಾಭಿಧೇಯಕಂ ||೩೭||

ಆಧಾರೇ ಹೃದಯೇ ವಾಪಿ ಭ್ರೂಮಧ್ಯೇ ವಾ ನಿರಂತರಂ ।
ಜ್ಯೋತಿರ್ಲಿಂಗಾನುಸಂಧಾನಮಾಂತರಂ ಲಿಂಗಧಾರಣಂ ||೩೮||

ಆಧಾರೇ ಕನಕಪ್ರಖ್ಯಂ ಹೃದಯೇ ವಿದ್ರುಮಪ್ರಭಂ ।
ಭ್ರೂಮಧ್ಯೇ ಸ್ಫಟಿಕಚ್ಛಾಯಂ ಲಿಂಗಂ ಯೋಗೀ ವಿಭಾವಯೇತ್ ||೩೯||

ನಿರುಪಾಧಿಕಮಾಖ್ಯಾತಂ ಲಿಂಗಸ್ಯಾಂತರಧಾರಣಂ ।
ವಿಶಿಷ್ಟಂ ಕೋಟಿಗುಣಿತಂ ಬಾಹ್ಯಲಿಂಗಸ್ಯ ಧಾರಣಾತ್ ||೪೦||

ದಲ್ಲಿಯೂ ಸದಾ ಪ್ರಕಾಶಿಸುತ್ತಿರುವುದು. ||೩೪|| ಅಪರಿಚ್ಛಿನ್ನವೂ, ಅವ್ಯಕ್ತವೂ, ಸನಾತನವೂ, ಬ್ರಹ್ಮಪದವಾಚ್ಯವೂ, ಅಂತಃಸ್ಥಿತವೂ ಆದ ಲಿಂಗವು ಭಕ್ತರ ಉಪಾಸನಾರ್ಥವಾಗಿ ತನ್ನಲ್ಲಿರುವ ಮಾಯಾಶಕ್ತಿಯಿಂದ ವಿಭಾಗವನ್ನು ಹೊಂದಿತು. ||೩೫|| ಯಾವ ವಸ್ತುವಿನಲ್ಲಿ ಈ ಚರಾಚರಾತ್ಮಕವಾದ ಜಗತ್ತು ಲಯವನ್ನುಹೊಂದುವುದೋ, ಯಾವ ವಸ್ತುವಿನಲ್ಲಿ ಪುನಃ ಪುನಃ ಉತ್ಪತ್ತಿಯನ್ನು ಹೊಂದುವುದೋ ಆ ನಿತ್ಯವಾದ ಪರಬ್ರಹ್ಮವೇ ಲಿಂಗವೆಂದು ಹೇಳಿಸಿಕೊಳ್ಳುವುದು. ಸಚ್ಚಿದಾನಂದ ಸ್ವರೂಪವಾದ ಆ ಲಿಂಗವು ಮಹತ್ತ್ವವುಳ್ಳದಾದುದರಿಂದಲೂ, ತನ್ನನ್ನಾಶ್ರಯಿಸಿದವರಲ್ಲಿ ಅಂಥ ಮಹತ್ತ್ವವನ್ನೇ ಉಂಟುಮಾಡುವುದರಿಂದಲೂ ಬ್ರಹ್ಮಶಬ್ದವಾಚ್ಯವಾಗಿರುವುದು. ||೩೬-೩೭|| ಆಧಾರಚಕ್ರದಲ್ಲಾಗಲಿ, ಹೃದಯದಲ್ಲಾಗಲಿ ಅಥವಾ ಭ್ರೂಮಧ್ಯದಲ್ಲಾಗಲಿ ಯಾವಾಗಲೂ ಜ್ಯೋತಿರ್ಲಿಂಗಾನುಸಂಧಾನವನ್ನು ಮಾಡುವುದೇ ಆಂತರಲಿಂಗಧಾರಣವೆನಿಸುವುದು. ||೩೮|| ಯೋಗಿಯು ಲಿಂಗವನ್ನು ಆಧಾರ ಚಕ್ರದಲ್ಲಿ ಸುವರ್ಣಕಾಂತಿಯುಳ್ಳದನ್ನಾಗಿಯೂ, ಹೃದಯಕಮಲದಲ್ಲಿ ಹವಳದ ಕಾಂತಿಯಂತೆ ಕಾಂತಿಯುಳ್ಳದನ್ನಾಗಿಯೂ, ಭ್ರೂಮಧ್ಯದಲ್ಲಿ ಸ್ಫಟಿಕದ ಕಾಂತಿಯಂತೆ ಕಾಂತಿಯುಳ್ಳದನ್ನಾಗಿಯೂ ಭಾವಿಸಬೇಕು. ||೩೯|| ಅಂತರ್ಲಿಂಗಧಾರಣವು ನಿರುಪಾಧಿಕವೆಂದು ಹೇಳಿಸಿಕೊಳ್ಳುವುದು. ಬಾಹ್ಯಲಿಂಗಧಾರಣಕ್ಕಿಂತಲೂ ಅಂತರ್ಲಿಂಗ

ಯೇ ಧಾರಯಂತಿ ಹೃದಯೇ ಲಿಂಗಂ ಚಿದ್ರೂಪಮೀಶ್ವರಂ ।
ನ ತೇಷಾಂ ಪುನರಾವೃತ್ತಿರ್ಘೋರಸಂಸಾರಮಂಡಲೇ ॥೪೧॥

ಅಂತರ್ಲಿಂಗಾನುಸಂಧಾನಮಾತ್ಮವಿದ್ಯಾಪರಿಶ್ರಮಃ ।
ಗುರೂಪಾಸನಶಕ್ತಿಶ್ಚ ಕಾರಣಂ ಮೋಕ್ಷಸಂಪದಾಂ ॥೪೨॥

ವೈರಾಗ್ಯಜ್ಞಾನಯುಕ್ತಾನಾಂ ಯೋಗಿನಾಂ ಸ್ಥಿರಚೇತಸಾಂ ।
ಅಂತರ್ಲಿಂಗಾನುಸಂಧಾನೇ ರುಚಿರ್ಬಾಹ್ಯೇ ನ ಜಾಯತೇ ॥೪೩॥

ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಮಾಘವಾದ್ಯಾಶ್ಚ ಲೋಕಪಾಃ ।
ಮುನಯಃ ಸಿದ್ಧಗಂಧರ್ವಾ ದಾನವಾ ಮಾನವಾಸ್ತಥಾ ॥೪೪॥

ಸರ್ವೇ ಸುಜ್ಞಾನಯೋಗೇನ ಸರ್ವಕಾರಣಕಾರಣಂ ।
ಪಶ್ಯಂತಿ ಹೃದಯೇ ಲಿಂಗಂ ಪರಮಾನಂದಲಕ್ಷಣಂ ॥೪೫॥

ತಸ್ಮಾತ್ಸರ್ವಪ್ರಯತ್ನೇನ ಶಾಂಕರಂ ಲಿಂಗಮುತ್ತಮಂ ।
ಅಂತರ್ವಿಭಾವಯೇದ್ವಿದ್ವಾನಶೇಷಕ್ಲೇಶಮುಕ್ತಯೇ ॥೪೬॥

ಧಾರಣವು ಕೋಟಿಪಾಲು ಮಿಗಿಲಾಗಿರುವುದು. ॥೪೦॥ ಯಾರು ಸಚ್ಚಿದಾನಂದರೂಪ ವಾದ ಶಿವಲಿಂಗವನ್ನು ತಮ್ಮ ಹೃದಯಕಮಲದಲ್ಲಿ ಧರಿಸುತ್ತಾರೆಯೋ, ಅವರಿಗೆ ಈ ಘೋರಸಂಸಾರಮಂಡಲದಲ್ಲಿ ಪುನರ್ಜನ್ಮವಿರುವುದಿಲ್ಲ. ॥೪೧॥ ಹೃದಯಕಮಲದಲ್ಲಿ ಲಿಂಗಾನುಸಂಧಾನವನ್ನು ಮಾಡುವುದು, ಬ್ರಹ್ಮವಿದ್ಯೆಗಾಗಿ ಶ್ರಮಪಡುವುದು, ಗುರೂಪಾಸನೆಯಲ್ಲಿ ಸಾಮರ್ಥ್ಯವನ್ನು ಪಡೆಯುವುದು ಈ ಮೂರೂ ಮೋಕ್ಷಸಂಪತ್ಪ್ರಾಪ್ತಿಗೆ ಕಾರಣಗಳಾಗಿರುತ್ತವೆ. ॥೪೨॥ ವೈರಾಗ್ಯ ಮತ್ತು ಜ್ಞಾನಗಳಿಂದ ಯುಕ್ತರಾದವರೂ ನಿಶ್ಚಂಚಲಮನಸ್ಸುಳ್ಳವರೂ ಆದ ಯೋಗಿಗಳಿಗೆ ಅಂತರ್ಲಿಂಗಾನುಸಂಧಾನದಲ್ಲಿ ಪ್ರೀತಿಯು ಉತ್ಪನ್ನವಾಗುವುದಲ್ಲದೆ, ಬಾಹ್ಯಲಿಂಗದಲ್ಲಿ ಪ್ರೀತಿಯುತ್ಪನ್ನವಾಗುವುದಿಲ್ಲ. ॥೪೩॥ ಬ್ರಹ್ಮ-ವಿಷ್ಣು-ರುದ್ರ-ಇಂದ್ರ ಮೊದಲಾದ ಲೋಕಪಾಲಕರೂ, ಮುನಿಗಳೂ, ಸಿದ್ಧರೂ, ಗಂಧರ್ವರೂ, ದಾನವರೂ, ಮಾನವರೂ ಇವರೆಲ್ಲರೂ ಜ್ಞಾನಯೋಗದಿಂದ ಸರ್ವಕಾರಣಕಾರಣವೂ, ಪರಮಾನಂದಸ್ವರೂಪವೂ ಆದ ಮಹಾಲಿಂಗವನ್ನು ತಮ್ಮ ಹೃದಯಕಮಲದಲ್ಲಿ ನೋಡುತ್ತಾರೆ. ॥೪೪-೪೫॥ ಆದಕಾರಣ ವಿವೇಕಿಯಾದವನು ಪಂಚಕ್ಲೇಶಗಳಿಂದ ಬಿಡುಗಡೆಯನ್ನು ಹೊಂದುವುದಕ್ಕೋಸ್ಕರ ಪ್ರಯತ್ನಪೂರ್ವಕವಾಗಿ ಮಹಾಲಿಂಗವನ್ನು ಹೃದಯದಲ್ಲಿ ಧ್ಯಾನಿಸಬೇಕು. ॥೪೬॥ ವೀರಶೈವನು ಲಿಂಗವನ್ನು

ಅಂತರ್ಧಾರಯಿತುಂ ಲಿಂಗಮಶಕ್ತಃ ಶಕ್ತ ಏವ ವಾ ।
ಬಾಹ್ಯಂ ಚ ಧಾರಯೇಲ್ಲಿಂಗಂ ತದ್ರೂಪಮಿತಿ ನಿಶ್ಚಯಾತ್ ॥೪೭॥
ಲಿಂಗಂತು ತ್ರಿವಿಧಂಪ್ರೋಕ್ತಂ ಸ್ಥೂಲಂಸೂಕ್ಷ್ಮಂಪರಾತ್ಪರಂ ।
ಇಷ್ಟಲಿಂಗಮಿದಂ ಸ್ಥೂಲಂ ಯದ್ಬಾಹ್ಯೇ ಧಾರ್ಯತೇ ತನೌ ॥೪೮॥
ಪ್ರಾಣಲಿಂಗಮಿದಂ ಸೂಕ್ಷ್ಮಂ ಯದಂತರ್ಭಾವನಾಮಯಂ ।
ಪರಾತ್ಪರಂ ತು ಯತ್ಪ್ರೋಕ್ತಂ ತೃಪ್ತಿಲಿಂಗಂ ತದುಚ್ಯತೇ ॥
ಭಾವನಾತೀತಮವ್ಯಕ್ತಂ ಪರಬ್ರಹ್ಮಶಿವಾಭಿಧಂ ॥೪೯॥
ಇಷ್ಟಲಿಂಗಮಿದಂ ಸಾಕ್ಷಾದನಿಷ್ಟಪರಿಹಾರಕಂ ।
ಧಾರಯೇದವಧಾನೇನ ಶರೀರೇ ಸರ್ವದಾ ಬುಧಃ ॥೫೦॥

ಒಳಗೆ ಧರಿಸುವುದಕ್ಕೆ ಸಮರ್ಥನಾಗಲಿ ಅಥವಾ ಆಗದಿರಲಿ, ಹೊರಗೆ ಮಾತ್ರ (ಸ್ಥೂಲಶರೀರದಲ್ಲಿ) ಆ ಮಹಾಲಿಂಗವೇ ಈ ಇಷ್ಟಲಿಂಗವು, ಎಂಬ ನಿಶ್ಚಯಾತ್ಮಕ ಬುದ್ಧಿಯಿಂದ ಧರಿಸಬೇಕು. ॥೪೭॥ ಲಿಂಗವು ಸ್ಥೂಲ-ಸೂಕ್ಷ್ಮ-ಪರಾತ್ಪರ ಎಂಬ ಭೇದದಿಂದ ಮೂರುಪ್ರಕಾರವಾಗಿರುವುದು. ಬಾಹ್ಯಶರೀರದಲ್ಲಿ ಯಾವುದು ಧರಿಸಲ್ಪಡುವುದೋ, ಅದು "ಇಷ್ಟಲಿಂಗ" ವೆನಿಸುವುದು. ॥೪೮॥ ಹೃದಯಕಮಲದಲ್ಲಿ ಭಾವನಾರೂಪವಾಗಿ ಧ್ಯಾನಿಸಲ್ಪಡುವ ಸೂಕ್ಷ್ಮಲಿಂಗವು "ಪ್ರಾಣಲಿಂಗ" ವೆನಿಸುವುದು. ಭಾವಾತೀತವಾಗಿಯೂ, ಬಾಹ್ಯೇಂದ್ರಿಯಗಳಿಗೆ ಅಗೋಚರವಾಗಿಯೂ, ಪರಶಿವ ಬ್ರಹ್ಮವೆಂಬ ನಾಮವುಳ್ಳುದಾಗಿಯೂ ಇರುವ ಪರಾತ್ಪರಲಿಂಗವು "ಭಾವಲಿಂಗ" ವೆನಿಸುವುದು.॥ ಈ ತ್ರಿವಿಧಲಿಂಗಗಳಲ್ಲಿ ಇಷ್ಟಲಿಂಗವು—"ಆಚಾರಲಿಂಗ-ಗುರುಲಿಂಗ" ವೆಂದೂ, ಪ್ರಾಣಲಿಂಗವು—"ಶಿವಲಿಂಗ-ಚರಲಿಂಗ" ವೆಂದೂ, ಭಾವಲಿಂಗವು— "ಪ್ರಸಾದಲಿಂಗ-ಮಹಾಲಿಂಗ" ವೆಂದೂ ಆರು ಪ್ರಕಾರವಾಗುವುವು.

ಆಚಾರಲಿಂಗಂ ಘ್ರಾಣಾಖ್ಯಂ ಭಕ್ತಸ್ಥಲಸಮಾಶ್ರಯಂ । ನಿವೃತ್ತಿಕಲಯೋಪೇತಂ ಗಂಧಗ್ರಹಣಸಾಧನಂ ॥ ಗುರುಲಿಂಗಂ ತು ಜಿಹ್ವಾಖ್ಯಂ ಮಹೇಶಸ್ಥಲಸಂಶ್ರಯಂ । ಪ್ರತಿಷ್ಠಾಕಲಯೋಪೇತಂ ರಸಗ್ರಹಣಸಾಧನಂ ॥ ಶಿವಲಿಂಗಂ ತು ನೇತ್ರಾಖ್ಯಂ ಪ್ರಸಾದಿಸ್ಥಲಸಂಶ್ರಯಂ । ವಿದ್ಯಾಕಲಾಸಮಾಯುಕ್ತಂ ರೂಪಗ್ರಹಣಸಾಧನಂ ॥ ತ್ವಗಾಖ್ಯಂ ಜಂಗಮಂಲಿಂಗಂ ಪ್ರಾಣಲಿಂಗಿಸ್ಥಲಾಶ್ರಯಂ । ಶಾಂತ್ಯಾಖ್ಯಕಲಯೋಪೇತಂ ಸ್ಪರ್ಶಗ್ರಹಣಸಾಧನಂ ॥ ಪ್ರಸಾದಲಿಂಗಂ ಶ್ರೋತ್ರಾಖ್ಯಂ ಶರಣಸ್ಥಲಸಂಶ್ರಯಂ । ಶಾಂತ್ಯತೀತಕಲೋಪೇತಂ ಶಬ್ದಗ್ರಹಣಸಾಧನಂ ॥ ಮಾನಸಂ ತು ಮಹಾಲಿಂಗಮೈಕ್ಯಸ್ಥಲಸಮಾಶ್ರಯಂ । ಶಾಂತ್ಯತೀತೋತ್ತರೋಪೇತಂ ಸರ್ವಗ್ರಹಣಸಾಧನಂ ॥

ಘ್ರಾಣರೂಪವಾದ ಆಚಾರಲಿಂಗವು ಭಕ್ತಸ್ಥಲವನ್ನಾಶ್ರಯಿಸಿ, ನಿವೃತ್ತಿ ಕಲಾಯುಕ್ತವಾಗಿ, ಗಂಧಗ್ರಹಣಸಾಧನವಾಗಿರುವುದು. ಘ್ರಾಣವು ಇಡಾಪಿಂಗಳಾ ನಾಡೀದ್ವಾರಾ ಪ್ರಾಣವಾಯುವಿನ ಸಂಚಾರಕ್ಕೆ ಆಶ್ರಯವಾಗಿರುವುದರಿಂದಲೂ, ದೇಹ ಶುದ್ಧಿಗೆ ಹೇತುಭೂತವಾದ ಪ್ರಾಣಾಯಾಮಾಚರಣೆಗೆ ಸಾಧನವಾದುದರಿಂದಲೂ ಇವಕ್ಕೆ "ಆಚಾರಲಿಂಗ" ವೆಂಬ ನಾಮವು ಪ್ರಾಪ್ತವಾಗಿದೆ. ಜಿಹ್ವಾರೂಪವಾದ ಗುರುಲಿಂಗವು ಮಹೇಶ್ವರಸ್ಥಲವನ್ನಾಶ್ರಯಿಸಿ, ಪ್ರತಿಷ್ಠಾಕಲಾಯುಕ್ತವಾಗಿ ರಸಗ್ರಹಣಸಾಧನವಾಗಿರುವುದು. ಜಿಹ್ವೆಯು ಷಡಕ್ಷರಮಂತ್ರವ ಉಚ್ಚಾರಣೆಗೆ ಸಾಧನವಾದುದರಿಂದಲೂ, ಈ ಮಹಾಮಂತ್ರವು ಮಂತ್ರಮೂರ್ತಿಯಾದ ಗುರುವಿನ ಮುಖದಿಂದ ಪ್ರಾಪ್ತವಾಗುವುದರಿಂದಲೂ ಇದಕ್ಕೆ "ಗುರುಲಿಂಗ" ವೆಂಬ ನಾಮವು ಪ್ರಾಪ್ತವಾಗಿದೆ. ನೇತ್ರರೂಪವಾದ ಶಿವಲಿಂಗವು ಪ್ರಸಾದಿಸ್ಥಲವನ್ನಾಶ್ರಯಿಸಿ, ವಿದ್ಯಾಕಲಾಯುಕ್ತವಾಗಿ, ರೂಪಗ್ರಹಣಸಾಧನವಾಗಿರುವುದು. ನೇತ್ರವು ತನ್ನ ಗೋಳಕದಲ್ಲಿರುವ ಶಿವಪ್ರಕಾಶದಿಂದ ಯುಕ್ತವಾಗಿ ಸಕಲರೂಪಪದಾರ್ಥಪ್ರಕಾಶಕ್ಕೆ ಸಾಧನವಾದುದರಿಂದ ಇದಕ್ಕೆ "ಶಿವಲಿಂಗ" ವೆಂಬ ನಾಮವು ಪ್ರಾಪ್ತವಾಗಿದೆ. ತ್ವಗ್ರೂಪವಾದ ಚರಲಿಂಗವು ಪ್ರಾಣಲಿಂಗಿಸ್ಥಲವನ್ನಾಶ್ರಯಿಸಿ, ಶಾಂತಿಕಲಾಯುಕ್ತವಾಗಿ, ಸ್ಪರ್ಶಗ್ರಹಣಸಾಧನವಾಗಿರುವುದು. ತ್ವಕ್ಕು ಸರ್ವಾಂಗವನ್ನು ವ್ಯಾಪಿಸಿ ಶೀತಸ್ಪರ್ಶಾದಿಜ್ಞಾನಕ್ಕೆ ಸಾಧನವಾದುದರಿಂದಲೂ, ಇದು ಸಂಚರಣಶೀಲವಾದ ವಾಯುವಿನ ಅಂಶವಾಗಿರುವುದರಿಂದಲೂ ಇದಕ್ಕೆ "ಚರಲಿಂಗ" ವೆಂಬ ನಾಮವು ಪ್ರಾಪ್ತವಾಗಿದೆ. ಶ್ರೋತ್ರರೂಪವಾದ ಪ್ರಸಾದಲಿಂಗವು ಶರಣಸ್ಥಲವನ್ನಾಶ್ರಯಿಸಿ, ಶಾಂತ್ಯತೀತಕಲಾಯುಕ್ತವಾಗಿ ಶಬ್ದಗ್ರಹಣಸಾಧನವಾಗಿರುವುದು. ಶ್ರೋತ್ರವು ಶಬ್ದಗ್ರಹಣಕ್ಕೆ ಸಾಧನವಾದುದರಿಂದಲೂ, ನಾದ-ಸುನಾದ-ನಿನಾದ-ಮಹಾನಾದರೂಪಪರಾ-ಪಶ್ಯಂತೀ-ಮಧ್ಯಮಾ-ವೈಖರೀಕ್ರಮದಿಂದ ಪ್ರಾಪ್ತವಾಗುವ ಅನುಗ್ರಹರೂಪಪ್ರಸಾದಕ್ಕೆ ಹೇತುವಾಗಿರುವುದರಿಂದಲೂ ಇದಕ್ಕೆ "ಪ್ರಸಾದಲಿಂಗ" ವೆಂಬ ನಾಮವು ಪ್ರಾಪ್ತವಾಗಿದೆ. ಮನೋರೂಪವಾದ ಮಹಾಲಿಂಗವು ಐಕ್ಯಸ್ಥಲವನ್ನಾಶ್ರಯಿಸಿ, ಶಾಂತ್ಯತೀತೋತ್ತರಕಲಾಯುಕ್ತವಾಗಿ, ಸರ್ವಗ್ರಹಣಸಾಧನವಾಗಿರುವುದು. ಮನಸ್ಸು ಶ್ರೋತ್ರಾದೀಂದ್ರಿಯಗಳಂತೆ ಒಂದೊಂದು ವಿಷಯವನ್ನು ಗ್ರಹಿಸದೆ ಸರ್ವವಿಷಯಗಳನ್ನೂ ಗ್ರಹಿಸುವುದರಿಂದಲೂ, ಇಂದ್ರಿಯಗಳಿಗೆಲ್ಲಾ ಮಹಾರಾಜನಾಗಿರುವುದರಿಂದಲೂ ಇದಕ್ಕೆ "ಮಹಾಲಿಂಗ" ವೆಂಬ ನಾಮವು ಪ್ರಾಪ್ತವಾಗಿದೆ. ॥೪೯॥

ಪ್ರತ್ಯಕ್ಷವಾಗಿ ಸಂಸಾರಪಾಶರೂಪವಾದ ಅನಿಷ್ಟವನ್ನು ಪರಿಹರಿಸುವ ಈ ಇಷ್ಟಲಿಂಗವನ್ನು ಜ್ಞಾನಿಯು ಯಾವಾಗಲೂ ಶರೀರದಲ್ಲಿ ಸಾವಧಾನವಾಗಿ ಧರಿಸಬೇಕು. ॥೫೦॥

ಮೂರ್ಧ್ನಿ ವಾ ಕಂಠದೇಶೇ ವಾ ಕಕ್ಷೇ ವಕ್ಷಃಸ್ಥಲೇಽಪಿ ವಾ ।
ಕುಕ್ಷೌ ಹಸ್ತಸ್ಥಲೇ ವಾಪಿ ಧಾರಯೇಲ್ಲಿಂಗಮೈಶ್ವರಂ ॥೫೧॥

ನಾಭೇರಧಸ್ತಾಲ್ಲಿಂಗಸ್ಯ ಧಾರಣಂ ಪಾಪಕಾರಣಂ ।
ಜಟಾಗ್ರೇ ತ್ರಿಕಭಾಗೇ ಚ ಮಲಸ್ಥಾನೇ ನ ಧಾರಯೇತ್ ॥೫೨॥

ಲಿಂಗಧಾರೀ ಸದಾ ಶುದ್ಧೋ ನಿಜಲಿಂಗಂ ಮನೋರಮಂ ।
ಅರ್ಚಯೇದ್ಗಂಧಪುಷ್ಪಾದ್ಯೈಃ ಕರಪೀಠೇ ಸಮಾಹಿತಃ ॥೫೩॥

ಬಾಹ್ಯಪೀಠಾರ್ಚನಾದೇತತ್ಕರಪೀಠಾರ್ಚನಂ ವರಂ ।
ಸರ್ವೇಷಾಂ ವೀರಶೈವಾನಾಂ ಮುಮುಕ್ಷೂಣಾಂ ನಿರಂತರಂ ॥೫೪॥

ಬ್ರಹ್ಮವಿಷ್ಣ್ವಾದಯೋ ದೇವಾ ಮುನಯೋ ಗೌತಮಾದಯಃ ।
ಧಾರಯಂತಿ ಸದಾ ಲಿಂಗಮುತ್ತಮಾಂಗೇ ವಿಶೇಷತಃ ॥೫೫॥

ಲಕ್ಷ್ಮ್ಯಾದಿಶಕ್ತಯಃ ಸರ್ವಾಃ ಶಿವಭಾವವಿಭಾವಿತಾಃ ।
ಧಾರಯಂತ್ಯಲಿಕಾಗ್ರೇಷು ಶಿವಲಿಂಗಮಹರ್ನಿಶಂ ॥೫೬॥

ವೇದಶಾಸ್ತ್ರಪುರಾಣೇಷು ಕಾಮಿಕಾದ್ಯಾಗಮೇಷು ಚ ।
ಲಿಂಗಧಾರಣಮಾಖ್ಯಾತಂ ವೀರಶೈವಸ್ಯ ನಿಶ್ಚಯಾತ್ ॥೫೭॥

ಶಿವಲಿಂಗವನ್ನು ಮಸ್ತಕದಲ್ಲಾಗಲಿ, ಕಂಠದಲ್ಲಾಗಲಿ, ಬಾಹುಮೂಲದಲ್ಲಾಗಲಿ, ಎದೆಯಲ್ಲಾಗಲಿ, ಉದರದ ಮೇಲಾಗಲಿ ಅಥವಾ ಕರತಲ (ಅಂಗೈ) ದಲ್ಲಾಗಲಿ ಧರಿಸಬೇಕು. ॥೫೧॥ ನಾಭಿಯ ಕೆಳಗೆ ಲಿಂಗಧಾರಣವನ್ನು ಮಾಡುವುದು ಪಾಪಕ್ಕೆ ಕಾರಣವಾಗುವುದು. ಜಡೆಯ ತುದಿಯಲ್ಲಿಯೂ, ಬೆನ್ನಿನಲ್ಲಿಯೂ, ಮಲಸ್ಥಾನದಲ್ಲಿಯೂ ಲಿಂಗವನ್ನು ಧರಿಸಬಾರದು. ॥೫೨॥ ಲಿಂಗಧಾರಿಯಾದ ವೀರಶೈವನು ಯಾವಾಗಲೂ ನಿರ್ಮಲನಾಗಿದ್ದು, ಮನೋಹರವಾದ ತನ್ನ ಇಷ್ಟಲಿಂಗವನ್ನು ಕರಪೀಠದಲ್ಲಿಟ್ಟುಕೊಂಡು ಗಂಧಪುಷ್ಪಾದ್ಯುಪಚಾರಗಳಿಂದ ಪೂಜಿಸಬೇಕು. ॥೫೩॥ ಮೋಕ್ಷಾಪೇಕ್ಷೆಯುಳ್ಳ ಸಮಸ್ತವೀರಶೈವರಿಗೆ ಯಾವಾಗಲೂ ಬಾಹ್ಯಪೀಠಪೂಜೆಗಿಂತಲೂ ಕರಪೀಠಪೂಜೆಯೇ ಶ್ರೇಷ್ಠವಾದುದು. ॥೫೪॥ ಬ್ರಹ್ಮವಿಷ್ಣು ಮೊದಲಾದ ದೇವತೆಗಳೂ, ಗೌತಮಾದಿಮಹರ್ಷಿಗಳೂ ಯಾವಾಗಲೂ ಮಸ್ತಕದಲ್ಲಿ ಲಿಂಗವನ್ನು ಧರಿಸುತ್ತಾರೆ. ॥೫೫॥ ಶಿವಧ್ಯಾನತತ್ಪರೆಯರಾದ ಲಕ್ಷ್ಮಿ ಮೊದಲಾದ ಶಕ್ತಿದೇವತೆಗಳು ಯಾವಾಗಲೂ ಶಿವಲಿಂಗವನ್ನು ಹಣೆಯ ಮೇಲ್ಭಾಗದಲ್ಲಿ ಧರಿಸುತ್ತಾರೆ. ॥೫೬॥ ವೇದಗಳಲ್ಲಿಯೂ, ಶಾಸ್ತ್ರಗಳಲ್ಲಿಯೂ, ಪುರಾಣಗಳಲ್ಲಿಯೂ, ಕಾಮಿಕಾದಿವಾತುಲಾಂತ

ಋಗಿತ್ಯಾಹ ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ ।
ತಸ್ಮಾತ್ಪವಿತ್ರಂ ತಲ್ಲಿಂಗಂ ಧಾರ್ಯಂ ಶೈವಮನಾಮಯಂ ॥೫೮॥

ಗಳಾದ ಸಕಲಶಿವಾಗಮಗಳಲ್ಲಿಯೂ ವೀರಶೈವನಿಗೆ ಲಿಂಗಧಾರಣವು ಹೇಳಲ್ಪಟ್ಟಿರುವುದು. ॥೫೭॥ "ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ ಪ್ರಭುರ್ಗಾತ್ರಾಣಿ ಪರ್ಯೇಷಿ ವಿಶ್ವತಃ ಅತಪ್ತತನೂರ್ನ ತದಾಮೋ ಅಶ್ನುತೇ॥" ಎಂಬ ಮಂತ್ರದಿಂದ ಋಗ್ವೇದವು ಲಿಂಗಧಾರಣವನ್ನು ಬೋಧಿಸುತ್ತದೆ. ಆದುದರಿಂದ ಪವಿತ್ರವೂ ದೋಷರಹಿತವೂ ಆದ ಶಿವಲಿಂಗವನ್ನು ಧರಿಸಬೇಕು. ಲಿಂಗಕ್ಕೆ ಬ್ರಹ್ಮವೆಂಬ ಹೆಸರುಂಟು. ಶಿವನು ಚತುರ್ಮುಖಬ್ರಹ್ಮನಿಗೆ ಅಧಿಪತಿಯಾಗಿರುವನು. ಆ ಶಿವಲಿಂಗವೇ "ಪವಿತ್ರಂ" ಎಂದು ಹೇಳಿಸಿಕೊಳ್ಳುವುದು. ಅಂಥ ಪವಿತ್ರ (ಲಿಂಗ) ಮೂರ್ತಿಯ ಸಂಪರ್ಕದಿಂದ ಶರೀರವು ಪವಿತ್ರವಾಗುವುದು. ದೀಕ್ಷಾಗ್ನಿಯಿಂದ ಸುಡಲ್ಪಡದೆ ಇದ್ದ ಶರೀರವುಳ್ಳವನೂ, ಷಡಧ್ವಾದಿಸಂಸ್ಕಾರಶೂನ್ಯನೂ, ಶಿವದೀಕ್ಷಾರಹಿತನೂ ಉತ್ತಮವಾದ ಲಿಂಗವನ್ನು ಹೊಂದುವುದಿಲ್ಲ. ॥

ಲಿಂಗಧಾರಣಚಂದ್ರಿಕಾಕಾರರಾದ ಶ್ರೀನಂದಿಕೇಶ್ವರಶಿವಾಚಾರ್ಯರು ಈ ಮಂತ್ರಕ್ಕೆ—

ಹೇ ಬ್ರಹ್ಮಣಸ್ಪತೇ—ಲಿಂಗರೂಪಶರೀರಾವಚ್ಛೇದೇನ ಶರೀರಿಭಾವೇನಾಧಿಷ್ಠಿತ ಪರಮಶಿವ, ತೇ—ತವ, ತತ್—ಬ್ರಹ್ಮಪದವಾಚ್ಯಲಿಂಗರೂಪಂ ಶರೀರಂ, ಪವಿತ್ರಂ—ಉಕ್ತರೀತ್ಯಾ ಶುಚ್ಯಶುಚಿಕಾಲೇಽಪಿ ಧರ್ತುಂ ಯೋಗ್ಯಂ, ವಿತತಂ—ಇಷ್ಟಾದಿಭೇದೇನ ಭಕ್ತಶರೀರಾದಿಭೇದೇನ ವಾ ಬಹುವಿಧಂ, ಪ್ರಭುಃ—ನಿಗ್ರಹಾನುಗ್ರಹಸಮರ್ಥಸ್ತ್ವಂ, ವಿಶ್ವತಃ—ಸಮಸ್ತಾನಿ (ಸಾರ್ವವಿಭಕ್ತಿಕಸ್ತಸಿಲ್) ಗಾತ್ರಾಣಿ—ಭಕ್ತಶರೀರಾಣಿ, ಪರ್ಯೇಷಿ—ವ್ಯಾಪ್ನೋಷಿ, ಧಾರ್ಯಮಾಣಸ್ಸನ್ ಲಿಂಗರೂಪಶರೀರದ್ವಾರಾ ಭಕ್ತಾಂಗಸಂಯುಕ್ತೋಽಸೀತ್ಯರ್ಥಃ ಅತಪ್ತತನೂಃ—ತಪ್ತಾ ವೇಧಾ-ಮನು-ಕ್ರಿಯಾದೀಕ್ಷಾತ್ರಯೇಣ ನಿರ್ದಗ್ಧಪಾಪಪಂಜರಾ ತನೂರ್ಯಸ್ಯ ನ ಭವತೀತಿ ಸಃ ಅತಪ್ತತನೂಃ, ದೀಕ್ಷಾತ್ರಯರಹಿತಃ, ಆಮಃ—ಅಪರಿಪಕ್ವಾಂತಃಕರಣಸ್ಸನ್, ತತ್—ಪರಶಿವಸ್ವರೂಪಂ, ನಾಶ್ನುತೇ ॥ ಎಂದು ವ್ಯಾಖ್ಯಾನವನ್ನು ಬರೆದಿದ್ದಾರೆ.

ಈ ವೇದಮಂತ್ರದ ಅಭಿಪ್ರಾಯವನ್ನು ಲೋಕವಿಖ್ಯಾತರಾದ ವ್ಯಾಸಮಹರ್ಷಿಗಳು ತಮ್ಮಿಂದ ರಚಿಸಲ್ಪಟ್ಟ "ಲಿಂಗಪುರಾಣ"ದ ಉತ್ತರಭಾಗದ ೨೧ ನೆಯ ಅಧ್ಯಾಯದಲ್ಲಿ ಸ್ಪಷ್ಟವಾಗಿ ಹೇಳಿರುವರು.

ಬ್ರಹ್ಮೇತಿ ಲಿಂಗಮಾಖ್ಯಾತಂ ಬ್ರಹ್ಮಣಃ ಪತಿರೀಶ್ವರಃ ॥೯೮॥ ಪವಿತ್ರಂ ತದ್ಧಿ ವಿಖ್ಯಾತಂ ತತ್ಸಂಪರ್ಕಾತ್ತನುಃ ಶುಚಿಃ । ಋಗಿತ್ಯಾಹ ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ ॥೯೯॥ ತಸ್ಮಾತ್ಪವಿತ್ರಂ ತಲ್ಲಿಂಗಂ ಧಾರ್ಯಂ ಶೈವಮನಾಮಯಂ । ಅತಪ್ತತನುರಜ್ಞೋ ವೈ ಹ್ಯಘೀ ಸಂಸಾರಲಕ್ಷಣಃ ॥೧೦೦॥ ದೀಕ್ಷಯಾ ರಹಿತಃ ಸಾಕ್ಷಾನ್ನಾಪ್ನುಯಾಲ್ಲಿಂಗಮುತ್ತಮಂ । ಯಃ ಕರೋತಿ

ಬ್ರಹ್ಮೇತಿ ಲಿಂಗಮಾಖ್ಯಾತಂ ಬ್ರಹ್ಮಣಃ ಪತಿರೀಶ್ವರಃ ।
ಪವಿತ್ರಂ ತದ್ಧಿ ವಿಖ್ಯಾತಂ ತತ್ಸಂಪರ್ಕಾತ್ತನುಃ ಶುಚಿಃ ॥೫೯॥
ಅತಪ್ತತನುರಜ್ಞೋ ವೈ ಆಮಃ ಸಂಸ್ಕಾರವರ್ಜಿತಃ ।
ದೀಕ್ಷಯಾ ರಹಿತಃ ಸಾಕ್ಷಾನ್ನಾಪ್ನುಯಾಲ್ಲಿಂಗಮುತ್ತಮಂ ॥೬೦॥
ಅಘೋರಾಽಪಾಪಕಾಶೀತಿ ಯಾ ತೇ ರುದ್ರ ಶಿವಾ ತನೂಃ ।
ಯಜುಷಾ ಗೀಯತೇ ಯಸ್ಮಾತ್ತಸ್ಮಾಚ್ಛೈವೋಽಘವರ್ಜಿತಃ ॥೬೧॥

ತಪಃ ಪೂರ್ವಂ ಸ ತಪ್ತತನುರುಚ್ಯತೇ||೧೦೧|| ಪರಿಪಕ್ವೋ ವಿಮೋಕ್ಷಾಯ ಸೋಽಶ್ನುತೇ ಲಿಂಗಧಾರಣಂ | ನ ಕರೋತಿ ತಪಃ ಪೂರ್ವಂ ಸೋಽತಪ್ತತನುರುಚ್ಯತೇ ||೧೦೨||

ಅಂದರೆ—ಬ್ರಹ್ಮವೇ ಶಿವಲಿಂಗವೆಂದೂ, ಪವಿತ್ರವಾದ ಶಿವಲಿಂಗಧಾರಣದಿಂದ ಶರೀರವು ಪವಿತ್ರವಾಗುವುದೆಂದೂ, ಆದುದರಿಂದ ಪವಿತ್ರವಾದ ಶಿವಲಿಂಗವನ್ನು ಧರಿಸಿಕೊಳ್ಳಬೇಕೆಂದೂ, ವೇಧಾ-ಮನು-ಕ್ರಿಯಾರೂಪದೀಕ್ಷೆಯಿಂದ ತಪ್ತನಾಗದಿದ್ದವನು ಅಜ್ಞನೂ, ಪಾಪಿಯೂ, ಸಂಸಾರಿಯೂ ಆಗುವನೆಂದೂ, ಆದುದರಿಂದಲೇ ದೀಕ್ಷೆಯನ್ನು ಹೊಂದಬೇಕೆಂದೂ, ದೀಕ್ಷಾರಹಿತನು ಶಿವಲಿಂಗವನ್ನು ಧರಿಸಲು ಯೋಗ್ಯನಲ್ಲವೆಂದೂ, ಪೂರ್ವದಲ್ಲಿ ಯಾವನು ಶಿವನಿಗೋಸುಗ ತಪಸ್ಸನ್ನಾಚರಿಸುವನೋ ಅವನು 'ತಪ್ತತನು' ಎಂದು ಹೇಳಿಸಿಕೊಳ್ಳುವನೆಂದೂ, ತಪಸ್ಸನ್ನಾಚರಿಸದವನು 'ಅತಪ್ತತನು' ಎಂದು ಹೇಳಿಸಿಕೊಳ್ಳುವನೆಂದೂ, ಪರಿಪಕ್ವಾಂತಃಕರಣನು ಮುಕ್ತಿಗೋಸುಗ ಲಿಂಗಧಾರಣವನ್ನು ಹೊಂದುವನೆಂದೂ ವ್ಯಾಸಮಹರ್ಷಿಗಳು ಬೋಧಿಸಿದ್ದಾರೆ. ಇದರಿಂದ "ಪವಿತ್ರಂ ತೇ" ಎಂಬೀ ಋಗ್ವೇದಮಂತ್ರವು ಕೇವಲ ಲಿಂಗಧಾರಣವನ್ನೇ ಬೋಧಿಸುವುದೆಂದು ಸಿದ್ಧವಾಗುವುದು. ॥೫೮-೫೯-೬೦॥

"ಯಾ ತೇ ರುದ್ರ ಶಿವಾ ತನೂರಘೋರಾಽಪಾಪಕಾಶಿನೀ | ತಯಾ ನಸ್ತನುವಾ ಶಂತಮಯಾ ಗಿರಿಶಂತಾಭಿಚಾಕಶೀಹಿ ||" ಎಂಬ ಯಜುರ್ವೇದಮಂತ್ರವು ಲಿಂಗಧಾರಣವನ್ನು ಬೋಧಿಸುತ್ತದೆ. ಆದುದರಿಂದ ಲಿಂಗಧಾರಣಸಂಪನ್ನನಾದ ವೀರಶೈವನು ಪಾಪಸಮೂಹದಿಂದ ಬಿಡುಗಡೆಯನ್ನು ಹೊಂದುವನು. ॥ ಈ ಯಜುರ್ವೇದಮಂತ್ರಕ್ಕೆ ಸೋಸಲೆ ಶ್ರೀರೇವಣಾರಾಧ್ಯರು—

ಭೋ ರುದ್ರ—ಎಲೈ ಪರಮೇಶ್ವರನೆ! ತೇ—ನಿನ್ನ, ಅಪಾಪಕಾಶಿನೀ—ಮನೋವಾಕ್ಕಾಯಂಗಳಲ್ಲಿ ಪುಟ್ಟಿದ ಬಹುವಿಧಪಾಪಂಗಳನ್ನು ಪ್ರಕಾಶಿಸದೆ ಸಂಹರಿಸುತ್ತಿರ್ದ, ಅಘೋರಾ—ಭಯಂಕರವಲ್ಲದೆ ಶಾಂತರೂಪವಾಗಿರ್ದ, ಯಾ ತನೂಃ—'ಲಿಂಗಂತು ಶಿವಯೋರ್ದೇಹಸ್ತಾಭ್ಯಾಂ ಯಸ್ಮಾದಧಿಷ್ಠಿತಃ' ಎಂದು ವಾಯವೀಯಸಂಹಿತಾವಾಕ್ಯಮುಂಟಾಗಿ ಆವುದಾನೊಂದು ಇಷ್ಟ

ಯೋ ಲಿಂಗಧಾರೀ ನಿಯತಾಂತರಾತ್ಮಾ
ನಿತ್ಯಂ ಶಿವಾರಾಧನಬದ್ಧಚಿತ್ತಃ ।
ಸ ಧಾರಯೇತ್ ಸರ್ವಮಲಾಪಹತ್ಯೈ
ಭಸ್ಮಾಮಲಂ ಚಾರು ಯಥಾಪ್ರಯೋಗಂ ॥೬೨॥

ಇತಿ ಶ್ರೀಸಿದ್ಧಾಂತಶಿಖಾಮಣೌ ಭಕ್ತಸ್ಥಲೇ ಗುರುಕಾರುಣ್ಯಸ್ಥಲ ಲಿಂಗಧಾರಣಸ್ಥಲಪ್ರಸಂಗೋನಾಮ

ಷಷ್ಠಪರಿಚ್ಛೇದಃ ಪರಿಸಮಾಪ್ತಃ

ಪ್ರಾಣಲಿಂಗರೂಪವಾದ ದೇಹವು, ಶಿವಾ—ಮಾಂಗಲ್ಯವುಳ್ಳದೋ, ಶಂತಮಯಾ—ಭಕ್ತರಿಗೆ ಮಹಾಭೋಗಮೋಕ್ಷರೂಪವಾದ ಸುಖವನ್ನು ಕೊಡಲೋಸುಗವಾಗಿ ಅತ್ಯಂತಸುಖಸ್ವರೂಪವಾಗಿರ್ಪ, ತಯಾ ತನುವಾ—ಆ ಇಷ್ಟಪ್ರಾಣಲಿಂಗರೂಪವಾದ ಶರೀರದಿಂದ, ಭೋ ಗಿರಿಶಂತ—ಎಲೈ ಪರಮೇಶ್ವರನೇ ! ತ್ವಂ—ನೀನು, ನಃ—'ಇಷಮೂರ್ಜಂ ತಪಸಾನುಯಚ್ಛತೇ ಪ್ರಾಣೇಷ್ವಂತರ್ಮನಸೋ ಲಿಂಗಮಾಹುಃ' ಎಂದು ಅಥರ್ವಶಿರೋಮಂತ್ರಮುಂಟಾಗಿ, 'ಇಷ್ಟಲಿಂಗಂ ಪ್ರಾಣಲಿಂಗಮೇಕೀಕೃತ್ಯಾರ್ಚನಂ ಪರಂ' ಎಂದು ವಾತುಲೋತ್ತರತಂತ್ರಮುಂಟಾಗಿ ದೇಶಿಕೋಪದೇಶದಿಂದ ಶಿಕ್ಷಿತರಾದ ನಮ್ಮಗಳನ್ನು ಕುರಿತು ಅಭಿಚಾಕಶೀಹಿ—ಅಭಿಮುಖವಾಗಿ ಪ್ರಕಾಶಿಸು.

ಎಂಬೀರೀತಿಯಾಗಿ ಈ ಮಂತ್ರಾರ್ಥವನ್ನು ವಿವರಿಸಿದ್ದಾರೆ. "ಯಾ ತೇ ರುದ್ರ" ಎಂಬ ಯಜುರ್ವೇದಮಂತ್ರವೂ ಕೂಡ ಲಿಂಗಧಾರಣವನ್ನೇ ಬೋಧಿಸುವುದೆಂದು ಭಾವವು. ॥೬೧॥ ಯಾವನು ಲಿಂಗಧಾರಿಯಾಗಿಯೂ, ನಿರ್ಮಲಾಂತಃಕರಣನಾಗಿಯೂ, ಪ್ರತಿದಿವಸವೂ ಶಿವಪೂಜೆಯಲ್ಲಿ ನಿರತವಾದ ಮನಸ್ಸುಳ್ಳವನಾಗಿಯೂ ಇರುವನೋ, ಅವನು ಸಮಸ್ತದೋಷಗಳ ನಾಶಕ್ಕೋಸ್ಕರ, ಮನೋಹರವೂ ಪವಿತ್ರವೂ ಆದ ಭಸ್ಮವನ್ನು ಭಸ್ಮಧಾರಣವಿಧಿಗನುಸಾರವಾಗಿ ಧರಿಸಬೇಕು. ॥೬೨॥

ಇಂತು ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಗುರುಕಾರುಣ್ಯಸ್ಥಲ ಲಿಂಗಧಾರಣಸ್ಥಲವಿಚಾರಾತ್ಮಕವಾದ

ಆರನೆಯ ಪರಿಚ್ಛೇದವು ಪರಿಸಮಾಪ್ತವಾದುದು.

ಶ್ರೀಜಗದ್ಗುರುರೇಣುಕಾಚಾರ್ಯಃ ಪ್ರಸೀದತು.

ಸಪ್ತಮಪರಿಚ್ಛೇದಃ

೬ ಭಸ್ಮಧಾರಣಸ್ಥಲಂ

ಭಸ್ಮಧಾರಣಸಂಯುಕ್ತಃ ಪವಿತ್ರೋ ನಿಯತಾಶಯಃ ।
ಶಿವಾಭಿಧಾನಂ ಯತ್ಪ್ರೋಕ್ತಂ ಭಾಸನಾದ್ಭಸಿತಂ ತಥಾ ॥೧॥
ಮಹಾಭಸ್ಮೇತಿ ಸಂಚಿಂತ್ಯ ಮಹಾದೇವಂ ಪ್ರಭಾಮಯಂ ।
ವರ್ತಂತೇ ಯೇ ಮಹಾಭಾಗಾ ಮುಖ್ಯಾಸ್ತೇ ಭಸ್ಮಧಾರಿಣಃ ॥೨॥
ಶಿವಾಗ್ನ್ಯಾದಿಸಮುತ್ಪನ್ನಂ ಮಂತ್ರನ್ಯಾಸಾದಿಯೋಗತಃ ।
ತತ್ಸೋಪಾಧಿಕಮಿತ್ಯಾಹುರ್ಭಸ್ಮತಂತ್ರವಿಶಾರದಾಃ ॥೩॥

ಏಳನೆಯ ಪರಿಚ್ಛೇದ

೬ ಭಸ್ಮಧಾರಣಸ್ಥಲ.

ವ್ಯಾಖ್ಯಾನ—ಭಸ್ಮಧಾರಣದಿಂದ ಕೂಡಿದ ವೀರಶೈವನು ಪವಿತ್ರನೂ ನಿಶ್ಚಲ ಚಿತ್ತನೂ ಆಗುವನು. "ಸ ಏಷ ಭಸ್ಮಜ್ಯೋತಿಃ ಸ ಏಷ ಭಸ್ಮಜ್ಯೋತಿಃ" ಎಂಬ ಭಸ್ಮಜಾಬಾಲಶ್ರುತಿವಾಕ್ಯಾನುಸಾರವಾಗಿ ಯಾವುದು ಶಿವನಾಮವಾಗಿರುವುದೋ, ಯಾವುದು ಶಿವನ ಸ್ವರೂಪವನ್ನು ಪ್ರಕಾಶಗೊಳಿಸುವುದರಿಂದ "ಭಸಿತ" ವೆಂದು ಹೇಳಿಸಿಕೊಳ್ಳುವುದೋ, ಜ್ಯೋತೀರೂಪನಾದ ಶಂಕರನನ್ನು ಆ ಮಹಾಭಸ್ಮವೆಂದು ಭಾವಿಸಿ ಯಾವ ಮಹನೀಯರು ವರ್ತಿಸುತ್ತಾರೆಯೋ, ಆ ನಿರುಪಾಧಿಕಭಸ್ಮಧಾರಿಗಳಾದ ವೀರಶೈವರೇ ಸರ್ವಶ್ರೇಷ್ಠರಾಗುವರು. ಪರಶಿವನನ್ನು ಮಹಾಭಸ್ಮವೆಂದು ಭಾವಿಸುವುದೇ "ನಿರುಪಾಧಿಕಭಸ್ಮ" ವೆನಿಸುವುದು. ॥೧-೨॥ ಪಂಚಬ್ರಹ್ಮಮಂತ್ರನ್ಯಾಸಾದಿಗಳ ಸಂಬಂಧದಿಂದ ಯಾವುದು ಶಿವಾಗ್ನಿಸಂಸ್ಕಾರಪೂರ್ವಕವಾಗಿ ಉತ್ಪನ್ನವಾಗುವುದೋ, ಆ ಭಸ್ಮಕ್ಕೆ ತಂತ್ರಶಾಸ್ತ್ರವಿಶಾರದರು "ಸೋಪಾಧಿಕಭಸ್ಮ" ವೆಂದು ಹೇಳುವರು. ॥೩॥

ವಿಭೂತಿರ್ಭಸಿತಂ ಭಸ್ಮ ಕ್ಷಾರಂ ರಕ್ಷೇತಿ ಭಸ್ಮನಃ ।
ಏತಾನಿ ಪಂಚ ನಾಮಾನಿ ಹೇತುಭಿಃ ಪಂಚಭಿರ್ಭೃಶಂ ॥೪॥

ವಿಭೂತಿರ್ಭೂತಿಹೇತುತ್ವಾದ್ಭಸಿತಂ ತತ್ತ್ವಭಾಸನಾತ್ ।
ಪಾಪಾನಾಂ ಭರ್ತ್ಸನಾದ್ಭಸ್ಮ ಕ್ಷರಣಾತ್ ಕ್ಷಾರಮಾಪದಾಂ ॥
ರಕ್ಷಣಾತ್ಸರ್ವಭೂತೇಭ್ಯೋ ರಕ್ಷೇತಿ ಪರಿಗೀಯತೇ ॥೫॥

ನಂದಾ ಭದ್ರಾ ಚ ಸುರಭಿಃ ಸುಶೀಲಾ ಸುಮನಾಸ್ತಥಾ ।
ಪಂಚ ಗಾವೋ ವಿಭೋರ್ಜಾತಾಃ ಸದ್ಯೋಜಾತಾದಿವಕ್ತ್ರತಃ ॥೬॥

ಕಪಿಲಃ ಕೃಷ್ಣಧವಲಧೂಮ್ರರಕ್ತಾಸ್ತಥೈವ ಚ ।
ನಂದಾದೀನಾಂ ಗವಾಂ ವರ್ಣಾಃ ಕ್ರಮೇಣ ಪರಿಕೀರ್ತಿತಾಃ ॥೭॥

ಸದ್ಯೋಜಾತಾದ್ವಿಭೂತಿಶ್ಚ ವಾಮಾದ್ಭಸಿತಮೇವ ಚ ।
ಅಘೋರಾದ್ಭಸ್ಮ ಸಂಜಾತಂ ಕ್ಷಾರಂ ತತ್ಪುರುಷಾತ್ತಥಾ ॥
ರಕ್ಷಾ ಚೇಶಾನವಕ್ತ್ರಾಚ್ಚ ನಂದಾದಿದ್ವಾರತೋಽಭವತ್ ॥೮॥

ಭಸ್ಮಕ್ಕೆ ಐದುಕಾರಣಗಳಿಂದ "ವಿಭೂತಿ-ಭಸಿತ-ಭಸ್ಮ-ಕ್ಷಾರ-ರಕ್ಷಾ" ಎಂಬ ಐದುಹೆಸರುಗಳು ಬಂದಿವೆ. ॥೪॥ ಅಣಿಮಾದ್ಯಷ್ಟೈಶ್ವರ್ಯಗಳಿಗೆ ಕಾರಣೀಭೂತವಾಗಿರುವುದರಿಂದ ವಿಭೂತಿಯೆಂದೂ, ಶಿವತತ್ತ್ವವನ್ನು ಪ್ರಕಾಶಗೊಳಿಸುವುದರಿಂದ ಭಸಿತವೆಂದೂ, ಮನೋವಾಕ್ಕಾಯಜನ್ಯವಾದ ಪಾಪಗಳನ್ನು ಭಯಪಡಿಸುವುದರಿಂದ ಭಸ್ಮವೆಂದೂ, ಆಧ್ಯಾತ್ಮಿಕ-ಆಧಿಭೌತಿಕ-ಆಧಿದೈವಿಕರೂಪತಾಪಗಳಿಂದ ಪ್ರಾಪ್ತವಾಗುವ ವಿಪತ್ತುಗಳನ್ನು ಕ್ಷಯಗೊಳಿಸುವುದರಿಂದ ಕ್ಷಾರವೆಂದೂ, ಭೂತ-ಪ್ರೇತ-ಪಿಶಾಚಾದಿಗಳಿಂದ ಕಾಪಾಡುವುದರಿಂದ ರಕ್ಷೆಯೆಂದೂ ಹೇಳಿಸಿಕೊಳ್ಳುವುದು. ॥೫॥ ಪರಮೇಶ್ವರನ ಸದ್ಯೋಜಾತ-ವಾಮದೇವ-ಅಘೋರ-ತತ್ಪುರುಷ-ಈಶಾನಮುಖಗಳಿಂದ ಅನುಕ್ರಮವಾಗಿ ನಂದಾ-ಭದ್ರಾ-ಸುರಭಿ-ಸುಶೀಲಾ-ಸುಮನಾ ಎಂಬ ಹೆಸರಿನ ಐದು ಗೋವುಗಳು ಉತ್ಪನ್ನವಾದುವು. ॥೬॥ ನಂದಾದಿಗೋವುಗಳಿಗೆ ಅನುಕ್ರಮವಾಗಿ ಕಪಿಲ-ಕಪ್ಪು-ಬಿಳುಪು-ಆಕಾಶವರ್ಣ-ಕೆಂಪುಬಣ್ಣಗಳು ಹೇಳಲ್ಪಟ್ಟಿವೆ.॥೭॥ ಸದ್ಯೋಜಾತಮುಖದಿಂದ ಜನಿಸಿದ ನಂದಾಗೋವಿನಿಂದ ವಿಭೂತಿಯೂ, ವಾಮದೇವಮುಖದಿಂದ ಜನಿಸಿದ ಭದ್ರಾಗೋವಿನಿಂದ ಭಸಿತವೂ, ಅಘೋರಮುಖದಿಂದ ಜನಿಸಿದ ಸುರಭಿಗೋವಿನಿಂದ ಭಸ್ಮವೂ, ತತ್ಪುರುಷಮುಖದಿಂದ ಜನಿಸಿದ ಸುಶೀಲಾಗೋವಿನಿಂದ ಕ್ಷಾರವೂ, ಈಶಾನಮುಖದಿಂದ ಜನಿಸಿದ ಸುಮನಾಗೋವಿನಿಂದ ರಕ್ಷೆಯೂ ಉತ್ಪನ್ನವಾದುವು. ॥೮॥

ಧಾರಯೇನ್ನಿತ್ಯಕಾರ್ಯೇಷು ವಿಭೂತಿಂ ಚ ಪ್ರಯತ್ನತಃ ।
ನೈಮಿತ್ತಿಕೇಷು ಭಸಿತಂ ಕ್ಷಾರಂ ಕಾಮ್ಯೇಷು ಸರ್ವದಾ ॥೯॥

ಪ್ರಾಯಶ್ಚಿತ್ತೇಷು ಸರ್ವೇಷು ಭಸ್ಮ ನಾಮ ಯಥಾವಿಧಿ ।
ರಕ್ಷಾ ಚ ಮೋಕ್ಷಕಾರ್ಯೇಷು ಪ್ರಯೋಕ್ತವ್ಯಾ ಸದಾ ಬುಧೈಃ ॥೧೦॥

ನಂದಾದೀನಾಂತು ಯೇ ವರ್ಣಾಃ ಕಪಿಲಾದ್ಯಾಃಪ್ರಕೀರ್ತಿತಾಃ ।
ತ ಏವ ವರ್ಣಾ ವಿಖ್ಯಾತಾ ಭೂತ್ಯಾದೀನಾಂ ಯಥಾಕ್ರಮಂ ॥೧೧॥

ಭಸ್ಮೋತ್ಪಾದನಮುದ್ದಿಷ್ಟಂ ಚತುರ್ಧಾ ತಂತ್ರವೇದಿಭಿಃ ।
ಕಲ್ಪಂ ಚೈವಾನುಕಲ್ಪಂ ಚ ಉಪಕಲ್ಪಮಕಲ್ಪಕಂ ॥೧೨॥

ಏಷಾಮಾದಿಮಮುತ್ಕೃಷ್ಟಮನ್ಯತ್ಸರ್ವಮಭಾವತಃ ।
ಯಥಾಶಾಸ್ತ್ರೋಕ್ತವಿಧಿನಾ ಗೃಹೀತ್ವಾ ಗೋಮಯಂ ನವಂ ॥೧೩॥

ಸದ್ಯೇನ ವಾಮದೇವೇನ ಕುರ್ಯಾತ್ಪಿಂಡಮನುತ್ತಮಂ ।
ಶೋಷಯೇತ್ಪುರುಷೇಣೈವ ದಹೇದ್ಘೋರಾಚ್ಛಿವಾಗ್ನಿನಾ ॥೧೪॥

ಬುದ್ಧಿಶಾಲಿಗಳು ನಿತ್ಯಕರ್ಮಗಳಲ್ಲಿ ವಿಭೂತಿಯನ್ನೂ, ನೈಮಿತ್ತಿಕಕರ್ಮಗಳಲ್ಲಿ ಭಸಿತವನ್ನೂ, ಕಾಮ್ಯಕರ್ಮಗಳಲ್ಲಿ ಕ್ಷಾರವನ್ನೂ, ಎಲ್ಲಾವಿಧವಾದ ಪ್ರಾಯಶ್ಚಿತ್ತ ಕರ್ಮಗಳಲ್ಲಿ ಭಸ್ಮವನ್ನೂ, ಮೋಕ್ಷಕಾರ್ಯದಲ್ಲಿ ರಕ್ಷೆಯನ್ನೂ ವಿಧಿಗನುಸಾರವಾಗಿ ಧರಿಸಬೇಕು. ॥೯-೧೦॥ ನಂದಾದಿಗೋವುಗಳಿಗೆ ಯಾವ ಕಪಿಲಾದಿವರ್ಣಗಳು ಹೇಳಲ್ಪಟ್ಟಿವೆಯೋ, ವಿಭೂತ್ಯಾದಿಗಳಿಗೂ ಅವೇ ವರ್ಣಗಳು; ಅಂದರೆ ವಿಭೂತಿಗೆ ಕಪಿಲ, ಭಸಿತಕ್ಕೆ ಕಪ್ಪು, ಭಸ್ಮಕ್ಕೆ ಬಿಳುಪು, ಕ್ಷಾರಕ್ಕೆ ಆಕಾಶವರ್ಣ, ರಕ್ಷೆಗೆ ಕೆಂಪುಬಣ್ಣಗಳು ಹೇಳಲ್ಪಟ್ಟಿವೆ. ॥೧೧॥ ತಂತ್ರಶಾಸ್ತ್ರಜ್ಞರು ಭಸ್ಮೋತ್ಪತ್ತಿಯನ್ನು ಕಲ್ಪ-ಅನುಕಲ್ಪ-ಉಪಕಲ್ಪ-ಅಕಲ್ಪ ಎಂದು ನಾಲ್ಕುಪ್ರಕಾರವಾಗಿ ಹೇಳುತ್ತಾರೆ. ॥೧೨॥ ಇವುಗಳಲ್ಲಿ ಮೊದಲನೆಯದಾದ ಕಲ್ಪಭಸ್ಮವೇ ಸರ್ವೋತ್ತಮವಾದುದು. ಈ ಕಲ್ಪಭಸ್ಮವು ದೊರೆಯದಿದ್ದಲ್ಲಿ ಉಳಿದ ಮೂರುಭಸ್ಮಗಳನ್ನು ಉಪಯೋಗಿಸಬೇಕು. ನೂತನವಾದ ಗೋಮಯವನ್ನು ಶಾಸ್ತ್ರವಿಧಿಗನುಸಾರವಾಗಿ, ಸದ್ಯೋಜಾತಮಂತ್ರದಿಂದ ಅಂತರದಲ್ಲಿ ಹಿಡಿದು, ವಾಮದೇವಮಂತ್ರದಿಂದ ಉಂಡೆಯನ್ನು ಮಾಡಿ, ತತ್ಪುರುಷಮಂತ್ರದಿಂದ ಒಣಗಿಸಿ, ಅಘೋರಮಂತ್ರದಿಂದ ಸುಡಬೇಕು. ಈಶಾನಮಂತ್ರದಿಂದ ಬಿಲ್ವಾದಿಪವಿತ್ರಪಾತ್ರೆಗಳಲ್ಲಿಡಬೇಕು. ಇದು "ಕಲ್ಪಭಸ್ಮ" ವೆಂದು ಹೇಳಿಸಿಕೊಳ್ಳುವುದು. ಅರಣ್ಯದಲ್ಲಿದ್ದ ಒಣಗಿದ ಗೋಮಯವನ್ನು ಚೂರ್ಣಮಾಡಿ ಪೂರ್ವದಂತೆ ಸಂಸ್ಕೃತವಾದ ಭಸ್ಮವು

ಕಲ್ಪಂ ತದ್ಭಸ್ಮ ವಿಜ್ಞೇಯಮನುಕಲ್ಪಮಥೋಚ್ಯತೇ ।
ವನೇಷು ಗೋಮಯಂ ಯಚ್ಚ ಶುಷ್ಕಂ ಚೂರ್ಣೀಕೃತಂ ತಥಾ ॥೧೫॥
ದಗ್ಧಂ ಚೈವಾನುಕಲ್ಪಾಖ್ಯಮಾಪಣಾದಿಗತಂ ತು ಯತ್ ।
ವಸ್ತ್ರೇಣೋತ್ತಾರಿತಂ ಭಸ್ಮ ಗೋಮೂತ್ರಾಬದ್ಧಪಿಂಡಕಂ ॥೧೬॥
ದಗ್ಧಂ ಪ್ರಾಗುಕ್ತವಿಧಿನಾ ಭವೇದ್ಭಸ್ಮೋಪಕಲ್ಪಕಂ ।
ಅನ್ಯೈರಾಪಾದಿತಂ ಭಸ್ಮ ಅಕಲ್ಪಮಿತಿ ಕಲ್ಪಿತಂ ॥೧೭॥
ಏಷ್ವೇಕತಮಮಾದಾಯ ಪಾತ್ರೇಷು ಕಲಶಾದಿಷು ।
ತ್ರಿಸಂಧ್ಯಮಾಚರೇತ್ ಸ್ನಾನಂ ಯಥಾಸಂಭವಮೇವ ವಾ ॥೧೮॥
ಸ್ನಾನಕಾಲೇ ಕರೌ ಪಾದೌ ಪ್ರಕ್ಷಾಲ್ಯ ವಿಮಲಾಂಭಸಾ ।
ವಾಮಹಸ್ತತಲೇ ಭಸ್ಮ ಕ್ಷಿಪ್ತ್ವಾಽಽಚ್ಛಾದ್ಯಾನ್ಯಪಾಣಿನಾ ॥೧೯॥
ಅಷ್ಟಕೃತ್ವೋಽಥ ಮೂಲೇನ ಮೌನೀ ಭಸ್ಮಾಭಿಮಂತ್ರ್ಯ ಚ ।
ಶಿರ ಈಶಾನಮಂತ್ರೇಣ ಪುರುಷೇಣ ಮುಖಂ ತಥಾ ॥೨೦॥

"ಅನುಕಲ್ಪಭಸ್ಮ"ವೆಂದು ಹೇಳಿಸಿಕೊಳ್ಳುವುದು. ಅಂಗಡಿಯಲ್ಲಿರುವ ಭಸ್ಮವನ್ನು ತಂದು ವಸ್ತ್ರದಿಂದ ಶೋಧಿಸಿ ಗೋಮೂತ್ರದಿಂದ ಉಂಡೆಯನ್ನು ಮಾಡಿ ಮೊದಲು ಹೇಳಿದ ವಿಧಿಗನುಸಾರವಾಗಿ ಸಿದ್ಧಮಾಡಿದ ಭಸ್ಮವು "ಉಪಕಲ್ಪಭಸ್ಮ"ವೆಂದು ಹೇಳಿಸಿಕೊಳ್ಳುವುದು. ಮಂತ್ರಜ್ಞಾನಶೂನ್ಯರಿಂದ ಸಿದ್ಧಮಾಡಲ್ಪಟ್ಟ ಭಸ್ಮವು "ಅಕಲ್ಪಭಸ್ಮ"ವೆಂದು ಹೇಳಿಸಿಕೊಳ್ಳುವುದು. ॥೧೩-೧೪-೧೫-೧೬-೧೭॥ ಬೇರೆಬೇರೆ ಪಾತ್ರೆಗಳಲ್ಲಿದ್ದ ಆ ನಾಲ್ಕು ವಿಧವಾದ ಭಸ್ಮಗಳಲ್ಲಿ ಯಾವುದಾದರೊಂದನ್ನು ತೆಗೆದುಕೊಂಡು ಮೂರು ಕಾಲಗಳಲ್ಲಾಗಲಿ ಅಥವಾ ತನಗೆ ಅನುಕೂಲವಾದಂತೆ ಒಂದು ಕಾಲದಲ್ಲಾಗಲಿ ಪ್ರತಿದಿವಸವೂ ಭಸ್ಮಸ್ನಾನವನ್ನು ಮಾಡಬೇಕು. ॥೧೮॥ ಭಸ್ಮಸ್ನಾನಸಮಯದಲ್ಲಿ ನಿರ್ಮಲೋದಕದಿಂದ ಎರಡು ಹಸ್ತಗಳನ್ನೂ ಎರಡು ಪಾದಗಳನ್ನೂ ತೊಳೆದುಕೊಂಡು, ಎಡಗೈಯಲ್ಲಿ ಭಸ್ಮವನ್ನಿಟ್ಟುಕೊಂಡು, ಅದರಮೇಲೆ ಬಲಗೈಯನ್ನು ಮುಚ್ಚಿ, ಬಳಿಕ ಮೌನಿಯಾಗಿ ಎಂಟುಸಾರೆ ಮೂಲಮಂತ್ರದಿಂದ ಭಸ್ಮವನ್ನು ಅಭಿಮಂತ್ರಿಸಿ, ಈಶಾನಮಂತ್ರದಿಂದ ಶಿರಸ್ಸನ್ನೂ, ತತ್ಪುರುಷಮಂತ್ರದಿಂದ ಮುಖವನ್ನೂ, ಅಘೋರಮಂತ್ರದಿಂದ ಹೃದಯವನ್ನೂ, ವಾಮದೇವಮಂತ್ರದಿಂದ

ಹೃತ್ಪ್ರದೇಶಮಘೋರೇಣ ವಾಮದೇವೇನ ಗುಹ್ಯಕಂ ।
ಪಾದೌ ಸದ್ಯೇನ ಸರ್ವಾಂಗಂ ಪ್ರಣವೇನೈವ ಸೇಚಯೇತ್ ॥೨೧॥

ಭಸ್ಮನಾ ವಿಹಿತಂ ಸ್ನಾನಮಿದಮಾಗ್ನೇಯಮುತ್ತಮಂ ।
ಸ್ನಾನೇಷು ವಾರುಣಾದ್ಯೇಷು ಮುಖ್ಯಮೇತನ್ಮಲಾಪಹಂ ॥೨೨॥

ಭಸ್ಮಸ್ನಾನವತಾಂ ಪುಂಸಾಂ ಯಥಾಯೋಗಂ ದಿನೇದಿನೇ ।
ವಾರುಣಾದ್ಯೈರಲಂ ಸ್ನಾನೈರ್ಬಾಹ್ಯದೋಷಾಪಹಾರಿಭಿಃ ॥೨೩॥

ಆಗ್ನೇಯಂ ಭಸ್ಮನಾ ಸ್ನಾನಂ ಯತಿಭಿಸ್ತು ವಿಧೀಯತೇ ।
ಆರ್ದ್ರಸ್ನಾನಾತ್ಪರಂ ಭಸ್ಮ ಆರ್ದ್ರೇ ಜಂತುವಧೋ ಧ್ರುವಂ ॥೨೪॥

ಆರ್ದ್ರಂ ತು ಪ್ರಕೃತಿಂ ವಿದ್ಯಾತ್ ಪ್ರಕೃತಿಂ ಬಂಧನಂ ವಿದುಃ ।
ಪ್ರಕೃತೇಸ್ತು ಪ್ರಹಾಣಾರ್ಥಂ ಭಸ್ಮನಾ ಸ್ನಾನಮಿಷ್ಯತೇ ॥೨೫॥

ಬ್ರಹ್ಮಾದ್ಯಾ ವಿಬುಧಾಃ ಸರ್ವೇ ಮುನಯೋ ನಾರದಾದಯಃ ।
ಯೋಗಿನಃ ಸನಕಾದ್ಯಾಶ್ಚ ಬಾಣಾದ್ಯಾ ದಾನವಾ ಅಪಿ ॥೨೬॥

ಗುಹ್ಯಪ್ರದೇಶವನ್ನೂ, ಸದ್ಯೋಜಾತಮಂತ್ರದಿಂದ ಎರಡು ಪಾದಗಳನ್ನೂ, ಓಂಕಾರದಿಂದ ಸರ್ವಾಂಗವನ್ನೂ ಪ್ರೋಕ್ಷಿಸಬೇಕು. ॥೧೯-೨೦-೨೧॥ ಜಲಸ್ನಾನ-ವಾಯುಸ್ನಾನ ಮೊದಲಾದ ಸ್ನಾನಗಳಲ್ಲಿ ಅಗ್ನಿಸಂಬಂಧಿಯಾದ ಈ ಭಸ್ಮಸ್ನಾನವು ಶ್ರೇಷ್ಠವಾಗಿರುವುದು. ಈ ಭಸ್ಮಸ್ನಾನವು ಮುಖ್ಯವಾಗಿ ಸಕಲಮಲಗಳನ್ನು ನಾಶಮಾಡುವುದಾಗಿರುವುದು. ॥೨೨॥ ಪ್ರತಿದಿವಸವೂ ಶಾಸ್ತ್ರವಿಧಿಗನುಸಾರವಾಗಿ ಭಸ್ಮಸ್ನಾನವನ್ನು ಆಚರಿಸುತ್ತಿರುವವರಿಗೆ ಬಾಹ್ಯದೋಷಗಳನ್ನು ನಾಶಮಾಡತಕ್ಕ ಜಲಾದಿಸ್ನಾನಗಳಿಂದ ಏನು ಪ್ರಯೋಜನವು? ॥೨೩॥ ಅಗ್ನಿಸಂಬಂಧಿಯಾದ ಭಸ್ಮಸ್ನಾನವು ಜ್ಞಾನಾಂಗವಾಗಿರುವುದರಿಂದ ಯತಿಗಳು ಭಸ್ಮಸ್ನಾನವನ್ನು ಆಚರಿಸುತ್ತಾರೆ. ಜಲಸ್ನಾನದಲ್ಲಿ ಪ್ರಾಣಿವಧೆಯುಂಟಾಗುವುದರಿಂದ ಜಲಸ್ನಾನಕ್ಕಿಂತಲೂ ಭಸ್ಮಸ್ನಾನವೇ ಶ್ರೇಷ್ಠವಾಗಿರುವುದು. ॥೨೪॥ "ಸ ವಾ ಏಷ ಪುರುಷೋಽನ್ನರಸಮಯಃ" ಎಂಬ ಶ್ರುತಿವಾಕ್ಯದಿಂದಲೂ, "ಪುರುಷಃ ಪ್ರಕೃತಿಸ್ಥೋ ಹಿ ಭುಂಕ್ತೇ ಪ್ರಕೃತಿಜಾನ್ ಗುಣಾನ್ ॥" ಎಂಬ ಗೀತೋಕ್ತಿಯಿಂದಲೂ ಅನ್ನರಸಮಯನಾದ ಪುರುಷನು ಪ್ರಕೃತಿಗುಣಗಳನ್ನು ಭೋಗಿಸುವುದರಿಂದ ಜಲವನ್ನು ಪ್ರಕೃತಿಯನ್ನಾಗಿ ತಿಳಿಯಬೇಕು. ಜ್ಞಾನಿಗಳು ಪ್ರಕೃತಿಯನ್ನು ಬಂಧನವನ್ನಾಗಿ ತಿಳಿಯುತ್ತಾರೆ. ಆ ಪ್ರಕೃತಿಯ ನಾಶಕ್ಕಾಗಿ ಭಸ್ಮಸ್ನಾನವು ಹೇಳಲ್ಪಡುತ್ತದೆ. ॥೨೫॥ ಬ್ರಹ್ಮನೇ ಮೊದಲಾದ ಸಮಸ್ತದೇವತೆಗಳೂ,

ಭಸ್ಮಸ್ನಾನರತಾಃ ಸರ್ವೇ ಶಿವಭಕ್ತಿಪರಾಯಣಾಃ ।
ನಿರ್ಮುಕ್ತದೋಷಕಲಿಲಾ ನಿತ್ಯಶುದ್ಧಾ ಭವಂತಿ ಹಿ ॥೨೭॥

ನಮಃಶಿವಾಯೇತಿ ಭಸ್ಮ ಕೃತ್ವಾ ಸಪ್ತಾಭಿಮಂತ್ರಿತಂ ।
ಉದ್ಧೂಲಯೇತ್ತೇನ ದೇಹಂ ತ್ರಿಪುಂಡ್ರಂ ಚಾಪಿ ಧಾರಯೇತ್ ॥೨೮॥

ಸರ್ವಾಂಗೋದ್ಧೂಲನಂ ಚಾಪಿ ನ ಸಮಾನಂ ತ್ರಿಪುಂಡ್ರಕೈಃ ।
ತಸ್ಮಾತ್ತ್ರಿಪುಂಡ್ರಮೇವೈಕಂ ಲಿಖೇದುದ್ಧೂಲನಂ ವಿನಾ ॥೨೯॥

ತ್ರಿಪುಂಡ್ರಂ ಧಾರಯೇನ್ನಿತ್ಯಂ ಭಸ್ಮನಾ ಸಜಲೇನ ಹಿ ।
ಸ್ಥಾನೇಷು ಪಂಚದಶಸು ಶರೀರೇ ಸಾಧಕೋತ್ತಮಃ ॥೩೦॥

ಉತ್ತಮಾಂಗೇ ಲಲಾಟೇ ಚ ಶ್ರವಣದ್ವಿತಯೇ ತಥಾ ।
ಗಲೇ ಭುಜದ್ವಯೇ ಚೈವ ಹೃದಿ ನಾಭೌ ಚ ಪೃಷ್ಠಕೇ ॥೩೧॥

ಬಾಹುಯುಗ್ಮೇ ಕಕುದ್ದೇಶೇ ಮಣಿಬಂಧದ್ವಯೇ ತಥಾ ।
ತ್ರಿಪುಂಡ್ರಂ ಭಸ್ಮನಾ ಧಾರ್ಯಂ ಮೂಲಮಂತ್ರೇಣ ಸಾಧಕೈಃ ॥೩೨॥

ನಾರದಾದಿಮುನಿಗಳೂ, ಸನಕಾದಿಯೋಗಿಗಳೂ, ಬಾಣನೇ ಮೊದಲಾದ ದಾನವರೂ ಭಸ್ಮಸ್ನಾನರತರಾಗಿ ಶಿವಭಕ್ತಿನಿರತರೂ, ದೋಷಸಮೂಹದೂರೀಕೃತರೂ, ನಿತ್ಯಶುದ್ಧರೂ ಆಗಿರುತ್ತಾರೆ. ॥೨೬-೨೭॥ "ನಮಃಶಿವಾಯ" ಎಂಬ ಮಂತ್ರದಿಂದ ಭಸ್ಮವನ್ನು ಏಳುಸಾರೆ ಅಭಿಮಂತ್ರಿಸಿ, ಆ ಭಸ್ಮದಿಂದ ದೇಹವನ್ನು ಲೇಪಿಸಿಕೊಳ್ಳಬೇಕಲ್ಲದೆ ತ್ರಿಪುಂಡ್ರವನ್ನೂ ಧರಿಸಬೇಕು. ॥೨೮॥ ಭಸ್ಮವನ್ನು ಸರ್ವಾಂಗದಲ್ಲಿ ಲೇಪಿಸಿಕೊಂಡರೂ ಅದು ತ್ರಿಪುಂಡ್ರ (ಮೂರುರೇಖೆ) ಧಾರಣಕ್ಕೆ ಸಮಾನವಾಗುವುದಿಲ್ಲ. ಆದುದರಿಂದ ಉದ್ಧೂಲನವನ್ನು ಬಿಟ್ಟು ತ್ರಿಪುಂಡ್ರಧಾರಣವನ್ನು ಮಾಡಬೇಕು.॥೨೯॥ ಸಾಧಕನಾದ ವೀರಶೈವನು ಪ್ರತಿದಿವಸವೂ ತನ್ನ ಶರೀರದ ಹದಿನೈದುಸ್ಥಾನಗಳಲ್ಲಿ ಜಲಮಿಶ್ರವಾದ ಭಸ್ಮದಿಂದ ತ್ರಿಪುಂಡ್ರವನ್ನು ಧರಿಸಿಕೊಳ್ಳಬೇಕು. ॥೩೦॥ ೧ ಮಸ್ತಕ, ೨ ಹಣೆ, ೩-೪ ಎರಡು ಕಿವಿಗಳು, ೫ ಕಂಠ, ೬-೭ ಎರಡು ಭುಜಗಳು, ೮ ಹೃದಯ, ೯ ನಾಭಿ, ೧೦ ಬೆನ್ನು, ೧೧-೧೨ ಎರಡು ಬಾಹುಗಳು, ೧೩ ಹೆಗಲು, ೧೪-೧೫ ಎರಡು ಮುಂಗೈಗಳು ಈ ೧೫ ಸ್ಥಾನಗಳಲ್ಲಿ ಮೂಲಮಂತ್ರವನ್ನುಚ್ಚರಿಸುತ್ತ ತ್ರಿಪುಂಡ್ರಧಾರಣವನ್ನು ಮಾಡಬೇಕು. ॥೩೧-೩೨॥ ಎಡಗೈಯಲ್ಲಿ ಭಸ್ಮವನ್ನಿಟ್ಟು ಬಲಗೈಯಿಂದ ಮುಚ್ಚಿ "ಅಗ್ನಿರಿತಿ ಭಸ್ಮ ವಾಯುರಿತಿ ಭಸ್ಮ ಜಲಮಿತಿ ಭಸ್ಮ ಸ್ಥಲಮಿತಿ ಭಸ್ಮ ವ್ಯೋಮೇತಿ ಭಸ್ಮ ಭಸ್ಮೇತಿ ಭಸ್ಮ ಸರ್ವಂ ಹ ವಾ ಇದಂ ಭಸ್ಮ ಮನ ಇತ್ಯೇತಾನಿ ಚಕ್ಷೂಂಷಿ ಭಸ್ಮಾನಿ"

ವಾಮಹಸ್ತತಲೇ ಭಸ್ಮ ಕ್ಷಿಪ್ತ್ವಾಽಽಚ್ಛಾದ್ಯಾನ್ಯಪಾಣಿನಾ ।
ಅಗ್ನಿರಿತ್ಯಾದಿಮಂತ್ರೇಣ ಸ್ಪೃಶನ್ ವಾರಾಽಭಿಮಂತ್ರ್ಯ ಚ ॥೩೩॥
ತ್ರಿಪುಂಡ್ರಮುಕ್ತಸ್ಥಾನೇಷು ದಧ್ಯಾತ್ಸಜಲಭಸ್ಮನಾ ।
ಶಿವಂ ಶಿವಂಕರಂ ಶಾಂತಂ ಸ ಪ್ರಾಪ್ನೋತಿ ನ ಸಂಶಯಃ ॥೩೪॥

ಮಧ್ಯಾಂಗುಲಿತ್ರಯೇಣೈವ ಸ್ವದಕ್ಷಿಣಕರಸ್ಯ ತು ।
ಷಡಂಗುಲಾಯತಂ ಮಾನಮಪಿ ವಾಽಲಿಕಮಾನಕಂ ॥೩೫॥

ನೇತ್ರಯುಗ್ಮಪ್ರಮಾಣೇನ ಫಾಲೇ ದಧ್ಯಾತ್ರಿಪುಂಡ್ರಕಂ ।
ಮಧ್ಯಮಾನಾಮಿಕಾಂಗುಷ್ಠೈರನುಲೋಮವಿಲೋಮತಃ ॥೩೬॥

ಧಾರಯೇದ್ಯಸ್ತ್ರಿಪುಂಡ್ರಾಂಕಂ ಸ ರುದ್ರೋ ನಾತ್ರ ಸಂಶಯಃ ।
ಋಜು ಶ್ವೇತಮನುವ್ಯಾಪ್ತಂ ಸ್ನಿಗ್ಧಂ ಶ್ರೋತ್ರಪ್ರಮಾಣಕಂ ॥೩೭॥

ಏವಂ ಸಲ್ಲಕ್ಷಣೋಪೇತಂ ತ್ರಿಪುಂಡ್ರಂ ಸರ್ವಸಿದ್ಧಿದಂ ।
ಪ್ರಾತಃಕಾಲೇ ಚ ಮಧ್ಯಾಹ್ನೇ ಸಾಯಾಹ್ನೇ ಚ ತ್ರಿಪುಂಡ್ರಕಂ ॥
ಕದಾಚಿದ್ಭಸ್ಮನಾ ಕುರ್ಯಾತ್ ಸ ರುದ್ರೋ ನಾತ್ರ ಸಂಶಯಃ ॥೩೮॥

ಎಂಬ ಮಂತ್ರದಿಂದ ಭಸ್ಮವನ್ನು ಮುಟ್ಟಿ, ಆ ಭಸ್ಮವನ್ನು ಉದಕದಿಂದ ೭ ಸಾರಿ ಅಭಿಮಂತ್ರಿಸಿ, ಜಲಮಿಶ್ರಭಸ್ಮದಿಂದ ಮೇಲೆ ಹೇಳಿದ ೧೫ ಸ್ಥಾನಗಳಲ್ಲಿ ತ್ರಿಂಪುಡ್ರವನ್ನು ಧರಿಸಿಕೊಳ್ಳಬೇಕು. ಈ ರೀತಿಯಾಗಿ ತ್ರಿಪುಂಡ್ರಧಾರಣವನ್ನು ಮಾಡಿಕೊಳ್ಳುವ ವೀರಶೈವನು ಮಂಗಲಕರನಾದ ಶಿವನನ್ನು ಹೊಂದುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ॥೩೩-೩೪॥ ವೀರಶೈವನು ತನ್ನ ದಕ್ಷಿಣಹಸ್ತದ (ಬಲಗೈ) ಮಧ್ಯದ ಮೂರು (ತರ್ಜನಿ-ಮಧ್ಯಮ-ಅನಾಮಿಕಾ) ಬೆರಳುಗಳಿಂದ ಆರು ಅಂಗುಲ ಉದ್ದವಾಗಲಿ, ಹಣೆಯಿರುವಷ್ಟಾಗಲಿ, ಎರಡೂ ನೇತ್ರಗಳ ಸಮಾನಕ್ಕಾಗಲಿ ಹಣೆಯಲ್ಲಿ ತ್ರಿಪುಂಡ್ರಧಾರಣವನ್ನು ಮಾಡಿಕೊಳ್ಳಬೇಕು. ಮಧ್ಯಮ ಮತ್ತು ಅನಾಮಿಕಾ ಬೆರಳುಗಳಿಂದ ಅನುಲೋಮವಾಗಿಯೂ, ಅಂಗುಷ್ಠದಿಂದ ವಿಲೋಮವಾಗಿಯೂ ಯಾವನು ಹಣೆಯಲ್ಲಿ ತ್ರಿಪುಂಡ್ರವನ್ನು ಧರಿಸುವನೋ ಅವನು ಶಿವನಾಗುವನು. ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲ. ಸರಳವಾಗಿಯೂ, ಶುಭ್ರವಾಗಿಯೂ, ಸಿಬಿಡವಾಗಿಯೂ, ನುಣುಪಾಗಿಯೂ, ಶ್ರೋತ್ರಪ್ರಮಾಣವಾಗಿಯೂ ಇತ್ಯಾದಿ ಸಲ್ಲಕ್ಷಣಗಳಿಂದ ಕೂಡಿದ ತ್ರಿಪುಂಡ್ರಧಾರಣವು ಸರ್ವಸಿದ್ಧಿಪ್ರದಾಯಕವಾಗಿದೆ. ಪ್ರಾತಃಕಾಲದಲ್ಲಾಗಲಿ, ಮಧ್ಯಾಹ್ನಕಾಲದಲ್ಲಾಗಲಿ, ಸಾಯಂಕಾಲದಲ್ಲಾಗಲಿ

ಏವಂವಿಧಂ ವಿಭೂತ್ಯಾ ಹಿ ಕುರುತೇ ಯಸ್ತ್ರಿಪುಂಡ್ರಕಂ ।
ಸ ರೌದ್ರಧರ್ಮಸಂಯುಕ್ತಸ್ತ್ರಯೀಮಯ ಇತಿ ಶ್ರುತಿಃ ॥೩೯॥
ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ದೇವಾಃ ಶಕ್ರಪುರೋಗಮಾಃ ।
ತ್ರಿಪುಂಡ್ರಂ ಧಾರಯಂತ್ಯೇವ ಭಸ್ಮನಾ ಪರಿಕಲ್ಪಿತಂ ॥೪೦॥
ವಸಿಷ್ಠಾದ್ಯಾ ಮಹಾಭಾಗಾ ಮುನಯಃ ಶ್ರುತಿಕೋವಿದಾಃ ।
ಧಾರಯಂತಿ ಸದಾಕಾಲಂ ತ್ರಿಪುಂಡ್ರಂ ಭಸ್ಮನಾ ಕೃತಂ ॥೪೧॥
ಶೈವಾಗಮೇಷು ವೇದೇಷು ಪುರಾಣೇಷ್ವಖಿಲೇಷು ಚ ।
ಸ್ಮೃತೀತಿಹಾಸಕಲ್ಪೇಷು ವಿಹಿತಂ ಭಸ್ಮಪುಂಡ್ರಕಂ ॥೪೨॥
ಧಾರಣೀಯಂ ಸಮಸ್ತಾನಾಂ ಶೈವಾನಾಂ ಚ ವಿಶೇಷತಃ ।
ನಾಸ್ತಿಕೋ ಭಿನ್ನಮರ್ಯಾದೋ ದುರಾಚಾರಪರಾಯಣಃ ॥
ಭಸ್ಮತ್ರಿಪುಂಡ್ರಧಾರೀ ಚೇನ್ಮುಚ್ಯತೇ ಸರ್ವಕಿಲ್ಬಿಷೈಃ ॥೪೩॥

ಯಾವನು ತ್ರಿಪುಂಡ್ರವನ್ನು ಧರಿಸುವನೋ ಅವನು ಶಿವನಾಗುವನು. ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲ. ॥೩೫-೩೬-೩೭-೩೮॥ ಯಾವನು ಭಸ್ಮದಿಂದ ಈರೀತಿ ಸಲ್ಲಕ್ಷಣವಾದ ತ್ರಿಪುಂಡ್ರವನ್ನು ಧರಿಸುವನೋ, "ಯ ಇದಂ ತ್ರಿಪುಂಡ್ರಂ ಧರತೇ ಸ ವೇದತ್ರಯಧಾರೀ ಭವತಿ, ಸ ಸಂತತಂ ತ್ರೇತಾಗ್ನಿರ್ಭವತಿ, ಸ ಪುಷ್ಕರತ್ರಯಸ್ನಾತೋ ಭವತಿ ಯಸ್ತ್ರಿಪುಂಡ್ರಧಾರೀ ಪುರುಷಃ ಸ ರುದ್ರಃ ॥" ಎಂಬ ಶ್ರುತಿವಾಕ್ಯಾನುಸಾರವಾಗಿ, ಅವನು ಶಿವಧರ್ಮಸಂಯುಕ್ತನೂ ವೇದಸ್ವರೂಪನೂ ಆಗುವನು. ॥೩೯॥ ಬ್ರಹ್ಮ-ವಿಷ್ಣು-ರುದ್ರ-ಇಂದ್ರ ಮೊದಲಾದ ದೇವತೆಗಳು ಭಸ್ಮತ್ರಿಪುಂಡ್ರವನ್ನು ಧರಿಸುತ್ತಾರೆ. ॥೪೦॥ ವೇದಜ್ಞರಾದ ವಸಿಷ್ಠ ಮೊದಲಾದ ಮಹರ್ಷಿಗಳು ಯಾವಾಗಲೂ ಭಸ್ಮತ್ರಿಪುಂಡ್ರವನ್ನು ಧರಿಸುತ್ತಾರೆ.॥೪೧॥ ನಾಲ್ಕುವೇದಗಳಲ್ಲಿಯೂ, ಕಾಮಿಕಾದಿವಾತುಲಾಂತಗಳಾದ ಇಪ್ಪತ್ತೆಂಟು ಶಿವಾಗಮಗಳಲ್ಲಿಯೂ, ಸಕಲಪುರಾಣಗಳಲ್ಲಿಯೂ, ಸರ್ವಸ್ಮೃತಿಗಳಲ್ಲಿಯೂ, ಇತಿಹಾಸಗಳಲ್ಲಿಯೂ, ಕಲ್ಪಗ್ರಂಥಗಳಲ್ಲಿಯೂ ಭಸ್ಮತ್ರಿಪುಂಡ್ರಧಾರಣವು ಹೇಳಲ್ಪಟ್ಟಿದೆ. ॥೪೨॥ ಸರ್ವಶೈವಮತೀಯರೂ ವಿಶೇಷವಾಗಿ ಭಸ್ಮತ್ರಿಪುಂಡ್ರಧಾರಣವನ್ನು ಮಾಡಿಕೊಳ್ಳಬೇಕು. ನಾಸ್ತಿಕನಾಗಲಿ, ಜಾತಿಭ್ರಷ್ಟನಾಗಲಿ, ದುರಾಚಾರಿಯಾಗಲಿ ಭಸ್ಮತ್ರಿಪುಂಡ್ರವನ್ನು ಧರಿಸಿದ್ದೇ ಆದರೆ, ಅವರೆಲ್ಲರೂ ಸಮಸ್ತಪಾಪಗಳಿಂದ ಬಿಡುಗಡೆಯನ್ನು ಹೊಂದುತ್ತಾರೆ. ॥೪೩॥

೭ ರುದ್ರಾಕ್ಷಧಾರಣಸ್ಥಲಂ

ಭಸ್ಮನಾ ವಿಹಿತಸ್ನಾನಸ್ತ್ರಿಪುಂಡ್ರಾಂಕಿತಮಸ್ತಕಃ ।
ಶಿವಾರ್ಚನಪರೋ ನಿತ್ಯಂ ರುದ್ರಾಕ್ಷಮಪಿ ಧಾರಯೇತ್ ॥೪೪॥

ರುದ್ರಾಕ್ಷಧಾರಣಾದೇವ ಮುಚ್ಯಂತೇ ಸರ್ವಪಾತಕೈಃ ।
ದುಷ್ಟಚಿತ್ತಾ ದುರಾಚಾರಾ ದುಷ್ಪ್ರಜ್ಞಾ ಅಪಿ ಮಾನವಾಃ ॥೪೫॥

ಪುರಾ ತ್ರಿಪುರಸಂಹಾರೇ ತ್ರಿನೇತ್ರೋ ಜಗತಾಂ ಪತಿಃ ।
ಉದಪಶ್ಯತ್ಪುರಾಂ ಯೋಗಮುನ್ಮೀಲಿತವಿಲೋಚನಃ ॥೪೬॥

ನಿಪೇತುಸ್ತಸ್ಯ ನೇತ್ರೇಭ್ಯೋ ಬಹವೋ ಜಲಬಿಂದವಃ ।
ತೇಭ್ಯೋ ಜಾತಾ ಹಿ ರುದ್ರಾಕ್ಷಾ ರುದ್ರಾಕ್ಷಾ ಇತಿ ಕೀರ್ತಿತಾಃ ॥೪೭॥

ರುದ್ರನೇತ್ರಸಮುತ್ಪನ್ನಾ ರುದ್ರಾಕ್ಷಾ ಲೋಕಪಾವನಾಃ ।
ಅಷ್ಟತ್ರಿಂಶತ್ಪ್ರಭೇದೇನ ಭವಂತ್ಯುತ್ಪತ್ತಿಭೇದತಃ ॥೪೮॥

---

೭ ರುದ್ರಾಕ್ಷಧಾರಣಸ್ಥಲ

ಭಸ್ಮಸ್ನಾನಯುತನೂ, ತ್ರಿಪುಂಡ್ರಾಂಕಿತಮಸ್ತಕನೂ, ಶಿವಾರ್ಚನಾಸಕ್ತನೂ ಆದ ವೀರಶೈವನು ನಿತ್ಯದಲ್ಲಿಯೂ ರುದ್ರಾಕ್ಷಗಳನ್ನು ಧರಿಸಬೇಕು. ॥೪೪॥ ಮಾನವರು ದುಷ್ಟಮನಸ್ಸಿನವರಾದರೂ, ದುರಾಚಾರಿಗಳಾದರೂ, ದುರ್ಬುದ್ಧಿಯುಳ್ಳವರಾದರೂ ರುದ್ರಾಕ್ಷಧಾರಣದಿಂದ ಸಮಸ್ತಪಾಪಗಳಿಂದ ಬಿಡುಗಡೆಯನ್ನು ಹೊಂದುತ್ತಾರೆ. ॥೪೫॥ ಪೂರ್ವದಲ್ಲಿ ಜಗತ್ಪತಿಯೂ ತ್ರಿನೇತ್ರಧಾರಿಯೂ ಆದ ಪರಮೇಶ್ವರನು ತ್ರಿಪುರಾಸುರರನ್ನು ಸಂಹಾರಮಾಡುವಾಗ್ಗೆ ತನ್ನ ಮೂರೂ ನೇತ್ರಗಳನ್ನು ವಿಕಾಸಗೊಳಿಸುವಂಥವನಾಗಿ, ತ್ರಿಪುರಾಸುರರ ಸಂಬಂಧವನ್ನು ಮೇಲ್ಭಾಗದಲ್ಲಿ ನೋಡಿದನು. ॥೪೬॥ ಆಗ ಪರಮೇಶ್ವರನ ಸೂರ್ಯಚಂದ್ರಾಗ್ನಿನೇತ್ರಗಳಿಂದ ಜಲಬಿಂದುಗಳು ಉದುರಿದುವು. ಆ ಜಲಬಿಂದುಗಳಿಂದ ರುದ್ರಾಕ್ಷಗಳು ಉತ್ಪನ್ನವಾದುವು. ಅವೇ ರುದ್ರಾಕ್ಷಗಳೆಂದು ಪ್ರಸಿದ್ಧವಾದುವು. ॥೪೭॥ ರುದ್ರನೇತ್ರಗಳಿಂದ ಉತ್ಪನ್ನವಾದವುಗಳೂ, ಆದುದರಿಂದಲೇ ಲೋಕಪಾವನಕರಗಳೂ ಆದ ರುದ್ರಾಕ್ಷಗಳು ಉತ್ಪತ್ತಿಭೇದದಿಂದ ಮೂವತ್ತೆಂಟು ವಿಧವಾಗಿವೆ. ॥೪೮॥ ಪರಮೇಶ್ವರನ ಸೂರ್ಯನೇತ್ರದಿಂದ ಕಪಿಲ

ನೇತ್ರಾತ್ ಸೂರ್ಯಾತ್ಮನಃ ಶಂಭೋಃ ಕಪಿಲಾ ದ್ವಾದಶೋದಿತಾಃ ।
ಶ್ವೇತಾಃ ಷೋಡಶ ಸಂಜಾತಾಃ ಸೋಮರೂಪಾದ್ವಿಲೋಚನಾತ್ ॥೬೯॥

ಕೃಷ್ಣಾ ದಶವಿಧಾ ಜಾತಾ ವಹ್ನಿರೂಪಾದ್ವಿಲೋಚನಾತ್ ।
ಏವಮುತ್ಪತ್ತಿಭೇದೇನ ರುದ್ರಾಕ್ಷಾ ಬಹುಧಾ ಸ್ಮೃತಾಃ ॥೫೦॥

ಅಚ್ಛಿದ್ರಂ ಕನಕಪ್ರಖ್ಯಮನನ್ಯಧೃತಮುತ್ತಮಂ ।
ರುದ್ರಾಕ್ಷಂ ಧಾರಯೇತ್ ಪ್ರಾಜ್ಞಃ ಶಿವಪೂಜಾಪರಾಯಣಃ ॥೫೧॥

ಯಥಾಸ್ಥಾನಂ ಯಥಾವಕ್ತ್ರಂ ಯಥಾಯೋಗಂ ಯಥಾವಿಧಿ ।
ರುದ್ರಾಕ್ಷಧಾರಣಂ ವಕ್ಷ್ಯೇ ರುದ್ರಸಾಯುಜ್ಯಸಿದ್ಧಯೇ ॥೫೨॥

ಶಿಖಾಯಾಮೇಕಮೇಕಾಸ್ಯಂ ರುದ್ರಾಕ್ಷಂ ಧಾರಯೇದ್ಬುಧಃ ।
ದ್ವಿತ್ರಿದ್ವಾದಶವಕ್ತ್ರಾಣಿ ಶಿರಸಿ ತ್ರೀಣಿ ಧಾರಯೇತ್ ॥೫೩॥

ಷಟ್ತ್ರಿಂಶದ್ಧಾರಯೇನ್ಮೂರ್ಧ್ನಿ ನಿತ್ಯಮೇಕಾದಶಾನನಾನ್ ।
ದಶಸಪ್ತಪಂಚವಕ್ತ್ರಾನ್ ಷಟ್ ಷಟ್ ಕರ್ಣದ್ವಯೇ ವಹೇತ್ ॥೫೪॥

ವರ್ಣದ ಹನ್ನೆರಡು ಪ್ರಕಾರದ ರುದ್ರಾಕ್ಷಗಳು ಉತ್ಪನ್ನವಾದುವು. ಚಂದ್ರನೇತ್ರದಿಂದ ಬಿಳಿಬಣ್ಣದ ಹದಿನಾರು ಪ್ರಕಾರದ ರುದ್ರಾಕ್ಷಗಳು ಉತ್ಪನ್ನವಾದುವು. ॥೬೯॥ ಅಗ್ನಿನೇತ್ರದಿಂದ ಕಪ್ಪುಬಣ್ಣದ ಹತ್ತು ಪ್ರಕಾರದ ರುದ್ರಾಕ್ಷಗಳು ಉತ್ಪನ್ನವಾದುವು. ಈ ರೀತಿಯಾಗಿ ಉತ್ಪತ್ತಿಭೇದದಿಂದ ರುದ್ರಾಕ್ಷಗಳು ನಾನಾವಿಧವಾಗಿ ಹೇಳಲ್ಪಟ್ಟಿವೆ. ॥೫೦॥ ಸುವರ್ಣಕಾಂತಿಗೆ ಸಮಾನವಾದ ಕಾಂತಿಯುಳ್ಳವುಗಳೂ, ಛಿದ್ರವಿಲ್ಲದವುಗಳೂ, ಅನ್ಯರಿಂದ ಧರಿಸಲ್ಪಡದೆ ಇದ್ದವುಗಳೂ ಆದ ರುದ್ರಾಕ್ಷಗಳು ಉತ್ತಮವಾದುವುಗಳು. ಶಿವಪೂಜಾನಿರತನಾದ ವೀರಶೈವನು ಇಂಥ ರುದ್ರಾಕ್ಷಗಳನ್ನೇ ಧರಿಸಬೇಕು. ॥೫೧॥ ಸ್ಥಾನಾನುಗುಣವಾಗಿಯೂ, ಮುಖಾನುಗುಣವಾಗಿಯೂ, ಸಂಬಂಧಾನುಗುಣವಾಗಿಯೂ, ಶಾಸ್ತ್ರವಿಧಿಗನುಗುಣವಾಗಿಯೂ ರುದ್ರಾಕ್ಷಧಾರಣವನ್ನು ಶಿವಸಾಯುಜ್ಯಸಿದ್ಧಿಗಾಗಿ ಹೇಳುತ್ತೇನೆ. ॥೫೨॥ ಜ್ಞಾನಿಯು ಒಂದು ಮುಖದ ಒಂದು ರುದ್ರಾಕ್ಷವನ್ನು ಶಿಖೆಯಲ್ಲಿ ಧರಿಸಬೇಕು. ಎರಡು-ಮೂರು-ಹನ್ನೆರಡು ಮುಖಗಳುಳ್ಳ ಮೂರು ರುದ್ರಾಕ್ಷಗಳನ್ನು ಶಿರಸ್ಸಿನಲ್ಲಿ ಧರಿಸಬೇಕು. ॥೫೩॥ ಹನ್ನೊಂದು ಮುಖಗಳುಳ್ಳ ೩೬ ರುದ್ರಾಕ್ಷಗಳನ್ನು ಮಸ್ತಕದಲ್ಲಿ ಧರಿಸಬೇಕು. ಹತ್ತು-ಏಳು-ಐದು ಮುಖಗಳುಳ್ಳ ಆರಾರು ರುದ್ರಾಕ್ಷಗಳನ್ನು ಎರಡು ಕಿವಿಗಳಲ್ಲಿ ಧರಿಸಬೇಕು. (ಪ್ರತಿಯೊಂದು ಮುಖದವು ಎರಡೆರಡು ರುದ್ರಾಕ್ಷಗಳಿರಬೇಕು.) ॥೫೪॥

ಷಡಷ್ಟವದನಾನ್ ಕಂಠೇ ದ್ವಾತ್ರಿಂಶದ್ಧಾರಯೇತ್ಸದಾ।
ಪಂಚಾಶದ್ಧಾರಯೇದ್ಧೀಮಾನ್ ಚತುರ್ವಕ್ತ್ರಾಣಿ ವಕ್ಷಸಿ ||೫೫||
ತ್ರಯೋದಶಮುಖಾನ್ ಬಾಹ್ವೋರ್ಧರೇತ್ ಷೋಡಶ ಷೋಡಶ ।
ಪ್ರತ್ಯೇಕಂ ದ್ವಾದಶ ವಹೇನ್ನವಾಸ್ಯಾನ್ಮಣಿಬಂಧಯೋಃ ||೫೬||
ಚತುರ್ದಶಮುಖಂ ಯಜ್ಞಸೂತ್ರಮಷ್ಟೋತ್ತರಂಶತಂ ।
ಧಾರಯೇತ್ ಸರ್ವಕಾಲಂ ತು ರುದ್ರಾಕ್ಷಂ ಶಿವಪೂಜಕಃ ||೫೭||
ಏವಂ ರುದ್ರಾಕ್ಷಧಾರೀ ಯಃ ಸರ್ವಕಾಲೇ ತು ವರ್ತತೇ ।
ತಸ್ಯ ಪಾಪಕಥಾ ನಾಸ್ತಿ ಮೂಢಸ್ಯಾಪಿ ಸ ಸಂಶಯಃ ||೫೮||
ಬ್ರಹ್ಮಹಾ ಮದ್ಯಪಾಯೀ ಚ ಸ್ವರ್ಣಹೃದ್ಗುರುತಲ್ಪಗಃ ।
ಮಾತೃಹಾ ಪಿತೃಹಾ ಚೈವ ಭ್ರೂಣಹಾ ಕೃತಘಾತಕಃ ॥
ರುದ್ರಾಕ್ಷಧಾರಣಾದೇವ ಮುಚ್ಯತೇ ಸರ್ವಪಾತಕೈಃ ||೫೯||

ಆರು ಮತ್ತು ಎಂಟು ಮುಖಗಳುಳ್ಳ ೩೨ ರುದ್ರಾಕ್ಷಗಳನ್ನು (ಆರು ಮುಖದವು ೧೬, ಎಂಟು ಮುಖದವು ೧೬) ಕಂಠದಲ್ಲಿ ಧರಿಸಬೇಕು. ನಾಲ್ಕು ಮುಖಗಳುಳ್ಳ ೫೦ ರುದ್ರಾಕ್ಷಗಳನ್ನು ಎದೆಯಮೇಲೆ ಧರಿಸಬೇಕು. ||೫೫|| ಹದಿಮೂರು ಮುಖಗಳುಳ್ಳ ಹದಿನಾರು ಹದಿನಾರು ರುದ್ರಾಕ್ಷಗಳನ್ನು ಎರಡೂಬಾಹುಗಳಲ್ಲಿ ಧರಿಸಬೇಕು. ಒಂಭತ್ತು ಮುಖಗಳುಳ್ಳ ಹನ್ನೆರಡು ಹನ್ನೆರಡು ರುದ್ರಾಕ್ಷಗಳನ್ನು ಎರಡೂ ಮುಂಗೈಗಳಲ್ಲಿ ಧರಿಸಬೇಕು. ||೫೬|| ಹದಿನಾಲ್ಕು ಮುಖಗಳುಳ್ಳ ೧೦೮ ರುದ್ರಾಕ್ಷಗಳನ್ನು ಯಜ್ಞೋಪವೀತವನ್ನಾಗಿ ಧರಿಸಬೇಕು. ಈ ರೀತಿಯಾಗಿ ಶಿವಪೂಜಕನು ಎಲ್ಲಾ ಕಾಲಗಳಲ್ಲಿಯೂ ವಿಧಿಗನುಸಾರವಾಗಿ ಎಲ್ಲಾ ಸ್ಥಾನಗಳಲ್ಲಿಯೂ ರುದ್ರಾಕ್ಷಗಳನ್ನು ಧರಿಸಬೇಕು. ||೫೭|| ಈ ಪ್ರಕಾರವಾಗಿ ಯಾವನು ಎಲ್ಲಾ ಕಾಲಗಳಲ್ಲಿಯೂ ರುದ್ರಾಕ್ಷಗಳನ್ನು ಧರಿಸುವನೋ, ಅವನು ಮೂರ್ಖನಾಗಿದ್ದರೂ ಅವನನ್ನು ಪಾಪಗಳು ಸ್ಪರ್ಶಿಸಲಾರವು. ||೫೮|| ಬ್ರಹ್ಮಹತ್ಯೆಯನ್ನು ಮಾಡಿದವನಾಗಲಿ, ಮದ್ಯಪಾನಮಾಡಿದವನಾಗಲಿ, ಸುವರ್ಣಾಪಹಾರಿಯಾಗಲಿ, ಗುರುತಲ್ಪಗಾಮಿಯಾಗಲಿ, ಮಾತೃಹತ್ಯೆ-ಪಿತೃಹತ್ಯೆ-ಭ್ರೂಣಹತ್ಯೆಗಳನ್ನು ಮಾಡಿದವನಾಗಲಿ, ಕೃತಘ್ನನಾಗಲಿ ರುದ್ರಾಕ್ಷಧಾರಣಮಾತ್ರದಿಂದ ಇವರೆಲ್ಲರೂ ಸರ್ವಪಾಪಗಳಿಂದ ಬಿಡುಗಡೆಯನ್ನು ಹೊಂದುತ್ತಾರೆ. ||೫೮-೫೯|| ಈ ಲೋಕದಲ್ಲಿ ಜನರು ರುದ್ರಾಕ್ಷಗಳ ದರ್ಶನ-ಸ್ಪರ್ಶನ-

ದರ್ಶನಾತ್ ಸ್ಪರ್ಶನಾಚ್ಚೈವ ಸ್ಮರಣಾದಪಿ ಪೂಜನಾತ್ ।
ರುದ್ರಾಕ್ಷಧಾರಣಾಲ್ಲೋಕೇ ಮುಚ್ಯಂತೇ ಪಾತಕೈರ್ಜನಾಃ ॥೬೦॥

ಬ್ರಾಹ್ಮಣೋ ವಾಽಂತ್ಯಜೋ ವಾಪಿ ಮೂರ್ಖೋ ವಾ ಪಂಡಿತೋಽಪಿ ವಾ ।
ರುದ್ರಾಕ್ಷಧಾರಣಾದೇವ ಮುಚ್ಯತೇ ಸರ್ವಪಾತಕೈಃ ॥೬೧॥

ಗವಾಂ ಕೋಟಿಪ್ರದಾನಸ್ಯ ಯತ್ಫಲಂ ಭುವಿ ಲಭ್ಯತೇ ।
ತತ್ಫಲಂ ಲಭತೇ ಮರ್ತ್ಯೋ ನಿತ್ಯಂ ರುದ್ರಾಕ್ಷಧಾರಣಾತ್ ॥೬೨॥

ಮೃತಿಕಾಲೇ ತು ರುದ್ರಾಕ್ಷಂ ನಿಷ್ಪೀಡ್ಯ ಸಹ ವಾರಿಣಾ ।
ಯಃ ಪಿಬೇಚ್ಚಿಂತಯನ್ ರುದ್ರಂ ರುದ್ರಲೋಕಂ ಸ ಗಚ್ಛತಿ ॥೬೩॥

ಭಸ್ಮೋದ್ಧೂಲಿತಸರ್ವಾಂಗಾ ಧೃತರುದ್ರಾಕ್ಷಮಾಲಿಕಾಃ ।
ಯೇ ಭವಂತಿ ಮಹಾತ್ಮಾನೋ ರುದ್ರಾಸ್ತೇ ನಾತ್ರ ಸಂಶಯಃ ॥೬೪॥

ನಿತ್ಯಾನಿ ಕಾಮ್ಯಾನಿ ನಿಮಿತ್ತಜಾನಿ
ಕರ್ಮಾಣಿ ಸರ್ವಾಣಿ ಸದಾಪಿ ಕುರ್ವನ್ ।
ನ ಭಸ್ಮರುದ್ರಾಕ್ಷಧರೋ ಯದಿ ಸ್ಯಾತ್
ದ್ವಿಜೋ ನ ತಸ್ಯಾಸ್ತಿ ಫಲೋಪಪತ್ತಿಃ ॥೬೫॥

ಸ್ಮರಣ-ಪೂಜನ-ಧಾರಣಾದಿಗಳಿಂದ ಸರ್ವಪಾತಕಗಳಿಂದ ದೂರರಾಗುತ್ತಾರೆ. ॥೬೦॥ ಬ್ರಾಹ್ಮಣನೇ ಆಗಲಿ, ಅಂತ್ಯಜನೇ ಆಗಲಿ, ಮೂರ್ಖನೇ ಆಗಲಿ, ಪಂಡಿತನೇ ಆಗಲಿ ರುದ್ರಾಕ್ಷಧಾರಣಮಾತ್ರದಿಂದ ಸಮಸ್ತಪಾಪಗಳಿಂದ ಬಿಡುಗಡೆಯನ್ನು ಹೊಂದುತ್ತಾರೆ. ॥೬೧॥ ಈ ಲೋಕದಲ್ಲಿ ಕೋಟಿಗೋವುಗಳನ್ನು ದಾನಮಾಡುವುದರಿಂದ ಯಾವ ಫಲವು ಪ್ರಾಪ್ತವಾಗುವುದೋ, ಪ್ರತಿದಿನದಲ್ಲಿಯೂ ರುದ್ರಾಕ್ಷಧಾರಣಮಾಡುವುದರಿಂದ ಮನುಷ್ಯನು ಆ ಫಲವನ್ನು ಪಡೆಯುತ್ತಾನೆ. ॥೬೨॥ ಯಾವನು ಮರಣಸಮಯದಲ್ಲಿ ಪರಮೇಶ್ವರನನ್ನು ಧ್ಯಾನಿಸುತ್ತ ನೀರಿನೊಡನೆ ರುದ್ರಾಕ್ಷವನ್ನು ತೆಯ್ದು ಆ ನೀರನ್ನು ಪಾನಮಾಡುವನೋ, ಅವನು ರುದ್ರಲೋಕವನ್ನು ಹೊಂದುತ್ತಾನೆ. ॥೬೩॥ ಯಾವ ಮಹಾತ್ಮರು ಸರ್ವಾವಯವಗಳಲ್ಲಿ ಭಸ್ಮವನ್ನು ಧರಿಸಿಕೊಂಡು ರುದ್ರಾಕ್ಷಮಾಲೆಗಳನ್ನು ಧರಿಸಿಕೊಳ್ಳುತ್ತಾರೆಯೋ, ಅವರು ಸಾಕ್ಷಾತ್ ರುದ್ರರಾಗುವರು. ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲ. ॥೬೪॥ ದ್ವಿಜನು (ಬ್ರಾಹ್ಮಣನು) ಎಲ್ಲಾ ವಿಧವಾದ ನಿತ್ಯಕರ್ಮಗಳನ್ನೂ, ಕಾಮ್ಯಕರ್ಮಗಳನ್ನೂ, ನೈಮಿತ್ತಿಕಕರ್ಮಗಳನ್ನೂ ಯಾವಾಗಲೂ ಮಾಡುವಂಥವ

ಸರ್ವೇಷು ವರ್ಣಾಶ್ರಮಸಂಗತೇಷು
ನಿತ್ಯಂ ಸದಾಚಾರಪರಾಯಣೇಷು ।
ಶ್ರುತಿಸ್ಮೃತಿಭ್ಯಾಮಿಹ ಚೋದ್ಯಮಾನೋ
ವಿಭೂತಿರುದ್ರಾಕ್ಷಧರಃ ಸಮಾನಃ ॥೬೬॥

ಇತಿ ಶ್ರೀಸಿದ್ಧಾಂತಶಿಖಾಮಣೌ ಭಕ್ತಸ್ಥಲೇ ಭಸ್ಮರುದ್ರಾಕ್ಷ ಧಾರಣಸ್ಥಲಪ್ರಸಂಗೋ ನಾಮ

ಸಪ್ತಮಪರಿಚ್ಛೇದಃ ಪರಿಸಮಾಪ್ತಃ

ನಾದರೂ ಭಸ್ಮರುದ್ರಾಕ್ಷಗಳನ್ನು ಧರಿಸದಿದ್ದರೆ ಅವನಿಗೆ ಫಲಪ್ರಾಪ್ತಿಯಾಗುವುದಿಲ್ಲ. ॥೬೫॥ ಸದಾಚಾರಪರಾಯಣರೂ, ವರ್ಣಾಶ್ರಮಧರ್ಮಸಂಯುತರೂ ಆದ ಸರ್ವರಲ್ಲಿ ವಿಭೂತಿರುದ್ರಾಕ್ಷಗಳನ್ನು ಧರಿಸಿದವನೇ ಶ್ರೇಷ್ಠನೂ, ಈ ಲೋಕದಲ್ಲಿ ಶ್ರುತಿಸ್ಮೃತಿಗಳಿಂದ ಶ್ಲಾಘನೀಯನೂ ಆಗುವನು. ॥೬೬॥

ಇಂತು ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಭಸ್ಮರುದ್ರಾಕ್ಷಧಾರಣಸ್ಥಲ ವಿಚಾರಾತ್ಮಕವಾದ

ಏಳನೆಯ ಪರಿಚ್ಛೇದವು ಪರಿಸಮಾಪ್ತವಾದುದು.

ಶ್ರೀಜಗದ್ಗುರುರೇಣುಕಾಚಾರ್ಯಃ ಪ್ರಸೀದತು.

ಅಷ್ಟಮಪರಿಚ್ಛೇದಃ

೮ ಪಂಚಾಕ್ಷರಜಪಸ್ಥಲಂ

ಧೃತಶ್ರೀಭೂತಿರುದ್ರಾಕ್ಷಃ ಪ್ರಯತೋ ಲಿಂಗಧಾರಕಃ ।
ಜಪೇತ್ಪಂಚಾಕ್ಷರೀವಿದ್ಯಾಂ ಶಿವತತ್ತ್ವಪ್ರಬೋಧಿನೀಂ ॥೧॥

ಶಿವತತ್ತ್ವಾತ್ಪರಂ ನಾಸ್ತಿ ಯಥಾ ತತ್ತ್ವಾಂತರಂ ಮಹತ್ ।
ತಥಾ ಪಂಚಾಕ್ಷರೀಮಂತ್ರಾನ್ನಾಸ್ತಿ ಮಂತ್ರಾಂತರಂ ಮಹತ್ ॥೨॥

ಜ್ಞಾತೇ ಪಂಚಾಕ್ಷರೀಮಂತ್ರೇ ಕಿಂ ವಾ ಮಂತ್ರಾಂತರೈಃ ಫಲಂ ।
ಜ್ಞಾತೇ ಶಿವೇ ಜಗನ್ಮೂಲೇ ಕಿಂ ಫಲಂ ದೇವತಾಂತರೈಃ ॥೩॥

ಸಪ್ತಕೋಟಿಷು ಮಂತ್ರೇಷು ಮಂತ್ರಃ ಪಂಚಾಕ್ಷರೋ ಮಹಾನ್ ।
ಬ್ರಹ್ಮವಿಷ್ಣ್ವಾದಿದೇವೇಷು ಯಥಾ ಶಂಭುರ್ಮಹತ್ತರಃ ॥೪॥

ಎಂಟನೆಯ ಪರಿಚ್ಛೇದ

೮ ಪಂಚಾಕ್ಷರಜಪಸ್ಥಲ.

ವ್ಯಾಖ್ಯಾನ— ಭಸ್ಮರುದ್ರಾಕ್ಷಧಾರಿಯೂ, ಶುದ್ಧನೂ ಆದ ವೀರಶೈವನು ಶ್ರೀರುದ್ರಪ್ರಸಿದ್ಧವಾದ ಪಂಚಾಕ್ಷರೀಮಂತ್ರವನ್ನು ಜಪಿಸಬೇಕು. ॥೧॥ ಶಿವತತ್ತ್ವಕ್ಕಿಂತಲೂ ಶ್ರೇಷ್ಠವಾದ ಬೇರೆ ತತ್ತ್ವವು ಹೇಗೆ ಇರುವುದಿಲ್ಲವೋ, ಹಾಗೆ ಪಂಚಾಕ್ಷರೀಮಂತ್ರಕ್ಕಿಂತಲೂ ಶ್ರೇಷ್ಠವಾದ ಮಂತ್ರವು ಬೇರೊಂದಿರುವುದಿಲ್ಲ. ॥೨॥ ಸಕಲ ಮಂತ್ರಮಾತೃಭೂತವಾದ ಪಂಚಾಕ್ಷರೀಮಂತ್ರದ ಸಮಗ್ರಸ್ವರೂಪವು ತಿಳಿಯಲು, ಅನ್ಯಮಂತ್ರಗಳಿಂದ ಪ್ರಯೋಜನವೇನು? ಸಕಲಚರಾಚರಾತ್ಮಕಜಗತ್ಕಾರಣೀಭೂತನಾದ ಶಿವನ ಸಮಗ್ರಸ್ವರೂಪವು ತಿಳಿಯಲು, ವಿಷ್ಣ್ವಾದಿದೇವತೆಗಳಿಂದ ಏನು ಪ್ರಯೋಜನವು? ಈ ಪ್ರಪಂಚದಲ್ಲಿ ಪಂಚಾಕ್ಷರಮಹಾಮಂತ್ರಕ್ಕಿಂತಲೂ ಶ್ರೇಷ್ಠವಾದ ಮಂತ್ರವಾವುದೂ ಇಲ್ಲವೆಂದು ಭಾವವು. ॥೩॥ ಬ್ರಹ್ಮ ವಿಷ್ಣು ಮೊದಲಾದ ಮೂವತ್ತುಮೂರು ಕೋಟಿ ದೇವತೆಗಳಲ್ಲಿ ಶಿವನು ಹೇಗೆ ಶ್ರೇಷ್ಠನಾಗಿರುವನೋ, ಹಾಗೆ ಏಳುಕೋಟಿ ಮಂತ್ರಗಳಲ್ಲಿ ಪಂಚಾಕ್ಷರಮಂತ್ರವು ಶ್ರೇಷ್ಠವಾಗಿರುವುದು. ॥೪॥

ಅಶೇಷಜಗತಾಂ ಹೇತುಃ ಪರಮಾತ್ಮಾ ಮಹೇಶ್ವರಃ ।
ತಸ್ಯ ವಾಚಕಮಂತ್ರೋಽಯಂ ಸರ್ವಮಂತ್ರೈಕಕಾರಣಂ ॥೫॥
ತಸ್ಯಾಭಿಧಾನಮಂತ್ರೋಽಯಮಭಿಧೇಯಶ್ಚ ಸ ಸ್ಮೃತಃ ।
ಅಭಿಧಾನಾಭಿಧೇಯತ್ವಾನ್ಮಂತ್ರಾತ್ ಸಿದ್ಧಃ ಪರಶ್ಶಿವಃ ॥೬॥
ನಮಃ ಶಬ್ದಂ ವದೇತ್ಪೂರ್ವಂ ಶಿವಾಯೇತಿ ತತಃ ಪರಂ ।
ಮಂತ್ರಃ ಪಂಚಾಕ್ಷರೋ ಹ್ಯೇಷ ಸರ್ವಶ್ರುತಿಶಿರೋಗತಃ ॥೭॥
ಆದಿತಃ ಪರಿಶುದ್ಧತ್ವಾನ್ಮಲತ್ರಯವಿಯೋಗತಃ ।
ಶಿವ ಇತ್ಯುಚ್ಯತೇ ಶಂಭುಶ್ಚಿದಾನಂದಘನಃ ಪ್ರಭುಃ ॥೮॥
ಆಸ್ಪದತ್ವಾದಶೇಷಾಣಾಂ ಮಂಗಲಾನಾಂ ವಿಶೇಷತಃ ।
ಶಿವಶಬ್ದಾಭಿಧೇಯೋ ಹಿ ದೇವದೇವಸ್ತ್ರಿಯಂಬಕಃ ॥೯॥

ಶಿವಪರಮಾತ್ಮನು ಸಮಸ್ತಜಗತ್ತುಗಳ ಉತ್ಪತ್ತಿ-ಸ್ಥಿತಿ-ಲಯಗಳಿಗೆ ಕಾರಣನಾಗಿರುವನು. ಆ ಶಿವನ ನಾಮನಾದ ಈ ಮಂತ್ರವು ಸರ್ವಮಂತ್ರಗಳಿಗೆ ಮೂಲಕಾರಣವಾಗಿರುವುದು. ||೫|| ಈ ಪಂಚಾಕ್ಷರಮಹಾಮಂತ್ರವು ಶಿವನ ಅಭಿಧಾನ (ನಾಮ) ಮಂತ್ರವಾಗಿರುವುದು. ಶಿವನು ಅಭಿಧೇಯನಾಗಿರುವನು. ಪರಶಿವನಿಗೂ ಈ ಮಹಾಮಂತ್ರಕ್ಕೂ ವಾಚ್ಯವಾಚಕಭಾವಸಂಬಂಧವಿರುವಪ್ರಯುಕ್ತ ಈ ಮಹಾಮಂತ್ರದಿಂದ ಶಿವನು ಪ್ರಕಾಶಿತನಾಗುವನು. ಅರ್ಥಾತ್ ಶಿವಸ್ವರೂಪವೆಲ್ಲಾ ಈ ಮಹಾಮಂತ್ರದಲ್ಲಿ ಅಡಗಿರುವುದು. ||೬|| "ನಮಃ" ಎಂಬ ಶಬ್ದವನ್ನು ಮೊದಲು ಉಚ್ಚರಿಸಬೇಕು. ಆ ಮೇಲೆ "ಶಿವಾಯ" ಎಂಬ ಶಬ್ದವನ್ನು ಉಚ್ಚರಿಸಬೇಕು. ಇದೇ ಪಂಚಾಕ್ಷರ ಮಂತ್ರವೆನಿಸುವುದು. ಈ ಮಹಾಮಂತ್ರವು ಎಲ್ಲಾ ಉಪನಿಷತ್ತುಗಳಲ್ಲಿಯೂ ಪ್ರತಿಪಾದಿಸಲ್ಪಟ್ಟಿರುವುದು. ||೭|| ಸಚ್ಚಿದಾನಂದಸ್ವರೂಪನೂ, ಸ್ವತಂತ್ರನೂ ಆದ ಶಂಭುವು ಆದಿಯಿಂದಲೂ ಆಣವಮಲ-ಮಾಯಿಕಮಲ-ಕಾರ್ಮಿಕಮಲಗಳೆಂಬ ಮೂರು ಮಲಗಳ ಸಂಬಂಧದಿಂದ ದೂರನಾಗಿರುವುದರ ಮೂಲಕ ಪರಿಶುದ್ಧನಾಗಿರುವುದರಿಂದ "ಶಿವ" ನೆಂದು ಹೇಳಿಸಿಕೊಳ್ಳಲ್ಪಡುವನು. ||೮|| ಬ್ರಹ್ಮ ವಿಷ್ಣು ಮೊದಲಾದ ಸಮಸ್ತದೇವತೆಗಳಿಗೆ ವಿಶೇಷವಾಗಿ ಆಶ್ರಯಭೂತನಾಗಿರುವುದರಿಂದಲೂ, ಶಿವಶಬ್ದವು ಮಂಗಲಾರ್ಥಪ್ರತಿಪಾದಕವಾಗಿರುವುದರಿಂದಲೂ ಶಿವಶಬ್ದವಾಚ್ಯನಾಗಿರುವನು. ||೯|| "ಶಿವ" ಎಂಬ ಎರಡು ಅಕ್ಷರಗಳು ಮುಖ್ಯವಾಗಿ ಪರಬ್ರಹ್ಮಪ್ರಕಾಶಕವಾಗಿವೆ. ಈ

ಶಿವ ಇತ್ಯಕ್ಷರದ್ವಂದ್ವಂ ಪರಬ್ರಹ್ಮಪ್ರಕಾಶಕಂ ।
ಮುಖ್ಯವೃತ್ತ್ಯಾ ತದನ್ಯೇಷಾಂ ಶಬ್ದಾನಾಂ ಗೌಣವೃತ್ತಯಃ ||೧೦||

ತಸ್ಮಾನ್ಮುಖ್ಯತರಂ ನಾಮ ಶಿವ ಇತ್ಯಕ್ಷರದ್ವಯಂ ।
ಸಚ್ಚಿದಾನಂದರೂಪಸ್ಯ ಶಂಭೋರಮಿತತೇಜಸಃ ||೧೧||

ಏತನ್ನಾಮಾವಲಂಬೇನ ಮಂತ್ರಃ ಪಂಚಾಕ್ಷರಃ ಸ್ಮೃತಃ ।
ಯಸ್ಮಾದತಃ ಸದಾ ಜಪ್ಯೋ ಮೋಕ್ಷಕಾಂಕ್ಷಿಭಿರಾದರಾತ್ ||೧೨||

ಯಥಾಽನಾದಿರ್ಮಹಾದೇವಃ ಸಿದ್ಧಃ ಸಂಸಾರಮೋಚಕಃ ।
ತಥಾ ಪಂಚಾಕ್ಷರೋ ಮಂತ್ರಃ ಸಂಸಾರಕ್ಷಯಕಾರಕಃ ||೧೩||

ಪಂಚ ಭೂತಾನಿ ಸರ್ವಾಣಿ ಪಂಚ ತನ್ಮಾತ್ರಕಾನಿ ಚ ।
ಜ್ಞಾನೇಂದ್ರಿಯಾಣಿ ಪಂಚಾಪಿ ಪಂಚ ಕರ್ಮೇಂದ್ರಿಯಾಣಿ ಚ ||೧೪||

ಪಂಚ ಬ್ರಹ್ಮಾಣಿ ಪಂಚಾಪಿ ಕೃತ್ಯಾನಿ ಸಹಕಾರಣೈಃ ।
ಬೋಧ್ಯಾನಿ ಪಂಚಭಿರ್ವರ್ಣೈಃ ಪಂಚಾಕ್ಷರಮಹಾಮನೋಃ ||೧೫||

ಶಿವಶಬ್ದಕ್ಕೆ ಭಿನ್ನವಾದ ವಿರೂಪಾಕ್ಷ-ಚಂದ್ರಶೇಖರ ಮೊದಲಾದ ಶಬ್ದಗಳು ಅವನ ಗುಣಗಳನ್ನು ಪ್ರಕಾಶಪಡಿಸತಕ್ಕವುಗಳಾಗಿವೆ. ||೧೦|| ಆದುದರಿಂದ "ಶಿವ" ಎಂಬೀ ಶಬ್ದವು ಸಚ್ಚಿದಾನಂದಸ್ವರೂಪಿಯೂ ಅಪರಿಮಿತತೇಜಃಶಾಲಿಯೂ ಆದ ಪರಮೇಶ್ವರನ ಮುಖ್ಯನಾಮವಾಗಿದೆ. ||೧೧|| ಈನಾಮಾವಲಂಬನದಿಂದಲೇ ಪಂಚಾಕ್ಷರಮಂತ್ರವು ಮಹಾಮಂತ್ರವಾಗಿ ಹೇಳಲ್ಪಟ್ಟಿದೆ. ಆದುದರಿಂದ ಮೋಕ್ಷಾಪೇಕ್ಷಿಗಳು ಈ ಮಂತ್ರವನ್ನು ಆದರಪೂರ್ವಕವಾಗಿ ಸದಾ ಜಪಿಸಬೇಕು. ||೧೨|| ಅನಾದಿಯಾದ ಮಹಾದೇವನು ಹೇಗೆ ಸಂಸಾರಪಾಶವಿಮೋಚಕನೆಂದು ಪ್ರಸಿದ್ಧನಾಗಿರುವನೋ, ಹಾಗೆಯೇ ಈ ಪಂಚಾಕ್ಷರಮಹಾಮಂತ್ರವು ಸಂಸಾರಪಾಶನಾಶಕವಾಗಿರುವುದು. ||೧೩|| ಪೃಥ್ವಿ-ಅಪ್-ತೇಜ-ವಾಯು-ಆಕಾಶಗಳೆಂಬ ಪಂಚಭೂತಗಳು, ಗಂಧ-ರಸ-ರೂಪ-ಸ್ಪರ್ಶ-ಶಬ್ದಗಳೆಂಬ ಪಂಚತನ್ಮಾತ್ರಗಳು, ಕಣ್ಣು-ಕಿವಿ-ಮೂಗು-ನಾಲಗೆ-ಚರ್ಮಗಳೆಂಬ ಪಂಚ ಜ್ಞಾನೇಂದ್ರಿಯಗಳು, ವಾಕ್-ಪಾಣಿ-ಪಾದ-ಪಾಯು-ಉಪಸ್ಥಗಳೆಂಬ ಪಂಚ ಕರ್ಮೇಂದ್ರಿಯಗಳು, ಸದ್ಯೋಜಾತ-ವಾಮದೇವ-ಅಘೋರ-ತತ್ಪುರುಷ-ಈಶಾನರೆಂಬ ಪಂಚಬ್ರಹ್ಮರು, ಸೃಷ್ಟಿ-ಸ್ಥಿತಿ-ಲಯ-ತಿರೋಧಾನ-ಅನುಗ್ರಹಗಳೆಂಬ ಪಂಚಕೃತ್ಯಗಳು ಇದೇ ರೀತಿಯಾಗಿ ಇವನ್ನು ಪ್ರತಿಪಾದಿಸತಕ್ಕವುಗಳೆಲ್ಲವೂ ಪಂಚಾಕ್ಷರಮಂತ್ರದಲ್ಲಿರ

ಪಂಚಧಾ ಪಂಚಧಾ ಯಾನಿ ಪ್ರಸಿದ್ಧಾನಿ ವಿಶೇಷತಃ ।
ತಾನಿ ಸರ್ವಾಣಿ ವಸ್ತೂನಿ ಪಂಚಾಕ್ಷರಮಯಾನಿ ಹಿ ॥೧೬॥

ಓಂಕಾರಪೂರ್ವೋಽಯಂ ಮಂತ್ರೋಽಯಂ ಪಂಚಾಕ್ಷರಮಯಃ ಪರಃ ।
ಶೈವಾಗಮೇಷು ವೇದೇಷು ಷಡಕ್ಷರ ಇತಿ ಸ್ಮೃತಃ ॥೧೭॥

ಮಂತ್ರಸ್ಯಾಸ್ಯಾದಿಭೂತೇನ ಪ್ರಣವೇನ ಮಹಾಮನೋಃ ।
ಪ್ರಬೋಧ್ಯತೇ ಮಹಾದೇವಃ ಕೇವಲಶ್ಚಿತ್ಸುಖಾತ್ಮಕಃ ॥೧೮॥

ಪ್ರಣವೇನೈಕವರ್ಣೇನ ಪರಬ್ರಹ್ಮ ಪ್ರಕಾಶ್ಯತೇ ।
ಅದ್ವಿತೀಯಂ ಪರಾನಂದಂ ಶಿವಾಖ್ಯಂ ನಿಷ್ಪ್ರಪಂಚಕಂ ॥೧೯॥

ಪರಮಾತ್ಮಮನುರ್ಜ್ಞೇಯಃ ಸೋಽಹಂರೂಪಃ ಸನಾತನಃ ।
ಜಾಯತೇ ಸಹಯೋರ್ಲೋಪಾದೋಮಿತ್ಯೇಕಾಕ್ಷರೋ ಮನುಃ ॥೨೦॥

ತಕ್ಕ ಐದು ಅಕ್ಷರಗಳಿಂದ ಪ್ರಕಾಶಿಸಲ್ಪಡತಕ್ಕವುಗಳಾಗಿವೆ. ಯಾವ ವಸ್ತುಗಳ ಪಂಚ-ಪಂಚ (ಐದು-ಐದು) ಎಂದು ವಿಶೇಷವಾಗಿ ಪ್ರಸಿದ್ಧವಾಗಿರುವುವೋ ಅವೆಲ್ಲವ ಪಂಚಾಕ್ಷರಸ್ವರೂಪವಾಗಿವೆ. ॥೧೪-೧೫-೧೬॥ ಓಂಕಾರವೇ ಆದಿಯಲ್ಲುಳ ಸರ್ವೋತ್ಕೃಷ್ಟವಾದೀಪಂಚಾಕ್ಷರಮಂತ್ರವು ವೇದಗಳಲ್ಲಿಯೂ ಶಿವಾಗಮಗಳಲ್ಲಿಯ "ಷಡಕ್ಷರಮಂತ್ರ"ವೆಂದು ಹೇಳಲ್ಪಟ್ಟಿದೆ. ॥೧೭॥ ಈ ಪಂಚಾಕ್ಷರಮಹಾಮಂತ್ರಕ ಆದಿಭೂತವಾದ ಓಂಕಾರಪ್ರಣವದಿಂದ ಸಚ್ಚಿದಾನಂದಸ್ವರೂಪನಾದ ಪರಶಿವನ ಪ್ರಕಾಶಪಡಿಸಲ್ಪಡುವನು. "ನಕಾರಸ್ತಾರಕಾಕಾರೋ ಮಕಾರೋ ದಂಡ ಉಚ್ಯತೇ ಶಿಕಾರಃ ಕುಂಡಲಾಕಾರೋ ವಕಾರಶ್ಚಾರ್ಧಚಂದ್ರಕಃ ॥ ಯಕಾರೋ ದರ್ಪಣಾಕಾ ಓಂಕಾರಃ ಪಂಚವರ್ಣರಾಟ್ ॥" ಎಂಬ ಶಿವಾಗಮಪ್ರಮಾಣಾನುಸಾರವಾ ಓಂಕಾರವು ಪಂಚಾಕ್ಷರಕಲ್ಪವೃಕ್ಷಕ್ಕೆ ಬೀಜಭೂತವಾಗಿರುವುದು. ॥೧೮॥ "ಏಕಮೇವಾ ದ್ವಿತೀಯಂ" ಎಂಬ ಶ್ರುತಿವಾಕ್ಯಾನುಸಾರವಾಗಿ ಅದ್ವಿತೀಯವಾದುದೂ, "ಆನಂದ ಬ್ರಹ್ಮೇತಿ ವ್ಯಜಾನೀಯಾತ್" ಎಂಬ ಶ್ರುತಿವಾಕ್ಯಾನುಸಾರವಾಗಿ ಆನಂದಸ್ವರೂ ವಾದುದೂ, "ನೇಹ ನಾನಾಸ್ತಿ ಕಿಂಚನ" ಎಂಬ ಶ್ರುತಿವಾಕ್ಯಾನುಸಾರವಾಗಿ ಹೇ ಪ್ರಪಂಚಶೂನ್ಯವಾದುದೂ ಆದ ಶಿವನಾಮಕಪರಬ್ರಹ್ಮವು ಓಂಕಾರವೆಂಬ ಒಂ ವರ್ಣದಿಂದಲೇ ಪ್ರಕಾಶಿಸಲ್ಪಡುವುದು. ॥೧೯॥ ಸನಾತನವಾದ ಪರಶಿವಮಂತ್ರ "ಸೋಽಹಂ" ಸ್ವರೂಪವಾದುದೆಂದು ತಿಳಿಯಬೇಕು. ಸಕಾರವು ಚಂದ್ರಬೀಜವಾ ರುವುದು. ಹಕಾರವು ಸೂರ್ಯಬೀಜವಾಗಿರುವುದು. "ಸೋಽಹಂ" ಪದದಲ್ಲಿರು

ಪ್ರಣವೇನೈವ ಮಂತ್ರೇಣ ಬೋಧ್ಯತೇ ನಿಷ್ಕಲಃ ಶಿವಃ ।
ಪಂಚಾಕ್ಷರೇಣ ಮಂತ್ರೇಣ ಪಂಚಬ್ರಹ್ಮತನುಸ್ತಥಾ ॥೨೦॥

ನಿಷ್ಕಲಃ ಸಂವಿದಾಕಾರಃ ಸಕಲೋ ವಿಶ್ವಮೂರ್ತಿಕಃ ।
ಉಭಯಾತ್ಮಾ ಶಿವೋ ಮಂತ್ರೇ ಷಡಕ್ಷರಮಯೇ ಸ್ಥಿತಃ ॥೨೧॥

ಮೂಲಂ ವಿದ್ಯಾ ಶಿವಃ ಶೈವಸೂತ್ರಂ ಪಂಚಾಕ್ಷರಸ್ತಥಾ ।
ಏತಾನಿ ನಾಮಧೇಯಾನಿ ಕೀರ್ತಿತಾನಿ ಮಹಾಮನೋಃ ॥೨೨॥

ಪಂಚಾಕ್ಷರೀಮಿಮಾಂ ವಿದ್ಯಾಂ ಪ್ರಣವೇನ ಷಡಕ್ಷರೀಂ ।
ಜಪೇತ್ ಸಮಾಹಿತೋ ಭೂತ್ವಾ ಶಿವಪೂಜಾಪರಾಯಣಃ ॥೨೪॥

ಪ್ರಾಣಾಯಾಮತ್ರಯಂ ಕೃತ್ವಾ ಪ್ರಾಙ್ಮುಖೋದಙ್ಮುಖೋಽಪಿ ವಾ ।
ಚಿಂತಯನ್ ಹೃದಯಾಂಭೋಜೇ ದೇವದೇವಂ ತ್ರಿಲೋಚನಂ ॥೨೫॥

ಸಕಾರ-ಹಕಾರಗಳು ಕುಂಭಕದಲ್ಲಿ ಲೋಪವಾಗುವುದರಿಂದ "ಓಂ" ಎಂಬ ಏಕಾಕ್ಷರ ಮಂತ್ರವು ಉತ್ಪನ್ನವಾಗುವುದು. ॥೨೦॥ ಓಂಕಾರಮಂತ್ರದಿಂದ ನಿಷ್ಕಲಶಿವನು ಬೋಧಿಸಲ್ಪಡುವನು. ಪಂಚಾಕ್ಷರಮಂತ್ರದಿಂದ ಪಂಚಬ್ರಹ್ಮರೂಪಶಿವನು ಬೋಧಿಸಲ್ಪಡುವನು. ನಿಷ್ಕಲಶಿವನು ಶುದ್ಧಜ್ಞಾನಸ್ವರೂಪನಾಗಿರುವನು; ಸಕಲಶಿವನು ಪ್ರಪಂಚಸ್ವರೂಪನಾಗಿರುವನು. ಈ ರೀತಿಯಾಗಿ ಉಭಯಸ್ವರೂಪನಾಗಿರುವ ಶಿವನು "ಓಂ ನಮಃ ಶಿವಾಯ" ಎಂಬ ಷಡಕ್ಷರಮಂತ್ರದಲ್ಲಿ ಅಡಕವಾಗಿರುವನು.॥೨೧-೨೨॥ ಈ ಮಹಾಮಂತ್ರಕ್ಕೆ ಮೂಲ-ವಿದ್ಯಾ-ಶಿವ-ಶೈವಸೂತ್ರ-ಪಂಚಾಕ್ಷರಗಳೆಂಬ ಪರ್ಯಾಯ ನಾಮಗಳು ಪ್ರಸಿದ್ಧವಾಗಿರುತ್ತವೆ. ॥೨೩॥ ಪ್ರಣವಸಹಿತವಾದ ಈ ಪಂಚಾಕ್ಷರ ಮಂತ್ರವನ್ನು ಅರ್ಥಾತ್ ಷಡಕ್ಷರಮಹಾಮಂತ್ರವನ್ನು ಶಿವಪೂಜಾಪರಾಯಣನಾದ ವೀರಶೈವನು ಏಕಾಗ್ರಚಿತ್ತನಾಗಿ ಸದಾ ಜಪಿಸಬೇಕು. ॥೨೪॥ ಶಿವಪೂಜಕನು ಪೂರ್ವಾಭಿಮುಖನಾಗಿಯಾಗಲಿ, ಉತ್ತರಾಭಿಮುಖನಾಗಿಯಾಗಲಿ ದರ್ಭಾಸನ ಅಥವಾ ಕಂಬಲಾಸನದ ಮೇಲೆ ಕುಳಿತುಕೊಂಡು, ಪೂರಕ-ಕುಂಭಕ-ರೇಚಕ ಪ್ರಾಣಾಯಾಮಗಳನ್ನು ಮಾಡಿ, ತನ್ನ ಹೃದಯಕಮಲದಲ್ಲಿ ಸರ್ವಾಭರಣಭೂಷಿತನೂ ಚಂದ್ರಧಾರಿಯೂ ದೇವಾಧಿದೇವನೂ ಆದ ಶಿವನನ್ನು ಧ್ಯಾನಿಸುತ್ತ, ಏಕಾಗ್ರಚಿತ್ತನಾಗಿ ಶಿವಸ್ವರೂಪವಾದ ಈ ಷಡಕ್ಷರಮಹಾಮಂತ್ರವನ್ನು ಜಪಿಸಬೇಕು. ಜಪವು ವಾಚಿಕ-

ಸರ್ವಾಲಂಕಾರಸಂಯುಕ್ತಂ ಸಾಂಬಂ ಚಂದ್ರಾರ್ಧಶೇಖರಂ ।
ಜಪೇದೇತಾಂ ಮಹಾವಿದ್ಯಾಂ ಶಿವರೂಪಾಮನನ್ಯಧೀಃ ॥
ಜಪಸ್ತು ತ್ರಿವಿಧಃ ಪ್ರೋಕ್ತೋ ವಾಚಿಕೋಪಾಂಶುಮಾನಸಃ ॥೨೬॥

ಶ್ರೂಯತೇ ಯಸ್ತು ಪಾರ್ಶ್ವಸ್ಥೈರ್ಯಥಾವರ್ಣಸಮನ್ವಯಃ ।
ವಾಚಿಕಃ ಸ ತು ವಿಜ್ಞೇಯಃ ಸರ್ವಪಾಪಪ್ರಭಂಜನಃ ॥೨೭॥

ಈಷತ್ ಸ್ಪೃಷ್ಟಾಧರಪುಟಂ ಯೋ ಮಂದಮಭಿಧೀಯತೇ ।
ಪಾರ್ಶ್ವಸ್ಥೈರಶ್ರುತಃ ಸೋಽಯಮುಪಾಂಶುಃ ಪರಿಕೀರ್ತಿತಃ ॥೨೮॥

ಅಸ್ಪೃಷ್ಟಾಧರಮಸ್ಪಂದಿ ಜಿಹ್ವಾಗ್ರಂ ಯೋಽಂತರಾತ್ಮನಾ ।
ಭಾವ್ಯತೇ ವರ್ಣರೂಪೇಣ ಸ ಮಾನಸ ಇತಿ ಸ್ಮೃತಃ ॥೨೯॥

ಯಾವಂತಃ ಕರ್ಮಯಜ್ಞಾದ್ಯಾ ವ್ರತದಾನತಪಾಂಸಿ ಚ ।
ಸರ್ವೇ ತೇ ಜಪಯಜ್ಞಸ್ಯ ಕಲಾಂ ನಾರ್ಹಂತಿ ಷೋಡಶೀಂ ॥೩೦॥

ಮಾಹಾತ್ಮ್ಯಂ ವಾಚಿಕಸ್ಯೈತಜ್ಜಪಯಜ್ಞಸ್ಯ ಕೀರ್ತಿತಂ ।
ತಸ್ಮಾಚ್ಛತಗುಣೋಪಾಂಶುಃ ಸಾಹಸ್ರೋ ಮಾನಸಃ ಸ್ಮೃತಃ ॥೩೧॥

ಉಪಾಂಶು-ಮಾನಸಿಕ ಎಂದು ಮೂರು ಪ್ರಕಾರವಾಗಿ ಹೇಳಲ್ಪಟ್ಟಿದೆ. ॥೨೫-೨೬॥ ತನ್ನ ಸುತ್ತುಮುತ್ತಿರುವ ಜನರು ವರ್ಣವ್ಯತ್ಯಾಸವಿಲ್ಲದಂತೆ ಯಾವ ಮಂತ್ರಜಪವನ್ನು ಕೇಳುತ್ತಾರೆಯೋ, ಅದು ವಾಚಿಕಜಪವೆನಿಸುವುದು. ಈ ಜಪವು ಸರ್ವಪಾಪನಾಶಕವಾಗಿರುವುದು. ॥೨೭॥ ತುಟಿಗಳನ್ನು ಸ್ವಲ್ಪಮಟ್ಟಿಗೆ ಅಲ್ಲಾಡಿಸುತ್ತ ಸುತ್ತುಮುತ್ತಿರುವ ಜನರಿಗೆ ಕೇಳಿಸದಂತೆ ಸೂಕ್ಷ್ಮವಾಗಿ ಯಾವ ಜಪವು ಮಾಡಲ್ಪಡುವುದೋ, ಅದು ಉಪಾಂಶುಜಪವೆನಿಸುವುದು. ॥೨೮॥ ತುಟಿಗಳನ್ನೂ ನಾಲಗೆಯನ್ನೂ ಅಲ್ಲಾಡಿಸದೆ ಪಂಚಾಕ್ಷರರೂಪವಾದ ಮನಸ್ಸಿನಿಂದ ಯಾವ ಜಪವು ಮಾಡಲ್ಪಡುವುದೋ, ಅದು ಮಾನಸಿಕಜಪವೆನಿಸುವುದು. ಈ ಮೂರು ವಿಧವಾದ ಜಪಗಳೂ ಸಗರ್ಭಜಪಗಳಾಗಬೇಕು. ಮಂತ್ರಾರ್ಥವನ್ನು ಚೆನ್ನಾಗಿ ತಿಳಿದುಕೊಂಡು ಜಪಿಸುವುದೇ ಸಗರ್ಭಜಪವೆನಿಸುವುದು. ॥೨೯॥ ಲೋಕದಲ್ಲಿ ಜ್ಯೋತಿಷ್ಟೋಮಾದಿಯಜ್ಞಗಳು ಎಷ್ಟಿರುತ್ತವೆಯೋ, ವ್ರತ-ದಾನ-ತಪಸ್ಸು ಮೊದಲಾದವುಗಳು ಎಷ್ಟಿರುತ್ತವೆಯೋ, ಅವೆಲ್ಲವೂ ಈ ಜಪಯಜ್ಞದ ಹದಿನಾರನೆಯ ಒಂದು ಅಂಶವನ್ನಾದರೂ ಹೊಂದಲಾರವು. ॥೩೦॥ ಈ ಮಹತ್ತ್ವವು ವಾಚಿಕಜಪಯಜ್ಞಕ್ಕೆ ಹೇಳಲ್ಪಟ್ಟಿದೆ. ಇವಕ್ಕಿಂತಲೂ ಉಪಾಂಶುಜಪದ ಮಹತ್ತ್ವವು ನೂರುಪಾಲು ಮಿಗಿಲಾಗಿದೆ. ಇದಕ್ಕಿಂತಲೂ

ವಾಚಿಕಾತ್ತದುಪಾಂಶೋಶ್ಚ ಜಪಾದಸ್ಯ ಮಹಾಮನೋಃ ।
ಮಾನಸೋ ಹಿ ಜಪಃ ಶ್ರೇಷ್ಠೋ ಘೋರಸಂಸಾರನಾಶಕಃ ॥೩೨॥

ಏತೇಷ್ವೇಕೇನ ವಿಧಿನಾ ಯಥಾಭಾವಂ ಯಥಾಕ್ರಮಂ ।
ಜಪೇತ್ಪಂಚಾಕ್ಷರೀಮೇತಾಂ ವಿದ್ಯಾಂ ಪಾಶವಿಮುಕ್ತಯೇ ॥೩೩॥

ಅನೇನಮೂಲಮಂತ್ರೇಣ ಶಿವಲಿಂಗಂ ಪ್ರಪೂಜಯೇತ್ ।
ನಿತ್ಯಂ ನಿಯಮಸಂಪನ್ನಃ ಪ್ರಯತಾತ್ಮಾ ಶಿವಾತ್ಮಕಃ ॥೩೪॥

ಭಕ್ತ್ಯಾ ಪಂಚಾಕ್ಷರೇಣೈವ ಯಃ ಶಿವಂ ಸಕೃದರ್ಚಯೇತ್ ।
ಸೋಽಪಿ ಗಚ್ಛೇಚ್ಛಿವಸ್ಥಾನಂ ಮಂತ್ರಸ್ಯಾಸ್ಯೈವ ಗೌರವಾತ್ ॥೩೫॥

ಮಾನಸಿಕಜಪದ ಮಹತ್ತ್ವವು ಸಾವಿರಪಾಲು ಮಿಗಿಲಾಗಿದೆ. ॥೩೧॥ ಈ ಮಹಾ ಮಂತ್ರದ ವಾಚಿಕ ಮತ್ತು ಉಪಾಂಶುಜಪಗಳಿಗಿಂತಲೂ ಮಾನಸಿಕಜಪವು ಶ್ರೇಷ್ಠ ವಾಗಿರುವುದಲ್ಲದೆ, ಘೋರಸಂಸಾರದುಃಖನಾಶಕವೂ ಆಗಿರುವುದು. ॥೩೨॥ ಈ ಮೂರು ವಿಧವಾದ ಜಪಗಳಲ್ಲಿ ಶ್ರೇಷ್ಠವಾದ ಒಂದು ವಿಧಿಗನುಸಾರವಾಗಿ ಕ್ರಮವನ್ನು ಬಿಡದೆ ಏಕಾಗ್ರಮನಸ್ಸಿನಿಂದ ಪಾಶನಾಶಕ್ಕಾಗಿ ಪಂಚಾಕ್ಷರಮಹಾಮಂತ್ರವನ್ನು ಜಪಿಸಬೇಕು ॥

"ಅಸಂಪೂಜ್ಯ ಶಿವಂ ಸ್ತೋತ್ರಜಪಾತ್ಫಲಮುದೀರಿತಂ । ಸಂಪೂಜ್ಯ ಚ ಶಿವಂ ಪಶ್ಚಾತ್ ಫಲಂ ವಕ್ತುಂ ನ ಶಕ್ಯತೇ ॥ ಸಹಸ್ರಂ ವಾ ತದರ್ಧಂ ವಾ ತದರ್ಧಂ ವಾ ಶತಾಷ್ಟಕಂ । ಅಷ್ಟೋತ್ತರಸಹಸ್ರಂ ವಾ ಜಪಂ ಕುರ್ಯಾದತಂದ್ರಧೀಃ ॥ ಪೂಜಾಕೋಟಿಸಮಂ ಸ್ತೋತ್ರಂ ಸ್ತೋತ್ರಕೋಟಿಸಮೋ ಜಪಃ । ಜಪಕೋಟಿಸಮಂ ಧ್ಯಾನಂ ಧ್ಯಾನಕೋಟಿಸಮೋ ಲಯಃ ॥"

ಇತ್ಯಾದಿಶಿವಾಗಮವಚನಪ್ರಮಾಣಾನುಸಾರವಾಗಿ ಶಿವಪೂಜೆಯಾದ ಮೇಲೆ ಪಂಚಾಕ್ಷರಮಂತ್ರಜಪವನ್ನು ಮಾಡುವುದು ಸರ್ವೋತ್ತಮವಾದುದೆಂದು ಸಿದ್ಧವಾಗುವುದರಿಂದ, ಶಿವಪೂಜಕನು ಪೂಜೆಯು ಮುಗಿದಮೇಲೆ ಶಾಂತಮನಸ್ಸಿನಿಂದ ಈ ಮಹಾಮಂತ್ರವನ್ನು ಒಂದುಸಾವಿರ ಅಥವಾ ಐನೂರು ಅಥವಾ ಎರಡುನೂರು ಐವತ್ತು ಅಥವಾ ನೂರೆಂಟು ಅಥವಾ ಸಾವಿರದೆಂಟುಸಾರೆ ಜಪಿಸಬೇಕು. ॥೩೩॥ ಶಿವಪೂಜಾವ್ರತನಿಷ್ಠನೂ, ಶುದ್ಧಾತ್ಮನೂ, ಶಿವಸ್ವರೂಪನೂ ಆದ ಶಿವಪೂಜಕನು ನಿತ್ಯದಲ್ಲಿಯೂ ಈ ಮೂಲಪಂಚಾಕ್ಷರ (ಷಡಕ್ಷರ) ಮಂತ್ರದಿಂದಲೇ ಶಿವಲಿಂಗವನ್ನು ಪೂಜಿಸಬೇಕು. ॥೩೪॥ ಯಾವನು ಭಕ್ತಿಪೂರ್ವಕವಾಗಿ ಪಂಚಾಕ್ಷರಮಂತ್ರದಿಂದ ಶಿವನನ್ನು ಪೂಜಿಸುತ್ತಾನೆಯೋ, ಅವನು ಈ ಮಹಾಮಂತ್ರದ ಮಹಿಮೆಯಿಂದ ಶಿವಲೋಕವನ್ನು ಹೊಂದುತ್ತಾನೆ. ॥೩೫॥ ಯಾರು ಜಲಾಹಾರಿಗಳೋ,

ಅಬ್ಭಕ್ಷಾ ವಾಯುಭಕ್ಷಾಶ್ಚ ಯೇ ಚಾನ್ಯೇ ವ್ರತಕರ್ಶಿತಾಃ ।
ತೇಷಾಮೇತೈರ್ವ್ರತೈರ್ನಾಸ್ತಿ ಶಿವಲೋಕಸಮಾಗಮಃ ॥೩೭॥

ತಸ್ಮಾತ್ತಪಾಂಸಿ ಯಜ್ಞಾಶ್ಚ ವ್ರತಾನಿ ನಿಯಮಾಸ್ತಥಾ ।
ಪಂಚಾಕ್ಷರಾರ್ಚನಸ್ಯೈತೇ ಕೋಟ್ಯಂಶೇನಾಪಿ ನೋ ಸಮಾಃ ॥೩೭॥

ಅಶುದ್ಧೋ ವಾ ವಿಶುದ್ಧೋ ವಾ ಸಕೃತ್ಪಂಚಾಕ್ಷರೇಣ ಯಃ ।
ಪೂಜಯೇತ್ಪತಿತೋ ವಾಪಿ ಮುಚ್ಯತೇ ನಾತ್ರ ಸಂಶಯಃ ॥೩೮॥

ಸಕೃದುಚ್ಚಾರಮಾತ್ರೇಣ ಪಂಚಾಕ್ಷರಮಹಾಮನೋಃ ।
ಸರ್ವೇಷಾಮಪಿ ಜಂತೂನಾಂ ಸರ್ವಪಾಪಕ್ಷಯೋ ಭವೇತ್ ॥೩೯॥

ಅನ್ಯೇಽಪಿ ಬಹವೋ ಮಂತ್ರಾ ವಿದ್ಯಂತೇ ಸಕಲಾಗಮೇ ।
ಭೂಯೋಭೂಯಃ ಸಮಭ್ಯಾಸಾತ್ ಪುರುಷಾರ್ಥಪ್ರದಾಯಿನಃ ॥೪೦॥

ಏಷ ಮಂತ್ರೋ ಮಹಾಶಕ್ತಿರೀಶ್ವರಪ್ರತಿಪಾದಕಃ ।
ಸಕೃದುಚ್ಚಾರಣಾದೇವ ಸರ್ವಸಿದ್ಧಿಪ್ರದಾಯಕಃ ॥೪೧॥

ಯಾರು ವಾಯ್ವಾಹಾರಿಗಳೋ, ಯಾರು ಚಾಂದ್ರಾಯಣಾದಿವ್ರತನಿಷ್ಠರೋ, ಅವರಿಗೆ ಆಯಾ ವ್ರತಗಳಿಂದ ಶಿವಲೋಕಪ್ರಾಪ್ತಿಯಾಗುವುದಿಲ್ಲ. ॥೩೬॥ ಆದುದರಿಂದ ತಪಸ್ಸು-ಯಜ್ಞ-ವ್ರತ-ನಿಯಮ ಮೊದಲಾದವುಗಳು ಪಂಚಾಕ್ಷರಮಂತ್ರಜಪಕ್ಕೆ ಒಂದು ಕೋಟಿ ಅಂಶವಲ್ಲಿಯೂ ಸಮಾನವಾಗಲಾರವು. ॥೩೭॥ ಅಶುದ್ಧನೇ ಆಗಲಿ, ಶುದ್ಧನೇ ಆಗಲಿ, ಪಾಪಿಯೇ ಆಗಲಿ, ಯಾವನು ಒಂದು ಸಾರೆ ಪಂಚಾಕ್ಷರಮಂತ್ರದಿಂದ ಶಿವನನ್ನು ಪೂಜಿಸುತ್ತಾನೆಯೋ ಅವನು ಭವಬಂಧನದಿಂದ ಬಿಡುಗಡೆಯನ್ನು ಹೊಂದುವನು. ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲ. ॥೩೮॥ ಪಂಚಾಕ್ಷರ ಮಹಾಮಂತ್ರವನ್ನು ಒಂದುಸಾರೆ ಉಚ್ಚರಿಸುವುದರಿಂದ ಎಲ್ಲಾ ಪ್ರಾಣಿಗಳ ಎಲ್ಲಾ ವಿಧವಾದ ಪಾಪಗಳೂ ನಾಶವಾಗುವುವು. ॥೩೯॥ ಅನೇಕಾಗಮಗಳಲ್ಲಿ ಬೇರೆ ಬೇರೆ ಅನೇಕಮಂತ್ರಗಳಿರುತ್ತವೆ. ಆ ಮಂತ್ರಗಳು ವಿಶೇಷವಾಗಿ ಮೇಲಿಂದ ಮೇಲೆ ಅಭ್ಯಾಸಮಾಡುವುದರಿಂದ ಫಲವನ್ನು ಕೊಡತಕ್ಕವುಗಳಾಗಿರುವುವು. ॥೪೦॥ ಈ ಮಹಾಮಂತ್ರವು ಮಹಾಸಾಮರ್ಥ್ಯವುಳ್ಳುದಾಗಿರುವುದಲ್ಲದೆ ಈಶ್ವರಸ್ವರೂಪವನ್ನು ಪ್ರತಿಪಾದಿಸತಕ್ಕುದಾಗಿಯೂ ಇರುವುದು. ಈ ಮಹಾಮಂತ್ರವು ತನ್ನನ್ನು ಒಂದುಸಾರೆ ಉಚ್ಚರಿಸಿದ ಮಾತ್ರದಿಂದಲೇ ಸರ್ವಸಿದ್ಧಿಗಳನ್ನೂ ಕೊಡತಕ್ಕುದಾಗಿರುವುದು. ॥೪೧॥

ಪಂಚಾಕ್ಷರೀಂ ಸಮುಚ್ಚಾರ್ಯ ಪುಷ್ಪಂ ಲಿಂಗೇ ವಿನಿಕ್ಷಿಪೇತ್ ।
ಯಸ್ತಸ್ಯ ವಾಜಪೇಯಾನಾಂ ಸಹಸ್ರಫಲಮಿಷ್ಯತೇ ॥೪೨॥

ಅಗ್ನಿಹೋತ್ರಂ ತ್ರಯೋ ವೇದಾ ಯಜ್ಞಾಶ್ಚ ಬಹುದಕ್ಷಿಣಾಃ ।
ಪಂಚಾಕ್ಷರಜಪಸ್ಯೈತೇ ಕೋಟ್ಯಂಶೇನಾಪಿ ನೋ ಸಮಾಃ ॥೪೩॥

ಪುರಾ ಸಾನಂದಯೋಗೀಂದ್ರಃ ಶಿವಜ್ಞಾನಪರಾಯಣಃ ।
ಪಂಚಾಕ್ಷರಂ ಸಮುಚ್ಚಾರ್ಯ ನಾರಕಾನುದತಾರಯತ್ ॥೪೪॥

ಸಿದ್ಧ್ಯಾ ಪಂಚಾಕ್ಷರಸ್ಯಾಸ್ಯ ಶತಾನಂದಃ ಪುರಾ ಮುನಿಃ ।
ನರಕಂ ಸ್ವರ್ಗಮಕರೋತ್ ಸಂಗಿರಸ್ಯಾಪಿ ಪಾಪಿನಃ ॥೪೫॥

ಉಪಮನ್ಯುಃ ಪುರಾ ಯೋಗೀ ಮಂತ್ರೇಣಾನೇನ ಸಿದ್ಧಿಮಾನ್ ।
ಲಬ್ಧವಾನ್ ಪರಮೇಶಾನಾಚ್ಛೈವಶಾಸ್ತ್ರಪ್ರವಕ್ತೃತಾಂ ॥೪೬॥

ವಸಿಷ್ಠವಾಮದೇವಾದ್ಯಾ ಮುನಯೋ ಮುಕ್ತಕಿಲ್ಬಿಷಾಃ ।
ಮಂತ್ರೇಣಾನೇನ ಸಂಸಿದ್ಧಾ ಮಹಾತೇಜಸ್ವಿನೋಽಭವನ್ ॥೪೭॥

ಯಾವನು ಪಂಚಾಕ್ಷರಮಂತ್ರವನ್ನು ಉಚ್ಚರಿಸಿ ಶಿವಲಿಂಗಕ್ಕೆ ಪುಷ್ಪವನ್ನು ಸಮರ್ಪಿಸುವನೋ, ಅವನಿಗೆ ಸಾವಿರ ವಾಜಪೇಯಯಜ್ಞಗಳನ್ನು ಮಾಡಿದ ಫಲವು ಪ್ರಾಪ್ತವಾಗುತ್ತದೆ. ॥೪೨॥ ಅಗ್ನಿಹೋತ್ರವು, ಋಗ್ಯಜುಸ್ಸಾಮವೇದಗಳು, ಜ್ಯೋತಿಷ್ಟೋಮಾದಿಯಜ್ಞಗಳು, ಷೋಡಶದಾನರೂಪವಾದ ಬಹುದಕ್ಷಿಣೆಗಳು ಇವೆಲ್ಲವೂ ಈ ಪಂಚಾಕ್ಷರಮಂತ್ರಜಪಕ್ಕೆ ಒಂದುಕೋಟ್ಯಂಶದಿಂದಲೂ ಸಮಾನವಾಗಲಾರವು. ॥೪೩॥ ಶಿವಜ್ಞಾನಪರಾಯಣನಾದ ಸಾನಂದಯೋಗೀಶ್ವರನು ಪೂರ್ವದಲ್ಲಿ ಪಂಚಾಕ್ಷರಮಂತ್ರವನ್ನುಚ್ಚರಿಸಿ ನರಕದಲ್ಲಿ ಬಿದ್ದು ಹೊರಳಾಡುತ್ತಿದ್ದ ಪಾಪಿಗಳನ್ನು ಉದ್ಧರಿಸಿದನು. ॥೪೪॥ ಪೂರ್ವದಲ್ಲಿ ಶತಾನಂದನಾಮಕನಾದ ಮುನಿಯು ಈ ಪಂಚಾಕ್ಷರಮಂತ್ರದ ಸಿದ್ಧಿಯಿಂದ ಸಂಗಿರನಾಮಕನಾದ ಪಾಪಿಗೋಸುಗ ನರಕಲೋಕವನ್ನು ಸ್ವರ್ಗಲೋಕವನ್ನಾಗಿ ಮಾಡಿದನು. ॥೪೫॥ ಪೂರ್ವದಲ್ಲಿ ಉಪಮನ್ಯುಮುನಿಯು ಈ ಮಹಾಮಂತ್ರಸಿದ್ಧಿಯುಳ್ಳವನಾಗಿ ಶಿವನಿಂದ ಶಿವಶಾಸ್ತ್ರಾಚಾರ್ಯತ್ವವನ್ನು ಪಡೆದನು. ॥೪೬॥ ವಸಿಷ್ಠ-ವಾಮದೇವ ಮೊದಲಾದ ಮಹರ್ಷಿಗಳು ಈ ಪಂಚಾಕ್ಷರಮಹಾಮಂತ್ರದಿಂದ ಪವಿತ್ರಾತ್ಮರೂ, ಮಹಾತೇಜಃಶಾಲಿಗಳೂ, ಸಿದ್ಧಪುರುಷರೂ ಆದರು. ॥೪೭॥ ಬ್ರಹ್ಮ-ವಿಷ್ಣು ಮೊದಲಾದ ದೇವತೆಗಳಿಗೆ ಜಗತ್ತಿನ ಸೃಷ್ಟಿ-ಸ್ಥಿತಿ

ಬ್ರಹ್ಮಾದೀನಾಂ ಚ ದೇವಾನಾಂ ಜಗತ್ಸೃಷ್ಟ್ಯಾದಿಕರ್ಮಣಿ ।
ಮಂತ್ರಸ್ಯಾಸ್ಯೈವ ಮಾಹಾತ್ಮ್ಯಾತ್ ಸಾಮರ್ಥ್ಯಮುಪಜಾಯತೇ ॥೪೮॥

ಕಿಮಿಹ ಬಹುಭಿರುಕ್ತೈರ್ಮಂತ್ರಮೇನಂ ಮಹಾತ್ಮಾ
ಪ್ರಣವಸಹಿತಮಾದೌ ಯಸ್ತು ಪಂಚಾಕ್ಷರಾಖ್ಯಂ ।
ಜಪತಿ ಪರಮಭಕ್ತ್ಯಾ ಪೂಜಯನ್ ದೇವದೇವಂ
ಸ ಗತದುರಿತಬಂಧೋ ಮೋಕ್ಷಲಕ್ಷ್ಮೀಂ ಪ್ರಯಾತಿ ॥೪೯॥

ಇತಿ ಶ್ರೀಸಿದ್ಧಾಂತಶಿಖಾಮಣೌ ಭಕ್ತಸ್ಥಲೇ ಪಂಚಾಕ್ಷರ ಜಪಸ್ಥಲಪ್ರಸಂಗೋ ನಾಮ

ಅಷ್ಟಮಪರಿಚ್ಛೇದಃ ಪರಿಸಮಾಪ್ತಃ

ಮೊದಲಾದ ಕಾರ್ಯಗಳಲ್ಲಿ ಈ ಮಂತ್ರದ ಪ್ರಭಾವದಿಂದಲೇ ಸಾಮರ್ಥ್ಯವು ಉತ್ಪನ್ನವಾಗುತ್ತದೆ. ॥೪೮॥ ಬಹಳ ಮಾತುಗಳಿಂದೇನು ಪ್ರಯೋಜನವು? ಯಾವ ಮಹಾತ್ಮನು ದೇವಾಧಿದೇವನಾದ ಸದಾಶಿವನನ್ನು ಪೂಜಿಸುವಂಥವನಾಗಿ, ಆದಿಯಲ್ಲಿ ಓಂಕಾರಸಹಿತವಾದ ಈ ಪಂಚಾಕ್ಷರಮಂತ್ರವನ್ನು ಅಸಾಧಾರಣವಾದ ಭಕ್ತಿಯಿಂದ ಜಪಿಸುವನೋ, ಅವನು ಪಾಪರೂಪಪಾಶದಿಂದ ವಿಮುಕ್ತನಾಗಿ ಮೋಕ್ಷಲಕ್ಷ್ಮಿಯನ್ನು ಹೊಂದುತ್ತಾನೆ. ॥೪೯॥

ಇಂತು ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಪಂಚಾಕ್ಷರಜಪಸ್ಥಲ ವಿಚಾರಾತ್ಮಕವಾದ

ಎಂಟನೆಯ ಪರಿಚ್ಛೇದವು ಪರಿಸಮಾಪ್ತವಾದುದು

ಶ್ರೀಜಗದ್ಗುರುರೇಣುಕಾಚಾರ್ಯಃ ಪ್ರಸೀದತು.

ನವಮಪರಿಚ್ಛೇದಃ

೯ ಭಕ್ತಮಾರ್ಗಕ್ರಿಯಾಸ್ಥಲಂ

ಭೂತಿರುದ್ರಾಕ್ಷಸಂಯುಕ್ತೋ ಲಿಂಗಧಾರೀ ಸದಾ ಶುಚಿಃ ।
ಪಂಚಾಕ್ಷರಜಪೋದ್ಯೋಗೀ ಶಿವಭಕ್ತ ಇತಿ ಸ್ಮೃತಃ ॥೧॥

ಶ್ರವಣಂ ಕೀರ್ತನಂ ಶಂಭೋಃ ಸ್ಮರಣಂ ಪಾದಸೇವನಂ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ ॥೨॥

ಏವಂ ನವವಿಧಾ ಭಕ್ತಿಃ ಪ್ರೋಕ್ತಾ ದೇವೇನ ಶಂಭುನಾ ।
ದುರ್ಲಭಾ ಪಾಪಿನಾಂ ಲೋಕೇ ಸುಲಭಾ ಪುಣ್ಯಕರ್ಮಣಾಂ ॥೩॥

ಅಧಮೋ ಚೋತ್ತಮೋ ವಾಪಿ ಯತ್ರಕುತ್ರಚಿದೂರ್ಜಿತಾ ।
ವರ್ತತೇ ಶಾಂಕರೀ ಭಕ್ತಿಃ ಸ ಭಕ್ತ ಇತಿ ಗೀಯತೇ ॥೪॥

ಒಂಭತ್ತನೆಯ ಪರಿಚ್ಛೇದವು

೯ ಭಕ್ತಮಾರ್ಗಕ್ರಿಯಾಸ್ಥಲ.

ವ್ಯಾಖ್ಯಾನ—ಭಸ್ಮರುದ್ರಾಕ್ಷಧಾರಣಸಂಪನ್ನನೂ, ಯಾವಾಗಲೂ ಶುಚಿಯಾದವನೂ, ಪಂಚಾಕ್ಷರಮಂತ್ರಜಪಾಸಕ್ತನೂ ಆದ ಲಿಂಗಧಾರಿಯು ಶಿವಭಕ್ತನೆಂದು ಹೇಳಿಸಿಕೊಳ್ಳುವನು. ॥೧॥ ಶಿವಕಥೆಯನ್ನು ಶ್ರವಣಮಾಡುವುದು, ಶಿವಸ್ತೋತ್ರಮಾಡುವುದು, ಶಿವನನ್ನು ಸ್ಮರಿಸುವುದು, ಶಿವನ ಪಾದಸೇವೆಯನ್ನು ಮಾಡುವುದು, ಶಿವನನ್ನು ಪೂಜಿಸುವುದು, ನಮಸ್ಕರಿಸುವುದು, ಶಿವನಲ್ಲಿ ಭೃತ್ಯಭಾವದಿಂದಿರುವುದು, ಶಿವನನ್ನು ಪ್ರೀತಿಸುವುದು, ಶಿವನಲ್ಲಿ ಆತ್ಮಸಮರ್ಪಣಮಾಡುವುದು. ಈ ರೀತಿ ಒಂಭತ್ತು ವಿಧವಾದ ಭಕ್ತಿಯು ಶಿವನಿಂದ ಹೇಳಲ್ಪಟ್ಟಿದೆ. ಈ ನವವಿಧಭಕ್ತಿಯು ಲೋಕದಲ್ಲಿ ಪಾಪಿಗಳಿಗೆ ದುರ್ಲಭವಾಗಿಯೂ, ಪುಣ್ಯಾತ್ಮರಿಗೆ ಸುಲಭವಾಗಿಯೂ ಇರುವುದು. ॥೨-೩॥ ಅಧಮನಲ್ಲಿಯೇ ಆಗಲಿ, ಉತ್ತಮನಲ್ಲಿಯೇ ಆಗಲಿ ಅಥವಾ ಯಾವನಲ್ಲಿಯೇ ಆಗಲಿ ಶಿವಭಕ್ತಿಯಿದ್ದುದಾದರೆ ಅವನು ಭಕ್ತನೆಂದು ಹೇಳಿಸಿಕೊಳ್ಳುವನು. ॥೪॥ ಯಾವ ಅಸ್ಪೃಶ್ಯನಲ್ಲಿಯೇ ಆಗಲಿ, ಬ್ರಾಹ್ಮಣನಲ್ಲಿಯೇ

ಭಕ್ತಿಃ ಸ್ಥಿರೀಕೃತಾ ಯಸ್ಮಿನ್ ಮ್ಲೇಚ್ಛೇ ವಾ ದ್ವಿಜಸತ್ತಮೇ ।
ಶಂಭೋಃ ಪ್ರಿಯಃ ಸ ವಿಪ್ರಶ್ಚ ನ ಪ್ರಿಯೋ ಭಕ್ತಿವರ್ಜಿತಃ ॥೫॥
ಸಾ ಭಕ್ತಿರ್ದ್ವಿವಿಧಾ ಜ್ಞೇಯಾ ಬಾಹ್ಯಾಭ್ಯಂತರಭೇದತಃ ।
ಬಾಹ್ಯಾ ಸ್ಥೂಲಾಂತರಾ ಸೂಕ್ಷ್ಮಾ ವೀರಮಾಹೇಶ್ವರಾದೃತಾ ॥೬॥
ಸಿಂಹಾಸನೇ ಶುದ್ಧದೇಶೇ ಸುರಮ್ಯೇ ರತ್ನಚಿತ್ರಿತೇ ।
ಶಿವಲಿಂಗಸ್ಯ ಪೂಜಾ ಯಾ ಸಾ ಬಾಹ್ಯಾ ಭಕ್ತಿರುಚ್ಯತೇ ॥೭॥
ಲಿಂಗೇ ಪ್ರಾಣಂ ಸಮಾಧಾಯ ಪ್ರಾಣೇ ಲಿಂಗಂ ತು ಶಾಂಭವಂ ।
ಸ್ವಸ್ಥಂ ಮನಸ್ತಥಾ ಕೃತ್ವಾ ನ ಕಿಂಚಿಚ್ಚಿಂತಯೇದ್ಯದಿ ॥೮॥
ಸಾಽಭ್ಯಂತರಾ ಭಕ್ತಿರಿತಿ ಪ್ರೋಚ್ಯತೇ ಶಿವಯೋಗಿಭಿಃ ।
ಸಾ ಯಸ್ಮಿನ್ ವರ್ತತೇ ತಸ್ಯ ಜೀವನಂ ಭ್ರಷ್ಟಬೀಜವತ್ ॥೯॥
ಬಹುನಾಽತ್ರ ಕಿಮುಕ್ತೇನ ಗುಹ್ಯಾದ್ಗುಹ್ಯತರಾ ಪರಾ ।
ಶಿವಭಕ್ತಿರ್ನಸಂದೇಹಸ್ತಯಾ ಯುಕ್ತೋ ವಿಮುಚ್ಯತೇ ॥೧೦॥

ಆಗಲಿ ಭಕ್ತಿಯು ಸ್ಥಿರಗೊಂಡುದಾದರೆ ಅವನೇ ಶಿವನಿಗೆ ಪ್ರಿಯನಾಗುವನು. ಬ್ರಾಹ್ಮಣನಾದರೂ ಭಕ್ತಿಶೂನ್ಯನಾದರೆ ಶಿವನಿಗೆ ಪ್ರಿಯನಾಗುವುದಿಲ್ಲ. ॥೫॥ ಆ ಭಕ್ತಿಯು ಬಾಹ್ಯ ಮತ್ತು ಆಂತರ ಎಂಬ ಭೇದದಿಂದ ಎರಡು ಪ್ರಕಾರವಾಗಿರುವುದು. ಬಾಹ್ಯಭಕ್ತಿಯು ಸ್ಥೂಲಭಕ್ತಿಯೆನಿಸುವುದು. ಆಂತರಭಕ್ತಿಯು ಸೂಕ್ಷ್ಮಭಕ್ತಿಯೆನಿಸುವುದು. ಈ ಸೂಕ್ಷ್ಮಭಕ್ತಿಯು ವೀರಮಾಹೇಶ್ವರರಿಂದ ಅಂಗೀಕೃತವಾಗಿರುವುದು. ॥೬॥ ಷಟ್ಸಂಮಾರ್ಜನಾದಿಗಳಿಂದ ಪರಿಶುದ್ಧವಾದ ಸ್ಥಾನದಲ್ಲಿ ಸ್ಥಾಪಿತವಾದ ಮನೋಹರವೂ ರತ್ನಸಂಯುತವೂ ಆದ ಸಿಂಹಾಸನದಲ್ಲಿ ಶಿವಲಿಂಗವನ್ನಿಟ್ಟು ಪೂಜಿಸುವುದೇ ಬಾಹ್ಯಭಕ್ತಿಯೆನಿಸುವುದು. ॥೭॥ ಲಿಂಗದಲ್ಲಿ ಪ್ರಾಣವನ್ನೂ, ಪ್ರಾಣದಲ್ಲಿ ಲಿಂಗವನ್ನೂ ಸಂಬಂಧಿಸಿ ಮನಸ್ಸನ್ನು ಶಿವೇತರವೃತ್ತಿಶೂನ್ಯವನ್ನಾಗಿ ಮಾಡಿ, ಯಾವುದನ್ನೂ ಚಿಂತಿಸದಿರುವುದೇ ಆಂತರಭಕ್ತಿಯೆನಿಸುವುದೆಂದು ಶಿವಯೋಗಿಗಳು ಹೇಳುವರು. ಅರ್ಥಾತ್ ಲಿಂಗಾಂಗಸಾಮರಸ್ಯದಲ್ಲಿಯೇ ಮನಸ್ಸನ್ನು ಸ್ಥಿರಗೊಳಿಸಬೇಕೆಂದು ಭಾವವು. ಆ ಆಂತರಭಕ್ತಿಯು ಯಾವನಲ್ಲಿರುವುದೋ ಅವನ ಜನ್ಮವು ಹುರಿದ ಬೀಜದಂತೆ ಪುನರ್ಜನ್ಮರಹಿತವಾಗುವುದು. ॥೮-೯॥ ವಿಶೇಷವಾಗಿ ಹೇಳುವುದರಿಂದ ಏನು ಪ್ರಯೋಜನವು? ಶಿವಭಕ್ತಿಯು ಶ್ರೇಷ್ಠವಾಗಿಯೂ ಅತ್ಯಂತ ಗೋಪ್ಯವಾಗಿಯೂ ಇರುವುದು. ಇಂಥ ಶಿವಭಕ್ತಿಯಿಂದ ಯುಕ್ತನಾದವನು ಮುಕ್ತ

ಪ್ರಸಾದಾದೇವ ಸಾ ಭಕ್ತಿಃ ಪ್ರಸಾದೋ ಭಕ್ತಿಸಂಭವಃ ।
ಯಥೈವಾಂಕುರತೋ ಬೀಜಂ ಬೀಜತೋ ವಾ ಯಥಾಂಕುರಃ ॥೧೧॥

ಪ್ರಸಾದಪೂರ್ವಿಕಾ ಯೇಯಂ ಭಕ್ತಿರ್ಮುಕ್ತಿವಿಧಾಯಿನೀ ।
ನೈವ ಸಾ ಶಕ್ಯತೇ ಪ್ರಾಪ್ತುಂ ನರೈರೇಕೇನ ಜನ್ಮನಾ ॥೧೨॥

ಅನೇಕಜನ್ಮಶುದ್ಧಾನಾಂ ಶ್ರೌತಸ್ಮಾರ್ತಾನುವರ್ತಿನಾಂ ।
ವಿರಕ್ತಾನಾಂ ಪ್ರಬುದ್ಧಾನಾಂ ಪ್ರಸೀದತಿ ಮಹೇಶ್ವರಃ ॥೧೩॥

ಪ್ರಸನ್ನೇ ಸತಿ ಮುಕ್ತಃ ಸ್ಯಾನ್ಮುಕ್ತಃ ಶಿವಸಮೋ ಭವೇತ್ ।
ಅಲ್ಪಭಾವೋಽಪಿ ಯೋ ಮರ್ತ್ಯಸ್ತಸ್ಯ ಜನ್ಮತ್ರಯಾತ್ಪರಂ ॥
ನ ಯೋನಿಯಂತ್ರಪೀಡಾ ವೈ ಭವೇನ್ನೈವಾತ್ರ ಸಂಶಯಃ ॥೧೪॥

ಸಾಂಗಾ ನ್ಯೂನಾ ಚ ಯಾ ಸೇವಾ ಸಾ ಭಕ್ತಿರಿತಿ ಕಥ್ಯತೇ ।
ಸಾ ಪುನರ್ಭಿದ್ಯತೇ ತ್ರೇಧಾ ಮನೋವಾಕ್ಕಾಯಸಾಧನೈಃ ॥೧೫॥

ನಾಗುವನು. ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲ. ॥೧೦॥ ಅಂಕುರದಿಂದ ಬೀಜವು ಹೇಗೆ ಉತ್ಪನ್ನವಾಗುವುದೋ, ಬೀಜದಿಂದ ಅಂಕುರವು ಹೇಗೆ ಉತ್ಪನ್ನವಾಗುವುದೋ, ಹಾಗೆ ಭಕ್ತಿಯು ಶಿವಾನುಗ್ರಹದಿಂದ ಉತ್ಪನ್ನವಾಗುವುದು; ಶಿವಾನುಗ್ರಹವು ಭಕ್ತಿಯಿಂದ ಉತ್ಪನ್ನವಾಗುವುದು. ॥೧೧॥ ಶಿವಾನುಗ್ರಹದಿಂದುತ್ಪನ್ನವಾದ ಶಿವಭಕ್ತಿಯು ಮುಕ್ತಿಯನ್ನುಂಟುಮಾಡುವುದು. ಆ ಶಿವಭಕ್ತಿಯು ಮಾನವರಿಂದ ಒಂದೇ ಜನ್ಮದಲ್ಲಿ ಹೊಂದಲು ಶಕ್ಯವಿಲ್ಲ. ॥೧೨॥ ಅನೇಕಜನ್ಮಗಳಲ್ಲಿ ಮಾಡಲ್ಪಟ್ಟ ಶಿವಧ್ಯಾನಶಿವಪೂಜಾದಿಗಳಿಂದ ಪರಿಶುದ್ಧರಾದವರೂ, ಶ್ರುತಿಸ್ಮೃತ್ಯುಕ್ತನಿತ್ಯನೈಮಿತ್ತಿಕಕರ್ಮಾನುಷ್ಠಾನತತ್ಪರರೂ, ಕಾಮ್ಯಕರ್ಮಗಳಲ್ಲಿ ನಿಃಸ್ಪೃಹರೂ ಆದ ಜ್ಞಾನಿಗಳಿಗೆ ಪರಮೇಶ್ವರನು ಪ್ರಸನ್ನನಾಗುತ್ತಾನೆ. ॥೧೩॥ ಪರಮೇಶ್ವರನು ಪ್ರಸನ್ನನಾಗಲು ಭಕ್ತನು ಮುಕ್ತನಾಗುವನು. ಮುಕ್ತನು ಶಿವರೂಪಿಯಾಗುವನು. ಯಾವ ಮನುಷ್ಯನೇ ಆಗಲಿ, ಅಲ್ಪಭಕ್ತಿಯುಳ್ಳವನಾದರೂ ಅವನಿಗೆ ಮೂರು ಜನ್ಮಗಳಾದ ಮೇಲೆ ಯೋನಿಜನನಬಾಧೆಯುಂಟಾಗುವುದಿಲ್ಲ. ಈ ವಿಷಯದಲ್ಲಾವ ಸಂಶಯವೂ ಇಲ್ಲ. ॥೧೪॥ ಯಾವ ಸೇವೆಯು ನವವಿಧಾಂಗಗಳಿಂದ ಕೂಡಿರುವುದೋ ಅದು ಪೂರ್ಣಭಕ್ತಿಯೆನಿಸುವುದು. ಕಡಿಮೆಯಾದುದು ಅಲ್ಪಭಕ್ತಿಯೆನಿಸುವುದು. ॥೧೫॥

ಶಿವರೂಪಾದಿಚಿಂತಾ ಯಾ ಸಾ ಸೇವಾ ಮಾನಸೀ ಸ್ಮೃತಾ ।
ಜಪಾದಿರ್ವಾಚಿಕೀ ಸೇವಾ ಕರ್ಮಪೂಜಾ ಚ ಕಾಯಿಕೀ ॥೧೬॥

ಬಾಹ್ಯಮಾಭ್ಯಂತರಂ ಚೈವ ಬಾಹ್ಯಾಭ್ಯಂತರಮೇವ ವಾ ।
ಮನೋವಾಕ್ಕಾಯಭೇದೈಶ್ಚ ತ್ರಿಧಾ ತತ್ಪೂಜನಂ ವಿದುಃ ॥೧೭॥

ಅನ್ಯಾತ್ಮವಿದಿತಂ ಬಾಹ್ಯಂ ಶಂಭೋರಭ್ಯರ್ಚನಾದಿಕಂ ।
ತದೇವ ತು ಸ್ವಸಂವೇದ್ಯಮಾಭ್ಯಂತರಮುದಾಹೃತಂ ॥
ಮನೋ ಮಹೇಶಪ್ರವಣಂ ಬಾಹ್ಯಾಭ್ಯಂತರಮುಚ್ಯತೇ ॥೧೮॥

ಮನೋ ಮಹೇಶಧ್ಯಾನಾಢ್ಯಂ ನಾನ್ಯಧ್ಯಾನರತಂ ಮನಃ ।
ಶಿವನಾಮರತಾ ವಾಣೀ ವಾಙ್ಮತಾ ಚೈವ ನೇತರಾ ॥೧೯॥

ಲಿಂಗೈಃ ಶಿವಸ್ಯ ಚೋದ್ದಿಷ್ಟೈಸ್ತ್ರಿಪುಂಡ್ರಾದಿಭಿರಂಕಿತಃ ।
ಶಿವೋಪಚಾರನಿರತಃ ಕಾಯಃ ಕಾಯೋ ನ ಚೇತರಃ ॥೨೦॥

ನವವಿಧಾಂಗಸಹಿತವಾದ ಆ ಭಕ್ತಿಯು ಮನಸ್ಸು-ವಾಕ್-ಶರೀರಗಳ ಮೂಲಕವಾಗಿ ಮೂರು ಪ್ರಕಾರವಾಗಿರುವುದು. ಯಾವ ಸೇವೆಯು ಶಿವಲಿಂಗಸ್ವರೂಪಾದಿಚಿಂತನವುಳ್ಳದೋ ಅದು ಮಾನಸೀಭಕ್ತಿಯೆನಿಸುವುದು. ಶಿವಮಂತ್ರಜಪರೂಪವಾದ ಸೇವೆಯು ವಾಚಿಕೀಭಕ್ತಿಯೆನಿಸುವುದು. ಶರೀರದಿಂದಾಚರಿಸತಕ್ಕ ಶಿವಲಿಂಗಪೂಜೆಯು ಕಾಯಿಕೀ ಭಕ್ತಿಯೆನಿಸುವುದು. ॥೧೬॥ ಆ ಸೇವೆಯು ಮನಸ್ಸು-ವಾಕ್-ಶರೀರ ಭೇದಗಳಿಂದ ಬಾಹ್ಯ-ಆಭ್ಯಂತರ-ಬಾಹ್ಯಾಭ್ಯಂತರ ಎಂದು ಮೂರು ವಿಧವಾಗಿರುವುದು. ॥೧೭॥ ಪರರಿಗೆ ಗೋಚರವಾಗುವ ಶಿವಪೂಜಾದಿಕರ್ಮವು ಬಾಹ್ಯಸೇವೆಯೆನಿಸುವುದು. ಪರರಿಗೆ ಗೋಚರವಾಗದೆ ತನಗೆಮಾತ್ರ ಗೋಚರವಾಗುವ ಶಿವಪೂಜಾದಿಕರ್ಮವು ಆಭ್ಯಂತರ ಸೇವೆಯೆನಿಸುವುದು. ಮನಸ್ಸು ಶಿವಲಿಂಗಾಸಕ್ತವಾದರೆ ಬಾಹ್ಯಾಭ್ಯಂತರಸೇವೆಯೆನಿಸುವುದು. ॥೧೮॥ ಮನಸ್ಸು ಶಿವಧ್ಯಾನದಲ್ಲಿ ಆಸಕ್ತವಾಗಿರಬೇಕು; ಅನ್ಯದೇವತಾಧ್ಯಾನದಲ್ಲಿ ಆಸಕ್ತವಾದುದು ಮನಸ್ಸಲ್ಲ. ವಾಣಿಯು ಶಿವನಾಮೋಚ್ಚಾರಣವಲ್ಲಿಯೇ ಆಸಕ್ತವಾಗಿರಬೇಕು; ದೇವತಾಂತರನಾಮೋಚ್ಚಾರಣವಲ್ಲಿ ಆಸಕ್ತವಾದುದು ವಾಣಿಯಲ್ಲ. ಶಾಸ್ತ್ರೋಕ್ತವಾದ ಭಸ್ಮತ್ರಿಪುಂಡ್ರರುದ್ರಾಕ್ಷಶಿವಲಿಂಗಾದಿಶಿವಚಿಹ್ನಗಳಿಂದ ಕೂಡಿದ ಶರೀರವು ಶಿವಲಿಂಗಪೂಜೆಯಲ್ಲಿ ನಿರತವಾಗಿರಬೇಕು; ಅನ್ಯದೇವತಾಚಿಹ್ನಗಳಿಂದ ಕೂಡಿ ಅನ್ಯದೇವತಾಪೂಜೆಯಲ್ಲಿ ನಿರತವಾದುದು ಶರೀರವಲ್ಲ. ॥೧೯-೨೦॥

ಪಂಚಧಾ ಕಥ್ಯತೇ ಸದ್ಭಿಸ್ತದೇವ ಭಜನಂ ಪುನಃ ।
ತಪಃ ಕರ್ಮ ಜಪೋ ಧ್ಯಾನಂ ಜ್ಞಾನಂ ಚೇತ್ಯನುಪೂರ್ವಕಂ ॥೨೧॥
ಶಿವಾರ್ಥೇ ದೇಹಸಂಶೋಷಸ್ತಪಃ ಕೃಚ್ಛ್ರಾದಿ ನೋ ಮತಂ ।
ಶಿವಾರ್ಚಾ ಕರ್ಮ ವಿಜ್ಞೇಯಂ ಬಾಹ್ಯಂ ಯಾಗಾದಿ ನೋಚ್ಯತೇ ॥೨೨॥
ಜಪಃ ಪಂಚಾಕ್ಷರಾಭ್ಯಾಸಃ ಪ್ರಣವಾಭ್ಯಾಸ ಏವ ವಾ ।
ರುದ್ರಾಧ್ಯಾಯಾದಿಕಾಭ್ಯಾಸೋ ನ ವೇದಾಧ್ಯಯನಾದಿಕಂ ॥೨೩॥
ಧ್ಯಾನಂ ಶಿವಸ್ಯ ರೂಪಾದಿಚಿಂತಾ ನಾತ್ಮಾದಿಚಿಂತನಂ ।
ಶಿವಾಗಮಾರ್ಥವಿಜ್ಞಾನಂ ಜ್ಞಾನಂ ನಾನ್ಯಾರ್ಥವೇದನಂ ॥
ಇತಿ ಪಂಚಪ್ರಕಾರೋಽಯಂ ಶಿವಯಜ್ಞಃ ಪ್ರಕೀರ್ತಿತಃ ॥೨೪॥
ಅನೇನ ಪಂಚಯಜ್ಞೇನ ಯಃ ಪೂಜಯತಿ ಶಂಕರಂ ।
ಭಕ್ತ್ಯಾ ಪರಮಯಾ ಯುಕ್ತಃ ಸ ವೈ ಭಕ್ತ ಇತಿ ಸ್ಮೃತಃ ॥೨೫॥

ಆ ಸೇವೆಯು ಪುನಃ ತಪಸ್ಸು-ಕರ್ಮ-ಜಪ-ಧ್ಯಾನ-ಜ್ಞಾನ ಎಂದು ಐದು ಪ್ರಕಾರವಾಗಿ ಹೇಳಲ್ಪಡುವುದು. ॥೨೧॥ ಶಿವನ ವಿಷಯದಲ್ಲಿ ಶರೀರಶೋಷಣವೇ ತಪಸ್ಸಲ್ಲದೆ ಕೃಚ್ಛ್ರಚಾಂದ್ರಾಯಣಾದಿವ್ರತಗಳಿಂದುಂಟಾಗುವ ಶರೀರಶೋಷಣವು ತಪಸ್ಸಲ್ಲ. ಶಿವಪೂಜೆಯೇ ಕರ್ಮವಲ್ಲದೆ, ಕಷ್ಟಸಾಧ್ಯವಾದ ಜ್ಯೋತಿಷ್ಟೋಮಾದಿಬಾಹ್ಯಯಾಗಗಳು ಕರ್ಮವಲ್ಲ. ॥೨೨॥ ಪಂಚಾಕ್ಷರಮಂತ್ರಾಭ್ಯಾಸವಾಗಲಿ, ಓಂಕಾರಾಭ್ಯಾಸವಾಗಲಿ ಅಥವಾ ಶ್ರೀರುದ್ರ-ಅಥರ್ವಶಿಖಾ-ಶ್ವೇತಾಶ್ವತರ-ಕೈವಲ್ಯಾದಿಶ್ರುತಿಗಳ ಅಭ್ಯಾಸವಾಗಲಿ ಜಪವೆನಿಸುವುದಲ್ಲದೆ, ಪಶುಕರ್ಮಪ್ರತಿಪಾದಕವೇದಾಭ್ಯಾಸವು ಜಪವೆನಿಸುವುದಿಲ್ಲ. ॥೨೩॥ ಶಿವನ ಚಂದ್ರಶೇಖರತ್ವ-ಗಂಗಾಧರತ್ವಾದಿದಿವ್ಯಮಂಗಲಾಕಾರಾನುಸಂಧಾನವೇ ಧ್ಯಾನವಲ್ಲದೆ, ಶರೀರೇಂದ್ರಿಯಾದ್ಯುಪಾಧಿಸಂಯುತವಾದ ಆತ್ಮನ ಧ್ಯಾನವು ಧ್ಯಾನವಲ್ಲ. ಶಿವಾಗಮಾರ್ಥಜ್ಞಾನವೇ ಜ್ಞಾನವಲ್ಲದೆ, ಶಿವಾಗಮೇತರಸಾಂಖ್ಯಾದಿಶಾಸ್ತ್ರಾರ್ಥಜ್ಞಾನವು ಜ್ಞಾನವಲ್ಲ. ಈ ರೀತಿಯಾಗಿ ಶಿವಯಜ್ಞವು ಐದು ವಿಧವಾಗಿ ಹೇಳಲ್ಪಟ್ಟಿದೆ. ॥೨೪॥ ಯಾವನು ಅಸಾಧಾರಣವಾದ ಭಕ್ತಿಯಿಂದೊಡಗೂಡಿ ಈ ಐದು ವಿಧವಾದ ಯಜ್ಞಗಳಿಂದ ಶಿವನನ್ನು ಪೂಜಿಸುತ್ತಾನೆಯೋ ಅವನು ಭಕ್ತನೆಂದು ಹೇಳಿಸಿಕೊಳ್ಳುವನು. ॥೨೫॥ ಶಿವಭಕ್ತನನ್ನು ಗೌರವಿಸುವುದರಿಂದ ಪುಣ್ಯವು ಪ್ರಾಪ್ತವಾಗುವುದು. ಅವಮಾನಮಾಡುವುದರಿಂದ ಮಹಾಘೋರನರಕವು ಪ್ರಾಪ್ತವಾಗುವುದು. ಈ ವಿಷಯದಲ್ಲಾವ ಸಂಶಯವೂ ಇಲ್ಲ. ॥೨೬॥ ಮಹಾತೇಜಸ್ವಿಯಾದ ಶಿವಭಕ್ತನು

ಪೂಜನಾಚ್ಛಿವಭಕ್ತಸ್ಯ ಪುಣ್ಯಾ ಗತಿರವಾಪ್ಯತೇ ।
ಅವಮಾನಾನ್ಮಹಾಘೋರೋ ನರಕೋ ನಾತ್ರ ಸಂಶಯಃ ॥೨೬॥

ಶಿವಭಕ್ತೋ ಮಹಾತೇಜಾಃ ಶಿವಭಕ್ತಿಪರಾಙ್ಮುಖಾನ್ ।
ನ ಸ್ಪೃಶೇನ್ನೈವ ವೀಕ್ಷೇತ ನ ತೈಃ ಸಹ ವಸೇತ್ ಕ್ವಚಿತ್ ॥೨೭॥

ಯದಾ ದೀಕ್ಷಾಪ್ರವೇಶಃ ಸ್ಯಾಲ್ಲಿಂಗಧಾರಣಪೂರ್ವಕಂ ।
ತದಾಪ್ರಭೃತಿ ಭಕ್ತೋಽಸೌ ಪೂಜಯೇತ್ ಸ್ವಾಗಮಸ್ಥಿತಾನ್ ॥೨೮॥

ಸ್ವಮಾರ್ಗಾಚಾರನಿರತಾಃ ಸಜಾತೀಯಾ ದ್ವಿಜಾಸ್ತು ಯೇ ।
ತೇಷಾಂ ಗೃಹೇಷು ಭುಂಜೀತ ನೇತರೇಷಾಂ ಕದಾಚನ ॥೨೯॥

ಸ್ವಮಾರ್ಗಾಚಾರವಿಮುಖೈರ್ಭವಿಭಿಃ ಪ್ರಾಕೃತಾತ್ಮಭಿಃ ।
ಪ್ರೇಷಿತಂ ಸಕಲಂ ದ್ರವ್ಯಮಾತ್ಮಲೀನಮಪಿ ತ್ಯಜೇತ್ ॥೩೦॥

ಶಿವಭಕ್ತಿವಿಮುಖರಾದ ಜನರನ್ನು ಮುಟ್ಟಬಾರದು; ನೋಡಬಾರದು; ಅವರೊಡನೆ ಸ್ವಲ್ಪಕಾಲವಾದರೂ ವಾಸಮಾಡಬಾರದು. ॥೨೭॥ ಲಿಂಗಧಾರಣಪೂರ್ವಕವಾದ ಶಿವದೀಕ್ಷೆಯು ಎಂದು ಆಗುವುದೋ, ಅಂದಿನಿಂದ ಪ್ರತಿದಿವಸವೂ ಭಕ್ತನು ವೀರಶೈವಾಗಮಪ್ರಕಾರವಾಗಿ ಆಚರಿಸುವ ಪೂಜ್ಯಗುರುಸ್ಥಲಮಾಹೇಶ್ವರರನ್ನು ಪೂಜಿಸಬೇಕು. ॥೨೮॥ ತಮ್ಮ ತಮ್ಮ ಜಾತಿಧರ್ಮಾನುಸಾರವಾಗಿ ಆಚಾರದಲ್ಲಿ ನಿಷ್ಠರಾದ ವೀರಶೈವದ್ವಿಜರು ಅಂದರೆ ವೀರಶೈವಬ್ರಾಹ್ಮಣ-ವೀರಶೈವಕ್ಷತ್ರಿಯ-ವೀರಶೈವವೈಶ್ಯರು ತಮ್ಮ ತಮ್ಮ ಜಾತಿಯ ಜನರ ಮನೆಗಳಲ್ಲಿಯೇ ಭೋಜನವನ್ನು ಮಾಡಬೇಕಲ್ಲದೆ ಇತರರ ಮನೆಗಳಲ್ಲಿ ಭೋಜನಮಾಡಬಾರದು. ವೀರಶೈವಕ್ಷತ್ರಿಯ-ವೀರಶೈವವೈಶ್ಯರು ವೀರಶೈವಬ್ರಾಹ್ಮಣರಲ್ಲಿ ಭೋಜನಮಾಡಬೇಕಲ್ಲದೆ, ಬ್ರಾಹ್ಮಣರು ಕ್ಷತ್ರಿಯವೈಶ್ಯರಲ್ಲಿ ಭೋಜನಮಾಡಬಾರದು. "ಶಿವೋಕ್ತಾಂ ಜಾತಿಮರ್ಯಾದಾಂ ಯೋಽತೀತ್ಯ ಭುವಿ ವರ್ತತೇ । ಸ ಚಂಡಾಲ ಇತಿ ಜ್ಞೇಯಃ ಸರ್ವಕರ್ಮಬಹಿಷ್ಕೃತಃ ॥" ಶಿವನಿಂದ ಹೇಳಲ್ಪಟ್ಟ ಜಾತಿಮರ್ಯಾದೆಯನ್ನು ಯಾವನು ಮೀರಿ ನಡೆಯುವನೋ ಅವನು ಚಂಡಾಲನೂ ಸರ್ವಕರ್ಮಬಹಿಷ್ಕೃತನೂ ಆಗುವನು; ಎಂದು ಶಿವಾಗಮಗಳು ಸಾರುತ್ತಿರುವುದರಿಂದ ವೀರಶೈವಮತೀಯರು ತಮ್ಮ ತಮ್ಮ ಜಾತಿಧರ್ಮದಂತೆ ವರ್ತಿಸಬೇಕಲ್ಲದೆ, ಅದಕ್ಕೆ ವಿರುದ್ಧವಾಗಿ ವರ್ತಿಸಿ ನರಕಭಾಗಿಗಳಾಗಬಾರದು. ॥೨೯॥ ವೀರಶೈವಾಚಾರವಿಮುಖರಾದ ಪ್ರಾಕೃತಭವಿಗಳು ಕಳುಹಿಸಿದ ಸಕಲಪದಾರ್ಥಗಳು ತನ್ನ ಸ್ವಾಧೀನವಲ್ಲಿದ್ದರೂ ಅವುಗಳನ್ನು ಮುಟ್ಟಬಾರದು. ॥೩೦॥ ಶಿವವ್ರತಿಯಾದ

ನಾರ್ಚಯೇದನ್ಯದೇವಾಂಸ್ತು ನ ಸ್ಮರೇನ್ನ ಚ ಕೀರ್ತಯೇತ್ ।
ನ ತನ್ನೈವೇದ್ಯಮಶ್ನೀಯಾಚ್ಛಿವಭಕ್ತೋ ದೃಢವ್ರತಃ ॥೩೦॥

ಯದ್ಗೃಹೇಷ್ವನ್ಯದೇವೋಽಸ್ತಿ ತದ್ಗೃಹಾಣಿ ಪರಿತ್ಯಜೇತ್ ।
ನಾನ್ಯದೇವಾರ್ಚಕಾನ್ಮರ್ತ್ಯಾನ್ ಪೂಜಾಕಾಲೇ ನಿರೀಕ್ಷಯೇತ್ ॥೩೨॥

ಸದಾ ಶಿವೈಕನಿಷ್ಠಾನಾಂ ವೀರಶೈವಾಧ್ವವರ್ತಿನಾಂ ।
ನಹಿ ಸ್ಥಾವರಲಿಂಗಾನಾಂ ನಿರ್ಮಾಲ್ಯಾದ್ಯುಪಭುಜ್ಯತೇ ॥೩೩॥

ಯತ್ರ ಸ್ಥಾವರಲಿಂಗಾನಾಮುಪಾಯಃ ಪರಿವರ್ತತೇ ।
ಅಥವಾ ಶಿವಭಕ್ತಾನಾಂ ಶಿವಲಾಂಛನಧಾರಿಣಾಂ ॥೩೪॥

ತತ್ರ ಪ್ರಾಣಾನ್ ವಿಹಾಯಾಪಿ ಪರಿಹಾರಂ ಸಮಾಚರೇತ್ ।
ಶಿವಾರ್ಥಂ ಮುಕ್ತಜೀವಶ್ಚೇಚ್ಛಿವಸಾಯುಜ್ಯಮಾಪ್ನುಯಾತ್ ॥೩೫॥

ಯತ್ರ ಚಾಚಾರನಿಂದಾಸ್ತಿ ಕದಾಚಿತ್ತತ್ರ ನ ವ್ರಜೇತ್ ।
ಯದ್ಗೃಹೇ ಶಿವನಿಂದಾಽಸ್ತಿ ತದ್ಗೃಹಂ ತು ಪರಿತ್ಯಜೇತ್ ॥೩೬॥

ಶಿವಭಕ್ತನು ಶಿವೇತರದೇವತೆಗಳನ್ನು ಪೂಜಿಸಬಾರದು; ಸ್ಮರಿಸಬಾರದು; ಸ್ತುತಿಸಬಾರದು; ನೈವೇದ್ಯವನ್ನು ಗ್ರಹಿಸಬಾರದು. ॥೩೧॥ ಯಾರ ಮನೆಗಳಲ್ಲಿ ಶಿವೇತರದೇವತೆಯಿರುವುದೋ ಆ ಮನೆಗಳನ್ನು ಬಿಡಬೇಕು; ಶಿವೇತರದೇವ ಪೂಜಕರನ್ನು ಶಿವಪೂಜಾಕಾಲದಲ್ಲಿ ನೋಡಬಾರದು ॥೩೨॥ ಯಾವಾಗಲೂ ಶಿವಲಿಂಗನಿಷ್ಠರೂ ವೀರಶೈವಮಾರ್ಗನಿರತರೂ ಆದ ಶಿವಭಕ್ತರು ದೇವಾಲಯಗಳಲ್ಲಿರುವ ಸ್ಥಾವರಲಿಂಗಗಳ ನೈವೇದ್ಯವನ್ನು ಸ್ವೀಕರಿಸಬಾರದು. ॥೩೩॥ ಯಾವ ಸ್ಥಳದಲ್ಲಿ ಸ್ಥಾವರಲಿಂಗಗಳಿಗೆ ಅಪಾಯವು ಸಂಭವಿಸುತ್ತದೆಯೋ, ಅಥವಾ ಶಿವಲಾಂಛನಧಾರಿಗಳಾದ ಶಿವಭಕ್ತರಿಗೆ ಅಪಾಯವು ಸಂಭವಿಸುತ್ತದೆಯೋ, ಅಲ್ಲಿ ಪ್ರಾಣವನ್ನು ತ್ಯಜಿಸಿಯಾದರೂ ಪರಿಹಾರವನ್ನುಂಟುಮಾಡಬೇಕು; ಅರ್ಥಾತ್ ಅಪಾಯದಿಂದ ತಪ್ಪಿಸಬೇಕು. ಶಿವನಿಗೋಸುಗ ಪ್ರಾಣವನ್ನು ಬಿಟ್ಟರೆ ಅವನು ಶಿವಸಾಯುಜ್ಯಪದವಿಯನ್ನು ಹೊಂದುವನು. ॥೩೪-೩೫॥ ಯಾವ ಸ್ಥಾನದಲ್ಲಿ ಧರ್ಮಾಚಾರಗಳ ನಿಂದೆಯು ಕಂಡುಬರುತ್ತದೆಯೋ, ಅಲ್ಲಿ ಎಂದೂ ಹೋಗಬಾರದು; ಯಾವ ಮನೆಯಲ್ಲಿ ಶಿವನಿಂದೆಯು ಕಂಡುಬರುತ್ತದೆಯೋ ಆ ಮನೆಯನ್ನು ಬಿಡಬೇಕು. ॥೩೬॥ ಯಾವನು ಸರ್ವಭೂತಾಧಿಪತಿಯಾದ ವಿಶ್ವೇಶ್ವರನನ್ನು

ಯಃ ಸರ್ವಭೂತಾಧಿಪತಿಂ ವಿಶ್ವೇಶಾನಂ ವಿನಿಂದತಿ ।
ನ ತಸ್ಯ ನಿಷ್ಕೃತಿಃ ಶಕ್ಯಾ ಕರ್ತುಂ ವರ್ಷಶತೈರಪಿ ॥೩೭॥
ಶಿವನಿಂದಾಕರಂ ದೃಷ್ಟ್ವಾ ಘಾತಯೇದಥವಾ ಶಪೇತ್ ।
ಸ್ಥಾನಂ ವಾ ತತ್ಪರಿತ್ಯಜ್ಯ ಗಚ್ಛೇದ್ಯದ್ಯಕ್ಷಮೋ ಭವೇತ್ ॥೩೮॥
ಶಿವಪೂಜಾಪರೋ ಭೂತ್ವಾ ಪೂರ್ವಕರ್ಮ ವಿವರ್ಜಯೇತ್ ।
ಅಥವಾ ಪೂರ್ವಕರ್ಮ ಸ್ಯಾತ್ ಸಾ ಪೂಜಾ ನಿಷ್ಫಲಾ ಭವೇತ್ ॥೩೯॥
ಉತ್ತಮಾಂ ವೃತ್ತಿಮಾಶ್ರಿತ್ಯ ನೀಚಾಂ ವೃತ್ತಿಂ ಸಮಾಶ್ರಿತಃ ।
ಆರೂಢಪತಿತೋ ಜ್ಞೇಯಃ ಸರ್ವಕರ್ಮಬಹಿಷ್ಕೃತಃ ॥೪೦॥
ಪಂಚಾಕ್ಷರೋಪದೇಶೀ ಯೋ ನರಸ್ತುತಿಕರೋ ಯದಿ ।
ಸೋಽಲಿಂಗೀ ಸ ದುರಾಚಾರೀ ಕುಕವಿಃ ಸ ತು ವಿಶ್ರುತಃ ॥೪೧॥
ಚರ್ಮಪಾತ್ರೇ ಜಲಂ ತೈಲಂ ನ ಗ್ರಾಹ್ಯಂ ಭಕ್ತಿತತ್ಪರೈಃ ।
ಗೃಹ್ಯತೇ ಯದಿ ಭಕ್ತೇನ ರೌರವಂ ನರಕಂ ವ್ರಜೇತ್ ॥೪೨॥
ನ ತಸ್ಯ ಸೂತಕಂ ಕಿಂಚಿತ್ ಪ್ರಾಣಲಿಂಗಾಂಗಸಂಗಿನಃ ।
ಜನನೋತ್ಥಂ ಮೃತೋತ್ಥಂ ಚ ವಿದ್ಯತೇ ಪರಮಾರ್ಥತಃ ॥೪೩॥

ನಿಂದಿಸುತ್ತಾನೆಯೋ, ಅವನ ಪಾಪಪರಿಹಾರವು ನೂರು ವರ್ಷಗಳವರೆಗಾದರೂ ಆಗುವಂತಿಲ್ಲ. ॥೩೭॥ ಶಿವನಿಂದಕನನ್ನು ನೋಡಿ ಹೊಡೆಯಬೇಕು; ಅಥವಾ ಶಪಿಸಬೇಕು; ಇವೆರಡರಲ್ಲಿಯೂ ಅಸಮರ್ಥನಾದರೆ ಆ ಸ್ಥಾನವನ್ನು ಬಿಟ್ಟುಹೋಗಬೇಕು. ॥೩೮॥ ಶಿವಪೂಜಾಸಕ್ತನಾಗಿ ಪ್ರಾಕೃತಕರ್ಮವನ್ನು ಬಿಡಬೇಕು. ಒಂದುಪಕ್ಷ ಪ್ರಾಕೃತಕರ್ಮವನ್ನು ಅನುಸರಿಸಿದ್ದಾದರೆ ಆ ಪೂಜೆಯು ನಿಷ್ಫಲವಾಗುವುದು. ॥೩೯॥ ಶಿವಪೂಜಾರೂಪವಾದ ಉತ್ತಮವೃತ್ತಿಯನ್ನು ಹೊಂದಿ ನೀಚವೃತ್ತಿಯನ್ನು ಅವಲಂಬಿಸುವವನು ಸರ್ವಕರ್ಮಬಹಿಷ್ಕೃತನೂ ಆರೂಢಪತಿತನೂ ಆಗುವನು. ॥೪೦॥ ಪಂಚಾಕ್ಷರೋಪದೇಶವನ್ನು ಪಡೆದ ಶಿವಭಕ್ತನು ನರಸ್ತುತಿಯನ್ನು ಮಾಡಿದ್ದಾದರೆ, ಅವನು ಅಲಿಂಗಿಯು, ದುರಾಚಾರಿಯು, ಕುಪಂಡಿತನು ಎಂದು ಹೇಳಿಸಿಕೊಳ್ಳುವನು. ॥೪೧॥ ಶಿವಭಕ್ತರು ಚರ್ಮಪಾತ್ರದಲ್ಲಿ ಜಲವನ್ನಾಗಲಿ, ಎಣ್ಣೆಯನ್ನಾಗಲಿ ತೆಗೆದುಕೊಳ್ಳಬಾರದು; ಒಂದುವೇಳೆ ತೆಗೆದುಕೊಂಡರೆ ರೌರವನರಕವನ್ನು ಹೊಂದುವರು. ॥೪೨॥ ಪ್ರಾಣಲಿಂಗಾಂಗಸಂಗಿಯಾದ ವೀರಶೈವನಿಗೆ ಪಾರಮಾರ್ಥಿಕದಶೆಯಲ್ಲಿ ಜನನಸೂತಕವಾಗಲಿ, ಮರಣಸೂತಕವಾಗಲಿ ಇರುವುದಿಲ್ಲ. ಅರ್ಥಾತ್ ಲೌಕಿಕಾಚಾರದಶೆಯಲ್ಲಿ

ಲಿಂಗಾರ್ಚನರತಾಯಾಶ್ಚ ಋತೌ ನಾರ್ಯಾ ನ ಸೂತಕಂ ।
ತಥಾ ಪ್ರಸೂತಿಕಾಯಾಶ್ಚ ಸೂತಕಂ ನೈವ ವಿದ್ಯತೇ ॥೪೪॥
ಗೃಹೇ ಯಸ್ಮಿನ್ ಪ್ರಸೂತಾ ಸ್ತ್ರೀ ಸೂತಕಂ ನಾತ್ರ ವಿದ್ಯತೇ ।
ಶಿವಪಾದಾಂಬುಸಂಸ್ಪರ್ಶಾತ್ ಸರ್ವಪಾಪಂ ಪ್ರಣಶ್ಯತಿ ॥೪೫॥

ಇರುವುವೆಂದು ಭಾವವು. ॥೪೩॥ ಲಿಂಗಾರ್ಚನಾಸಕ್ತಳಾದ ವೀರಶೈವಸ್ತ್ರೀಯಳಿಗೆ ಋತುಕಾಲದಲ್ಲಿ ಸೂತಕವಿರುವುದಿಲ್ಲ. ಮತ್ತು ಲಿಂಗಾರ್ಚನಾಸಕ್ತಳಾದ ಪ್ರಸೂತಿಕಾಸ್ತ್ರೀಯಳಿಗೂ ಸೂತಕವಿರುವುದಿಲ್ಲ. ಅರ್ಥಾತ್ ಶಿವಲಿಂಗಪೂಜಾಸಮಯದಲ್ಲಿ ರಜಸ್ವಲಾಸ್ತ್ರೀಯಳಿಗೂ ಪ್ರಸೂತಿಕಾಸ್ತ್ರೀಯಳಿಗೂ ಸೂತಕವಿಲ್ಲವೆಂದೂ, ಉಳಿದ ಸಮಯದಲ್ಲಿ ಇರುವುವೆಂದೂ ಭಾವವು. ಯಾವ ಮನೆಯಲ್ಲಿ ಸ್ತ್ರೀಯಳು ಹಡೆದಿರುವಳೋ ಅಲ್ಲಿ ಸೂತಕವಿರುವುದಿಲ್ಲ. ಶಿವಪಾದೋದಕಸ್ಪರ್ಶದಿಂದ ಸರ್ವಪಾಪಗಳೂ ನಷ್ಟವಾಗುವವು. ವೀರಶೈವಧರ್ಮಶಾಸ್ತ್ರಾನುಸಾರವಾಗಿ ವೀರಶೈವರಿಗೆ ಯಾವಜ್ಜೀವಾನುಷ್ಠೇಯವಾದ ಶಿವಪೂಜೆಯ ಸಮಯದಲ್ಲಿ ಮಾತ್ರ ಸೂತಕವಿರುವುದಿಲ್ಲ. ಆದರೆ ಉಳಿದಕಾಲದಲ್ಲಿ ಸೂತಕಗಳು ಉಂಟೇ ಉಂಟು. ಈ ವಿಷಯವು ಶ್ರೀಕರಭಾಷ್ಯದ "ಅಥಾತೋ ಬ್ರಹ್ಮಜಿಜ್ಞಾಸಾ" ಎಂಬ ಸೂತ್ರಭಾಷ್ಯದಲ್ಲಿ ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ.—

"ಶೈವಂ ದೇವಾರ್ಚನಂ ಯಸ್ಯ ಯಸ್ಯ ಚಾಗ್ನಿಪರಿಗ್ರಹಃ । ಬ್ರಹ್ಮಚಾರಿಯತೀನಾಂ ಚ ಶರೀರೇ ನಾಸ್ತಿ ಸೂತಕಂ ॥ ಲಿಂಗಾರ್ಚನರತಾ ನಾರೀ ಸೂತಕೇ ವಾ ರಜಸ್ವಲಾ । ರವಿರಗ್ನಿರ್ಯಥಾ ವಾಯುಸ್ತಥಾ ಕೋಟಿಗುಣೋಜ್ಜ್ವಲಾ ॥ ಜಾತಕೇ ಮೃತಕೇ ವಾಪಿ ನ ತ್ಯಾಜ್ಯಂ ಶಿವಪೂಜನಂ ॥ ಇತ್ಯಾದಿಪಾರಾಶರಸ್ಮೃತಿ ಸಿದ್ಧಾಂತಶಿಖಾಮಣ್ಯಾದೌ ಲಿಂಗಾಂಗಿದೇಹಸ್ಯ ಪವಿತ್ರತ್ವವ್ಯಪದೇಶಾಲ್ಲಿಂಗಧಾರಣಪೂಜಾದೇರ್ನವಿರೋಧಃ, ನನು ಪ್ರಮಾಣಾಚಾರಸತ್ತ್ವೇಽಪಿ ಪ್ರತ್ಯಕ್ಷವಿರುದ್ಧತ್ವಾತ್ ಸೂತಕರಜಸ್ವಲಾಕಾಲಕೃತಪೂಜಾಧಾರಣಾದಿಕಮನುಪಪನ್ನಮಿತಿಚೇನ್ನ ; ಜ್ಯೋತಿಷ್ಟೋಮಾತಿರಾತ್ರಪೌಂಡರೀಕಾದಿಯಾಗೀಯಪಶುವಿಶಸನಮಾಂಸಭಕ್ಷಣಸುರಾಪಾನಬ್ರಹ್ಮಚಾರಿಕೃತದಿವಾದಾಸೀಸಂಗಮಾದಿಪ್ರತ್ಯಕ್ಷಲೋಕವಿರುದ್ಧಶ್ರೌತಾಚಾರಭಂಗಪ್ರಸಂಗಾತ್. ನನು ಶೈವಾನಾಂ ಪಂಚಸೂತಕಾಭಾವೇ ವರ್ಣಚತುಷ್ಟಯಾತೀತತ್ವಪ್ರಸಂಗಃ. ತತ್ಕೃತಪಾಕಸ್ಪರ್ಶಪರಿಗ್ರಹಪ್ರಸಕ್ತಿಶ್ಚ । ತತ್ಪರಿಗ್ರಹೇ ಶೈವಶಾಸ್ತ್ರೋಕ್ತಪೂಜಾಧಾರಣಸೂತಕನಿಷೇಧಶಾಸ್ತ್ರವಿರೋಧಪ್ರಸಂಗಾದ್ವೈದಿಕಾನಾಂ ಲಿಂಗಧಾರಣಮನರ್ಹಮೇವೇತಿ ಚೇನ್ನ । ಸ್ವೇಷ್ಟಲಿಂಗೈಕಪೂಜಾಯಾಂ ನೈವಾಶೌಚಂ ವಿಧೀಯತೇ । ಪೌಂಡರೀಕೇ ರಜಃಸ್ತ್ರೀಣಾಂ ಸ್ವಾಗ್ನಿಹೋತ್ರೇ ಯಥಾತಥಾ ॥ ಅಕರಸ್ಪರ್ಶಯೋಗ್ಯೋಽಪಿ ಯಥಾ ಹಿ ಸ್ವಾ ಮಹೇಶ್ವರಿ । ಮಂತ್ರೋಚ್ಚಾರಣಮಾತ್ರಸ್ಯ ಪೂತಾ ಭವತಿ ಭೂತಲೇ ॥ ತಥಾ ಸೂತಕಿನಃ ಶೈವಾಃ ಪೂಜಾಮಾತ್ರಸುನಿರ್ಮಲಾಃ । ನಾನ್ಯಸ್ಪರ್ಶಾನುಕೂಲಾಃ ಸ್ಯುರಿತಿ ವೇದಾನುಶಾಸನಂ ॥ ಇತಿ ಸಿದ್ಧಾಂತಾಗಮಾದಿಷು ಶಿವಪೂಜಾಮಾತ್ರಯೋಗ್ಯತಾಶ್ರವಣಾತ್ ॥"

ಶಿವಸ್ಥಾನಾನಿ ತೀರ್ಥಾನಿ ವಿಶಿಷ್ಟಾನಿ ಶಿವಾರ್ಚಕಃ ।
ಶಿವಯಾತ್ರೋತ್ಸವೇ ನಿತ್ಯಂ ಸೇವೇತ ಪರಯಾ ಮುದಾ ॥೪೬॥

ಶಿವಕ್ಷೇತ್ರೋತ್ಸವಮಹಾಯಾತ್ರಾದರ್ಶನಕಾಂಕ್ಷಿಣಾಂ ।
ಮಾರ್ಗೇಽನ್ನಪಾನದಾನಂ ಚ ಕುರ್ಯಾನ್ಮಾಹೇಶ್ವರೋ ಜನಃ ॥೪೭॥

ನಾನ್ನತೋಯಸಮಂ ದಾನಂ ನ ಚಾಹಿಂಸಾಪರಂ ತಪಃ ।
ತಸ್ಮಾನ್ಮಾಹೇಶ್ವರೋ ನಿತ್ಯಮನ್ನತೋಯಪ್ರದೋ ಭವೇತ್ ॥೪೮॥

ಸ್ವಮಾರ್ಗಾಚಾರವರ್ತಿಭ್ಯಃ ಸ್ವಜಾತಿಭ್ಯಃ ಸದಾ ವ್ರತೀ ।
ದದ್ಯಾತ್ತೇಭ್ಯಃ ಸಮಾದದ್ಯಾತ್ ಕನ್ಯಾಂ ಕುಲಸಮುದ್ಭವಾಂ ॥೪೯॥

ಈ ರೀತಿಯಾಗಿ ಶ್ರೀಪತಿಪಂಡಿತರು ಸಿದ್ಧಾಂತಾಗಮಾದಿಗಳ ಅಭಿಪ್ರಾಯಾನುಸಾರವಾಗಿ ಲಿಂಗಪೂಜಾಲಿಂಗಧಾರಣಾದಿಗಳಲ್ಲಿ ಮಾತ್ರ ವೀರಶೈವರಿಗೆ ಸೂತಕಗಳಿರುವುದಿಲ್ಲವೆಂದೂ, ಪಾಕಸ್ಪರ್ಶಾದಿಗಳಲ್ಲಿ ಸೂತಕಗಳಿರುವುವೆಂದೂ, ಪೌಂಡರೀಕಯಾಗದಲ್ಲಿಯೂ ಅಗ್ನಿಹೋತ್ರಕರ್ಮದಲ್ಲಿಯೂ ರಜಸ್ವಲಾಸ್ತ್ರೀಯಳಿಗೆ ಹೇಗೆ ಸೂತಕವಿರುವುದಿಲ್ಲವೋ, ನಾಲಗೆಯು ಕೈಯಿಂದ ಮುಟ್ಟಲು ಅಯೋಗ್ಯವಾಗಿದ್ದರೂ ಮಂತ್ರೋಚ್ಚಾರಣಕ್ಕೆ ಮಾತ್ರ ಹೇಗೆ ಪರಿಶುದ್ಧವಾಗಿರುವುದೋ, ಹಾಗೆ ಸೂತಕಗಳುಳ್ಳ ವೀರಶೈವರು ಶಿವಪೂಜಾದಿಗಳಲ್ಲಿಮಾತ್ರ ಅತ್ಯಂತಪರಿಶುದ್ಧರೆಂದು ಸಿದ್ಧಾಂತಗೊಳಿಸಿರುವುದರಿಂದ, ವೀರಶೈವರಿಗೆ ಶಿವಪೂಜಾದಿಗಳಲ್ಲಿ ಮಾತ್ರ ಸೂತಕಗಳಿರುವುದಿಲ್ಲವೆಂದೂ, ಇತರ ಪಾಕಸ್ಪರ್ಶಾದಿಗಳಲ್ಲಿ ಸೂತಕಗಳುಂಟೆಂದೂ ಸಿದ್ಧಾಂತವಾಗುವುದು. ॥೪೪-೪೫॥ ಶಿವಪೂಜಕನು ಶಿವಯಾತ್ರೋತ್ಸವಸಮಯದಲ್ಲಿ ಶ್ರೇಷ್ಠವಾದ ಶಿವಕ್ಷೇತ್ರಗಳನ್ನೂ, ಶಿವತೀರ್ಥಗಳನ್ನೂ ವಿಶೇಷವಾದ ಸಂತೋಷದಿಂದ ಸೇವಿಸಬೇಕು. ॥೪೬॥ ಶಿವಭಕ್ತರು ಶಿವಕ್ಷೇತ್ರ-ಶಿವೋತ್ಸವಾದಿದರ್ಶನಾಪೇಕ್ಷಿಗಳಿಗೂ, ಶಿವಯಾತ್ರಿಕರಿಗೂ ಮಾರ್ಗದಲ್ಲಿ ಅನ್ನದಾನವನ್ನೂ ಜಲದಾನವನ್ನೂ ಮಾಡಬೇಕು. ॥೪೭॥ ಅನ್ನದಾನಜಲದಾನಗಳಿಗೆ ಸಮಾನವಾದ ದಾನವಾವುದೂ ಇಲ್ಲ; ಅಹಿಂಸೆಗಿಂತಲೂ ಶ್ರೇಷ್ಠವಾದ ತಪಸ್ಸು ಇಲ್ಲ; ಆದುದರಿಂದ ಶಿವಭಕ್ತರು ಪ್ರತಿದಿವಸವೂ ಅನ್ನೋದಕಗಳನ್ನು ದಾನಮಾಡಬೇಕು. ॥೪೮॥ ಶಿವವ್ರತವುಳ್ಳ ಶಿವಭಕ್ತರು ಯಾವಾಗಲೂ ಸ್ವಧರ್ಮಾಚಾರಶೀಲರಾದ ತಮ್ಮ ತಮ್ಮ ಸಂಪ್ರದಾಯಾನುಗತಜಾತಿಯವರಲ್ಲಿಯೇ ಕನ್ಯೆಯನ್ನು ಕೊಡುವುದನ್ನೂ ತರುವುದನ್ನೂ ಮಾಡಿಕೊಳ್ಳಬೇಕು. ಲಿಂಗಧಾರಿಗಳಾಗಿದ್ದರೂ ತಮ್ಮ ಜಾತಿಗೆ ಭಿನ್ನವಾದ ಜಾತಿಯವರಲ್ಲಿ ತರಲೂಬಾರದು; ಮತ್ತು ಕೊಡಲೂಬಾರದು; ಎಂದು ಭಾವವು. ॥೪೯॥

೧೦ ಉಭಯಸ್ಥಲಂ

ಏವಮಾಚಾರಸಂಯುಕ್ತೋ ವೀರಶೈವೋ ಮಹಾವ್ರತೀ ।
ಪೂಜಯೇತ್ಪರಯಾ ಭಕ್ತ್ಯಾ ಗುರುಂ ಲಿಂಗಂ ಚ ಸಂತತಂ ॥೫೦॥
ಗುರೋರಭ್ಯರ್ಚನೇನಾಪಿ ಸಾಕ್ಷಾದಭ್ಯರ್ಚಿತಃ ಶಿವಃ ।
ನಾಸ್ತಿ ಭೇದಸ್ತಯೋಃ ಕಶ್ಚಿದೇಕತ್ವಾತ್ತತ್ತ್ವರೂಪತಃ ॥೫೧॥
ಯಥಾ ದೇವೇ ಜಗನ್ನಾಥೇ ಸರ್ವಾನುಗ್ರಹಕಾರಕೇ ।
ತಥಾ ಗುರುವರೇ ಕುರ್ಯಾದುಪಚಾರಾನ್ ದಿನೇ ದಿನೇ ॥೫೨॥
ಅಪ್ರತ್ಯಕ್ಷೋ ಮಹಾದೇವಃ ಸರ್ವೇಷಾಮಾತ್ಮಮಾಯಯಾ ।
ಪ್ರತ್ಯಕ್ಷೋ ಗುರುರೂಪೇಣ ವರ್ತತೇ ಭಕ್ತಿಸಿದ್ಧಯೇ ॥೫೩॥
ಶಿವಜ್ಞಾನಂ ಮಹಾಘೋರಸಂಸಾರಾರ್ಣವತಾರಕಂ ।
ದೀಯತೇ ಯೇನ ಸ ಗುರುಃ ಕಸ್ಯ ವಂದ್ಯೋ ನ ಜಾಯತೇ ॥೫೪॥

---

೧೦ ಉಭಯಸ್ಥಲ

ಈ ಪ್ರಕಾರವಾದ ಧರ್ಮಾಚರಣೆಗಳಿಂದ ಕೂಡಿದ ವೀರಶೈವನು ಗುರುವನ್ನೂ, ಲಿಂಗವನ್ನೂ ಯಾವಾಗಲೂ ಅಸಾಧಾರಣವಾದ ಭಕ್ತಿಯಿಂದ ಪೂಜಿಸಬೇಕು. ॥೫೦॥ ಗುರುವನ್ನು ಪೂಜಿಸುವುದರಿಂದ ಶಿವನು ಪ್ರತ್ಯಕ್ಷವಾಗಿ ಪೂಜಿಸಲ್ಪಟ್ಟಂತಾಗುವನು. ಗುರು ಮತ್ತು ಶಿವ ಇವರಿಬ್ಬರೂ ಒಂದೇ ಸ್ವರೂಪಿಗಳಾಗಿರುವುದರಿಂದ ಇವರಲ್ಲಿ ಸ್ವಲ್ಪವೂ ಭೇದವಿರುವುದಿಲ್ಲ. "ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ ॥" ಎಂಬ ಶ್ವೇತಾಶ್ವತರಶ್ರುತಿಯು ಇದೇ ವಿಷಯವನ್ನು ಬೋಧಿಸುವುದು. ॥೫೧॥ ಜಗತ್ಪತಿಯೂ, ಸರ್ವಾನುಗ್ರಹಕಾರಿಯೂ ಆದ ಶಿವನನ್ನು ಪ್ರತಿದಿವಸವೂ ಉಪಚಾರಪೂರ್ವಕವಾಗಿ ಪೂಜಿಸುವಂತೆ, ಗುರುವರ್ಯನನ್ನೂ ಪೂಜಿಸಬೇಕು. ॥೫೨॥ ಶಿವನು ತನ್ನ ಮಾಯೆಯಿಂದ ಸರ್ವರಿಗೂ ಪ್ರತ್ಯಕ್ಷನಾಗದಿದ್ದರೂ, ಭಕ್ತಿಸಿದ್ಧಿಗಾಗಿ ಗುರುರೂಪದಿಂದ ಪ್ರತ್ಯಕ್ಷನಾಗಿದ್ದಾನೆ. ॥೫೩॥ ಮಹಾಘೋರವಾದ ಸಂಸಾರವೆಂಬ ಸಮುದ್ರವನ್ನು ದಾಟಿಸುವ ಶಿವಜ್ಞಾನವು ಯಾವನಿಂದ ಅನುಗ್ರಹಿಸಲ್ಪಡುವುದೋ, ಆ ಗುರುವು ಯಾವನಿಗೆ ಪೂಜ್ಯನಾಗುವುದಿಲ್ಲ? ॥೫೪॥ ಯಾವನ ಕೃಪಾಕಟಾಕ್ಷಮಾತ್ರದಿಂದ ಪರಮಾನಂದರೂಪವಾದ ಶಿವ

ಯತ್ಕಟಾಕ್ಷಕಲಾಮಾತ್ರಾತ್ ಪರಮಾನಂದಲಕ್ಷಣಂ ।
ಲಭ್ಯತೇ ಶಿವರೂಪತ್ವಂ ಸ ಗುರುಃ ಕೇನ ನಾರ್ಚ್ಯತೇ ॥೫೫॥

ಹಿತಮೇವ ಚರೇನ್ನಿತ್ಯಂ ಶರೀರೇಣ ಧನೇನ ಚ ।
ಆಚಾರ್ಯಸ್ಯೋಪಶಾಂತಸ್ಯ ಶಿವಜ್ಞಾನಮಹಾನಿಧೇಃ ॥೫೬॥

ಗುರೋರಾಜ್ಞಾಂ ನ ಲಂಘೇತ ಸಿದ್ಧಿಕಾಮೋ ಮಹಾಮತಿಃ ।
ತದಾಜ್ಞಾಲಂಘನೇನಾಪಿ ಶಿವಾಜ್ಞಾಚ್ಛೇದಕೋ ಭವೇತ್ ॥೫೭॥

೧೧ ತ್ರಿವಿಧಸಂಪತ್ತಿಸ್ಥಲಂ

ಯಥಾ ಗುರೌ ಯಥಾ ಲಿಂಗೇ ಭಕ್ತಿಮಾನ್ ಪರಿವರ್ತತೇ ।
ಜಂಗಮೇ ಚ ತಥಾ ನಿತ್ಯಂ ಭಕ್ತಿಂ ಕುರ್ಯಾದ್ವಿಚಕ್ಷಣಃ ॥೫೮॥

ಏಕ ಏವ ಶಿವಃ ಸಾಕ್ಷಾತ್ಸರ್ವಾನುಗ್ರಹಕಾರಕಃ ।
ಗುರುಜಂಗಮಲಿಂಗಾತ್ಮಾ ವರ್ತತೇ ಭುಕ್ತಿಮುಕ್ತಿದಃ ॥೫೯॥

ಲಿಂಗಂ ಚ ದ್ವಿವಿಧಂ ಪ್ರೋಕ್ತಂ ಜಂಗಮಾಜಂಗಮಾತ್ಮನಾ ।
ಅಜಂಗಮೇ ಯಥಾ ಭಕ್ತಿರ್ಜಂಗಮೇ ಚ ತಥಾ ಸ್ಮೃತಾ ॥೬೦॥

ಸ್ವರೂಪವು ಪ್ರಾಪ್ತವಾಗುವುದೋ, ಆ ಗುರುವು ಯಾವನಿಂದ ಪೂಜಿಸಲ್ಪಡುವುದಿಲ್ಲ? ಸರ್ವರಿಗೂ ಪೂಜ್ಯನಾಗುವನೆಂದು ಭಾವವು. ॥೫೫॥ ಶಿವಭಕ್ತನು ರಾಗದ್ವೇಷಾದಿ ಶೂನ್ಯನೂ, ಶಿವಜ್ಞಾನಸಮುದ್ರನೂ ಆದ ಶ್ರೀಗುರುವಿಗೆ ಶರೀರದಿಂದಲೂ ಧನದಿಂದಲೂ ನಿತ್ಯದಲ್ಲಿ ಹಿತವನ್ನಾಚರಿಸಬೇಕು. ॥೫೬॥ ಸಿದ್ಧಿಯನ್ನು ಬಯಸುವ ವಿವೇಕಿಯು ಗುರುವಿನ ಆಜ್ಞೆಯನ್ನು ಮೀರಬಾರದು. ಗುರುವಿನ ಆಜ್ಞೆಯನ್ನು ಮೀರಿದರೆ ಶಿವಾಜ್ಞಾಭಂಗಕಾರಕನಾಗುವನು. ॥೫೭॥

೧೧ ತ್ರಿವಿಧಸಂಪತ್ತಿಸ್ಥಲ

ಭಕ್ತಿಸಂಪನ್ನನಾದ ವಿವೇಕಿಯು ಗುರುವಿನಲ್ಲಿಯೂ, ಲಿಂಗದಲ್ಲಿಯೂ ಹೇಗೆ ಭಕ್ತಿಯನ್ನಿಟ್ಟು ವರ್ತಿಸುವನೋ, ಹಾಗೆಯೇ ಜಂಗಮನಲ್ಲಿಯೂ ನಿತ್ಯದಲ್ಲಿ ಭಕ್ತಿಯನ್ನಿಟ್ಟು ವರ್ತಿಸಬೇಕು. ॥೫೮॥ ಸಕಲಭಕ್ತರಿಗೆ ಅನುಗ್ರಹವನ್ನುಂಟುಮಾಡುವವನೂ, ಭೋಗಮೋಕ್ಷಗಳನ್ನನುಗ್ರಹಿಸುವವನೂ, ಒಬ್ಬನೇ ಒಬ್ಬನೂ ಆದ ಶಿವನು ಪ್ರತ್ಯಕ್ಷನಾಗಿ ಗುರುಲಿಂಗಜಂಗಮಸ್ವರೂಪನಾಗಿದ್ದಾನೆ. ॥೫೯॥ ಲಿಂಗವು ಚರ-ಸ್ಥಿರ ಎಂಬ ಭೇದದಿಂದ ಎರಡು ವಿಧವಾಗಿರುವುದು. ಸ್ಥಿರಲಿಂಗದಲ್ಲಿ ಹೇಗೆ ಭಕ್ತಿಯನ್ನಿಡಬೇಕೋ, ಹಾಗೆಯೇ ಚರಲಿಂಗದಲ್ಲಿಯೂ ಭಕ್ತಿಯನ್ನಿಡಬೇಕು. ॥೬೦॥

ಅಜಂಗಮಂ ತು ಯಲ್ಲಿಂಗಂ ಮೃಚ್ಛಿಲಾದಿವಿನಿರ್ಮಿತಂ ।
ತದ್ವರಂ ಜಂಗಮಂ ಲಿಂಗಂ ಶಿವಯೋಗೀತಿ ವಿಶ್ರುತಂ ॥೬೧॥

ಅಚರೇ ಮಂತ್ರಸಂಸ್ಕಾರಾಲ್ಲಿಂಗೇ ವಸತಿ ಶಂಕರಃ ।
ಸದಾಕಾಲಂ ವಸತ್ಯೇವ ಚರಲಿಂಗೇ ಮಹೇಶ್ವರಃ ॥೬೨॥

ಶಿವಯೋಗಿನಿ ಯದ್ದತ್ತಂ ತದಕ್ಷಯಫಲಂ ಭವೇತ್ ।
ತಸ್ಮಾತ್ಸರ್ವಪ್ರಯತ್ನೇನ ತಸ್ಮೈ ದೇಯಂ ಮಹಾತ್ಮನೇ ॥೬೩॥

ಯತ್ಫಲಂ ಲಭತೇ ಜಂತುಃ ಪೂಜಯಾ ಶಿವಯೋಗಿನಃ ।
ತದಕ್ಷಯಮಿತಿ ಪ್ರೋಕ್ತಂ ಸಕಲಾಗಮಪಾರಗೈಃ ॥೬೪॥

ನಾವಮನ್ಯೇತ ಕುತ್ರಾಪಿ ಶಿವಯೋಗಿನಮಾಗತಂ ।
ಅವಮಾನಾದ್ಭವೇತ್ತಸ್ಯ ದುರ್ಗತಿಶ್ಚ ನ ಸಂಶಯಃ ॥೬೫॥

ಶಿವಯೋಗೀ ಶಿವಃ ಸಾಕ್ಷಾದಿತಿ ಕೈಂಕರ್ಯಭಕ್ತಿತಃ ।
ಪೂಜಯೇದಾದರೇಣೈವ ಯಥಾ ಲಿಂಗಂ ಯಥಾ ಗುರುಂ ॥೬೬॥

ಯಾವ ಲಿಂಗವು ಮಣ್ಣು, ಕಲ್ಲು ಮೊದಲಾದವುಗಳಿಂದ ನಿರ್ಮಿತವಾಗಿರುವುದೋ ಅದು ಸ್ಥಿರಲಿಂಗವೆನಿಸುವುದು. ಆ ಸ್ಥಿರಲಿಂಗಕ್ಕಿಂತಲೂ ಶಿವಯೋಗಿಯೆಂದು ಸುಪ್ರಸಿದ್ಧವಾದ ಚರಲಿಂಗವು (ಗುರುಸ್ಥಲದ ಚರಮೂರ್ತಿಯು) ಶ್ರೇಷ್ಠವಾಗಿರುವುದು. ॥೬೧॥ ಸ್ಥಿರಲಿಂಗದಲ್ಲಿ ಶಿವನು ಮಂತ್ರಸಂಸ್ಕಾರದಿಂದ ಮಾತ್ರ ವಾಸಿಸುತ್ತಾನೆ; ಚರಲಿಂಗದಲ್ಲಿ ಶಿವನು ಯಾವಾಗಲೂ ವಾಸಿಸುತ್ತಾನೆ. ॥೬೨॥ ಶಿವಯೋಗಿಗೆ ಯಾವುದು ದಾನಮಾಡಲ್ಪಡುವುದೋ ಅದು ಅಕ್ಷಯಫಲವುಳ್ಳದಾಗುವುದು. ಆದುದರಿಂದ ಸರ್ವಪ್ರಯತ್ನದಿಂದಲೂ ಮಹಾತ್ಮನಾದ ಶಿವಯೋಗಿಗೆ ದಾನವನ್ನು ಮಾಡಬೇಕು. ॥೬೩॥ ಶಿವಯೋಗಿಯ ಪೂಜೆಯಿಂದ ಮಾನವನು ಯಾವ ಫಲವನ್ನು ಪಡೆಯುವನೋ, ಆ ಫಲವು ನಾಶರಹಿತವಾದುದೆಂದು ಸಕಲಶಾಸ್ತ್ರಪ್ರವೀಣರು ಹೇಳುತ್ತಿರುವರು. ॥೬೪॥ ಅಕಸ್ಮಾತ್ ಆಗಮಿಸಿದ ಶಿವಯೋಗಿಗೆ ಎಲ್ಲಿಯೂ ಅವಮಾನವನ್ನು ಮಾಡಬಾರದು; ಆ ಶಿವಯೋಗಿಗೆ ಅವಮಾನವನ್ನು ಮಾಡಿದ್ದಾದರೆ ನಿಶ್ಚಯವಾಗಿಯೂ ದುರ್ಗತಿಯು ಪ್ರಾಪ್ತವಾಗುವುದು. ॥೬೫॥ ಲಿಂಗವನ್ನೂ ಗುರುವನ್ನೂ ಹೇಗೆ ಆದರಪೂರ್ವಕವಾಗಿ ಪೂಜಿಸಬೇಕೋ, ಹಾಗೆಯೇ ಶಿವಯೋಗಿಯನ್ನೂ ಸಾಕ್ಷಾತ್ ಶಿವನೆಂದು ತಿಳಿದು ಕಿಂಕರಭಾವದಿಂದ ಪೂಜಿಸಬೇಕು. ॥೬೬॥

೧೨ ಪ್ರಸಾದಸ್ವೀಕಾರಸ್ಥಲಂ

ಪಾದೋದಕಂ ಯಥಾ ಭಕ್ತ್ಯಾ ಸ್ವೀಕರೋತಿ ಮಹೇಶಿತುಃ ।
ತಥಾ ಶಿವಾತ್ಮನೋರ್ನಿತ್ಯಂ ಗುರುಜಂಗಮಯೋರಪಿ ॥೬೭॥

ಸರ್ವಮಂಗಲಮಾಂಗಲ್ಯಂ ಸರ್ವಪಾವನಪಾವನಂ ।
ಸರ್ವಸಿದ್ಧಿಕರಂ ಪುಂಸಾಂ ಶಂಭೋಃ ಪಾದಾಂಬುಧಾರಣಂ ॥೬೮॥

ಶಿರಸಾ ಧಾರಯೇದ್ಯಸ್ತು ಪತ್ರಂ ಪುಷ್ಪಂ ಶಿವಾರ್ಪಿತಂ ।
ಪ್ರತಿಕ್ಷಣಂ ಭವೇತ್ತಸ್ಯ ಪೌಂಡರೀಕಕ್ರಿಯಾಫಲಂ ॥೬೯॥

ಭುಂಜೀತ ರುದ್ರಭುಕ್ತಾನ್ನಂ ರುದ್ರಪೀತಂ ಜಲಂ ಪಿಬೇತ್ ।
ರುದ್ರಾಘ್ರಾತಂ ಸದಾ ಜಿಘ್ರೇದಿತಿ ಜಾಬಾಲಿಕೀ ಶ್ರುತಿಃ ॥೭೦॥

ಅರ್ಪಯಿತ್ವಾ ನಿಜೇ ಲಿಂಗೇ ಪತ್ರಂ ಪುಷ್ಪಂ ಫಲಂ ಜಲಂ ।
ಅನ್ನಾದ್ಯಂ ಸರ್ವಭೋಜ್ಯಂ ಚ ಸ್ವೀಕುರ್ಯಾದ್ಭಕ್ತಿಮಾನ್ನರಃ ॥೭೧॥

---

೧೨ ಪ್ರಸಾದಸ್ವೀಕಾರಸ್ಥಲ

ಶಿವಭಕ್ತನು ಶಿವನ ಪಾದೋದಕವನ್ನು ಹೇಗೆ ಭಕ್ತಿಯಿಂದ ಸ್ವೀಕರಿಸುವನೋ, ಹಾಗೆಯೇ ಶಿವಸ್ವರೂಪರಾದ ಗುರುಜಂಗಮರ ಪಾದೋದಕವನ್ನೂ ನಿತ್ಯವಲ್ಲಿ ಸ್ವೀಕರಿಸಬೇಕು. ॥೬೭॥ ಸರ್ವಮಂಗಲಗಳಿಗೆ ಮಂಗಲವೂ ಸರ್ವಪಾವನಗಳಿಗೆ ಪಾವನವೂ ಆದ ಶಿವಪಾದೋದಕಸೇವನವು ಮಾನವರಿಗೆ ಸಕಲಸಿದ್ಧಿಗಳನ್ನು ಅನುಗ್ರಹಿಸುವಂಥದಾಗಿರುವುದು. ॥೬೮॥ ಶಿವನಿಗೆ ಸಮರ್ಪಿಸಿದ ಪತ್ರಪುಷ್ಪಗಳನ್ನು ಯಾವನು ಶಿರಸ್ಸಿನಲ್ಲಿ ಧರಿಸುವನೋ, ಅವನಿಗೆ ಪೌಂಡರೀಕಯಾಗದ ಫಲವು ಪ್ರತಿ ಕ್ಷಣದಲ್ಲಿಯೂ ಪ್ರಾಪ್ತವಾಗುವುದು. ॥೬೯॥ ಶಿವಭಕ್ತನು ಶಿವನು ಉಂಡ ಅನ್ನವನ್ನು ಉಣ್ಣಬೇಕು; ಶಿವನು ಕುಡಿದ ಜಲವನ್ನು ಕುಡಿಯಬೇಕು; ಶಿವನು ಆಘ್ರಾಣಿಸಿದ ವಸ್ತುವನ್ನು ಆಘ್ರಾಣಿಸಬೇಕು. ಎಂದು ಜಾಬಾಲಶ್ರುತಿಯು ಸಾರುತ್ತಿರುವುದು. “ರುದ್ರೇಣಾತ್ತಮಶ್ನಂತಿ ರುದ್ರೇಣ ಪೀತಂ ಪಿಬಂತಿ ರುದ್ರೇಣಾಘ್ರಾತಂ ಜಿಘ್ರಂತಿ” ಈ ರೀತಿಯಾಗಿ ಜಾಬಾಲಶ್ರುತಿಯ ವಾಕ್ಯವಿರುವುದು. ॥೭೦॥ ಶಿವಭಕ್ತಿಯುಳ್ಳ ಮಾನವನು ತನ್ನ ಇಷ್ಟಲಿಂಗಕ್ಕೆ ಪತ್ರವನ್ನೂ, ಪುಷ್ಪವನ್ನೂ, ಫಲವನ್ನೂ, ಜಲವನ್ನೂ, ಅನ್ನಾದಿಸರ್ವಭೋಜ್ಯವಸ್ತುಗಳನ್ನೂ ಸಮರ್ಪಿಸಿ ಸ್ವೀಕರಿಸಬೇಕು. ॥೭೧॥

ಗುರುತ್ವಾತ್ಸರ್ವಲೋಕಾನಾಂ ಶಂಭೋರಮಿತತೇಜಸಃ ।
ತಸ್ಮೈ ನಿವೇದಿತಂ ಸರ್ವಂ ಸ್ವೀಕಾರ್ಯಂ ತತ್ಪರಾಯಣೈಃ ॥೭೨॥

ಯೇ ಲಿಂಗಧಾರಿಣೋ ಲೋಕೇ ಯೇ ಶಿವೈಕಪರಾಯಣಾಃ ।
ತೇಷಾಂ ತು ಶಿವನಿರ್ಮಾಲ್ಯಮುಚಿತಂ ನಾನ್ಯಜಂತುಷು ॥೭೩॥

ಅನ್ನಜಾತೇ ತು ಭಕ್ತೇನ ಭುಜ್ಯಮಾನೇ ಶಿವಾರ್ಪಿತೇ ।
ಸಿಕ್ಥೇ ಸಿಕ್ಥೇಽಶ್ವಮೇಧಸ್ಯ ಯತ್ಫಲಂ ತದವಾಪ್ಯತೇ ॥೭೪॥

ನಿರ್ಮಾಲ್ಯಂ ನಿರ್ಮಲಂ ಶುದ್ಧಂ ಶಿವೇನ ಸ್ವೀಕೃತಂ ಯತಃ ।
ನಿರ್ಮಲೈಸ್ತತ್ಪರೈರ್ಧಾರ್ಯಂ ನಾನ್ಯೈಃ ಪ್ರಾಕೃತಜಂತುಭಿಃ ॥೭೫॥

ಶಿವಭಕ್ತಿವಿಹೀನಾನಾಂ ಜಂತೂನಾಂ ಪಾಪಕರ್ಮಣಾಂ ।
ವಿಶುದ್ಧೇ ಶಿವನಿರ್ಮಾಲ್ಯೇ ನಾಧಿಕಾರೋಽಸ್ತಿ ಕುತ್ರಚಿತ್ ॥೭೬॥

ಶಿವಲಿಂಗಪ್ರಸಾದಸ್ಯ ಸ್ವೀಕಾರಾದ್ಯತ್ಫಲಂ ಭವೇತ್ ।
ತಥಾ ಪ್ರಸಾದಸ್ವೀಕಾರಾದ್ಗುರುಜಂಗಮಯೋರಪಿ ॥೭೭॥

ಅಪಾರವಾದ ತೇಜಸ್ಸುಳ್ಳ ಶಿವನು ಸಮಸ್ತಲೋಕಗಳಿಗೂ ಗುರುವಾಗಿರುವುದರಿಂದ, ಶಿವಭಕ್ತಿಪರಾಯಣರು ತಾವು ಉಪಭೋಗಿಸುವ ಸಮಸ್ತಪದಾರ್ಥಗಳನ್ನೂ ಶಿವನಿಗೆ ಸಮರ್ಪಿಸಿ ಸ್ವೀಕರಿಸಬೇಕು. ॥೭೨॥ ಯಾರು ಲಿಂಗಧಾರಿಗಳೋ, ಯಾರು ಈ ಲೋಕದಲ್ಲಿ ಶಿವಭಕ್ತಿಪರಾಯಣರೋ ಅವರಿಗೆ ಮಾತ್ರ ಶಿವನಿರ್ಮಾಲ್ಯವು ಯೋಗ್ಯವಾಗಿದೆ. ಅನ್ಯರಿಗೆ ಯೋಗ್ಯವಾಗುವುದಿಲ್ಲ. ॥೭೩॥ ಶಿವಭಕ್ತನು ಶಿವಾರ್ಪಿತವಾದ ಅನ್ನವನ್ನು ಸೇವಿಸಿದ್ದಾದರೆ, ಅಶ್ವಮೇಧಯಜ್ಞದಿಂದ ಯಾವ ಫಲವು ದೊರೆಯುವುದೋ, ಆ ಫಲವು ಶಿವಾರ್ಪಿತಾನ್ನದ ಒಂದೊಂದು ಅಗಳಿನಲ್ಲಿಯೂ ದೊರೆಯುವುದು. ॥೭೪॥ ಶಿವಾರ್ಪಿತವೂ, ನಿರ್ಮಲವೂ, ಪರಿಶುದ್ಧವೂ ಆದ ನಿರ್ಮಾಲ್ಯವನ್ನು ನಿರ್ಮಾಲ್ಯತತ್ಪರರಾದ ಶಿವಭಕ್ತರು ಸ್ವೀಕರಿಸಬೇಕು. ಶಿವದೀಕ್ಷಾರಹಿತರಾದ ಪ್ರಾಕೃತರು ಶಿವನಿರ್ಮಾಲ್ಯವನ್ನು ಸ್ವೀಕರಿಸಬಾರದು. ॥೭೫॥ ಶಿವಭಕ್ತಿವಿಹೀನರೂ ಪಾಪಕರ್ಮಿಗಳೂ ಆದ ಮಾನವರಿಗೆ ಪವಿತ್ರವಾದ ಶಿವನಿರ್ಮಾಲ್ಯದಲ್ಲಿ ಎಂದೂ ಅಧಿಕಾರವಿರುವುದಿಲ್ಲ. ॥೭೬॥ ಶಿವಲಿಂಗಪ್ರಸಾದ ಸ್ವೀಕಾರದಿಂದ ಯಾವ ಫಲವು ಪ್ರಾಪ್ತವಾಗುವುದೋ, ಆ ಫಲವು ಗುರುಜಂಗಮರ ಪ್ರಸಾದಸ್ವೀಕಾರದಿಂದ ಪ್ರಾಪ್ತವಾಗುವುದು. ॥೭೭॥ ಆದುದರಿಂದ ಶಿವನನ್ನೂ, ಗುರು

ತಸ್ಮಾದ್ಗುರುಂ ಮಹಾದೇವಂ ಶಿವಯೋಗಿನಮೇವ ಚ ।
ಪೂಜಯೇತ್ತತ್ಪ್ರಸಾದಾನ್ನಂ ಭುಂಜೀತ ಪ್ರತಿವಾಸರಂ ॥೭೮॥

೧೩ ಸೋಪಾಧಿದಾನಸ್ಥಲಂ

ಶಿವಲಿಂಗೇ ಶಿವಾಚಾರ್ಯೇ ಶಿವಯೋಗಿನಿ ಭಕ್ತಿಮಾನ್ ।
ದಾನಂ ಕುರ್ಯಾದ್ಯಥಾಶಕ್ತಿ ತತ್ಪ್ರಸಾದಯುತಃ ಸದಾ ॥೭೯॥

ದಾನಂ ತು ತ್ರಿವಿಧಂ ಪ್ರೋಕ್ತಂ ಸೋಪಾಧಿ ನಿರುಪಾಧಿಕಂ ।
ಸಹಜಂ ಚೇತಿ ತಂತ್ರೇಷು ಸರ್ವತಂತ್ರವಿಶಾರದೈಃ ॥೮೦॥

ಫಲಾಭಿಸಂಧಿಸಂಯುಕ್ತಂ ದಾನಂ ಯದ್ವಿಹಿತಂ ಭವೇತ್ ।
ತತ್ಸೋಪಾಧಿಕಮಾಖ್ಯಾತಂ ಮುಮುಕ್ಷುಭಿರನಾದೃತಂ ॥೮೧॥

೧೪ ನಿರುಪಾಧಿದಾನಸ್ಥಲಂ

ಫಲಾಭಿಸಂಧಿನಿರ್ಮುಕ್ತಮೀಶ್ವರಾರ್ಪಿತಕಾಂಕ್ಷಿತಂ ।
ನಿರುಪಾಧಿಕಮಾಖ್ಯಾತಂ ದಾನಂ ದಾನವಿಶಾರದೈಃ ॥೮೨॥

ವನ್ನೂ, ಜಂಗಮನನ್ನೂ ಪೂಜಿಸಬೇಕು; ಮತ್ತು ಅವರ ಪ್ರಸಾದಾನ್ನವನ್ನೂ ಪ್ರತಿ ದಿವಸವೂ ಸೇವಿಸಬೇಕು. ॥೭೮॥

೧೩ ಸೋಪಾಧಿದಾನಸ್ಥಲ

ಶಿವಭಕ್ತನು ಗುರುಲಿಂಗಜಂಗಮರ ಪ್ರಸಾದವನ್ನು ಸ್ವೀಕರಿಸುವಂಥವನಾಗಿ ಶಿವಲಿಂಗ (ಲಿಂಗ) ದಲ್ಲಿಯೂ, ಶಿವಾಚಾರ್ಯ (ಗುರು) ನಲ್ಲಿಯೂ, ಶಿವಯೋಗಿ (ಜಂಗಮ) ಯಲ್ಲಿಯೂ, ಯಾವಾಗಲೂ ತನ್ನ ಶಕ್ತ್ಯನುಸಾರವಾಗಿ ದಾನವನ್ನು ಮಾಡಬೇಕು. ॥೭೯॥ ದಾನವು ಸೋಪಾಧಿದಾನ-ನಿರುಪಾಧಿದಾನ-ಸಹಜದಾನವೆಂದು ಮೂರುಪ್ರಕಾರವಾಗಿರುವುದಾಗಿ ತಂತ್ರಶಾಸ್ತ್ರವಿಶಾರದರು ಹೇಳುತ್ತಿರುವರು. ॥೮೦॥ ಯಾವ ದಾನವು ಫಲಾಭಿಲಾಷೆಯಿಂದ ಕೂಡಿರುವುದೋ, ಆ ದಾನವು ಸೋಪಾಧಿದಾನ ವೆನಿಸುವುದು. ಈ ಸೋಪಾಧಿದಾನವು ಮೋಕ್ಷಾಪೇಕ್ಷಿಗಳಿಗೆ ತಿರಸ್ಕೃತವಾಗಿರು ವುದು. ॥೮೧॥

೧೪ ನಿರುಪಾಧಿದಾನಸ್ಥಲ

ಯಾವ ದಾನವು ಫಲಾಭಿಲಾಷಶೂನ್ಯವಾದುದೂ, ಈಶ್ವರಾರ್ಪಣಾಭಿಲಾಷ ವುಳ್ಳುದೂ ಆಗಿರುವದೋ, ಆ ದಾನವನ್ನು ದಾನವಿಶಾರದರು ನಿರುಪಾಧಿಕದಾನವೆಂದು ಹೇಳುವರು. ॥೮೨॥

೧೫ ಸಹಜದಾನಸ್ಥಲಂ

ಆದಾತೃದಾತೃದೇಯಾನಾಂ ಶಿವಭಾವಂ ವಿಚಿಂತ್ಯ ಹಿ ।
ಆತ್ಮನೋಽಕರ್ತೃಭಾವಂ ಚ ಯದ್ದತ್ತಂ ಸಹಜಂ ತು ತತ್ ॥೮೩॥

ಸಹಜಂ ದಾನಮುತ್ಕೃಷ್ಟಂ ಸರ್ವದಾನೋತ್ತಮೋತ್ತಮಂ ।
ಶಿವಜ್ಞಾನಪ್ರದಂ ಪುಂಸಾಂ ಜನ್ಮರೋಗನಿವರ್ತಕಂ ॥೮೪॥

ಶಿವಾಯ ಶಿವಭಕ್ತಾಯ ದೀಯತೇ ಯದಿ ಕಿಂಚನ ।
ಭಕ್ತ್ಯಾ ತದಪಿ ವಿಖ್ಯಾತಂ ಸಹಜಂ ದಾನಮುತ್ತಮಂ ॥೮೫॥

ದಾನಾತ್ ಸ್ವರ್ಣಸಹಸ್ರಸ್ಯ ಸತ್ಪಾತ್ರೇ ಯತ್ಫಲಂ ಭವೇತ್ ।
ಏಕಪುಷ್ಪಪ್ರದಾನೇನ ಶಿವೇ ತತ್ಫಲಮಿಷ್ಯತೇ ॥೮೬॥

ಶಿವ ಏವ ಪರಂ ಪಾತ್ರಂ ಸರ್ವವಿದ್ಯಾನಿಧಿರ್ಗುರುಃ ।
ತಸ್ಮೈ ದತ್ತಂ ತು ಯತ್ಕಿಂಚಿತ್ತದನಂತಫಲಂ ಭವೇತ್ ॥೮೭॥

---

೧೫ ಸಹಜದಾನಸ್ಥಲ

ದಾನವನ್ನು ತೆಗೆದುಕೊಳ್ಳುವವರಲ್ಲಿಯೂ, ಕೊಡುವವರಲ್ಲಿಯೂ, ದೇಯವಸ್ತುಗಳಲ್ಲಿಯೂ ಶಿವಸ್ವರೂಪವನ್ನು ಭಾವಿಸಿಯೂ, ತಾನು ದಾನಮಾಡುವವನಲ್ಲವೆಂಬ ಭಾವವನ್ನು ಬಲಿಸಿಯೂ ಮಾಡಲ್ಪಟ್ಟ ದಾನವು ಸಹಜದಾನವೆನಿಸುವುದು. ॥೮೩॥ ಈ ತ್ರಿವಿಧದಾನಗಳಲ್ಲಿ ಸಹಜದಾನವು ಶ್ರೇಷ್ಠವಾಗಿದ್ದು, ಸರ್ವದಾನೋತ್ತಮೋತ್ತಮವಾಗಿರುವುದು. ಈ ಸಹಜದಾನವು ಮಾನವರಿಗೆ ಶಿವಜ್ಞಾನವನ್ನುಂಟುಮಾಡತಕ್ಕುದೂ, ಜನನಮರಣರೂಪರೋಗನಿವಾರಕವಾದುದೂ ಆಗಿರುವುದು. ॥೮೪॥ ಸ್ಥಾವರಲಿಂಗರೂಪನಾದ ಶಿವನಿಗೂ ಮಾಹೇಶ್ವರನಿಗೂ ಭಕ್ತಿಯಿಂದ ಯಾವ ದಾನವು ಮಾಡಲ್ಪಡುವುದೋ, ಆ ದಾನವು ಶ್ರೇಷ್ಠವಾದ ಸಹಜದಾನವೆಂದು ಪ್ರಸಿದ್ಧವಾಗಿರುವುದು. ॥೮೫॥ ಸತ್ಪಾತ್ರದಲ್ಲಿ ಸಾವಿರಗಟ್ಟಲೆಯಾಗಿ ಸುವರ್ಣವರಹಗಳನ್ನು ದಾನಮಾಡುವುದರಿಂದ ಯಾವ ಫಲವು ಪ್ರಾಪ್ತವಾಗುವುದೋ, ಆ ಫಲವು ಶಿವನಿಗೆ ಒಂದು ಪುಷ್ಪವನ್ನು ದಾನಮಾಡುವುದರಿಂದ ಪ್ರಾಪ್ತವಾಗುವುದು. ॥೮೬॥ ಸರ್ವವಿದ್ಯಾನಿಧಿಯೂ ಗುರುವೂ ಆದ ಶಿವನೇ ದಾನಕ್ಕೆ ಅತ್ಯಂತಯೋಗ್ಯನಾಗಿದ್ದಾನೆ. ಶಿವನಿಗೆ ಸ್ವಲ್ಪ ದಾನವನ್ನು ಮಾಡಿದರೂ ಆ ದಾನವು ಅನಂತಫಲವುಳ್ಳುದಾಗುವುದು. ॥೮೭॥ ಶಿವಜ್ಞಾನಸಮುದ್ರ

ಶಿವಯೋಗೀ ಶಿವಃ ಸಾಕ್ಷಾಚ್ಛಿವಜ್ಞಾನಮಹೋದಧಿಃ ।
ಯತ್ಕಿಂಚಿದ್ದೀಯತೇ ತಸ್ಮೈ ತದ್ದಾನಂ ಪಾರಮಾರ್ಥಿಕಂ ॥೮೮॥
ಶಿವಯೋಗೀ ಮಹಾಪಾತ್ರಂ ಸರ್ವೇಷಾಂ ದಾನಕರ್ಮಣಿ ।
ತಸ್ಮಾನ್ನಾಸ್ತಿ ಪರಂ ಕಿಂಚಿತ್ಪಾತ್ರಂ ಶಾಸ್ತ್ರವಿಚಾರತಃ ॥೮೯॥
ಭಿಕ್ಷಾಮಾತ್ರಪ್ರದಾನೇನ ಶಾಂತಾಯ ಶಿವಯೋಗಿನೇ ।
ಯತ್ಫಲಂ ಲಭ್ಯತೇ ನೈತದ್ಯಜ್ಞಕೋಟಿಶತೈರಪಿ ॥೯೦॥
ಶಿವಯೋಗಿನಿ ಸಂತೃಪ್ತೇ ತೃಪ್ತೋ ಭವತಿ ಶಂಕರಃ ।
ತತ್ತೃಪ್ತ್ಯಾ ತನ್ಮಯಂ ವಿಶ್ವಂ ತೃಪ್ತಿಮೇತಿ ಚರಾಚರಂ ॥೯೧॥
ತಸ್ಮಾತ್ಸರ್ವಪ್ರಯತ್ನೇನ ಯೇನ ಕೇನಾಪಿ ಕರ್ಮಣಾ ।
ತೃಪ್ತಿಂ ಕುರ್ಯಾತ್ಸದಾಕಾಲಮನ್ನಾದ್ಯೈಃ ಶಿವಯೋಗಿನಃ ॥೯೨॥
ನಿರುಪಾಧಿಕಚಿದ್ರೂಪಪರಾನಂದಾತ್ಮವಸ್ತುನಿ ।
ಸಮರ್ಪಿತಂ ಸಕಲಂ ಯಸ್ಯ ಸ ದಾನೀ ಶಂಕರಃ ಸ್ವಯಂ ॥೯೩॥

ನಾದ ಜಂಗಮನು ಸಾಕ್ಷಾತ್ ಶಿವನಾಗಿರುವನು. ಇವನಿಗೆ ಸ್ವಲ್ಪದಾನವನ್ನು ಮಾಡಿದರೂ ಆ ದಾನವು ಪಾರಮಾರ್ಥಿಕವೆನಿಸುವುದು. ॥೮೮॥ ದಾನಕ್ರಿಯೆಯಲ್ಲಿ ಶಿವಯೋಗಿಯೇ ಉತ್ತಮಪಾತ್ರನಾಗಿದ್ದಾನೆ; ಅವನಿಗಿಂತಲೂ ಶ್ರೇಷ್ಠಪಾತ್ರವು ಶಾಸ್ತ್ರವಿಚಾರದಿಂದ ಯಾವುದೂ ಇರುವುದಿಲ್ಲ. ॥೮೯॥ ಶಾಂತನಾದ ಶಿವಯೋಗಿಗೆ ಭಿಕ್ಷೆಯನ್ನು ನೀಡುವುದರಿಂದ ಯಾವ ಫಲವು ಪ್ರಾಪ್ತವಾಗುವುದೋ, ಆ ಫಲವು ಅಬ್ಜ ಯಜ್ಞಗಳಿಂದಲೂ ಪ್ರಾಪ್ತವಾಗಲಾರದು. ॥೯೦॥ ಶಿವಯೋಗಿಯು ತೃಪ್ತನಾದರೆ ಶಿವನು ತೃಪ್ತನಾಗುವನು; ಶಿವನ ತೃಪ್ತಿಯಿಂದ ಶಿವಸ್ವರೂಪವಾದ ಚರಾಚರಾತ್ಮಕಜಗತ್ತು ತೃಪ್ತಿಯನ್ನು ಹೊಂದುವುದು. ॥೯೧॥ ಆದುದರಿಂದ ಸರ್ವಪ್ರಯತ್ನದಿಂದಲೂ, ಯಾವುದಾದರೊಂದು ಕ್ರಿಯೆಯಿಂದ ಶಿವಯೋಗಿಗೆ ಯಾವಾಗಲೂ ಅನ್ನಜಲಾದಿಗಳಿಂದ ತೃಪ್ತಿಯನ್ನುಂಟುಮಾಡಬೇಕು. ॥೯೨॥ ನಿರುಪಾಧಿಕನೂ ಜ್ಞಾನಾನಂದಮಯನೂ ಆದ ಪರಶಿವನಲ್ಲಿ ಯಾವ ಶಿವಭಕ್ತನ ಶರೀರ-ಧನ-ಪ್ರಾಣರೂಪಸಕಲವಸ್ತುಗಳು ಸಮರ್ಪಿಸಲ್ಪಡುವವೋ ಅವನೇ ಸಹಜದಾನಿಯೆನಿಸುವನಲ್ಲದೆ, ಸಾಕ್ಷಾತ್ ಶಿವನೂ ಆಗುವನು. ॥೯೩॥ ಸಮಸ್ತಧರ್ಮಾಚಾರಪರಾಯಣನೂ, ಬ್ರಹ್ಮಾದಿಸಂಪತ್ತುಗಳಲ್ಲಿ ವಿರಕ್ತಚಿತ್ತನೂ ಆದ ಶಿವಭಕ್ತನು ಯಾವಾಗಲೂ ಸಹಜದಾನವನ್ನು ಮಾಡುವವನಾಗಿ

ಉಕ್ತಾಖಿಲಾಚಾರಪರಾಯಣೋಽಸೌ
ಸದಾ ವಿತನ್ವನ್ ಸಹಜಂ ತು ದಾನಂ ।
ಬ್ರಹ್ಮಾದಿಸಂಪತ್ಸು ವಿರಕ್ತಚಿತ್ತೋ
ಭಕ್ತೋ ಹಿ ಮಾಹೇಶ್ವರತಾಮುಪೈತಿ ॥೯೪॥

ಇತಿ ಸಿದ್ಧಾಂತಶಿಖಾಮಣೌ ಭಕ್ತಸ್ಥಲೇ ಭಕ್ತಮಾರ್ಗ
ಕ್ರಿಯಾಸ್ಥಲಾದಿಸಪ್ತವಿಧಸ್ಥಲಪ್ರಸಂಗೋ ನಾಮ
ನವಮಪರಿಚ್ಛೇದಃ ಪರಿಸಮಾಪ್ತಃ

ಮಾಹೇಶ್ವರಸ್ಥಲವನ್ನು ಹೊಂದುವನು. ಭಕ್ತ-ಮಾಹೇಶ್ವರ-ಪ್ರಸಾದಿ-ಪ್ರಾಣಲಿಂಗಿ-ಶರಣ-ಐಕ್ಯ ಎಂಬೀ ಆರು ಶಬ್ದಗಳು ಜಾತಿವಾಚಕಗಳಾಗಿರವೆ, ಸ್ಥಲವಾಚಕಗಳಾಗಿರುವುವೆಂದು ತಿಳಿಯಬೇಕು. ॥೯೪॥

ಇಂತು ಶ್ರೀಸಿದ್ಧಾಂತಶಿಖಾಮಣಿಯ ಭಕ್ತಸ್ಥಲದಲ್ಲಿ ಭಕ್ತಮಾರ್ಗ
ಕ್ರಿಯಾಸ್ಥಲಾದಿಸಪ್ತವಿಧಸ್ಥಲವಿಚಾರಾತ್ಮಕವಾದ
ಒಂಭತ್ತನೆಯ ಪರಿಚ್ಛೇದವು ಪರಿಸಮಾಪ್ತವಾದುದು

ಶ್ರೀಜಗದ್ಗುರುರೇಣುಕಾಚಾರ್ಯಃ ಪ್ರಸೀದತು.

ದಶಮಪರಿಚ್ಛೇದಃ

ಮಾಹೇಶ್ವರಸ್ಥಲಂ

॥ ಅಗಸ್ತ್ಯ ಉವಾಚ ॥

ಭಕ್ತಸ್ಥಲಂ ಸಮಾಖ್ಯಾತಂ ಭವತಾ ಗಣನಾಯಕ ।
ಕೇನ ವಾ ಧರ್ಮಭೇದೇನ ಭಕ್ತೋ ಮಾಹೇಶ್ವರೋ ಭವೇತ್ ॥೧॥

॥ ರೇಣುಕ ಉವಾಚ ॥

ಕೇವಲಂ ಸಹಜೇ ದಾನೇ ನಿಷ್ಣಾತಃ ಶಿವತತ್ಪರಃ ।
ಬ್ರಹ್ಮಾದಿಸ್ಥಾನವಿಮುಖೋ ಭಕ್ತೋ ಮಾಹೇಶ್ವರಃ ಸ್ಮೃತಃ ॥೨॥
ಭಕ್ತೇರ್ಯದಾ ಸಮುತ್ಕರ್ಷೋ ಭವೇದ್ವೈರಾಗ್ಯಗೌರವಾತ್ ।
ತದಾ ಮಾಹೇಶ್ವರಃ ಪ್ರೋಕ್ತೋ ಭಕ್ತಃ ಸ್ಥಿರವಿವೇಕವಾನ್ ॥೩॥

ಹತ್ತನೆಯ ಪರಿಚ್ಛೇದವು

ಮಾಹೇಶ್ವರಸ್ಥಲ

ವ್ಯಾಖ್ಯಾನ—ಎಲೈ, ಶ್ರೀರೇಣುಕಗಣಾಧೀಶ್ವರನೇ! ಇಲ್ಲಿಯ ವರೆಗೆ ನಿನ್ನಿಂದ ಭಕ್ತಸ್ಥಲವು ಹೇಳಲ್ಪಟ್ಟಿತು. ಯಾವ ಧರ್ಮಭೇದದಿಂದ ಭಕ್ತಸ್ಥಲಾಪನ್ನನು ಮಾಹೇಶ್ವರಸ್ಥಲಾಪನ್ನನಾಗುವನು? ॥೧॥ ಎಂದು ಅಗಸ್ತ್ಯಮಹರ್ಷಿಯು ಪ್ರಶ್ನಮಾಡಲು, ಅದಕ್ಕೆ ಶ್ರೀರೇಣುಕಾಚಾರ್ಯರು—ಸಹಜದಾನದಲ್ಲಿ ಅತ್ಯಂತ ನಿಷ್ಣಾತನೂ, ಶಿವಾಸಕ್ತನೂ, ಬ್ರಹ್ಮಾದಿಸ್ಥಾನವಿಮುಖನೂ ಆದ ಭಕ್ತನೇ ಮಾಹೇಶ್ವರಸ್ಥಲಾಪನ್ನನಾಗುವನು. ॥೨॥ ಯಾವ ಕಾಲದಲ್ಲಿ ವೈರಾಗ್ಯಾತಿಶಯದಿಂದ ಶಿವಭಕ್ತಿಯ ಆಧಿಕ್ಯವು ಉತ್ಪನ್ನವಾಗುವುದೋ, ಆಗ್ಗೆ ನಿತ್ಯಾನಿತ್ಯವಸ್ತುವಿವೇಕಶಾಲಿ ಯಾವ ಭಕ್ತನು ಮಾಹೇಶ್ವರಸ್ಥಲಾಪನ್ನನೆಂದು ಹೇಳಿಸಿಕೊಳ್ಳುವನೆಂದು ಅಪ್ಪಣೆಯನಿತ್ತರು. ॥೩॥ ಪೂರ್ವದಲ್ಲಿ ಶಿವನಿಂದ ಹೇಳಲ್ಪಟ್ಟ ಮಾಹೇಶ್ವರಸ್ಥಲವನ್ನು ಇನ್ನು

ಮಾಹೇಶ್ವರಸ್ಥಲಂ ವಕ್ಷ್ಯೇ ಯಥೋಕ್ತಂ ಶಂಭುನಾ ಪುರಾ ।
ಮಾಹೇಶ್ವರಪ್ರಶಂಸಾಽಽದೌ ಲಿಂಗನಿಷ್ಠಾ ತತಃಪರಂ ॥೪॥

ಪೂರ್ವಾಶ್ರಯನಿರಾಸಶ್ಚ ತಥಾಽದ್ವೈತನಿರಾಕೃತಿಃ ।
ಆಹ್ವಾನವರ್ಜನಂ ಪಶ್ಚಾದಷ್ಟಮೂರ್ತಿನಿರಾಕೃತಿಃ ॥೫॥

ಸರ್ವಗತ್ವನಿರಾಸಶ್ಚ ಶಿವತ್ವಂ ವಿಶ್ವಭಕ್ತಯೋಃ ।
ಏವಂ ನವವಿಧಂ ಪ್ರೋಕ್ತಂ ಮಾಹೇಶ್ವರಮಹಾಸ್ಥಲಂ ॥೬॥

ಆದಿತಃ ಕ್ರಮಶೋ ವಕ್ಷ್ಯೇ ಸ್ಥಲಭೇದಸ್ಯ ಲಕ್ಷಣಂ ।
ಸಮಾಹಿತೇನ ಮನಸಾ ಶ್ರೂಯತಾಂ ಭವತಾ ಮುನೇ ॥೭॥

೧೬ ಮಾಹೇಶ್ವರಪ್ರಶಂಸಾಸ್ಥಲಂ

ವಿಶ್ವಸ್ಮಾದಧಿಕೋ ರುದ್ರೋ ವಿಶ್ವಾನುಗ್ರಹಕಾರಕಃ ।
ಇತಿ ಯಸ್ಯ ಸ್ಥಿರಾ ಬುದ್ಧಿಃ ಸ ವೈ ಮಾಹೇಶ್ವರಃ ಸ್ಮೃತಃ ॥೮॥

ಹೇಳುತ್ತೇನೆ. ಮಾಹೇಶ್ವರಸ್ಥಲವು—ಮಾಹೇಶ್ವರಪ್ರಶಂಸಾಸ್ಥಲ, ಲಿಂಗನಿಷ್ಠಾಸ್ಥಲ, ಪೂರ್ವಾಶ್ರಯನಿರಸನಸ್ಥಲ, ಅದ್ವೈತನಿರಸನಸ್ಥಲ, ಆಹ್ವಾನನಿರಸನಸ್ಥಲ, ಅಷ್ಟಮೂರ್ತಿನಿರಸನಸ್ಥಲ, ಸರ್ವಗತ್ವನಿರಸನಸ್ಥಲ, ಶಿವಜಗನ್ಮಯಸ್ಥಲ, ಭಕ್ತದೇಹಿಕಲಿಂಗಸ್ಥಲ ಎಂದು ಒಂಭತ್ತು ಪ್ರಕಾರವಾಗಿರುವುದು. ॥೪-೫-೬॥

ಎಲೈ, ಅಗಸ್ತ್ಯಮಹರ್ಷಿಯೇ ! ಈ ಸ್ಥಲಭೇದಗಳ ಲಕ್ಷಣವನ್ನು ಮೊದಲಿನಿಂದ ಅನುಕ್ರಮವಾಗಿ ಹೇಳುತ್ತೇನೆ; ಶಾಂತಮನಸ್ಸಿನಿಂದ ಶ್ರವಣಮಾಡು. ॥೭॥

೧೬ ಮಾಹೇಶ್ವರಪ್ರಶಂಸಾಸ್ಥಲ

"ವಿಶ್ವಾಧಿಕೋ ರುದ್ರೋ ಮಹರ್ಷಿಃ" ಎಂಬ ಶ್ವೇತಾಶ್ವತರಶ್ರುತಿವಾಕ್ಯದಂತೆ, ಶಿವನು ಸಮಸ್ತಪ್ರಪಂಚಕ್ಕಿಂತಲೂ ಅಧಿಕನೂ, ಸಮಸ್ತಪ್ರಪಂಚಕ್ಕೆ ಅನುಗ್ರಹವನ್ನುಂಟುಮಾಡುವವನೂ ಆಗಿದ್ದಾನೆಂಬ ಸ್ಥಿರಬುದ್ಧಿಯು ಯಾವನಲ್ಲಿರುವುದೋ, ಅವನು ಮಾಹೇಶ್ವರನೆನಿಸುವನು. ॥೮॥ "ಬ್ರಹ್ಮವಿಷ್ಣುರುದ್ರೇಂದ್ರಾಸ್ತೇ ಸಂಪ್ರಸೂಯಂತೇ" ಎಂಬ ಶ್ರುತಿವಾಕ್ಯಾಭಿಪ್ರಾಯಾನುಸಾರವಾಗಿ ಜನನಮರಣಾದಿಗಳಿಂದ ಪೀಡಿತರಾಗಿ,

ಬ್ರಹ್ಮಾದ್ಯೈರ್ಮಲಿನಪ್ರಾಯೈರ್ನಿರ್ಮಲೇ ಪರಮೇಶ್ವರೇ ।
ಸಾಮ್ಯೋಕ್ತಿಂ ಯೋ ನ ಸಹತೇ ಸ ವೈ ಮಾಹೇಶ್ವರಾಭಿಧಃ ॥೯॥

ಈಶ್ವರಃ ಸರ್ವಭೂತಾನಾಂ ಬ್ರಹ್ಮಾದೀನಾಂ ಮಹಾನಿತಿ ।
ಬುದ್ಧಿಯೋಗಾತ್ತದಾಸಕ್ತೋ ಭಕ್ತೋ ಮಾಹೇಶ್ವರಃ ಸ್ಮೃತಃ ॥೧೦॥

ಬ್ರಹ್ಮಾದಿದೇವತಾಜಾಲಂ ಮೋಹಿತಂ ಮಾಯಯಾ ಸದಾ ।
ಅಶಕ್ತಂ ಮುಕ್ತಿದಾನೇ ತು ಕ್ಷಯಾತಿಶಯಸಂಯುತಂ ॥೧೧॥

ಅನಾದಿಮುಕ್ತೋ ಭಗವಾನೇಕ ಏವ ಮಹೇಶ್ವರಃ ।
ಮುಕ್ತಿದಶ್ಚೇತಿ ಯೋ ವೇದ ಸ ವೈ ಮಾಹೇಶ್ವರಃ ಸ್ಮೃತಃ ॥೧೨॥

ಕ್ಷಯಾತಿಶಯಸಂಯುಕ್ತಾ ಬ್ರಹ್ಮವಿಷ್ಣ್ವಾದಿಸಂಪದಃ ।
ತೃಣವನ್ಮನ್ಯತೇ ಬುದ್ಧ್ಯಾ ವೀರಮಾಹೇಶ್ವರಃ ಸದಾ ॥೧೩॥

ಆಣವಾದಿಮಲವಿಶಿಷ್ಟರಾಗಿರುವ ಬ್ರಹ್ಮಾದಿಗಳೊಡನೆ ಆಣವಾದಿಮಲರಹಿತನಾದ ಪರಮೇಶ್ವರನಲ್ಲಿ, ಇವರೆಲ್ಲರೂ ಸಮಾನರೆಂಬ ಸಾಮ್ಯೋಕ್ತಿಯನ್ನು ಯಾವನು ಸಹಿಸುವುದಿಲ್ಲವೋ, ಅವನೇ ಮಾಹೇಶ್ವರನೆನಿಸುವನು. ॥೯॥ "ಈಶಾನಃ ಸರ್ವವಿದ್ಯಾನಾಮೀಶ್ವರಃ ಸರ್ವಭೂತಾನಾಂ ಬ್ರಹ್ಮಾಧಿಪತಿರ್ಬ್ರಹ್ಮಣೋಽಧಿಪತಿರ್ಬ್ರಹ್ಮಾ ಶಿವೋ ಮೇ ಅಸ್ತು ಸದಾಶಿವೋಂ ॥" ಎಂಬ ಶ್ರುತಿವಾಕ್ಯಾಭಿಪ್ರಾಯಾನುಸಾರವಾಗಿಯೂ, "ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ । ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥" ಎಂಬ ಭಗವದ್ಗೀತಾಭಿಪ್ರಾಯಾನುಸಾರವಾಗಿಯೂ, ಸಮಸ್ತಪ್ರಾಣಿಗಳಿಗೂ ಬ್ರಹ್ಮಾದಿದೇವತೆಗಳಿಗೂ ಶಿವನು ಸ್ವಾಮಿಯಾಗಿದ್ದಾನೆಂಬ ಬುದ್ಧಿಯೋಗದಿಂದ ಆ ಶಿವನಲ್ಲಿ ಆಸಕ್ತನಾದವನು ಮಾಹೇಶ್ವರನೆನಿಸುವನು. ॥೧೦॥ ಜನನಮರಣಗಳಿಗೊಳಪಟ್ಟ ಬ್ರಹ್ಮಾದಿದೇವತಾಸಮೂಹವು ಮಾಯೆಯಿಂದ ಮೋಹಿತವಾಗಿದ್ದು, ಮುಕ್ತಿಯನ್ನನುಗ್ರಹಿಸುವುದರಲ್ಲಿ ಅಸಮರ್ಥವಾಗಿರುವುದೆಂದೂ, ಅನಾದಿಮುಕ್ತನಾದ ಭಗವಾನ್ ಮಹೇಶ್ವರನೇ ಮುಕ್ತಿಯನ್ನು ಅನುಗ್ರಹಿಸುವುದರಲ್ಲಿ ಸಮರ್ಥನೆಂದೂ ಯಾವನು ತಿಳಿಯುತ್ತಾನೆಯೋ, ಅವನೇ ಮಾಹೇಶ್ವರನೆನಿಸುವನು. ॥೧೧-೧೨॥ ಬ್ರಹ್ಮವಿಷ್ಣ್ವಾದಿದೇವತೆಗಳ ಸಂಪತ್ತುಗಳು ವಿನಾಶದಿಂದ ಕೂಡಿದವುಗಳೆಂಬ ಬುದ್ಧಿಯಿಂದ ಯಾವನು ಅವುಗಳನ್ನು ಹುಲ್ಲಿನಂತೆ ತಿಳಿಯುತ್ತಾನೆಯೋ, ಅವನು ವೀರಮಾಹೇಶ್ವರನೆನಿಸುವನು. ॥೧೩॥ ಶಬ್ದಸ್ಪರ್ಶಾದಿವಿಷಯಗಳಿಂದ ಕೂಡಿದ ಅಲ್ಪ

ಶಬ್ದಸ್ಪರ್ಶಾದಿಸಂಪನ್ನೇ ಸುಖಲೇಶೇ ತು ನಿಃಸ್ಪೃಹಃ ।
ಶಿವಾನಂದೇ ಸಮುತ್ಕಂಠೋ ವೀರಮಾಹೇಶ್ವರೋ ಭವೇತ್ ॥೧೪॥

ಪರಸ್ತ್ರೀಸಂಗನಿರ್ಮುಕ್ತಃ ಪರದ್ರವ್ಯಪರಾಙ್ಮುಖಃ ।
ಶಿವಾರ್ಥಕಾರ್ಯಸಂಪನ್ನಃ ಶಿವಾಗಮಪರಾಯಣಃ ॥೧೫॥

ಶಿವಸ್ತುತಿರಸಾಸ್ವಾದಮೋದಮಾನಮನಾಃ ಶುಚಿಃ ।
ಶಿವೋತ್ಕರ್ಷಪ್ರಮಾಣಾನಾಂ ಸಂಪಾದನಸಮುದ್ಯತಃ ॥೧೬॥

ನಿರ್ಮಮೋ ನಿರಹಂಕಾರೋ ನಿರಸ್ತಕ್ಲೇಶಪಂಜರಃ ।
ಅಸ್ಪೃಷ್ಟಮದಸಂಬಂಧೋ ಮಾತ್ಸರ್ಯಾವೇಶವರ್ಜಿತಃ ॥೧೭॥

ನಿರಸ್ತಮದನೋನ್ಮೇಷೋ ನಿರ್ಧೂತಕ್ರೋಧವಿಪ್ಲವಃ ।
ಸದಾ ಸಂತುಷ್ಟಹೃದಯಃ ಸರ್ವಪ್ರಾಣಿಹಿತೇ ರತಃ ॥೧೮॥

ನಿವಾರಣಸಮುದ್ಯೋಗೀ ಶಿವಕಾರ್ಯವಿರೋಧಿನಾಂ ।
ಸಹಚಾರೀ ಸದಾಕಾಲಂ ಶಿವೋತ್ಕರ್ಷಾಭಿಧಾಯಿಭಿಃ ॥೧೯॥

ಸುಖದಲ್ಲಿ ನಿಃಸ್ಪೃಹನಾಗಿ, ನಿತ್ಯವಾದ ಶಿವಸುಖದಲ್ಲಿ ಪ್ರೀತಿಯುಳ್ಳವನು ವೀರ ಮಾಹೇಶ್ವರನೆನಿಸುವನು. ॥೧೪॥ ಪರಸ್ತ್ರೀಸಂಗದೂರನೂ, ಪರದ್ರವ್ಯಪರಾಙ್ಮುಖನೂ, ಶಿವಪ್ರಯೋಜನಕಾರಕಕಾರ್ಯಗಳಿಂದ ಕೂಡಿದವನೂ, ಶಿವಾಗಮಪರಾಯಣನೂ, ಶಿವಸ್ತೋತ್ರಗಳಿಂಮಂಟಾದ ಆನಂದರಸಸ್ವೀಕಾರದಿಂದ ಸಂತುಷ್ಟವಾದ ಮನಸ್ಸುಳ್ಳವನೂ, ನಿರ್ಮಲನೂ, ಶಿವಸರ್ವೋತ್ತಮತ್ವವನ್ನು ಪ್ರತಿಪಾದಿಸುವ ಪ್ರಮಾಣಗಳನ್ನು ಸಂಗ್ರಹಿಸುವುದರಲ್ಲಿ ಆಸಕ್ತನೂ, ಅಹಂಕಾರ-ಮಮಕಾರಗಳಿಂದ ದೂರನಾದವನೂ, ಪಂಚಕ್ಲೇಶರೂಪಪಂಜರವನ್ನು ಮುರಿದವನೂ, ಮದದಿಂದ ಅಸ್ಪೃಷ್ಟನಾದವನೂ, ಮಾತ್ಸರ್ಯದಿಂದ ಬಿಡಲ್ಪಟ್ಟವನೂ, ಕಾಮೋದ್ರೇಕವನ್ನು ನಿರಸನಗೊಳಿಸಿದವನೂ, ಕ್ರೋಧಬಾಧೆಯನ್ನು ನಿವಾರಿಸಿದವನೂ, ಯಾವಾಗಲೂ ಸಂತೋಷದಿಂದ ಕೂಡಿದ ಮನಸ್ಸುಳ್ಳವನೂ, ಸಮಸ್ತಪ್ರಾಣಿಗಳಿಗೆ ಹಿತವನ್ನುಂಟುಮಾಡುವುದರಲ್ಲಿ ಆಸಕ್ತನಾದವನೂ, ಶಿವಸಂಬಂಧವಾದ ಕಾರ್ಯಗಳಿಗೆ ವಿರೋಧವನ್ನುಂಟುಮಾಡತಕ್ಕವರನ್ನು ನಿವಾರಿಸುವವರಲ್ಲಾಸಕ್ತನೂ, ಶಿವೋತ್ಕರ್ಷವನ್ನುಂಟುಮಾಡತಕ್ಕವರೊಡನೆ ಯಾವಾಗಲೂ ಸಹಕರಿಸುವವನೂ, ಶಿವದೇವಾಲಯಗಳಲ್ಲಿರುವ ಶಿವಲಿಂಗಗಳಿಗೆ ತೊಂದರೆಯು ಸಂಭವಿಸುವ ಸಮಯದಲ್ಲಿ ಪ್ರಾಣವನ್ನು ಕೊಡಲಿಕ್ಕೂ ಕೂಡ

ಶಿವೋತ್ಕರ್ಷಸಂಪ್ರಾಪ್ತೌ ಪ್ರಾಣತ್ಯಾಗೇಽಪ್ಯಶಂಕಿತಃ ।
ಶಿವೈಕನಿಷ್ಠಃ ಸರ್ವಾತ್ಮಾ ವೀರಮಾಹೇಶ್ವರೋ ಭವೇತ್ ॥೨೦॥

೧೭ ಲಿಂಗನಿಷ್ಠಾಸ್ಥಲಂ

ಅಸ್ಯ ಮಾಹೇಶ್ವರಸ್ಯೋಕ್ತಂ ಲಿಂಗನಿಷ್ಠಾಮಹಾಸ್ಥಲಂ ।
ಪ್ರಾಣಾತ್ಯಯೇಽಪಿ ಸಂಪನ್ನೇ ಯದತ್ಯಾಜ್ಯಂ ವಿಧೀಯತೇ ॥೨೧॥

ಅಪಗಚ್ಛತು ಸರ್ವಸ್ವಂ ಶಿರಶ್ಛೇದನಮಸ್ತು ವಾ ।
ಮಾಹೇಶ್ವರೋ ನ ಮುಂಚೇತ್ತು ಲಿಂಗಪೂಜಾಮಹಾವ್ರತಂ ॥೨೨॥

ಲಿಂಗಪೂಜಾಮಕೃತ್ವಾ ತು ಮಾನವಾ ಯೇ ನ ಭುಂಜತೇ ।
ತೇಷಾಂ ಮಹಾತ್ಮನಾಂ ಹಸ್ತೇ ಮೋಕ್ಷಲಕ್ಷ್ಮೀರುಪಸ್ಥಿತಾ ॥೨೩॥

ಕಿಮನ್ಯೈರ್ಧರ್ಮಕಲಿಲೈಃ ಕೀಕಸಾರ್ಥಪ್ರದಾಯಿಭಿಃ ।
ಸಾಕ್ಷಾನ್ಮೋಕ್ಷಪ್ರದಃ ಶಂಭೋರ್ಧರ್ಮೋ ಲಿಂಗಾರ್ಚನಾತ್ಮಕಃ ॥೨೪॥

ಅರ್ಪಿತೇನಾನ್ನಪಾನೇನ ಲಿಂಗೇ ನಿಯಮಪೂಜಿತೇ ।
ಯೇ ದೇಹವೃತ್ತಿಂ ಕುರ್ವಂತಿ ಮಹಾಮಾಹೇಶ್ವರಾ ಹಿ ತೇ ॥೨೫॥

ಹಿಂದೆಗೆಯದವನೂ, ಶಿವಲಿಂಗೈಕನಿಷ್ಠನೂ, ಸರ್ವವನ್ನೂ ತನ್ನಂತೆ ತಿಳಿಯುವವನೂ ವೀರಮಾಹೇಶ್ವರನೆನಿಸುವನು. ॥೧೫-೧೬-೧೭-೧೮-೧೯-೨೦॥

೧೭ ಲಿಂಗನಿಷ್ಠಾಸ್ಥಲ

ಪ್ರಾಣಸಂಕಟವು ಪ್ರಾಪ್ತವಾದಾಗ್ಯೂ ಯಾವ ಲಿಂಗನಿಷ್ಠಾಸ್ಥಲವು ಬಿಡಲ್ಪಡುವುದಿಲ್ಲವೋ, ಆ ಸ್ಥಲವು ಈ ಮಾಹೇಶ್ವರನಿಗೆ ಹೇಳಲ್ಪಟ್ಟಿರುವುದು. ॥೨೧॥ ತನ್ನ ಸಂಪತ್ತೆಲ್ಲಾ ಹೋಗಲಿ ಅಥವಾ ಶಿರಶ್ಛೇದನವೇ ಆಗಲಿ, ಮಾಹೇಶ್ವರನು ಲಿಂಗಪೂಜಾಮಹಾವ್ರತವನ್ನು ಬಿಡಬಾರದು. ॥೨೨॥ ಯಾವ ಮಾನವರು ಲಿಂಗಪೂಜೆಯನ್ನು ಮಾಡದೆ ಭೋಜನಮಾಡುವುದಿಲ್ಲವೋ, ಆ ಮಹಾತ್ಮರ ಹಸ್ತದಲ್ಲಿ ಮೋಕ್ಷಲಕ್ಷ್ಮಿಯು ಸದಾ ವಾಸವಾಗಿರುವಳು. ॥೨೩॥ ಕುತ್ಸಿತಫಲಗಳನ್ನು ಕೊಡುವ ಲಿಂಗಪೂಜಾತಿರಿಕ್ತಗಳಾದ ಕ್ಷುದ್ರಧರ್ಮಗಳಿಂದ ಏನು ಪ್ರಯೋಜನವು ? ಶಿವಲಿಂಗಪೂಜಾರೂಪವಾದ ಶಿವಧರ್ಮವು ಸಾಕ್ಷಾತ್ ಮೋಕ್ಷಪ್ರದವಾಗಿರುವುದು. ॥೨೪॥ ವಿಧಿಪ್ರಕಾರವಾಗಿ ಪೂಜಿಸಲ್ಪಟ್ಟ ಶಿವಲಿಂಗಕ್ಕೆ ಅರ್ಪಿಸಿದ ಅನ್ನೋದಕಗಳಿಂದ ಯಾರು ದೇಹವನ್ನು ಪೋಷಿಸುವರೋ, ಅವರೇ ಮಹಾಮಾಹೇಶ್ವರರೆನಿಸುವರು. ॥೨೫॥

ಚಿನ್ಮಯೇ ಶಾಂಕರೇ ಲಿಂಗೇ ಸ್ಥಿರಂ ಯೇಷಾಂ ಮನಃ ಸದಾ ।
ವಿಮುಕ್ತೇತರಸರ್ವಾರ್ಥಂ ತೇ ಶಿವಾ ನಾತ್ರ ಸಂಶಯಃ ॥೨೬॥

ಲಿಂಗೇ ಯಸ್ಯ ಮನೋ ಲೀನಂ ಲಿಂಗಸ್ತುತಿಪರಾ ಚ ವಾಕ್ ।
ಲಿಂಗಾರ್ಚನಪರೌ ಹಸ್ತೌ ಸ ರುದ್ರೋ ನಾತ್ರ ಸಂಶಯಃ ॥೨೭॥

ಲಿಂಗನಿಷ್ಠಸ್ಯ ಕಿಂ ತಸ್ಯ ಕರ್ಮಣಾ ಸ್ವರ್ಗಹೇತುನಾ ।
ನಿತ್ಯಾನಂದಶಿವಪ್ರಾಪ್ತಿರ್ಯಸ್ಯ ಶಾಸ್ತ್ರೇಷು ನಿಶ್ಚಿತಾ ॥೨೮॥

ಲಿಂಗನಿಷ್ಠಾಪರಂ ಶಾಂತಂ ಭೂತಿರುದ್ರಾಕ್ಷಸಂಯುತಂ ।
ಪ್ರಶಂಸಂತಿ ಸದಾಕಾಲಂ ಬ್ರಹ್ಮಾದ್ಯಾ ದೇವತಾ ಮುದಾ ॥೨೯॥

೧೮ ಪೂರ್ವಾಶ್ರಯನಿರಸನಸ್ಥಲಂ

ಲಿಂಗೈಕನಿಷ್ಠಹೃದಯಃ ಸದಾ ಮಾಹೇಶ್ವರೋ ಜನಃ ।
ಪೂರ್ವಾಶ್ರಯಗತಾನ್ ಧರ್ಮಾಂಸ್ತ್ಯಜೇತ್ ಸ್ವಾಚಾರರೋಧಕಾನ್ ॥೩೦॥

ಯಾರ ಮನಸ್ಸು ಶಿವೇತರಸ್ವರ್ಗಾದಿಫಲಗಳನ್ನು ದೂರೀಕರಿಸಿ ಚಿತ್ಸ್ವರೂಪವಾದ ಶಿವಲಿಂಗದಲ್ಲಿ ಯಾವಾಗಲೂ ಸ್ಥಿರವಾಗಿರುವುದೋ, ಅವರೇ ಶಿವಸ್ವರೂಪಿಗಳು. ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲ. ॥೨೬॥ ಯಾವನ ಮನಸ್ಸು ಶಿವಲಿಂಗದಲ್ಲಿ ಲೀನವಾಗಿರುವುದೋ, ಯಾವನ ವಾಣಿಯು ಶಿವಲಿಂಗಸ್ತುತಿಯಲ್ಲಿ ನಿರತವಾಗಿರುವುದೋ, ಯಾವನ ಹಸ್ತಗಳು ಶಿವಲಿಂಗಪೂಜೆಯಲ್ಲಿ ಆಸಕ್ತಗಳಾಗಿರುವುವೋ, ಅವನೇ ರುದ್ರನು. ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲ. ॥೨೭॥

ನಿತ್ಯಾನಂದರೂಪವಾದ ಶಿವಪದಪ್ರಾಪ್ತಿಯು ಯಾವನಿಗೆ ಶಾಸ್ತ್ರಗಳಿಂದ ನಿಶ್ಚಿತವಾಗಿರುವುದೋ, ಆ ಲಿಂಗನಿಷ್ಠನಿಗೆ ಸ್ವರ್ಗಪ್ರಾಪ್ತಿಗೆ ಹೇತುಭೂತವಾದ ಕರ್ಮದಿಂದ ಏನುಪ್ರಯೋಜನವು? ॥೨೮॥ ಭಸ್ಮರುದ್ರಾಕ್ಷಧಾರಿಯೂ, ಶಾಂತನೂ ಆದ ಲಿಂಗನಿಷ್ಠಾಪರನನ್ನು ಬ್ರಹ್ಮಾದಿದೇವತೆಗಳು ಯಾವಾಗಲೂ ಸಂತೋಷದಿಂದ ಪ್ರಶಂಸಿಸುತ್ತಾರೆ. ॥೨೯॥

೧೮ ಪೂರ್ವಾಶ್ರಯನಿರಸನಸ್ಥಲ

ಶಿವಲಿಂಗೈಕನಿಷ್ಠನಾದ ಮಾಹೇಶ್ವರನು ಯಾವಾಗಲೂ ತನ್ನ ಆಚಾರಧರ್ಮಗಳಿಗೆ ವಿರುದ್ಧಗಳಾದ ಪೂರ್ವಾಶ್ರಮಧರ್ಮ (ಪ್ರಾಕೃತಾಚಾರಧರ್ಮ) ಗಳನ್ನು ಬಿಡಬೇಕು. ಈ ಪೂರ್ವಾಶ್ರಯಸ್ಥಲದ ಆಚರಣೆಗಳೆಲ್ಲವೂ ಮೊದಲು ಅಲಿಂಗಿಜಾತಿಯಲ್ಲಿ ಹುಟ್ಟಿ, ಆ ಮೇಲೆ ವೀರಶೈವಮತಕ್ಕೆ ಸೇರಿದವರ ವಿಷಯದಲ್ಲಿ ಹೇಳಲ್ಪಟ್ಟವು

ಸ್ವಜಾತಿಕುಲಜಾನ್ ಧರ್ಮಾನ್ ಲಿಂಗನಿಷ್ಠಾವಿರೋಧಿನಃ ।
ತ್ಯಜನ್ ಮಾಹೇಶ್ವರೋ ಜ್ಞೇಯಃ ಪೂರ್ವಾಶ್ರಯನಿರಾಸಕಃ ॥೩೧॥
ಶಿವಸಂಸ್ಕಾರಯೋಗೇನ ವಿಶುದ್ಧಾನಾಂ ಮಹಾತ್ಮನಾಂ ।
ಕಿಂ ಪೂರ್ವಕಾಲಿಕೈರ್ಧರ್ಮೈಃ ಪ್ರಾಕೃತಾನಾಂ ಹಿ ತೇ ಮತಾಃ ॥೩೨॥
ಶಿವಸಂಸ್ಕಾರಯೋಗೇನ ಶಿವಧರ್ಮಾನುಷಂಗಿಣಾಂ ।
ಪ್ರಾಕೃತಾನಾಂ ನ ಧರ್ಮೇಷು ಪ್ರವೃತ್ತಿರುಪಪದ್ಯತೇ ॥೩೩॥
ವಿಶುದ್ಧಾಃ ಪ್ರಾಕೃತಾಶ್ಚೇತಿ ದ್ವಿವಿಧಾ ಮಾನುಷಾಃ ಸ್ಮೃತಾಃ ।
ಶಿವಸಂಸ್ಕಾರಿಣಃ ಶುದ್ಧಾಃ ಪ್ರಾಕೃತಾ ಇತರೇ ಮತಾಃ ॥೩೪॥
ವರ್ಣಾಶ್ರಮಾದಿಧರ್ಮಾಣಾಂ ವ್ಯವಸ್ಥಾ ಹಿ ದ್ವಿಧಾ ಮತಾ ।
ಏಕಾ ಶಿವೇನ ನಿರ್ದಿಷ್ಟಾ ಬ್ರಹ್ಮಣಾ ಕಥಿತಾ ಪರಾ ॥೩೫॥
ಶಿವೋಕ್ತಧರ್ಮನಿಷ್ಠಾ ತು ಶಿವಾಶ್ರಮನಿಷೇವಿಣಾಂ ।
ಶಿವಸಂಸ್ಕಾರಹೀನಾನಾಂ ಧರ್ಮಃ ಪೈತಾಮಹಃ ಸ್ಮೃತಃ ॥೩೬॥

ಗಳಾಗಿವೆಯೆಂದು ತಿಳಿಯಬೇಕು ॥೩೦॥ ಲಿಂಗನಿಷ್ಠೆಗೆ ವಿರುದ್ಧಗಳಾದ ಪೂರ್ವದ ತನ್ನ ಪ್ರಾಕೃತಜಾತಿಕುಲಗಳಿಂದ ಬಂದ ಧರ್ಮಗಳನ್ನು ಬಿಡುವವನೇ ಪೂರ್ವಾಶ್ರಯನಿರಾಸಕನಾದ ಮಾಹೇಶ್ವರನೆಂದು ತಿಳಿಯಬೇಕು. ॥೩೧॥ ಶಿವಸಂಸ್ಕಾರದಿಂದ ಪರಿಶುದ್ಧರಾದ ಮಹಾತ್ಮರಿಗೆ ಪೂರ್ವಜಾತಿಸಂಬಂಧಿಗಳಾದ ಧರ್ಮಗಳಿಂದ ಏನು ಪ್ರಯೋಜನವು? ಆ ಧರ್ಮಗಳು ಅಲಿಂಗಿಗಳಾದ ಪ್ರಾಕೃತರಿಗೆ ಹೇಳಲ್ಪಟ್ಟಿವೆ. ॥೩೨॥ ಶಿವಸಂಸ್ಕಾರಯೋಗದಿಂದ ಶಿವಧರ್ಮಗಳನ್ನು ಅನುಷ್ಠಿಸುತ್ತಿರುವವರಿಗೆ, ಅಲಿಂಗಿಗಳಾದ ಪ್ರಾಕೃತರ ಧರ್ಮಗಳಲ್ಲಿ ಪ್ರವೃತ್ತಿಯು ಉಪಪನ್ನವಾಗುವುದಿಲ್ಲ. ॥೩೩॥ ಮಾನವರು ಶುದ್ಧರು (ಅಪ್ರಾಕೃತರು)—ಪ್ರಾಕೃತರು ಎಂದು ಎರಡುಬಗೆಯಾಗಿದ್ದಾರೆ. ಶಿವಸಂಸ್ಕಾರಸಂಪನ್ನರು ಶುದ್ಧ (ಅಪ್ರಾಕೃತ)ರೆನಿಸುವರು. ಶಿವಸಂಸ್ಕಾರಶೂನ್ಯರು ಪ್ರಾಕೃತರೆನಿಸುವರು. ॥೩೪॥ ವರ್ಣಾಶ್ರಮಾದಿಧರ್ಮಗಳ ವ್ಯವಸ್ಥೆಯು ಎರಡುಪ್ರಕಾರವಾಗಿದೆ. ಒಂದು ಶಿವನಿಂದ ಹೇಳಲ್ಪಟ್ಟಿದೆ. ಮತ್ತೊಂದು ಬ್ರಹ್ಮನಿಂದ ಹೇಳಲ್ಪಟ್ಟಿದೆ. ॥೩೫॥ ಶಿವನಿಂದುಕ್ತವಾದ ಧರ್ಮಾಚರಣೆಯು, ಶಿವವರ್ಣಾಶ್ರಮಧರ್ಮಗಳನ್ನನುಷ್ಠಿಸುವವರಿಗೆ ಹೇಳಲ್ಪಟ್ಟಿರುವುದು. ಶಿವಸಂಸ್ಕಾರಶೂನ್ಯರಿಗೆ ಬ್ರಹ್ಮನಿಂದುಕ್ತವಾದ ಧರ್ಮಾಚರಣೆಯು ಹೇಳಲ್ಪಟ್ಟಿರುವುದು. ॥೩೬॥

೧೯ ಸರ್ವಾದ್ವೈತನಿರಸನಸ್ಥಲಂ

ಪೂಜ್ಯಪೂಜಕಯೋರ್ಲಿಂಗಜೀವಯೋರ್ಭೇದವರ್ಜನೇ ।
ಪೂಜಾಕರ್ಮಾದ್ಯಸಂಪತ್ತೇರ್ಲಿಂಗನಿಷ್ಠಾವಿರೋಧತಃ ॥೩೭॥

ಸರ್ವಾದ್ವೈತವಿಚಾರಸ್ಯ ಜ್ಞಾನಾಭಾವೋ ವ್ಯವಸ್ಥಿತಃ ।
ಭವೇನ್ಮಾಹೇಶ್ವರಃ ಕರ್ಮೀ ಸರ್ವಾದ್ವೈತನಿರಾಸಕಃ ॥೩೮॥

ಪ್ರೇರಕಂ ಶಂಕರಂ ಬುಧ್ವಾ ಪ್ರೇರ್ಯಮಾತ್ಮಾನಮೇವ ಚ ।
ಭೇದಾತ್ತಂ ಪೂಜಯೇನ್ನಿತ್ಯಂ ನಚಾದ್ವೈತಪರೋ ಭವೇತ್ ॥೩೯॥

ಪತಿಃ ಸಾಕ್ಷಾನ್ಮಹಾದೇವಃ ಪಶುರೇಷ ತದಾಶ್ರಯಃ ।
ಅನಯೋಃ ಸ್ವಾಮಿಭೃತ್ಯತ್ವಮಭೇದೇ ಕಥಮಿಷ್ಯತೇ ॥೪೦॥

ಸಾಕ್ಷಾತ್ಕೃತಂ ಪರಂ ತತ್ತ್ವಂ ಯದಾ ಭವತಿ ಬೋಧತಃ ।
ತದಾಽದ್ವೈತಸಮಾಪತ್ತಿರ್ಜ್ಞಾನಹೀನಸ್ಯ ನ ಕ್ವಚಿತ್ ॥೪೧॥

---

೧೯ ಸರ್ವಾದ್ವೈತನಿರಸನಸ್ಥಲ

ಪೂಜ್ಯವಾದ ಶಿವಲಿಂಗಕ್ಕೂ ಪೂಜಕನಾದ ಭಕ್ತನಿಗೂ ಭೇದವಿಲ್ಲೆಂದು ಹೇಳಿದರೆ, ಲಿಂಗನಿಷ್ಠೆಗೆ ವಿರೋಧವು ಬರುವುದರಿಂದಲೂ, ಪೂಜಾಕರ್ಮಾದಿಗಳಿಗೆ ಸ್ವರೂಪನಿಷ್ಪತ್ತಿಯೇ ಇಲ್ಲವಾಗುವುದರಿಂದಲೂ ಸರ್ವಾದ್ವೈತವಿಚಾರಜ್ಞಾನದ ಅಭಾವವೇ ವ್ಯವಸ್ಥಿತವಾಗುವುದು. ಆದುದರಿಂದ ಶಿವಲಿಂಗಪೂಜಾದಿಕರ್ಮಗಳನ್ನಾಚರಿಸುವ ಮಾಹೇಶ್ವರನು ಸರ್ವಾದ್ವೈತನಿರಾಸಕನೇ ಆಗಬೇಕು. "ಕ್ರಿಯಾಽದ್ವೈತಂ ನ ಕರ್ತವ್ಯಂ" ಎಂಬ ಪ್ರಮಾಣದಂತೆ ಕ್ರಿಯೆಯಲ್ಲಿ ಅದ್ವೈತವನ್ನು ಮಾಡಬಾರದೆಂದು ಭಾವವು. ॥೩೭-೩೮॥ ಶಿವನು ಪ್ರೇರಕನೆಂದೂ, ಜೀವನು ಪ್ರೇರ್ಯನೆಂದೂ ತಿಳಿದು, ಭೇದಭಾವದಿಂದ ಶಿವನನ್ನು ಪೂಜಿಸಬೇಕಲ್ಲದೆ, ಶಿವಜೀವರಲ್ಲಿ ಅದ್ವೈತವನ್ನು ಭಾವಿಸಿ ಅದ್ವೈತದಲ್ಲಿ ಆಸಕ್ತನಾಗಬಾರದು. ॥೩೯॥ ಶಿವನು ಸಾಕ್ಷಾತ್ ಸ್ವಾಮಿಯಾಗಿದ್ದಾನೆ; ಜೀವನು ಆ ಶಿವನನ್ನು ಆಶ್ರಯಿಸಿಕೊಂಡಿದ್ದಾನೆ; ಇಂತಹ ಶಿವಜೀವರಿಗೆ ಅಭೇದವನ್ನು ಹೇಳಿದ್ದಾದರೆ ಸ್ವಾಮಿಭೃತ್ಯತ್ವವು ಹೇಗೆ ಸಂಭವಿಸುವುದು? ಆದುದರಿಂದ ಪೂಜಕನು ಶಿವನನ್ನು ಭೇದಬುದ್ಧಿಯಿಂದಲೇ ಪೂಜಿಸಬೇಕೆಂದು ತಾತ್ಪರ್ಯವು. ॥೪೦॥ ಶ್ರುತಿಗುರುಬೋಧೆಯಿಂದ ಯಾವಾಗ್ಗೆ ಪರಶಿವತತ್ತ್ವವು ಪ್ರತ್ಯಕ್ಷವಾಗುವುದೋ, ಆಗ್ಗೆ ಅದ್ವೈತಸ್ಫೂರ್ತಿಯುಂಟಾಗುವುದು. ಜ್ಞಾನಹೀನನಾಗಿ ಕೇವಲ ಕರ್ಮವನ್ನಾಚರಿಸುವವನಿಗೆ ಎಂದೂ ಅದ್ವೈತಸ್ಫೂರ್ತಿಯುಂಟಾಗುವುದಿಲ್ಲ. ॥೪೧॥

ಭೇದಸ್ಯ ಕರ್ಮಹೇತುತ್ವಾದ್ವ್ಯವಹಾರಃ ಪ್ರವರ್ತತೇ ।
ಲಿಂಗಪೂಜಾದಿಕರ್ಮಸ್ಥೋ ನಚಾದ್ವೈತಂ ಸಮಾಚರೇತ್ ॥೪೨॥

ಪೂಜಾದಿವ್ಯವಹಾರಃ ಸ್ಯಾದ್ಭೇದಾಶ್ರಯತಯಾ ಸದಾ ।
ಲಿಂಗಪೂಜಾಪರಸ್ತಸ್ಮಾನ್ನಾದ್ವೈತೇ ನಿರತೋ ಭವೇತ್ ॥೪೩॥

೨೦ ಆಹ್ವಾನನಿರಸನಸ್ಥಲಂ

ಲಿಂಗಾರ್ಚನಪರಃ ಶುದ್ಧಃ ಸರ್ವಾದ್ವೈತನಿರಾಸಕಃ ।
ಸ್ವೇಷ್ಟಲಿಂಗೇ ಶಿವಾಕಾರೇ ನ ತಮಾವಾಹಯೇಚ್ಛಿವಂ ॥೪೪॥

ಯದಾ ಶಿವಕಲಾಯುಕ್ತಂ ಲಿಂಗಂ ದದ್ಯಾನ್ಮಹಾಗುರುಃ ।
ತದಾರಭ್ಯ ಶಿವಸ್ತತ್ರ ತಿಷ್ಠತ್ಯಾಹ್ವಾನಮತ್ರ ಕಿಂ? ॥೪೫॥

ಸಸಂಸ್ಕಾರೇಷು ಲಿಂಗೇಷು ಸದಾ ಸನ್ನಿಹಿತಃ ಶಿವಃ ।
ತತ್ರಾಹ್ವಾನಂ ನ ಕರ್ತವ್ಯಂ ಪ್ರತಿಪತ್ತಿವಿರೋಧತಃ ॥೪೬॥

ನಾಹ್ವಾನಂ ನ ವಿಸರ್ಗಂ ಚ ಸ್ವೇಷ್ಟಲಿಂಗೇ ತು ಕಾರಯೇತ್ ।
ಲಿಂಗನಿಷ್ಠಾಪರೋ ನಿತ್ಯಮಿತಿ ಶಾಸ್ತ್ರಸ್ಯ ನಿಶ್ಚಯಃ ॥೪೭॥

ಶಿವಜೀವರ ಭೇದವ್ಯವಹಾರವು ಶಿವಪೂಜಾದಿಕ್ರಿಯೆಗಳಿಗೆ ಕಾರಣವಾಗಿರುವುದರಿಂದ, ಶಿವಲಿಂಗಪೂಜಾದಿಕರ್ಮನಿಷ್ಠನು ಶಿವಜೀವರಲ್ಲಿ ಅದ್ವೈತವನ್ನಾಚರಿಸಬಾರದು. ॥೪೨॥ ಪೂಜಾದಿವ್ಯವಹಾರವು ಯಾವಾಗಲೂ ಭೇದದಿಂದಲೇ ಕೂಡಿರುವುದು. ಆದುದರಿಂದ ಲಿಂಗಪೂಜಕನು ಅದ್ವೈತದಲ್ಲಿ ನಿರತನಾಗಬಾರದು. ॥೪೩॥

೨೦ ಆಹ್ವಾನನಿರಸನಸ್ಥಲ

ಸರ್ವಾದ್ವೈತನಿರಾಸಕನೂ ಶುದ್ಧನೂ ಆದ ಲಿಂಗಪೂಜಕನು ಶಿವಾಕಾರವಾದ ತನ್ನ ಇಷ್ಟಲಿಂಗದಲ್ಲಿ ಶಿವನನ್ನು ಆವಾಹಿಸಬಾರದು. ॥೪೪॥ ಮಹಾಚಾರ್ಯನು ಶಿವಕಲಾಯುಕ್ತವಾದ ಲಿಂಗವನ್ನು ಎಂದು ಅನುಗ್ರಹಿಸುವನೋ, ಅಂದಿನಿಂದಲೂ ಶಿವನು ಆ ಲಿಂಗದಲ್ಲಿ ವಾಸಿಸುತ್ತಾನೆ. ಪುನಃ ಆ ಲಿಂಗದಲ್ಲಿ ಆಹ್ವಾನವೇಕೆ? ॥೪೫॥ ಸಂಸ್ಕಾರಯುಕ್ತಗಳಾದ ಲಿಂಗಗಳಲ್ಲಿ ಶಿವನು ಯಾವಾಗಲೂ ಸನ್ನಿಹಿತನಾಗಿರುತ್ತಾನೆ. ಆಹ್ವಾನವು ಶಿವದೀಕ್ಷಾಜ್ಞಾನಕ್ಕೆ ವಿರೋಧವಾಗುವುದರಿಂದ ಆ ಶಿವದೀಕ್ಷಾಸಂಸ್ಕೃತ ಲಿಂಗಗಳಲ್ಲಿ ಆಹ್ವಾನವನ್ನು ಮಾಡಬಾರದು. ॥೪೬॥ ಲಿಂಗಪೂಜಾಸಕ್ತನು ತನ್ನ ಇಷ್ಟಲಿಂಗದಲ್ಲಿ ನಿತ್ಯವೂ ಆಹ್ವಾನವನ್ನಾಗಲಿ, ವಿಸರ್ಜನವನ್ನಾಗಲಿ ಮಾಡಬಾರದು. ಇದೇ ಶಿವಶಾಸ್ತ್ರದ ಸಿದ್ಧಾಂತವು. ॥೪೭॥

೨೧ ಅಷ್ಟಮೂರ್ತಿನಿರಸನಸ್ಥಲಂ

ಯಥಾತ್ಮಶಿವಯೋರೈಕ್ಯಂ ನ ಮತಂ ಕರ್ಮಸಂಗಿನಃ ।
ತಥಾ ಶಿವಾತ್ ಪೃಥಿವ್ಯಾದೇರದ್ವೈತಮಪಿ ನೇಷ್ಯತೇ ॥೪೮॥

ಪೃಥಿವ್ಯಾದ್ಯಷ್ಟಮೂರ್ತಿತ್ವಮೀಶ್ವರಸ್ಯ ಪ್ರಕೀರ್ತಿತಂ ।
ತದಧಿಷ್ಠಾತೃಭಾವೇನ ನ ಸಾಕ್ಷಾದೇಕಭಾವತಃ ॥೪೯॥

ಪೃಥಿವ್ಯಾದ್ಯಮಿದಂ ಸರ್ವಂ ಕಾರ್ಯಂ ಕರ್ತಾ ಮಹೇಶ್ವರಃ ।
ನೈತತ್ಸಾಕ್ಷಾನ್ಮಹೇಶೋಽಯಂ ಕುಲಾಲಃ ಕಲಶೋ ಯಥಾ ॥೫೦॥

ಪೃಥಿವ್ಯಾದ್ಯಾತ್ಮಪರ್ಯಂತಪ್ರಪಂಚೋ ಹ್ಯಷ್ಟಧಾ ಸ್ಥಿತಃ
ತನುರೀಶಸ್ಯ ಚಾತ್ಮಾಽಯಂ ಸರ್ವತತ್ತ್ವನಿಯಾಮಕಃ ॥೫೧॥

ಶರೀರಭೂತಾದೇತಸ್ಮಾತ್ ಪ್ರಪಂಚಾತ್ಪರಮೇಷ್ಠಿನಃ ।
ಆತ್ಮಭೂತಸ್ಯ ದೇವಸ್ಯ ನಾಭೇದೋ ನ ಪೃಥಕ್‌ಸ್ಥಿತಿಃ ॥೫೨॥

---

೨೧ ಅಷ್ಟಮೂರ್ತಿನಿರಸನಸ್ಥಲ

ಶಿವಪೂಜಾಕರ್ಮನಿಷ್ಠನಾದ ಮಾಹೇಶ್ವರನಿಗೆ ಶಿವಜೀವರ ಐಕ್ಯವು ಹೇಗೆ ಸಂಮತವಲ್ಲವೋ, ಹಾಗೆಯೇ ಶಿವನಿಗೂ ಅವನ ಶರೀರಗಳಾದ ಪೃಥಿವ್ಯಾದ್ಯಷ್ಟ ಮೂರ್ತಿಗಳಿಗೂ ಅದ್ವೈತವು ಸಮ್ಮತವಲ್ಲ. ॥೪೮॥ ಶಿವನಿಗೆ ಪೃಥಿವಿ-ಅಪ್-ತೇಜಸ್ಸು-ವಾಯು-ಆಕಾಶ-ಸೂರ್ಯ-ಚಂದ್ರ-ಆತ್ಮ ಎಂಬ ಎಂಟು ಶರೀರಗಳು ಹೇಳಲ್ಪಟ್ಟಿವೆ. ಈ ಶರೀರಿ-ಶರೀರಭಾವವು ಅಧಿಷ್ಠಾತೃ-ಅಧಿಷ್ಠೇಯಭಾವದಿಂದಲೇ ಉಪಪನ್ನವಾಗುವುದೇ ಹೊರತು ಸ್ವರೂಪೈಕ್ಯದಿಂದ ಉಪಪನ್ನವಾಗಲಾರದು. ॥೪೯॥ ಪೃಥಿವ್ಯಾದಿಗಳು ಕಾರ್ಯರೂಪವಾಗಿರುವುವು ; ಶಿವನು ಕಾರಣನಾಗಿರುವನು ; ಆದುದರಿಂದ ಪೃಥಿವ್ಯಾದಿಗಳು ಸಾಕ್ಷಾತ್ ಶಿವನಾಗಲಾರವು. ಕರ್ತೃವಾದ ಕುಂಬಾರನಿಗೂ ಕಾರ್ಯವಾದ ಘಟಕ್ಕೂ ಹೇಗೆ ಅಭೇದವು ಸಂಭವಿಸುವುದಿಲ್ಲವೋ, ಹಾಗೆ ಶಿವನಿಗೂ ಪೃಥಿವ್ಯಾದಿಗಳಿಗೂ ಅಭೇದವು ಸಂಭವಿಸುವುದಿಲ್ಲ. ॥೫೦॥ ಪೃಥಿವಿ ಮೊದಲ್ಗೊಂಡು ಆತ್ಮಪರ್ಯಂತವಾಗಿ ಎಂಟು ಪ್ರಕಾರವಾಗಿರುವ ಪ್ರಪಂಚವು ಶಿವನ ಶರೀರವಾಗಿರುವುದು; ಶಿವನು ಸರ್ವತತ್ತ್ವನಿಯಾಮಕನಾಗಿ ಆತ್ಮನೆನಿಸಿಕೊಂಡಿದ್ದಾನೆ. ॥೫೧॥ ಶಿವನ ಶರೀರವೆನಿಸಿದ ಈ ಪ್ರಪಂಚದೊಡನೆ ಆತ್ಮರೂಪಿಯಾದ ಶಿವನಿಗೆ ಅಭೇದವಿರುವುದಿಲ್ಲ. ಅರ್ಥಾತ್ ಭೇದವೇ ಇರುವುದು. ಇನ್ನು ಶರೀರವೆನಿಸಿಕೊಂಡು ಭಿನ್ನವಾಗಿರುವ ಪೃಥಿವ್ಯಾದಿಪ್ರಪಂಚವು ಶರೀರಿಯೆನಿಸಿಕೊಂಡಿರುವ ಶಿವನನ್ನು ಬಿಟ್ಟು ಪ್ರತ್ಯೇಕ

ಅಚೇತನತ್ವಾತ್ ಪೃಥ್ವ್ಯಾದೇರಜ್ಞತ್ವಾದಾತ್ಮನಸ್ತಥಾ ।
ಸರ್ವಜ್ಞಸ್ಯ ಮಹೇಶಸ್ಯ ನೈಕರೂಪತ್ವಮಿಷ್ಯತೇ ॥೫೩॥

ಇತಿ ಯಶ್ಚಿಂತಯೇನ್ನಿತ್ಯಂ ಪೃಥ್ವ್ಯಾದೇರಷ್ಟಮೂರ್ತಿತಃ ।
ವಿಲಕ್ಷಣಂ ಮಹಾದೇವಂ ಸೋಽಷ್ಟಮೂರ್ತಿನಿರಾಸಕಃ ॥೫೪॥

೨೨ ಸರ್ವಗತ್ವನಿರಸನಸ್ಥಲಂ

ಸರ್ವಗತ್ವೇ ಮಹೇಶಸ್ಯ ಸರ್ವತ್ರಾರಾಧನಂ ಭವೇತ್ ।
ನ ಲಿಂಗಮಾತ್ರೇ ತನ್ನಿಷ್ಠೋ ನ ಶಿವಂ ಸರ್ವಗಂ ಸ್ಮರೇತ್ ॥೫೫॥

ಸರ್ವಗೋಽಪಿ ಸ್ಥಿತಃ ಶಂಭುಃ ಸ್ವಾಧಾರೇ ಹಿ ವಿಶೇಷತಃ ।
ತಸ್ಮಾದನ್ಯತ್ರ ವಿಮುಖಃ ಸ್ವೇಷ್ಟಲಿಂಗೇ ಯಜೇಚ್ಛಿವಂ ॥೫೬॥

ವಾಗಿಯೂ ಇರುವುದಿಲ್ಲ. ಅರ್ಥಾತ್ ಶಿವನಿಗೂ ಅವನಿಗೆ ಶರೀರಭೂತಗಳಾದ ಪೃಥಿವ್ಯಾದಿಗಳಿಗೂ ಭೇದಾಭೇದವೆನ್ನುವುದೇ ಶ್ರೀ ಜಗದ್ಗುರುರೇಣುಕಭಗವತ್ಪಾದರ ಅಭಿಪ್ರಾಯವು. ಈ ಭೇದಾಭೇದವೇ ವೀರಶೈವಸಿದ್ಧಾಂತದ ರಹಸ್ಯವಾಗಿರುವುದು. ॥೫೨॥ ಪೃಥಿವ್ಯಾದಿಗಳು ಜಡವಾಗಿರುವುದರಿಂದಲೂ, ಆತ್ಮನು ಕಿಂಚಿಜ್ಜ್ಞನಾಗಿರುವುದರಿಂದಲೂ, ಸರ್ವಜ್ಞನಾದ ಶಿವನಿಗೆ ಇವುಗಳೊಡನೆ ಸ್ವರೂಪೈಕ್ಯವು ಸಂಭವಿಸುವುದಿಲ್ಲ. ॥೫೩॥ ಈ ಪ್ರಕಾರವಾಗಿ ಅಷ್ಟಶರೀರಗಳೆನಿಸಿದ ಪೃಥಿವ್ಯಾದಿಗಳಿಗೆ ವಿಲಕ್ಷಣನಾಗಿರುವ ಶಿವನನ್ನು ಯಾವನು ನಿತ್ಯದಲ್ಲಿಯೂ ಧ್ಯಾನಿಸುವನೋ, ಅವನು ಅಷ್ಟಮೂರ್ತಿನಿರಾಸಕನೆಂದು ಹೇಳಿಸಿಕೊಳ್ಳುವನು. ॥೫೪॥

೨೨ ಸರ್ವಗತ್ವನಿರಸನಸ್ಥಲ

ಶಿವನು ಸರ್ವತ್ರವ್ಯಾಪಿಸಿರುವುದರಿಂದ ಅವನ ಪೂಜೆಯು ಎಲ್ಲಾ ಕಡೆಗೂ ಆಗಬೇಕಾದೀತು? ಲಿಂಗದಲ್ಲಿ ಮಾತ್ರವೇ ಆಗಬಾರದಾದೀತು? ಆದುದರಿಂದ ಶಿವನಲ್ಲಿ ನಿಷ್ಠೆಯುಳ್ಳ ಮಾಹೇಶ್ವರನು ಶಿವನು ಸರ್ವತ್ರ ವ್ಯಾಪಿಸಿದ್ದಾನೆಂದು ತಿಳಿಯಬಾರದು. ॥೫೫॥ ಶಿವನು ಸರ್ವತ್ರ ವ್ಯಾಪಕನಾಗಿದ್ದರೂ ತನಗೆ ಆಧಾರಭೂತವಾದ ಇಷ್ಟಲಿಂಗದಲ್ಲಿಯೇ ವಿಶೇಷವಾಗಿ ವಾಸಿಸಿದ್ದಾನೆ; ಆದುದರಿಂದ ಮಾಹೇಶ್ವರನು ಅನ್ಯಭಾವನೆಯಿಂದ ವಿಮುಖನಾಗಿ ತನ್ನ ಇಷ್ಟಲಿಂಗದಲ್ಲಿಯೇ ಶಿವನನ್ನು ಪೂಜಿಸಬೇಕು. ವೀರಶೈವನು ಸ್ಥಾವರಲಿಂಗದಲ್ಲಿಯೂ ಕೂಡ ಶಿವನನ್ನು ಪೂಜಿಸದೆ ಮುಖ್ಯವಾಗಿ ಇಷ್ಟಲಿಂಗದಲ್ಲಿಯೇ ಶಿವನನ್ನು ಪೂಜಿಸಬೇಕೆನ್ನುವುದೇ ಭಗವತ್ಪಾದರ ತಾತ್ಪರ್ಯವು. ॥೫೬॥

ಶಿವಃ ಸರ್ವಗತಶ್ಚಾಪಿ ಸ್ವಾಧಾರೇ ವ್ಯಜ್ಯತೇ ಭೃಶಂ।
ಶಮೀಗರ್ಭೇ ಯಥಾ ವಹ್ನಿರ್ವಿಶೇಷೇಣ ವಿಭಾವ್ಯತೇ ||೫೭||

ಸರ್ವಗತ್ವಂ ಮಹೇಶಸ್ಯ ಸರ್ವಶಾಸ್ತ್ರವಿನಿಶ್ಚಿತಂ।
ತಥಾಪ್ಯಾಶ್ರಯಲಿಂಗಾದೌ ಪೂಜಾರ್ಥಮಧಿಕಾ ಸ್ಥಿತಿಃ ||೫೮||

ತಸ್ಮಾತ್ಸರ್ವಪ್ರಯತ್ನೇನ ಸರ್ವಸ್ಥಾನಪರಾಙ್ಮುಖಃ।
ಸ್ವೇಷ್ಟಲಿಂಗೇ ಮಹಾದೇವಂ ಪೂಜಯೇತ್ಪೂಜಕೋತ್ತಮಃ ||೫೯||

ಶಿವಸ್ಯ ಸರ್ವಗತ್ವೇಽಪಿ ಸರ್ವತ್ರ ರತಿವರ್ಜಿತಃ।
ಸ್ವೇಷ್ಟಲಿಂಗೇ ಯಜನ್ ದೇವಂ ಸರ್ವಗತ್ವನಿರಾಸಕಃ ||೬೦||

೨೩ ಶಿವಜಗನ್ಮಯಸ್ಥಲಂ

ಪೂಜಾವಿಧೌ ನಿಯಮ್ಯತ್ವಾಲ್ಲಿಂಗಮಾತ್ರೇ ಸ್ಥಿತಂ ಶಿವಂ।
ಪೂಜಯನ್ನಪಿ ದೇವಸ್ಯ ಸರ್ವಗತ್ವಂ ವಿಭಾವಯೇತ್ ||೬೧||

ಬೆಂಕಿಯು ಎಲ್ಲಾ ಕಟ್ಟಿಗೆಗಳಲ್ಲಿದ್ದರೂ ಬನ್ನಿಕಟ್ಟಿಗೆಯ ಗರ್ಭದಲ್ಲಿಯೇ ಹೇಗೆ ವಿಶೇಷವಾಗಿರುವುದೋ, ಹಾಗೆಯೇ ಶಿವನು ಸರ್ವತ್ರ ವ್ಯಾಪಕನಾಗಿದ್ದರೂ ತನಗೆ ಆಧಾರಭೂತವಾದ ಇಷ್ಟಲಿಂಗದಲ್ಲಿಯೇ ವಿಶೇಷವಾಗಿ ಪ್ರಕಾಶಿಸುತ್ತಾನೆ. ||೫೭|| ಶಿವನು ಸರ್ವತ್ರ ವ್ಯಾಪಿಸಿದ್ದಾನೆನ್ನುವುದು ಶಾಸ್ತ್ರಸಿದ್ಧವಾದುದು ; ಆದರೂ ತನಗೆ ಆಧಾರಭೂತವಾದ ಇಷ್ಟಲಿಂಗದಲ್ಲಿಯೂ, ಗುರುಜಂಗಮರಲ್ಲಿಯೂ ಪೂಜೆಗೋಸ್ಕರ ವಿಶೇಷವಾಗಿ ವಾಸಿಸಿದ್ದಾನೆ. ||೫೮|| ಆದುದರಿಂದ ಮಾಹೇಶ್ವರನು, ಶಿವನು ಸರ್ವಸ್ಥಾನಗಳಲ್ಲಿಯೂ ಇದ್ದಾನೆಂಬ ಭಾವನೆಯಿಂದ ದೂರನಾಗಿ, ಸರ್ವಪ್ರಯತ್ನದಿಂದಲೂ ತನ್ನ ಇಷ್ಟಲಿಂಗದಲ್ಲಿಯೇ ಶಿವನನ್ನು ಪೂಜಿಸಬೇಕು. ||೫೯|| ಶಿವನು ಸರ್ವತ್ರ ವ್ಯಾಪಿಸಿದ್ದರೂ ಸರ್ವತ್ರ ಪ್ರೀತಿಯನ್ನಿಡದೆ, ತನ್ನ ಇಷ್ಟಲಿಂಗದಲ್ಲಿಯೇ ಶಿವನನ್ನು ಪೂಜಿಸುವವನು ಸರ್ವಗತ್ವನಿರಾಸಕನೆಂದು ಹೇಳಿಸಿಕೊಳ್ಳುವನು. ||೬೦||

೨೩ ಶಿವಜಗನ್ಮಯಸ್ಥಲ

ಶಿವನು ಭಕ್ತಾಧೀನನಾಗಿರುವುದರಿಂದ ಪೂಜಕನು ಪೂಜಾಕಾಲವಲ್ಲಿ ತನ್ನ ಇಷ್ಟಲಿಂಗದಲ್ಲಿ ಮಾತ್ರ ವಾಸಿಸಿದ್ದಾನೆಂದು ಭಾವಿಸಿ ಪೂಜಿಸಿದರೂ, ಆಮೇಲೆ ಶಿವನು ಸರ್ವವ್ಯಾಪಕನೆಂದು ತಿಳಿಯಬೇಕು. ||೬೧|| ಮಣ್ಣಿನಿಂದ ಹುಟ್ಟಿದ ಕೊಡ

ಯಸ್ಮಾದೇತತ್ಸಮುತ್ಪನ್ನಂ ಮಹಾದೇವಾಚ್ಚರಾಚರಂ ।
ತಸ್ಮಾದೇತನ್ನ ಭಿದ್ಯೇತ ಯಥಾ ಕುಂಭಾದಿಕಂ ಮೃದಃ ॥೬೨॥

ಶಿವತತ್ತ್ವಾತ್ಸಮುತ್ಪನ್ನಂ ಜಗದಸ್ಮಾನ್ನ ಭಿದ್ಯತೇ ।
ಫೇನೋರ್ಮಿಬುದ್ಬುದಾಕಾರೋ ಯಥಾ ಸಿಂಧೋರ್ನ ಭಿದ್ಯತೇ॥೬೩॥

ಯಥಾ ತಂತುಭಿರುತ್ಪನ್ನಃ ಪಟಸ್ತಂತುಮಯಃ ಸ್ಮೃತಃ ।
ತಥಾ ಶಿವಾತ್ಸಮುತ್ಪನ್ನಂ ಶಿವ ಏವ ಚರಾಚರಂ ॥೬೪॥

ಆತ್ಮಶಕ್ತಿವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ ।
ಕುಟೀಭಾವಾದ್ಯಥಾ ಭಾತಿ ಪಟಃ ಸ್ವಸ್ಯ ಪ್ರಸಾರಣಾತ್ ॥೬೫॥

ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ ।
ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ ॥೬೬॥

ಮೊದಲಾದವುಗಳು ಮಣ್ಣಿನಿಂದ ಹೇಗೆ ಭಿನ್ನಗಳಲ್ಲವೋ, ಹಾಗೆಯೇ ಶಿವನಿಂದುತ್ಪನ್ನವಾದ ಈ ಚರಾಚರಾತ್ಮಕವಾದ ಜಗತ್ತು ಶಿವನಿಂದ ಭಿನ್ನವಾಗಿರುವುದಿಲ್ಲ. ॥೬೨॥ ಸಮುದ್ರದಿಂದ ಹುಟ್ಟಿದ ನೊರೆ-ತೆರೆ-ಬುದ್ಬುದಾದಿಗಳು ಸಮುದ್ರಕ್ಕಿಂತಲೂ ಹೇಗೆ ಭಿನ್ನಗಳಾಗಿಲ್ಲವೋ, ಹಾಗೆಯೇ ಶಿವತತ್ತ್ವದಿಂದ ಉತ್ಪನ್ನವಾದ ಜಗತ್ತು ಶಿವನಿಗಿಂತಲೂ ಭಿನ್ನವಾಗಿರುವುದಿಲ್ಲ. ॥೬೩॥ ತಂತುಗಳಿಂದ ಉತ್ಪನ್ನವಾದ ಪಟವು ಹೇಗೆ ತಂತುಸ್ವರೂಪವಾಗಿರುವುದೋ, ಹಾಗೆಯೇ ಶಿವನಿಂದ ಉತ್ಪನ್ನವಾದ ಚರಾಚರಾತ್ಮಕವಾದ ಜಗತ್ತು ಶಿವಸ್ವರೂಪವೇ ಆಗಿರುವುದು. ॥೬೪॥ ವಸ್ತ್ರವು ತನ್ನ ಪ್ರಸಾರಣದಿಂದ ವಸ್ತ್ರಮಂದಿರ(ಡೇರಾ) ವಾಗಿ ಹೇಗೆ ತೋರುತ್ತದೆಯೋ, ಹಾಗೆಯೇ ಶಿವನು ತನ್ನಲ್ಲಿ ನಿತ್ಯಸಂಬಂಧದಿಂದಿರುವ ವಿಮರ್ಶಶಕ್ತಿಯ ವಿಕಾಸದಿಂದ ವಿಶ್ವರೂಪಿಯಾಗಿರುವನು. ॥೬೫॥ ವೃಕ್ಷವು ಪತ್ರ-ಶಾಖಾದಿರೂಪದಿಂದ ಹೇಗೆ ವಿರಾಜಿಸುತ್ತಿರುವುದೋ, ಹಾಗೆಯೇ ಶಿವನು ಭೂಮಿಜಲಾದಿರೂಪದಿಂದ ವಿರಾಜಿಸುತ್ತಿರುವನು. ಶ್ರೀ ರೇಣುಕಭಗವತ್ಪಾದರು ಸಕಲಚರಾಚರಾತ್ಮಕವಾದೀ ಜಗತ್ತು ಸತ್ಯವಾದುದೆಂದೂ, ಶಿವನ ಪರಿಣಾಮರೂಪವಾದುದೆಂದೂ ಈ ಸ್ಥಲದಲ್ಲಿ ಸ್ಪಷ್ಟವಾಗಿ ಅಪ್ಪಣೆಕೊಡಿಸಿರುವರು. ಇದೇ ವಿಷಯವು "ಸ್ವಶಕ್ತಿಪ್ರಚಯೋऽಸ್ಯ ವಿಶ್ವಂ" ಎಂಬ ಶಿವಸೂತ್ರದಲ್ಲಿಯೂ, "ಶಕ್ತಿಶ್ಚ ಶಕ್ತಿಮಾಂಶ್ಚೈವ ಪದಾರ್ಥದ್ವಯಮುಚ್ಯತೇ । ಶಕ್ತಯೋऽಸ್ಯ ಜಗತ್ ಕೃತ್ಸ್ನಂ ಶಕ್ತಿಮಾಂಸ್ತು ಮಹೇಶ್ವರಃ ॥" ಎಂಬೀ ಶ್ಲೋಕದಿಂದ ಶ್ರೀಸರ್ವಮಂಗಲಾಶಾಸ್ತ್ರದಲ್ಲಿಯೂ ಪ್ರತಿಪಾದಿಸಲ್ಪಟ್ಟಿರುವುದು. ಇದರಿಂದ ಚರಾಚರಾತ್ಮಕವಾದೀ ಜಗತ್ತು ಸಾಕ್ಷಾತ್ ಶಿವಸ್ವರೂಪವಾಗಿದ್ದು ಸತ್ಯವಾದುದೆಂದು ಸಿದ್ಧಾಂತವಾಗುವುದು. ॥೬೬॥

೨೪ ಭಕ್ತದೇಹಿಕಲಿಂಗಸ್ಥಲಂ

ಸಮಸ್ತಜಗದಾತ್ಮಾಪಿ ಶಂಕರಃ ಪರಮೇಶ್ವರಃ |
ಭಕ್ತಾನಾಂ ಹೃದಯಾಂಭೋಜೇ ವಿಶೇಷೇಣ ವಿರಾಜತೇ ||೬೭||

ಕೈಲಾಸೇ ಮಂದರೇ ಚೈವ ಹಿಮಾದ್ರೌ ಕನಕಾಚಲೇ |
ಹೃದಯೇಷು ಚ ಭಕ್ತಾನಾಂ ವಿಶೇಷೇಣ ಶಿವಃ ಸ್ಥಿತಃ ||೬೮||

ಸರ್ವಾತ್ಮಾಽಪಿ ಪರಿಚ್ಛಿನ್ನೋ ಯಥಾ ದೇಹೇಷು ವರ್ತತೇ |
ತಥಾ ಸ್ವಕೀಯಭಕ್ತೇಷು ಶಂಕರೋ ಭಾಸತೇ ಸದಾ ||೬೯||

ನಿತ್ಯಂ ಭಾತಿ ತ್ವದೀಯೇಷು ಯಾತೇ ರುದ್ರ ಶಿವಾ ತನೂಃ |
ಅಘೋರಾಽಪಾಪಕಾಶೀತಿ ಶ್ರುತಿರಾಹ ಸನಾತನೀ ||೭೦||

ವಿಶುದ್ಧೇಷು ವಿರಕ್ತೇಷು ವಿವೇಕಿಷು ಮಹಾತ್ಮಸು |
ಶಿವಸ್ತಿಷ್ಠತಿ ಸರ್ವಾತ್ಮಾ ಶಿವಲಾಂಛನಧಾರಿಷು ||೭೧||

ನಿತ್ಯಂ ಸಂತೋಷಯುಕ್ತಾನಾಂ ಜ್ಞಾನನಿರ್ಧೂತಕರ್ಮಣಾಂ |
ಮಾಹೇಶ್ವರಾಣಾಮಂತಸ್ಸ್ಥೋ ವಿಭಾತಿ ಪರಮೇಶ್ವರಃ ||೭೨||

---

೨೪ ಭಕ್ತದೇಹಿಕಲಿಂಗಸ್ಥಲ

ಶಿವನು ಸಕಲಚರಾಚರಾತ್ಮಕಜಗತ್ಸ್ವರೂಪನಾಗಿದ್ದರೂ, ಭಕ್ತರ ಹೃದಯಕಮಲದಲ್ಲಿ ವಿಶೇಷವಾಗಿ ವಿರಾಜಿಸುತ್ತಿರುವನು. ||೬೭|| ಶಿವನು ಕೈಲಾಸಪರ್ವತದಲ್ಲಿಯೂ, ಮಂದರಪರ್ವತದಲ್ಲಿಯೂ, ಹಿಮವತ್ಪರ್ವತದಲ್ಲಿಯೂ, ಮೇರುಪರ್ವತದಲ್ಲಿಯೂ, ಶಿವಭಕ್ತರ ಹೃದಯದಲ್ಲಿಯೂ ವಿಶೇಷವಾಗಿ ವಾಸಿಸುವನು. ||೬೮|| ಶಿವನು ಸರ್ವಾತ್ಮನಾದರೂ ಪರಿಚ್ಛಿನ್ನನಾಗಿ ದೇವತಿರ್ಯಙ್ಮನುಷ್ಯಾದಿದೇಹಗಳಲ್ಲಿ ಹೇಗೆ ವಾಸಿಸುವನೋ, ಹಾಗೆಯೇ ತನ್ನ ಭಕ್ತರಲ್ಲಿ ಯಾವಾಗಲೂ ವಾಸಿಸುವನು. ||೬೯|| ಎಲೈ ರುದ್ರನೇ! ಯಾವ ನಿನ್ನ ಶಾಂತವೂ ದೋಷರಹಿತವೂ ಆದ ಮಂಗಲಶರೀರವು (ಶಿವಲಿಂಗಮೂರ್ತಿಯು) ನಿನ್ನ ಸಂಬಂಧಿಕರಾದ ಭಕ್ತರಲ್ಲಿ ಪ್ರಕಾಶಿಸುತ್ತಿರುವುದೆಂದು, ಯಜುರ್ವೇದವು "ಯಾ ತೇ ರುದ್ರ ಶಿವಾತನೂರಘೋರಾಽಪಾಪಕಾಶಿನೀ" ಎಂಬ ಮಂತ್ರದಿಂದ ಬೋಧಿಸುತ್ತಿರುವುದು. ||೭೦|| ವಿಶುದ್ಧರೂ, ವೈರಾಗ್ಯಶಾಲಿಗಳೂ, ಜ್ಞಾನಿಗಳೂ, ಮಹಾತ್ಮರೂ ಆದ ಶಿವಲಾಂಛನಧಾರಿಗಳಲ್ಲಿ ಸರ್ವಾತ್ಮನಾದ ಶಿವನು ವಾಸಿಸುತ್ತಿರುವನು. ||೭೧|| ಪರಮೇಶ್ವರನು ಯಾವಾಗಲೂ ಸಂತೋಷಯುಕ್ತರೂ, ಜ್ಞಾನದಿಂದ ಪಶುಕರ್ಮವನ್ನು ದೂರೀಕರಿಸಿದವರೂ ಆದ ಮಾಹೇಶ್ವರರ

ಅನ್ಯತ್ರ ಶಂಭೋರತಿಮಾತ್ರಶೂನ್ಯೋ
ನಿಜೇಷ್ಟಲಿಂಗೇ ನಿಯತಾಂತರಾತ್ಮಾ ।
ಶಿವಾತ್ಮಕಂ ವಿಶ್ವಮಿದಂ ವಿಬುಧ್ಯನ್
ಮಾಹೇಶ್ವರೋಽಸೌ ಭವತಿ ಪ್ರಸಾದೀ ॥೭೩॥

ಇತಿ ಶ್ರೀಸಿದ್ಧಾಂತಶಿಖಾಮಣೌ ಮಾಹೇಶ್ವರಸ್ಥಲೇ ಮಾಹೇಶ್ವರ ಪ್ರಶಂಸಾದಿನವವಿಧಸ್ಥಲಪ್ರಸಂಗೋ ನಾಮ

ದಶಮಪರಿಚ್ಛೇದಃ ಪರಿಸಮಾಪ್ತಃ

ಹೃದಯದಲ್ಲಿರುವವನಾಗಿ ಪ್ರಕಾಶಿಸುತ್ತಾನೆ. ॥೭೨॥ ಶಿವೇತರದೇವತೆಗಳಲ್ಲಿ ಪ್ರೀತಿ ಶೂನ್ಯನೂ, ತನ್ನ ಇಷ್ಟಲಿಂಗದಲ್ಲಿ ಅಂತರಾತ್ಮನನ್ನು ಸಂಬಂಧಿಸಿಕೊಂಡವನೂ, ಚರಾಚರಪ್ರಪಂಚವನ್ನು ಶಿವಸ್ವರೂಪವನ್ನಾಗಿ ತಿಳಿಯುವವನೂ ಆದ ಈ ಮಾಹೇಶ್ವರನೇ ಪ್ರಸಾದಿಯೆನಿಸುವನು. ॥೭೩॥

ಇಂತು ಶ್ರೀಸಿದ್ಧಾಂತಶಿಖಾಮಣಿಯ ಮಾಹೇಶ್ವರಸ್ಥಲದಲ್ಲಿ ಮಾಹೇಶ್ವರ ಪ್ರಶಂಸಾದಿನವವಿಧಸ್ಥಲವಿಚಾರಾತ್ಮಕವಾದ

ಹತ್ತನೆಯ ಪರಿಚ್ಛೇದವು ಪರಿಸಮಾಪ್ತವಾದುದು.

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಏಕಾದಶಪರಿಚ್ಛೇದಃ

ಪ್ರಸಾದಿಸ್ಥಲಂ

|| ಅಗಸ್ತ್ಯ ಉವಾಚ ||

ಉಕ್ತೋ ಮಾಹೇಶ್ವರಸ್ಸಾಕ್ಷಾಲ್ಲಿಂಗನಿಷ್ಠಾದಿಧರ್ಮವಾನ್ ।
ಕಥಮೇಷ ಪ್ರಸಾದೀತಿ ಕಥ್ಯತೇ ಗಣನಾಯಕ ||೧||

|| ರೇಣುಕ ಉವಾಚ ||

ಲಿಂಗನಿಷ್ಠಾದಿಭಾವೇನ ಧ್ವಸ್ತಪಾಪನಿಬಂಧನಃ ।
ಮನಃಪ್ರಸಾದಯೋಗೇನ ಪ್ರಸಾದೀತ್ಯೇಷ ಕಥ್ಯತೇ ||೨||

ಪ್ರಸಾದಿಸ್ಥಲಮಿತ್ಯೇತದಸ್ಯ ಮಾಹಾತ್ಮ್ಯಬೋಧಕಂ ।
ಅಂತರಸ್ಥಲಭೇದೇನ ಸಪ್ತಧಾ ಪರಿಕೀರ್ತಿತಂ ||೩||

ಪ್ರಸಾದಿಸ್ಥಲಮಾದೌ ತು ಗುರುಮಾಹಾತ್ಮ್ಯಕಂ ತತಃ ।
ತತೋ ಲಿಂಗಪ್ರಶಂಸಾ ಚ ತತೋ ಜಂಗಮಗೌರವಂ ||೪||

ಹನ್ನೊಂದನೆಯ ಪರಿಚ್ಛೇದವು.

ಪ್ರಸಾದಿಸ್ಥಲ

ವ್ಯಾಖ್ಯಾನ—ಎಲೈ, ಗಣಾಧೀಶ್ವರನೇ! ಲಿಂಗನಿಷ್ಠಾದಿಧರ್ಮಗಳುಳ್ಳವನು ಮಾಹೇಶ್ವರನೆಂದು ಹೇಳಲ್ಪಟ್ಟನು. ಈ ಮಾಹೇಶ್ವರನು ಪ್ರಸಾದಿಯೆಂದು ಹೇಗೆ ಹೇಳಿಸಿಕೊಳ್ಳಲ್ಪಡುವನು? ಎಂದು ಅಗಸ್ತ್ಯಮಹರ್ಷಿಯು ಪ್ರಶ್ನಮಾಡಲು—ಅದಕ್ಕೆ ಶ್ರೀ ರೇಣುಕಾಚಾರ್ಯರು—ಎಲೈ, ಅಗಸ್ತ್ಯಮಹರ್ಷಿಯೇ! ಲಿಂಗನಿಷ್ಠಾದಿಸ್ಥಲಗಳನ್ನು ಆಚರಿಸುವುದರಿಂದ ಇವನು ಪಾಪದಿಂದ ದೂರನಾಗಿ, ಮನಃಪ್ರಸಾದಯೋಗದಿಂದ ಪ್ರಸಾದಿಯೆಂದು ಹೇಳಿಸಿಕೊಳ್ಳಲ್ಪಡುವನು. ||೧-೨|| ಈ ಪ್ರಸಾದಿಸ್ಥಲವು ಪ್ರಸಾದಿಯ ಮಹಿಮೆಯನ್ನು ಬೋಧಿಸುವುದು. ಈ ಪ್ರಸಾದಿಸ್ಥಲವು ಅವಾಂತರಭೇದದಿಂದ ಪ್ರಸಾದಿಸ್ಥಲ, ಗುರುಮಾಹಾತ್ಮ್ಯಸ್ಥಲ, ಲಿಂಗಮಾಹಾತ್ಮ್ಯಸ್ಥಲ,

ತತೋ ಭಕ್ತಸ್ಯ ಮಾಹಾತ್ಮ್ಯಂ ತತಃ ಶರಣಕೀರ್ತನಂ ।
ಶಿವಪ್ರಸಾದಮಾಹಾತ್ಮ್ಯಮಿತಿ ಸಪ್ತಪ್ರಕಾರಕಂ ॥
ಕ್ರಮಾಲ್ಲಕ್ಷಣಮೇತೇಷಾಂ ಕಥಯಾಮಿ ಮಹಾಮುನೇ ॥೫॥

೨೫ ಪ್ರಸಾದಿಸ್ಥಲಂ

ನೈರ್ಮಲ್ಯಂ ಮನಸೋ ಲಿಂಗಂ ಪ್ರಸಾದ ಇತಿ ಕಥ್ಯತೇ ।
ಶಿವಸ್ಯ ಲಿಂಗರೂಪಸ್ಯ ಪ್ರಸಾದಾದೇವ ಸಿದ್ಧ್ಯತಿ ॥೬॥

ಶಿವಪ್ರಸಾದೋ ಯದ್ದ್ರವ್ಯಂ ಶಿವಾಯ ವಿನಿವೇದಿತಂ ।
ನಿರ್ಮಾಲ್ಯಂ ತತ್ತು ಶೈವಾನಾಂ ಮನೋನೈರ್ಮಲ್ಯಕಾರಣಂ ॥೭॥

ಮನಃಪ್ರಸಾದಸಿದ್ಧ್ಯರ್ಥಂ ನಿರ್ಮಲಜ್ಞಾನಕಾರಣಂ ।
ಶಿವಪ್ರಸಾದಂ ಸ್ವೀಕುರ್ವನ್ ಪ್ರಸಾದೀತ್ಯೇಷ ಕಥ್ಯತೇ ॥೮॥

ಅನ್ನಶುದ್ಧ್ಯಾ ಹಿ ಸರ್ವೇಷಾಂ ತತ್ತ್ವಶುದ್ಧಿರುದಾಹೃತಾ ।
ವಿಶುದ್ಧಮನ್ನಜಾತಂ ಹಿ ಯಚ್ಛಿವಾಯ ಸಮರ್ಪಿತಂ ॥೯॥

ಜಂಗಮಮಾಹಾತ್ಮ್ಯಸ್ಥಲ, ಭಕ್ತಮಾಹಾತ್ಮ್ಯಸ್ಥಲ, ಶರಣಮಾಹಾತ್ಮ್ಯಸ್ಥಲ, ಪ್ರಸಾದಮಾಹಾತ್ಮ್ಯಸ್ಥಲ, ಎಂದು ಏಳುಪ್ರಕಾರವಾಗಿರುವುದು. ಇವುಗಳ ಲಕ್ಷಣವನ್ನು ಅನುಕ್ರಮವಾಗಿ ಹೇಳುತ್ತೇನೆ; ಎಂದು ನುಡಿದು ಆ ಸ್ಥಲಗಳ ವಿಷಯವನ್ನು ಬೋಧಿಸಲುಪಕ್ರಮಿಸಿದರು. ॥೩-೪-೫॥

೨೫ ಪ್ರಸಾದಿಸ್ಥಲ

ಮನಸ್ಸಿನ ನಿರ್ಮಲತ್ವಚಿಹ್ನವು ಪ್ರಸಾದವೆನಿಸುವುದು. ಈ ಪ್ರಸಾದವು ಲಿಂಗರೂಪಿಯಾದ ಶಿವನ ಪ್ರಸಾದದಿಂದಲೇ ಸಿದ್ಧಿಸುವುದು. ॥೬॥ ಯಾವ ವಸ್ತುವು ಶಿವನಿಗೆ ಸಮರ್ಪಿಸಲ್ಪಡುವುದೋ ಅದು ಶಿವಪ್ರಸಾದವೆನಿಸುವುದು. ಆ ಶಿವಪ್ರಸಾದವು ವೀರಶೈವರ ಮನೋನೈರ್ಮಲ್ಯಕ್ಕೆ ಕಾರಣವಾಗಿರುವುದು. ॥೭॥ ಮನಃಪ್ರಸಾದಸಿದ್ಧಿಗಾಗಿ ಶಿವಜ್ಞಾನಕಾರಣವಾದ ಶಿವಪ್ರಸಾದವನ್ನು ಸ್ವೀಕರಿಸುವ ಈ ಮಾಹೇಶ್ವರನು ಪ್ರಸಾದಿಯೆಂದು ಹೇಳಿಸಿಕೊಳ್ಳುವನು. ॥೮॥ ಅನ್ನಶುದ್ಧಿಯಿಂದಲೇ ಸರ್ವಪ್ರಾಣಿಗಳ ತತ್ತ್ವಶುದ್ಧಿಯಾಗುವುದೆಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಯಾವುದು ಶಿವನಿಗೆ ಸಮರ್ಪಿಸಲ್ಪಡುವುದೋ ಅದು ಪರಿಶುದ್ಧವಾದ ಪ್ರಸಾದವೆನಿಸು

ತದೇವ ಸರ್ವಕಾಲಂ ತು ಭುಂಜಾನೋ ಲಿಂಗತತ್ಪರಃ ।
ಮನಃಪ್ರಸಾದಮತುಲಂ ಲಭತೇ ಜ್ಞಾನಕಾರಣಂ ॥೧೦॥

ಆತ್ಮಭೋಗಾಯ ನಿಯತಂ ಯದ್ಯದ್ದ್ರವ್ಯಂ ಸಮಾಹಿತಂ ।
ತತ್ತತ್ಸಮರ್ಪ್ಯ ದೇವಾಯ ಭುಂಜೀತಾತ್ಮವಿಶುದ್ಧಯೇ ॥೧೧॥

ನಿತ್ಯಸಿದ್ಧೇನ ದೇವೇನ ಭಿಷಜಾ ಜನ್ಮರೋಗಿಣಾಂ ।
ಯದ್ಯತ್ಪ್ರಸಾದಿತಂ ಭುಕ್ತ್ವಾ ತತ್ತಜ್ಜನ್ಮರಸಾಯನಂ ॥೧೨॥

ಆರೋಗ್ಯಕಾರಣಂ ಪುಂಸಾಮಂತಃಕರಣಶುದ್ಧಿದಂ ।
ತಾಪತ್ರಯಮಹಾರೋಗಸಮುದ್ಧರಣಭೇಷಜಂ ॥೧೩॥

ವಿದ್ಯಾನೈಶದ್ಯಕರಣಂ ವಿನಿಪಾತವಿಘಾತನಂ ।
ದ್ವಾರಂ ಜ್ಞಾನಾವತಾರಸ್ಯ ಮೋಹಚ್ಛೇದಸ್ಯ ಕಾರಣಂ ॥೧೪॥

ವೈರಾಗ್ಯಸಂಪದೋ ಮೂಲಂ ಮಹಾನಂದಪ್ರವರ್ಧನಂ ।
ದುರ್ಲಭಂ ಪಾಪಚಿತ್ತಾನಾಂ ಸುಲಭಂ ಶುದ್ಧಕರ್ಮಣಾಂ ॥೧೫॥

ವುದು. ॥೯॥ ಲಿಂಗನಿಷ್ಠೆಯುಳ್ಳವನು ಯಾವಾಗಲೂ ಆ ಶಿವಪ್ರಸಾದವನ್ನೇ ಸ್ವೀಕರಿಸುವವನಾಗಿ, ಶಿವಜ್ಞಾನಕಾರಣವಾದ ಮನೋನೈರ್ಮಲ್ಯವನ್ನು ಹೊಂದುತ್ತಾನೆ. ॥೧೦॥ ತನ್ನ ಭೋಗಕ್ಕೋಸ್ಕರ ಯಾವ ಯಾವ ವಸ್ತುವು ಸಂಪಾದಿಸಲ್ಪಟ್ಟಿರುವುದೋ, ಆಯಾ ವಸ್ತುವನ್ನು ಶಿವನಿಗೆ ಸಮರ್ಪಿಸಿ ಚಿತ್ತಶುದ್ಧಿಗಾಗಿ ಅದನ್ನೇ ಸ್ವೀಕರಿಸಬೇಕು. ॥೧೧॥ ಭವರೋಗಿಗಳಿಗೆ ವೈದ್ಯನೂ, ಶಿವಲಿಂಗದಲ್ಲಿ ಯಾವಾಗಲೂ ವಾಸಿಸಿರುವವನೂ ಆದ ಶಿವನಿಂದ ಯಾವ ಯಾವ ವಸ್ತುವು ಸ್ವೀಕರಿಸಲ್ಪಟ್ಟು ಪ್ರಸಾದರೂಪವಾಗಿ ಮಾಡಲ್ಪಡುವುದೋ, ಆಯಾ ವಸ್ತುವು ಸಂಸಾರರೂಪರೋಗಕ್ಕೆ ರಸಾಯನಸ್ವರೂಪವಾಗಿರುವುದು. ॥೧೨॥ ಆರೋಗ್ಯಕ್ಕೆ ಕಾರಣವಾದುದೂ, ಮಾನವರಿಗೆ ಚಿತ್ತಶುದ್ಧಿಯನ್ನುಂಟುಮಾಡತಕ್ಕುದೂ, ಆಧ್ಯಾತ್ಮಿಕ-ಆಧಿಭೌತಿಕ-ಆಧಿದೈವಿಕರೂಪತಾಪತ್ರಯವೆಂಬ ಮಹಾರೋಗವನ್ನು ನಾಶಮಾಡುವುದರಲ್ಲಿ ಔಷಧಸ್ವರೂಪವಾದುದೂ, ಆತ್ಮವಿದ್ಯಾವಿಕಾಸಕ್ಕೆ ಮೂಲಸಾಧನವಾದುದೂ, ಕೃತ್ರಿಮದೋಷಗಳನ್ನು ನಾಶಮಾಡತಕ್ಕುದೂ, ಶಿವಜ್ಞಾನಾವಿರ್ಭಾವಕ್ಕೆ ದ್ವಾರದಂತಿರುವುದೂ, ಮೋಹನಾಶಕ್ಕೆ ಕಾರಣವಾದುದೂ, ವೈರಾಗ್ಯಸಂಪತ್ತಿಗೆ ಮೂಲವಾದುದೂ, ನಿತ್ಯಾನಂದವನ್ನು ಅಭಿವೃದ್ಧಿಗೊಳಿಸುವುದೂ, ಪಾಪಾತ್ಮರಿಗೆ ದುರ್ಲಭವಾದುದೂ, ಪುಣ್ಯಾತ್ಮರಿಗೆ ಸುಲಭವಾದುದೂ, ಬ್ರಹ್ಮವಿಷ್ಣುಮೊದಲಾದ ದೇವತೆಗಳಿಂದಲೂ ವಸಿಷ್ಠ

ಆದೃತಂ ಬ್ರಹ್ಮವಿಷ್ಣ್ವಾದ್ಯೈರ್ವಸಿಷ್ಠಾದ್ಯೈಶ್ಚ ತಾಪಸೈಃ ।
ಶಿವಸ್ವೀಕೃತಮನ್ನಾದ್ಯಂ ಸ್ವೀಕಾರ್ಯಂ ಸಿದ್ಧಿಕಾಂಕ್ಷಿಭಿಃ ॥೧೬॥

ಪತ್ರಂ ಪುಷ್ಪಂ ಫಲಂ ತೋಯಂ ಯಚ್ಛಿವಾಯ ನಿವೇದಿತಂ ।
ತತ್ತತ್ಸ್ವೀಕಾರಯೋಗೇನ ಸರ್ವಪಾಪಕ್ಷಯೋ ಭವೇತ್ ॥೧೭॥

೨೬ ಗುರುಮಾಹಾತ್ಮ್ಯಸ್ಥಲಂ

ಯಥಾ ಶಿವಪ್ರಸಾದಾನ್ನಂ ಸ್ವೀಕಾರ್ಯಂ ಲಿಂಗತತ್ಪರೈಃ ।
ತಥಾ ಗುರೋಃ ಪ್ರಸಾದಾನ್ನಂ ತಥೈವ ಶಿವಯೋಗಿನಾಂ ॥೧೮॥

ಗುರುರೇವಾತ್ರ ಸರ್ವೇಷಾಂ ಕಾರಣಂ ಸಿದ್ಧಿಕರ್ಮಣಾಂ ।
ಗುರುರೂಪೋ ಮಹಾದೇವೋ ಯತಃ ಸಾಕ್ಷಾದುಪಸ್ಥಿತಃ ॥೧೯॥

ನಿಷ್ಕಲೋಽಪಿ ಮಹಾದೇವೋ ನಿತ್ಯಜ್ಞಾನಮಹೋದಧಿಃ ।
ಸಕಲೋ ಗುರುರೂಪೇಣ ಸರ್ವಾನುಗ್ರಾಹಕೋ ಭವೇತ್ ॥೨೦॥

ಮೊದಲಾದ ಮಹರ್ಷಿಗಳಿಂದಲೂ ಸ್ವೀಕೃತವಾದುದೂ ಆದ ಶಿವಸ್ವೀಕೃತಾನ್ನಾದಿ ರೂಪಪ್ರಸಾದವನ್ನು ಮೋಕ್ಷಸಿದ್ಧಿಕಾಂಕ್ಷಿಗಳು ಭಕ್ತಿಯಿಂದ ಸ್ವೀಕರಿಸಬೇಕು. ॥೧೩-೧೪-೧೫-೧೬॥ ಪತ್ರವಾಗಲಿ, ಪುಷ್ಪವಾಗಲಿ, ಫಲವಾಗಲಿ, ಜಲವಾಗಲಿ, ಯಾವುದು ಶಿವನಿಗೆ ಸಮರ್ಪಿಸಲ್ಪಡುವುದೋ, ಆಯಾ ಪದಾರ್ಥವನ್ನು ಸ್ವೀಕರಿಸುವುದರಿಂದ ಸರ್ವಪಾಪಗಳೂ ನಾಶವಾಗುವುವು. ॥೧೭॥

೨೬ ಗುರುಮಾಹಾತ್ಮ್ಯಸ್ಥಲ

ಲಿಂಗನಿಷ್ಠೆಯುಳ್ಳವರು ಶಿವಪ್ರಸಾದಾನ್ನವನ್ನು ಹೇಗೆ ಸ್ವೀಕರಿಸುವರೋ, ಹಾಗೆಯೇ ಗುರುಪ್ರಸಾದಾನ್ನವನ್ನೂ, ಜಂಗಮಪ್ರಸಾದಾನ್ನವನ್ನೂ ಸ್ವೀಕರಿಸಬೇಕು. ॥೧೮॥ ಈ ಲೋಕದಲ್ಲಿ ಭೋಗಮೋಕ್ಷರೂಪಸಕಲಸಿದ್ಧಿಕ್ರಿಯೆಗಳಿಗೆ ಗುರುವೇ ಮೂಲಕಾರಣನಾಗಿರುವನು. ಏಕೆಂದರೆ—ಶಿವನೇ ಪ್ರತ್ಯಕ್ಷವಾಗಿ ಗುರುರೂಪದಿಂದಿರುವನು. ಆದುದರಿಂದಲೇ "ನಗುರೋರಧಿಕಂ" "ನಾಸ್ತಿ ತತ್ತ್ವಂ ಗುರೋಃ ಪರಂ" ಇತ್ಯಾದಿವಾಕ್ಯಗಳಿಂದ ಶ್ರುತಿಗಳು ಗುರುವಿನ ಮಹಿಮೆಯನ್ನು ವಿಶೇಷವಾಗಿ ಕೊಂಡಾಡುತ್ತಿರುವುವು. ॥೧೯॥ ನಿತ್ಯಜ್ಞಾನಸಮುದ್ರಸ್ವರೂಪನಾಗಿರುವ ಶಿವನು ಅವಯವರಹಿತನಾಗಿದ್ದರೂ, ಗುರುರೂಪದಿಂದ ಅವಯವವಿಶಿಷ್ಟನಾಗಿ ಸರ್ವಪ್ರಾಣಿಗಳನ್ನು ಅನುಗ್ರಹಿಸುವನು. ॥೨೦॥ ಯಾವನು ಶಿವನೋ ಅವನೇ ಗುರುವೆಂದೂ,

ಯಃ ಶಿವಃ ಸ ಗುರುರ್ಜ್ಞೇಯೋ ಯೋ ಗುರುಃ ಸ ಶಿವಃ ಸ್ಮೃತಃ ।
ನ ತಯೋರಂತರಂ ಕುರ್ಯಾತ್ ಜ್ಞಾನಾವಾಪ್ತ್ಯೈ ಮಹಾಮತಿಃ ॥೨೧॥

ಹಸ್ತಪಾದಾದಿಸಾಮ್ಯೇನ ನೇತರೈಃ ಸದೃಶಂ ವದೇತ್ ।
ಆಚಾರ್ಯಂ ಜ್ಞಾನದಂ ಶುದ್ಧಂ ಶಿವರೂಪತಯಾ ಸ್ಥಿತಂ ॥೨೨॥

ಆಚಾರ್ಯಸ್ಯಾವಮಾನೇನ ಶ್ರೇಯಃಪ್ರಾಪ್ತಿರ್ವಿಹನ್ಯತೇ ।
ತಸ್ಮಾನ್ನಿಶ್ರೇಯಸಃ ಪ್ರಾಪ್ತ್ಯೈ ಪೂಜಯೇತ್ತಂ ಸಮಾಹಿತಃ ॥೨೩॥

ಗುರುಭಕ್ತಿವಿಹೀನಸ್ಯ ಶಿವಭಕ್ತಿರ್ನ ಜಾಯತೇ ।
ಅತಃ ಶಿವೇ ಯಥಾ ಭಕ್ತಿಸ್ತಥಾ ಭಕ್ತಿರ್ಗುರಾವಪಿ ॥೨೪॥

೨೭ ಲಿಂಗಮಾಹಾತ್ಮ್ಯಸ್ಥಲಂ

ಗುರುಮಾಹಾತ್ಮ್ಯಯೋಗೇನ ನಿಜಜ್ಞಾನಾತಿರೇಕತಃ ।
ಲಿಂಗಸ್ಯಾಪಿ ಚ ಮಾಹಾತ್ಮ್ಯಂ ಸರ್ವೋತ್ಕೃಷ್ಟಂ ವಿಭಾವ್ಯತೇ ॥೨೫॥

ಶಿವಸ್ಯ ಬೋಧಲಿಂಗಂ ಯದ್ಗುರುಬೋಧಿತಚೇತಸಾ ।
ತದೇವ ಲಿಂಗಂ ವಿಜ್ಞೇಯಂ ಶಾಂಕರಂ ಸರ್ವಕಾರಣಂ ॥೨೬॥

ಯಾವನು ಗುರುವೋ ಅವನೇ ಶಿವನೆಂದೂ ತಿಳಿಯಬೇಕು. ಪರಿಪೂರ್ಣಜ್ಞಾನಿಯು ಜ್ಞಾನಪ್ರಾಪ್ತಿಗೋಸ್ಕರ ಅವರಿಬ್ಬರಲ್ಲಿಯೂ ಭೇದಬುದ್ಧಿಯನ್ನು ಮಾಡಬಾರದು. ॥೨೧॥ ಶುದ್ಧನೂ, ಜ್ಞಾನದಾಯಕನೂ, ಶಿವಸ್ವರೂಪನೂ ಆದ ಗುರುವನ್ನು ಕರಚರಣಾದಿದೃಷ್ಟಾಂತದಿಂದ ಇತರರೊಡನೆ ಹೋಲಿಸಿ ಮಾತನಾಡಬಾರದು. ॥೨೨॥ ಗುರುವಿಗೆ ಅವಮಾನಮಾಡುವುದರಿಂದ ಶ್ರೇಯಸ್ಸು ನಷ್ಟವಾಗುವುದು. ಆದುದರಿಂದ ಭೋಗಮೋಕ್ಷಪ್ರಾಪ್ತಿಗಾಗಿ ಶ್ರೀಗುರುವನ್ನು ಏಕಾಗ್ರಚಿತ್ತನಾಗಿ ಪೂಜಿಸಬೇಕು. ॥೨೩॥ ಗುರುಭಕ್ತಿಶೂನ್ಯನಿಗೆ ಶಿವಭಕ್ತಿಯು ಹುಟ್ಟುವುದಿಲ್ಲ. ಆದುದರಿಂದ ಶಿವನಂತೆ ಗುರುವಿನಲ್ಲಿಯೂ ಭಕ್ತಿಯನ್ನಿಡಬೇಕು. ಇದೇ ವಿಷಯವನ್ನು ಶ್ವೇತಾಶ್ವತರಶ್ರುತಿಯು "ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ" ಎಂದು ಸಾರುತ್ತಿರುವುದು. ॥೨೪॥

೨೭ ಲಿಂಗಮಾಹಾತ್ಮ್ಯಸ್ಥಲ

ಗುರುಮಹಿಮೆಯ ಯೋಗದಿಂದಲೂ, ಯಥಾರ್ಥಜ್ಞಾನಾಧಿಕ್ಯದಿಂದಲೂ ಶಿವಲಿಂಗದ ಮಹಿಮೆಯನ್ನಾದರೂ ಸರ್ವೋತ್ಕೃಷ್ಟವನ್ನಾಗಿ ತಿಳಿಯಬೇಕು. ॥೨೫॥ ಶಿವನ ಯಾವ ಚಿನ್ಮಯಲಿಂಗವಡೆಯೋ, ಸರ್ವಕಾರಣೀಭೂತವಾದ ಆ ಲಿಂಗವು ಗುರುಬೋಧಯುಕ್ತವಾದ ಮನಸ್ಸಿನಿಂದಲೇ ತಿಳಿಯಲು ಸಾಧ್ಯವಾಗಿರುವುದು. ॥೨೬॥

ಪರಂ ಪವಿತ್ರಮಮಲಂ ಲಿಂಗಂ ಬ್ರಹ್ಮ ಸನಾತನಂ ।
ಶಿವಾಭಿಧಾನಂ ಚಿನ್ಮಾತ್ರಂ ಸದಾನಂದಂ ನಿರಂಕುಶಂ ॥೨೭॥

ಕಾರಣಂ ಸರ್ವಲೋಕಾನಾಂ ವೇದಾನಾಮಪಿ ಕಾರಣಂ ।
ಪೂರಣಂ ಸರ್ವತತ್ತ್ವಾನಾಂ ತಾರಣಂ ಜನ್ಮವಾರಿಧೇಃ ॥೨೮॥

ಜ್ಯೋತಿರ್ಮಯಮನಿರ್ದೇಶ್ಯಂ ಯೋಗಿನಾಮಾತ್ಮನಿ ಸ್ಥಿತಂ ।
ಕಥಂ ವಿಜ್ಞಾಯತೇ ಲೋಕೇ ಮಹಾಗುರುದಯಾಂ ವಿನಾ ॥೨೯॥

ಬ್ರಹ್ಮಣಾ ವಿಷ್ಣುನಾ ಪೂರ್ವಂ ಯಲ್ಲಿಂಗಂ ಜ್ಯೋತಿರಾತ್ಮಕಂ ।
ಅಪರಿಚ್ಛೇದ್ಯಮಭವತ್ ಕೇನ ವಾ ಪರಿಚೋಧ್ಯತೇ ॥೩೦॥

ಬಹುನಾತ್ರ ಕಿಮುಕ್ತೇನ ಲಿಂಗಂ ಬ್ರಹ್ಮ ಸನಾತನಂ ।
ಯೋಗಿನೋ ಯತ್ರ ಲೀಯಂತೇ ಮುಕ್ತಪಾಶನಿಬಂಧನಾಃ ॥೩೧॥

ಶ್ರೇಷ್ಠವೂ, ಪವಿತ್ರವೂ, ಆಣವಾದಿಮಲರಹಿತವೂ, ಬ್ರಹ್ಮಪದವಾಚ್ಯವೂ, ಸನಾತನವೂ, ಶಿವನಾಮಕವೂ, ಜ್ಞಾನಸ್ವರೂಪವೂ, ಸತ್ಸ್ವರೂಪವೂ, ಆನಂದಸ್ವರೂಪವೂ, ನಿರಂಕುಶವೂ, ಸರ್ವಲೋಕಗಳಿಗೂ ವೇದಗಳಿಗೂ ಕಾರಣೀಭೂತವೂ, ಷಟ್ತ್ರಿಂಶತ್ತತ್ತ್ವಪೂರಿತವೂ, ಭವಸಾಗರತಾರಕವೂ, ಜ್ಯೋತೀರೂಪವೂ, ಯೋಗಿಗಳಿಗೂ ಸಹ ಕಾಣದಿರುವಂಥದಾಗಿ ಸ್ವಸ್ವರೂಪಸ್ಥಿತವೂ ಆದ ಲಿಂಗವು ಈ ಲೋಕದಲ್ಲಿ ಮಹಾಗುರುವಿನ ಕೃಪೆಯಿಲ್ಲದೆ ಹೇಗೆ ತಿಳಿಯಲ್ಪಡುವುದು ? ಶ್ರೀಗುರುವಿನ ಅನುಗ್ರಹವಿಲ್ಲದೆ ಲಿಂಗಸ್ವರೂಪಜ್ಞಾನವಾಗುವುದಿಲ್ಲವೆಂದು ಭಾವವು. ॥೨೭-೨೮-೨೯॥ ಜ್ಯೋತಿರ್ಮಯವಾದ ಯಾವ ಲಿಂಗವು ಪೂರ್ವದಲ್ಲಿ ವಿಷ್ಣುಬ್ರಹ್ಮರಿಂದಲೂ ಸಹ ತಿಳಿಯಲು ಅಸಾಧ್ಯವಾಗಿದ್ದಿತೋ, ಆ ಲಿಂಗವು ಯಾವನಿಂದ ತಿಳಿಯಲು ಶಕ್ಯವು ? ಯಾವನಿಂದಲೂ ತಿಳಿಯಲು ಶಕ್ಯವಿಲ್ಲವೆಂದೂ, ಇದಕ್ಕೆ ಶ್ರೀಗುರುವಿನ ಕೃಪೆಯೇ ಮೂಲಕಾರಣವೆಂದೂ ಭಾವವು. "ವರಾಹೋ ವಿಷ್ಣುರ್ನಿಮಮಜ್ಜ ಭೂಮಾ ಬ್ರಹ್ಮೋತ್ಪಪಾತ ದಿವಮಾಶು ಹಂಸಃ" ಎಂದು ಲಿಂಗಸೂತ್ರವು—ವಿಷ್ಣುಬ್ರಹ್ಮರು ವರಾಹ-ಹಂಸರೂಪಧಾರಿಗಳಾಗಿ ಪರಮಾತ್ಮನನ್ನು ಹುಡುಕಿ ಕಾಣಲಾರದೆ ಹೋದರೆಂಬ ಚರಿತ್ರವನ್ನು ಬೋಧಿಸುತ್ತಿರುವುದು. ॥೩೦॥ ಬಹಳ ಹೇಳುವುದರಿಂದೇನು ? ಆ ಲಿಂಗವು ನಿತ್ಯವಾದ ಬ್ರಹ್ಮವಾಗಿರುವುದು. ಯೋಗಿಗಳು ಪಾಶದಿಂದ ಬಿಡುಗಡೆಯನ್ನು ಹೊಂದಿ ಆ ವಸ್ತುವಿನಲ್ಲಿಯೇ ಅಡಗುವರು. ॥೩೧॥ "ಕ್ರಿಯಾಶಕ್ತ್ಯಾತ್ಮಕಂ ಪೀಠಂ ಜ್ಞಾನಶಕ್ತ್ಯಾತ್ಮನಃ

ಪೀಠಿಕಾ ಪರಮಾ ಶಕ್ತಿರ್ಲಿಂಗಂ ಸಾಕ್ಷಾತ್ಪರಃ ಶಿವಃ ।
ಶಿವಶಕ್ತಿಸಮಾಯೋಗಂ ವಿಶ್ವಂ ಲಿಂಗಂ ತದುಚ್ಯತೇ ॥೩೨॥

ಬ್ರಹ್ಮಾದಯಃ ಸುರಾಃ ಸರ್ವೇ ಮುನಯಃ ಶೌನಕಾದಯಃ ।
ಶಿವಲಿಂಗಾರ್ಚನಾದೇವ ಸ್ವಂ ಸ್ವಂ ಪದಮವಾಪ್ನುವನ್ ॥೩೩॥

ವಿಶ್ವಾಧಿಪತ್ಯಮೀಶಸ್ಯ ಲಿಂಗಮೂರ್ತೇಃ ಸ್ವಭಾವಜಂ ।
ಅನನ್ಯದೇವಸಾದೃಶ್ಯಂ ಶ್ರುತಿರಾಹ ಸನಾತನೀ ॥೩೪॥

೨೮ ಜಂಗಮಮಾಹಾತ್ಮ್ಯಸ್ಥಲಂ

ಗುರುಶಿಷ್ಯಸಮಾರೂಢಲಿಂಗಮಾಹಾತ್ಮ್ಯಸಂಪದಃ ।
ಸರ್ವಚಿದ್ರೂಪವಿಜ್ಞಾನಾಜ್ಜಂಗಮಾಧಿಕ್ಯಮುಚ್ಯತೇ ॥೩೫॥

ಜಾನಂತ್ಯತಿಶಯಾದ್ಯೇ ತು ಶಿವಂ ವಿಶ್ವಪ್ರಕಾಶಕಂ ।
ಸ್ವಸ್ವರೂಪತಯಾ ತೇ ತು ಜಂಗಮಾ ಇತಿ ಕೀರ್ತಿತಾಃ ॥೩೬॥

ಪ್ರಭೋಃ ॥" ಎಂಬ ಶಿವಾಗಮಪ್ರಮಾಣಾನುಸಾರವಾಗಿ ಶಕ್ತಿಯು ಪೀಠವೆನಿಸುವುದು; ಪರಶಿವನು ಲಿಂಗವೆನಿಸುವನು; ಶಿವಶಕ್ತಿಯರ ಸಂಬಂಧವುಳ್ಳ ಆ ಲಿಂಗವು ವಿಶ್ವವೆನಿಸುವುದು. ಅರ್ಥಾತ್ ಜಗತ್ತು ಲಿಂಗರೂಪವಾಗಿರುವುದೆಂದು ಭಾವವು. ॥೩೨॥ ಬ್ರಹ್ಮಾದಿಸಮಸ್ತದೇವತೆಗಳೂ, ಶೌನಕಾದಿಮುನಿಗಳೂ ಶಿವಲಿಂಗಪೂಜೆಯಿಂದ ತಮ್ಮ ತಮ್ಮ ಸ್ಥಾನಗಳನ್ನು ಪಡೆದರು. ॥೩೩॥ ಲಿಂಗರೂಪನಾದ ಪರಮೇಶ್ವರನಿಗೆ ವಿಶ್ವಾಧಿಪತ್ಯವು ಸ್ವಭಾವಸಿದ್ಧವಾಗಿರುವುದಲ್ಲದೆ, ಅನ್ಯದೇವತಾಸಾದೃಶ್ಯವು ಸಂಭವಿಸುವುದಿಲ್ಲವೆಂದು ಶ್ರುತಿಯು ಸಾರುತ್ತಿರುವುದು. "ವಿಶ್ವಾಧಿಕೋ ರುದ್ರೋ ಮಹರ್ಷಿಃ, ಹಿರಣ್ಯಗರ್ಭಂ ಜನಯಾಮಾಸ ಪೂರ್ವಂ—ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ" ಎಂಬೀ ಶ್ವೇತಾಶ್ವತರಶ್ರುತಿಯು ಇದೇ ವಿಷಯವನ್ನು ಬೋಧಿಸುತ್ತಿರುವುದು. ॥೩೪॥

೨೮ ಜಂಗಮಮಾಹಾತ್ಮ್ಯಸ್ಥಲ

ಗುರುಶಿಷ್ಯರನ್ನು ಸಂಬಂಧಿಸಿದ ಲಿಂಗಮಾಹಾತ್ಮ್ಯಸ್ಥಲವೈಭವಕ್ಕಿಂತಲೂ ಈ ಸ್ಥಲವು ಸಮಸ್ತ ಪ್ರಪಂಚವನ್ನು ಚಿದ್ರೂಪವನ್ನಾಗಿ ತಿಳಿಯುವುದರಿಂದ ಜಂಗಮಮಾಹಾತ್ಮ್ಯಸ್ಥಲವೆಂದು ಹೇಳಿಸಿಕೊಳ್ಳುವುದು. ॥೩೫॥ ತನ್ನ ಜ್ಞಾನಶಕ್ತಿ ಕ್ರಿಯಾಶಕ್ತಿಗಳಿಂದ ಚರಾಚರಪ್ರಪಂಚವನ್ನು ಪ್ರಕಾಶಗೊಳಿಸುತ್ತಿರುವ ಶಿವನನ್ನು ಅತಿಶಯವಾಗಿ ಸ್ವಸ್ವರೂಪತ್ವದಿಂದ ಯಾರು ತಿಳಿಯುತ್ತಾರೆಯೋ, ಅವರು ಜಂಗಮರೆಂದು ಹೇಳಿಸಿಕೊಳ್ಳುವರು. ಜಂಗಮರೆಂದರೆ ಗುರುಸ್ಥಲದ ಚರಮೂರ್ತಿಗಳು. ॥೩೬॥

ಯೇ ಪಶ್ಯಂತಿ ಜಗಜ್ಜಾಲಂ ಚಿದ್ರೂಪಂ ಶಿವಯೋಗತಃ ।
ನಿರ್ಧೂತಮಲಸಂಸ್ಪರ್ಶಾಸ್ತೇ ಸ್ಮೃತಾಃ ಶಿವಯೋಗಿನಃ ॥೩೭॥
ಘೋರಸಂಸಾರತಿಮಿರಪರಿಧ್ವಂಸನಕಾರಣಂ ।
ಯೇಷಾಮಸ್ತಿ ಶಿವಜ್ಞಾನಂ ತೇ ಮತಾಃ ಶಿವಯೋಗಿನಃ ॥೩೮॥
ಜಿತಕಾಮಾ ಜಿತಕ್ರೋಧಾ ಮೋಹಗ್ರಂಥಿವಿಭೇದಿನಃ ।
ಸಮಲೋಷ್ಟಾಶ್ಮಕನಕಾಃ ಸಾಧವಃ ಶಿವಯೋಗಿನಃ ॥೩೯॥
ಸಮಾಃ ಶತ್ರೌ ಚ ಮಿತ್ರೇ ಚ ಸಾಕ್ಷಾತ್ಕೃತಶಿವಾತ್ಮಕಾಃ ।
ನಿಃಸ್ಪೃಹಾ ನಿರಹಂಕಾರಾ ವರ್ತಂತೇ ಶಿವಯೋಗಿನಃ ॥೪೦॥
ದುರ್ಲಭಂ ಹಿ ಶಿವಜ್ಞಾನಂ ದುರ್ಲಭಂ ಶಿವಚಿಂತನಂ ।
ಯೇಷಾಮೇತದ್ದ್ವಯಂ ಚಾಸ್ತಿ ತೇ ಹಿ ಸಾಕ್ಷಾಚ್ಛಿವಾತ್ಮಕಾಃ ॥೪೧॥
ಪಾದಾಗ್ರರೇಣವೋ ಯತ್ರ ಪತಂತಿ ಶಿವಯೋಗಿನಾಂ ।
ತದೇವ ಸದನಂ ಪುಣ್ಯಂ ಪಾವನಂ ಗೃಹಮೇಧಿನಾಂ ॥೪೨॥

ಯಾರು ಈ ಸಮಸ್ತಪ್ರಪಂಚವನ್ನು ಶಿವನ ಸಂಬಂಧದಿಂದ ಚಿತ್ಕ್ರಿಯಾಸ್ವರೂಪವನ್ನಾಗಿ ತಿಳಿಯುತ್ತಾರೆಯೋ, ಆಣವಾದಿಮಲಸ್ಪರ್ಶದೂರರಾದ ಅವರೇ ಜಂಗಮರೆಂದು ಹೇಳಿಸಿಕೊಳ್ಳುವರು. ॥೩೭॥ ಭಯಂಕರವಾದ ಸಂಸಾರವೆಂಬ ಅಂಧಕಾರದ ನಾಶಕ್ಕೆ ಕಾರಣೀಭೂತವಾದ ಶಿವಜ್ಞಾನವು ಯಾರಲ್ಲಿರುವುದೋ, ಅವರೇ ಶಿವಯೋಗಿಗಳೆಂದು ಹೇಳಿಸಿಕೊಳ್ಳುವರು. ॥೩೮॥ ಕಾಮಕ್ರೋಧಗಳನ್ನು ಗೆದ್ದವರೂ, ಮೋಹಗ್ರಂಥಿಯನ್ನು ಕತ್ತರಿಸಿದವರೂ, ಮಣ್ಣಿನ ಹೆಂಟೆ-ಕಲ್ಲು-ಬಂಗಾರಗಳಲ್ಲಿ ಸಮಾನಬುದ್ಧಿಯುಳ್ಳವರೂ, ಸಾಧುಸ್ವಭಾವದವರೂ ಶಿವಯೋಗಿಗಳೆನಿಸಿಕೊಳ್ಳುವರು. ॥೩೯॥ ಶಿವಯೋಗಿಗಳು ಶತ್ರುವಿನಲ್ಲಿಯೂ ಮಿತ್ರನಲ್ಲಿಯೂ ಸಮಭಾವವುಳ್ಳವರಾಗಿಯೂ, ಶಿವಸ್ವರೂಪವನ್ನು ಸಾಕ್ಷಾತ್ಕರಿಸಿಕೊಂಡವರಾಗಿಯೂ, ಆಶಾರಹಿತರಾಗಿಯೂ, ನಿರಹಂಕಾರಿಗಳಾಗಿಯೂ ಇರುತ್ತಾರೆ. ॥೪೦॥ ಶಿವಜ್ಞಾನವೂ ದುರ್ಲಭವಾದುದು; ಆ ಶಿವನೇ ನಾನೆಂಬ ಚಿಂತನವೂ ದುರ್ಲಭವಾದುದು; ಇವೆರಡೂ ಯಾರಲ್ಲಿರುವುವೋ ಅವರೇ ಪ್ರತ್ಯಕ್ಷವಾಗಿ ಶಿವಸ್ವರೂಪಿಗಳು. ॥೪೧॥ ಶಿವಯೋಗಿಗಳ ಪಾದರೇಣುಗಳು ಯಾವ ಮನೆಯಲ್ಲಿ ಬೀಳುತ್ತವೆಯೋ, ಗೃಹಸ್ಥಾಶ್ರಮಿಗಳ ಆ ಮನೆಯೇ ಪವಿತ್ರವಾದುದು. ॥೪೨॥ ಶಿವಯೋಗಿಗಳ ದರ್ಶನವು ಮಾನವರಿಗೆ ಸಮಸ್ತಸಿದ್ಧಿ

ಸರ್ವಸಿದ್ಧಿಕರಂ ಪುಂಸಾಂ ದರ್ಶನಂ ಶಿವಯೋಗಿನಾಂ ।
ಸ್ಪರ್ಶನಂ ಪಾಪಶಮನಂ ಪೂಜನಂ ಮುಕ್ತಿಸಾಧನಂ ॥೪೩॥

ಮಹತಾಂ ಶಿವತಾತ್ಪರ್ಯವೇದಿನಾಮನುಮೋದಿನಾಂ ।
ಕಿಂ ವಾ ಫಲಂ ಹಿ ನೋ ಸಿದ್ಧ್ಯೇತ್ ಸಂಪರ್ಕಾಚ್ಛಿವಯೋಗಿನಾಂ ॥೪೪॥

೨೯ ಭಕ್ತಮಾಹಾತ್ಮ್ಯಸ್ಥಲಂ

ಗುರೋರ್ಲಿಂಗಸ್ಯ ಮಾಹಾತ್ಮ್ಯಕಥನಾಚ್ಛಿವಯೋಗಿನಾಂ ।
ಸಿದ್ಧಂ ಭಕ್ತಸ್ಯ ಮಾಹಾತ್ಮ್ಯಂ ತಥಾ ಹ್ಯೇಷ ಪ್ರಶಸ್ಯತೇ ॥೪೫॥

ಯೇ ಭಜಂತಿ ಮಹಾದೇವಂ ಪರಮಾತ್ಮಾನಮವ್ಯಯಂ ।
ಕರ್ಮಣಾ ಮನಸಾ ವಾಚಾ ತೇ ಭಕ್ತಾ ಇತಿ ಕೀರ್ತಿತಾಃ ॥೪೬॥

ದುರ್ಲಭಾ ಹಿ ಶಿವೇ ಭಕ್ತಿಃ ಸಂಸಾರಭಯತಾರಿಣೀ ।
ಸಾ ಯತ್ರ ವರ್ತತೇ ಸಾಕ್ಷಾತ್ ಸ ಭಕ್ತ ಇತಿ ಗೀಯತೇ ॥೪೭॥

ಗಳನ್ನುಂಟುಮಾಡತಕ್ಕುದಾಗಿರುವುದು. ಸ್ಪರ್ಶನವು ಪಾಪವನ್ನು ಶಮನಗೊಳಿಸುವುದು. ಪೂಜೆಯು ಮುಕ್ತಿಗೆ ಸಾಧನವಾಗಿರುವುದು. ॥೪೩॥ ಶಿವರಹಸ್ಯವನ್ನು ತಿಳಿಯುವವರೂ, ಶಿವಸುಖವನ್ನು ಅನುಭವಿಸುವವರೂ, ಮಹಾತ್ಮರೂ ಆದ ಶಿವಯೋಗಿಗಳ ಸಹವಾಸದಿಂದ ಯಾವ ಫಲವು ಸಿದ್ಧಿಸಲಾರದು? ಸಮಸ್ತಫಲಗಳೂ ಸಿದ್ಧಿಸುವುವೆಂದು ಭಾವವು. ॥೪೪॥

೨೯ ಭಕ್ತಮಾಹಾತ್ಮ್ಯಸ್ಥಲ

ಗುರುಲಿಂಗಜಂಗಮರ ಮಾಹಾತ್ಮ್ಯವನ್ನು ಬೋಧಿಸಿದುದರಿಂದ ಅರ್ಥಾತ್ ಭಕ್ತನ ಮಾಹಾತ್ಮ್ಯವಾದರೂ ಸಿದ್ಧವಾಗಿರುವುದು. ಈ ಭಕ್ತನಾದರೂ ಪ್ರಾಶಸ್ತ್ಯವನ್ನು ಪಡೆದಿದ್ದಾನೆ. ॥೪೫॥ ಯಾರು ಮನೋವಾಕ್ಕರ್ಮಗಳಿಂದ ಅವ್ಯಯನಾದ ಶಿವಪರಮಾತ್ಮನನ್ನು ಭಜಿಸುತ್ತಾರೆಯೋ, ಅವರು ಭಕ್ತರೆಂದು ಹೇಳಿಸಿಕೊಳ್ಳುವರು. ॥೪೬॥ ಸಂಸಾರಭಯನಾಶಕವಾದ ಶಿವಭಕ್ತಿಯು ದುರ್ಲಭವಾದುದು. ಆ ಶಿವಭಕ್ತಿಯು ಯಾವನಲ್ಲಿ ಮೂರ್ತಿಮತ್ತಾಗಿರುವುದೋ ಅವನು ಭಕ್ತನೆಂದು ಹೇಳಿಸಿಕೊಳ್ಳುವನು. ॥೪೭॥

ಕಿಂ ವೇದೈಃ ಕಿಂ ತತಃ ಶಾಸ್ತ್ರೈಃ ಕಿಂ ಯಜ್ಞೈಃ ಕಿಂ ತಪೋವ್ರತೈಃ ।
ನಾಸ್ತಿ ಚೇಚ್ಛಾಂಕರೀ ಭಕ್ತಿರ್ದೇಹಿನಾಂ ಜನ್ಮರೋಗಿಣಾಂ ॥೪೮॥

ಶಿವಭಕ್ತಿವಿಹೀನಸ್ಯ ಸುಕೃತಂ ಚಾಪಿ ನಿಷ್ಫಲಂ ।
ವಿಪರೀತಫಲಂ ಚ ಸ್ಯಾದ್ದಕ್ಷಸ್ಯಾಪಿ ಮಹಾಧ್ವರೇ ॥೪೯॥

ಅತ್ಯಂತಪಾಪಕರ್ಮಾಪಿ ಶಿವಭಕ್ತ್ಯಾ ವಿಶುದ್ಧ್ಯತಿ ।
ಚಂಡೋ ಯಥಾ ಪುರಾ ಭಕ್ತ್ಯಾ ಪಿತೃಹಾಽಪಿ ಶಿವೋಽಭವತ್ ॥೫೦॥

ಸುಕೃತಂ ದುಷ್ಕೃತಂ ಚಾಪಿ ಶಿವಭಕ್ತಸ್ಯ ನಾಸ್ತಿ ಹಿ ।
ಶಿವಭಕ್ತಿವಿಹೀನಾನಾಂ ಕರ್ಮಪಾಶನಿಬಂಧನಂ ॥೫೧॥

ಶಿವಾಶ್ರಿತಾನಾಂ ಜಂತೂನಾಂ ಕರ್ಮಣಾ ನಾಸ್ತಿ ಸಂಗಮಃ ।
ವಾಜಿನಾಂ ದಿನನಾಥಸ್ಯ ಕಥಂ ತಿಮಿರಜಂ ಭಯಂ ॥೫೨॥

ನಿರೋದ್ಧುಂ ನ ಕ್ಷಮಂ ಕರ್ಮ ಶಿವಭಕ್ತಾನ್ ವಿಶೃಂಖಲಾನ್ ।
ಕಥಂ ಮತ್ತಗಜಾನ್ ರುಂಧೇಚ್ಛೃಂಖಲಾ ಬಿಸತಂತುಜಾ ॥೫೩॥

ಭವರೋಗಿಗಳಾದ ಮಾನವರಿಗೆ ಶಿವಭಕ್ತಿಯಿಲ್ಲದಿದ್ದರೆ, ಅವರು ವೇದಶಾಸ್ತ್ರಗಳನ್ನು ಅಭ್ಯಾಸಮಾಡಿದ್ದರೂ ಆ ವೇದಗಳಿಂದಲೂ ಪ್ರಯೋಜನವಿಲ್ಲ; ಆ ಶಾಸ್ತ್ರಗಳಿಂದಲೂ ಪ್ರಯೋಜನವಿಲ್ಲ; ಅವರು ಆಚರಿಸುವ ಯಜ್ಞಗಳಿಂದಲೂ ಪ್ರಯೋಜನವಿಲ್ಲ; ಅವರು ಆಚರಿಸುವ ತಪೋವ್ರತಗಳಿಂದಲೂ ಪ್ರಯೋಜನವಿಲ್ಲ. ॥೪೮॥ ಮಾನವನು ಶಿವಭಕ್ತಿಶೂನ್ಯನಾದರೆ ಅವನಲ್ಲಿದ್ದ ಸುಕೃತವೂ ಕೂಡ ನಿಷ್ಫಲವಾಗುವುದು. ಅನಿಷ್ಟಫಲವೂ ಸಹ ಪ್ರಾಪ್ತವಾಗುವುದು. ದಕ್ಷನು ಮಹಾಪುಣ್ಯಶಾಲಿಯಾಗಿದ್ದರೂ ಶಿವಭಕ್ತಿಶೂನ್ಯನಾದುದರಿಂದ ಯಜ್ಞದಲ್ಲಿ ಅನಿಷ್ಟಫಲವನ್ನು ಪಡೆದನಷ್ಟೆ ! ॥೪೯॥ ಮಾನವನು ಮಹಾಮಹಾಪಾಪಕರ್ಮಗಳನ್ನಾಚರಿಸಿದರೂ ಶಿವಭಕ್ತಿಯಿಂದ ಪರಿಶುದ್ಧನಾಗುತ್ತಾನೆ. ಪೂರ್ವದಲ್ಲಿ ಚಂಡನೆಂಬ ಭಕ್ತನು ತನ್ನ ತಂದೆಯನ್ನು ಕೊಂದರೂ ಶಿವನಾದನಷ್ಟೆ! ॥೫೦॥ ಶಿವಭಕ್ತನಿಗೆ ಪುಣ್ಯವಾಗಲಿ, ಪಾಪವಾಗಲಿ ಇರುವುದಿಲ್ಲ. ಶಿವಭಕ್ತಿಶೂನ್ಯರುಮಾತ್ರ ತಾವು ಆಚರಿಸಿದ ಕರ್ಮಾನುಗುಣವಾಗಿ ಸುಖದುಃಖಗಳನ್ನು ಅನುಭವಿಸಲೇಬೇಕಾಗುವುದು. ॥೫೧॥ ಶಿವನನ್ನು ಆಶ್ರಯಿಸಿದ ಪ್ರಾಣಿಗಳಿಗೆ ಕರ್ಮಸಂಬಂಧವೇ ಇರುವುದಿಲ್ಲ. ಸೂರ್ಯನ ಕುದುರೆಗಳಿಗೆ ಕತ್ತಲೆಯ ಭಯವೆಲ್ಲಿಯದು? ॥೫೨॥ ಶಿವಭಕ್ತಿಪ್ರಭಾವದ್ವಾರಾ ಬಂಧನದಿಂದ ಬಿಡುಗಡೆಯನ್ನು ಹೊಂದಿದ ಶಿವಭಕ್ತರನ್ನು ತಡೆಯುವುದಕ್ಕೋಸ್ಕರ ಕರ್ಮವು ಎಂದೂ ಸಮರ್ಥವಾಗಲಾರದು.

ಶುದ್ಧಾ ನಿಯಮಸಂಯುಕ್ತಾಃ ಶಿವಾರ್ಪಿತಫಲಾಗಮಾಃ ।
ಯೇಽರ್ಚಯಂತಿ ಶಿವಂ ಲೋಕೇ ವಿಜ್ಞೇಯಾಸ್ತೇ ಗಣೇಶ್ವರಾಃ ॥೫೪॥

೩೦ ಶರಣಮಾಹಾತ್ಮ್ಯಸ್ಥಲಂ

ಗುರುಲಿಂಗಾದಿಮಾಹಾತ್ಮ್ಯಬೋಧಾನ್ವೇಷಣಸಂಗತಃ ।
ಸರ್ವಾತ್ಮನಾ ಶಿವಾಪತ್ತಿಃ ಶರಣಸ್ಥಾನಮುಚ್ಯತೇ ॥೫೫॥

ಬ್ರಹ್ಮಾದಿವಿಬುಧಾನ್ ಸರ್ವಾನ್ ಮುಕ್ತ್ವಾ ಪ್ರಾಕೃತವೈಭವಾನ್ ।
ಪ್ರಪದ್ಯತೇ ಶಿವಂ ಯತ್ತು ಶರಣಂ ತದುದಾಹೃತಂ ॥೫೬॥

ಶರಣ್ಯಃ ಸರ್ವಭೂತಾನಾಂ ಶಂಕರಃ ಶಶಿಶೇಖರಃ ।
ಸರ್ವಾತ್ಮನಾ ಪ್ರಪನ್ನಸ್ತಂ ಶರಣಾಗತ ಉಚ್ಯತೇ ॥೫೭॥

ವಿಮುಕ್ತಭೋಗಲಾಲಸ್ಯೋ ದೇವತಾಂತರನಿಃಸ್ಪೃಹಃ ।
ಶಿವಮಭ್ಯರ್ಥಯನ್ ಮೋಕ್ಷಂ ಶರಣಾರ್ಥೀತಿ ಗೀಯತೇ ॥೫೮॥

ತಾವರೆದಂಟಿನ ತಂತುಗಳಿಂದ ರಚಿಸಿದ ಶೃಂಖಲೆಯು ಮದೋನ್ಮತ್ತಗಜಗಳನ್ನು ಬಂಧಿಸಲು ಸಮರ್ಥವಾಗಲಾರದಷ್ಟೆ! ॥೫೩॥ ಈ ಲೋಕದಲ್ಲಿ ಯಾರು ಶುದ್ಧರಾಗಿಯೂ, ನಿಯಮಸಂಪನ್ನರಾಗಿಯೂ, ಫಲಪ್ರಾಪ್ತಿಯನ್ನು ಶಿವನಲ್ಲಿ ಸಮರ್ಪಿಸಿದವರಾಗಿಯೂ ಶಿವನನ್ನು ಪೂಜಿಸುತ್ತಾರೆಯೋ, ಅವರು ಗಣೇಶ್ವರರೆಂದು ಹೇಳಿಸಿಕೊಳ್ಳುವರು. ॥೫೪॥

೩೦ ಶರಣಮಾಹಾತ್ಮ್ಯಸ್ಥಲ

ಗುರುಲಿಂಗಜಂಗಮಾದಿಗಳ ಮಹತ್ತ್ವಜ್ಞಾನಾನ್ವೇಷಣಸಂಬಂಧದಿಂದ, ಸರ್ವರೀತಿಯಿಂದಲೂ ಶಿವನೇ ರಕ್ಷಕನಾಗಿದ್ದಾನೆಂದು ತಿಳಿದು ಆಚರಿಸುವುದು ಶರಣಸ್ಥಲವೆನಿಸುವುದು. ॥೫೫॥ "ಶಿವ ಏಕೋ ಧ್ಯೇಯಃ ಶಿವಂಕರಃ ಸರ್ವಮನ್ಯತ್ಪರಿತ್ಯಜ್ಯ" ಎಂಬ ಶ್ರುತಿವಾಕ್ಯಾನುಸಾರವಾಗಿ ಪ್ರಕೃತಿಸಂಬಂಧವೈಭವವುಳ್ಳ ಬ್ರಹ್ಮಾದಿಸಕಲದೇವತೆಗಳನ್ನೂ ಬಿಟ್ಟು ಯಾವ ಸ್ಥಲವು ಕೇವಲವಾಗಿ ಶಿವನನ್ನೇ ಆಶ್ರಯಿಸುವುದೋ, ಅದು ಶರಣಸ್ಥಲವೆಂದು ಹೇಳಿಸಿಕೊಳ್ಳುವುದು. ॥೫೬॥ ಚಂದ್ರಶೇಖರನಾದ ಶಂಕರನು ಸಮಸ್ತಪ್ರಾಣಿಗಳ ಪಾಲನವಲ್ಲಿ ಸಮರ್ಥನೆಂದು ತಿಳಿದು, ಆ ಶಿವನನ್ನು ಸರ್ವರೀತಿಯಿಂದಲೂ ಮರೆಹೊಕ್ಕವನು "ಶರಣಾಗತ"ನೆಂದು ಹೇಳಿಸಿಕೊಳ್ಳುವನು. ॥೫೭॥ ಯಾವನು ವಿಷಯಸುಖಲಂಪಟತ್ವದಿಂದ ದೂರನಾಗಿಯೂ, ಬ್ರಹ್ಮಾದಿದೇವತಾಸ್ಥಾನಗಳಲ್ಲಿ ನಿಃಸ್ಪೃಹನಾಗಿಯೂ ಶಿವನನ್ನು ಕುರಿತು ಮೋಕ್ಷವನ್ನು ಪ್ರಾರ್ಥಿಸುವನೋ, ಅವನು

ಯೇ ಪ್ರಪನ್ನಾ ಮಹಾದೇವಂ ಮನೋವಾಕ್ಕಾಯಕರ್ಮಭಿಃ ।
ತೇಷಾಂ ತು ಕರ್ಮಜಾತೇನ ಕಿಂ ವಾ ದೇವಾದಿತರ್ಪಣೈಃ ॥೫೯॥
ಸರ್ವೇಷಾಮಪಿ ಯಜ್ಞಾನಾಂ ಕ್ಷಯಿಷ್ಣುಃ ಸ್ವರ್ಗಃ ಫಲಾಯತೇ ।
ಅಕ್ಷಯಂ ಫಲಮಾಪ್ನೋತಿ ಪ್ರಪನ್ನಃ ಪರಮೇಶ್ವರಂ ॥೬೦॥
ಪ್ರಪನ್ನಪಾರಿಜಾತಸ್ಯ ಶಿವಸ್ಯ ಪರಮಾತ್ಮನಃ ।
ಪ್ರಪತ್ತ್ಯಾ ಕಿಂ ನ ಜಾಯೇತ ಪಾಪಿನಾಮಪಿ ದೇಹಿನಾಂ ॥೬೧॥
ಪ್ರಪನ್ನಾನಾಂ ಮಹಾದೇವಂ ಪರಿಪಕ್ವಾಂತರಾತ್ಮನಾಂ ।
ಜನ್ಮೈವ ಜನ್ಮ ನಾನ್ಯೇಷಾಂ ವೃಥಾಜನನಸಂಗಿನಾಂ ॥೬೨॥
ದುರ್ಲಭಂ ಮಾನುಷಂ ಪ್ರಾಪ್ಯ ಜನನಂ ಜ್ಞಾನಸಾಧನಂ ।
ಯೇ ನ ಜಾನಂತಿ ದೇವೇಶಂ ತೇಷಾಮಾತ್ಮಾ ನಿರರ್ಥಕಃ ॥೬೩॥
ತತ್ಕುಲಂ ಹಿ ಸದಾ ಶುದ್ಧಂ ಸಫಲಂ ತಸ್ಯ ಜೀವಿತಂ ।
ಯಸ್ಯ ಚಿತ್ತಂ ಶಿವೇ ಸಾಕ್ಷಾದ್ವಿಲೀನಮಬಹಿರ್ಮುಖಂ ॥೬೪॥

“ಶರಣಾರ್ಥಿ” ಯೆಂದು ಹೇಳಿಸಿಕೊಳ್ಳುವನು. ॥೫೮॥ ಯಾರು ಮನೋವಾಕ್ಕಾಯ ಕರ್ಮಗಳಿಂದ ಶಿವನನ್ನು ಮರೆಹೊಗುವರೋ, ಅವರಿಗೆ ಯಜ್ಞಾದಿಕರ್ಮಸಮೂಹ ದಿಂದಾಗಲಿ, ದೇವತಾತರ್ಪಣಗಳಿಂದಾಗಲಿ ಏನು ಪ್ರಯೋಜನವು? ಯಾವ ಪ್ರಯೋಜನವೂ ಇಲ್ಲವೆಂದು ಭಾವವು. ॥೫೯॥ ಜ್ಯೋತಿಷ್ಟೋಮಾದಿಸಮಸ್ತ ಯಜ್ಞಗಳಿಗೆಲ್ಲಾ ಕ್ಷಯಿರೂಪವಾದ ಸ್ವರ್ಗವೇ ಫಲವಾಗಿರುವುದು. ಆದರೆ ಶಿವನನ್ನು ಮರೆಹೊಕ್ಕವನು ಅಕ್ಷಯವಾದ ಮೋಕ್ಷರೂಪಫಲವನ್ನು ಹೊಂದುವನು. ॥೬೦॥ ಶರಣಾಗತಕಲ್ಪವೃಕ್ಷನಾದ ಶಿವಪರಮಾತ್ಮನನ್ನು ಮರೆಹೊಗುವುದರಿಂದ, ಪಾಪಿಗಳೂ ಸಹ ಸಮಸ್ತಸುಖಗಳನ್ನು ಪಡೆಯುವರು. ॥೬೧॥ ಶಿವನನ್ನು ಮರೆಹೊಕ್ಕ ಶುದ್ಧಾಂತಃಕರಣಿಗಳ ಜನ್ಮವೇ ಜನ್ಮವು. ಶಿವನನ್ನು ಮರೆಹೊಗದಿರುವ ಮಾನವರ ಜನ್ಮವು ವ್ಯರ್ಥವು. ॥೬೨॥ ದುರ್ಲಭವೂ ಜ್ಞಾನಸಾಧನೀಭೂತವೂ ಆದ ಮನುಷ್ಯಜನ್ಮ ವನ್ನು ಪಡೆದು, ಯಾರು ಶಿವನನ್ನು ತಿಳಿಯುವುದಿಲ್ಲವೋ, ಅವರ ಆತ್ಮಸ್ವರೂಪವು ನಿರರ್ಥಕವು. ॥೬೩॥ ಯಾವನ ಮನಸ್ಸು ಶಿವನಲ್ಲಿ ಅಂತರ್ಮುಖವಾಗಿ ಅಡಗು ವುದೋ, ಅವನ ವಂಶವು ಶುದ್ಧವಾಗುವುದು; ಮತ್ತು ಅವನ ಜೀವನವು ಸಫಲ ವಾಗುವುದು. ॥೬೪॥

೩೧ ಪ್ರಸಾದಮಾಹಾತ್ಮ್ಯಸ್ಥಲಂ

ಗುರುಲಿಂಗಾದಿಮಾಹಾತ್ಮ್ಯವಿಶೇಷಾನುಭವಸ್ಥಿತಿಃ ।
ಯಸ್ಮಾಚ್ಛಿವಪ್ರಸಾದಾತ್ ಸ್ಯಾತ್ತದಸ್ಯ ಮಹಿಮೋಚ್ಯತೇ ॥೬೫॥

ಸದಾ ಲಿಂಗೈಕನಿಷ್ಠಾನಾಂ ಗುರುಪೂಜಾನುಷಂಗಿಣಾಂ ।
ಪ್ರಪನ್ನಾನಾಂ ವಿಶುದ್ಧಾನಾಂ ಪ್ರಸೀದತಿ ಮಹೇಶ್ವರಃ ॥೬೬॥

ಪ್ರಸಾದೋಽಪಿ ಮಹೇಶಸ್ಯ ದುರ್ಲಭಃ ಪರಿಕೀರ್ತ್ಯತೇ ।
ಘೋರಸಂಸಾರಸಂತಾಪನಿವೃತ್ತಿರ್ಯೇನ ಜಾಯತೇ ॥೬೭॥

ಯಜ್ಞಾಸ್ತಪಾಂಸಿ ಮಂತ್ರಾಣಾಂ ಜಪಶ್ಚಿಂತಾ ಪ್ರಬೋಧನಂ ।
ಪ್ರಸಾದಾರ್ಥಂ ಮಹೇಶಸ್ಯ ಕೀರ್ತಿತಾನಿ ನ ಸಂಶಯಃ ॥೬೮॥

ಪ್ರಸಾದಮೂಲಾ ಸರ್ವೇಷಾಂ ಭಕ್ತಿರವ್ಯಭಿಚಾರಿಣೀ ।
ಶಿವಪ್ರಸಾದಹೀನಸ್ಯ ಭಕ್ತಿಶ್ಚಾಪಿ ನ ಸಿದ್ಧ್ಯತಿ ॥೬೯॥

ಗರ್ಭಸ್ಥೋ ಜಾಯಮಾನೋ ವಾ ಜಾತೋ ವಾ ಬ್ರಾಹ್ಮಣೋಽಥವಾ ।
ಅಂತ್ಯಜೋ ವಾಪಿ ಮುಚ್ಯೇತ ಪ್ರಸಾದೇ ಸತಿ ಶಾಂಕರೇ ॥೭೦॥

---

೩೧ ಪ್ರಸಾದಮಾಹಾತ್ಮ್ಯಸ್ಥಲ

ಗುರುಲಿಂಗಜಂಗಮಾದಿಗಳ ಮಹಿಮಾವಿಶೇಷಾನುಭವಸ್ಥಿತಿಯು ಯಾವ ಕಾರಣದಿಂದ ಶಿವಪ್ರಸಾದದಿಂದುಂಟಾಗುವುದೋ, ಆ ಕಾರಣದಿಂದಲೇ ಶಿವಪ್ರಸಾದದ ಮಹಿಮೆಯು ಹೇಳಲ್ಪಡುವುದು. ॥೬೫॥ ಸದಾ ಶಿವಲಿಂಗಪೂಜಾತತ್ಪರರೂ, ಶಿವನನ್ನು ಮರೆಹೊಕ್ಕವರೂ ಆದ ಶುದ್ಧಾತ್ಮರಿಗೆ ಶಿವನು ಪ್ರಸನ್ನನಾಗುವನು. ॥೬೬॥ ಭಯಂಕರವಾದ ಸಂಸಾರದಿಂದುಂಟಾದ ಸಂತಾಪದ ಬಿಡುಗಡೆಯು ಯಾವುದರಿಂದುಂಟಾಗುವುದೋ, ಆ ಶಿವಪ್ರಸಾದವಾದರೂ ಅತ್ಯಂತದುರ್ಲಭವಾಗಿರುವುದು. ॥೬೭॥ ಯಜ್ಞ-ತಪಸ್ಸು-ಮಂತ್ರಜಪ-ಧ್ಯಾನ-ಜ್ಞಾನ ಇವುಗಳೆಲ್ಲವೂ ಶಿವಪ್ರಸಾದಕ್ಕಾಗಿಯೇ ಹೇಳಲ್ಪಟ್ಟಿರುವುವು. ಇದರಲ್ಲಿ ಯಾವ ಸಂಶಯವೂ ಇಲ್ಲ. ॥೬೮॥ ಸಮಸ್ತಜನರಲ್ಲಿರುವ ಪರಿಶುದ್ಧವಾದ ಭಕ್ತಿಗೆ ಶಿವಪ್ರಸಾದವೇ ಮುಖ್ಯಕಾರಣವಾಗಿರುವುದು. ಶಿವಪ್ರಸಾದಶೂನ್ಯನಿಗೆ ಭಕ್ತಿಯೇ ಸಿದ್ಧಿಸುವುದಿಲ್ಲ. ॥೬೯॥ ಶಿವಪ್ರಸಾದವುಂಟಾಗಲು, ಗರ್ಭದಲ್ಲಿದ್ದವನೇ ಆಗಲಿ, ಹುಟ್ಟುವವನೇ ಆಗಲಿ, ಹುಟ್ಟಿದವನೇ ಆಗಲಿ, ಬ್ರಾಹ್ಮಣನೇ ಆಗಲಿ ಅಥವಾ ಅಂತ್ಯಜನೇ ಆಗಲಿ ಮುಕ್ತನಾಗುವನು. ॥೭೦॥

ಬ್ರಹ್ಮಾದ್ಯಾ ವಿಬುಧಾಃ ಸರ್ವೇ ಸ್ವಸ್ವಸ್ಥಾನನಿವಾಸಿನಃ ।
ನಿತ್ಯಸಿದ್ಧಾ ಭವಂತ್ಯೇವ ಪ್ರಸಾದಾತ್ಪಾರಮೇಶ್ವರಾತ್ ॥೨೧॥
ಪ್ರಸಾದೇ ಶಾಂಭವೇ ಸಿದ್ಧೇ ಪರಮಾನಂದಕಾರಣೇ ।
ಸರ್ವಂ ಶಿವಮಯಂ ವಿಶ್ವಂ ದೃಶ್ಯತೇ ನಾತ್ರ ಸಂಶಯಃ ॥೨೨॥
ಸಂಸಾರಚಕ್ರನಿರ್ವಾಹನಿಮಿತ್ತಂ ಕರ್ಮ ಕೇವಲಂ ।
ಪ್ರಸಾದೇನ ವಿನಾ ಶಂಭೋರ್ನ ಕಸ್ಯಾಪಿ ನಿವರ್ತತೇ ॥೨೩॥
ಬಹುನಾತ್ರ ಕಿಮುಕ್ತೇನ ನಾಸ್ತಿ ನಾಸ್ತಿ ಜಗತ್ರಯೇ ।
ಸಮಾನಮಧಿಕಂ ಚಾಪಿ ಪ್ರಸಾದಸ್ಯ ಮಹೇಶಿತುಃ ॥೨೪॥

ಶಿವಪ್ರಸಾದದಿಂದ ಬ್ರಹ್ಮಾದಿಸಕಲದೇವತೆಗಳು ತಮ್ಮ ತಮ್ಮ ಸ್ಥಾನಗಳಲ್ಲಿದ್ದು ಕೊಂಡು ನಿತ್ಯಸಿದ್ಧರಾಗುತ್ತಾರೆ. "ಯಸ್ಯ ಪ್ರಸಾದಾದ್ದೇವಸ್ಯ ಬ್ರಹ್ಮಾ ಬ್ರಹ್ಮತ್ವಮಾಪ್ತವಾನ್। ವಿಷ್ಣುತ್ವಮಪಿ ವಿಷ್ಣುಶ್ಚ ಸ ಶಿವಃ ಕೈರ್ನ ಸೇವ್ಯತೇ ॥ ಸಾಕ್ಷಾಲ್ಲಿಂಗಪ್ರಸಾದಂ ತು ಸ್ವದೇಹೇ ಧಾರಯೇನ್ನರಃ । ವಜ್ರಕಾಯಶ್ಚ ಭವತಿ ಶಿವಸಾಯುಜ್ಯಮಾಪ್ನುಯಾತ್ ॥" ಯಾವ ಶಿವನ ಪ್ರಸಾದದಿಂದ ಬ್ರಹ್ಮನು ಬ್ರಹ್ಮತ್ವವನ್ನೂ, ವಿಷ್ಣುವು ವಿಷ್ಣುತ್ವವನ್ನೂ ಪಡೆದರೋ, ಆ ಶಿವನು ವಿಶ್ವವಂದ್ಯನಾಗಿರುವನೆಂದೂ, ಶಿವಪ್ರಸಾದವನ್ನು ಯಾವ ಮಾನವನು ಭಕ್ತಿಪೂರ್ವಕವಾಗಿ ತನ್ನ ದೇಹದಲ್ಲಿ ಧರಿಸಿಕೊಳ್ಳುವನೋ ಅವನು ವಜ್ರಕಾಯನಾಗಿ ಅಂತ್ಯದಲ್ಲಿ ಶಿವಸಾಯುಜ್ಯವನ್ನು ಪಡೆಯುವನೆಂದೂ ಶೈವರತ್ನಾಕರದಲ್ಲಿ ಈ ಪ್ರಕಾರ ಶಿವಪ್ರಸಾದಮಹಿಮೆಯು ವಿಶೇಷವಾಗಿ ಉಕ್ತವಾಗಿರುವುದು. ಆದುದರಿಂದ ಮೋಕ್ಷಾಪೇಕ್ಷಿಗಳಾದ ಮಾನವರು, ಮೋಕ್ಷಸಾಧನೀಭೂತವಾದ ಇಂತಹ ಸರ್ವೋತ್ತಮ ಶಿವಪ್ರಸಾದವಲ್ಲಿ ಅನ್ಯಾದೃಶವಾದ ಭಕ್ತಿಯನ್ನಿಟ್ಟು ವರ್ತಿಸಬೇಕೆನ್ನುವುದೇ ಭಗವತ್ಪಾದಾಚಾರ್ಯರ ಅಭಿಪ್ರಾಯವಾಗಿರುವುದು. ॥೨೧॥ ನಿತ್ಯಾನಂದಕಾರಣೀಭೂತವಾದ ಶಿವಪ್ರಸಾದವು ಸಿದ್ಧನಾಗಲು, ಸಮಸ್ತಪ್ರಪಂಚವು ಶಿವಮಯವಾಗಿ ತೋರುವುದು. ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲ. ॥೨೨॥ ಈ ಸಂಸಾರ ಚಕ್ರಭ್ರಮಣದಲ್ಲಿ ಸಿಲುಕಿ ಜನನಮರಣಗಳನ್ನು ಅನುಭವಿಸುವುದಕ್ಕೆ ಕಾರಣೀಭೂತವಾದ ಕರ್ಮವು ಶಿವಪ್ರಸಾದವನ್ನು ಬಿಟ್ಟು ಇನ್ಯಾವ ಸಾಧನದಿಂದಲೂ ನಷ್ಟವಾಗುವುದಿಲ್ಲ. ॥೨೩॥ ಬಹಳ ಹೇಳುವುದರಿಂದ ಏನು ಪ್ರಯೋಜನವು? ಶಿವಪ್ರಸಾದಕ್ಕೆ ಸಮಾನವಾದುದಾಗಲಿ ಅಥವಾ ಅಧಿಕವಾದುದಾಗಲಿ ಈ ಮೂರುಲೋಕಗಳಲ್ಲಿ ಯಾವುದೂ ಇರುವುದಿಲ್ಲ. ॥೨೪॥

ಶಿವಪ್ರಸಾದೇ ಸತಿ ಯೋಗಭಾಜಃ
ಸರ್ವಂ ಶಿವೈಕಾತ್ಮತಯಾ ವಿಭಾತಿ ।
ಸ್ವಕರ್ಮಮುಕ್ತಃ ಶಿವಭಾವಿತಾತ್ಮಾ
ಸ ಪ್ರಾಣಲಿಂಗೀತಿ ನಿಗದ್ಯತೇಽಸೌ ॥೭೫॥

ಇತಿ ಶ್ರೀಸಿದ್ಧಾಂತಶಿಖಾಮಣೌ ಪ್ರಸಾದಿಸ್ಥಲೇ ಪ್ರಸಾದಿಸ್ಥಲಾದಿ ಸಪ್ತವಿಧಸ್ಥಲಪ್ರಸಂಗೋ ನಾಮ

ಏಕಾದಶಪರಿಚ್ಛೇದಃ ಪರಿಸಮಾಪ್ತಃ

ಶಿವಪ್ರಸಾದವುಂಟಾಗಲು ಶಿವಯೋಗಿಗೆ ಸಮಸ್ತಪ್ರಪಂಚವು ಶಿವಸ್ವರೂಪವಾಗಿ ತೋರುವುದು. ಸ್ವಕರ್ಮಪಾಶಮುಕ್ತನೂ, ಶಿವಸ್ವರೂಪನೂ ಆದ ಪ್ರಸಾದಿಯು "ಪ್ರಾಣಲಿಂಗಿ" ಯೆಂದು ಹೇಳಿಸಿಕೊಳ್ಳುವನು. ॥೭೫॥

ಇಂತು ಶ್ರೀಸಿದ್ಧಾಂತಶಿಖಾಮಣಿಯ ಪ್ರಸಾದಿಸ್ಥಲದಲ್ಲಿ ಪ್ರಸಾದಿಸ್ಥಲಾದಿ ಸಪ್ತವಿಧಸ್ಥಲವಿಚಾರಾತ್ಮಕವಾದ

ಹನ್ನೊಂದನೆಯ ಪರಿಚ್ಛೇದವು ಪರಿಸಮಾಪ್ತವಾದುದು.

ಶ್ರೀಜಗದ್ಗುರುರೇಣುಕಾಚಾರ್ಯಃ ಪ್ರಸೀದತು.

ದ್ವಾದಶಪರಿಚ್ಛೇದಃ

ಪ್ರಾಣಲಿಂಗಿಸ್ಥಲಂ

॥ ಅಗಸ್ತ್ಯ ಉವಾಚ ॥

ಭಕ್ತೋ ಮಾಹೇಶ್ವರಶ್ಚೇತಿ ಪ್ರಸಾದೀತಿ ನಿಬೋಧಿತಃ ।
ಏಕ ಏವ ಕಥಂ ಚೈಷ ಪ್ರಾಣಲಿಂಗೀತಿ ಕಥ್ಯತೇ ? ॥೧॥

॥ ಶ್ರೀ ರೇಣುಕ ಉವಾಚ ॥

ಭಕ್ತೋ ಮಾಹೇಶ್ವರಶ್ಚೇತಿ ಪ್ರಸಾದೀತಿ ಚ ಕೀರ್ತಿತಃ ।
ಕರ್ಮಪ್ರಾಧಾನ್ಯಯೋಗೇನ ಜ್ಞಾನಯೋಗೋಽಸ್ಯ ಕಥ್ಯತೇ ॥೨॥

ಹನ್ನೆರಡನೆಯ ಪರಿಚ್ಛೇದವು.

ಪ್ರಾಣಲಿಂಗಿಸ್ಥಲ

ವ್ಯಾಖ್ಯಾನ—ಎಲೈ, ಗುರುಮೂರ್ತಿಯೇ! ಒಬ್ಬನೇ ಭಕ್ತ, ಮಹೇಶ, ಪ್ರಸಾದಿಯಾಗುವನೆಂದು ಬೋಧಿಸಿದೆ; ಆದರೆ ಇವನೇ ಪ್ರಾಣಲಿಂಗಿಯೆಂದು ಹೇಗೆ ಹೇಳಿಸಿಕೊಳ್ಳುವನು? ಎಂದು ಅಗಸ್ತ್ಯಮಹರ್ಷಿಯು ಪ್ರಶ್ನಮಾಡಲು, ಅದಕ್ಕೆ ಶ್ರೀರೇಣುಕಾಚಾರ್ಯರು ಈ ರೀತಿಯಾಗಿ ಅಪ್ಪಣೆಕೊಡಿಸುವರು. ॥೧॥ ಕರ್ಮಕಾಂಡೋಕ್ತಕ್ರಿಯಾಪ್ರಾಧಾನ್ಯದಿಂದ ಒಬ್ಬನೇ ಭಕ್ತನೆಂದೂ, ಮಾಹೇಶ್ವರನೆಂದೂ, ಪ್ರಸಾದಿಯೆಂದೂ ಈ ವರೆಗೆ ಹೇಳಲ್ಪಟ್ಟಿತು; ಇನ್ನು ಈ ಮೂರು ಸ್ಥಲಾಚರಣೆಗಳಿಂದ ಕೂಡಿದ ಇವನಿಗೆ ಜ್ಞಾನಕಾಂಡೋಕ್ತವಾದ ಜ್ಞಾನಯೋಗವು ಹೇಳಲ್ಪಡುವುದು. ಭಕ್ತ-ಮಾಹೇಶ್ವರ-ಪ್ರಸಾದಿ ಈ ಮೂರುಸ್ಥಲಗಳು ಕರ್ಮಪ್ರಧಾನವಾಗಿಯೂ, ಪ್ರಾಣಲಿಂಗಿ-ಶರಣ-ಐಕ್ಯ ಈ ಮೂರು ಸ್ಥಲಗಳು ಜ್ಞಾನಪ್ರಧಾನವಾಗಿಯೂ ಇರುವುವೆಂದು ಭಾವವು. ವೀರಶೈವನು ಶರೀರವಿರುವವರೆಗೂ ಕರ್ಮಜ್ಞಾನಗಳೆರಡನ್ನೂ ಆಚರಿಸಬೇಕು. ವೀರಶೈವಸಿದ್ಧಾಂತವು ಕರ್ಮಜ್ಞಾನಸಮುಚ್ಚಯಾತ್ಮಕವಾಗಿರು

ಲಿಂಗಂ ಚಿದಾತ್ಮಕಂ ಬ್ರಹ್ಮ ತಚ್ಛಕ್ತಿಃ ಪ್ರಾಣರೂಪಿಣೀ ।
ತದ್ರೂಪಲಿಂಗವಿಜ್ಞಾನೀ ಪ್ರಾಣಲಿಂಗೀತಿ ಕಥ್ಯತೇ ॥೩॥

ಪ್ರಾಣಲಿಂಗಿಸ್ಥಲಂ ಚೈತತ್ಪಂಚಸ್ಥಲಸಮನ್ವಿತಂ ।
ಪ್ರಾಣಲಿಂಗಿಸ್ಥಲಂ ಚಾದೌ ಪ್ರಾಣಲಿಂಗಾರ್ಚನಂ ತತಃ ॥೪॥

ಶಿವಯೋಗಸಮಾಧಿಶ್ಚ ತತೋ ಲಿಂಗನಿಜಸ್ಥಲಂ ।
ಅಂಗಲಿಂಗಸ್ಥಲಂ ಚಾಥ ಕ್ರಮಾದೇಷಾಂ ಭಿದೋಚ್ಯತೇ ॥೫॥

೩೨ ಪ್ರಾಣಲಿಂಗಿಸ್ಥಲಂ

ಪ್ರಾಣಾಪಾನಸಮಾಘಾತಾತ್ ಕಂದಮಧ್ಯಾದ್ಯದುತ್ಥಿತಂ ।
ಪ್ರಾಣಲಿಂಗಂ ತದಾಖ್ಯಾತಂ ಪ್ರಾಣಾಪಾನನಿರೋಧಿಭಿಃ ॥೬॥

ಪ್ರಾಣೋ ಯತ್ರ ಲಯಂ ಯಾತಿ ಭಾಸ್ಕರೇಂದುವಿಘಟ್ಟನಾತ್ ।
ತತ್ಪ್ರಾಣಲಿಂಗಮುದ್ದಿಷ್ಟಂ ತದ್ಧಾರೀ ಸ್ಯಾತ್ತದಾಕೃತಿಃ ॥೭॥

ವುದು. ॥೨॥ ಚಿತ್ಸ್ವರೂಪವಾದ ಬ್ರಹ್ಮವು ಶಿವಲಿಂಗವೆನಿಸುವುದು. ಶಿವಲಿಂಗ ಪೀಠಶಕ್ತಿಯು ಪ್ರಣವಾತ್ಮಕಪ್ರಾಣಸ್ವರೂಪವುಳ್ಳದಾಗಿರುವುದು. ॥೩॥ ಈ ಪ್ರಾಣ ಲಿಂಗಿಸ್ಥಲವು — ಪ್ರಾಣಲಿಂಗಿಸ್ಥಲ, ಪ್ರಾಣಲಿಂಗಾರ್ಚನಸ್ಥಲ, ಶಿವಯೋಗಸಮಾಧಿ ಸ್ಥಲ, ಲಿಂಗನಿಜಸ್ಥಲ, ಅಂಗಲಿಂಗಸ್ಥಲವೆಂದು ಐದು ಪ್ರಕಾರವಾಗಿರುವುದು. ಅನುಕ್ರಮವಾಗಿ ಇವುಗಳ ಭೇದವು ನಿರೂಪಿಸಲ್ಪಡುವುದು. ॥೪-೫॥

೩೨ ಪ್ರಾಣಲಿಂಗಿಸ್ಥಲ

ಶ್ರೀಗುರುವಿನ ಉಪದೇಶಾನುಸಾರವಾಗಿ ಪ್ರಾಣವಾಯು ಮತ್ತು ಅಪಾನ ವಾಯುಗಳ ಸಂಘಟ್ಟನದಿಂದ ನಾಭಿಕಂದಮಧ್ಯದಿಂದ ಯಾವ ಜ್ಯೋತಿಯು ಉತ್ಪನ್ನ ವಾಗುವುದೋ, ಅದೇ ಪ್ರಾಣಲಿಂಗವೆಂದು ಪ್ರಾಣಾಪಾನವಾಯುನಿರೋಧಿಗಳಾದ ಶಿವಯೋಗಿಗಳು ಹೇಳುವರು. ॥೬॥ ಸೂರ್ಯನಾಡಿ ಚಂದ್ರನಾಡಿ (ಇಡಾಪಿಂಗಳಾನಾಡಿ) ಗಳ ಸಂಘರ್ಷಣದಿಂದ ಪ್ರಾಣವಾಯುವು ಪರಬ್ರಹ್ಮಸ್ವರೂಪವಾದ ಯಾವ ಶಿವಲಿಂಗ ದಲ್ಲಿ ಅಡಗುವುದೋ, ಅದೇ ಪ್ರಾಣಲಿಂಗವೆನಿಸುವುದು. ಈ ಪ್ರಕಾರವಾದ ಪ್ರಾಣ ಲಿಂಗವನ್ನು ಧರಿಸುವವನು ಆ ಆಕಾರವುಳ್ಳವನೇ ಆಗುವನು. ॥೭॥ ಪ್ರಕಾಶರೂಪವೂ

ಜ್ಞಾನಿನಾಂ ಯೋಗಯುಕ್ತಾನಾಮಂತಃ ಸ್ಫುರತಿ ದೀಪವತ್ ।
ಚಿದಾಕಾರಂ ಪರಂ ಬ್ರಹ್ಮ ಲಿಂಗಮಜ್ಞೈರ್ನ ಭಾವ್ಯತೇ ॥೮॥

ಅಂತಃಸ್ಥಿತಂ ಪರಂ ಲಿಂಗಂ ಜ್ಯೋತೀರೂಪಂ ಶಿವಾತ್ಮಕಂ ।
ವಿಹಾಯ ಬಾಹ್ಯಲಿಂಗಸ್ಥಾ ವಿಮೂಢಾ ಇತಿ ಕೀರ್ತಿತಾಃ ॥೯॥

ಸಂವಿಲ್ಲಿಂಗಪರಾಮರ್ಶೀ ಬಾಹ್ಯವಸ್ತುಪರಾಙ್ಮುಖಃ ।
ಯಃ ಸದಾ ವರ್ತತೇ ಯೋಗೀ ಪ್ರಾಣಲಿಂಗೀ ಸ ಉಚ್ಯತೇ ॥೧೦॥

ಮಾಯಾವಿಕಲ್ಪಜಂ ವಿಶ್ವಂ ಹೇಯಂ ಸಂಚಿಂತ್ಯ ನಿತ್ಯಶಃ ।
ಚಿದಾನಂದಮಯೇ ಲಿಂಗೇ ವಿಲೀನಃ ಪ್ರಾಣಲಿಂಗವಾನ್ ॥೧೧॥

ಸತ್ತಾ ಪ್ರಾಣಮಯೀ ಶಕ್ತಿಃ ಸದ್ರೂಪಂ ಪ್ರಾಣಲಿಂಗಕಂ ।
ತತ್ಸಾಮರಸ್ಯವಿಜ್ಞಾನಾತ್ ಪ್ರಾಣಲಿಂಗೀತಿ ಕಥ್ಯತೇ ॥೧೨॥

ಪರಬ್ರಹ್ಮಸ್ವರೂಪವೂ ಆದ ಪ್ರಾಣಲಿಂಗವು ಶಿವಯೋಗದಿಂದ ಕೂಡಿದ ಜ್ಞಾನಿಗಳ ಹೃದಯಕಮಲದಲ್ಲಿ ದೀಪದಂತೆ ಪ್ರಕಾಶಿಸುತ್ತಿರುವುದು. ಆ ಲಿಂಗವು ಗುರೂಪದೇಶ ರಹಿತರಾದ ಪ್ರಾಕೃತರಿಂದ ತಿಳಿಯಲ್ಪಡುವುದಿಲ್ಲ. "ಹೃದಯೇ ವೈ ಬ್ರಹ್ಮ ಸೋಮ ಸೂರ್ಯಾಗ್ನಿ ಮಂಡಲೇ ನಿವಾತದೀಪೋಪಮಸ್ಥಾಯಿ ಹೃದ್ಯಂತರ್ಜ್ಯೋತಿಃ ಪುರುಷಃ" ಇತ್ಯಾದಿ ಶ್ರುತಿವಾಕ್ಯಗಳು ಇದೇ ಅಭಿಪ್ರಾಯವನ್ನು ಪ್ರತಿಪಾದಿಸುತ್ತಿರುವುವು. ॥೮॥ ಹೃದಯ ಕಮಲಸ್ಥಿತವೂ, ಜ್ಯೋತಿಸ್ಸ್ವರೂಪವೂ, ಶಿವಸ್ವರೂಪವೂ ಆದ ಪ್ರಾಣಲಿಂಗವನ್ನು ಬಿಟ್ಟು ಸ್ಥಾವರಲಿಂಗಾದಿಗಳನ್ನು ಪೂಜಿಸುವವರು ಮೂಢರೆನಿಸುವರು. ॥೯॥ ಯಾವನು ಸ್ಥಾವರಲಿಂಗಾದಿಗಳಲ್ಲಿಯೂ, ತತ್ಪೂಜಾಸಾಮಗ್ರಿಗಳಲ್ಲಿಯೂ ಪರಾಙ್ಮುಖನಾಗಿ, ಯಾವಾಗಲೂ ಚಿದ್ರೂಪವಾದ ಪ್ರಾಣಲಿಂಗವಿಚಾರವನ್ನು ಮಾಡುತ್ತಿರುವನೋ, ಆ ಶಿವಯೋಗಿಯು ಪ್ರಾಣಲಿಂಗಿಯೆಂದು ಹೇಳಿಸಿಕೊಳ್ಳುವನು. ॥೧೦॥ ಚರಾಚರಾತ್ಮಕವಾದೀಜಗತ್ತು ಮಾಯಿಕಗುಣಭೇದದಿಂದ ಉತ್ಪನ್ನವಾದುದೆಂದೂ, ಹೇಯವೆಂದೂ ತಿಳಿದು, ಸಚ್ಚಿದಾನಂದಸ್ವರೂಪವಾದ ಪ್ರಾಣಲಿಂಗದಲ್ಲಿ ಮನಸ್ಸನ್ನು ಲಯಗೊಳಿಸುವವನು ಪ್ರಾಣಲಿಂಗಿಯೆಂದು ಹೇಳಿಸಿಕೊಳ್ಳುವನು. ॥೧೧॥ "ಅಸ್ಮಿ" ನಾನು ಇದ್ದೇನೆ; ಎಂಬ ಸ್ಫೂರ್ತಿಯೇ ಚಿಲ್ಲಿಂಗದ ಪ್ರಾಣಸ್ವರೂಪವಾದ ಶಕ್ತಿಯು. ಪ್ರಾಣಲಿಂಗವಾದರೂ ಆ ಪ್ರಕಾರವಾದ "ಅಸ್ಮಿ" ಎಂಬ ಸ್ಫೂರ್ತಿಯುಳ್ಳುದಾಗಿ ಸದ್ರೂಪವಾಗಿರುವುದು. ಆ ಶಕ್ತಿ ಮತ್ತು ಶಿವ ಈ ಉಭಯರ ಅನ್ಯೋನ್ಯಸಾಮರಸ್ಯವನ್ನು ತಿಳಿಯುವುದರಿಂದ ಇವನು ಪ್ರಾಣಲಿಂಗಿಯೆನಿಸುವನು. ॥೧೨॥

೩೩ ಪ್ರಾಣಲಿಂಗಾರ್ಚನಸ್ಥಲಂ

ಅಂತರ್ಗತಂ ಚಿದಾಕಾರಂ ಲಿಂಗಂ ಶಿವಮಯಂ ಪರಂ ।
ಪೂಜ್ಯತೇ ಭಾವಪುಷ್ಪೈರ್ಯತ್ಪ್ರಾಣಲಿಂಗಾರ್ಚನಂ ಹಿ ತತ್ ॥೧೩॥

ಅಂತಃ ಪವನಸಂಸ್ಪೃಷ್ಟೇ ಸುಸೂಕ್ಷ್ಮಾಂಬರಶೋಭಿತೇ ।
ಮೂರ್ಧನ್ಯಚಂದ್ರನಿಗಲತ್ಸುಧಾಸೇಕಾತಿಶೀತಲೇ ॥೧೪॥

ಬದ್ಧೇಂದ್ರಿಯನವದ್ವಾರೇ ಬೋಧದೀಪೇ ಹೃದಾಲಯೇ ।
ಪದ್ಮಪೀಠೇ ಸಮಾಸೀನಂ ಚಿಲ್ಲಿಂಗಂ ಶಿವವಿಗ್ರಹಂ ॥
ಭಾವಯಿತ್ವಾ ಸದಾಕಾಲಂ ಪೂಜಯೇದ್ಭಾವವಸ್ತುಭಿಃ ॥೧೫॥

ಕ್ಷಮಾಽಭಿಷೇಕಸಲಿಲಂ ವಿವೇಕೋ ವಸ್ತ್ರಮುಚ್ಯತೇ ।
ಸತ್ಯಮಾಭರಣಂ ಪ್ರೋಕ್ತಂ ವೈರಾಗ್ಯಂ ಪುಷ್ಪಮಾಲಿಕಾ ॥೧೬॥

ಗಂಧಃ ಸಮಾಧಿಸಂಪತ್ತಿರಕ್ಷತಾ ನಿರಹಂಕೃತಿಃ ।
ಶ್ರದ್ಧಾ ಧೂಪೋ ಮಹಾಜ್ಞಾನಂ ಜಗದ್ಭಾಸಿ ಪ್ರದೀಪಿಕಾ ॥೧೭॥

---

೩೩ ಪ್ರಾಣಲಿಂಗಾರ್ಚನಸ್ಥಲ

ಹೃದಯಕಮಲಾಂತರ್ಗತವಾದುದೂ, ಚಿತ್ಸ್ವರೂಪವಾದುದೂ, ಶಿವಮಯವಾದುದೂ, ಶ್ರೇಷ್ಠವಾದುದೂ ಆದ ಪ್ರಾಣಲಿಂಗಕ್ಕೆ ಅಂತಃಕರಣವೃತ್ತಿವಿಶೇಷಗಳಿಂದ ಯಾವ ಅರ್ಚನವು ಮಾಡಲ್ಪಡುವುದೋ, ಅದು ಪ್ರಾಣಲಿಂಗಾರ್ಚನವೆಂದು ಹೇಳಿಸಿಕೊಳ್ಳುವುದು. ॥೧೩॥ ಪ್ರಾಣವಾಯುವಿನಿಂದ ವ್ಯಾಪ್ತವಾದುದೂ, ಅತ್ಯಂತ ಸೂಕ್ಷ್ಮಾಕಾಶ (ದಹರಾಕಾಶ) ದಿಂದ ಶೋಭಿತವಾದುದೂ, ಬ್ರಹ್ಮರಂಧ್ರದಲ್ಲಿರುವ ಚಂದ್ರಮಂಡಲದಿಂದ ಸೋರುತ್ತಿರುವ ಅಮೃತದ ಅಭಿಷೇಕದಿಂದ ಅತ್ಯಂತಶೀತಲವಾದುದೂ, ಇಂದ್ರಿಯರೂಪನವದ್ವಾರಗಳನ್ನು ನಿರೋಧಿಸುತ್ತಿರುವುದೂ, ಶಿವಜ್ಞಾನರೂಪದೀಪವುಳ್ಳುದೂ ಆದ ಹೃನ್ಮಂದಿರದಲ್ಲಿ, ದ್ವಾದಶದಲಕಮಲಕರ್ಣಿಕೆಯಲ್ಲಿ ಕುಳಿತು ಪ್ರಕಾಶಿಸುತ್ತಿರುವ ಮಂಗಲಮೂರ್ತಿಯಾದ ಪ್ರಾಣಲಿಂಗವನ್ನು ಶ್ರೀಗುರೂಪದೇಶಾನುಸಾರವಾಗಿ ಧ್ಯಾನಿಸಿ, ಮಾನಸಿಕವಸ್ತುಗಳಿಂದ ಯಾವಾಗಲೂ ಪೂಜಿಸಬೇಕು. ॥೧೪-೧೫॥ ಆ ವಸ್ತುಗಳಾವುವೆಂದರೆ—ಕ್ಷಮೆಯೇ ಅಭಿಷೇಕಜಲವು, ನಿತ್ಯಾನಿತ್ಯವಸ್ತುವಿವೇಕವೇ ವಸ್ತ್ರವು, ಸತ್ಯವಚನವೇ ಆಭರಣವು, ವೈರಾಗ್ಯವೇ ಪುಷ್ಪಮಾಲಿಕೆಯು, ಚಿತ್ತೈಕಾಗ್ರತೆಯೇ ಗಂಧವು, ನಿರಹಂಕಾರವೇ ಅಕ್ಷತೆಗಳು, ಶ್ರದ್ಧೆಯೇ ಧೂಪವು, ವಿಶ್ವಪ್ರಕಾಶಕವಾದ ಮಹಾಜ್ಞಾನವೇ ದೀಪವು, ಅಜ್ಞಾನಕ್ಕೆ

ಭ್ರಾಂತಿಮೂಲಪ್ರಪಂಚಸ್ಯ ನೈವೇದ್ಯಂ ತನ್ನಿವೇದನಂ ।
ಮೌನಂ ಘಂಟಾಪರಿಸ್ಪಂದಸ್ತಾಂಬೂಲಂ ವಿಷಯಾರ್ಪಣಂ ॥೧೮॥

ವಿಷಯಭ್ರಾಂತಿರಾಹಿತ್ಯಂ ತತ್ ಪ್ರದಕ್ಷಿಣಕಲ್ಪನಾ ।
ಬುದ್ಧಿಸ್ತದಾತ್ಮಿಕಾಸಕ್ತಿರ್ನಮಸ್ಕಾರಕ್ರಿಯಾ ಮತಾ ॥೧೯॥

ಏವಂವಿಧೈರ್ಭಾವಶುದ್ಧೈರುಪಚಾರೈರದೂಷಿತೈಃ ।
ಪ್ರತ್ಯಙ್ಮುಖಮನಾ ಭೂತ್ವಾ ಪೂಜಯೇಲ್ಲಿಂಗಮಾಂತರಂ ॥೨೦॥

೩೪ ಶಿವಯೋಗಸಮಾಧಿಸ್ಥಲಂ

ಅಂತಃಕ್ರಿಯಾರತಸ್ಯಾಸ್ಯ ಪ್ರಾಣಲಿಂಗಾರ್ಚನಕ್ರಮೈಃ ।
ಶಿವಾತ್ಮಧ್ಯಾನಸಂಪತ್ತಿಃ ಸಮಾಧಿರಿತಿ ಕಥ್ಯತೇ ॥೨೧॥

ಸರ್ವತತ್ತ್ವೋಪರಿಗತಂ ಸಚ್ಚಿದಾನಂದಭಾಸುರಂ ।
ಪರಬ್ರಹ್ಮ ಮಹಾಲಿಂಗಂ ಪ್ರಾಣೋ ಜೀವಃ ಪ್ರಕೀರ್ತಿತಃ ।
ತದೇಕಭಾವಮನನಾತ್ ಸಮಾಧಿಸ್ಥಃ ಪ್ರಕೀರ್ತಿತಃ ॥೨೨॥

ಮೂಲಕಾರಣವಾದ ಶರೀರಾದ್ಯಹಂಕಾರವರ್ಗದ ನಿವೇದನವೇ ನೈವೇದ್ಯವು, ಮೌನವೇ ಘಂಟಾನಾದವು, ಶಬ್ದಾದಿವಿಷಯಾರ್ಪಣವೇ ತಾಂಬೂಲವು, ವಿಷಯ ಸುಖಭ್ರಾಂತಿರಾಹಿತ್ಯವೇ ಪ್ರದಕ್ಷಿಣವು, ಲಿಂಗರೂಪದಲ್ಲಿ ಆಸಕ್ತಿಯುಳ್ಳ ಬುದ್ಧಿಯೇ ನಮಸ್ಕಾರವು. ಈ ಪ್ರಕಾರವಾಗಿ ಭಾವಶುದ್ಧಗಳಾದ ಮಾನಸಿಕೋಪಚಾರಗಳಿಂದ ಅಂತರ್ಮುಖವಾದ ಮನಸ್ಸುಳ್ಳವನಾಗಿ ಹೃದಯಕಮಲದಲ್ಲಿರುವ ಪ್ರಾಣಲಿಂಗವನ್ನು ಪೂಜಿಸಬೇಕು. ॥೧೬-೧೭-೧೮-೧೯-೨೦॥

೩೪ ಶಿವಯೋಗಸಮಾಧಿಸ್ಥಲ

ಈ ಮೊದಲು ಹೇಳಿದ ಪ್ರಾಣಲಿಂಗಪೂಜಾಕ್ರಮಗಳಿಂದ ಅಂತರಂಗಪೂಜಾ ನಿರತನಾದ ಈ ಪ್ರಾಣಲಿಂಗಿಯ ಶಿವಜೀವೈಕ್ಯಾನುಸಂಧಾನರೂಪವಾದ ಸಂಪತ್ತೇ ಶಿವಯೋಗಸಮಾಧಿಯೆನಿಸಿಕೊಳ್ಳುವುದು. ॥೨೧॥ ಮಹಾಲಿಂಗವೇ ಪರಬ್ರಹ್ಮ ವೆಂದೂ, ಪ್ರಾಣವೇ ಜೀವವೆಂದೂ ಹೇಳಿಸಿಕೊಳ್ಳುವುದು. ಆ ಪರಬ್ರಹ್ಮ (ಲಿಂಗ) ಜೀವ (ಅಂಗ) ರ ಏಕತ್ವಚಿಂತನದಿಂದ ಪ್ರಾಣಲಿಂಗಿಯು ಶಿವಯೋಗಸಮಾಧಿಸ್ಥನೆಂದು ಹೇಳಿಸಿಕೊಳ್ಳುವನು. ॥೨೨॥ ಚರಾಚರಾತ್ಮಕವಾದೀ ಜಗತ್ತು ಬಹಿರ್ವಾಸನೆಯಿಂದ

ಬಹಿರ್ವಾಸನಯಾ ವಿಶ್ವಂ ವಿಕಲ್ಪಾರ್ಥಂ ಪ್ರಕಾಶತೇ ।
ಅಂತರ್ವಾಸಿತಚಿತ್ತಾನಾಮಾತ್ಮಾನಂದಃ ಪ್ರಕಾಶತೇ ॥೨೩॥

ಆತ್ಮಾರಣಿಸಮುತ್ಥೇನ ಪ್ರಮೋದಮಥನಾತ್ಸುಧೀಃ ।
ಜ್ಞಾನಾಗ್ನಿನಾ ದಹೇತ್ಸರ್ವಂ ಪಾಶಜಾಲಂ ಜಗನ್ಮಯಂ ॥೨೪॥

ಸಂಸಾರವಿಷವೃಕ್ಷಸ್ಯ ಪಂಚಕ್ಲೇಶಪಲಾಶಿನಃ ।
ಛೇದನೇ ಕರ್ಮಮೂಲಸ್ಯ ಪರಶುಃ ಶಿವಭಾವನಾ ॥೨೫॥

ಅಜ್ಞಾನರಾಕ್ಷಸೋನ್ಮೇಷಕಾರಿಣಃ ಸಂಹೃತಾತ್ಮನಃ ।
ಶಿವಧ್ಯಾನಂ ತು ಸಂಸಾರತಮಸಶ್ಚಂಡಭಾಸ್ಕರಃ ॥೨೬॥

ಅಂತಃ ಷಟ್ಚಕ್ರರೂಪಾಣಿ ಪಂಕಜಾನಿ ವಿಭಾವಯೇತ್ ।
ಬ್ರಹ್ಮಾದಿಸ್ಥಾನಭೂತಾನಿ ಭ್ರೂಮಧ್ಯಾಂತಾನಿ ಮೂಲತಃ ॥೨೭॥

ಭ್ರೂಮಧ್ಯಾದೂರ್ಧ್ವಭಾಗೇ ತು ಸಹಸ್ರದಲಮಂಬುಜಂ ।
ಭಾವಯೇತ್ತತ್ರ ವಿಮಲಂ ಚಂದ್ರಬಿಂಬಂ ತದಂತರೇ ॥೨೮॥

ನಾನಾವಿಧವಾದ ಸಂಕಲ್ಪವಿಕಲ್ಪರೂಪವಾಗಿ ತೋರುತ್ತದೆ. ಅಂತರ್ವಾಸನಾಯುಕ್ತ ಚಿತ್ತರಲ್ಲಿ ಶಿವಾನಂದವು ಪ್ರಕಾಶಿಸುತ್ತದೆ. ॥೨೩॥ ಪ್ರಾಣಲಿಂಗಿಯು ಆನಂದಘರ್ಷಣದಿಂದ ಆತ್ಮವೆಂಬ ಅರಣಿ (ಯಜ್ಞದಲ್ಲಿ ಅಗ್ನಿಮಥನಕ್ಕೆ ಉಪಯೋಗಿಸುವ ಬನ್ನಿ ಮರದ ಕಟ್ಟಿಗೆ) ಯಿಂದ ಉತ್ಪನ್ನವಾದ ಶಿವಜ್ಞಾನರೂಪಾಗ್ನಿಯಿಂದ ವಿಶ್ವರೂಪವಾದ ಸಮಸ್ತಪಾಶಸಮೂಹವನ್ನು ನಾಶಮಾಡುವನು. ॥೨೪॥ ಧರ್ಮಾಧರ್ಮರೂಪಕರ್ಮಗಳೆಂಬ ಮೂಲಗಳುಳ್ಳುದಾಗಿಯೂ ಅವಿದ್ಯಾದಿಪಂಚಕ್ಲೇಶಗಳೆಂಬ ಪರ್ಣಗಳುಳ್ಳುದಾಗಿಯೂ ಇರುವ ಸಂಸಾರವೆಂಬ ವಿಷವೃಕ್ಷವನ್ನು ಕತ್ತರಿಸುವುದರಲ್ಲಿ ಶಿವಧ್ಯಾನವು ಕೊಡಲಿಯಂತಿರುವುದು. ॥೨೫॥ ಅಜ್ಞಾನವೆಂಬ ರಾಕ್ಷಸನ ನೇತ್ರೋನ್ಮೀಲನವನ್ನುಂಟುಮಾಡತಕ್ಕುದೂ, ಆತ್ಮನನ್ನು ಸಂಹರಿಸತಕ್ಕುದೂ ಆದ ಸಂಸಾರವೆಂಬ ಗಾಢಾಂಧಕಾರಕ್ಕೆ ಶಿವಧ್ಯಾನವು ಪ್ರಚಂಡಮಾರ್ತಂಡಸ್ವರೂಪವಾಗಿರುವುದು. ॥೨೬॥ ಶರೀರದೊಳಗೆ ಆಧಾರ-ಸ್ವಾಧಿಷ್ಠಾನ-ಮಣಿಪೂರಕ-ಅನಾಹತ-ವಿಶುದ್ಧಿ-ಆಜ್ಞಾನಾಮಕ ಷಟ್ಚಕ್ರರೂಪಗಳಾದ ಕಮಲಗಳನ್ನು ಭಾವಿಸಬೇಕು. ಈ ಆರು ಚಕ್ರಗಳು ಕ್ರಮವಾಗಿ–ಗುದ-ಗುಹ್ಯ-ನಾಭಿ-ಹೃದಯ-ಕಂಠ-ಭ್ರೂಮಧ್ಯದಲ್ಲಿದ್ದು, ಬ್ರಹ್ಮ-ವಿಷ್ಣು-ರುದ್ರ-ಈಶ್ವರ-ಸದಾಶಿವ-ಪರಶಿವ ಎಂಬೀ ದೇವತೆಗಳಿಗೆ ಸ್ಥಾನಗಳಾಗಿರುವುವು. ॥೨೭॥ ಭ್ರೂಮಧ್ಯದ ಮೇಲ್ಭಾಗವಲ್ಲಿರುವ ಬ್ರಹ್ಮರಂಧ್ರದಲ್ಲಿ ಸಾವಿರದಳಗಳುಳ್ಳ ಕಮಲ

ಸೂಕ್ಷ್ಮರಂಧ್ರಂ ವಿಜಾನೀಯಾತ್ ತತ್ಕೈಲಾಸಪದಂ ವಿದುಃ ।
ತತ್ರಸ್ಥಂ ಭಾವಯೇಚ್ಛಂಭುಂ ಸರ್ವಕಾರಣಕಾರಣಂ ॥೨೯॥
ಸರ್ವತತ್ತ್ವೋಪರಿಗತಂ ಸಚ್ಚಿದಾನಂದಭಾಸುರಂ ।
ಸ್ವಪ್ರಕಾಶಮನಿರ್ದೇಶ್ಯಮವಾಙ್ಮನಸಗೋಚರಂ ॥೩೦॥
ಉಮಾಖ್ಯಯಾ ಮಹಾಶಕ್ತ್ಯಾ ದೀಪಿತಂ ಚಿತ್ಸ್ವರೂಪಯಾ ।
ಹಂಸರೂಪಂ ಪರಾತ್ಮಾನಂ ಸೋಽಹಂಭಾವೇನ ಭಾವಯೇತ್ ॥
ತದೇಕತಾನತಾಸಿದ್ಧಿಃ ಸಮಾಧಿಃ ಪರಮೋ ಮತಃ ॥೩೧॥

೩೫ ಲಿಂಗನಿಜಸ್ಥಲಂ

ಸ್ವಾಂತಃಸ್ಥಶಿವಲಿಂಗಸ್ಯ ಪ್ರತ್ಯಕ್ಷಾನುಭವಸ್ಥಿತಿಃ ।
ಯಾ ಸೈವ ಪರಲಿಂಗಸ್ಯ ನಿಜಮಿತ್ಯುಚ್ಯತೇ ಬುಧೈಃ ॥೩೨॥

ವನ್ನು ಭಾವಿಸಿ, ಆ ಕಮಲದಲ್ಲಿ ಸ್ವಚ್ಛವಾದ ಚಂದ್ರಮಂಡಲವನ್ನು ಭಾವಿಸಬೇಕು. ಆ ಚಂದ್ರಮಂಡಲದ ಮಧ್ಯದಲ್ಲಿ ಅತ್ಯಂತಸೂಕ್ಷ್ಮರಂಧ್ರವನ್ನು ಗುರುಮುಖದಿಂದ ತಿಳಿಯಬೇಕು. ಅದೇ ಕೈಲಾಸಸ್ಥಾನವಾಗಿರುವುದು. ಅಲ್ಲಿರುವ ಶಿವನನ್ನು ಬ್ರಹ್ಮಾದಿ ಸಕಲಕಾರಣಪುರುಷರಿಗೆ ಕಾರಣನನ್ನಾಗಿ ಭಾವಿಸಬೇಕು. ॥೨೮-೨೯॥ ಪೃಥಿವ್ಯಾದಿ ಷಟ್ತ್ರಿಂಶತ್ತತ್ತ್ವಗಳಿಗಿಂತಲೂ ಮೇಲಿರುವವನೂ, ಸತ್-ಚಿತ್-ಆನಂದಗಳಿಂದ ಪ್ರಕಾಶಿಸುವವನೂ, ಸ್ವಪ್ರಕಾಶದಿಂದಲೇ ಪ್ರಕಾಶಿಸುವವನೂ, ಅನಿರ್ದೇಶ್ಯನೂ, ವಾಙ್ಮನಸ್ಸುಗಳಿಗೆ ಅಗೋಚರನೂ, ಚಿತ್ಸ್ವರೂಪನಾದ ತನ್ನಲ್ಲಿ ನಿತ್ಯಸಂಬಂಧದಿಂದಿರುವ ಉಮಾನಾಮಕಮಹಾಶಕ್ತಿಯಿಂದ ಪ್ರಕಾಶಿಸುವವನೂ, ಹಂಸರೂಪನೂ ಆದ ಪರಮಾತ್ಮನನ್ನು ಸೋಽಹಂಭಾವದಿಂದ (ಅವನೇ ನಾನೆಂಬ ಭಾವನೆಯಿಂದ) ಧ್ಯಾನಿಸಬೇಕು. ಶಿವಜೀವರ ಏಕತ್ವಸಿದ್ಧಿಯೇ ಶ್ರೇಷ್ಠವಾದ ಶಿವಯೋಗಸಮಾಧಿಯೆನಿಸಿಕೊಳ್ಳುವುದು. ॥೩೦-೩೧॥

೩೫ ಲಿಂಗನಿಜಸ್ಥಲ

ತನ್ನ ಅಂತರಂಗದಲ್ಲಿರುವ ಶಿವಲಿಂಗದ ಪ್ರತ್ಯಕ್ಷಾನುಭವಸ್ಥಿತಿಯು ಯಾವುದುಂಟೋ, ಅದೇ ಮಹಾಲಿಂಗದ ನಿಜಸ್ವರೂಪವೆಂದು ಆತ್ಮತತ್ತ್ವಜ್ಞಾನಿಗಳು ಹೇಳುವರು. ॥೩೨॥ ಜಗತ್ತುಗಳಿಗೆ ಮೂಲಕಾರಣವಾದ ಮಾಯಾತತ್ತ್ವವನ್ನು

ಅವ್ಯಕ್ತಂ ಲಿಂಗಮಿತ್ಯಾಹುರ್ಜಗತಾಂ ಮೂಲಕಾರಣಂ ।
ಲಿಂಗೀ ಮಹೇಶ್ವರಶ್ಚೇತಿ ಮತಮೇತದಸಂಗತಂ ||೩೩||

ಚಿದಾನಂದಮಯಃ ಸಾಕ್ಷಾಚ್ಛಿವ ಏವ ನಿರಂಜನಃ ।
ಲಿಂಗಮಿತ್ಯುಚ್ಯತೇ ನಾನ್ಯದ್ಯತಃ ಸ್ಯಾದ್ವಿಶ್ವಸಂಭವಃ ||೩೪||

ಬ್ರಹ್ಮವಿಷ್ಣ್ವಾದಯೋ ದೇವಾಃ ಸರ್ವೇ ವೇದಾದಯಸ್ತಥಾ ।
ಲೀಯಂತೇ ಯತ್ರ ಗಮ್ಯಂತೇ ತಲ್ಲಿಂಗಂ ಬ್ರಹ್ಮ ಕೇವಲಂ ||೩೫||

ಬಹುನಾತ್ರ ಕಿಮುಕ್ತೇನ ಲಿಂಗಮಿತ್ಯುಚ್ಯತೇ ಬುಧೈಃ ।
ಶಿವಾಭಿಧಂ ಪರಂ ಬ್ರಹ್ಮ ಚಿದ್ರೂಪಂ ಜಗದಾಸ್ಪದಂ ||೩೬||

ಜ್ಯೋತಿರ್ಮಯಂ ಪರಂ ಲಿಂಗಂ ಶ್ರುತಿರಾಹ ಶಿವಾತ್ಮಕಂ ।
ತಸ್ಯ ಭಾಸಾ ಸರ್ವಮಿದಂ ಪ್ರತಿಭಾತಿ ನ ಸಂಶಯಃ ||೩೭||

ಲಿಂಗವೆಂದೂ, "ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಂ" ಎಂಬ ವಾಕ್ಯಾನುಸಾರವಾಗಿ ಇಂಥ ಮಾಯಾನಾಮಕಲಿಂಗವುಳ್ಳವನೇ ಮಹೇಶ್ವರನೆಂದೂ ಹೇಳುತ್ತಾರೆ. ಈ ರೀತಿಯಾಗಿ ಹೇಳುವುದು ಅಸಂಗತವು. ಏಕೆಂದರೆ—ಪ್ರಕೃತಿಯು ಜಡವಾಗಿದ್ದು ಹೇಯಕೋಟಿಪ್ರವಿಷ್ಟವಾಗಿರುವುದಷ್ಟೆ! "ಮಂ ಶಿವಂ ಪರಮಂ ಬ್ರಹ್ಮ ಪ್ರಾಪ್ನೋತೀತಿ ಸ್ವಭಾವತಃ । ಮಾಯೇತಿ ಪ್ರೋಚ್ಯತೇ ಲೋಕೇ ಬ್ರಹ್ಮನಿಷ್ಠಾ ಸನಾತನೀ ॥" ಎಂಬ ಶಿವಾಗಮಪ್ರಮಾಣಾನುಸಾರವಾಗಿ "ಬ್ರಹ್ಮನಿಷ್ಠಾ ಸನಾತನೀ ಮಾಯಾ-ಪರಶಿವ ಬ್ರಹ್ಮನಿಷ್ಠವಾದ ನಿತ್ಯವಾದ ವಿಮರ್ಶಶಕ್ತಿಯು, ಮಂ—ಪರಶಿವಬ್ರಹ್ಮವನ್ನು, ಅಯತಿ—ಸ್ವಭಾವಸಿದ್ಧವಾಗಿ ಆಶ್ರಯಿಸಿರುತ್ತದೆ" ಎಂದು ಹೇಳಬೇಕೆಂದು ಶ್ರೀರೇಣುಕ ಭಗವತ್ಪಾದರ ಅಭಿಪ್ರಾಯವಾಗಿರುವುದು. ||೩೩|| ಪರಬ್ರಹ್ಮಸ್ವರೂಪವಾದ ಯಾವ ಲಿಂಗದಿಂದ ಜಗದುತ್ಪತ್ತಿಯಾಗುವುದೋ, ಅದೇ ಲಿಂಗವೆಂದು ಹೇಳಿಸಿಕೊಳ್ಳುವುದು. ಆ ಲಿಂಗವು ಸಚ್ಚಿದಾನಂದಸ್ವರೂಪವೂ, ದೋಷರಹಿತವೂ, ಸಾಕ್ಷಾತ್ ಶಿವಸ್ವರೂಪವೂ ಆಗಿರುವುದು. ಇದನ್ನು ಬಿಟ್ಟು ಉಳಿದ ವಸ್ತುವು ಲಿಂಗವೆನಿಸಿಕೊಳ್ಳುವುದಿಲ್ಲ. ||೩೪|| ಬ್ರಹ್ಮವಿಷ್ಣ್ವಾದಿದೇವತೆಗಳೂ, ವೇದಾಗಮಾದಿಗಳೂ ಯಾವ ವಸ್ತುವಿನಲ್ಲಿ ಲಯವನ್ನು ಹೊಂದುತ್ತವೆಯೋ, ಪುನಃ ಯಾವ ವಸ್ತುವಿನಲ್ಲಿ ಹುಟ್ಟುತ್ತವೆಯೋ, ಅದೇ ಪರಬ್ರಹ್ಮ ನಾಮಕವಾದ ಲಿಂಗವೆನಿಸುವುದು. ||೩೫|| ವಿಶೇಷವಾಗಿಹೇಳುವುದರಿಂದೇನುಪ್ರಯೋಜನವು? ಚಿದ್ರೂಪವೂ, ಜಗದಾಧಾರಭೂತವೂ, ಶಿವನಾಮಕವೂ ಆದ ಪರಬ್ರಹ್ಮವೇ ಲಿಂಗವೆನಿಸುವುದು. ||೩೬|| ಶಿವಾತ್ಮಕವಾದ ಮಹಾಲಿಂಗವೇ ಪ್ರಕಾಶಮಯವಾಗಿರುವುದು. ಪ್ರಕಾಶಮಯವಾದ ಆ ಮಹಾಲಿಂಗದ ಪ್ರಕಾಶದಿಂದಲೇ ಸೂರ್ಯಚಂದ್ರಾದಿ

ನ ಸೂರ್ಯೋಽ ಭಾತಿ ತತ್ರೇಂದುರ್ನ ವಿದ್ಯುನ್ನ ಚ ಪಾವಕಃ ।
ನ ತಾರಕಾ ಮಹಾಲಿಂಗೇ ದ್ಯೋತಮಾನೇ ಪರಾತ್ಮನಿ ॥೩೮॥

ಲಿಂಗಾನ್ನಾಸ್ತಿ ಪರಂ ತತ್ತ್ವಂ ಯದಸ್ಮಾಜ್ಜಾಯತೇ ಜಗತ್ ।
ಯದೇತದ್ರೂಪತಾಂ ಧತ್ತೇ ಯದತ್ರ ಲಯಮಶ್ನುತೇ ॥೩೯॥

ತಸ್ಮಾಲ್ಲಿಂಗಂ ಪರಂ ಬ್ರಹ್ಮ ಸಚ್ಚಿದಾನಂದಲಕ್ಷಣಂ ।
ನಿಜರೂಪಮಿತಿ ಧ್ಯಾನಾತ್ತದವಸ್ಥಾ ಪ್ರಜಾಯತೇ ॥೪೦॥

೩೬ ಅಂಗಲಿಂಗಸ್ಥಲಂ

ಜ್ಞಾನಮಂಗಮಿತಿ ಪ್ರಾಹುರ್ಜ್ಞೇಯಂ ಲಿಂಗಂ ಸನಾತನಂ ।
ವಿದ್ಯತೇ ತದ್ದ್ವಯಂ ಯಸ್ಯ ಸೋಽಂಗಲಿಂಗೀತಿ ಕೀರ್ತಿತಃ ॥೪೧॥

ಅಂಗೇ ಲಿಂಗಂ ಸಮಾರೂಢಂ ಲಿಂಗೇ ಚಾಂಗಮುಪಸ್ಥಿತಂ ।
ಏತದಸ್ತಿ ದ್ವಯಂ ಯಸ್ಯ ಸ ಭವೇದಂಗಲಿಂಗವಾನ್ ॥೪೨॥

ಪ್ರಕಾಶವಸ್ತುಗಳು ಪ್ರಕಾಶಿಸುತ್ತವೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ॥೩೭॥ ಪರಮಾತ್ಮಮಹಾಲಿಂಗವು ಪ್ರಕಾಶಿಸಲಾಗಿ ಆ ಮಹಾಪ್ರಕಾಶದಲ್ಲಿ ಸೂರ್ಯ-ಚಂದ್ರ-ಅಗ್ನಿ-ಮಿಂಚು-ನಕ್ಷತ್ರಗಳು ಇವು ಯಾವುವೂ ಪ್ರಕಾಶಿಸುವುದಿಲ್ಲ. ಆ ಮಹಾಲಿಂಗದ ಮಹಾಪ್ರಕಾಶದಲ್ಲಿ ಇವುಗಳ ಪ್ರಕಾಶವೆಲ್ಲ ಅಡಗಿಹೋಗುತ್ತದೆಂದು ಭಾವವು. ॥೩೮॥ ಚರಾಚರಾತ್ಮಕವಾದ ಜಗತ್ತು ಯಾವ ಕಾರಣದಿಂದ ಈ ಲಿಂಗದಿಂದಲೇ ಹುಟ್ಟುವುದೋ, ಯಾವ ಕಾರಣದಿಂದ ಈ ಲಿಂಗರೂಪತ್ವವನ್ನೇ ಹೊಂದುವುದೋ, ಯಾವ ಕಾರಣದಿಂದ ಈ ಲಿಂಗದಲ್ಲಿಯೇ ಅಡಗುವುದೋ, ಆ ಕಾರಣದಿಂದ ಈ ಲಿಂಗಕ್ಕಿಂತಲೂ ಶ್ರೇಷ್ಠವಾದ ತತ್ತ್ವವು ಯಾವುದೂ ಇರುವುದಿಲ್ಲ. ॥೩೯॥ ಆದಕಾರಣ ಸಚ್ಚಿದಾನಂದಸ್ವರೂಪವಾದ ಪರಬ್ರಹ್ಮವೇ ನಿಜರೂಪವಾದ (ಸ್ವಸ್ವರೂಪವಾದ) ಲಿಂಗವೆಂದು ತಿಳಿದು ಧ್ಯಾನಮಾಡುವುದರಿಂದ "ಲಿಂಗವೇ ನಿಜ" ಎಂಬ ಅವಸ್ಥೆಯು ಪ್ರಾಪ್ತವಾಗುವುದು. ॥೪೦॥

೩೬ ಅಂಗಲಿಂಗಸ್ಥಲ

ಶಿವಜ್ಞಾನವುಳ್ಳ ಜೀವನು ಅಂಗನೆಂದೂ, ಶಿವಜ್ಞಾನವಿಶಿಷ್ಟಜೀವನಿಂದ ಸಾಕ್ಷಾತ್ಕರಣೀಯನಾದ ಶಿವನು ನಿತ್ಯವಾದ ಲಿಂಗವೆಂದೂ ಹೇಳಿಸಿಕೊಳ್ಳುವರು. ಆ ಅಂಗಲಿಂಗಗಳೆರಡೂ ಯಾವ ಪ್ರಾಣಲಿಂಗಿಯಲ್ಲಿರುತ್ತವೆಯೋ ಅವನು ಅಂಗಲಿಂಗಿಯೆಂದು ಹೇಳಿಸಿಕೊಳ್ಳುವನು. ॥೪೧॥ ಜೀವಾತ್ಮನಲ್ಲಿ ಶಿವಲಿಂಗವು ಸಾಮರಸ್ಯವನ್ನು ಹೊಂದುವಿಕೆ, ಶಿವಲಿಂಗದಲ್ಲಿ ಜೀವಾತ್ಮನು ಸಾಮರಸ್ಯವನ್ನು ಹೊಂದುವಿಕೆ, ಈ

ಜ್ಞಾತ್ವಾ ಯಃ ಸತತಂ ಲಿಂಗಂ ಸ್ವಾಂತಃಸ್ಥಂ ಜ್ಯೋತಿರಾತ್ಮಕಂ ।
ಪೂಜಯೇದ್ಭಾವಕುಸುಮೈಸ್ತಂ ವಿದ್ಯಾದಂಗಲಿಂಗಿನಂ ||೪೩||

ಜ್ಞಾಯತೇ ಲಿಂಗಮೇವೈಕಂ ಸರ್ವೈಃ ಶಾಸ್ತ್ರೈಃ ಸನಾತನೈಃ ।
ಬ್ರಹ್ಮೇತಿ ವಿಶ್ವಧಾಮೇತಿ ವಿಮುಕ್ತೇಃ ಪದಮಿತ್ಯಪಿ ||೪೪||

ಮುಕ್ತಿರೂಪಮಿದಂ ಲಿಂಗಮಿತಿ ಯಸ್ಯ ಮನಸ್ಸ್ಥಿತಿಃ ।
ಸ ಮುಕ್ತೋ ದೇಹಯೋಗೇಽಪಿ ಸ ಜ್ಞಾನೀ ಸ ಮಹಾಗುರುಃ ||೪೫||

ಅನಾದಿನಿಧನಂ ಲಿಂಗಂ ಕಾರಣಂ ಜಗತಾಮಿತಿ ।
ಯೇ ನ ಜಾನಂತಿ ತೇ ಮೂಢಾ ಮೋಕ್ಷಮಾರ್ಗಬಹಿಷ್ಕೃತಾಃ ||೪೬||

ಎರಡೂ ಬೀಜಾಂಕುರನ್ಯಾಯದಂತೆ ಯಾವನಲ್ಲಿರುವುವೋ ಅವನು ಅಂಗಲಿಂಗಿಯೆಂದು ಹೇಳಿಸಿಕೊಳ್ಳುವನು. ||೪೨|| ಯಾವನು ತನ್ನ ಹೃದಯಕಮಲದಲ್ಲಿರುವ ಜ್ಯೋತಿಃಸ್ವರೂಪವಾದ ಲಿಂಗವನ್ನು ತಿಳಿದು ಭಾವರೂಪಕುಸುಮಗಳಿಂದ ಯಾವಾಗಲೂ ಪೂಜಿಸುವನೋ, ಅವನನ್ನು ಅಂಗಲಿಂಗಿಯೆಂದು ತಿಳಿಯಬೇಕು. ||೪೩|| ಒಂದೇ ಲಿಂಗವೇ ಪರಬ್ರಹ್ಮವೆಂದೂ, ಜಗದಾಧಾರಭೂತವೆಂದೂ, ಮುಕ್ತಿಸ್ಥಾನವೆಂದೂ ಸನಾತನವಾದ ಸಮಸ್ತಶಾಸ್ತ್ರಗಳಿಂದ ಗೊತ್ತಾಗುತ್ತದೆ. ||೪೪|| ಈ ಲಿಂಗವು ಪರಮುಕ್ತಿಸ್ವರೂಪವೆಂದು ಯಾವ ಪ್ರಾಣಲಿಂಗಿಯ ಮನಸ್ಸು ದೃಢವಾಗಿರುವುದೋ, ಅವನು ಶರೀರಧಾರಣಮಾಡಿದ್ದರೂ ಮುಕ್ತನಾಗುವನು. ಅರ್ಥಾತ್ ಜೀವನ್ಮುಕ್ತನೆನಿಸುವನು. ಅಲ್ಲದೆ ಅವನು ಜ್ಞಾನಿಯೆಂದೂ, ಮಹಾಗುರುವೆಂದೂ ಹೇಳಿಸಿಕೊಳ್ಳುವನು. ||೪೫|| ಉತ್ಪತ್ತಿನಾಶರಹಿತವಾದ ಲಿಂಗವನ್ನು ಸಮಸ್ತಜಗತ್ತುಗಳಿಗೆ ಕಾರಣವನ್ನಾಗಿ ಯಾರು ತಿಳಿಯುವುದಿಲ್ಲವೋ, ಆ ಮೂಢರು ಮೋಕ್ಷಮಾರ್ಗಬಹಿಷ್ಕೃತರಾಗುವರು. "ಲೀನಂ ಪ್ರಪಂಚರೂಪಂ ಹಿ ಸರ್ವಮೇತಚ್ಚರಾಚರಂ । ಸರ್ಗಾದೌ ಗಮ್ಯತೇ ಭೂಯಸ್ತಸ್ಮಾಲ್ಲಿಂಗಮುದೀರಿತಂ ॥ ಲಿಂಗಂ ಶೈವಮಿದಂ ಸಾಕ್ಷಾಚ್ಛಿವಶಕ್ತ್ಯುಭಯಾತ್ಮಕಂ। ಧ್ಯಾತವ್ಯಮರ್ಚನೀಯಂ ಚ ಭುಕ್ತಿಮುಕ್ತಿಫಲೇಚ್ಛುನಾ ॥ ಅತೋ ಯಜೇತ್ಸದಾಲಿಂಗಂ ಸರ್ವಕಾರಣಕಾರಣಂ ॥" ಸಮಸ್ತಚರಾಚರ ಪ್ರಪಂಚವು ಯಾವ ವಸ್ತುವಿನಲ್ಲಿ ಲಯವನ್ನು ಹೊಂದುವುದೋ, ಯಾವ ವಸ್ತುವಿನಿಂದ ಉತ್ಪನ್ನವಾಗುವುದೋ ಅದೇ ಲಿಂಗವೆಂದೂ, ಈ ಲಿಂಗವು ಶಿವಶಕ್ತ್ಯಾತ್ಮಕವಾಗಿರುವುದೆಂದೂ, ಆದುದರಿಂದ ಭೋಗಮೋಕ್ಷಫಲಾಪೇಕ್ಷಿಗಳು ಸರ್ವಕಾರಣಕಾರಣವಾದ ಲಿಂಗವನ್ನು ಪೂಜಿಸಬೇಕೆಂದೂ ಸೂಕ್ಷ್ಮಾಗಮವು ಬೋಧಿಸುವುದರಿಂದ, ಇಂತಹ ಲಿಂಗದ ಸ್ವರೂಪವನ್ನು ತಿಳಿಯದಿದ್ದವರು ಮೂಢರಲ್ಲದೆ ಬೇರೆಯಲ್ಲ. ||೪೬||

ಯಃ ಪ್ರಾಣಲಿಂಗಾರ್ಚನಭಾವಪೂರ್ವೈ
ರ್ಧರ್ಮೈರುಪೇತಃ ಶಿವಭಾವಿತಾತ್ಮಾ ।
ಸ ಏವ ತುರ್ಯಃ ಪರಿಕೀರ್ತ್ಯತೇಽಸೌ
ಸಂವಿದ್ವಿಪಾಕಾಚ್ಛರಣಾಭಿಧಾನಃ ॥೪೭॥

ಇತಿ ಶ್ರೀ ಸಿದ್ಧಾಂತಶಿಖಾಮಣೌ ಪ್ರಾಣಲಿಂಗಿಸ್ಥಲೇ ಪ್ರಾಣಲಿಂಗಿ
ಸ್ಥಲಾದಿಪಂಚಸ್ಥಲಪ್ರಸಂಗೋ ನಾಮ

ದ್ವಾದಶಪರಿಚ್ಛೇದಃ ಪರಿಸಮಾಪ್ತಃ.

ಯಾವನು ಪ್ರಾಣಲಿಂಗಾರ್ಚನೆಯನ್ನು ಭಾವನಾಪ್ರಮುಖೋಪಚಾರಗಳಿಂದ ಕೂಡಿದವನಾಗಿ ಮಾಡುವನೋ, ಜೀವಾತ್ಮನನ್ನು ಲಿಂಗಸ್ವರೂಪದಿಂದ ಭಾವಿಸುವವನಾಗಿರುವನೋ, ಆ ನಾಲ್ಕನೆಯ ಸ್ಥಲದವನಾದ ಪ್ರಾಣಲಿಂಗಿಯು ಶಿವಜ್ಞಾನಪರಿಪಾಕದಿಂದ "ಶರಣ" ನೆಂದು ಹೇಳಿಸಿಕೊಳ್ಳುವನು. ॥೪೭॥

ಇಂತು ಶ್ರೀ ಸಿದ್ಧಾಂತಶಿಖಾಮಣಿಯ ಪ್ರಾಣಲಿಂಗಿಸ್ಥಲದಲ್ಲಿ ಪ್ರಾಣಲಿಂಗಿ
ಸ್ಥಲಾದಿಪಂಚಸ್ಥಲವಿಚಾರಾತ್ಮಕವಾದ

ಹನ್ನೆರಡನೆಯ ಪರಿಚ್ಛೇದವು ಪರಿಸಮಾಪ್ತವಾದುದು.

ಶ್ರೀಜಗದ್ಗುರುರೇಣುಕಾಚಾರ್ಯಃ ಪ್ರಸೀದತು.

ತ್ರಯೋದಶಪರಿಚ್ಛೇದಃ

ಶರಣಸ್ಥಲಂ

॥ ಅಗಸ್ತ್ಯ ಉವಾಚ ॥

ಮಾಹೇಶ್ವರಃ ಪ್ರಸಾದೀತಿ ಪ್ರಾಣಲಿಂಗೀತಿ ಬೋಧಿತಃ ।
ಕಥಮೇಷ ಸಮಾದಿಷ್ಟಃ ಪುನಃ ಶರಣಸಂಜ್ಞಕಃ ॥೧॥

॥ ಶ್ರೀರೇಣುಕ ಉವಾಚ ॥

ಅಂಗಲಿಂಗೀ ಜ್ಞಾನರೂಪಃ ಸತೀಜ್ಞೇಯಃ ಶಿವಃ ಪತಿಃ ।
ಯತ್ಸೌಖ್ಯಂ ತತ್ಸಮಾವೇಶೇ ತದ್ವಾನ್ ಶರಣನಾಮವಾನ್ ॥೨॥

ಹದಿಮೂರನೆಯ ಪರಿಚ್ಛೇದವು.

ಶರಣಸ್ಥಲ

ವ್ಯಾಖ್ಯಾನ—ಎಲೈ, ಗಣಪುಂಗವನೇ! ಮಾಹೇಶ್ವರನೇ ಪ್ರಸಾದಿಯಾಗುವನೆಂದೂ, ಪ್ರಸಾದಿಯೇ ಪ್ರಾಣಲಿಂಗಿಯಾಗುವನೆಂದೂ ಬೋಧಿಸಿದೆ; ಆದರೆ ಈ ಪ್ರಾಣಲಿಂಗಿಯು ಶರಣನು ಹೇಗೆ ಆಗುವನು? ಎನ್ನುವುದನ್ನು ಬೋಧಿಸಬೇಕೆಂದು ಅಗಸ್ತ್ಯಮಹರ್ಷಿಯು ಪ್ರಾರ್ಥಿಸಲು, ಅದಕ್ಕೆ ಶ್ರೀರೇಣುಕಾಚಾರ್ಯರು—ಶಿವಜ್ಞಾನಸ್ವರೂಪನೂ ಲಿಂಗಾಂಗಸಾಮರಸ್ಯವುಳ್ಳವನೂ ಆದ ಪ್ರಾಣಲಿಂಗಿಯು ತಾನು ಸತಿಯೆಂದೂ, ಶಿವನು ಪತಿಯೆಂದೂ ತಿಳಿಯಬೇಕು. ಸ್ತ್ರೀಪುರುಷರ ಸಂಬಂಧದಲ್ಲಿ ಯಾವ ಸೌಖ್ಯವು ಉತ್ಪನ್ನವಾಗುವುದೋ, ಅಂಗಲಿಂಗರೂಪಸತೀಪತಿಭಾವದಿಂದುತ್ಪನ್ನವಾದ ಅಂತಹ ಸೌಖ್ಯವುಳ್ಳವನೇ ಶರಣನೆನಿಸುವನು. "ಯಥಾ ಸ್ತ್ರಿಯಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನ ವೇದ ನಾಂತರಂ । ಏವಮೇವಾಯಂ ಪುರುಷಃ ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನ ವೇದ ನಾಂತರಂ ॥" ಎಂಬೀಮಂತ್ರದಿಂದ ಬೃಹದಾರಣ್ಯಕಶ್ರುತಿಯು ಇದೇ ಅಭಿಪ್ರಾಯವನ್ನು ಬೋಧಿಸುತ್ತದೆ. ॥೧-೨॥

ಸ್ಥಲಮೇತತ್ಸಮಾಖ್ಯಾತಂ ಚತುರ್ಧಾ ಧರ್ಮಭೇದತಃ ।
ಆದೌ ಶರಣಮಾಖ್ಯಾತಂ ತತಸ್ತಾಮಸವರ್ಜನಂ ॥೩॥

ನಿರ್ದೇಶಶ್ಚ ತತಃ ಪ್ರೋಕ್ತಃ ಶೀಲಸಂಪಾದನಂ ತತಃ ।
ಕ್ರಮಾಲ್ಲಕ್ಷಣಮೇತೇಷಾಂ ಕಥಯಾಮಿ ನಿಶಮ್ಯತಾಂ ॥೪॥

೩೭ ಶರಣಸ್ಥಲಂ

ಸತೀವ ರಮಣೇ ಯಸ್ತು ಶಿವೇ ಶಕ್ತಿಂ ವಿಭಾವಯನ್ ।
ತದನ್ಯವಿಮುಖಃ ಸೋಽಯಂ ಜ್ಞಾತಃ ಶರಣಸಾಮವಾನ್ ॥೫॥

ಪರಿಜ್ಞಾತೇ ಶಿವೇ ಸಾಕ್ಷಾತ್ ಕೋ ವಾಽನ್ಯಮಭಿಕಾಂಕ್ಷತಿ ।
ನಿಧಾನೇ ಮಹತಿ ಪ್ರಾಪ್ತೇ ಕಃ ಕಾಚಂ ಯಾಚತೇಽನ್ಯತಃ ॥೬॥

ಶಿವಾನಂದಂ ಸಮಾಸಾದ್ಯ ಕೋ ವಾಽನ್ಯಮುಪತಿಷ್ಠತೇ ।
ಗಂಗಾಮೃತಂ ಪರಿತ್ಯಜ್ಯ ಕಃ ಕಾಂಕ್ಷೇನ್ಮೃಗತೃಷ್ಣಿಕಾಂ ॥೭॥

ಈ ಶರಣಸ್ಥಲವು ಧರ್ಮಭೇದದಿಂದ-ಶರಣಸ್ಥಲ-ತಾಮಸನಿರಸನಸ್ಥಲ-ನಿರ್ದೇಶಸ್ಥಲ-ಶೀಲಸಂಪಾದನಸ್ಥಲವೆಂದು ನಾಲ್ಕುಬಗೆಯಾಗಿರುವುದು. ಇವುಗಳ ಲಕ್ಷಣವು ಕ್ರಮವಾಗಿ ಹೇಳಲ್ಪಡುವುದು, ಕೇಳು ; ಎಂದು ಅಪ್ಪಣೆಕೊಡಿಸಿದರು ॥೩-೪॥

೩೭ ಶರಣಸ್ಥಲ

ಪತಿವ್ರತಾಸ್ತ್ರೀಯಳು ತನ್ನ ಪತಿಯ ಹೊರತು ಪರಪುರುಷರ ವಿಷಯದಲ್ಲಿ ಹೇಗೆ ವಿಮುಖಳಾಗಿರುವಳೋ, ಹಾಗೆಯೇ ಯಾವನು ತನ್ನನ್ನು ಶಿವನ ವಿಷಯದಲ್ಲಿ ಸತಿಯನ್ನಾಗಿ ಭಾವಿಸುವವನಾಗಿ ಅನ್ಯದೇವತೆಗಳ ವಿಷಯದಲ್ಲಿ ವಿಮುಖನಾಗುವನೋ ಅವನೇ ಶರಣನೆಂದು ತಿಳಿಯಬೇಕು. ॥೫॥ ವಿಶೇಷವಾದ ದ್ರವ್ಯನಿಧಿಯು ಪ್ರಾಪ್ತವಾಗಲು ಎರಡನೆಯವನಿಂದ, ಕಾಜನ್ನು ಯಾವನು ಬೇಡುವನು? ಇದರಂತೆ ಶಿವನನ್ನು ಸಾಕ್ಷಾತ್ತಾಗಿ ತಿಳಿದಮೇಲೆ, ಅನ್ಯದೇವತೆಯನ್ನು ಯಾವನು ಇಚ್ಛಿಸುವನು? ಯಾವನೂ ಇಚ್ಛಿಸುವುದಿಲ್ಲವೆಂದು ಭಾವವು. ॥೬॥ ಗಂಗಾಮೃತವನ್ನು ಬಿಟ್ಟು, ಮರೀಚಿಕಾಜಲವನ್ನು ಯಾವನು ಇಚ್ಛಿಸುವನು? ಇದರಂತೆ ಶಿವಸುಖವನ್ನು ಹೊಂದಿ, ಅನ್ಯದೇವತೆಯನ್ನು ಯಾವನು ಆಶ್ರಯಿಸುವನು? ಯಾವನೂ ಆಶ್ರಯಿಸುವುದಿಲ್ಲವೆಂದು ಭಾವವು. ॥೭॥

ಸಂಸಾರತಿಮಿರಚ್ಛೇದೇ ವಿನಾ ಶಂಕರಭಾಸ್ಕರಂ ।
ಪ್ರಭವಂತಿ ಕಥಂ ದೇವಾಃ ಖದ್ಯೋತಾ ಇವ ದೇಹಿನಾಂ ॥೮॥

ಸಂಸಾರಾರ್ತಃ ಶಿವಂ ಯಾಯಾದ್ಬ್ರಹ್ಮಾದ್ಯೈಃ ಕಿಂ ಫಲಂ ಸುರೈಃ ।
ಚಕೋರಸ್ತೃಷಿತಃ ಪಶ್ಯೇಚ್ಚಂದ್ರಂ ಕಿಂ ತಾರಕಾ ಅಪಿ ॥೯॥

ಶಿವ ಏವ ಸಮಸ್ತಾನಾಂ ಶರಣ್ಯಃ ಶರಣಾರ್ಥಿನಾಂ ।
ಸಂಸಾರೋರಗದಷ್ಟಾನಾಂ ಸರ್ವಜ್ಞಃ ಸರ್ವದೋಷಹಾ ॥೧೦॥

ಶಿವಜ್ಞಾನೇ ಸಮುತ್ಪನ್ನೇ ಪರಾನಂದಃ ಪ್ರಕಾಶತೇ ।
ತದಾಸಕ್ತಮನಾ ಯೋಗೀ ನಾನ್ಯತ್ರ ರಮತೇ ಸುಧೀಃ ॥೧೧॥

ತಸ್ಮಾತ್ಸರ್ವಪ್ರಯತ್ನೇನ ಶಂಕರಂ ಶರಣಂ ಗತಃ ।
ತದನಂತಸುಖಂ ಪ್ರಾಪ್ಯ ಮೋದತೇ ನಾನ್ಯಚಿಂತಯಾ ॥೧೨॥

ಘೋರಸಂಸಾರವೆಂಬ ಗಾಢಾಂಧಕಾರವನ್ನು ನಾಶಮಾಡುವುದರಲ್ಲಿ ಶಿವನೆಂಬ ಸೂರ್ಯನನ್ನು ಬಿಟ್ಟು, ಶಿವೇತರದೇವತೆಗಳೆಂಬ ಖದ್ಯೋತ (ಮಿಣುಕುಹುಳು) ಗಳು ಹೇಗೆ ಸಮರ್ಥವಾದಾವು ? ಶಿವೇತರದೇವತೆಗಳಿಗೆ ಸಾಂಸಾರಿಕದುಃಖವನ್ನು ನಾಶ ಮಾಡುವ ಶಕ್ತಿಯಿರುವುದಿಲ್ಲವೆಂದು ಭಾವವು. ॥೮॥ ನೀರಡಿಸಿದ ಚಕೋರಪಕ್ಷಿಯು ಚಂದ್ರನನ್ನು ನೋಡುವುದಲ್ಲದೆ, ನಕ್ಷತ್ರಗಳನ್ನೇನಾದರೂ ನೋಡುವುದೇ ? ನೋಡುವು ದಿಲ್ಲವೆಂದು ಭಾವವು. ಅದರಂತೆ ಸಂಸಾರದಿಂದ ಬಳಲಿದವನು ಶಿವನನ್ನಾಶ್ರಯಿಸಬೇಕು. ಬ್ರಹ್ಮಾದಿದೇವತೆಗಳಿಂದ ಏನು ಪ್ರಯೋಜನವು ? ॥೯॥ ಸಂಸಾರವೆಂಬ ಸರ್ಪದಿಂದ ಕಚ್ಚಲ್ಪಟ್ಟ ಸಮಸ್ತಶರಣಾಗತರಿಗೆ ಸರ್ವದೋಷನಾಶಕನೂ, ಸರ್ವಜ್ಞನೂ ಆದ ಶಿವನೇ ರಕ್ಷಕನಾಗಿದ್ದಾನೆ. ॥೧೦॥ ಶಿವಜ್ಞಾನವು ಉತ್ಪನ್ನವಾಗಲಾಗಿ ಪರಮಾನಂದವು ಪ್ರಕಾಶಿಸುತ್ತದೆ. ಆ ಪರಮಾನಂದಾಸಕ್ತಚಿತ್ತವುಳ್ಳ ಶಿವಯೋಗಿಯು ಶಿವೇತರ ದೇವತೆಗಳಲ್ಲಿ ಪ್ರೀತಿಯನ್ನಿಡುವುದಿಲ್ಲ. ॥೧೧॥ ಆದಕಾರಣ ಸರ್ವಪ್ರಯತ್ನದಿಂದಲೂ ಶಿವನನ್ನು ಮರೆಹೊಕ್ಕವನು, ಆ ಶಿವನಿಂದ ಅನಂತಸುಖವನ್ನು ಹೊಂದಿ ಪರಮಾನಂದವಿಶಿಷ್ಟನಾಗುತ್ತಾನೆ. ಶಿವೇತರದೇವತಾಚಿಂತನದಿಂದ ಆನಂದವಿಶಿಷ್ಟ ನಾಗುವುದಿಲ್ಲ. ಆದುದರಿಂದ ಮೋಕ್ಷಸುಖವನ್ನು ಪಡೆಯಲಿಚ್ಛೆಯುಳ್ಳವನು ಶಿವೇತರ ದೇವತೆಗಳ ಧ್ಯಾನವನ್ನು ಯಾವ ಕಾಲದಲ್ಲಿಯೂ ಮಾಡದೆ, ಸದಾ ಶಿವಧ್ಯಾನವನ್ನೇ ಮಾಡುತ್ತ, ನಿರತಿಶಯವಾದ ಶಿವಾನಂದವನ್ನು ಪಡೆಯಬೇಕೆನ್ನುವುದೇ ಭಗವತ್ಪಾದರ ಅಭಿಪ್ರಾಯವು. ॥೧೨॥

೩೮ ತಾಮಸನಿರಸನಸ್ಥಲಂ

ಶಿವಭಕ್ತಿಪರಾನಂದಮೋದಿನಾ ಗುರುಣಾ ಯತಃ ।
ನಿರಸ್ಯಂತೇ ತಮೋಭಾವಾಃ ಸ ತಾಮಸನಿರಾಸಕಃ ॥೧೩॥

ಯಸ್ಯ ಜ್ಞಾನಂ ತಮೋಮಿಶ್ರಂ ನ ತಸ್ಯ ಗತಿರಿಷ್ಯತೇ ।
ಸತ್ತ್ವಂ ಹಿ ಜ್ಞಾನಯೋಗಸ್ಯ ನೈರ್ಮಲ್ಯಂ ವಿದುರುತ್ತಮಾಃ ॥೧೪॥

ಶಮೋ ದಮೋ ವಿವೇಕಶ್ಚ ವೈರಾಗ್ಯಂ ಪೂರ್ಣಭಾವನಾ ।
ಕ್ಷಾಂತಿಃ ಕಾರುಣ್ಯಸಂಪತ್ತಿಃ ಶ್ರದ್ಧಾ ಸತ್ಯಸಮುದ್ಭವಾ ॥೧೫॥

ಶಿವಭಕ್ತಿಃ ಪರೋ ಧರ್ಮಃ ಶಿವಜ್ಞಾನಸ್ಯ ಬಾಂಧವಾಃ ।
ಏತೈರ್ಯುಕ್ತೋ ಮಹಾಯೋಗೀ ಸಾತ್ತ್ವಿಕಃ ಪರಿಕೀರ್ತಿತಃ ॥೧೬॥

ಕಾಮಕ್ರೋಧಮಹಾಮೋಹಮದಮತ್ಸರವಾರಣಾಃ ।
ಶಿವಜ್ಞಾನಮೃಗೇಂದ್ರಸ್ಯ ಕಥಂ ತಿಷ್ಠಂತಿ ಸನ್ನಿಧೌ ॥೧೭॥

---

೩೮ ತಾಮಸನಿರಸನಸ್ಥಲ

ಶಿವಭಕ್ತಿಯೆಂಬ ಪರಮಾನಂದದಿಂದ ಸಂತೋಷಪಡುತ್ತಿರುವ ಶ್ರೇಷ್ಠನಾದ ಶರಣನಿಂದ, ಯಾವ ಕಾರಣದಿಂದ ತಾಮಸಗುಣಗಳು ನಿರಾಕರಿಸಲ್ಪಡುವುವೋ, ಆ ಕಾರಣದಿಂದ ಅವನು ತಾಮಸನಿರಾಸಕನೆಂದು ಹೇಳಿಸಿಕೊಳ್ಳುವನು. ॥೧೩॥ ಯಾವನ ಜ್ಞಾನವು ತಮೋಗುಣದಿಂದ ಮಿಶ್ರವಾಗಿರುವುದೋ, ಅವನಿಗೆ ಸದ್ಗತಿಯು ಪ್ರಾಪ್ತವಾಗುವುದಿಲ್ಲ. ಜ್ಞಾನಯೋಗಕ್ಕೆ ನಿರ್ಮಲವಾದ ಸತ್ತ್ವಗುಣವೇ ಸಾಧನ ವೆಂದು ಜ್ಞಾನಿಗಳು ತಿಳಿಯುತ್ತಾರೆ. ॥೧೪॥ ಶಾಂತಿ, (ಅಂತರಿಂದ್ರಿಯನಿಗ್ರಹ) ದಾಂತಿ, (ಬಹಿರಿಂದ್ರಿಯನಿಗ್ರಹ) ವಿವೇಕ, (ನಿತ್ಯಾನಿತ್ಯವಸ್ತುವಿಚಾರ) ವೈರಾಗ್ಯ, (ವಿಷಯವಿರಕ್ತಿ) ಅಖಂಡಜ್ಞಾನ, ಕ್ಷಮೆ, ಭೂತದಯೆ, ಸತ್ಯವಸ್ತುಸಂಭವವಾದ ವಿಶ್ವಾಸ, ಶಿವಭಕ್ತಿ, ಶ್ರೇಷ್ಠವಾದ ಶಿವಧರ್ಮ, ಇವುಗಳು ಶಿವಜ್ಞಾನಕ್ಕೆ ಬಂಧುಗಳಂತಿ ರುತ್ತವೆ. ಇವುಗಳಿಂದ ಕೂಡಿದ ಶಿವಯೋಗಿಯು "ಸಾತ್ತ್ವಿಕ" ನೆಂದು ಹೇಳಿಸಿ ಕೊಳ್ಳುವನು. ॥೧೫-೧೬॥ ಕಾಮ, ಕ್ರೋಧ, ಮೋಹ, ಮದ, ಮತ್ಸರಗಳೆಂಬ ಆನೆಗಳು ಶಿವಜ್ಞಾನವೆಂಬ ಸಿಂಹದ ಸಮೀಪದಲ್ಲಿ ಹೇಗೆ ನಿಲ್ಲಬಲ್ಲವು? ನಿಲ್ಲಲು ಎಂದೂ ಸಮರ್ಥವಾಗುವುದಿಲ್ಲವೆಂದು ಭಾವವು. ॥೧೭॥

ಯತ್ರ ಕುತ್ರಾಪಿ ಯೋ ದ್ವೇಷ್ಟಿ ಪ್ರಪಂಚೇ ಶಿವರೂಪಿಣಿ ।
ಶಿವದ್ವೇಷೀ ಸ ವಿಜ್ಞೇಯೋ ರಜಸಾಽವಿಷ್ಟಮಾನಸಃ ॥೧೮॥

ಯೋ ದ್ವೇಷ್ಟಿ ಸಕಲಾನ್ ಲೋಕಾನ್ ಯೋ ನಾಽಹಂಕುರುತೇ ಸದಾ ।
ಯೋಽಸತ್ಯಭಾವನಾಯುಕ್ತಃ ಸ ತಾಮಸ ಇತಿ ಸ್ಮೃತಃ ॥೧೯॥

ತಮೋಮೂಲಾ ಹಿ ಸಂಜಾತಾ ರಾಗದ್ವೇಷಾದಿಪಾದಪಾಃ ।
ಶಿವಜ್ಞಾನಕುಠಾರೇಣ ಛಿದ್ಯಂತೇ ಹಿ ನಿರಂತರಂ ॥೨೦॥

ಶಿವಜ್ಞಾನೇ ಸಮುತ್ಪನ್ನೇ ಸಹಸ್ರಾದಿತ್ಯಸನ್ನಿಭೇ ।
ಕುತಸ್ತಮೋವಿಕಾರಾಃ ಸ್ಯುರ್ಮಹತಾಂ ಶಿವಯೋಗಿನಾಂ ॥೨೧॥

೩೯ ನಿರ್ದೇಶಸ್ಥಲಂ

ನಿರಾಕೃತ್ಯ ತಮೋಭಾಗಂ ಸಂಸಾರಸ್ಯ ಪ್ರವರ್ತಕಂ ।
ನಿರ್ದಿಶ್ಯತೇ ತು ಯಜ್ಜ್ಞಾನಂ ಸ ನಿರ್ದೇಶ ಇತಿ ಸ್ಮೃತಃ ॥೨೨॥

ಗುರುರೇವ ಪರಂ ತತ್ತ್ವಂ ಪ್ರಕಾಶಯತಿ ದೇಹಿನಾಂ ।
ಕೋ ವಾ ಸೂರ್ಯಂ ವಿನಾ ಲೋಕೇ ತಮಸೋ ವಿನಿವರ್ತಕಃ ॥೨೩॥

ಯಾವನಾದರೊಬ್ಬನು ಶಿವಸ್ವರೂಪವಾದ ಜಗತ್ತಿನಲ್ಲಿ ಎಲ್ಲಿಯಾದರೂ ದ್ವೇಷಿಸಿದನಾದರೆ, ಆ ಶಿವದ್ವೇಷಿಯು "ರಾಜಸ"ನೆಂದು ಹೇಳಿಸಿಕೊಳ್ಳುವನು. ॥೧೮॥ ಯಾವನು ಸಮಸ್ತಪ್ರಾಣಿಗಳನ್ನು ದ್ವೇಷಿಸುತ್ತಾನೆಯೋ, ಯಾವನು ಅಸತ್ಯಭಾವನೆಯಿಂದ ಯುಕ್ತನಾಗಿರುವನೋ ಅವನು "ತಾಮಸ"ನೆಂದು ಹೇಳಿಸಿಕೊಳ್ಳುವನು. ॥೧೯॥ ರಾಗದ್ವೇಷಾದಿಗಳೆಂಬ ವೃಕ್ಷಗಳು ತಮೋಗುಣವೆಂಬ ಬೇರುಗಳುಳ್ಳವುಗಳಾಗಿ ಉತ್ಪನ್ನನಾಗಿರುತ್ತವೆ. ಈ ವೃಕ್ಷಗಳು ಯಾವಾಗಲೂ ಶಿವಜ್ಞಾನವೆಂಬ ಕೊಡಲಿಯಿಂದ ಕತ್ತರಿಸಲ್ಪಡುತ್ತವೆ. ॥೨೦॥ ಸಹಸ್ರಸೂರ್ಯರಿಗೆ ಸಮಾನವಾದ ಶಿವಜ್ಞಾನವು ಉತ್ಪನ್ನನಾಗಲಾಗಿ, ಮಹಾಶಿವಯೋಗಿಗಳಿಗೆ ತಮೋವಿಕಾರಗಳು ಎಲ್ಲಿಂದ ಬರುವುವು ? ॥೨೧॥

೩೯ ನಿರ್ದೇಶಸ್ಥಲ

ಸಂಸಾರಪ್ರವೃತ್ತಿಗೆ ಮೂಲಕಾರಣವಾದ ತಮೋಭಾಗವನ್ನು ನಿರಾಕರಿಸಿ ಯಾವ ಜ್ಞಾನವು ಗುರುವಿನಿಂದ ಉಪದೇಶಿಸಲ್ಪಡುವುದೋ, ಆ ಜ್ಞಾನವು ನಿರ್ದೇಶ (ನಿರ್ದೇಶಸ್ಥಲ) ವೆಂದು ಹೇಳಿಸಿಕೊಳ್ಳುವುದು. ॥೨೨॥ ಶ್ರೀಗುರುವೇ ಮಾನವರಲ್ಲಿ ಶ್ರೇಷ್ಠವಾದ ಶಿವತತ್ತ್ವವನ್ನು ಪ್ರಕಾಶಗೊಳಿಸುತ್ತಾನೆ. ಈ ಲೋಕದಲ್ಲಿ ಸೂರ್ಯನನ್ನು ಬಿಟ್ಟು ಕತ್ತಲೆಯನ್ನು ನಾಶಮಾಡಲಿಕ್ಕೆ ಯಾವನು ಸಮರ್ಥನಾಗುವನು ?

ಅಂತರೇಣ ಗುರುಂ ಸಿದ್ಧಂ ಕಥಂ ಸಂಸಾರನಿಷ್ಕೃತಿಃ ।
ನಿದಾನಜ್ಞಂ ವಿನಾ ವೈದ್ಯಂ ಕೋ ವಾ ರೋಗೋ ನಿವರ್ತತೇ ॥೨೪॥

ಅಜ್ಞಾನಮಲಿನಂ ಚಿತ್ತದರ್ಪಣಂ ಯೋ ವಿಶೋಧಯೇತ್ ।
ಪ್ರಜ್ಞಾವಿಭೂತಿಯೋಗೇನ ತಮಾಹುರ್ಗುರುಸತ್ತಮಂ ॥೨೫॥

ಅಪರೋಕ್ಷಿತತತ್ತ್ವಸ್ಯ ಜೀವನ್ಮುಕ್ತಸ್ವಭಾವಿನಃ ।
ಗುರೋಃ ಕಟಾಕ್ಷೇ ಸಂಸಿದ್ಧೇ ಕೋ ವಾ ಲೋಕೇಷು ದುರ್ಲಭಃ ॥೨೬॥

ಕೈವಲ್ಯಕಲ್ಪತರವೋ ಗುರವಃ ಕರುಣಾಲಯಾಃ ।
ದುರ್ಲಭಾ ಹಿ ಜಗತ್ಯಸ್ಮಿನ್ ಶಿವಾದ್ವೈತಪರಾಯಣಾಃ ॥೨೭॥

ಕ್ಷೀರಾಬ್ಧಿರಿವ ಸಿಂಧೂನಾಂ ಸುಮೇರುರಿವ ಭೂಭೃತಾಂ ।
ಗ್ರಹಾಣಾಮಿವ ತಿಗ್ಮಾಂಶುರ್ಮಣೀನಾಮಿವ ಕೌಸ್ತುಭಃ ॥೨೮॥

ದ್ರುಮಾಣಾಮಿವ ಭದ್ರಶ್ರೀರ್ದೇವಾನಾಮಿವ ಶಂಕರಃ ।
ಗುರುಃ ಶಿವಃ ಪರಃ ಶ್ಲಾಘ್ಯೋ ಗುರೂಣಾಂ ಪ್ರಾಕೃತಾತ್ಮನಾಂ ॥೨೯॥

ಆದರಂತೆ ಶ್ರೀಗುರುವನ್ನು ಬಿಟ್ಟು ಯಾರೂ ಅಜ್ಞಾನಾಂಧಕಾರವನ್ನು ನಾಶಮಾಡಲು ಸಮರ್ಥರಾಗುವುದಿಲ್ಲವೆಂದು ಭಾವವು. ॥೨೩॥ ಜ್ಞಾನಸಿದ್ಧನಾದ ಗುರುವನ್ನು ಬಿಟ್ಟು ಸಂಸಾರನಿವೃತ್ತಿಯು ಹೇಗೆ ಆಗುವುದು? ರೋಗದ ಮೂಲವನ್ನು ಬಲ್ಲ ವೈದ್ಯನನ್ನು ಬಿಟ್ಟು ಎಂದಾದರೂ ರೋಗವು ನಿವೃತ್ತಿಯಾಗಬಲ್ಲುದೇ? ವೈದ್ಯನನ್ನು ಬಿಟ್ಟರೆ ರೋಗವು ನಿವೃತ್ತಿಯಾಗದಂತೆ, ಜ್ಞಾನಸಿದ್ಧನಾದ ಗುರುವನ್ನು ಬಿಟ್ಟರೆ ಸಂಸಾರನಿವೃತ್ತಿ ಯಾಗುವುದಿಲ್ಲವೆಂಮ ಭಾವವು. ॥೨೪॥ ಅಜ್ಞಾನವೆಂಬ ಹೊಲಸುಳ್ಳ ಮನಸ್ಸೆಂಬ ಕನ್ನಡಿಯನ್ನುಜ್ಞಾನವೆಂಬ ಬೂದಿಯಸಂಬಂಧದಿಂದ ಯಾವನು ಸ್ವಚ್ಛಮಾಡುವನೋ, ಅವನನ್ನೇ ಜ್ಞಾನಿಗಳು ಗುರುಶ್ರೇಷ್ಠನನ್ನಾಗಿ ಹೇಳುತ್ತಾರೆ. ॥೨೫॥ ಸ್ವಸ್ವರೂಪಜ್ಞಾನ ದಿಂದ ಸಾಕ್ಷಾತ್ಕೃತಶಿವಸ್ವರೂಪವುಳ್ಳವನೂ, ಜೀವನ್ಮುಕ್ತಸ್ವಭಾವವುಳ್ಳವನೂ ಆದ ಗುರುವಿನ ಕೃಪಾಕಟಾಕ್ಷವು ಬಿದ್ದುದಾದರೆ, ಈ ಲೋಕಗಳಲ್ಲಿ ಯಾವ ಪುರುಷಾರ್ಥವು ತಾನೇ ದುರ್ಲಭವಾಗುವುದು? ಎಲ್ಲವೂ ಸಾಧ್ಯವಾಗುವುದೆಂದು ಭಾವವು. ॥೨೬॥ ಮೋಕ್ಷಕ್ಕೆ ಕಲ್ಪವೃಕ್ಷಸದೃಶರೂ, ದಯಾಶೀಲರೂ, ಶಿವಾದ್ವೈತಭಾವನಾಸಕ್ತರೂ ಆದ ಗುರುಗಳು ಈ ಲೋಕದಲ್ಲಿ ದುರ್ಲಭರಾಗಿದ್ದಾರೆ. ॥೨೭॥ ಸಮುದ್ರಗಳಲ್ಲಿ ಕ್ಷೀರಸಮುದ್ರವೂ, ಪರ್ವತಗಳಲ್ಲಿ ಮೇರುಪರ್ವತವೂ, ಗ್ರಹಗಳಲ್ಲಿ ಚಂದ್ರನೂ, ಮಣಿಗಳಲ್ಲಿ ಕೌಸ್ತುಭಮಣಿಯೂ, ವೃಕ್ಷಗಳಲ್ಲಿ ಶ್ರೀಗಂಧವೃಕ್ಷವೂ, ದೇವತೆಗಳಲ್ಲಿ ಶಿವನೂ ಶ್ರೇಷ್ಠವಾಗಿರುವಂತೆ, ಪ್ರಾಕೃತಾತ್ಮರಾದ ಗುರುಗಳಲ್ಲಿ ಸಾಕ್ಷಾತ್ ಶಿವ ಸ್ವರೂಪನಾದ ಗುರುವು ಶ್ರೇಷ್ಠನೂ ಶ್ಲಾಘ್ಯನೂ ಆಗಿದ್ದಾನೆ. ॥೨೮-೨೯॥

೪೦ ಶೀಲಸಂಪಾದನಸ್ಥಲಂ

ಜಿಜ್ಞಾಸಾ ಶಿವತತ್ತ್ವಸ್ಯ ಶೀಲಮಿತ್ಯುಚ್ಯತೇ ಬುಧೈಃ ।
ನಿರ್ದೇಶಯೋಗಾದಾರ್ಯಾಣಾಂ ತದ್ವಾನ್ ಶೀಲೀತಿ ಕಥ್ಯತೇ ॥೩೦॥

ಪ್ರಪನ್ನಾರ್ತಿಹರೇ ದೇವೇ ಪರಮಾತ್ಮನಿ ಶಂಕರೇ ।
ಭಾವಸ್ಯ ಸ್ಥಿರತಾಯೋಗಃ ಶೀಲಮಿತ್ಯುಚ್ಯತೇ ಬುಧೈಃ ॥೩೧॥

ಶೀಲಂ ಶಿವೈಕವಿಜ್ಞಾನಂ ಶಿವಧ್ಯಾನೈಕತಾನತಾ ।
ಶಿವಪ್ರಾಪ್ತಿಸಮುತ್ಕಂಠಾ ತದ್ಯೋಗೀ ಶೀಲವಾನ್ ಸ್ಮೃತಃ ॥೩೨॥

ಶಿವಾದನ್ಯತ್ರ ವಿಜ್ಞಾನೇ ವೈಮುಖ್ಯಂ ಯಸ್ಯ ಸುಸ್ಥಿರಂ ।
ತದಾಸಕ್ತಾಮನೋವೃತ್ತಿಸ್ತಮಾಹುಃ ಶೀಲಭಾಜನಂ ॥೩೩॥

ಪತಿವ್ರತಾಯಾ ಯಚ್ಛೀಲಂ ಪತಿರಾಗಾತ್ಪ್ರಶಸ್ಯತೇ ।
ತಥಾ ಶಿವಾನುರಾಗೇಣ ಸುಶೀಲೋ ಭಕ್ತ ಉಚ್ಯತೇ ॥೩೪॥

---

೪೦ ಶೀಲಸಂಪಾದನಸ್ಥಲ

ಆಚಾರ್ಯರಿಂದುಪದಿಷ್ಟವಾದ ನಿರ್ದೇಶಸ್ಥಲಸಂಬಂಧದಿಂದ ಪ್ರಾಪ್ತವಾಗುವ ಶಿವತತ್ತ್ವಜಿಜ್ಞಾಸೆಯು ಶೀಲವೆಂದು ಹೇಳಿಸಿಕೊಳ್ಳುವುದು. ಇಂತಹ ಶಿವತತ್ತ್ವ ಜಿಜ್ಞಾಸಾರೂಪಶೀಲವುಳ್ಳವನೇ ಶೀಲಿಯೆಂದು ಹೇಳಿಸಿಕೊಳ್ಳುವನು. ॥೩೦॥ ಶರಣಾಗತರಾದವರ ದುಃಖವನ್ನು ನಾಶಮಾಡತಕ್ಕವನೂ, ದೇವಾಧಿದೇವನೂ, ಪರಮಾತ್ಮನೂ ಆದ ಶಂಕರನಲ್ಲಿ ಚಿತ್ತಸ್ಥಿರೀಕರಣವೇ ಶೀಲವೆಂದು ಶಿವಶಾಸ್ತ್ರಜ್ಞರಿಂದ ಹೇಳಲ್ಪಡುವುದು. ॥೩೧॥ ಶಿವನೊಬ್ಬನಲ್ಲಿಯೇ ವಿಶೇಷಜ್ಞಾನವು, ಶಿವಧ್ಯಾನವೊಂದರಲ್ಲಿಯೇ ನಿಷ್ಠನಾಗಿ ಅನನ್ಯವೃತ್ತಿತ್ವವನ್ನು ಪಡೆದಿರುವಿಕೆಯು, ಶಿವಪ್ರಾಪ್ತಿಯಲ್ಲಿ ಅಪರಿಮಿತವಾದ ಉತ್ಕಂಠೆಯು ಶೀಲವೆನಿಸಿಕೊಳ್ಳುವುದು. ಈ ಮೂರರ ಸಂಬಂಧವುಳ್ಳವನು "ಶೀಲವಾನ್" ಎಂದೆನಿಕೊಳ್ಳುವನು. ॥೩೨॥ ಶಿವನನ್ನು ಬಿಟ್ಟು ಇತರ ದೇವತೆಗಳ ಜ್ಞಾನದಲ್ಲಿ ಯಾವನಿಗೆ ವಿಮುಖತೆಯು ದೃಢವಾಗಿರುವುದೋ, ಯಾವನ ಮನೋವ್ಯಾಪಾರವು ಶಿವನಲ್ಲಿ ಲೀನವಾಗಿರುವುದೋ, ಅವನನ್ನು ಜ್ಞಾನಿಗಳು ಶೀಲಭಾಜನನನ್ನಾಗಿ ಹೇಳುತ್ತಾರೆ. ॥೩೩॥ ಪತಿವ್ರತಾಸ್ತ್ರೀಯಳ ಪಾತಿವ್ರತ್ಯವು ಪತಿಯ ಪ್ರೇಮದಿಂದ ಹೇಗೆ ಪ್ರಶಸ್ತವಾಗುವುದೋ, ಹಾಗೆಯೇ ಶಿವನ ಪ್ರೇಮದಿಂದ ಶರಣನು ಸುಶೀಲನೆನಿಸುವನು. ॥೩೪॥ ಸ್ತ್ರೀಯರಿಗೆ ಪತಿಯನ್ನು ಬಿಟ್ಟು ಪರಪುರುಷನ ಸೇವೆಯು ಹೇಗೆ

ಪತಿಂ ವಿನಾ ಯಥಾ ಸ್ತ್ರೀಣಾಂ ಸೇವಾಽನ್ಯಸ್ಯ ತು ಗರ್ಹಣಾ ।
ಶಿವಂ ವಿನಾ ತಥಾಽನ್ಯೇಷಾಂ ಸೇವಾ ನಿಂದಾ ಕೃತಾತ್ಮನಾಂ ॥೩೫॥

ಬಹುನಾಽತ್ರ ಕಿಮುಕ್ತೇನ ಶಿವಜ್ಞಾನೈಕನಿಷ್ಠತಾ ।
ಶೀಲಮಿತ್ಯುಚ್ಯತೇ ಸದ್ಭಿಃ ಶೀಲವಾಂಸ್ತತ್ಪರೋ ಮತಃ ॥೩೬॥

ಶಿವಾತ್ಮಬೋಧೈಕರತಃ ಸ್ಥಿರಾಶಯಃ
ಶಿವಂ ಪ್ರಪನ್ನೋ ಜಗತಾಮಧೀಶ್ವರಂ ।
ಶಿವೈಕನಿಷ್ಠಾಹಿತಶೀಲಭೂಷಣಃ
ಶಿವೈಕ್ಯವಾನೇಷ ಹಿ ಕಥ್ಯತೇ ಬುಧೈಃ ॥೩೭॥

ಇತಿ ಶ್ರೀಸಿದ್ಧಾಂತಶಿಖಾಮಣೌ ಶರಣಸ್ಥಲೇ ಶರಣಸ್ಥಲಾದಿ ಚತುರ್ವಿಧಸ್ಥಲಪ್ರಸಂಗೋ ನಾಮ

ತ್ರಯೋದಶಪರಿಚ್ಛೇದಃ ಪರಿಸಮಾಪ್ತಃ.

ನಿಂದ್ಯವಾಗಿರುವುದೋ, ಹಾಗೆಯೇ ಧನ್ಯತ್ಮರಾದ ಶರಣರಿಗೆ ಶಿವನನ್ನು ಬಿಟ್ಟು ಅನ್ಯದೇವತೆಗಳ ಸೇವೆಯು ನಿಂದ್ಯವಾಗಿರುವುದು. ॥೩೫॥ ಬಹಳ ಹೇಳುವುದರಿಂದೇನು ಪ್ರಯೋಜನವು ? ಶಿವಜ್ಞಾನವೊಂದರಲ್ಲಿಯೇ ನಿಷ್ಠೆಯನ್ನಿಡುವುದು ಶೀಲವೆನಿಸುವುದು. ಇಂತಹ ಶೀಲದಲ್ಲಿ ನಿರತನಾದವನು ಶೀಲಿಯೆನಿಸಿಕೊಳ್ಳುವನು. ॥೩೬॥ ಲಿಂಗಾಂಗ ಜ್ಞಾನದಲ್ಲಿ ನಿರತನೂ, ಜಗದೀಶ್ವರನಾದ ಶಿವನನ್ನು ಮರೆಹೊಕ್ಕವನೂ, ಸತೀಪತಿ ಭಾವದಿಂದ ಯುಕ್ತವಾದ ಸ್ಥಿರಮನಸ್ಸುಳ್ಳವನೂ, ಶಿವನೊಬ್ಬನಲ್ಲಿಯೇ ಮುಖ್ಯವಾಗಿ ಇಡಲ್ಪಟ್ಟ ಶೀಲವೇ ಅಲಂಕಾರವಾಗುಳ್ಳವನೂ ಆದ ಈ ಶರಣನು ಶಿವೈಕ್ಯನೆಂದು ಹೇಳಿಸಿಕೊಳ್ಳುವನು. ॥೩೭॥

ಇಂತು ಶ್ರೀಸಿದ್ಧಾಂತಶಿಖಾಮಣಿಯ ಶರಣಸ್ಥಲದಲ್ಲಿ ಶರಣಸ್ಥಲಾದಿ ಚತುರ್ವಿಧಸ್ಥಲವಿಚಾರಾತ್ಮಕವಾದ

ಹದಿಮೂರನೆಯ ಪರಿಚ್ಛೇದವು ಪರಿಸಮಾಪ್ತವಾದುದು.

ಶ್ರೀಜಗದ್ಗುರುರೇಣುಕಾಚಾರ್ಯಃ ಪ್ರಸೀದತು.

ಚತುರ್ದಶಪರಿಚ್ಛೇದಃ

ಐಕ್ಯಸ್ಥಲಂ

|| ಅಗಸ್ತ್ಯ ಉವಾಚ ||

ತಾಮಸತ್ಯಾಗಸಂಬಂಧಾನ್ನಿರ್ದೇಶಾಚ್ಛೀಲತಸ್ತಥಾ |
ಶರಣಾಖ್ಯಸ್ಯ ಭೂಯೋಽಸ್ಯ ಕಥಮೈಕ್ಯನಿರೂಪಣಂ ? ||೧||

|| ರೇಣುಕ ಉವಾಚ ||

ಪ್ರಾಣಲಿಂಗಾದಿಯೋಗೇನ ಸುಖಾತಿಶಯಮೇಯಿವಾನ್ |
ಶರಣಾಖ್ಯಃ ಶಿವೇನೈಕ್ಯಭಾವನಾದೈಕ್ಯವಾನ್ ಭವೇತ್ ||೨||

ಐಕ್ಯಸ್ಥಲಮಿದಂ ಪ್ರೋಕ್ತಂ ಚತುರ್ಧಾ ಮುನಿಪುಂಗವ |
ಐಕ್ಯಮಾಚಾರಸಂಪತ್ತಿರೇಕಭಾಜನಮೇವ ಚ ||
ಸಹಭಾಜನಮಿತ್ಯೇಷಾಂ ಕ್ರಮಾಲ್ಲಕ್ಷಣಮುಚ್ಯತೇ ||೩||

ಹದಿನಾಲ್ಕನೆಯ ಪರಿಚ್ಛೇದವು

ಐಕ್ಯಸ್ಥಲ

ವ್ಯಾಖ್ಯಾನ—ತಮೋಭಾಗನಿರಾಕರಣದಿಂದಲೂ, ಜ್ಞಾನನಿರ್ದೇಶದಿಂದಲೂ, ಶೀಲಸಂಪಾದನದಿಂದಲೂ, ಇಷ್ಟುಮಾತ್ರದಿಂದಲೇ ಶರಣನಿಗೆ, ಭೇದಘಟಿತವಾದ ಅಂಗಲಿಂಗಗಳ ಐಕ್ಯನಿರೂಪಣವು ಹೇಗೆ ಸಂಭವಿಸುವುದು ? ಎಂದು ಅಗಸ್ತ್ಯ ಮಹರ್ಷಿಯು ಪ್ರಶ್ನಮಾಡಲು, ಅದಕ್ಕೆ ಶ್ರೀರೇಣುಕಾಚಾರ್ಯರು ಮುಂದೆ ಹೇಳುವ ರೀತಿಯಲ್ಲಿ ಉತ್ತರವನ್ನೀಯುವರು. ||೧|| ಅಂತರ್ಲಿಂಗಧ್ಯಾನಪೂಜಾದಿಯೋಗದಿಂದ ಸುಖಾತಿಶಯವನ್ನು ಹೊಂದಿದ ಶರಣನು ಶಿವನೊಡನೆ ಏಕತ್ವವನ್ನು ಭಾವಿಸುತ್ತಿರುವುದರಿಂದ, ಅವನು ಐಕ್ಯನೆನಿಸುವನು. ||೨|| ಈ ಐಕ್ಯಸ್ಥಲವು—ಐಕ್ಯಸ್ಥಲ, ಆಚಾರಸಂಪತ್ತಿಸ್ಥಲ, ಏಕಭಾಜನಸ್ಥಲ, ಸಹಭಾಜನಸ್ಥಲವೆಂದು ನಾಲ್ಕುಬಗೆಯಾಗಿದ್ದು, ಅನುಕ್ರಮವಾಗಿ ಇವುಗಳ ಲಕ್ಷಣವು ಹೇಳಲ್ಪಡುವುದು. ||೩||

೪೧ ಐಕ್ಯಸ್ಥಲಂ

ವಿಷಯಾನಂದಕಣಿಕಾನಿಃಸ್ಪೃಹೋ ನಿರ್ಮಲಾಶಯಃ ।
ಶಿವಾನಂದಮಹಾಸಿಂಧೌ ಮಜ್ಜನಾದೈಕ್ಯಮುಚ್ಯತೇ ॥೪॥

ನಿರ್ಧೂತಮಲಸಂಬಂಧೋ ನಿಷ್ಕಲಂಕಮನೋಗತಃ ।
ಶಿವೋಽಹಮಿತಿ ಭಾವೇನ ನಿರೂಢೋ ಹಿ ಶಿವೈಕತಾಂ ॥೫॥

ಶಿವೇನೈಕ್ಯಂ ಸಮಾಪನ್ನಶ್ಚಿದಾನಂದಸ್ವರೂಪಿಣಾ ।
ನ ಪಶ್ಯತಿ ಜಗಜ್ಜಾಲಂ ಮಾಯಾಕಲ್ಪಿತವೈಭವಂ ॥೬॥

ಬ್ರಹ್ಮಾಂಡಬುದ್ಬುದೋದ್ಭೇದವಿಜೃಂಭೀ ತತ್ತ್ವವೀಚಿಮಾನ್ ।
ಮಾಯಾಸಿಂಧುರ್ಲಯಂ ಯಾತಿ ಶಿವೈಕ್ಯವಡವಾನಲೇ ॥೭॥

ಮಾಯಾಶಕ್ತಿತಿರೋಧಾನಾಚ್ಛಿವೇ ಭೇದವಿಕಲ್ಪನಾ ।
ಆತ್ಮನಸ್ತದ್ವಿನಾಶೇ ತು ನಾದ್ವೈತಾತ್ ಕಿಂಚಿದಿಷ್ಯತೇ ॥೮॥

---

೪೧ ಐಕ್ಯಸ್ಥಲ

ಶುದ್ಧಾಂತಃಕರಣನಾದ ಶರಣನು ಅತ್ಯಲ್ಪವಾದ ವಿಷಯಾನಂದವೆಂಬ ಶೀಕರದಲ್ಲಿ ನಿಃಸ್ಪೃಹನಾಗಿ, ಶಿವಾನಂದವೆಂಬ ಮಹಾಸಮುದ್ರದಲ್ಲಿಯೇ ಮುಳುಗುವುದರಿಂದ ಅರ್ಥಾತ್ ತತ್ಸ್ವರೂಪವನ್ನೇ ಧರಿಸುವುದರಿಂದ, ಅವನು ಐಕ್ಯನೆಂದು ಹೇಳಿಸಿಕೊಳ್ಳುವನು. ॥೪॥ ಆಣವಾದಿಮಲಸಂಬಂಧವನ್ನು ದೂರೀಕರಿಸಿದವನೂ, ಕಲಂಕರಹಿತವಾದ ಮನಸ್ಸಿನಿಂದ ಕೂಡಿದವನೂ, ನಾನೇ ಶಿವನೆಂಬ ಭಾವನೆಯಿಂದ ಶಿವೈಕತ್ವವನ್ನು ಪಡೆದವನೂ ಐಕ್ಯನೆನಿಸುವನು. ॥೫॥ ಚಿದಾನಂದಸ್ವರೂಪನಾದ ಶಿವನೊಡನೆ ಏಕತ್ವವನ್ನು ಪಡೆದವನು, ಮಾಯಾಶಕ್ತಿಪರಿಕಲ್ಪಿತವೈಭವವುಳ್ಳ ಈ ವಿಶ್ವಸಮೂಹವನ್ನು ನೋಡುವುದಿಲ್ಲ. ಸಮಸ್ತಪ್ರಪಂಚವನ್ನೂ ಶಿವಮಯವನ್ನಾಗಿ ನೋಡುತ್ತಾನೆಂದು ಭಾವವು. ॥೬॥ ಅನಂತಬ್ರಹ್ಮಾಂಡಗಳೆಂಬ ಗುಳ್ಳೆಗಳ ಆವಿರ್ಭಾವದಿಂದ ಉಕ್ಕುತ್ತಿರುವ, ಮೂವತ್ತಾರುತತ್ತ್ವಗಳೆಂಬ ತೆರೆಗಳಿಂದ ಕೂಡಿರುವ ಮಾಯಾಸಮುದ್ರವು ಶಿವಲಿಂಗೈಕ್ಯವೆಂಬ ವಡವಾಗ್ನಿಯಲ್ಲಿ ಲಯವನ್ನು ಹೊಂದುತ್ತದೆ. ॥೭॥ ಜೀವನಿಗೆ ಮಾಯಾಶಕ್ತಿರೂಪಬಂಧದಿಂದ ಶಿವನಲ್ಲಿ ಭೇದಕಲ್ಪನೆಯುಂಟಾಗುವುದು. ಆ ಮಾಯಾಶಕ್ತಿರೂಪಬಂಧವು ನಷ್ಟವಾಗಲು ಶಿವಾದ್ವೈತಕ್ಕಿಂತ ಭಿನ್ನವಾದುದಾವುದೂ ತೋರುವುದಿಲ್ಲ. ॥೮॥ ಜೀವರೂಪವಾದ ಪಶುತ್ವವಾಗಲಿ, ಶಿವರೂಪ

ಪಶುತ್ವಂ ಚ ಪತಿತ್ವಂ ಚ ಮಾಯಾಮೋಹವಿಕಲ್ಪಿತಂ ।
ತಸ್ಮಿನ್ ಪ್ರಲಯಮಾಪನ್ನೇ ಕಃ ಪಶುಃ ಕೋ ನು ವಾ ಪತಿಃ ॥೯॥

ಘೋರಸಂಸಾರಸರ್ಪಸ್ಯ ಭೇದವಲ್ಮೀಕಶಾಯಿನಃ ।
ಬಾಧಕಂ ಪರಮಾದ್ವೈತಭಾವನಾ ಪರಮೌಷಧಂ ॥೧೦॥

ಭೇದಬುದ್ಧಿಸಮುತ್ಪನ್ನಮಹಾಸಂಸಾರಸಾಗರಂ ।
ಅದ್ವೈತಬುದ್ಧಿಪೋತೇನ ಸಮುತ್ತರತಿ ದೇಶಿಕಃ ॥೧೧॥

ಅಜ್ಞಾನತಿಮಿರೋದ್ರಿಕ್ತಾ ಕಾಮರಕ್ಷಃಕ್ರಿಯಾಕರೀ ।
ಸಂಸಾರಕಾಲರಾತ್ರಿಸ್ತು ನಶ್ಯೇದದ್ವೈತಭಾನುನಾ ॥೧೨॥

ತಸ್ಮಾದದ್ವೈತಭಾವಸ್ಯ ಸದೃಶೋ ನಾಸ್ತಿ ಯೋಗಿನಾಂ ।
ಉಪಾಯೋ ಘೋರಸಂಸಾರಮಹಾತಾಪನಿವೃತ್ತಯೇ ॥೧೩॥

ಅದ್ವೈತಭಾವನಾಜಾತಂ ಕ್ಷಣಮಾತ್ರೇಽಪಿ ಯತ್ಸುಖಂ ।
ತತ್ಸುಖಂ ಕೋಟಿವರ್ಷೈರಸ್ತು ಪ್ರಾಪ್ಯತೇ ನೈವ ಭೋಗಿಭಿಃ ॥೧೪॥

ವಾದ ಪತಿತ್ವವಾಗಲಿ, ಮಾಯಾಶಕ್ತಿಯ ಮೋಹದಿಂದ ಉತ್ಪನ್ನವಾಗುವುದು. ಆ ಉಭಯವೂ ಲಯವನ್ನು ಹೊಂದಲು ಯಾವನು ಪಶುವು? ಯಾವನು ಪತಿಯು? ಈ ಪಶುಪತಿಭೇದವೇ ಉಳಿಯುವುದಿಲ್ಲವೆಂದು ಭಾವವು. ॥೯॥ ಜಡಾಜಡ ಭೇದ, ಜೀವಾಜೀವಭೇದ, ಜೀವಜಡಭೇದ, ಜೀವೇಶ್ವರಭೇದ, ಜಡೇಶ್ವರಭೇದಗಳೆಂಬ ಪಂಚಭೇದರೂಪವಾದ ಹುತ್ತದಲ್ಲಿರುವ ಭಯಂಕರವಾದ ಸಂಸಾರವೆಂಬ ಸರ್ಪವನ್ನು ಜಡಚೇತನ್ಯೈಕ್ಯರೂಪಶಿವಾದ್ವೈತಭಾವನೆಯೇ ನಾಶಮಾಡುವ ದಿವ್ಯೌಷಧವಾಗಿದೆ. ॥೧೦॥ ಭೇದಬುದ್ಧಿಯಿಂದುತ್ಪನ್ನವಾದ ಮಹಾಸಂಸಾರಸಮುದ್ರವನ್ನು ಶಿವಲಿಂಗೈಕ್ಯನು ಶಿವಾದ್ವೈತಬುದ್ಧಿರೂಪವಾದ ನಾವಿನಿಂದ ದಾಟುವನು. ॥೧೧॥ ಅಜ್ಞಾನವೆಂಬ ಗಾಢಾಂಧಕಾರದಿಂದ ವ್ಯಾಪ್ತವಾದ, ಕಾಮವೆಂಬ ರಾಕ್ಷಸಕೃತ್ಯವನ್ನಾಚರಿಸತಕ್ಕ ಸಂಸಾರವೆಂಬ ಕಾಲರಾತ್ರಿಯು ಶಿವಾದ್ವೈತವೆಂಬ ಸೂರ್ಯನಿಂದ ನಾಶವಾಗುವುದು. ॥೧೨॥ ಆದುದರಿಂದ ಭಯಂಕರಸಂಸಾರದಿಂದುತ್ಪನ್ನವಾದ ಮಹಾತಾಪನಿವೃತ್ತಿಗಾಗಿ ಶಿವಾದ್ವೈತಭಾವಕ್ಕೆ ಸಮಾನವಾದ ಉಪಾಯವು ಶಿವಯೋಗಿಗಳಿಗೆ ಯಾವುದೂ ಇರುವುದಿಲ್ಲ. ॥೧೩॥ ಕ್ಷಣಮಾತ್ರದಲ್ಲಿಯಾದರೂ ಶಿವಾದ್ವೈತಭಾವನೆಯಿಂದ ಉತ್ಪನ್ನವಾದ ಯಾವ ಸುಖವುಂಟೋ, ಆ ಸುಖವು ರಾಜಭೋಗಿಗಳಿಂದ ಕೋಟಿವರ್ಷಗಳಿಂದಾದರೂ ಹೊಂದಲು ಶಕ್ಯವಿಲ್ಲ. ॥೧೪॥

ಚಿತ್ತವೃತ್ತಿಸಮಾಲೀನಜಗತಃ ಶಿವಯೋಗಿನಃ ।
ಶಿವಾನಂದಪರಿಸ್ಫೂರ್ತಿರ್ಮುಕ್ತಿರಿತ್ಯಭಿಧೀಯತೇ ॥೧೫॥

೪೨ ಆಚಾರಸಂಪತ್ತಿಸ್ಥಲಂ

ಶಿವೈಕಭಾವನಾಪನ್ನಶಿವತ್ವೋ ದೇಹವಾನಪಿ ।
ದೇಶಿಕೋ ಹಿ ನ ಲಿಪ್ಯೇತ ಸ್ವಾಚಾರೈಃ ಸೂತಕಾದಿಭಿಃ ॥೧೬॥

ಶಿವಾದ್ವೈತಪರಿಜ್ಞಾನೇ ಸ್ಥಿರೇ ಸತಿ ಮನಸ್ವಿನಾಂ ।
ಕರ್ಮಣಾ ಕಿಂ ನು ಭಾವ್ಯಂ ಸ್ಯಾದಕೃತೇನ ಕೃತೇನ ವಾ ॥೧೭॥

ಶಂಭೋರೇಕತ್ವಭಾವೇನ ಸರ್ವತ್ರ ಸಮದರ್ಶನಃ ।
ಕುರ್ವನ್ನಪಿ ಮಹಾಕರ್ಮ ನ ತತ್ಫಲಮವಾಪ್ನುಯಾತ್ ॥೧೮॥

ಸುಕೃತೀ ದುಷ್ಕೃತೀ ವಾಪಿ ಬ್ರಾಹ್ಮಣೋ ವಾಽಂತ್ಯಜೋಽಪಿ ವಾ ।
ಶಿವೈಕಭಾವಯುಕ್ತಾನಾಂ ಸದೃಶೋ ಭವತಿ ಧ್ರುವಂ ॥೧೯॥

ತನ್ನ ಚಿತ್ತವೃತ್ತಿಯಲ್ಲಿ ಸಮಸ್ತಪ್ರಪಂಚವನ್ನು ಅಡಗಿಸಿಕೊಂಡ ಶಿವಯೋಗಿಗೆ ಶಿವಾನಂದದ ಪರಿಸ್ಫುರಣವೇ ಮುಕ್ತಿಯೆನಿಸುವುದು. ॥೧೫॥

೪೨ ಆಚಾರಸಂಪತ್ತಿಸ್ಥಲ

ಶಿವೈಕ್ಯದಿಂದ ಶಿವತ್ವವನ್ನು ಪಡೆದ ಶಿವಲಿಂಗೈಕ್ಯನು ದೇಹವನ್ನು ಧರಿಸಿದ್ದರೂ, ಸೂತಕವೇ ಮೊದಲಾದ ಸ್ವಮತಾಚಾರಗಳಿಂದ ಸಂಬಂಧಪಟ್ಟವನಾಗುವುದಿಲ್ಲ. ಶಿವೈಕ್ಯದಶೆಯಲ್ಲಿ ಸೂತಕಾದಿಗಳ ಕಟ್ಟಳೆಗೆ ಒಳಗಾಗುವುದಿಲ್ಲವೆಂದು ಭಾವವು. ॥೧೬॥ ಶಿವಲಿಂಗೈಕ್ಯನಿಷ್ಠಚಿತ್ತವೃತ್ತಿಯುಳ್ಳವರಿಗೆ ಶಿವಾದ್ವೈತಜ್ಞಾನವು ದೃಢವಾಗಲು, ಅವರು ಆಚರಿಸುವ ಕ್ರಿಯೆಯಿಂದಾಗಲಿ, ಬಿಟ್ಟ ಕ್ರಿಯೆಯಿಂದಾಗಲಿ, ಏನು ಆಗುವುದು? ಶಿವೈಕ್ಯದಶೆಯಲ್ಲಿದ್ದವರು ಶಿವಪೂಜಾದಿಕರ್ಮಗಳನ್ನು ಆಚರಿಸಿದರೂ ಅಥವಾ ಬಿಟ್ಟರೂ ಎಲ್ಲವೂ ಒಂದೇ ಎಂದು ಭಾವವು. ॥೧೭॥ ಶಿವೈಕ್ಯಪ್ರಾಪ್ತಿಯಿಂದ ಸರ್ವತ್ರ ಸಮಾನದೃಷ್ಟಿಯುಳ್ಳ ಅರ್ಥಾತ್ ಸರ್ವವನ್ನೂ ಶಿವಮಯವನ್ನಾಗಿ ಕಾಣುವ ಶಿವಲಿಂಗೈಕ್ಯನು, ಪುಣ್ಯಪಾಪರೂಪಮಹಾಕರ್ಮಗಳನ್ನಾಚರಿಸಿದರೂ, ಅವುಗಳಿಂದುಂಟಾಗುವ ಫಲವನ್ನು ಪಡೆಯುವುದಿಲ್ಲ. ॥೧೮॥ ಸರ್ವತ್ರ ಶಿವಭಾವವುಳ್ಳವರಿಗೆ ಪುಣ್ಯಾತ್ಮನೇ ಆಗಲಿ, ಪಾಪಾತ್ಮನೇ ಆಗಲಿ, ಬ್ರಾಹ್ಮಣನೇ ಆಗಲಿ, ಅಂತ್ಯಜನೇ ಆಗಲಿ, ಎಲ್ಲರೂ ಸಮಾನರೇ ಆಗುವರು. ॥೧೯॥

ವರ್ಣಾಶ್ರಮಸದಾಚಾರೈರ್ಜ್ಞಾನಿನಾಂ ಕಿಂ ಪ್ರಯೋಜನಂ ।
ಲೌಕಿಕಸ್ತು ಸದಾಚಾರಃ ಫಲಾಭಾವೇಽಪಿ ಭಾವ್ಯತೇ ॥೨೦॥

ನಿರ್ದಗ್ಧಕರ್ಮಬೀಜಸ್ಯ ನಿರ್ಮಲಜ್ಞಾನವಹ್ನಿನಾ ।
ದೇಹಿವದ್ಭಾಸಮಾನಸ್ಯ ದೇಹಯಾತ್ರಾ ತು ಲೌಕಿಕೀ ॥೨೧॥

ಶಿವಜ್ಞಾನಸಮಾಪನ್ನಸ್ಥಿರವೈರಾಗ್ಯಲಕ್ಷಣಃ ।
ಸ್ವಕರ್ಮಣಾ ನ ಲಿಪ್ಯೇತ ಪದ್ಮಪತ್ರಮಿವಾಂಭಸಾ ॥೨೨॥

ಗಚ್ಛಂಸ್ತಿಷ್ಠನ್ ಸ್ವಪನ್ವಾಽಪಿ ಜಾಗ್ರದ್ವಾಽಪಿ ಮಹಾಮತಿಃ ।
ಶಿವಜ್ಞಾನಸಮಾಯೋಗಾಚ್ಛಿವಪೂಜಾಪರಃ ಸದಾ ॥೨೩॥

ಯದ್ಯತ್ಪಶ್ಯತಿ ಸಾನೋದಂ ವಸ್ತು ಲೋಕೇಷು ದೇಶಿಕಃ ।
ಶಿವದರ್ಶನಸಂಪತ್ತಿಸ್ತತ್ರ ತತ್ರ ಮಹಾತ್ಮನಃ ॥೨೪॥

ವರ್ಣಾಶ್ರಮಧರ್ಮಗಳನ್ನಾಶ್ರಯಿಸಿರುವ ಸದಾಚಾರಗಳಿಂದ ಜ್ಞಾನಿಗಳಿಗೆ ಏನು ಪ್ರಯೋಜನವು? ಲೌಕಿಕವಾದ ವರ್ಣಾಶ್ರಮಧರ್ಮಗತನಿತ್ಯನೈಮಿತ್ತಿಕಸದಾಚಾರವು ಫಲಶೂನ್ಯವಾಗಿದ್ದರೂ ಅದನ್ನು ಆಚರಿಸಬೇಕು. ಜ್ಞಾನಿಗಳಿಗೆ ವರ್ಣಾಶ್ರಮಾಚಾರ ಧರ್ಮಗಳಿಂದ ಯಾವ ಪ್ರಯೋಜನವಿಲ್ಲದಿದ್ದರೂ, ಲೋಕಾನುಗುಣವಾಗಿ ದೇಹಪಾತ ವಾಗುವವರೆಗೂ ಆ ಧರ್ಮಗಳನ್ನು ಆಚರಿಸಬೇಕೆಂದು ಭಾವವು. ॥೨೦॥ ನಿರ್ಮಲ ವಾದ ಶಿವಜ್ಞಾನವೆಂಬ ಅಗ್ನಿಯಿಂದ ಪುಣ್ಯಪಾಪರೂಪಕರ್ಮಬೀಜವನ್ನು ಸುಟ್ಟಂಥ, ದಗ್ಧಪಟನ್ಯಾಯಾನುಗುಣವಾಗಿ ದೇಹಧಾರಿಮಾನವರಂತೆ ತೋರುತ್ತಿರುವ ಶಿವೈಕ್ಯನಿಗೆ ಕರಚರಣಾದಿಸಂಚಾಲನರೂಪವಾದ ಶರೀರವ್ಯಾಪಾರವು ಕೇವಲಲೌಕಿಕವಾಗಿರುವುದು. ಅವನು ಜನರಿಗೆ ಶರೀರಧಾರಿಯೆಂದು ಕಂಡುಬಂದರೂ, ಅವನಲ್ಲಿ ಶರೀರಾಭಿಮಾನವು ಎಷ್ಟೂ ಇರುವುದಿಲ್ಲವೆಂದು ಭಾವವು. ॥೨೧॥ ಜಲದಿಂದ ಕಮಲದ ಎಲೆಯು ಲಿಪ್ತವಾಗ ದಿರುವಂತೆ ಶಿವಜ್ಞಾನದಿಂದ ಪ್ರಾಪ್ತವಾದ ದೃಢವೈರಾಗ್ಯವೃತ್ತಿಯುಳ್ಳ ಶಿವಲಿಂಗೈಕ್ಯನು ಸ್ವೇಚ್ಛಾಚಾರದಿಂದ ಲಿಪ್ತನಾಗುವುದಿಲ್ಲ. ॥೨೨॥ ಶಿವಲಿಂಗೈಕ್ಯನು ಹೋಗು ವಾಗಲೂ, ನಿಲ್ಲುವಾಗಲೂ, ಮಲಗಿರುವಾಗಲೂ, ಎದ್ದಿರುವಾಗಲೂ, ಶಿವಜ್ಞಾನಾನು ಸಂಧಾನವುಳ್ಳವನಾಗಿರುವುದರಿಂದ, ಯಾವಾಗಲೂ ಶಿವಪೂಜಾಸಕ್ತನಾಗಿಯೇ ಇರುತ್ತಾನೆ. ॥೨೩॥ ಶಿವಲಿಂಗೈಕ್ಯನು ಈ ಪ್ರಪಂಚದಲ್ಲಿ ಪ್ರೇಮಪೂರ್ವಕವಾಗಿ ಯಾವ ಯಾವ ವಸ್ತುವನ್ನು ನೋಡುವನೋ, ಆ ಆ ವಸ್ತುವಿನಲ್ಲಿ ಈ ಮಹಾತ್ಮನಿಗೆ ಶಿವದರ್ಶನಸಂಪತ್ತಿಯೇ ಪ್ರಾಪ್ತವಾಗುವುದು. ಆ ಮಹಾತ್ಮನು ನೋಡುವ ಸಮಸ್ತ

ಯದ್ಯಚ್ಚಿಂತಯತೇ ಯೋಗೀ ಮನಸಾ ಶುದ್ಧಭಾವನಃ ।
ತತ್ತಚ್ಛಿವಮಯತ್ವೇನ ಶಿವಧ್ಯಾನಮುದಾಹೃತಂ ॥೨೫॥

ಯತ್ಕಿಂಚಿದ್ಭಾಷಿತಂ ಲೋಕೇ ಸ್ವೇಚ್ಛಯಾ ಶಿವಯೋಗಿನಾ ।
ಶಿವಸ್ತೋತ್ರಮಿದಂ ಸರ್ವಂ ಯಸ್ಮಾತ್ಸರ್ವಾತ್ಮಕಃ ಶಿವಃ ॥೨೬॥

ಯಾ ಯಾ ಚೇಷ್ಟಾ ಸಮುತ್ಪನ್ನಾ ಜಾಯತೇ ಶಿವಯೋಗಿನಾಂ ।
ಸಾ ಸಾ ಪೂಜಾ ಮಹೇಶಸ್ಯ ಸರ್ವದಾ ತದ್ಗತಾತ್ಮನಾಂ ॥೨೭॥

೪೩ ಏಕಭಾಜನಸ್ಥಲಂ

ವಿಶ್ವಂ ಶಿವಮಯಂ ಚೇತಿ ಸದಾ ಭಾವಯತೋ ಧಿಯಾ ।
ಶಿವೈಕಭಾಜನಾತ್ಮತ್ವಾದೇಕಭಾಜನಮುಚ್ಯತೇ ॥೨೮॥

ಸ್ವಸ್ಯ ಸರ್ವಸ್ಯ ಲೋಕಸ್ಯ ಶಿವಸ್ಯಾದ್ವೈತದರ್ಶನಾತ್ ।
ಏಕಭಾಜನಯೋಗೇನ ಪ್ರಸಾದೈಕ್ಯಮತಿರ್ಭವೇತ್ ॥೨೯॥

ವಸ್ತುಗಳಲ್ಲಿಯೂ ಅವನಿಗೆ ಶಿವನೇ ತೋರುವನೆಂದು ಭಾವವು. ॥೨೪॥ ನಿರ್ಮಲ ಭಾವವುಳ್ಳ ಶಿವಯೋಗಿಯು ಯಾವುಯಾವುದನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾನೆಯೋ, ಅದೆಲ್ಲವೂ ಶಿವಸ್ವರೂಪವಾಗಿರುವುದರಿಂದ ಅದೇ ಶಿವಧ್ಯಾನವೆನಿಸುವುದು. ॥೨೫॥ ಈ ಲೋಕದಲ್ಲಿ ಶಿವಯೋಗಿಯು ಸ್ವೇಚ್ಛೆಯಿಂದ ಏನನ್ನಾದರೂ ನುಡಿದನಾದರೆ, ಅದೆಲ್ಲವೂ ಶಿವಸ್ತೋತ್ರವೇ ಆಗುವುದು. ಏಕೆಂದರೆ—ಶಿವನು ಸರ್ವಾತ್ಮಕನಷ್ಟೆ! ॥೨೬॥ ಶಿವಯೋಗಿಗಳಿಗೆ ಯಾವ ಯಾವ ಶರೀರಚೇಷ್ಟೆ (ಕ್ರಿಯೆ) ಯು ಉತ್ಪನ್ನವಾಗುವುದೋ, ಶಿವಸ್ವರೂಪರಾದ ಮಹಾತ್ಮರ ಆ ಆ ಕ್ರಿಯೆಯು ಯಾವಾಗಲೂ ಶಿವನ ಪೂಜೆಯೆನಿಸುವುದು. ॥೨೭॥

೪೩ ಏಕಭಾಜನಸ್ಥಲ

ಚರಾಚರಾತ್ಮಕವಾದೀಜಗತ್ತು ಶಿವಮಯವಾಗಿರುವುದೆಂದು ಯಾವಾಗಲೂ ಸ್ವಬುದ್ಧಿಯಿಂದ ಭಾವಿಸುತ್ತಿರುವ ಶಿವಲಿಂಗೈಕ್ಯನಿಗೆ, ಶಿವನೇ ಮುಖ್ಯಧಾರನಾಗಿರುವುದರಿಂದ, ಅಂತಹ ಶಿವಲಿಂಗೈಕ್ಯನು ಏಕಭಾಜನನೆನಿಸಿಕೊಳ್ಳುವನು. ಸಮಸ್ತ ಪ್ರಪಂಚವನ್ನು ಶಿವಮಯವನ್ನಾಗಿ ಭಾವಿಸುವುದೇ ಏಕಭಾಜನಸ್ಥಲವೆನಿಸುವುದು. ॥೨೮॥ ತನ್ನನ್ನೂ, ಸಮಸ್ತಪ್ರಪಂಚವನ್ನೂ, ಶಿವನನ್ನೂ ಅದ್ವೈತಭಾವನೆಯಿಂದ ಕಾಣುವುದರಿಂದ ಏಕಕೂಟತ್ವವುಂಟಾಗುವುದು. ಶಿವೈಕ್ಯನು ಈ ಏಕಕೂಟತ್ವದಿಂದುಂಟಾದ ಶಿವಪ್ರಸಾದದಲ್ಲಿ ಐಕ್ಯಭಾವನೆಯುಳ್ಳವನಾಗಬೇಕು. ॥೨೯॥

ಶಿವೇ ವಿಶ್ವಮಿದಂ ಸರ್ವಂ ಶಿವಃ ಸರ್ವತ್ರ ಭಾಸತೇ ।
ಆಧಾರಾಧೇಯಭಾವೇನ ಶಿವಸ್ಯ ಜಗತಃ ಸ್ಥಿತಿಃ ॥೩೦॥

ಚಿದೇಕಭಾಜನಂ ಯಸ್ಯ ಚಿತ್ತವೃತ್ತಿಃ ಶಿವಾತ್ಮಿಕಾ ।
ನಾನ್ಯತ್ತಸ್ಯ ಕಿಮೇತೇನ ಮಾಯಾಮೂಲೇನ ವಸ್ತುನಾ ॥೩೧॥

ಚಿತ್ಪ್ರಕಾಶಯತೇ ವಿಶ್ವಂ ತದ್ವಿನಾ ವಸ್ತು ನಾಸ್ತಿ ಹಿ ।
ಚಿದೇಕನಿಷ್ಠಚಿತ್ತಾನಾಂ ಕಿಂ ಮಾಯಾಪರಿಕಲ್ಪಿತೈಃ ॥೩೨॥

ವೃತ್ತಿಶೂನ್ಯೇ ಸ್ವಹೃದಯೇ ಶಿವಲೀನೇ ನಿರಾಕುಲೇ ।
ಯಃ ಸದಾ ರಮತೇ ಯೋಗೀ ಸ ಮುಕ್ತೋ ನಾತ್ರ ಸಂಶಯಃ ॥೩೩॥

ಶಿವನಲ್ಲಿ ಈ ಸಮಸ್ತಪ್ರಪಂಚವೂ, ಸಮಸ್ತಪ್ರಪಂಚದಲ್ಲಿ ಶಿವನೂ ತೋರು ತ್ತಿರುವನು. ಶಿವನ ಮತ್ತು ಪ್ರಪಂಚದ ಸ್ಥಿತಿಯು ಆಧಾರಾಧೇಯಭಾವವುಳ್ಳದಾಗಿ ರುವುದು. ಶಿವನು ಆಧಾರನಾಗಿರುವನೆಂದೂ, ಪ್ರಪಂಚವು ಆಧೇಯವಾಗಿರುವುದೆಂದೂ ಭಾವವು. ॥೩೦॥ ಯಾವ ಶಿವಯೋಗಿಯ ಮನೋವ್ಯಾಪಾರವು ಶಿವಸ್ವರೂಪವಾ ಗಿರುವುದೋ, ಅವನ ಜ್ಞಾನವೇ ಏಕಭಾಜನವೆನಿಸುವುದು. ಈ ಜ್ಞಾನಾತಿರಿಕ್ತವಾದ ಎರಡನೆಯದಾವುದೂ ಏಕಭಾಜನವೆನಿಸುವುದಿಲ್ಲ. ಆ ಶಿವಯೋಗಿಗೆ ಮಾಯಾಮೂಲ ವಾಗಿರುವ ಈ ಭೇದವಿಶಿಷ್ಟವಸ್ತುವಿನಿಂದ ಏನು ಪ್ರಯೋಜನವು ? ಯಾವ ಪ್ರಯೋ ಜನವೂ ಇಲ್ಲವೆಂದು ಭಾವವು. ॥೩೧॥ ಜ್ಞಾನವು ಸಕಲಪ್ರಪಂಚವನ್ನು ಪ್ರಕಾಶ ಗೊಳಿಸುತ್ತದೆ. ಅದನ್ನು ಬಿಟ್ಟು ಪ್ರಪಂಚವನ್ನು ಪ್ರಕಾಶಗೊಳಿಸತಕ್ಕ ವಸ್ತುವಾವುದೂ ಇರುವುದಿಲ್ಲ. ಆದಕಾರಣ ಇಂತಹ ಜ್ಞಾನದಲ್ಲಿಯೇ ಮುಖ್ಯವಾಗಿ ಚಿತ್ತವನ್ನು ದೃಢ ಗೊಳಿಸಿದವರಿಗೆ ಮಾಯಾಕಲ್ಪಿತಪದಾರ್ಥಗಳಿಂದ ಏನು ಪ್ರಯೋಜನವು ? ಜ್ಞಾನ ವನ್ನು ಬಿಟ್ಟು ಉಳಿದ ಯಾವ ಪದಾರ್ಥಗಳಿಂದಲೂ ಪ್ರಯೋಜನವಿಲ್ಲವೆಂದು ಭಾವವು. ಪರಬ್ರಹ್ಮವು ಜ್ಞಾನಸ್ವರೂಪವಾಗಿರುವುದು. "ಪ್ರಜ್ಞಾನಂ ಬ್ರಹ್ಮ" "ಸತ್ಯಂ ಜ್ಞಾನಮನಂತಂ ಬ್ರಹ್ಮ" ಇತ್ಯಾದಿ ಶ್ರುತಿಗಳು ಇದೇ ಅಭಿಪ್ರಾಯವನ್ನು ಬೋಧಿಸುತ್ತಿರುವುವು. ಆದುದರಿಂದ ಮುಮುಕ್ಷುವು ಕೇವಲ ಜ್ಞಾನದಲ್ಲಿಯೇ ಲೀನನಾಗಿ ಕೈವಲ್ಯಸುಖ ವನ್ನನುಭವಿಸಬೇಕೆನ್ನುವುದೇ ಭಗವತ್ಪಾದರ ಆಶಯವಾಗಿರುವುದು. ॥೩೨॥ ಸಮಸ್ತವ್ಯಾಪಾರಶೂನ್ಯವೂ, ಕ್ಷೋಭರಹಿತವೂ, ಶಿವೈಕ್ಯಭೂತವೂ ಆದ ತನ್ನ ಹೃದಯದಲ್ಲಿಯೇ ಯಾವ ಶಿವಯೋಗಿಯು ಯಾವಾಗಲೂ ವಿನೋದಿಸುತ್ತಾನೆಯೋ, ಅವನು ಜೀವನ್ಮುಕ್ತನೆನಿಸುವನು. ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲ. ॥೩೩॥

೪೪ ಸಹಭಾಜನಸ್ಥಲಂ

ಗುರೋಃ ಶಿವಸ್ಯ ಶಿಷ್ಯಸ್ಯ ಸ್ವಸ್ವರೂಪತಯಾ ಸ್ಮೃತಿಃ ।
ಸಹಭಾಜನಮಾಖ್ಯಾತಂ ಸರ್ವಗ್ರಾಸಾತ್ಮಭಾವತಃ ॥೩೪॥

ಶಿವಂ ವಿಶ್ವಂ ಗುರುಂ ಸಾಕ್ಷಾದ್ಯೋಜಯೇನ್ನಿತ್ಯಮಾತ್ಮನಿ ।
ಏಕತ್ವೇನ ಚಿದಾಕಾರೇ ತದಿದಂ ಸಹಭಾಜನಂ ॥೩೫॥

ಅಯಂ ಶಿವೋ ಗುರುಶ್ಚೈಷ ಜಗದೇತಚ್ಚರಾಚರಂ ।
ಅಹಂ ಚೇತಿ ಮತಿರ್ಯಸ್ಯ ನಾಸ್ತ್ಯಸೌ ವಿಶ್ವಭಾಜಕಃ ॥೩೬॥

ಅಹಂ ಭೃತ್ಯಃ ಶಿವಃ ಸ್ವಾಮೀ ಶಿಷ್ಯೋಽಹಂ ಗುರುರೇಷ ವೈ ।
ಇತಿ ಯಸ್ಯ ಮತಿರ್ನಾಸ್ತಿ ಸ ಚಾದ್ವೈತಪದೇ ಸ್ಥಿತಃ ॥೩೭॥

ಪರಾಹಂತಾಮಯೇ ಸ್ವಾತ್ಮಪಾವಕೇ ವಿಶ್ವಭಾಸಕೇ ।
ಇದಂತಾಹವ್ಯಹೋಮೇನ ವಿಶ್ವಹೋಮೀತಿ ಕಥ್ಯತೇ ॥೩೮॥

---

೪೪ ಸಹಭಾಜನಸ್ಥಲ

ಶಿವಯೋಗಿಗೆ "ಘಟೋ ಮಯಾ ಜ್ಞಾತಃ, ಪಟೋ ಮಯಾ ಜ್ಞಾತಃ" ಇತ್ಯಾದಿಸರ್ವಭೇದಗ್ರಸನವೇ ಸ್ವಸ್ವರೂಪವಾಗಿರುವುದರಿಂದ ಅರ್ಥಾತ್ ಶಿವಯೋಗಿಯು ಸರ್ವವನ್ನೂ ಅಭಿನ್ನವಾಗಿ ತಿಳಿಯುವುದರಿಂದ, ಗುರುವಿನಲ್ಲಿಯೂ, ಶಿವನಲ್ಲಿಯೂ, ಶಿಷ್ಯನಲ್ಲಿಯೂ ಭೇದವನ್ನೆಣಿಸದೆ, ಈ ಮೂವರನ್ನೂ ಸ್ವಸ್ವರೂಪತ್ವದಿಂದ ಭಾವಿಸುವುದೇ ಸಹಭಾಜನಸ್ಥಲವೆನಿಸುವುದು. ॥೩೪॥ ಸಾಕ್ಷಾತ್ ಚಿತ್ಸ್ವರೂಪನಾದ ಆತ್ಮನಲ್ಲಿ ಶಿವನನ್ನೂ, ಗುರುವನ್ನೂ, ಪ್ರಪಂಚವನ್ನೂ ಏಕರೂಪತ್ವದಿಂದ (ಇದೆಲ್ಲವೂ ಒಂದೇ ಎಂಬ ಅಭೇದಬುದ್ಧಿಯಿಂದ) ಯಾವಾಗಲೂ ಸಂಯೋಜಿಸುವುದೇ ಸಹಭಾಜನಸ್ಥಲವೆನಿಸುವುದು. ॥೩೫॥ ಇವನು ಶಿವನು, ಇವನು ಗುರುವು, ಇದು ಚರಾಚರಾತ್ಮಕವಾದ ಜಗತ್ತು, ನಾನು, ಎಂಬ ಭೇದಬುದ್ಧಿಯು ಯಾವನಿಗಿರುವುದಿಲ್ಲವೋ, ಅವನು ವಿಶ್ವಭಾಜಕನೆನಿಸುವನು. ಅರ್ಥಾತ್ ಸರ್ವಸ್ವರೂಪನಾಗುವನೆಂದು ಭಾವವು. ॥೩೬॥ ಶಿವನು ಸ್ವಾಮಿಯು, ನಾನು ಸೇವಕನು; ಇವನು ಗುರುವು, ನಾನು ಶಿಷ್ಯನು; ಎಂಬ ಭೇದಬುದ್ಧಿಯು ಯಾವನಿಗಿರುವುದಿಲ್ಲವೋ, ಅವನೇ ಶಿವಾದ್ವೈತಪದಾಧಿಕಾರಿಯಾಗುವನು. ॥೩೭॥ ಜಗತ್ತನ್ನು ಪ್ರಕಾಶಪಡಿಸುತ್ತಿರುವ ಉತ್ಕೃಷ್ಟಮೂಲಾಹಂತಾಪ್ರಚುರವಾದ ತನ್ನ ಆತ್ಮವೆಂಬ ಅಗ್ನಿಯಲ್ಲಿ ಇದಂತೆಯೆಂಬ ಭೇದಬುದ್ಧಿರೂಪವಾದ ಹವನದ್ರವ್ಯದಿಂದ ಹೋಮಮಾಡುವುದರಿಂದ ಅವನು

ಅಹಂ ಶಿವೋ ಗುರುಶ್ಚಾಹಮಹಂ ವಿಶ್ವಂ ಚರಾಚರಂ ।
ಯಯಾ ವಿಜ್ಞಾಯತೇ ಸಮ್ಯಕ್ ಪೂರ್ಣಾಹಂತೇತಿ ಸಾ ಸ್ಮೃತಾ ॥೩೯॥

ಆಧಾರವಹ್ನೌ ಚಿದ್ರೂಪೇ ಭೇದಜಾತಂ ಜಗದ್ಧವಿಃ ।
ಜುಹೋತಿ ಜ್ಞಾನಜುಹ್ವಾ ಯಃ ಸ ಜ್ಞೇಯೋ ವಿಶ್ವಹವ್ಯಭುಕ್ ॥೪೦॥

ಚಿದಾಕಾರೇ ಪರಾಕಾಶೇ ಪರಮಾನಂದಭಾಸ್ವತಿ ।
ವಿಲೀನಚಿತ್ತವೃತ್ತೀನಾಂ ಕಾ ವಾ ವಿಶ್ವಕ್ರಮಸ್ಥಿತಿಃ ॥೪೧॥

ನಿರಸ್ತವಿಶ್ವಸಂಬಾಧೇ ನಿಷ್ಕಲಂಕೇ ಚಿದಂಬರೇ ।
ಭಾವಯೇಲ್ಲೀನಮಾತ್ಮಾನಂ ಸಾಮರಸ್ಯಸ್ವಭಾವತಃ ॥೪೨॥

ಸೈಷಾ ವಿದ್ಯಾ ಪರಾ ಜ್ಞೇಯಾ ಸತ್ತಾನಂದಪ್ರಕಾಶಿನೀ ।
ಮುಕ್ತಿರಿತ್ಯುಚ್ಯತೇ ಸದ್ಭಿರ್ಜಗನ್ಮೋಹನಿವರ್ತಿನೀ ॥೪೩॥

ವಿಶ್ವಹೋಮಿಯೆಂದು ಹೇಳಿಸಿಕೊಳ್ಳುವನು. ॥೩೮॥ ನಾನೇ ಶಿವನು, ನಾನೇ ಗುರುವು, ನಾನೇ ಈ ಚರಾಚರಾತ್ಮಕಸಕಲಪ್ರಪಂಚವು, ಎಂದು ಯಾವುದರಿಂದ ಚನ್ನಾಗಿ ತಿಳಿಯಲ್ಪಡುತ್ತದೆಯೋ, ಅದು ಪೂರ್ಣಾಹಂತೆಯೆನಿಸುವುದು. ॥೩೯॥ ಜ್ಞಾನಸ್ವರೂಪವಾದ ಆಧಾರಚಕ್ರಸ್ಥಿತಾಗ್ನಿಯಲ್ಲಿ ಭೇದಾತ್ಮಕವಾಗಿರುವ ಜಗತ್ತೆಂಬ ಹವಿಸ್ಸನ್ನು ಯಾವನು ಜ್ಞಾನವೆಂಬ ಜುಹುವಿನಿಂದ (ಹೋಮಸಾಧನೀಭೂತದಾರುಮಯಪಾತ್ರದಿಂದ) ಹೋಮಮಾಡುತ್ತಾನೆಯೋ, ಅವನು "ವಿಶ್ವಹವ್ಯಭುಕ್" ಎಂದು ಹೇಳಿಸಿಕೊಳ್ಳುವನು. ॥೪೦॥ ಜ್ಞಾನಸ್ವರೂಪನೂ ಪರಮಾನಂದಸ್ವರೂಪನೂ ಸ್ವಯಂಪ್ರಕಾಶನೂ ಆದ ಪರಾಕಾಶಸ್ವರೂಪಪರಮಾತ್ಮನಲ್ಲಿ ಮನೋವ್ಯಾಪಾರವನ್ನು ಲಯಗೊಳಿಸಿರುವ ಶಿವಯೋಗಿಗಳಿಗೆ ವಿಶ್ವವ್ಯಾಪಾರವೃತ್ತಿಯು ಯಾವುದಿರುವುದು? ಯಾವುದೂ ಇರುವುದಿಲ್ಲವೆಂದು ಭಾವವು. ॥೪೧॥ ಜನನಮರಣರೂಪಸಮಸ್ತಕ್ಲೇಶಗಳನ್ನು ನಿವಾರಿಸತಕ್ಕವನೂ, ದೋಷರಹಿತನೂ ಆದ ಚಿದಾಕಾಶರೂಪಪರಮಾತ್ಮನಲ್ಲಿ ಜೀವಾತ್ಮನನ್ನು ಸಾಮರಸ್ಯಸ್ವಭಾವದಿಂದ ಲೀನನನ್ನಾಗಿಭಾವಿಸಬೇಕು. ಸಚ್ಚಿದಾನಂದಸ್ವರೂಪನಾದ ಪರಮಾತ್ಮನಲ್ಲಿ ಸ್ವಸ್ವರೂಪವನ್ನು ಲಯಗೊಳಿಸಬೇಕೆಂದು ಭಾವವು. ॥೪೨॥ ಸತ್ತೆಯನ್ನೂ ಆನಂದವನ್ನೂ ಪ್ರಕಾಶಗೊಳಿಸುವ ಮತ್ತು ಜಗನ್ಮೋಹವನ್ನು ನಿವಾರಿಸುವ ಈ ವಿದ್ಯೆಯೇ ಪರಾವಿದ್ಯೆಯೆಂದೂ, ಮುಕ್ತಿಯೆಂದೂ ಜ್ಞಾನಿಗಳಿಂದ ಹೇಳಲ್ಪಡುವುದು. ॥೪೩॥

ಭಕ್ತಾದಿನಾಮಾ ಪರಧರ್ಮಯೋಗಾತ್
ಪ್ರಾಪ್ತೈಕಭಾವಃ ಪರಮಾದ್ಭುತೇನ ।
ಶಿವೇನ ಚಿದ್ವ್ಯೋಮಮಯೇನ ಸಾಕ್ಷಾ
ನ್ಮೋಕ್ಷಶ್ರಿಯೋ ಭಾಜನತಾಮುಪೈತಿ ॥೪೪॥

ಇತಿ ಶ್ರೀಸಿದ್ಧಾಂತಶಿಖಾಮಣೌ ಐಕ್ಯಸ್ಥಲೇ ಐಕ್ಯಸ್ಥಲಾದಿ ಚತುರ್ವಿಧಸ್ಥಲಪ್ರಸಂಗೋ ನಾಮ

ಚತುರ್ದಶಪರಿಚ್ಛೇದಃ ಪರಿಸಮಾಪ್ತಃ

ಭಕ್ತಮಹೇಶಾದಿನಾಮಗಳುಳ್ಳ ಶಿವಯೋಗಿಯು ಉತ್ಕೃಷ್ಟವಾದ ಶಿವಧರ್ಮ ಸಂಬಂಧದಿಂದ ಊರ್ಧ್ವಹೃತ್ಕಮಲಮಧ್ಯಸ್ಥಚಿದಾಕಾಶಸ್ವರೂಪನಾದ ಶಿವನೊಡನೆ ಪರಮಾಶ್ಚರ್ಯದಿಂದ ಏಕತ್ವ (ಸಾಮರಸ್ಯ) ವನ್ನು ಹೊಂದಿದವನಾಗಿ, ಸಾಕ್ಷಾತ್ ಮೋಕ್ಷಲಕ್ಷ್ಮಿಯ ವಾಸಕ್ಕೆ ಅರ್ಹನಾಗುತ್ತಾನೆ. ॥೪೪॥

ಇಲ್ಲಿಯವರೆಗೆ ಅಂಗಸ್ಥಲಾಂತರ್ಗತಭಕ್ತಾದಿಷಟ್‌ಸ್ಥಲಗಳ (೪೪ ಅಂಗಸ್ಥಲಗಳ) ಸ್ವರೂಪವು ನಿರೂಪಿಸಲ್ಪಟ್ಟಿತು. ಇನ್ನುಮುಂದೆ ಲಿಂಗಸ್ಥಲಾಂತರ್ಗತಭಕ್ತಾದಿ ಷಟ್‌ಸ್ಥಲಗಳ (೫೭ ಲಿಂಗಸ್ಥಲಗಳ) ಸ್ವರೂಪವು ನಿರೂಪಿಸಲ್ಪಡುವುದು.

ಇಂತು ಶ್ರೀಸಿದ್ಧಾಂತಶಿಖಾಮಣಿಯ ಐಕ್ಯಸ್ಥಲದಲ್ಲಿ ಐಕ್ಯಸ್ಥಲಾದಿ ಚತುರ್ವಿಧಸ್ಥಲವಿಚಾರಾತ್ಮಕವಾದ

ಹದಿನಾಲ್ಕನೆಯ ಪರಿಚ್ಛೇದವು ಪರಿಸಮಾಪ್ತವಾದುದು.

ಶ್ರೀಜಗದ್ಗುರುರೇಣುಕಾಚಾರ್ಯಃ ಪ್ರಸೀದತು.

ಪಂಚದಶಪರಿಚ್ಛೇದಃ

(ಲಿಂಗಸ್ಥಲಾನಿ—೫೭)

॥ ಶ್ರೀರೇಣುಕ ಉವಾಚ ॥

ಷಟ್ ಸ್ಥಲೋಕ್ತಸದಾಚಾರಸಂಪನ್ನಸ್ಯ ಯಥಾಕ್ರಮಂ ।
ಲಿಂಗಸ್ಥಲಾನಿ ಕಥ್ಯಂತೇ ಜೀವನ್ಮುಕ್ತಿಪರಾಣಿ ಚ ॥೧॥

॥ ಅಗಸ್ತ್ಯ ಉವಾಚ ॥

ಭಕ್ತಾದ್ಯೈಕ್ಯಾವಸಾನಾನಿ ಷಡುಕ್ತಾನಿ ಸ್ಥಲಾನಿ ಚ ।
ಲಿಂಗಸ್ಥಲಾನಿ ಕಾನೀಹ ಕಥ್ಯಂತೇ ಕತಿ ವಾ ಪುನಃ ॥೨॥

॥ ಶ್ರೀರೇಣುಕ ಉವಾಚ ॥

ಗುರ್ವಾದಿಜ್ಞಾನಶೂನ್ಯಾಂತಾ ಭಕ್ತಾದಿಸ್ಥಲಸಂಶ್ರಿತಾಃ ।
ಸ್ಥಲಭೇದಾಃ ಪ್ರಕೀರ್ತ್ಯಂತೇ ಪಂಚಾಶತ್ಸಪ್ತ ಚಾಧುನಾ ॥೩॥

ಹದಿನೈದನೆಯ ಪರಿಚ್ಛೇದವು

(ಲಿಂಗಸ್ಥಲಗಳು—೫೭)

ವ್ಯಾಖ್ಯಾನ—ಇಲ್ಲಿಯವರೆಗೆ ಅಂಗಸ್ಥಲಾಂತರ್ಗತಷಟ್ ಸ್ಥಲಗಳು ಹೇಳಲ್ಪಟ್ಟವು; ಇನ್ನುಮುಂದೆ ಅಂಗಸ್ಥಲಾಂತರ್ಗತಷಟ್ ಸ್ಥಲಪ್ರತಿಪಾದ್ಯಸದಾಚಾರಸಂಪನ್ನನಾದ ಶಿವಯೋಗಿಗೆ ಅನುಕ್ರಮವಾಗಿ ಜೀವನ್ಮುಕ್ತಿಪರವಾದ ಲಿಂಗಸ್ಥಲಗಳು ಹೇಳಲ್ಪಡುತ್ತವೆ. ॥೧॥ ಈ ವರೆಗೆ ಭಕ್ತಾದ್ಯೈಕ್ಯಾಂತವಾದ ಆರು ಅಂಗಸ್ಥಲಗಳು ಹೇಳಲ್ಪಟ್ಟವು. ಆದರೆ ಲಿಂಗಸ್ಥಲಗಳು ಯಾವುವು? ಅವು ಎಷ್ಟುವಿಧವಾಗಿವೆ? ಎಂದು ಅಗಸ್ತ್ಯಮಹರ್ಷಿಯು ಪ್ರಶ್ನೆಮಾಡಲು—ಅದಕ್ಕೆ ಶ್ರೀರೇಣುಕಾಚಾರ್ಯರು, ದೀಕ್ಷಾಗುರುಸ್ಥಲಾದಿಜ್ಞಾನಶೂನ್ಯಸ್ಥಲಾಂತಗಳಾದ ೫೭ ಸ್ಥಲಗಳು ಲಿಂಗಸ್ಥಲಗಳೆಂದು ಹೇಳಲ್ಪಡುತ್ತವೆ. ಈ ಲಿಂಗಸ್ಥಲಗಳು ಭಕ್ತಾದಿಷಟ್ ಸ್ಥಲಗಳನ್ನು ಆಶ್ರಯಿಸಿ

ಆದೌ ನವ ಸ್ಥಲಾನೀಹ ಭಕ್ತಸ್ಥಲಸಮಾಶ್ರಯಾತ್ ।
ಕಥ್ಯಂತೇ ಗುಣಸಾರೇಣ ನಾಮಾನ್ಯೇಷಾಂ ಪೃಥಕ್ ಶೃಣು ॥೪॥
ದೀಕ್ಷಾಗುರುಸ್ಥಲಂ ಪೂರ್ವಂ ತತಃ ಶಿಕ್ಷಾಗುರುಸ್ಥಲಂ ।
ಪ್ರಜ್ಞಾಗುರುಸ್ಥಲಂ ಚಾಥ ಕ್ರಿಯಾಲಿಂಗಸ್ಥಲಂ ತತಃ ॥೫॥
ಭಾವಲಿಂಗಸ್ಥಲಂ ಚಾಥ ಜ್ಞಾನಲಿಂಗಸ್ಥಲಂ ತತಃ ।
ಸ್ವಯಂ ಚರಂ ಪರಂ ಚೇತಿ ತೇಷಾಂ ಲಕ್ಷಣಮುಚ್ಯತೇ ॥೬॥

೧ ದೀಕ್ಷಾಗುರುಸ್ಥಲಂ

ದೀಯತೇ ಪರಮಂ ಜ್ಞಾನಂ ಕ್ಷೀಯತೇ ಪಾಶಬಂಧನಂ ।
ಯಯಾ ದೀಕ್ಷೇತಿ ಸಾ ತಸ್ಯಾಂ ಗುರುರ್ದೀಕ್ಷಾಗುರುಃ ಸ್ಮೃತಃ ॥೭॥
ಗುಣಾತೀತಂ ಗುವರ್ಣಂ ಚ ರೂಪಾತೀತಂ ರುವರ್ಣಕಂ ।
ಗುಣಾತೀತಮರೂಪಂ ಚ ಯೋ ದದ್ಯಾತ್ ಸ ಗುರುಃ ಸ್ಮೃತಃ ॥೮॥

ಕೊಂಡಿರುತ್ತವೆ. ಈ ಲಿಂಗಷಟ್‌ಸ್ಥಲಗಳಲ್ಲಿ, ಒಂಭತ್ತು ಸ್ಥಲಗಳು ಗುಣಾಧಿಕ್ಯದಿಂದ ಭಕ್ತಸ್ಥಲವನ್ನಾಶ್ರಯಿಸಿರುವುದರಿಂದ, ಮೊದಲು ಈ ನವವಿಧಸ್ಥಲಗಳು ಹೇಳಲ್ಪಡುತ್ತವೆ. ಅವುಗಳ ಹೆಸರುಗಳನ್ನು ಕೇಳೆಂದು ಅಪ್ಪಣೆಕೊಡಿಸಿದರು. ॥೨-೪॥ ದೀಕ್ಷಾಗುರುಸ್ಥಲ, ಶಿಕ್ಷಾಗುರುಸ್ಥಲ, ಜ್ಞಾನಗುರುಸ್ಥಲ, ಕ್ರಿಯಾಲಿಂಗಸ್ಥಲ, ಭಾವಲಿಂಗಸ್ಥಲ, ಜ್ಞಾನಲಿಂಗಸ್ಥಲ, ಸ್ವಸ್ಥಲ, ಚರಸ್ಥಲ ಪರಸ್ಥಲ, ಎಂಬೀ ಒಂಭತ್ತು ಸ್ಥಲಗಳ ಸ್ವರೂಪವು ಹೇಳಲ್ಪಡುತ್ತದೆ. ॥೫-೬॥

೧ ದೀಕ್ಷಾಗುರುಸ್ಥಲ

ಯಾವುದರಿಂದ ಶ್ರೇಷ್ಠವಾದ ಶಿವಜ್ಞಾನವು ಅನುಗ್ರಹಿಸಲ್ಪಡುವುದೋ, ಯಾವುದರಿಂದ ಮಲಮಾಯಾದಿಪಾಶಬಂಧವು ನಾಶಮಾಡಲ್ಪಡುವುದೋ, ಅದು ದೀಕ್ಷೆಯೆನಿಸಿಕೊಳ್ಳುವುದು. ಅಂತಹ ಚಿತ್ಕ್ರಿಯಾಸ್ವರೂಪದೀಕ್ಷೆಯನ್ನು ಅನುಗ್ರಹಿಸುವವನು ದೀಕ್ಷಾಗುರುವೆನಿಸಿಕೊಳ್ಳುವನು. ॥೭॥ "ಗುರು" ಎಂಬೀ ಶಬ್ದದಲ್ಲಿರುವ "ಗು" ಎಂಬ ಅಕ್ಷರವು ಪ್ರಾಕೃತಗುಣರಾಹಿತ್ಯವನ್ನು ಬೋಧಿಸುವುದು; "ರು" ಎಂಬ ಅಕ್ಷರವು ಪ್ರಾಕೃತರೂಪರಾಹಿತ್ಯವನ್ನು ಬೋಧಿಸುವುದು; ಇಂತಹ ಪ್ರಾಕೃತಗುಣಾತೀತವೂ ಪ್ರಾಕೃತರೂಪಾತೀತವೂ ಆದ ಪರಶಿವಬ್ರಹ್ಮಸ್ವರೂಪವನ್ನು ಯಾವನು ಅನುಗ್ರಹಿಸುವನೋ, ಅವನೇ ಗುರುವೆಂದು ಹೇಳಿಸಿಕೊಳ್ಳುವನು. ॥೮॥

ಆಚಿನೋತಿ ಹಿ ಶಾಸ್ತ್ರಾರ್ಥಾನಾಚಾರೇ ಸ್ಥಾಪಯತ್ಯಪಿ ।
ಸ್ವಯಮಾಚರತೇ ಯಸ್ತು ಸ ಆಚಾರ್ಯ ಇತಿ ಸ್ಮೃತಃ ॥೯॥

ಷಡಧ್ವಾತೀತಯೋಗೇನ ಯತತೇ ಯಸ್ತು ದೇಶಿಕಃ ।
ಮಾಯಾಬ್ಧಿತರಣೋಪಾಯಹೇತುರ್ವಿಶ್ವಗುರುಃ ಸ್ಮೃತಃ ॥೧೦॥

ಅಖಂಡಂ ಯೇನ ಚೈತನ್ಯಂ ವ್ಯಜ್ಯತೇ ಸರ್ವವಸ್ತುಷು ।
ಆತ್ಮಯೋಗಪ್ರಭಾವೇನ ಸ ಗುರುರ್ವಿಶ್ವಭಾಸಕಃ ॥೧೧॥

೨ ಶಿಕ್ಷಾಗುರುಸ್ಥಲಂ

ದೀಕ್ಷಾಗುರುರಸೌ ಶಿಕ್ಷಾಹೇತುಃ ಶಿಷ್ಯಸ್ಯ ಬೋಧಕಃ ।
ಪ್ರಶ್ನೋತ್ತರಪ್ರವಕ್ತಾ ಚ ಶಿಕ್ಷಾಗುರುರಿತೀರ್ಯತೇ ॥೧೨॥

ಬೋಧಕೋಽಯಂ ಸಮಾಖ್ಯಾತೋ ಬೋಧ್ಯಮೇತದಿತಿ ಸ್ಫುಟಂ ।
ಶಿಷ್ಯೋ ನಿಯುಜ್ಯತೇ ಯೇನ ಸ ಶಿಕ್ಷಾಗುರುರುಚ್ಯತೇ ॥೧೩॥

ಯಾವನು ಶಿಷ್ಯರಿಗೆ ವೀರಶೈವಶಾಸ್ತ್ರೋಕ್ತರಹಸ್ಯಾರ್ಥಗಳನ್ನು ಬೋಧಿಸುತ್ತಾನೆಯೋ, ಶಿಷ್ಯರನ್ನು ವೀರಶೈವಾಚಾರದಲ್ಲಿ ನೆಲೆಗೊಳಿಸುತ್ತಾನೆಯೋ, ಹಾಗೂ ತಾನೂ ಸಹ ವೀರಶೈವಾಚಾರವನ್ನು ಆಚರಿಸುತ್ತಾನೆಯೋ, ಅವನೇ ಆಚಾರ್ಯನೆಂದು ಹೇಳಿಸಿಕೊಳ್ಳುವನು. ॥೯॥ ಯಾವಗುರುವು ಭುವನಾಧ್ವ-ವರ್ಣಾಧ್ವ-ಪದಾಧ್ವ-ಕಲಾಧ್ವ-ತತ್ತ್ವಾಧ್ವ-ಮಂತ್ರಾಧ್ವಗಳೆಂಬ ಷಡಧ್ವಗಳನ್ನು ಮೀರಿದ ಯೋಗದಿಂದ ಶಿಷ್ಯಸಮೂಹವನ್ನುದ್ಧರಿಸಲು ಯತ್ನಿಸುವನೋ, ಅವನೇ ಮಾಯಾಸಮುದ್ರವನ್ನು ದಾಟುವ ಉಪಾಯಕ್ಕೆ ಕಾರಣೀಭೂತನಾದ ಮಹಾಗುರುವೆಂದು ಹೇಳಿಸಿಕೊಳ್ಳುವನು. ॥೧೦॥ ತನ್ನಲ್ಲಿರುವ ಶಿವಯೋಗಪ್ರಭಾವದಿಂದ ಸರ್ವವಸ್ತುಗಳಲ್ಲಿ ಅಖಂಡಚೈತನ್ಯವು ಯಾವನಿಂದ ವ್ಯಕ್ತಗೊಳಿಸಲ್ಪಡುವುದೋ, ಅವನೇ ವಿಶ್ವಪ್ರಕಾಶಕಗುರುವೆನಿಸುವನು. ॥೧೧॥

೨ ಶಿಕ್ಷಾಗುರುಸ್ಥಲ

ಈ ದೀಕ್ಷಾಗುರುವೇ ಶಿಷ್ಯನಿಗೆ ಬೋಧಕನೂ, ಶಿಷ್ಯನ ಪ್ರಶ್ನೆಗಳಿಗೆ ಉತ್ತರವನ್ನೀಯುವವನೂ, ವೇದೋಪನಿಷದಾದಿಶಿಕ್ಷಣಕಾರಣನೂ ಆಗಿ ಶಿಕ್ಷಾಗುರುವೆಂದು ಹೇಳಿಸಿಕೊಳ್ಳುವನು. ॥೧೨॥ ಗುರುವು ಶಿವಸಿದ್ಧಾಂತಬೋಧಕನೆನಿಸುವನು ; ಶಿವಜ್ಞಾನವು ಬೋಧ್ಯವೆನಿಸುವುದು ; ಎಂದು ಸ್ಫುಟವಾಗಿ ಯಾವನಿಂದ ಶಿಷ್ಯನು ಆಜ್ಞಾಪಿಸಲ್ಪಡುವನೋ, ಅವನು ಶಿಕ್ಷಾಗುರುವೆನಿಸಿಕೊಳ್ಳುವನು. ॥೧೩॥

ಸಂಸಾರತಿಮಿರೋನ್ಮಾಥಶರಚ್ಚಂದ್ರಮರೀಚಯಃ ।
ವಾಚೋ ಯಸ್ಯ ಪ್ರವರ್ತಂತೇ ತಮಾಚಾರ್ಯಂ ಪ್ರಚಕ್ಷತೇ ॥೧೪॥

ದದಾತಿ ಯಃ ಪತಿಜ್ಞಾನಂ ಜಗನ್ಮಾಯಾನಿವರ್ತಕಂ ।
ಅದ್ವೈತವಾಸನೋಪಾಯಂ ತಮಾಚಾರ್ಯವರಂ ವಿದುಃ ॥೧೫॥

ಪೂರ್ವಪಕ್ಷಂ ಸಮಾದಾಯ ಜಗದ್ಭೇದವಿಕಲ್ಪನಂ ।
ಅದ್ವೈತಕೃತಸಿದ್ಧಾಂತೋ ಗುರುರೇಷ ಗುಣಾಧಿಕಃ ॥೧೬॥

ಸಂದೇಹವನಸಂದೋಹಸಮುಚ್ಛೇದಕುಠಾರಿಕಾ ।
ಯತ್ಸೂಕ್ತಿಧಾರಾ ವಿಮಲಾ ಸ ಗುರೂಣಾಂ ಶಿಖಾಮಣಿಃ ॥೧೭॥

ಯತ್ಸೂಕ್ತಿದರ್ಪಣಾಭೋಗೇ ನಿರ್ಮಲೇ ದೃಶ್ಯತೇ ಸದಾ ।
ಮೋಕ್ಷಶ್ರೀರ್ಬಿಂಬರೂಪೇಣ ಸ ಗುರುರ್ಭವತಾರಕಃ ॥೧೮॥

ಶಿಷ್ಯಾಣಾಂ ಹೃದಯಾಲೇಖ್ಯಂ ಪ್ರದ್ಯೋತಯತಿ ಯಃ ಸ್ವಯಂ ।
ಜ್ಞಾನದೀಪಿಕಯಾ ತೇನ ಗುರುಣಾ ಕಃ ಸಮೋ ಭವೇತ್ ॥೧೯॥

ಯಾವನ ಉಪದೇಶವಚನಗಳು ಸಂಸಾರವೆಂಬ ಅಂಧಕಾರವನ್ನು ನಾಶಮಾಡುವುದರಲ್ಲಿ ಶರತ್ಕಾಲದ ಚಂದ್ರನ ಕಿರಣಗಳಂತಿರುವುವೋ, ಅವನನ್ನು ಆಚಾರ್ಯನನ್ನಾಗಿ ಹೇಳುವರು. ॥೧೪॥ ಯಾವನು ಜಗದ್ಭೇದಭ್ರಾಂತಿನಾಶಕವಾದ ಶಿವಾದ್ವೈತವಾಸನೆಯೇ ಉಪಾಯವಾಗುಳ್ಳ ಶಿವಜ್ಞಾನವನ್ನು ಅನುಗ್ರಹಿಸುವನೋ, ಅವನನ್ನು ಆಚಾರ್ಯಶ್ರೇಷ್ಠನನ್ನಾಗಿಹೇಳುವರು. ॥೧೫॥ ಅನ್ಯರಿಂದ ಪೂರ್ವಪಕ್ಷರೂಪವಾಗಿ ಹೇಳಲ್ಪಟ್ಟ ಜಗದ್ಭೇದ ಕಲ್ಪನೆಯನ್ನು ಸತ್ಯವಾಗಿ ಒಪ್ಪಿಕೊಂಡು, ಶಿವಾದ್ವೈತವನ್ನು ಸಿದ್ಧಾಂತಗೊಳಿಸುವ ಈ ಶಿಕ್ಷಾಗುರುವು ಗುರುಶ್ರೇಷ್ಠನೆನಿಸುವನು. ॥೧೬॥ ಯಾವ ಗುರುವಿನ ನಿರ್ಮಲವಾದ ಉಪದೇಶವಚನಧಾರೆಯು ಸಂಶಯವೆಂಬ ಅರಣ್ಯಸಮೂಹವನ್ನು ನಾಶಮಾಡುವುದರಲ್ಲಿ ಕೊಡಲಿಯಂತಿರುವುದೋ, ಅವನು ಗುರುಶ್ರೇಷ್ಠನೆನಿಸುವನು. ॥೧೭॥ ಯಾವನ ಉಪದೇಶವಚನವೆಂಬ ನಿರ್ಮಲದರ್ಪಣಮಂಡಲದಲ್ಲಿ ಮೋಕ್ಷಲಕ್ಷ್ಮಿಯು ಬಿಂಬರೂಪದಿಂದ ಕಾಣುವಳೋ, ಆ ಗುರುವು ಸಂಸಾರಸಾಗರವನ್ನು ದಾಟಿಸುವನು. ॥೧೮॥ ಯಾವ ಗುರುವು ಶಿಷ್ಯರ ಹೃದಯಕಮಲದಲ್ಲಿರುವ ಆತ್ಮರೂಪಚಿತ್ರವನ್ನು ಜ್ಞಾನವೆಂಬ ದೀಪದಿಂದ ಪ್ರಕಾಶಗೊಳಿಸುವನೋ, ಅಂತಹ ಗುರುವಿಗೆ ಯಾವನು ಸಮಾನನಾಗುವನು ? ॥೧೯॥

ಪರಮಾದ್ವೈತವಿಜ್ಞಾನಪರಮೌಷಧದಾನತಃ ।
ಸಂಸಾರರೋಗನಿರ್ಮಾಥೀ ದೇಶಿಕಃ ಕೇನ ಲಭ್ಯತೇ ॥೨೦॥

೩ ಜ್ಞಾನಗುರುಸ್ಥಲಂ

ಉಪದೇಷ್ಟೋಪದೇಶ್ಯಾನಾಂ ಸಂಶಯುಚ್ಛೇದಕಾರಕಃ ।
ಸಮ್ಯಗ್‌ಜ್ಞಾನಪ್ರದಃ ಸಾಕ್ಷಾದೇಷ ಜ್ಞಾನಗುರುಃ ಸ್ಮೃತಃ ॥೨೧॥

ನಿರಸ್ತವಿಶ್ವಸಂಭೇದಂ ನಿರ್ವಿಕಾರಂ ಚಿದಂಬರಂ ।
ಸಾಕ್ಷಾತ್ಕರೋತಿ ಯೋ ಯುಕ್ತ್ಯಾ ಸ ಜ್ಞಾನಗುರುರುಚ್ಯತೇ ॥೨೨॥

ಕಲಂಕವಾನಸೌ ಚಂದ್ರಃ ಕ್ಷಯವೃದ್ಧಿಪರಿಪ್ಲುತಃ ।
ನಿಷ್ಕಲಂಕಃ ಸ್ಥಿತೋ ಜ್ಞಾನಚಂದ್ರಮಾ ನವಿಕಾರವಾನ್ ॥೨೩॥

ಪಾರ್ಶ್ವಸ್ಥಂ ತಿಮಿರಂ ಹಂತಿ ಪ್ರದೀಪೋ ಮಣಿನಿರ್ಮಿತಃ ।
ಸರ್ವಗಾಮಿ ತಮೋ ಹಂತಿ ಬೋಧದೀಪೋ ನಿರಂಕುಶಃ ॥೨೪॥

ಶಿವಾದ್ವೈತಜ್ಞಾನವೆಂಬ ಶ್ರೇಷ್ಠವಾದ ಔಷಧವನ್ನು ಕೊಡುವುದರ ಮೂಲಕ, ಸಂಸಾರವೆಂಬ ರೋಗವನ್ನು ನಾಶಮಾಡುವ ಗುರುವು ಯಾವನಿಗೆ ದೊರೆಯುವನು ? ಶಿವಕರುಣಾವಿಶಿಷ್ಟನಿಗೆ ಮಾತ್ರ ದೊರೆಯುವನೆಂದು ಭಾವವು. ॥೨೦॥

೩ ಜ್ಞಾನಗುರುಸ್ಥಲ

ಉಪದೇಶಯೋಗ್ಯವಾದ ವೇದಾಂತವಾಕ್ಯರಹಸ್ಯಾರ್ಥಗಳನ್ನು ಉಪದೇಶಿಸುವವನೂ, ಶಿಷ್ಯರ ಸಂದೇಹಗಳನ್ನು ನಿವಾರಿಸುವವನೂ ಆದ ಶಿಕ್ಷಾಗುರುವೇ, ಜ್ಞಾನವನ್ನು ಚನ್ನಾಗಿ ಅನುಗ್ರಹಿಸುವುದರಿಂದ ಜ್ಞಾನಗುರುವೆಂದು ಹೇಳಿಸಿಕೊಳ್ಳುವನು. ॥೨೧॥ ಶಕ್ತಿವಿಶಿಷ್ಟಶಿವಾತಿರಿಕ್ತಜಗದ್ಭೇದಶೂನ್ಯವೂ ನಿರ್ವಿಕಾರವೂ ಆದ ಚಿದಾಕಾಶರೂಪ ಪರಮಾತ್ಮತತ್ತ್ವವನ್ನು ಯಾವನು ಸ್ವಾನುಭವಯುಕ್ತಿಯಿಂದ ಪ್ರತ್ಯಕ್ಷೀಕರಿಸುವನೋ, ಅವನೇ ಜ್ಞಾನಗುರುವೆಂದು ಹೇಳಿಸಿಕೊಳ್ಳುವನು. ॥೨೨॥ ಚಂದ್ರನು ಕ್ಷಯವೃದ್ಧಿಗಳಿಂದ ಕೂಡಿದವನಾಗಿ ಕಲಂಕವುಳ್ಳವನಾಗಿರುವನು; ಆದರೆ ಈ ಜ್ಞಾನಚಂದ್ರನು ಕ್ಷಯವೃದ್ಧಿರೂಪವಿಕಾರಶೂನ್ಯನಾಗಿದ್ದು ನಿಷ್ಕಲಂಕನಾಗಿರುವನು. ॥೨೩॥ ರತ್ನದಿಂದ ನಿರ್ಮಿತವಾದ ದೀಪವು ಎಡಬಲದಲ್ಲಿದ್ದ ಕತ್ತಲೆಯನ್ನು ಮಾತ್ರ ನಾಶಮಾಡುವುದು; ಆದರೆ ಅಪರಿಚ್ಛಿನ್ನವಾದ ಜ್ಞಾನದೀಪವು ಸರ್ವತ್ರ ವ್ಯಾಪಿಸಿರುವ ಕತ್ತಲೆಯನ್ನು ನಾಶಮಾಡುವುದು. ॥೨೪॥

ಸರ್ವಾರ್ಥಸಾಧಕಜ್ಞಾನವಿಶೇಷಾದೇಶತತ್ಪರಃ ।
ಜ್ಞಾನಾಚಾರ್ಯಃ ಸಮಸ್ತಾನಾಮನುಗ್ರಹಕರಃ ಶಿವಃ ॥೨೫॥

ಕಟಾಕ್ಷಚಂದ್ರಮಾ ಯಸ್ಯ ಜ್ಞಾನಸಾಗರವರ್ಧನಃ ।
ಸಂಸಾರತಿಮಿರಚ್ಛೇದೀ ಸ ಗುರುರ್ಜ್ಞಾನಪಾರಗಃ ॥೨೬॥

ಬಹಿಸ್ತಿಮಿರವಿಚ್ಛೇತ್ತಾ ಭಾನುರೇಷ ಪ್ರಕೀರ್ತಿತಃ ।
ಬಹಿರಂತಸ್ತಮಶ್ಛೇದೀ ವಿಭುರ್ದೇಶಿಕಭಾಸ್ಕರಃ ॥೨೭॥

ಕಟಾಕ್ಷಲೇಶಮಾತ್ರೇಣ ವಿನಾ ಧ್ಯಾನಾದಿಕಲ್ಪನಂ ।
ಶಿವತ್ವಂ ಭಾವಯೇದ್ಯತ್ರ ಸ ವೇಧಃ ಶಾಂಭವೋ ಮತಃ ॥೨೮॥

ಶಿವವೇಧಕರೇ ಜ್ಞಾನೇ ದತ್ತೇ ಯೇನ ಸುನಿರ್ಮಲೇ ।
ಜೀವನ್ಮುಕ್ತೋ ಭವೇಚ್ಛಿಷ್ಯಸ್ಸ ಗುರುರ್ಜ್ಞಾನಸಾಗರಃ ॥೨೯॥

ಭೋಗಮೋಕ್ಷರೂಪಸಮಸ್ತಪ್ರಯೋಜನಗಳಿಗೆ ಸಾಧಕವಾದ ಜ್ಞಾನವಿಶೇಷವನ್ನು ಉಪದೇಶಿಸುವುದರಲ್ಲಿ ತತ್ಪರನೂ, ಸಮಸ್ತಮುಮುಕ್ಷುಗಳಿಗೆ ಅನುಗ್ರಹವನ್ನುಂಟುಮಾಡುವವನೂ, ಸಾಕ್ಷಾತ್ ಶಿವನೂ ಆದವನೇ ಜ್ಞಾನಗುರುವೆನಿಸುವನು. ಇದೇ ಅಭಿಪ್ರಾಯವನ್ನು ವಾತುಲಾಗಮವು—"ಶಿವರೂಪಾನುಸಂಧಾಯಿ ಜ್ಞಾನಂ ಯೇನೋಪದಿಶ್ಯತೇ । ಮುಮುಕ್ಷೋರ್ಮೋಕ್ಷಸಿದ್ಧ್ಯರ್ಥಂ ಸ ಜ್ಞಾನಗುರುರುಚ್ಯತೇ ॥" ಎಂಬ ಶ್ಲೋಕದಿಂದ, ಮುಮುಕ್ಷುವಿನ ಮೋಕ್ಷಪ್ರಾಪ್ತಿಗಾಗಿ ಯಾವ ಗುರುವು ಶಿವಸ್ವರೂಪಾನುಸಂಧಾನವನ್ನು ಮಾಡುವ ಜ್ಞಾನವನ್ನು ಉಪದೇಶಿಸುವನೋ ಅವನೇ ಜ್ಞಾನಗುರುವೆಂದು ಬೋಧಿಸುತ್ತಿರುವುದು. ॥೨೫॥ ಯಾವನ ಕಟಾಕ್ಷರೂಪಚಂದ್ರನು ಜ್ಞಾನವೆಂಬ ಸಮುದ್ರವನ್ನು ವೃದ್ಧಿಗೊಳಿಸುವನೋ ಹಾಗೂ ಸಂಸಾರವೆಂಬ ಕತ್ತಲೆಯನ್ನು ನಿವಾರಿಸುವನೋ, ಆ ಗುರುವು ಪರಾಪರಜ್ಞಾನಪಾರಂಗತನಾಗಿರುವನು. ॥೨೬॥ ಸೂರ್ಯನು ಹೊರಗಿನ ಕತ್ತಲೆಯನ್ನು ನಾಶಮಾಡುವನು; ಆದರೆ ಈ ಗುರುವೆಂಬ ಸೂರ್ಯನು ಒಳಗೂ ಹೊರಗೂ ತುಂಬಿರುವ ಕತ್ತಲೆಯನ್ನೆಲ್ಲ ನಾಶಮಾಡುವನು. ॥೨೭॥ ಶಿಷ್ಯನು ಧ್ಯಾನಧಾರಣಾದಿಸಂಕಲ್ಪದ ಆವಶ್ಯಕತೆಯಿಲ್ಲದೆ ಶ್ರೀಗುರುವಿನ ಕೃಪಾಕಟಾಕ್ಷಲೇಶಮಾತ್ರದಿಂದಲೇ ಯಾವ ವೇಧವಲ್ಲಿ (ಶಿವತತ್ತ್ವರೂಪಲಕ್ಷ್ಯಪರಿಜ್ಞಾನದಲ್ಲಿ) ಶಿವತ್ವವನ್ನು ಭಾವಿಸುವನೋ, ಆ ವೇಧವು ಶಾಂಭವವೇಧವೆಂದು ಹೇಳಿಸಿಕೊಳ್ಳುವುದು. ॥೨೮॥ ಯಾವನಿಂದ ಶಿವತ್ವಸ್ಫುಟೀಕರಣಪ್ರವೀಣವೂ ನಿರ್ಮಲವೂ ಆದ ಶಿವಜ್ಞಾನವು ಅನುಗ್ರಹಿಸಲ್ಪಡಲು ಶಿಷ್ಯನು ಜೀವನ್ಮುಕ್ತನಾಗುವನೋ, ಆ ಗುರುವು ಶಿವಜ್ಞಾನಸಮುದ್ರನೆನಿಸುವನು. ॥೨೯॥

೪ ಕ್ರಿಯಾಲಿಂಗಸ್ಥಲಂ

ಗುರೋರ್ವಿಜ್ಞಾನಯೋಗೇನ ಕ್ರಿಯಾ ಯತ್ರ ವಿಲೀಯತೇ ।
ತತ್ಕ್ರಿಯಾಲಿಂಗಮಾಖ್ಯಾತಂ ಸರ್ವೈರಾಗಮಪಾರಗೈಃ ॥೩೦॥

ಪರಾನಂದಂ ಚಿದಾಕಾರಂ ಪರಬ್ರಹ್ಮೈವ ಕೇವಲಂ ।
ಲಿಂಗಂ ಸದ್ರೂಪತಾಪನ್ನಂ ಲಕ್ಷ್ಯತೇ ವಿಶ್ವಸಿದ್ಧಯೇ ॥೩೧॥

ಲಿಂಗಮೇವ ಪರಂ ಜ್ಯೋತಿರ್ಭವತಿ ಬ್ರಹ್ಮ ಕೇವಲಂ ।
ತಸ್ಮಾತ್ತತ್ಪೂಜನಾದೇವ ಸರ್ವಕರ್ಮಫಲೋದಯಃ ॥೩೨॥

ಪರಿತ್ಯಜ್ಯ ಕ್ರಿಯಾಃ ಸರ್ವಾ ಲಿಂಗಪೂಜೈಕತತ್ಪರಾಃ ।
ವರ್ತಂತೇ ಯೋಗಿನಃ ಸರ್ವೇ ತಸ್ಮಾಲ್ಲಿಂಗಂ ವಿಶಿಷ್ಯತೇ ॥೩೩॥

ಯಜ್ಞಾದಯಃ ಕ್ರಿಯಾಃ ಸರ್ವಾ ಲಿಂಗಪೂಜಾಂಶಸಮ್ಮಿತಾಃ ।
ಇತಿ ಯತ್ಪೂಜ್ಯತೇ ಸಿದ್ಧೈಸ್ತತ್ಕ್ರಿಯಾಲಿಂಗಮುಚ್ಯತೇ ॥೩೪॥

---

೪ ಕ್ರಿಯಾಲಿಂಗಸ್ಥಲ

ಜ್ಞಾನಗುರುವಿನ ವಿಶೇಷಜ್ಞಾನಯೋಗದಿಂದ ಯಾವ ಲಿಂಗದಲ್ಲಿ ಕ್ರಿಯೆಯು ಲಯವನ್ನು ಹೊಂದುವುದೋ, ಅದು ಕ್ರಿಯಾಲಿಂಗ ಅರ್ಥಾತ್ ಇಷ್ಟಲಿಂಗವೆಂದು ಸಮಸ್ತ ಶಿವಾಗಮಜ್ಞರಿಂದ ಹೇಳಲ್ಪಡುವುದು. ॥೩೦॥ ನಿತ್ಯಾನಂದಸ್ವರೂಪವೂ ಜ್ಞಾನಸ್ವರೂಪವೂ ಆದ ಪರಬ್ರಹ್ಮವೇ ಸಮಸ್ತ ಸತ್ಫಲಗಳ ಸಿದ್ಧಿಗೋಸುಗ ಸದ್ರೂಪತ್ವದಿಂದ ಯುಕ್ತವಾಗಿ ಕ್ರಿಯಾ (ಇಷ್ಟ) ಲಿಂಗರೂಪದಿಂದ ಕಾಣಿಸಿಕೊಳ್ಳುವುದು. ॥೩೧॥ ಪರಂಜ್ಯೋತಿಃಸ್ವರೂಪವೂ ಅದ್ವಿತೀಯವೂ ಆದ ಪರಬ್ರಹ್ಮವೇ ಕ್ರಿಯಾ (ಇಷ್ಟ) ಲಿಂಗವೆನಿಸುವುದು; ಆದಕಾರಣ ಆ ಲಿಂಗಪೂಜೆಯಿಂದಲೇ ಸಮಸ್ತ ಸತ್ಕರ್ಮಫಲಗಳ ಉದಯವಾಗುವುದು. ॥೩೨॥ ಸನಕಾದಿಸಮಸ್ತಯೋಗಿಗಳು ಸಕಲಯೋಗಾದಿ ಕ್ರಿಯೆಗಳನ್ನು ಬಿಟ್ಟು, ಇಷ್ಟಲಿಂಗಪೂಜೈಕಪರಾಯಣರಾಗಿರುತ್ತಾರೆ. ಆದುದರಿಂದಲೇ ಕ್ರಿಯಾಲಿಂಗವು ಶ್ರೇಷ್ಠವೆನಿಸಿಕೊಂಡಿರುತ್ತದೆ. ॥೩೩॥ ಸಮಸ್ತಯಜ್ಞಾದಿಕ್ರಿಯೆಗಳು ಲಿಂಗಪೂಜೆಯ ಒಂದು ಅಂಶಕ್ಕೆ ಸಮಾನವಾದವುಗಳೆಂದು ತಿಳಿದು ಸಿದ್ಧರಿಂದ ಯಾವಲಿಂಗವು ಪೂಜಿಸಲ್ಪಡುವುದೋ, ಅದು ಕ್ರಿಯಾಲಿಂಗವೆನಿಸಿಕೊಳ್ಳುವುದು. ಸತ್ಫಲಾಕಾಂಕ್ಷಿಗಳು ಕ್ರಿಯಾಲಿಂಗವನ್ನು ಪೂಜಿಸಬೇಕೆನ್ನುವುದೇ ಭಗವತ್ಪಾದರ ಆಶಯವು. ॥೩೪॥

ಕಿಂ ಯಜ್ಞೈರಗ್ನಿಹೋತ್ರಾದ್ಯೈಃ ಕಿಂ ತಪೋಭಿಶ್ಚ ದುಶ್ಚರೈಃ ।
ಲಿಂಗಾರ್ಚನರತಿರ್ಯಸ್ಯ ಸ ಸಿದ್ಧಃ ಸರ್ವಕರ್ಮಸು ॥೩೫॥

ಬ್ರಹ್ಮವಿಷ್ಣ್ವಾದಯಃ ಸರ್ವೇ ವಿಬುಧಾ ಲಿಂಗಮಾಶ್ರಿತಾಃ ।
ಸಿದ್ಧಾಃ ಸ್ವಸ್ವಪದೇ ಭಾಂತಿ ಜಗತ್ತಂತ್ರಾಧಿಕಾರಿಣಃ ॥೩೬॥

೫ ಭಾವಲಿಂಗಸ್ಥಲಂ

ಕ್ರಿಯಾ ಯಥಾ ಲಯಂ ಪ್ರಾಪ್ತಾ ತಥಾ ಭಾವೋಽಪಿ ಲೀಯತೇ ।
ಯತ್ರ ತದ್ದೇಶಿಕೈರುಕ್ತಂ ಭಾವಲಿಂಗಮಿತಿ ಸ್ಫುಟಂ ॥೩೭॥

ಭಾವೇನ ಗೃಹ್ಯತೇ ದೇವೋ ಭಗವಾನ್ ಪರಮಃ ಶಿವಃ ।
ಕಿಂ ತೇನ ಕ್ರಿಯತೇ ತಸ್ಯ ನಿತ್ಯಪೂರ್ಣೋ ಹಿ ಸ ಸ್ಮೃತಃ ॥೩೮॥

ಅಖಂಡಪರಮಾನಂದಬೋಧರೂಪಃ ಪರಃ ಶಿವಃ ।
ಭಕ್ತಾನಾಮುಪಚಾರೇಣ ಭಾವಯೋಗಾತ್ ಪ್ರಸೀದತಿ ॥೩೯॥

ಅಗ್ನಿಹೋತ್ರಾದಿಯಜ್ಞಗಳಿಂದ ಏನು ಪ್ರಯೋಜನವು? ಕಠಿನತರವಾದ ತಪಸ್ಸುಗಳಿಂದ ಏನು ಪ್ರಯೋಜನವು? ಯಾವನಿಗೆ ಲಿಂಗಪೂಜೆಯಲ್ಲಿ ಪ್ರೀತಿಯಿರುವುದೋ ಅವನು ಸಮಸ್ತಕರ್ಮಗಳ ಸಿದ್ಧಿಯನ್ನು ಪಡೆಯುವನು. ॥೩೫॥ ಜಗನ್ನಿರ್ಮಾಣಾದಿ ಕ್ರಿಯಾಧಿಕಾರಿಗಳೂ ಸುಪ್ರಸಿದ್ಧರೂ ಆದ ಬ್ರಹ್ಮವಿಷ್ಣ್ವಾದಿಸಮಸ್ತದೇವತೆಗಳು ಶಿವಲಿಂಗವನ್ನು ಆಶ್ರಯಿಸಿದವರಾಗಿ, ತಮ್ಮ ತಮ್ಮ ಸ್ಥಾನದಲ್ಲಿ ಪರಿಶೋಭಿಸುತ್ತಿರುವರು. ॥೩೬॥

೫ ಭಾವಲಿಂಗಸ್ಥಲ

ಕ್ರಿಯೆಯಂತೆ ಭಾವವೂ ಕೂಡ ಯಾವ ಲಿಂಗದಲ್ಲಿ ಲಯವನ್ನು ಹೊಂದುವುದೋ, ಆ ಲಿಂಗವು ಭಾವಲಿಂಗವೆನಿಸುವುದೆಂದು ಆಚಾರ್ಯರು ಸ್ಪಷ್ಟವಾಗಿ ಹೇಳಿರುವರು. ॥೩೭॥ ಷಡ್ಗುಣೈಶ್ವರ್ಯಸಂಪನ್ನನಾದ ಪರಶಿವನು ಭಾವದಿಂದ ಗ್ರಹಿಸಲ್ಪಡುವನು. ಭಾವಗ್ರಾಹ್ಯನಾದ ಆ ಪರಮಾತ್ಮನಿಗೆ ಬಾಹ್ಯಪೂಜನದಿಂದ ಯಾವ ಪ್ರಯೋಜನವು ಸಾಧಿಸಲ್ಪಡುವುದು? ಯಾವುದೂ ಇಲ್ಲವೆಂದು ಭಾವವು. ಏಕೆಂದರೆ—ಅವನು ನಿತ್ಯತೃಪ್ತನಷ್ಟೆ! ॥೩೮॥ ಅಖಂಡಪರಮಾನಂದಸ್ವರೂಪನೂ ಚಿತ್ಸ್ವರೂಪನೂ ಆದ ಪರಶಿವನು ಮಾನಸಿಕೋಪಚಾರದಿಂದಲೂ, ಮನಸ್ಸನ್ನಿವೇಶದಿಂದಲೂ ಭಕ್ತರಿಗೆ ಪ್ರಸನ್ನನಾಗುವನು. ॥೩೯॥

ಮೃಚ್ಛಿಲಾವಿಹಿತಾಲ್ಲಿಂಗಾದ್ಭಾವಲಿಂಗಂ ವಿಶಿಷ್ಯತೇ ।
ನಿರಸ್ತಸರ್ವದೋಷತ್ವಾತ್ ಜ್ಞಾನಮಾರ್ಗಪ್ರವೇಶನಾತ್ ॥೪೦॥

ವಿಹಾಯ ಬಾಹ್ಯಲಿಂಗಾನಿ ಚಿಲ್ಲಿಂಗಂ ಮನಸಿ ಸ್ಮರನ್ ।
ಪೂಜಯೇದ್ಭಾವಪುಷ್ಪೈರ್ಯೋ ಭಾವಲಿಂಗೀತಿ ಕಥ್ಯತೇ ॥೪೧॥

ಮೂಲಾಧಾರೇಽಥವಾ ಚಿತ್ತೇ ಭ್ರೂಮಧ್ಯೇ ವಾ ಸುನಿರ್ಮಲಂ ।
ದೀಪಾಕಾರಂ ಯಜನ್ ಲಿಂಗಂ ಭಾವದ್ರವ್ಯೈಃ ಸ ಯೋಗವಾನ್ ॥೪೨॥

ಸ್ವಾನುಭೂತಿಪ್ರಮಾಣೇನ ಜ್ಯೋತಿರ್ಲಿಂಗೇನ ಸಂಯುತಃ ।
ಶಿಲಾಮೃದ್ದಾರುಸಂಭೂತಂ ನ ಲಿಂಗಂ ಪೂಜಯತ್ಯಸೌ ॥೪೩॥

ಕ್ರಿಯಾರೂಪಾ ತು ಯಾ ಪೂಜಾ ಸಾ ಜ್ಞೇಯಾ ಸ್ವಲ್ಪಸಂವಿದಾಂ ।
ಆಂತರಾ ಭಾವಪೂಜಾ ತು ಶಿವಸ್ಯ ಜ್ಞಾನಿನಾಂ ಮತಾ ॥೪೪॥

ಮೃತ್ತಿಕಾಶಿಲಾದಿಗಳಿಂದಮಾಡಲ್ಪಟ್ಟ ಲಿಂಗಕ್ಕಿಂತಲೂ ಭಾವಲಯಕಾರಣೀಭೂತವಾದ ಪ್ರಾಣಲಿಂಗವು ಶ್ರೇಷ್ಠವೆನಿಸುವುದು. ಏಕೆಂದರೆ—ಆ ಪ್ರಾಣಲಿಂಗವು ಛೇದನಭೇದನಾದಿದೋಷಶೂನ್ಯವಾಗಿದ್ದು ಜ್ಞಾನಮಾರ್ಗವನ್ನುಂಟುಮಾಡುವುದಷ್ಟೆ! ॥೪೦॥ ಶಿಲಾದಿನಿರ್ಮಿತಬಾಹ್ಯಲಿಂಗಗಳನ್ನು ಬಿಟ್ಟು "ತತ್ರಾಣೇಷ್ವಂತರ್ಮನಸೋ ಲಿಂಗಮಾಹುಃ" ಎಂಬ ಅಥರ್ವಶ್ರುತಿಪ್ರಸಿದ್ಧವಾದ ಚಿನ್ಮಯಪ್ರಾಣಲಿಂಗವನ್ನು ಯಾವನು ಹೃದಯಕಮಲದಲ್ಲಿ ಸ್ಮರಿಸುವಂಥವನಾಗಿ ಭಾವಕುಸುಮಗಳಿಂದ ಪೂಜಿಸುವನೋ, ಅವನು ಭಾವಗೋಚರೀಭೂತಪ್ರಾಣಲಿಂಗಿಯೆಂದು ಹೇಳಿಸಿಕೊಳ್ಳುವನು. ॥೪೧॥ ಯಾವನು ಅತ್ಯಂತನಿರ್ಮಲವೂ ಜ್ಯೋತಿರಾಕಾರವೂ ಆದ ಪ್ರಾಣಲಿಂಗವನ್ನು ಮೂಲಾಧಾರದಲ್ಲಾಗಲಿ, ಹೃದಯಕಮಲದಲ್ಲಾಗಲಿ ಅಥವಾ ಭ್ರೂಮಧ್ಯದಲ್ಲಾಗಲಿ ಮಾನಸಿಕೋಪಚಾರಗಳಿಂದ ಪೂಜಿಸುವನೋ, ಅವನು ಶಿವಯೋಗಿಯೆಂದು ಹೇಳಿಸಿಕೊಳ್ಳುವನು. ॥೪೨॥ ಸ್ವಾನುಭವಪ್ರಮಾಣಗಮ್ಯವಾದ ಜ್ಯೋತಿರ್ಲಿಂಗದಿಂದ ಯುಕ್ತನಾದ ಈ ಶಿವಯೋಗಿಯು ಶಿಲಾ-ಮೃತ್ತಿಕಾ-ಕಾಷ್ಠಾದಿಗಳಿಂದ ನಿರ್ಮಿತವಾದ ಲಿಂಗವನ್ನು ಪೂಜಿಸುವುದಿಲ್ಲ. ॥೪೩॥ ಶಿವನ ವಿಷಯದಲ್ಲಿ ಕರ್ಮಕಾಂಡೋಕ್ತವಾದ ಯಾವ ಕ್ರಿಯಾರೂಪಪೂಜೆಯುಂಟೋ, ಅದು ಅಲ್ಪಜ್ಞರಿಗೆ ಹೇಳಲ್ಪಟ್ಟಿದೆ; ಆಂತರಂಗಿಕವಾದ ಭಾವಪೂಜೆಯು ಪೂರ್ಣಜ್ಞಾನಿಗಳಿಗೆ ಹೇಳಲ್ಪಟ್ಟಿದೆ. ಮಹಾಜ್ಞಾನಿಗಳಾದವರು ಶಿವನನ್ನು ಗಂಧಾಕ್ಷತಧೂಪದೀಪಾದಿಬಾಹ್ಯೋಪಚಾರಗಳಿಂದ ಪೂಜಿಸದೆ, ಶಾಂತಿ-ವಿವೇಕಾದ್ಯಾಂತರೋಪಚಾರಗಳಿಂದ ಪೂಜಿಸಬೇಕೆಂದು ಭಾವವು. ॥೪೪॥

೬ ಜ್ಞಾನಲಿಂಗಸ್ಥಲಂ

ತದ್ಭಾವಜ್ಞಾಪಕಂ ಜ್ಞಾನಂ ಲಯಂ ಯತ್ರ ಸಮಶ್ನುತೇ ।
ತಜ್ಜ್ಞಾನಲಿಂಗಮಾಖ್ಯಾತಂ ಶಿವತತ್ತ್ವಾರ್ಥಕೋವಿದೈಃ ॥೪೫॥

ತ್ರಿಮೂರ್ತಿಭೇದನಿರ್ಮುಕ್ತಂ ತ್ರಿಗುಣಾತೀತವೈಭವಂ ।
ಬ್ರಹ್ಮ ಯದ್ಬೋಧ್ಯತೇ ತತ್ತು ಜ್ಞಾನಲಿಂಗಮುದಾಹೃತಂ ॥೪೬॥

ಸ್ಥೂಲೇ ಕ್ರಿಯಾಸಮಾಪತ್ತಿಃ ಸೂಕ್ಷ್ಮೇ ಭಾವಸ್ಯ ಸಂಭವಃ ।
ಸ್ಥೂಲಸೂಕ್ಷ್ಮಪದಾತೀತೇ ಜ್ಞಾನಮೇವ ಪರಾತ್ಮನಿ ॥೪೭॥

ಕಲ್ಪಿತಾನಿ ಹಿ ರೂಪಾಣಿ ಸ್ಥೂಲಾನಿ ಪರಮಾತ್ಮನಃ ।
ಸೂಕ್ಷ್ಮಾಣ್ಯಪಿ ಚ ತೈಃ ಕಿಂ ವಾ ಪರಬೋಧಂ ಸಮಾಚರೇತ್ ॥೪೮॥

ಪರಾತ್ಪರಂ ತು ಯದ್ಬ್ರಹ್ಮ ಪರಮಾನಂದಲಕ್ಷಣಂ ।
ಶಿವಾಖ್ಯಂ ಜ್ಞಾಯತೇ ಯೇನ ಜ್ಞಾನಲಿಂಗೀ ಸ ಕಥ್ಯತೇ ॥೪೯॥

---

೬ ಜ್ಞಾನಲಿಂಗಸ್ಥಲ

ಆ ಪ್ರಾಣಲಿಂಗಪ್ರಕಾಶಕವಾದ ಜ್ಞಾನವು ಯಾವ ಲಿಂಗದಲ್ಲಿ ಲಯವನ್ನು ಹೊಂದುವುದೋ, ಜ್ಞಾನಾಶ್ರಯಿಭೂತವಾದ ಆ ಲಿಂಗವು ಜ್ಞಾನಲಿಂಗ (ತೃಪ್ತಿಲಿಂಗ) ವೆಂದು ಶಿವತತ್ತ್ವಜ್ಞಾನಿಗಳಿಂದ ಹೇಳಲ್ಪಡುವುದು. ॥೪೫॥ ಯಾವ ಪರಬ್ರಹ್ಮವು ಬ್ರಹ್ಮ-ವಿಷ್ಣು-ರುದ್ರರೂಪಮೂರ್ತಿತ್ರಯಭೇದರಹಿತವಾದುದೆಂದೂ, ಸತ್ತ್ವರಜಸ್ತಮೋಗುಣಾತೀತವೈಭವವುಳ್ಳದೆಂದೂ ಬೋಧಿಸಲ್ಪಡುವುದೋ, ಆ ಬ್ರಹ್ಮವೇ ಜ್ಞಾನಲಿಂಗ (ತೃಪ್ತಿಲಿಂಗ) ವೆಂದು ಹೇಳಿಸಿಕೊಳ್ಳುವುದು. ॥೪೬॥ ಸ್ಥೂಲವಾದ ಇಷ್ಟಲಿಂಗದಲ್ಲಿ ಕ್ರಿಯಾರೂಪಪೂಜಾಪ್ರಾಪ್ತಿಯಾಗುವುದು ; ಸೂಕ್ಷ್ಮವಾದ ಪ್ರಾಣಲಿಂಗದಲ್ಲಿ ನಿರ್ಮಲಭಾವಪ್ರಾಪ್ತಿಯಾಗುವುದು; ಸ್ಥೂಲಸೂಕ್ಷ್ಮಾತೀತವಾದ ಜ್ಞಾನಲಿಂಗ (ತೃಪ್ತಿಲಿಂಗ) ದಲ್ಲಿ ಕೇವಲಜ್ಞಾನಪ್ರಾಪ್ತಿಯಾಗುವುದು. ॥೪೭॥ ಪರಮೇಶ್ವರನಿಗೆ ಸ್ಥೂಲಸೂಕ್ಷ್ಮರೂಪಗಳು ಕಲ್ಪಿತವಾಗಿರುವುವು ; ಅವುಗಳಿಂದೇನು ಪ್ರಯೋಜನವು ? ಆದುದರಿಂದ ಪರಬ್ರಹ್ಮರೂಪಜ್ಞಾನಲಿಂಗವನ್ನೇ ಸರ್ವೋತ್ಕೃಷ್ಟವನ್ನಾಗಿ ತಿಳಿಯಬೇಕು. ॥೪೮॥ ಪರಾತ್ಪರವೂ ಪರಮಾನಂದರೂಪವೂ ಆದ ಯಾವ ಶಿವನಾಮಕಪರಬ್ರಹ್ಮವು ಯಾವನಿಂದ ತಿಳಿಯಲ್ಪಡುವುದೋ ಅವನು ಜ್ಞಾನಲಿಂಗಿಯೆಂದು ಹೇಳಿಸಿಕೊಳ್ಳುವನು. ॥೪೯॥

ಬಾಹ್ಯಕ್ರಿಯಾಂ ಪರಿತ್ಯಜ್ಯ ಚಿಂತಾಮಪಿ ಚ ಮಾನಸೀಂ ।
ಅಖಂಡಜ್ಞಾನರೂಪತ್ವಂ ಯೋ ಭಜೇನ್ಮುಕ್ತ ಏವ ಸಃ ॥೫೦॥

೭ ಸ್ವಸ್ಥಲಂ

ತದ್ಭಾವಜ್ಞಾಪಕಂ ಜ್ಞಾನಂ ಯತ್ರ ಜ್ಞಾನೇ ಲಯಂ ವ್ರಜೇತ್ ।
ತದ್ವಾನೇಷ ಸಮಾಖ್ಯಾತಃ ಸ್ವಾಭಿಧಾನೋ ಮನೀಷಿಭಿಃ ॥೫೧॥

ಸ್ವಚ್ಛಂದಾಚಾರಸಂತುಷ್ಟೋ ಜ್ಯೋತಿರ್ಲಿಂಗಪರಾಯಣಃ ।
ಆತ್ಮಸ್ಥಸಕಲಾಕಾರಃ ಸ್ವಾಭಿಧೋ ಮುನಿಸತ್ತಮಃ ॥೫೨॥

ನಿರ್ಮಮೋ ನಿರಹಂಕಾರೋ ನಿರಸ್ತಕ್ಲೇಶಪಂಚಕಃ ।
ಭಿಕ್ಷಾಶೀ ಸಮಬುದ್ಧಿಶ್ಚ ಮುಕ್ತಪ್ರಾಯೋ ಮುನಿರ್ಭವೇತ್ ॥೫೩॥

ಯದೃಚ್ಛಾಲಾಭಸಂತುಷ್ಟೋ ಭಸ್ಮನಿಷ್ಠೋ ಜಿತೇಂದ್ರಿಯಃ ।
ಸಮವೃತ್ತಿರ್ಭವೇದ್ಯೋಗೀ ಭಿಕ್ಷುಕೇ ವಾ ನೃಪೇಽಥ ವಾ ॥೫೪॥

ಯಾವನು ಇಷ್ಟಲಿಂಗಸಂಬಂಧವಾದ ಬಾಹ್ಯಪೂಜೆಯನ್ನೂ, ಪ್ರಾಣಲಿಂಗಸಂಬಂಧವಾದ ಆಂತರಧ್ಯಾನಪೂಜೆಯನ್ನೂ ಬಿಟ್ಟು, ಅಖಂಡಜ್ಞಾನಲಿಂಗಸ್ವರೂಪವನ್ನು ಹೊಂದುವನೋ, ಅವನೇ ಮುಕ್ತನೆನಿಸುವನು. ॥೫೦॥

೭ ಸ್ವಸ್ಥಲ

ಆ ಜ್ಞಾನಲಿಂಗದ ಸ್ವರೂಪವನ್ನು ತೋರ್ಪಡಿಸುವ ಜ್ಞಾನವು ಯಾವ ಜ್ಞಾನದಲ್ಲಿ ಲಯವನ್ನು ಹೊಂದುವುದೋ, ಅಂತಹ ಜ್ಞಾನವುಳ್ಳವನೇ ಸ್ವಜಂಗಮನೆಂದು ಜ್ಞಾನಿಗಳಿಂದ ಹೇಳಿಸಿಕೊಳ್ಳುವನು. ॥೫೧॥ ಸ್ವಜಂಗಮನು ಸ್ವೇಚ್ಛಾಚಾರಸಂತುಷ್ಟನೂ, ಜ್ಯೋತಿರ್ಲಿಂಗನಿಷ್ಠನೂ, ಸಮಸ್ತಪ್ರಪಂಚಸ್ವರೂಪವನ್ನು ತನ್ನಲ್ಲಿರಿಸಿಕೊಂಡವನೂ, ಮುನಿಶ್ರೇಷ್ಠನೂ ಆಗಿರುವನು. ॥೫೨॥ ವಿಷಯಮಮತಾರಹಿತನೂ, ಶರೀರಾಭಿಮಾನಶೂನ್ಯನೂ, ಅವಿದ್ಯಾದಿಪಂಚಕ್ಲೇಶದೂರನೂ, ಭಿಕ್ಷಾನ್ನಭೋಜಿಯೂ, ಲೋಷ್ಟಾಶ್ಮಕಾಂಚನಾದಿಗಳಲ್ಲಿ ಸಮಬುದ್ಧಿಯುಳ್ಳವನೂ ಆದ ಈ ಮುನಿಯು ಜೀವನ್ಮುಕ್ತನೆನಿಸುವನು. ॥೫೩॥ ತಾನಾಗಿಯೇ ಪ್ರಾಪ್ತವಾದುದರಲ್ಲಿ ಸಂತುಷ್ಟನೂ, ಭಸ್ಮನಿಷ್ಠನೂ, ಜಿತೇಂದ್ರಿಯನೂ ಆದ ಈ ಯೋಗಿಯು ಭಿಕ್ಷುಕನಲ್ಲಾಗಲಿ ಅಥವಾ ಭೂಪತಿಯಲ್ಲಾಗಲಿ ಸಮಾನವೃತ್ತಿಯುಳ್ಳವನಾಗಿರುವನು. ॥೫೪॥

ಪಶ್ಯನ್ ಸರ್ವಾಣಿ ಭೂತಾನಿ ಸಂಸಾರಸ್ಥಾನಿ ಸರ್ವಶಃ ।
ಸ್ಮಯಮಾನಃ ಪರಾನಂದೇ ಲೀನಾತ್ಮಾ ವರ್ತತೇ ಸುಧೀಃ ॥೫೫॥

ಧ್ಯಾನಂ ಶೈವಂ ತಥಾ ಜ್ಞಾನಂ ಭಿಕ್ಷಾ ಚೈಕಾಂತಶೀಲತಾ ।
ಯತೇಶ್ಚತ್ವಾರಿ ಕರ್ಮಾಣಿ ನ ಪಂಚಮಮಿಹೇಷ್ಯತೇ ॥೫೬॥

೮ ಚರಸ್ಥಲಂ

ಸ್ವರೂಪಜ್ಞಾನಸಂಪನ್ನೋ ಧ್ವಸ್ತಾಹಂಮಮತಾಕೃತಿಃ ।
ಸ್ವಯಮೇವ ಸ್ವಯಂ ಭೂತ್ವಾ ಚರತೀತಿ ಚರಾಭಿಧಃ ॥೫೭॥

ಕಾಮಕ್ರೋಧಾದಿನಿರ್ಮುಕ್ತಃ ಶಾಂತಿದಾಂತಿಸಮನ್ವಿತಃ ।
ಸಮಬುಧ್ಧ್ಯಾ ಚರೇದ್ಯೋಗೀ ಸರ್ವತ್ರ ಶಿವಬುದ್ಧಿಮಾನ್ ॥೫೮॥

ಇದಂ ಮುಖ್ಯಮಿದಂ ಹೀನಮಿತಿ ಚಿಂತಾಮಕಲ್ಪಯನ್ ।
ಸರ್ವತ್ರ ಸಂಚರೇದ್ಯೋಗೀ ಸರ್ವಂ ಬ್ರಹ್ಮೇತಿ ಭಾವಯನ್ ॥೫೯॥

ಈ ಯೋಗಿಯು ಪ್ರಪಂಚದಲ್ಲಿರುವ ಸಮಸ್ತಪ್ರಾಣಿಗಳನ್ನು ಎಲ್ಲ ಕಡೆಗೂ ಆಶ್ಚರ್ಯದಿಂದೊಡಗೂಡಿ ನೋಡುವವನಾಗಿ, ಪರಮಾನಂದಸ್ವರೂಪವಾದ ಮಹಾಲಿಂಗದಲ್ಲಿ ಲೀನಾತ್ಮನಾಗಿರುವನು. ॥೫೫॥ ಈ ಸ್ವಜಂಗಮನಿಗೆ ಶಿವಧ್ಯಾನ, ಶಿವಜ್ಞಾನ, ಭಿಕ್ಷಾನ್ನಸೇವನ ಮತ್ತು ಏಕಾಂತವಾಸಗಳೆಂಬ ನಾಲ್ಕೇ ಕರ್ಮಗಳುಂಟು. ಐದನೆಯ ಕರ್ಮವಾವುದೂ ಇರುವುದಿಲ್ಲ. ॥೫೬॥

೮ ಚರಸ್ಥಲ

ಸ್ವಸ್ವರೂಪಜ್ಞಾನಸಂಪನ್ನನೂ, ಅಹಂಕಾರಮಮಕಾರದೂರನೂ ಆದ ಸ್ವಜಂಗಮನು ತಾನೇತಾನಾಗಿ ಸಂಚರಿಸುವುದರಿಂದ ಚರಜಂಗಮನೆಂದು ಹೇಳಿಸಿಕೊಳ್ಳುವನು. ॥೫೭॥ ಕಾಮ-ಕ್ರೋಧ-ಲೋಭ-ಮೋಹ-ಮದ-ಮತ್ಸರಗಳಿಂದ ಬಿಡಲ್ಪಟ್ಟವನೂ, ಶಾಂತಿದಾಂತಿಗುಣಗಳಿಂದ ಕೂಡಿದವನೂ ಸರ್ವತ್ರ ಶಿವಭಾವವುಳ್ಳವನೂ ಆದ ಈ ಚರಜಂಗಮನಾಮಕಯೋಗಿಯು ಸಮಬುದ್ಧಿಯಿಂದ ಸಂಚರಿಸುವನು. ॥೫೮॥ ಈ ಶಿವಯೋಗಿಯು, ಇದು ಮುಖ್ಯವು ಇದು ಕನಿಷ್ಠವು ಎಂದು ಯೋಚಿಸದೆ, ಸರ್ವವೂ ಪರಶಿವಬ್ರಹ್ಮವೆಂದು ಭಾವಿಸುವಂಥವನಾಗಿ ಸರ್ವತ್ರ ಸಂಚರಿಸುವನು. ॥೫೯॥

ನ ಸನ್ಮಾನೇಷು ಸಂಪ್ರೀತಿಂ ನಾವಮಾನೇಷು ಚ ವ್ಯಥಾಂ ।
ಕುರ್ವಾಣಃ ಸಂಚರೇದ್ಯೋಗೀ ಕೂಟಸ್ಥೋ ಸ್ವಾತ್ಮನಿ ಸ್ಥಿತಃ ॥೬೦॥

ಅಪ್ರಾಕೃತಗುಣೈಃ ಸ್ವೀಯೈಃ ಸರ್ವಂ ವಿಸ್ಮಾಪಯನ್ ಜನಂ ।
ಅದ್ವೈತಪರಮಾನಂದಮುದಿತೋ ದೇಹಿವಚ್ಚರೇತ್ ॥೬೧॥

ನ ಪ್ರಪಂಚೇ ನ ದೇಹೇ ಚ ನ ಧರ್ಮೇ ನ ಚ ದುಷ್ಕೃತೇ ।
ಗತವೈಷಮ್ಯಧೀರ್ಧೀರೋ ಯತಿಶ್ಚರತಿ ದೇಹಿವತ್ ॥೬೨॥

ಪ್ರಾಕೃತೈಶ್ವರ್ಯಸಂಪತ್ತಿಪರಾಙ್ಮುಖಮನಃಸ್ಥಿತಿಃ ।
ಚಿದಾನಂದನಿಜಾತ್ಮಸ್ಥೋ ಮೋದತೇ ಮುನಿಪುಂಗವಃ ॥೬೩॥

೯ ಪರಸ್ಥಲಂ

ಸ್ವಯಮೇವ ಸ್ವಯಂ ಭೂತ್ವಾ ಚರತಃ ಸ್ವಸ್ವರೂಪತಃ ।
ಪರಂ ನಾಸ್ತೀತಿ ಬೋಧಸ್ಯ ಪರತ್ವಮಭಿಧೀಯತೇ ॥೬೪॥

ಈ ಶಿವಯೋಗಿಯು ಸಮ್ಮಾನಗಳಲ್ಲಿ ಪ್ರೀತಿಯನ್ನಾಗಲಿ, ಅವಮಾನಗಳಲ್ಲಿ ವ್ಯಥೆಯನ್ನಾಗಲಿ ಮಾಡದೆ, ಕೂಟಸ್ಥನಾದ ಪರಮೇಶ್ವರನಲ್ಲಿ ಆಸಕ್ತನಾಗಿ ಸಂಚರಿಸುವನು. ॥೬೦॥ ಶಿವಾದ್ವೈತಜ್ಞಾನದಿಂದುತ್ಪನ್ನವಾದ ಮಹಾನಂದದಿಂದ ಸಂತುಷ್ಟನಾದ ಈ ಶಿವಯೋಗಿಯು, ತನ್ನ ಲೋಕೋತ್ತರಗುಣಗಳಿಂದ ಸಮಸ್ತ ಜನರನ್ನೂ ಆಶ್ಚರ್ಯಗೊಳಿಸುವವನಾಗಿ, ದೇಹಧಾರಿಮನುಷ್ಯನಂತೆ ವರ್ತಿಸುತ್ತಿರುವನು. ॥೬೧॥ ವಿಧಿನಿಷೇಧಾದಿಗಳಲ್ಲಿ ವಿಷಮಬುದ್ಧಿದೂರನಾದ ಶಿವಯೋಗಿಯು ಪ್ರಾಕೃತಮನುಷ್ಯನಂತೆ ಪ್ರಪಂಚದಲ್ಲಾಗಲಿ, ತನ್ನ ದೇಹದ ವಿಷಯದಲ್ಲಾಗಲಿ, ಪುಣ್ಯಕಾರ್ಯದಲ್ಲಾಗಲಿ ಅಥವಾ ಪಾಪಕಾರ್ಯದಲ್ಲಾಗಲಿ ಪ್ರವರ್ತಿಸುವುದಿಲ್ಲ. ॥೬೨॥ ಪ್ರಾಕೃತವಾದ ಬ್ರಹ್ಮ-ವಿಷ್ಣ್ವಾದ್ಯೈಶ್ವರ್ಯದಲ್ಲಿ ವಿಮುಖವಾದ ಚಿತ್ತವೃತ್ತಿಯುಳ್ಳ ಯತಿಶ್ರೇಷ್ಠನು ಚಿದಾನಂದಸ್ವರೂಪನಿಷ್ಠನಾಗಿ ಪರಮಾನಂದವನ್ನು ಪಡೆಯುತ್ತಾನೆ. ॥೬೩॥

೯ ಪರಸ್ಥಲ

ತಾನೇತಾನಾಗಿ ಸಂಚರಿಸುತ್ತಿರುವ ಶಿವಯೋಗಿಗೆ, ಸ್ವಸ್ವರೂಪಕ್ಕಿಂತಲೂ ಶ್ರೇಷ್ಠವಾದುದು ಯಾವುದೂ ಇಲ್ಲವೆಂಬ ಜ್ಞಾನವು, ಪರಲಿಂಗವೆಂದು ಹೇಳಿಸಿಕೊಳ್ಳುವುದು. ಅರ್ಥಾತ್ ಸ್ವಸ್ವರೂಪಜ್ಞಾನಿಯೇ ಪರಜಂಗಮನೆಂದು ಹೇಳಿಸಿಕೊಳ್ಳುವನೆಂದು ಭಾವವು. ॥೬೪॥

ಸ್ವತಂತ್ರಃ ಸರ್ವಕೃತ್ಯೇಷು ಸ್ವಪರತ್ವೇನ ಭಾವಿತಃ ।
ತೃಣೀಕುರ್ವನ್ ಜಗಜ್ಜಾಲಂ ವರ್ತತೇ ಶಿವಯೋಗಿರಾಟ್ ॥೬೫॥
ವರ್ಣಾಶ್ರಮಸದಾಚಾರಮಾರ್ಗನಿಷ್ಠಾಪರಾಙ್ಮುಖಃ ।
ಸರ್ವೋತ್ಕೃಷ್ಟಂ ಸ್ವಮಾತ್ಮಾನಂ ಪಶ್ಯನ್ ಯೋಗೀ ತು ಮೋದತೇ ॥೬೬॥

ತನ್ನನ್ನು ಪರಲಿಂಗಸ್ವರೂಪದಿಂದ ಭಾವಿಸಿರುವವನೂ, ಸರ್ವಕೃತ್ಯಗಳಲ್ಲಿ ಸ್ವತಂತ್ರನೂ ಆದ ಶಿವಯೋಗೀಶ್ವರನು ಜಗಜ್ಜಾಲವನ್ನು ತೃಣೀಕರಿಸಿ ವರ್ತಿಸುತ್ತಾನೆ. ॥೬೫॥ ವರ್ಣಾಶ್ರಮ-ಸದಾಚಾರನಿಷ್ಠೆಯಿಂದ ವಿಮುಖನಾದ ಶಿವಯೋಗಿಯು ಸ್ವಸ್ವರೂಪವನ್ನು ಸರ್ವೋತ್ಕೃಷ್ಟವನ್ನಾಗಿ ತಿಳಿಯುವವನಾಗಿ ಆನಂದಮಯನಾಗುವನು. ಇದರಿಂದ ಶಿವಯೋಗಿಯು ಪ್ರಾಕೃತವರ್ಣಾಶ್ರಮಾಚಾರಗಳಿಂದ ದೂರನಾಗುವನೆಂದು ಹೇಳಬೇಕಲ್ಲದೆ, ಅಪ್ರಾಕೃತವರ್ಣಾಶ್ರಮಾಚಾರಗಳಿಂದ ದೂರನಾಗುವನೆಂದು ಹೇಳಲಿಕ್ಕಾಗುವುದಿಲ್ಲ. ಏಕೆಂದರೆ—ಈ ಸ್ಥಲದ ಮುಂದಿನ ಸ್ಥಲವಾದ ಕ್ರಿಯಾಗಮಸ್ಥಲದಲ್ಲಿ ಶ್ರೀರೇಣುಕಭಗವತ್ಪಾದರು—"ನ ಯಥಾ ವಿಧಿಲೋಪಃ ಸ್ಯಾದ್ಯಥಾ ದೇವಃ ಪ್ರಸೀದತಿ । ಯಥಾಽಽಗಮಃ ಪ್ರಮಾಣಂ ಸ್ಯಾತ್ತಥಾ ಕರ್ಮ ಸಮಾಚರೇತ್ ॥" "ಜ್ಞಾನೇನಾಚಾರಯುಕ್ತೇನ ಪ್ರಸೀದತಿ ಮಹೇಶ್ವರಃ । ತಸ್ಮಾದಾಚಾರವಾನ್ ಜ್ಞಾನೀ ಭವೇದಾದೇಹಪಾತನಂ ॥" ಇತ್ಯಾದಿಶ್ಲೋಕಗಳಲ್ಲಿ–ವಿಧಿಗೆ ಲೋಪವು ಬಾರದಂತೆ ಕರ್ಮವನ್ನಾಚರಿಸಬೇಕೆಂದೂ, ಆಚಾರಯುಕ್ತವಾದ ಜ್ಞಾನದಿಂದಲೇ ಪರಮೇಶ್ವರನು ಪ್ರಸನ್ನನಾಗುವನೆಂದೂ, ಆದುದರಿಂದ ಜ್ಞಾನಿಯು ದೇಹಪಾತವಾಗುವವರೆಗೂ ಆಚಾರಯುಕ್ತನಾಗಿರಬೇಕೆಂದೂ ಬೋಧಿಸಿರುವುದರಿಂದಲೂ, ಈ ಸ್ಥಲದ ಮುಂದಿರುವ ಧರ್ಮಾಚಾರಸ್ಥಲದಲ್ಲಿ—"ಜ್ಞಾನಾಮೃತೇನ ತೃಪ್ತೋಽಪಿ ಯೋಗೀ ಧರ್ಮಂ ನ ಸಂತ್ಯಜೇತ್ । ಆಚಾರಂ ಮಹತಾಂ ದೃಷ್ಟ್ವಾ ಪ್ರವರ್ತಂತೇ ಹಿ ಲೌಕಿಕಾಃ ॥" ದೊಡ್ಡವರ ಆಚಾರವನ್ನು ನೋಡಿ ಲೌಕಿಕರು ಆಚಾರದಲ್ಲಿ ಪ್ರವರ್ತಿಸುತ್ತಿರುವುದರಿಂದ, ಶಿವಯೋಗಿಯು ಜ್ಞಾನಾಮೃತದಿಂದ ತೃಪ್ತನಾದರೂ ಧರ್ಮವನ್ನು ಬಿಡಬಾರದೆಂದು ಸ್ಪಷ್ಟವಾಗಿ ಬೋಧಿಸಿರುವುದರಿಂದಲೂ, ಶಿವವರ್ಣಾಶ್ರಮಧರ್ಮಗಳನ್ನು ದೂರೀಕರಿಸಲಿಕ್ಕೆ ಬರುವುದಿಲ್ಲವೆಂದು ಸ್ಪಷ್ಟವಾಗುವುದು. ಆಚಾರವು ವರ್ಣಾಶ್ರಮನಿಷ್ಠವಾಗಿರುವುದಲ್ಲದೆ ಬೇರೆಯಿಲ್ಲ. ಆದುದರಿಂದ ಈ ಶ್ಲೋಕಾಭಿಪ್ರಾಯವು ಪ್ರಾಕೃತವರ್ಣಾಶ್ರಮಾಚಾರದೂರೀಕರಣವಿಷಯದಲ್ಲಿರುವುದಲ್ಲದೆ, ಅಪ್ರಾಕೃತವರ್ಣಾಶ್ರಮಾಚಾರದೂರೀಕರಣವಿಷಯದಲ್ಲಿರುವುದಿಲ್ಲವೆಂದು ತಿಳಿಯಬೇಕು. ॥೬೬॥

ವಿಶ್ವಾತೀತಂ ಪರಂ ಬ್ರಹ್ಮ ಶಿವಾಖ್ಯಂ ಚಿತ್ಸ್ವರೂಪಕಂ ।
ತದೇವಾಹಮಿತಿ ಜ್ಞಾನೀ ಸರ್ವೋತ್ಕೃಷ್ಟಃ ಸ ಉಚ್ಯತೇ ॥೬೭॥

ಅಚಲಂ ಧ್ರುವಮಾತ್ಮಾನಮನುಪಶ್ಯನ್ನಿರಂತರಂ ।
ನಿರಸ್ತವಿಶ್ವವಿಭ್ರಾಂತಿರ್ಜೀವನ್ಮುಕ್ತೋ ಭವೇನ್ಮುನಿಃ ॥೬೮॥

ಬ್ರಹ್ಮಾದ್ಯಾಃ ಕಿಂ ನು ಕುರ್ವಂತಿ ದೇವತಾಃ ಕರ್ಮಮಾರ್ಗಗಾಃ ।
ಕರ್ಮಾತೀತಪದಸ್ಥಸ್ಯ ಸ್ವಯಂ ಬ್ರಹ್ಮಸ್ವರೂಪಿಣಃ ॥೬೯॥

ಸ್ವೇಚ್ಛಯಾ ಸಂಚರನ್ ಯೋಗೀ ವಿಮುಂಚನ್ ದೇಹಮಾನಿತಾಂ ।
ದರ್ಶನೈಃ ಸ್ಪರ್ಶನೈಃ ಸರ್ವಾನಜ್ಞಾನಪಿ ವಿಮೋಚಯೇತ್ ॥೭೦॥

ಶಿವನಾಮಕವಾದ ಪರಬ್ರಹ್ಮವು ವಿಶ್ವಾತೀತವೂ ಚಿತ್ಸ್ವರೂಪವೂ ಆಗಿರುವುದು. ಅಂತಹ ಪರಶಿವಬ್ರಹ್ಮವೇ ನಾನೆಂಬ ಜ್ಞಾನವುಳ್ಳವನು ಸರ್ವೋತ್ಕೃಷ್ಟನೆಂದು ಹೇಳಿಸಿಕೊಳ್ಳುವನು. ॥೬೭॥ ಅಚಲವೂ ನಿತ್ಯವೂ ಆದ ಸ್ವಸ್ವರೂಪವನ್ನು ಎಡೆಬಿಡದೆ ಕಾಣುತ್ತಿರುವ ಶಿವಯೋಗಿಯು ಪ್ರಾಪಂಚಿಕಭ್ರಾಂತಿದೂರನಾಗಿ ಜೀವನ್ಮುಕ್ತನೆನಿಸುವನು. ಇವನು ಆಹಾರವ್ಯವಹಾರಾದಿಗಳಿಂದ ಯುಕ್ತನಾಗಿದ್ದರೂ, ಪುನರ್ಜನ್ಮಶೂನ್ಯನಾದುದರಿಂದ ಜೀವನ್ಮುಕ್ತನಾಗುವನೆಂದು ಭಾವವು. ॥೬೮॥ ಸ್ವಯಂ ಬ್ರಹ್ಮಸ್ವರೂಪನೂ, ಪುಣ್ಯಪಾಪಾದಿಕರ್ಮಾತೀತಸ್ಥಾನಾಪನ್ನನೂ ಆದ ಶಿವಯೋಗಿಗೆ ಕರ್ಮಮಾರ್ಗದಲ್ಲಿರುವ ಬ್ರಹ್ಮಾದಿದೇವತೆಗಳು ಏನು ಮಾಡುವರು ? ಏನನ್ನೂ ಮಾಡಲು ಸಮರ್ಥರಾಗುವುದಿಲ್ಲವೆಂದು ಭಾವವು. ॥೬೯॥ ದೇಹಾಭಿಮಾನವನ್ನು ಬಿಟ್ಟಿರುವ ಶಿವಯೋಗಿಯು ಸ್ವೇಚ್ಛೆಯಿಂದ ಸಂಚರಿಸುವವನಾಗಿ, ತನ್ನ ದರ್ಶನಸ್ಪರ್ಶನಗಳಿಂದ ಸಮಸ್ತಪ್ರಾಕೃತರನ್ನೂ ಮುಕ್ತರನ್ನಾಗಿ ಮಾಡುವನು. ಸದಾ ತೃಪ್ತಿಂ ಸಮಾಸಾದ್ಯ ಸದಾಽಽನಂದೀ ಭವನ್ ಸ್ವಯಂ । ಸ್ವಪಾದದರ್ಶನಾದೇವ ಭಕ್ತಾನಾಂ ಚಾನ್ಯದೇಹಿನಾಂ ॥ ದತ್ವಾ ಮೋಕ್ಷಂ ವಿಧೀಂದ್ರಾದಿಸುರಸಂದೋಹದುರ್ಲಭಂ । ನಿರಂಜನಃ ಸನ್ ಯೋ ಲೋಕೇ ಚರೇತ್ ಸ ಪರಜಂಗಮಃ ॥ ಎಂಬ ಶಿವಾಗಮಪ್ರಮಾಣದಂತೆ, ಯಾವನು ಯಾವಾಗಲೂ ತೃಪ್ತಿಯನ್ನು ಹೊಂದಿ, ಸಂತೋಷದಿಂದಿರುವವನಾಗಿ, ತನ್ನ ಪಾದದರ್ಶನದಿಂದ ತನ್ನ ಭಕ್ತರಿಗೂ ಮತ್ತು ಇತರರಿಗೂ ಬ್ರಹ್ಮೇಂದ್ರಾದಿಗಳಿಗೂ ಸಹ ದುರ್ಲಭವಾದ ಮೋಕ್ಷವನ್ನು ಅನುಗ್ರಹಿಸಿ ಲೋಕದಲ್ಲಿ ಸಂಚರಿಸುವನೋ, ಅವನೇ ಪರಜಂಗಮನೆಂದು ಹೇಳಿಸಿಕೊಳ್ಳುವನು. ॥೭೦॥

ನಿತ್ಯೇ ನಿರ್ಮಲಭಾವನೇ ನಿರುಪಮೇ ನಿರ್ಧೂತವಿಶ್ವಭ್ರಮೇ
ಸತ್ತಾನಂದಚಿದಾತ್ಮಕೇ ಪರಶಿವೇ ಸಾಮ್ಯಂ ಗತಃ ಸಂಯಮೀ ।
ಪ್ರಧ್ವಸ್ತಾಶ್ರಮವರ್ಣಧರ್ಮನಿಗಲಃ ಸ್ವಚ್ಛಂದಸಂಚಾರವಾನ್
ದೇಹೇಽಪ್ಯದ್ಭುತವೈಭವೋ ವಿಜಯತೇ ಜೀವನ್ವಿಮುಕ್ತಃ ಸುಧೀಃ ||೭೧||

ಇತಿ ಶ್ರೀಸಿದ್ಧಾಂತಶಿಖಾಮಣೌ ಲಿಂಗಸ್ಥಲೇ ದೀಕ್ಷಾಗುರುಸ್ಥಲಾದಿ ನವವಿಧಸ್ಥಲಪ್ರಸಂಗೋ ನಾಮ

ಪಂಚದಶಪರಿಚ್ಛೇದಃ ಪರಿಸಮಾಪ್ತಃ.

ನಿತ್ಯನೂ, ನಿರ್ಮಲಸ್ವರೂಪನೂ ಉಪಮಾರಹಿತನೂ, ಸಮಸ್ತದೋಷ ದೂರೀಕೃತನೂ, ಸಚ್ಚಿದಾನಂದಸ್ವರೂಪನೂ ಆದ ಪರಶಿವನಲ್ಲಿ ಜ್ಞಾತೃತ್ವಕರ್ತೃತ್ವ ಯೋಗದಿಂದ ಸಮಾನತ್ವವನ್ನು ಪಡೆದವನೂ, ಪ್ರಾಕೃತವರ್ಣಾಶ್ರಮಧರ್ಮರೂಪ ಶೃಂಖಲೆಯಿಂದ ಬಿಡಲ್ಪಟ್ಟವನೂ, ಸ್ವೇಚ್ಛಾಚಾರವುಳ್ಳವನೂ, ಜೀವನ್ಮುಕ್ತನೂ ಆದ ಶಿವಯೋಗಿಯು ದೇಹವಿದ್ದರೂ (ದೇಹಧಾರಿಯಾಗಿದ್ದರೂ) ಆಶ್ಚರ್ಯಕರಮಹಿಮಾ ಸಂಪತ್ತಿಯಿಂದೊಡಗೂಡಿದವನಾಗಿ ಸರ್ವೋತ್ಕೃಷ್ಟನಾಗಿ ವರ್ತಿಸುತ್ತಾನೆ. ಈ ಶ್ಲೋಕದಲ್ಲುಕ್ತವಾಗಿರುವ ವರ್ಣಾಶ್ರಮಧರ್ಮದೂರೀಕರಣವು ಪ್ರಾಕೃತವರ್ಣಾಶ್ರಮ ಧರ್ಮವಿಷಯದಲ್ಲಿರುವುದಲ್ಲದೆ, ಶಿವವರ್ಣಾಶ್ರಮಧರ್ಮವಿಷಯದಲ್ಲಿರುವುದಿಲ್ಲವೆಂದು ತಿಳಿಯಬೇಕು. ಈ ವಿಷಯವು ಇದೇ ಪರಿಚ್ಛೇದದ ೬೬ ನೆಯ ಶ್ಲೋಕದ ವ್ಯಾಖ್ಯಾನ ದಲ್ಲಿ ಸ್ಪಷ್ಟೀಕರಿಸಲ್ಪಟ್ಟಿದೆ. ಅಲ್ಲಿ ನೋಡಿಕೊಳ್ಳಬೇಕು. ||೭೧||

ಇಂತು ಶ್ರೀಸಿದ್ಧಾಂತಶಿಖಾಮಣಿಯ ಲಿಂಗಸ್ಥಲದಲ್ಲಿ ದೀಕ್ಷಾಗುರುಸ್ಥಲಾದಿ ನವವಿಧಸ್ಥಲವಿಚಾರಾತ್ಮಕವಾದ

ಹದಿನೈದನೆಯ ಪರಿಚ್ಛೇದವು ಪರಿಸಮಾಪ್ತವಾದುದು.

ಶ್ರೀಜಗದ್ಗುರುರೇಣುಕಾಚಾರ್ಯಃ ಪ್ರಸೀದತು.

ಷೋಡಶಪರಿಚ್ಛೇದಃ

ಮಾಹೇಶ್ವರಸ್ಥಲಂ

॥ ಅಗಸ್ತ್ಯ ಉವಾಚ ॥

ಸ್ಥಲಾನಾಂ ನವಕಂ ಪ್ರೋಕ್ತಂ ಭಕ್ತಸ್ಥಲಸಮಾಶ್ರಯಂ ।
ಮಾಹೇಶ್ವರಸ್ಥಲೇ ಸಿದ್ಧಂ ಸ್ಥಲಭೇದಂ ನಿರೂಪಯ ॥೧॥

॥ ಶ್ರೀರೇಣುಕ ಉವಾಚ ॥

ಮಾಹೇಶ್ವರಸ್ಥಲೇ ಸಂತಿ ಸ್ಥಲಾನಿ ನವ ತಾಪಸ ।
ಕ್ರಿಯಾಗಮಸ್ಥಲಂ ಪೂರ್ವಂ ತತೋ ಭಾವಾಗಮಸ್ಥಲಂ ॥೨॥
ಜ್ಞಾನಾಗಮಸ್ಥಲಂ ಚಾಥ ಸಕಾಯಸ್ಥಲಮೀರಿತಂ ।
ತತೋಽಕಾಯಸ್ಥಲಂ ಪ್ರೋಕ್ತಂ ಪರಕಾಯಸ್ಥಲಂ ತತಃ ॥೩॥
ಧರ್ಮಾಚಾರಸ್ಥಲಂ ಚಾಥ ಭಾವಾಚಾರಸ್ಥಲಂ ತತಃ ।
ಜ್ಞಾನಾಚಾರಸ್ಥಲಂ ಚೇತಿ ಕ್ರಮಾದೇಷಾಂ ಭಿದೋಚ್ಯತೇ ॥೪॥

ಹದಿನಾರನೆಯ ಪರಿಚ್ಛೇದ

ಮಾಹೇಶ್ವರಸ್ಥಲಂ

ವ್ಯಾಖ್ಯಾನ—ಎಲೈ, ಆಚಾರ್ಯನೇ! ಭಕ್ತಸ್ಥಲವನ್ನಾಶ್ರಯಿಸಿದ ಒಂಭತ್ತು ಸ್ಥಲಗಳು ಹೇಳಲ್ಪಟ್ಟವು. ಇನ್ನು ಮಾಹೇಶ್ವರಸ್ಥಲದಲ್ಲಿರುವ ಸ್ಥಲಭೇದವನ್ನು ಬೋಧಿಸೆಂದು ಅಗಸ್ತ್ಯಮಹರ್ಷಿಯು ಪ್ರಶ್ನಮಾಡಲು—ಅದಕ್ಕೆ ರೇಣುಕಾಚಾರ್ಯರು, ಎಲೈ ಮಹರ್ಷಿಯೇ! ಮಾಹೇಶ್ವರಸ್ಥಲದಲ್ಲಿ—ಕ್ರಿಯಾಗಮಸ್ಥಲ, ಭಾವಾಗಮಸ್ಥಲ, ಜ್ಞಾನಾಗಮಸ್ಥಲ, ಸಕಾಯಸ್ಥಲ, ಅಕಾಯಸ್ಥಲ, ಪರಕಾಯಸ್ಥಲ, ಧರ್ಮಾಚಾರ ಸ್ಥಲ, ಭಾವಾಚಾರಸ್ಥಲ, ಜ್ಞಾನಾಚಾರಸ್ಥಲಗಳೆಂಬ ಒಂಭತ್ತು ಸ್ಥಲಗಳಿರುವುವೆಂದು ಅಪ್ಪಣೆಕೊಡಿಸಿದರು. ॥೧-೨-೩-೪॥

೧೦ ಕ್ರಿಯಾಗಮಸ್ಥಲಂ

ಶಿವೋ ಹಿ ಪರಮಃ ಸಾಕ್ಷಾತ್ ಪೂಜಾ ತಸ್ಯ ಕ್ರಿಯೋಚ್ಯತೇ ।
ತತ್ಪರಾ ಆಗಮಾ ಯಸ್ಮಾತ್ತದುಕ್ತೋಽಯಂ ಕ್ರಿಯಾಗಮಃ ॥೫॥

ಪ್ರಕಾಶತೇ ಯಥಾ ನಾಗ್ನಿರರಣ್ಯಾಂ ಮಥನಂ ವಿನಾ ।
ಕ್ರಿಯಾಂ ವಿನಾ ತಥಾಽಂತಸ್ಥೋ ನ ಪ್ರಕಾಶೋ ಭವೇಚ್ಛಿವಃ ॥೬॥

ನ ಯಥಾ ವಿಧಿಲೋಪಃ ಸ್ಯಾದ್ಯಥಾ ದೇವಃ ಪ್ರಸೀದತಿ ।
ಯಥಾಽಽಗಮಃ ಪ್ರಮಾಣಂ ಸ್ಯಾತ್ತಥಾ ಕರ್ಮ ಸಮಾಚರೇತ್ ॥೭॥

ವಿಧಿಃ ಶಿವನಿಯೋಗೋಽಯಂ ತಸ್ಮಾದ್ವಿಹಿತಕರ್ಮಣಿ ।
ಶಿವಾರಾಧನಬುದ್ಧ್ಯೈವ ನಿರತಃ ಸ್ಯಾದ್ವಿಚಕ್ಷಣಃ ॥೮॥

ಗುರೋರಾದೇಶಮಾಸಾದ್ಯ ಪೂಜಯೇತ್ಪರಮೇಶ್ವರಂ ।
ಪೂಜಿತೇ ಪರಮೇಶಾನೇ ಪೂಜಿತಾಃ ಸರ್ವದೇವತಾಃ ॥೯॥

ಸದಾ ಶಿವಾರ್ಚನೋಪಾಯಸಾಮಗ್ರೀವ್ಯಗ್ರಮಾನಸಃ ।
ಶಿವಯೋಗರತೋ ಯೋಗೀ ಮುಚ್ಯತೇ ನಾತ್ರ ಸಂಶಯಃ ॥೧೦॥

---

೧೦ ಕ್ರಿಯಾಗಮಸ್ಥಲ

ಪೂರ್ವೋಕ್ತಪರಸ್ಥಲಸಂಪನ್ನನಾದ ಶಿವಯೋಗೀಶ್ವರನೇ ಪ್ರತ್ಯಕ್ಷಶಿವನೆನಿಸುವನು. ಅವನ ಪೂಜೆಯೇ ಕ್ರಿಯೆಯೆನಿಸುವುದು. ಶಿವನ ಪೂಜೆಗಾಗಿ ಆಗಮಗಳು ಕ್ರಿಯಾಪ್ರಧಾನಗಳಾಗಿರುವುವು. ಆದುದರಿಂದ ಇದು ಕ್ರಿಯಾಗಮಸ್ಥಲವೆನಿಸುವುದು. ॥೫॥ ಬನ್ನಿಯಕಟ್ಟಿಗೆಯಲ್ಲಿ ಘರ್ಷಣವಿಲ್ಲದೆ ಅಗ್ನಿಯು ಹೇಗೆ ಪ್ರಕಾಶಿಸುವುದಿಲ್ಲವೋ, ಹಾಗೆಯೇ ಲಿಂಗಮಧ್ಯಸ್ಥನಾದ ಶಿವನು ಪೂಜಾಕ್ರಿಯೆಯಿಲ್ಲದೆ ಪ್ರಕಾಶಿಸುವುದಿಲ್ಲ. ॥೬॥ ವಿಧಿಲೋಪವಾಗದಂತೆಯೂ, ಶಿವನು ಪ್ರಸನ್ನನಾಗುವಂತೆಯೂ, ಆಗಮ ಪ್ರಮಾಣಾನುಸಾರವಾಗಿಯೂ ಪೂಜಾಕರ್ಮವನ್ನಾಚರಿಸಬೇಕು. ॥೭॥ ಈ ವಿಧಿಯು ಶಿವಾಜ್ಞಾರೂಪವಾದುದು. ಆದುದರಿಂದ ಜ್ಞಾನಿಯು ಶಾಸ್ತ್ರವಿಹಿತವಾದ ಕರ್ಮದಲ್ಲಿ ಶಿವಾರಾಧನಬುದ್ಧಿಯಿಂದ ನಿರತನಾಗಬೇಕು. ॥೮॥ ಗುರೂಪದೇಶಾನುಸಾರವಾಗಿ ಶಿವಲಿಂಗವನ್ನು ಪೂಜಿಸಬೇಕು. ಶಿವಲಿಂಗವನ್ನು ಪೂಜಿಸಿದ್ದಾದರೆ ಸರ್ವದೇವತೆಗಳನ್ನೂ ಪೂಜಿಸಿದಂತಾಗುವುದು. ॥೯॥ ಯಾವಾಗಲೂ ಶಿವಲಿಂಗಪೂಜಾಸಾಧನ ಸಾಮಗ್ರೀಸಂಪಾದನೆಯಲ್ಲಿ ನಿರತವಾದ ಮನಸ್ಸುಳ್ಳವನೂ, ಶಿವಯೋಗಾಸಕ್ತನೂ ಆದ ಶಿವಯೋಗಿಯು ಮಲಮಾಯಾದಿಪಾಶಮುಕ್ತನಾಗುವನು. ಈ ವಿಷಯದಲ್ಲಿ

ಅಂಧಪಂಗುವದನ್ಯೋನ್ಯಸಾಪೇಕ್ಷೇ ಜ್ಞಾನಕರ್ಮಣೀ ।
ಫಲೋತ್ಪತ್ತೌ ವಿರಕ್ತಸ್ತು ತಸ್ಮಾತ್ತದ್ದ್ವಯಮಾಚರೇತ್ ||೧೧||

ಜ್ಞಾನೇ ಸಿದ್ಧೇಽಪಿ ವಿದುಷಾಂ ಕರ್ಮಾಪಿ ವಿನಿಯುಜ್ಯತೇ ।
ಫಲಾಭಿಸಂಧಿರಹಿತಂ ತಸ್ಮಾತ್ಕರ್ಮ ನ ಸಂತ್ಯಜೇತ್ ||೧೨||

ಆಚಾರ ಏವ ಸರ್ವೇಷಾಮಲಂಕಾರಾಯ ಕಲ್ಪತೇ ।
ಆಚಾರಹೀನಃ ಪುರುಷೋ ಲೋಕೇ ಭವತಿ ನಿಂದಿತಃ ||೧೩||

ಜ್ಞಾನೇನಾಚಾರಯುಕ್ತೇನ ಪ್ರಸೀದತಿ ಮಹೇಶ್ವರಃ ।
ತಸ್ಮಾದಾಚಾರವಾನ್ ಜ್ಞಾನೀ ಭವೇದಾದೇಹಪಾತನಂ ||೧೪||

೧೧ ಭಾವಾಗಮಸ್ಥಲಂ

ಭಾವಚಿಹ್ನಾನಿ ವಿದುಷೋ ಯಾನಿ ಸಂತಿ ವಿರಾಗಿಣಃ ।
ತಾನಿ ಭಾವಾಗಮತ್ವೇನ ವರ್ತಂತೇ ಸರ್ವದೇಹಿನಾಂ ||೧೫||

ಯಾವ ಸಂಶಯವೂ ಇಲ್ಲ. ||೧೦|| ಕರ್ಮ ಮತ್ತು ಜ್ಞಾನ ಇವೆರಡೂ ಕುರುಡ ಮತ್ತು ಕುಂಟರಂತೆ ಪರಸ್ಪರವಾಗಿ ಅಪೇಕ್ಷೆಯುಳ್ಳವುಗಳಾಗಿರುವವು. ಕುರುಡನಿಗೆ ಕುಂಟನ ಆವಶ್ಯಕತೆಯೂ, ಕುಂಟನಿಗೆ ಕುರುಡನ ಆವಶ್ಯಕತೆಯೂ ಮುಖ್ಯವಾಗಿರುವಂತೆ, ಕರ್ಮಕ್ಕೆ ಜ್ಞಾನದ ಆವಶ್ಯಕತೆಯೂ, ಜ್ಞಾನಕ್ಕೆ ಕರ್ಮದ ಆವಶ್ಯಕತೆಯೂ ಮುಖ್ಯವಾಗಿರಬೇಕು. ಆದುದರಿಂದ ಶಿವಯೋಗಿಯು ಪರಾಪರಮುಕ್ತಿರೂಪಫಲೋತ್ಪತ್ತಿಯಲ್ಲಿ ಕರ್ಮಜ್ಞಾನಗಳೆರಡನ್ನೂ ಆಚರಿಸಬೇಕು. ಕರ್ಮಜ್ಞಾನಗಳೆರಡೂ ಇಲ್ಲದೆ ಕೇವಲ ಒಂದೊಂದರಿಂದಲೇ ಮೋಕ್ಷವು ಲಭಿಸುವುದಿಲ್ಲವೆಂದು ಭಾವವು. ||೧೧|| ಜ್ಞಾನಿಗಳಿಗೆ ಜ್ಞಾನವು ಸಿದ್ಧವಾಗಿದ್ದರೂ ನಿಷ್ಕಾಮಕರ್ಮವು ಹೇಳಲ್ಪಡುವುದು. ಆದುದರಿಂದ ಫಲಾಪೇಕ್ಷಾಶೂನ್ಯವಾದ ಕರ್ಮವನ್ನು ಬಿಡಬಾರದು. ಯಾವ ಫಲವನ್ನೂ ಅಪೇಕ್ಷಿಸದೆ ಶಿವಪೂಜಾಕರ್ಮವನ್ನಾಚರಿಸಬೇಕೆಂದು ಭಾವವು. ||೧೨|| ಸಕಲವರ್ಣಾಶ್ರಮದವರಿಗೂ ಆಚಾರವೇ ಅಲಂಕಾರವಾಗಿದೆ. ಆಚಾರಶೂನ್ಯನಾದ ಮಾನವನು ಲೋಕದಲ್ಲಿ ನಿಂದಿತನಾಗುವನು. ||೧೩|| ಪರಮೇಶ್ವರನು ಆಚಾರಯುಕ್ತವಾದ ಜ್ಞಾನದಿಂದಲೇ ಪ್ರಸನ್ನನಾಗುವನು. ಆದುದರಿಂದ ಜ್ಞಾನಿಯು ಸ್ಥೂಲಶರೀರವನ್ನು ಬಿಡುವವರೆಗೂ ಆಚಾರವುಳ್ಳವನಾಗಿರಬೇಕು.

೧೧ ಭಾವಾಗಮಸ್ಥಲ

ವಿರಾಗಿಯಾದ ಜ್ಞಾನಿಗೆ ಯಾವ ಭಾವಚಿಹ್ನಗಳಿರುತ್ತವೆಯೋ, ಆ ಭಾವಚಿಹ್ನಗಳೇ ಸರ್ವಮಾನವರ ಮುಕ್ತಿಗೋಸ್ಕರ ಭಾವಾಗಮಸ್ವರೂಪದಿಂದ ಪ್ರವರ್ತಿಸು

ಶಿವೋಽಹಮಿತಿ ಭಾವೋ ಹಿ ಶಿವತಾಪತ್ತಿಕಾರಣಂ ।
ನ ಜ್ಞಾನಮಾತ್ರಂ ನಾಚಾರೋ ಭಾವಯುಕ್ತಃ ಶಿವೋ ಭವೇತ್ ॥೧೬॥

ಜ್ಞಾನಂ ವಸ್ತುಪರಿಚ್ಛೇದೋ ಧ್ಯಾನಂ ತದ್ಭಾವಕಾರಣಂ ।
ತಸ್ಮಾದ್ ಜ್ಞಾತೇ ಮಹಾದೇವೇ ಧ್ಯಾನಯುಕ್ತೋ ಭವೇತ್ಸುಧೀಃ ॥೧೭॥

ಅಂತರ್ಬಹಿಶ್ಚ ಸರ್ವತ್ರ ಪರಿಪೂರ್ಣಂ ಮಹೇಶ್ವರಂ ।
ಭಾವಯೇತ್ಪರಮಾನಂದಲಬ್ಧಯೇ ಪಂಡಿತೋತ್ತಮಃ ॥೧೮॥

ಅರ್ಥಹೀನಾ ಯಥಾ ವಾಣೀ ಪತಿಹೀನಾ ಯಥಾ ಸತೀ ।
ಶ್ರುತಿಹೀನಾ ಯಥಾ ಬುದ್ಧಿರ್ಭಾವಹೀನಾ ತಥಾ ಕ್ರಿಯಾ ॥೧೯॥

ಚಕ್ಷುರ್ಹೀನೋ ಯಥಾ ರೂಪಂ ನ ಕಿಂಚಿದ್ವೀಕ್ಷಿತುಂ ಕ್ಷಮಃ ।
ಭಾವಹೀನಸ್ತಥಾ ಯೋಗೀ ನ ಶಿವಂ ದ್ರಷ್ಟುಮೀಶ್ವರಃ ॥೨೦॥

ತ್ತಿರುವವು. ॥೧೫॥ ನಾನೇ ಶಿವನೆಂಬ ಭಾವವೇ ಶಿವತ್ವಪ್ರಾಪ್ತಿಗೆ ಕಾರಣವಾಗುವುದು. ಕೇವಲಜ್ಞಾನವಾಗಲಿ ಕೇವಲಾಚಾರವಾಗಲಿ ಶಿವತ್ವಪ್ರಾಪ್ತಿಗೆ ಕಾರಣವಾಗುವುದಿಲ್ಲ. ಆದುದರಿಂದ ಶಿವಭಾವವುಳ್ಳವನೇ ಶಿವಸ್ವರೂಪನಾಗುವನು. ॥೧೬॥ ಜ್ಞಾನವು, "ಈ ವಸ್ತುವು ಇಂಥದು" ಎಂದು ವಸ್ತುಸ್ವರೂಪವನ್ನುಮಾತ್ರ ನಿರ್ಣಯಿಸುವುದು. ಆದರೆ ಧ್ಯಾನವು ನಿರ್ಣೀತವಾದ ವಸ್ತುವಿನ ಪ್ರಾಪ್ತಿಗೆ ಕಾರಣವಾಗುವುದು. ಆದುದರಿಂದ ಜ್ಞಾನಿಯು ಶಿವನನ್ನು ತಿಳಿಯಲು, ಶಿವಭಾವಯುಕ್ತನಾಗುವನು; ಅರ್ಥಾತ್ ಶಿವಸ್ವರೂಪನಾಗುವನೆಂದು ಭಾವವು. ॥೧೭॥ ಜ್ಞಾನಿಯು, ಒಳಗೂ ಹೊರಗೂ ಎಲ್ಲ ಕಡೆಗೂ ವ್ಯಾಪಿಸಿರುವ ಶಿವನನ್ನು ಪರಮಾನಂದಪ್ರಾಪ್ತಿಗಾಗಿ ಧ್ಯಾನಿಸಬೇಕು. ॥೧೮॥ ಅರ್ಥಶೂನ್ಯವಾದ ವಾಣಿಯೂ, ಪತಿರಹಿತಳಾದ ಸ್ತ್ರೀಯಳೂ, ವೇದಸಮ್ಮತವಲ್ಲದ ಜ್ಞಾನವೂ ಹೇಗೆ ಪ್ರಯೋಜನಕಾರಿಯಲ್ಲವೋ, ಹಾಗೆಯೇ ಭಾವಶೂನ್ಯವಾದ ಕ್ರಿಯೆಯು ಪ್ರಯೋಜನಕಾರಿಯಾಗುವುದಿಲ್ಲ. ॥೧೯॥ ಕಣ್ಣಿಲ್ಲದವನು ರೂಪವನ್ನು ನೋಡುವುದಕ್ಕೆ ಹೇಗೆ ಸಮರ್ಥನಾಗುವುದಿಲ್ಲವೋ, ಹಾಗೆಯೇ ಭಾವಶೂನ್ಯನಾದ ಯೋಗಿಯು ಶಿವನನ್ನು ನೋಡಲು ಸಮರ್ಥನಾಗುವುದಿಲ್ಲ. ಪರಮಾತ್ಮನನ್ನು ಸಂದರ್ಶಿಸಲು ಸಾಧಕವಾಗಿರುವ ಸಮಸ್ತಸಾಧನಗಳಿಗಿಂತಲೂ, ಭಾವರೂಪಸಾಧನವು ಮಿಗಿಲಾಗಿರುವುದು. ಆದುದರಿಂದ ಶಿವಯೋಗಿಯು ಮುಖ್ಯವಾಗಿ ಭಾವಪೂರ್ಣನಾಗಿರಬೇಕೆಂಬುವೇ ಭಗವತ್ಪಾದರ ಆಶಯವಾಗಿರುವುದು. ॥೨೦॥

ಭಾವಶುದ್ಧೇನ ಮನಸಾ ಪೂಜಯೇತ್ಪರಮೇಶ್ವರಂ ।
ಭಾವಹೀನಾಂ ನ ಗೃಹ್ಣಾತಿ ಪೂಜಾಂ ಸುಮಹತೀಮಪಿ ॥೨೧॥

ನೈರಂತರ್ಯೇಣ ಸಂಪನ್ನೇ ಭಾವೇ ಧ್ಯಾತುಂ ಶಿವಂ ಪ್ರತಿ ।
ತದ್ಭಾವೋ ಜಾಯತೇ ಯದ್ವತ್ ಕೀಟೇ ಭ್ರಮರಚಿಂತನಾತ್ ॥೨೨॥

ನಿಷ್ಕಲಂಕಂ ನಿರಾಕಾರಂ ಪರಬ್ರಹ್ಮ ಶಿವಾಭಿಧಂ ।
ನಿಧ್ಯಾತುಮಸಮರ್ಥೋಽಪಿ ತದ್ವಿಭೂತಿಂ ವಿಭಾವಯೇತ್ ॥೨೩॥

೧೨ ಜ್ಞಾನಾಗಮಸ್ಥಲಂ

ಪರಸ್ಯ ಜ್ಞಾನಚಿಹ್ನಾನಿ ಯಾನಿ ಸಂತಿ ಶರೀರಿಣಾಂ ।
ತಾನಿ ಜ್ಞಾನಾಗಮತ್ವೇನ ಪ್ರವರ್ತಂತೇ ವಿಮುಕ್ತಯೇ ॥೨೪॥

ಭಾವೇನ ಕಿಂ ಫಲಂ ಪುಂಸಾಂ ಕರ್ಮಣಾ ವಾ ಕಿಮಿಷ್ಯತೇ ।
ಭಾವಕರ್ಮಸಮಾಯುಕ್ತಂ ಜ್ಞಾನಮೇವ ವಿಮುಕ್ತಿದಂ ॥೨೫॥

ಆದುದರಿಂದ ಪರಮೇಶ್ವರನನ್ನು ಧ್ಯಾನಶುದ್ಧವಾದ ಮನಸ್ಸಿನಿಂದ ಪೂಜಿಸಬೇಕು. ಧ್ಯಾನಶೂನ್ಯವಾದ ಪೂಜೆಯು ಎಷ್ಟು ಮಹತ್ತ್ವವುಳ್ಳದಾದರೂ, ಆ ಪೂಜೆಯನ್ನು ಪರಮೇಶ್ವರನು ಪರಿಗ್ರಹಿಸುವುದಿಲ್ಲ. ॥೨೧॥ ಭ್ರಮರದ ಚಿಂತನದಿಂದ ಕೀಟದಲ್ಲಿ ಹೇಗೆ ಭ್ರಮರಸ್ವರೂಪವು ಪ್ರಾಪ್ತವಾಗುವುದೋ, ಹಾಗೆಯೇ ಮನಸ್ಸು ಶಿವನನ್ನು ನಿರಂತರದಲ್ಲಿಯೂ ಧ್ಯಾನಿಸುವುದಕ್ಕೋಸ್ಕರ ಉದ್ಯುಕ್ತವಾಗಲು, ಶಿವಸ್ವರೂಪವು ಪ್ರಾಪ್ತವಾಗುವುದು. ॥೨೨॥ ನಿಷ್ಕಲಂಕವೂ, ನಿರಾಕಾರವೂ, ಶಿವನಾಮಕವೂ ಆದ ಪರಬ್ರಹ್ಮವನ್ನು ಧ್ಯಾನಿಸುವುದಕ್ಕೋಸ್ಕರ ಅಸಮರ್ಥನಾದರೆ, ಆ ಪರಶಿವಬ್ರಹ್ಮದ ಸರ್ವಜ್ಞತ್ವಾದ್ಯೈಶ್ವರ್ಯವನ್ನಾದರೂ ಭಾವಿಸಬೇಕು. ॥೨೩॥

೧೨ ಜ್ಞಾನಾಗಮಸ್ಥಲ

ಭಾವಾಗಮಸಂಪನ್ನನಾದ ಶಿವಯೋಗೀಶ್ವರನಿಗೆ ಯಾವ ಜ್ಞಾನಚಿಹ್ನಗಳಿರುತ್ತವೆಯೋ, ಆ ಚಿಹ್ನಗಳೇ ಮಾನವರ ಮುಕ್ತಿಗೋಸ್ಕರ ಜ್ಞಾನಾಗಮಸ್ವರೂಪದಿಂದ ಪ್ರವರ್ತಿಸುತ್ತಿರುವುವು. ॥೨೪॥ ಮಾನವರಿಗೆ ಕೇವಲಭಾವದಿಂದಾಗಲಿ ಕೇವಲ ಕರ್ಮದಿಂದಾಗಲಿ ಯಾವ ಫಲವು ಪ್ರಾಪ್ತವಾಗುವುದು? ಯಾವ ಫಲವೂ ಪ್ರಾಪ್ತವಾಗುವುದಿಲ್ಲವೆಂಬ ಭಾವವು. ಭಾವಕರ್ಮಗಳಿಂದ ಕೂಡಿದ ಜ್ಞಾನವೇ ಮೋಕ್ಷದಾಯಕವಾಗಿರುವುದು. ॥೨೫॥

ಕೇವಲಂ ಕರ್ಮಮಾತ್ರೇಣ ಜನ್ಮಕೋಟಿಶತೈರಪಿ ।
ನಾತ್ಮನಾಂ ಜಾಯತೇ ಮುಕ್ತಿರ್ಜ್ಞಾನಂ ಮುಕ್ತೇರ್ಹಿ ಕಾರಣಂ ॥೨೬॥

ಜ್ಞಾನಹೀನಂ ಸದಾ ಕರ್ಮ ಪುಂಸಾಂ ಸಂಸಾರಕಾರಣಂ ।
ತದೇವ ಜ್ಞಾನಯೋಗೇನ ಸಂಸಾರವಿನಿವರ್ತಕಂ ॥೨೭॥

ಫಲಂ ಕ್ರಿಯಾವತಾಂ ಪುಂಸಾಂ ಸ್ವರ್ಗಾದ್ಯಂ ನಶ್ವರಂ ಯತಃ ।
ತಸ್ಮಾತ್ ಸ್ಥಾಯಿಫಲಪ್ರಾಪ್ತ್ಯೈ ಜ್ಞಾನಮೇವ ಸಮಭ್ಯಸೇತ್ ॥೨೮॥

ಶಾಸ್ತ್ರಾಭ್ಯಾಸಾದಿಯತ್ನೇನ ಸದ್ಗುರೋರುಪದೇಶತಃ ।
ಜ್ಞಾನಮೇವ ಸಮಭ್ಯಸ್ಯೇತ್ ಕಿಮನ್ಯೇನ ಪ್ರಯೋಜನಂ ॥೨೯॥

ಜ್ಞಾನಂ ಪರಶಿವಾದ್ವೈತಪರಿಪಾಕವಿನಿಶ್ಚಯಃ ।
ಯೇನ ಸಂಸಾರಸಂಬಂಧವಿನಿವೃತ್ತಿರ್ಭವೇತ್ ಸತಾಂ ॥೩೦॥

ಶಿವಾತ್ಮಕಮಿದಂ ಸರ್ವಂ ಶಿವಾದನ್ಯನ್ನ ವಿದ್ಯತೇ ।
ಶಿವೋಽಹಮಿತಿ ಯಾ ಬುದ್ಧಿಸ್ತದೇವ ಜ್ಞಾನಮುತ್ತಮಂ ॥೩೧॥

ಕೇವಲಕರ್ಮದಿಂದ ಆತ್ಮವ್ಯಕ್ತಿಗಳಿಗೆ ಕೋಟಿಜನ್ಮಗಳಿಂದಾದರೂ ಮುಕ್ತಿಯಾಗುವುದಿಲ್ಲ. ಕರ್ಮಸಹಿತವಾದ ಜ್ಞಾನವೇ ಮುಕ್ತಿಗೆ ಕಾರಣವಾಗಿರುವುದು. ॥೨೬॥ ಜ್ಞಾನಹೀನವಾದ ಕರ್ಮವು ಯಾವಾಗಲೂ ಮಾನವರ ಸಂಸಾರಪ್ರವೃತ್ತಿಗೆ ಕಾರಣವಾಗಿರುವುದು. ಆ ಕರ್ಮವೇ ಜ್ಞಾನದ ಸಂಬಂಧದಿಂದ ಸಂಸಾರನಿವೃತ್ತಿಗೆ ಕಾರಣವಾಗುವುದು. ಅರ್ಥಾತ್ ಕರ್ಮಜ್ಞಾನಯೋಗವೇ ಮುಕ್ತಿಗೆ ಕಾರಣವೆಂದು ಭಾವವು. ॥೨೭॥ ಕೇವಲಕರ್ಮವನ್ನಾಚರಿಸುವವರಿಗೆ ಅಂಥ ಕೇವಲಕರ್ಮದಿಂದ ಲಬ್ಧವಾಗುವ ಸ್ವರ್ಗಾದಿಫಲವು ನಶ್ವರವಾದುದರಿಂದ, ನಿತ್ಯಫಲಪ್ರಾಪ್ತಿಗೋಸ್ಕರ ಕರ್ಮದ ಜತೆಯಲ್ಲಿ ಜ್ಞಾನವನ್ನೂ ಪ್ರಾಧಾನ್ಯಭಾವದಿಂದ ಅಭ್ಯಾಸಮಾಡಬೇಕು. ॥೨೮॥ ನಿಗಮಾಗಮಪ್ರಸಿದ್ಧವೀರಶೈವಶಾಸ್ತ್ರಾಭ್ಯಾಸಾದಿಪ್ರಯತ್ನದಿಂದಲೂ, ಸದ್ಗುರುವಿನ ಉಪದೇಶದಿಂದಲೂ ಜ್ಞಾನವನ್ನೇ ಪ್ರಧಾನವಾಗಿ ಅಭ್ಯಾಸಮಾಡಬೇಕು. ನಾಶಶೀಲಸ್ವರ್ಗಾದಿಫಲಪ್ರದಾಯಕವಾದ ಜ್ಞಾನಹೀನಕರ್ಮದಿಂದೇನು ಪ್ರಯೋಜನವು? ॥೨೯॥ ಶಿವತತ್ತ್ವಕ್ಕಿಂತ ಅತಿರಿಕ್ತವಾದ ತತ್ತ್ವವೇ ಇಲ್ಲವಾದುದರಿಂದ, ಸಮಸ್ತಚರಾಚರವಸ್ತುಗಳಿಗೆ ಶಿವನೊಡನೆ ಸಿದ್ಧವಾಗುವ ಅದ್ವೈತವೇ ಸ್ಥಿರವೆಂಬ ಪರಿಪಕ್ವನಿರ್ಣಯವೇ ಜ್ಞಾನವೆನಿಸುವುದು. ಆ ಜ್ಞಾನದಿಂದಲೇ ಸತ್ಪುರುಷರಿಗೆ ಸಂಸಾರಬಂಧನದಿಂದ ಬಿಡುಗಡೆಯುಂಟಾಗುವುದು. ॥೩೦॥ ಸಮಸ್ತಪ್ರಪಂಚವೂ ಶಿವಸ್ವರೂಪವಾದುದು ; ಶಿವನಿಗೆ ಹೊರತಾಗಿ ಯಾವುದೂ ಇರುವುದಿಲ್ಲ ; ನಾನು ಶಿವನು ; ಎಂಬ

ಅಂಧೋ ಯಥಾ ಪುರಸ್ಸ್ಥಾನಿ ವಸ್ತೂನಿ ನಹಿ ಪಶ್ಯತಿ ।
ಜ್ಞಾನಹೀನಸ್ತಥಾ ದೇಹೀ ನಾತ್ಮಸ್ಥಂ ವೀಕ್ಷತೇ ಶಿವಂ ॥೩೨॥

ಶಿವಸ್ಯ ದರ್ಶನಾತ್ಪುಂಸಾಂ ಜನ್ಮರೋಗನಿವರ್ತನಂ ।
ಶಿವದರ್ಶನಮುಪ್ಯಾಹುಃ ಸುಲಭಂ ಜ್ಞಾನಚಕ್ಷುಷಾಂ ॥೩೩॥

ದೀಪಂ ವಿನಾ ಯಥಾ ಗೇಹೇ ನಾಂಧಕಾರೋ ನಿವರ್ತತೇ ।
ಜ್ಞಾನಂ ವಿನಾ ತಥಾ ಚಿತ್ತೇ ಮೋಹೋಽಪಿ ನ ನಿವರ್ತತೇ ॥೩೪॥

೧೩ ಸಕಾಯಸ್ಥಲಂ

ಪರಸ್ಯ ಯಾ ತನುರ್ಜ್ಞೇಯಾಽದೇಹಕರ್ಮಾಭಿಮಾನಿನಃ ।
ತಯಾ ಸಕಾಯೋ ಲೋಕೋಽಯಂ ತದಾತ್ಮತ್ವನಿರೂಪಣಾತ್ ॥೩೫॥

ಕಾಯಂ ವಿನಾ ಸಮಸ್ತಾನಾಂ ನ ಕ್ರಿಯಾ ನ ಚ ಭಾವನಾ ।
ನ ಜ್ಞಾನಂ ಯತ್ತತೋ ಯೋಗೀ ಕಾಯವಾನೇವ ಸಂಚರೇತ್ ॥೩೬॥

ಯಾವ ಬುದ್ಧಿಯುಂಟೋ, ಅದೇ ಉತ್ತಮವಾದ ಜ್ಞಾನವೆನಿಸುವುದು. ॥೩೧॥ ಕುರುಡನು ಮುಂಭಾಗದಲ್ಲಿರುವ ವಸ್ತುಗಳನ್ನು ಹೇಗೆ ನೋಡುವುದಿಲ್ಲವೋ, ಹಾಗೆಯೇ ಜ್ಞಾನಹೀನನಾದ ಮಾನವನು ಆತ್ಮಸ್ಥನಾದ ಶಿವನನ್ನು ನೋಡುವುದಿಲ್ಲ. ॥೩೨॥ ಶಿವನ ದರ್ಶನದಿಂದಲೇ ಮಾನವರಿಗೆ ಭವರೋಗನಿವೃತ್ತಿಯಾಗುವುದು. ಶಿವದರ್ಶನ ವನ್ನಾದರೋ ಜ್ಞಾನನೇತ್ರಗಳಿಗೆ ಸುಲಭವಾದುದನ್ನಾಗಿ ಶಾಸ್ತ್ರಜ್ಞರು ಹೇಳುವರು. ॥೩೩॥ ದೀಪವಿಲ್ಲದೆ ಮನೆಯಲ್ಲಿ ಅಂಧಕಾರವು ಹೇಗೆ ನಷ್ಟವಾಗುವುದಿಲ್ಲವೋ, ಹಾಗೆಯೇ ಜ್ಞಾನವಿಲ್ಲದೆ ಹೃದಯದಲ್ಲಿ ಮೋಹವಾದರೂ ನಷ್ಟವಾಗುವುದಿಲ್ಲ. ॥೩೪॥

೧೩ ಸಕಾಯಸ್ಥಲ

ದೇಹಾಭಿಮಾನಕರ್ಮಾಭಿಮಾನಗಳಿಂದ ಶೂನ್ಯನಾದ ಶಿವಯೋಗಿಯ ಯಾವ ಶರೀರವು ಜನಗಳಿಗೆ ಜ್ಞೇಯವಾಗಿದೆಯೋ, ಅಂತಹ ಶರೀರಕ್ಕೆ ಆ ಶಿವ ಯೋಗಿಯೇ ಆತ್ಮನೆಂದು ಹೇಳಲ್ಪಡುವುದರಿಂದ, ಆ ಶರೀರದಿಂದಲೇ ಆ ಶಿವ ಯೋಗಿಯು ಸಕಾಯನೆನಿಸುವನು. ॥೩೫॥ ಶರೀರವಿಲ್ಲದೆ ಸರ್ವರಿಗೂ ಕ್ರಿಯೆಯೂ ಸಂಭವಿಸುವುದಿಲ್ಲ; ಭಾವನೆಯೂ ಸಂಭವಿಸುವುದಿಲ್ಲ; ಜ್ಞಾನವೂ ಸಂಭವಿಸುವುದಿಲ್ಲ; ಆದುದರಿಂದ ಶಿವಯೋಗಿಯು ಶರೀರವುಳ್ಳವನಾಗಿಯೇ ಸಂಚರಿಸಬೇಕು. ॥೩೬॥

ಶಿವೈಕ್ಯಜ್ಞಾನಯುಕ್ತಸ್ಯ ಯೋಗಿನೋಽಪಿ ಮಹಾತ್ಮನಃ ।
ಕಾಯಯೋಗೇನ ಸಿದ್ಧ್ಯಂತಿ ಭೋಗಮೋಕ್ಷಾದಯಃ ಸದಾ ॥೩೭॥

ಕಾಷ್ಠಂ ವಿನಾ ಯಥಾ ವಹ್ನಿರ್ಜಾಯತೇ ನ ಪ್ರಕಾಶವಾನ್ ।
ಮೂರ್ತಿಂ ವಿನಾ ತಥಾ ಯೋಗೀ ನಾತ್ಮತತ್ತ್ವಪ್ರಕಾಶವಾನ್ ॥೩೮॥

ಮೂರ್ತ್ಯಾತ್ಮನೈವ ದೇವಸ್ಯ ಯಥಾ ಪೂಜ್ಯತ್ವಕಲ್ಪನಾ ।
ತಥಾ ದೇಹಾತ್ಮನೈವಾಸ್ಯ ಪೂಜ್ಯತ್ವಂ ಪರಯೋಗಿನಃ ॥೩೯॥

ನಿಷ್ಕಲೋ ಹಿ ಮಹಾದೇವಃ ಪರಿಪೂರ್ಣಃ ಸದಾಶಿವಃ ।
ಜಗತ್ಸೃಷ್ಟ್ಯಾದಿಸಂಸಿದ್ಧ್ಯೈ ಮೂರ್ತಿಮಾನೇವ ಭಾಸತೇ ॥೪೦॥

ಬ್ರಹ್ಮಾದ್ಯಾ ದೇವತಾಃ ಸರ್ವಾ ಮುನಯೋಽಪಿ ಮುಮುಕ್ಷವಃ ।
ಕಾಯವಂತೋ ಹಿ ಕುರ್ವಂತಿ ತಪಃ ಸರ್ವಾರ್ಥಸಾಧಕಂ ॥೪೧॥

ತಪೋ ಹಿ ಮೂಲಂ ಸರ್ವಾಸಾಂ ಸಿದ್ಧೀನಾಂ ಯಜ್ಜಗತ್ತ್ರಯೇ ।
ತಪಸ್ತತ್ಕಾಯಮೂಲಂ ಹಿ ತಸ್ಮಾತ್ಕಾಯಂ ನ ಸಂತ್ಯಜೇತ್ ॥೪೨॥

ಶಿವೈಕ್ಯಜ್ಞಾನಯುಕ್ತನೂ ಮಹಾತ್ಮನೂ ಆದ ಶಿವಯೋಗಿಗಾದರೂ ಭೋಗಮೋಕ್ಷಾದಿಗಳು ಶರೀರಸಂಬಂಧದಿಂದಲೇ ಸಿದ್ಧಿಸುವವು. ॥೩೭॥ ಕಟ್ಟಿಗೆಯಿಲ್ಲದೆ ಬೆಂಕಿಯು ಹೇಗೆ ಪ್ರಕಾಶಿಸುವುದಿಲ್ಲವೋ, ಹಾಗೆಯೇ ಶರೀರವಿಲ್ಲದೆ ಶಿವಯೋಗಿಯು ಆತ್ಮತತ್ತ್ವಪ್ರಕಾಶವುಳ್ಳವನಾಗುವುದಿಲ್ಲ. ॥೩೮॥ ಪರಮೇಶ್ವರನಿಗೆ ಮೂರ್ತಿಸ್ವರೂಪದಿಂದಲೇ ಹೇಗೆ ಪೂಜ್ಯತ್ವವುಂಟಾಗುವುದೋ, ಹಾಗೆಯೇ ಈ ಶಿವಯೋಗಿಗೆ ಶರೀರಾಕಾರದಿಂದಲೇ ಪೂಜ್ಯತ್ವವುಂಟಾಗುವುದು. ॥೩೯॥ ನಿಷ್ಕಲನೂ, ಪರಿಪೂರ್ಣನೂ, ಮಹಾದೇವನೂ ಆದ ಪರಮೇಶ್ವರನು ಜಗತ್ಸೃಷ್ಟ್ಯಾದಿಸಿದ್ಧಿಗೋಸ್ಕರ ಸಾಕಾರನಾಗಿಯೇ ತೋರುತ್ತಿರುವನು. ॥೪೦॥ ಬ್ರಹ್ಮಾದಿಸಮಸ್ತದೇವತೆಗಳೂ, ಮೋಕ್ಷಾಪೇಕ್ಷಿಗಳಾದ ಮುನಿಗಳೂ ಶರೀರವುಳ್ಳವರಾಗಿಯೇ ಸರ್ವಾರ್ಥಸಾಧಕವಾದ ತಪಸ್ಸನ್ನಾಚರಿಸುತ್ತಾರೆ. ॥೪೧॥ ಮೂರು ಲೋಕಗಳಲ್ಲಿಯೂ ಸಮಸ್ತಸಿದ್ಧಿಗಳಿಗೆ ತಪಸ್ಸೇ ಮೂಲಕಾರಣವು; ಆ ತಪಸ್ಸಿಗೆ ಶರೀರವು ಮೂಲಕಾರಣವು; ಆದುದರಿಂದ ಶರೀರವನ್ನು ಬಿಡಬಾರದು. “ಶರೀರಮಾದ್ಯಂ ಖಲು ಧರ್ಮಸಾಧನಂ” ಎಂಬ ಆರ್ಯೋಕ್ತಿಯಂತೆ ಶರೀರವೇ ಧರ್ಮಕ್ಕೆ ಮೂಲಸಾಧನವಾದುದರಿಂದ, ಶಿವಯೋಗಿಯು ಶರೀರವನ್ನು ಧರಿಸಿಕೊಂಡೇ ಸಮಸ್ತಸಿದ್ಧಿಗಳನ್ನೂ ಪಡೆಯಬೇಕೆಂದು ಭಾವವು. ॥೪೨॥

೧೪ ಅಕಾಯಸ್ಥಲಂ

ಔಪಚಾರಿಕದೇಹಿತ್ವಾಜ್ಜಗದಾತ್ಮತ್ವಭಾವನಾತ್ ।
ಮಾಯಾಸಂಬಂಧರಾಹಿತ್ಯಾದಕಾಯೋ ಹಿ ಪರಃ ಸ್ಮೃತಃ ॥೪೩॥

ಪರಸ್ಯ ದೇಹಯೋಗೇಽಪಿ ನ ದೇಹಾಶ್ರಯವಿಕ್ರಿಯಾ ।
ಶಿವಸ್ಯೇವ ಯತಸ್ತಸ್ಮಾದಕಾಯೋಽಯಂ ಪ್ರಕೀರ್ತಿತಃ ॥೪೪॥

ಪರಲಿಂಗೇ ವಿಲೀನಸ್ಯ ಪರಮಾನಂದಚಿನ್ಮಯೇ ।
ಕುತೋ ದೇಹೇನ ಸಂಬಂಧೋ ದೇಹಿವದ್ಭಾಸನಂ ಭ್ರಮಃ ॥೪೫॥

ದೇಹಾಭಿಮಾನಹೀನಸ್ಯ ಶಿವಭಾವೇ ಸ್ಥಿರಾತ್ಮನಃ ।
ಜಗದೇತಚ್ಛರೀರಂ ಸ್ಯಾದ್ದೇಹೇನೈಕೇನ ಕಾ ವ್ಯಥಾ ॥೪೬॥

ಶಿವಜ್ಞಾನೈಕನಿಷ್ಠಸ್ಯ ನಾಹಂಕಾರಭವೋ ಭ್ರಮಃ ।
ನ ಚೇಂದ್ರಿಯಭವಂ ದುಃಖಂ ತ್ಯಕ್ತದೇಹಾಭಿಮಾನಿನಃ ॥೪೭॥

---

೧೪ ಅಕಾಯಸ್ಥಲ

ಶಿವಯೋಗಿಯು ಔಪಚಾರಿಕದೇಹವುಳ್ಳವನಾಗಿರುವುದರಿಂದಲೂ, ಸಮಸ್ತ ಪ್ರಪಂಚವನ್ನು ಸ್ವಸ್ವರೂಪವನ್ನಾಗಿ ತಿಳಿಯುವುದರಿಂದಲೂ, ಮಾಯಾಸಂಬಂಧ ಶೂನ್ಯನಾಗಿರುವುದರಿಂದಲೂ ಅಕಾಯನೆಂದು ಹೇಳಿಸಿಕೊಳ್ಳುವನು. ॥೪೩॥ ಶಿವನಿಗೆ ಶರೀರಸಂಬಂಧವಿದ್ದರೂ ಶರೀರಸಂಬಂಧವಾದ ಕಾಮಕ್ರೋಧಾದಿವಿಕಾರಗಳು ಹೇಗಿರುವುದಿಲ್ಲವೋ, ಹಾಗೆಯೇ ಶಿವಯೋಗಿಗೆ ಶರೀರಸಂಬಂಧವಿದ್ದರೂ ಶರೀರ ಸಂಬಂಧವಾದ ಕಾಮಕ್ರೋಧಾದಿವಿಕಾರಗಳಿಲ್ಲದಿರುವುದರಿಂದ, ಇವನು ಅಕಾಯ ನೆಂದು ಹೇಳಿಸಿಕೊಳ್ಳುವನು. ॥೪೪॥ ಮಹಾನಂದಸ್ವರೂಪವೂ ಚಿತ್ಸ್ವರೂಪವೂ ಆದ ಶಿವಲಿಂಗದಲ್ಲಿ ಲೀನನಾದವನಿಗೆ ದೇಹಸಂಬಂಧವೆಲ್ಲಿಯದು ? ನೋಡುವವರಿಗೆ ಶರೀರಧಾರಿಯಂತೆ ತೋರುವುದು ಭ್ರಾಂತಿಯೇ ಸರಿ ! ॥೪೫॥ ಶಿವಸ್ವರೂಪದಲ್ಲಿ ಸ್ವಸ್ವರೂಪನ್ನು ಸ್ಥಿರಗೊಳಿಸಿದವನೂ, ದೇಹಾಭಿಮಾನಶೂನ್ಯನೂ ಆದ ಶಿವ ಯೋಗಿಗೆ ಈ ಜಗತ್ತೇ ಶರೀರವಾಗುವುದು ; ಅವನಿಗೆ ತನ್ನದೊಂದು ಶರೀರದಿಂದ ಯಾವ ದುಃಖವುಂಟಾಗುವುದು ? ಯಾವ ದುಃಖವೂ ಇಲ್ಲವೆಂದು ಭಾವವು. ॥೪೬॥ ಶಿವಜ್ಞಾನೈಕನಿಷ್ಠನೂ, ದೇಹಾಭಿಮಾನಶೂನ್ಯನೂ ಆದ ಶಿವಯೋಗಿಗೆ, ಅಹಂಕಾರ ದಿಂದುತ್ಪನ್ನವಾದ ಭ್ರಾಂತಿಯೂ ಇರುವುದಿಲ್ಲ ; ಇಂದ್ರಿಯಗಳಿಂದುತ್ಪನ್ನವಾದ ದುಃಖವೂ ಇರುವುದಿಲ್ಲ. ॥೪೭॥

ನ ಮನುಷ್ಯೋ ನ ದೇವೋಽಹಂ ನ ಯಕ್ಷೋ ನೈವ ರಾಕ್ಷಸಃ ।
ಶಿವೋಽಹಮಿತಿ ಯೋ ಬುದ್ಧ್ಯಾತ್ತಸ್ಯ ಕಿಂ ದೇಹಕರ್ಮಣಾ ॥೪೮॥

೧೫ ಪರಕಾಯಸ್ಥಲಂ

ವಶೀಕೃತತ್ವಾತ್ ಪ್ರಕೃತೇರ್ಮಾಯಾಮಾರ್ಗಾತಿವರ್ತನಾತ್ ।
ಪರಕಾಯೋಽಯಮಾಖ್ಯಾತಃ ಸತ್ಯಜ್ಞಾನಸುಖಾತ್ಮಕಃ ॥೪೯॥

ಪರಬ್ರಹ್ಮ ವಪುರ್ಯಸ್ಯ ಪ್ರಬೋಧಾನಂದಭಾಸುರಂ ।
ಪ್ರಾಕೃತೇನ ಕಿಮೇತೇನ ಶರೀರೇಣಾಸ್ಯ ಜಾಯತೇ ॥೫೦॥

ಸಮ್ಯಗ್‌ಜ್ಞಾನಾಗ್ನಿಸಂದಗ್ಧಜನ್ಮಬೀಜಕಲೇವರಃ ।
ಶಿವತತ್ತ್ವಾವಲಂಬೀ ಯಃ ಪರಕಾಯಃ ಸ ಉಚ್ಯತೇ ॥೫೧॥

ಇಂದ್ರಿಯಾಣಿ ಮನೋವೃತ್ತಿರ್ವಾಸನಾಃ ಕರ್ಮಸಂಭವಾಃ ।
ಯತ್ರ ಯಾಂತಿ ಲಯಂ ತೇನ ಸಕಾಯೋಽಯಂ ಪರಾತ್ಮನಾ ॥೫೨॥

ನಾನು ಮನುಷ್ಯನೂ ಅಲ್ಲ; ದೇವತೆಯೂ ಅಲ್ಲ; ಯಕ್ಷನೂ ಅಲ್ಲ; ರಾಕ್ಷಸನೂ ಅಲ್ಲ; ಆದರೆ ನಾನು ಶಿವನೆಂದು ಯಾವನು ತಿಳಿಯುವನೋ, ಅವನಿಗೆ ಶರೀರಸಂಬಂಧವಾದ ಕರ್ಮದಿಂದ ಏನು ಪ್ರಯೋಜನವು ? ಯಾವ ಪ್ರಯೋಜನವೂ ಇಲ್ಲವೆಂದು ಭಾವವು. ॥೪೮॥

೧೫ ಪರಕಾಯಸ್ಥಲ

ಅಕಾಯನಾದ ಈ ಶಿವಯೋಗಿಯು ಪ್ರಕೃತಿಯನ್ನು ಜಯಿಸಿ ತನ್ನ ವಶ ಮಾಡಿಕೊಂಡಿರುವುದರಿಂದಲೂ, ಮಾಯಾಮಾರ್ಗವನ್ನು ಮೀರಿರುವುದರಿಂದಲೂ, ಸಚ್ಚಿದಾನಂದಸ್ವರೂಪನಾದ ಪರಕಾಯನೆಂದು ಹೇಳಿಸಿಕೊಳ್ಳುವನು. ॥೪೯॥ ಜ್ಞಾನಾನಂದಗಳಿಂದ ಪ್ರಕಾಶಮಾನವಾದ ಪರಬ್ರಹ್ಮವು ಯಾವನಿಗೆ ಶರೀರವಾಗಿದೆಯೋ, ಆ ಪರಕಾಯಶಿವಯೋಗಿಗೆ ಪ್ರಕೃತಿಸಂಬಂಧವಾದ ಈ ಶರೀರದಿಂದ ಯಾವ ಪ್ರಯೋಜನವುಂಟಾಗುವುದು ? ಯಾವ ಪ್ರಯೋಜನವೂ ಉಂಟಾಗುವುದಿಲ್ಲವೆಂದು ಭಾವವು. ॥೫೦॥ ಯಾವನು ಶಿವಜ್ಞಾನಾಗ್ನಿಯಿಂದ ಭವಬೀಜಾವಯವವನ್ನು ಚನ್ನಾಗಿ ಸುಟ್ಟಿರುವನೋ ಹಾಗೂ ಶಿವತತ್ತ್ವಾವಲಂಬಿಯಾಗಿರುವನೋ, ಅವನೇ ಪರಕಾಯನೆನಿಸುವನು. ॥೫೧॥ ಕರ್ಮದಿಂದುತ್ಪನ್ನವಾದ ವಾಸನೆಗಳು ಮನೋವ್ಯಾಪಾರವು ಮತ್ತು ಇಂದ್ರಿಯವ್ಯಾಪಾರಗಳು ಯಾವುದರಲ್ಲಿ ಅಡಗುವುವೋ, ಆ ಪರಬ್ರಹ್ಮದಿಂದ ಈ ಪರಕಾಯನು ದೇಹಧಾರಿಯೆನಿಸುವನು. ಅರ್ಥಾತ್ ಇವನ ಶರೀರವು

ಪರಾಹಂತಾಮನುಪ್ರಾಪ್ಯ ಪಶ್ಯೇದ್ವಿಶ್ವಂ ಚಿದಾತ್ಮಕಂ ।
ನ ದೇಹೀತಿ ಭ್ರಮಸ್ತಸ್ಯ ನಿಶ್ಚಿತಾ ಹಿ ಶಿವಾತ್ಮತಾ ॥೫೩॥

ಸ್ವಸ್ವರೂಪಂ ಶಿವಾಕಾರಂ ಜ್ಯೋತಿಸ್ಸಾಕ್ಷಾದ್ವಿಚಿಂತಯನ್ ।
ದೇಹವಾನಪಿ ನಿರ್ದೇಹೋ ಜೀವನ್ಮುಕ್ತೋ ಹಿ ಸಾಧಕಃ ॥೫೪॥

ದೇಹಸ್ತಿಷ್ಠತು ವಾ ಯಾತು ಯೋಗಿನಃ ಸ್ವಾತ್ಮಬೋಧಿನಃ ।
ಜೀವನ್ಮುಕ್ತಿರ್ಭವೇತ್ ಸದ್ಯಶ್ಚಿದಾನಂದಪ್ರಕಾಶಿನೀ ॥೫೫॥

ಆತ್ಮಜ್ಞಾನಾವಸಾನಂ ಹಿ ಸಂಸಾರಪರಿಪೀಡನಂ ।
ಸೂರ್ಯೋದಯೇಽಪಿ ಕಿಂ ಲೋಕಸ್ತಿಮಿರೇಣೋಪರುದ್ಧ್ಯತೇ ॥೫೬॥

ದೇಹಾಭಿಮಾನನಿರ್ಮುಕ್ತಃ ಕಲಾತೀತಪದಾಶ್ರಯಃ ।
ಕಥಂ ಯಾತಿ ಪರಿಚ್ಛೇದಂ ಶರೀರೇಷು ಮಹಾಬುಧಃ ॥೫೭॥

ಪರಬ್ರಹ್ಮಮಯವಾದುದೆಂದು ಭಾವವು. ॥೫೨॥ ಯಾವನು ಪರಬ್ರಹ್ಮನೇ ನಾನೆಂಬ ಭಾವನೆಯನ್ನು ತಾಳಿ, ಸಮಸ್ತಪ್ರಪಂಚವನ್ನು ಪರಬ್ರಹ್ಮಸ್ವಭಾವಭೂತಚಿತ್ಕ್ರಿಯಾ ಸ್ವರೂಪವನ್ನಾಗಿ ಕಾಣುವನೋ, ಅವನಿಗೆ ದೇಹಿತ್ವಭ್ರಮವು ಇರುವುದಿಲ್ಲ. ಅವನಿಗೆ ಶಿವಸ್ವರೂಪತ್ವವೇ ನಿಶ್ಚಿತವಾದುದು. ॥೫೩॥ ಸ್ವಸ್ವರೂಪವನ್ನು ಸಾಕ್ಷಾತ್ ಶಿವಸ್ವರೂಪವಾದ ಜ್ಯೋತಿಯನ್ನಾಗಿ ಭಾವಿಸುವ ಸಾಧಕನು (ಶಿವಯೋಗಿಯು) ದೇಹವುಳ್ಳವನಾದರೂ, ದೇಹಶೂನ್ಯನಾದ ಜೀವನ್ಮುಕ್ತನೆನಿಸುವನು. ॥೫೪॥ ಸ್ವಸ್ವರೂಪವನ್ನು ತಿಳಿದ ಶಿವಯೋಗಿಗೆ ದೇಹವು ಇರಲಿ ಅಥವಾ ಹೋಗಲಿ, ತತ್ಕಾಲ ದಲ್ಲಿಯೇ ಅವನಿಗೆ ಚಿದಾನಂದಪ್ರಕಾಶಕವಾದ ಜೀವನ್ಮುಕ್ತಿಯು ಪ್ರಾಪ್ತವಾಗುವುದು. ॥೫೫॥ ಆತ್ಮಜ್ಞಾನವಾಗುವವರೆಗೂ ಸಂಸಾರದುಃಖವಿರುವುದು ; ಆತ್ಮಜ್ಞಾನವಾದ ಮೇಲೆ ಸಂಸಾರದುಃಖವೆಲ್ಲಿಯದು ? ಸೂರ್ಯೋದಯವಾದರೂ ಪ್ರಪಂಚವು ಕತ್ತಲೆ ಯಿಂದ ವ್ಯಾಪಿಸಲ್ಪಡುವುದೇನು ? ಸೂರ್ಯೋದಯವಾಗುತ್ತಲೇ ಕತ್ತಲೆಯು ನಷ್ಟ ವಾಗುವಂತೆ, ಆತ್ಮಜ್ಞಾನವಾಗುತ್ತಲೇ ಸಂಸಾರದುಃಖವು ನಷ್ಟವಾಗುವುದೆಂದು ಭಾವವು. ॥೫೬॥ ದೇಹಾಭಿಮಾನಶೂನ್ಯನೂ, ನಿವೃತ್ತ್ಯಾದಿಕಲಾತೀತಪರಬ್ರಹ್ಮ ಪದಾಶ್ರಯನೂ ಆದ ಪರಕಾಯನು ಶರೀರಗಳಲ್ಲಿ ಇದು ನನ್ನದು, ಇದು ಎರಡನೆ ಯವರದು, ಎಂಬ ಭೇದಭಾವವನ್ನು ಹೇಗೆ ಹೊಂದುವನು ? ಸರ್ವಶರೀರಗಳನ್ನೂ ಸ್ವಸ್ವರೂಪವನ್ನಾಗಿಯೇ ಭಾವಿಸುವನೆಂದು ಭಾವವು. ॥೫೭॥

೧೬ ಧರ್ಮಾಚಾರಸ್ಥಲಂ

ತಸ್ಯೈವ ಪರಕಾಯಸ್ಯ ಧರ್ಮಾಚಾರೋ ಯ ಇಷ್ಯತೇ ।
ಸ ಧರ್ಮಃ ಸರ್ವಲೋಕಾನಾಮುಪಕಾರಾಯ ಕಲ್ಪತೇ ॥೫೮॥

ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಂ ದಯಾ ಕ್ಷಮಾ ।
ದಾನಂ ಪೂಜಾ ಜಪೋ ಧ್ಯಾನಮಿತಿ ಧರ್ಮಸ್ಯ ಸಂಗ್ರಹಃ ॥೫೯॥

ಶಿವೇನ ವಿಹಿತೋ ಯಸ್ಮಾದಾಗಮೈರ್ಧರ್ಮಸಂಗ್ರಹಃ ।
ತಸ್ಮಾತ್ತಮಾಚರನ್ ವಿದ್ವಾನ್ ತತ್ಪ್ರಸಾದಾಯ ಕಲ್ಪತೇ ॥೬೦॥

ಅಧರ್ಮಂ ನ ಸ್ಪೃಶೇತ್ ಕಿಂಚಿದ್ವಿಹಿತಂ ಧರ್ಮಮಾಚರೇತ್ ।
ತಂ ಚ ಕಾಮವಿನಿರ್ಮುಕ್ತಂ ತಮಪಿ ಜ್ಞಾನಪೂರ್ವಕಂ ॥೬೧॥

ಆತ್ಮವತ್ಸರ್ವಭೂತಾನಿ ಸಂಪಶ್ಯೇದ್ಯೋಗವಿತ್ತಮಃ ।
ಜಗದೇಕಾತ್ಮತಾಭಾವಾನ್ನಿಗ್ರಹಾದಿವಿರೋಧತಃ ॥೬೨॥

---

೧೬ ಧರ್ಮಾಚಾರಸ್ಥಲ

ಪರಬ್ರಹ್ಮಶರೀರಿಯಾದ ಆ ಶಿವಯೋಗಿಗೆ ಯಾವ ಧರ್ಮಾಚಾರವು ಇಷ್ಟವೆನಿಸುವುದೋ, ಆ ಧರ್ಮಾಚಾರವೇ ಸಮಸ್ತಜನರ ಕಲ್ಯಾಣಕ್ಕೋಸ್ಕರ ಸಮರ್ಥವಾಗುವುದು. ॥೫೮॥ ಹಿಂಸೆಯನ್ನು ಮಾಡದಿರುವಿಕೆ, ಕದಿಯದಿರುವಿಕೆ, ಸತ್ಯವಾಗಿ ಮಾತನಾಡು ಬ್ರಹ್ಮಚರ್ಯ, ದಯೆ, ಕ್ಷಮೆ, ದಾನ, ಶಿವಪೂಜೆ, ಪಂಚಾಕ್ಷರಮಹಾಮಂತ್ರಜಪ, ಶಿವಧ್ಯಾನ ಇದೇ ಧರ್ಮಸಂಗ್ರಹವೆನಿಸುವುದು. ॥೫೯॥ ಶಿವನಿಂದ ಅಹಿಂಸಾದಿ ಧರ್ಮಸಂಗ್ರಹವು ಶಿವಾಗಮಗಳಲ್ಲಿ ಹೇಳಲ್ಪಟ್ಟಿರುವುದು. ಅಂತಹ ಧರ್ಮಸಂಗ್ರಹವನ್ನಾಚರಿಸತಕ್ಕ ವಿದ್ವಾಂಸನು ಶಿವಪ್ರಸಾದಕ್ಕೆ ಪಾತ್ರನಾಗುತ್ತಾನೆ. ಅಹಿಂಸಾದಿ ಧರ್ಮಗಳನ್ನಾಚರಿಸದಿದ್ದರೆ ಶಿವಕೃಪೆಗೆ ಪಾತ್ರನಾಗುವುದಿಲ್ಲವೆಂದು ಭಾವವು. ॥೬೦॥ ವಿದ್ವಾಂಸನು ಅಧರ್ಮವನ್ನು ಸ್ವಲ್ಪವೂ ಸ್ಪರ್ಶಿಸಕೂಡದು ; ಶಿವಾಗಮಗಳಲ್ಲಿ ಹೇಳಲ್ಪಟ್ಟ ಧರ್ಮವನ್ನೇ ಆಚರಿಸಬೇಕು. ಆ ಧರ್ಮವನ್ನಾದರೋ ನಿಷ್ಕಾಮಬುದ್ಧಿಯಿಂದಲೂ, ಜ್ಞಾನಪೂರ್ವಕವಾಗಿಯೂ ಆಚರಿಸಬೇಕು. ॥೬೧॥ ಯೋಗಿಯಾದವನು ಸಮಸ್ತ ಪ್ರಪಂಚವನ್ನೂ ಏಕಾತ್ಮಸ್ವರೂಪದಿಂದ ತಿಳಿಯುವುದರಿಂದಲೂ, ನಿಗ್ರಹಾದಿಗಳಿಗೆ ಅವಕಾಶವನ್ನು ಕೊಡದಿರುವುದರಿಂದಲೂ, ಸಮಸ್ತಪ್ರಾಣಿಗಳನ್ನೂ ತನ್ನಂತೆ ತಿಳಿಯುವನು. ॥೬೨॥

ಏಕ ಏವ ಶಿವಸ್ಸಾಕ್ಷಾಜ್ಜಗದೇತದಿತಿ ಸ್ಫುಟಂ ।
ಪಶ್ಯತಃ ಕಿಂ ನ ಜಾಯೇತ ಮಮಕಾರೋ ಹಿ ವಿಭ್ರಮಃ ॥೬೩॥

ಧರ್ಮ ಏವ ಸಮಸ್ತಾನಾಂ ಯತಃ ಸಂಸಿದ್ಧಿಕಾರಣಂ ।
ನಿಃಸ್ಪೃಹೋಽಪಿ ಮಹಾಯೋಗೀ ಧರ್ಮಮಾರ್ಗಂ ಹಿ ನ ತ್ಯಜೇತ್ ॥೬೪॥

ಜ್ಞಾನಾಮೃತೇನ ತೃಪ್ತೋಽಪಿ ಯೋಗೀ ಧರ್ಮಂ ನ ಸಂತ್ಯಜೇತ್ ।
ಆಚಾರಂ ಮಹತಾಂ ದೃಷ್ಟ್ವಾ ಪ್ರವರ್ತಂತೇ ಹಿ ಲೌಕಿಕಾಃ ॥೬೫॥

ಸದಾಚಾರಪ್ರಿಯಃ ಶಂಭುಃ ಸದಾಚಾರೇಣ ಪೂಜ್ಯತೇ ।
ಸದಾಚಾರಂ ವಿನಾ ತಸ್ಯ ಪ್ರಸಾದೋ ನೈವ ಜಾಯತೇ ॥೬೬॥

೧೭ ಭಾವಾಚಾರಸ್ಥಲಂ

ಭಾವ ಏವಾಸ್ಯ ಸರ್ವೇಷಾಂ ಭಾವಾಚಾರಃ ಪ್ರಕೀರ್ತಿತಃ ।
ಭಾವೋ ಮಾನಸಚೇಷ್ಟಾತ್ಮಾ ಪರಿಪೂರ್ಣಃ ಶಿವಾಶ್ರಯಃ ॥೬೭॥

ಭಾವನಾವಿಹಿತಂ ಕರ್ಮ ಪಾವನಾದಪಿ ಪಾವನಂ ।
ತಸ್ಮಾದ್ಭಾವನಯಾ ಯುಕ್ತಂ ಪರಧರ್ಮಂ ಸಮಾಚರೇತ್ ॥೬೮॥

ಒಬ್ಬನಾದ ಶಿವನೇ ಪ್ರತ್ಯಕ್ಷನಾದ ಈ ಜಗತ್ತೆಂದು ತಿಳಿದು ಸ್ಫುಟವಾಗಿ ನೋಡುವವನಿಗೆ ಯಾವುದು ಸಿದ್ಧಿಸುವುದಿಲ್ಲ? ಸರ್ವವೂ ಸಿದ್ಧಿಸುವುದೆಂದು ಭಾವವು. ಜಗತ್ತಿನಲ್ಲಿ ಮಮಕಾರವೆನ್ನುವುದು ಭ್ರಮವಷ್ಟೆ! ॥೬೩॥ ಧರ್ಮವೇ ಸಮಸ್ತಜನರ ಭೋಗಮೋಕ್ಷಪ್ರಾಪ್ತಿಗೆ ಕಾರಣವಾಗಿರುವುದು. ಆದುದರಿಂದ ಯೋಗಿಯು ತಾನು ನಿಃಸ್ಪೃಹನಾದರೂ ಧರ್ಮಮಾರ್ಗವನ್ನು ಬಿಡಬಾರದು. ॥೬೪॥ ಯೋಗಿಯು ತಾನು ಜ್ಞಾನಾಮೃತದಿಂದ ತೃಪ್ತನಾಗಿದ್ದರೂ ಧರ್ಮವನ್ನು ಬಿಡಬಾರದು; ಏಕೆಂದರೆ—ಲೌಕಿಕರು ದೊಡ್ಡವರ ಆಚಾರವನ್ನು ನೋಡಿ ಅವರಂತೆ ವರ್ತಿಸುವರಷ್ಟೆ! ॥೬೫॥ ಶಿವನು ಸದಾಚಾರಪ್ರಿಯನಾಗಿರುವನು ; ಸದಾಚಾರದಿಂದಲೇ ಪೂಜಿಸಲ್ಪಡುವನು. ಸದಾಚಾರವಿಲ್ಲದೆ ಅವನ ಪ್ರಸಾದವೇ ಸಿದ್ಧಿಸುವುದಿಲ್ಲ. ॥೬೬॥

೧೭ ಭಾವಾಚಾರಸ್ಥಲ

ಈ ಧರ್ಮಾಚಾರಸಂಪನ್ನನಾದ ಶಿವಯೋಗಿಯ ಶಿವಭಾವನೆಯೇ ಭಾವಾಚಾರವೆನಿಸುವುದು. ಈ ಭಾವವು ಮನೋವ್ಯಾಪಾರಸ್ವರೂಪವಾಗಿಯೂ, ಪರಿಪೂರ್ಣವಾಗಿಯೂ, ಶಿವಸ್ವರೂಪವಾಗಿಯೂ ಇರಬೇಕು. ॥೬೭॥ ಭಾವಯುಕ್ತವಾದ ಶಿವಪೂಜಾದಿಕರ್ಮವು ಅತ್ಯಂತಪವಿತ್ರವಾಗಿರುವುದು. ಆದುದರಿಂದ ಶ್ರೇಷ್ಠವಾದ ಆಚಾರಧರ್ಮವನ್ನು ಭಾವಸಹಿತನಾಗಿಯೇ ಆಚರಿಸಬೇಕು. ॥೬೮॥

ಭಾವೇನ ಹಿ ಮನಶ್ಶುದ್ಧಿರ್ಭಾವಾತ್ ಸಿದ್ಧಿಶ್ಚ ಕರ್ಮಣಾಂ ।
ಇತಿ ಸಂಚಿಂತ್ಯ ಮನಸಾ ಯೋಗೀ ಭಾವಂ ನ ಸಂತ್ಯಜೇತ್ ॥೬೯॥

ಶಿವಭಾವನಯಾ ಸರ್ವಂ ನಿತ್ಯನೈಮಿತ್ತಿಕಾದಿಕಂ ।
ಕುರ್ವನ್ನಪಿ ಮಹಾಯೋಗೀ ಗುಣದೋಷೈರ್ನ ಬಾಧ್ಯತೇ ॥೭೦॥

ಅಂತಃಪ್ರಕಾಶಮಾನಸ್ಯ ಸಂವಿತ್ಸೂರ್ಯಸ್ಯ ಸಂತತಂ ।
ಭಾವೇನ ಯದುಪಸ್ಥಾನಂ ತತ್ ಸಂಧ್ಯಾವಂದನಂ ವಿದುಃ ॥೭೧॥

ಆತ್ಮಜ್ಯೋತಿಷಿ ಸರ್ವೇಷಾಂ ವಿಷಯಾಣಾಂ ಸಮರ್ಪಣಂ ।
ಅಂತರ್ಮುಖೇನ ಭಾವೇನ ಹೋಮಕರ್ಮೇತಿ ಗೀಯತೇ ॥೭೨॥

ಭಾವಯೇತ್ ಸರ್ವಕರ್ಮಾಣಿ ನಿತ್ಯನೈಮಿತ್ತಿಕಾನಿ ಚ ।
ಶಿವಪ್ರೀತಿಕರಾಣ್ಯೇವ ಸಂಗರಾಹಿತ್ಯಸಿದ್ಧಯೇ ॥೭೩॥

ಶಿವೇ ನಿವೇಶ್ಯ ಸಕಲಂ ಕಾರ್ಯಾಕಾರ್ಯಂ ವಿವೇಕತಃ ।
ವರ್ತತೇ ಯೋ ಮಹಾಭಾಗಃ ಸ ಸಂಗರಹಿತೋ ಭವೇತ್ ॥೭೪॥

ಆತ್ಮಾನಮಖಿಲಂ ವಸ್ತು ಶಿವಮಾನಂದಚಿನ್ಮಯಂ ।
ಏಕೀಭಾವೇನ ಸತತಂ ಸಂಪಶ್ಯನ್ನೇವ ಪಶ್ಯತಿ ॥೭೫॥

ಭಾವದಿಂದಲೇ ಮನಶ್ಶುದ್ಧಿಯಾಗುವುದೆಂದೂ, ಭಾವದಿಂದಲೇ ಕರ್ಮಗಳ ಸಿದ್ಧಿಯಾಗುವುದೆಂದೂ ಯೋಗಿಯು ಮನಸ್ಸಿನಿಂದ ಯೋಚಿಸಿ, ಭಾವವನ್ನು ಬಿಡಬಾರದು. ॥೬೯॥ ಶಿವಯೋಗಿಯು ಸಮಸ್ತನಿತ್ಯನೈಮಿತ್ತಿಕಾದಿಕರ್ಮಗಳನ್ನು ಮಾಡುತ್ತಿದ್ದರೂ ಶಿವಭಾವನೆಯಿಂದ ಮಾಡುವಪಕ್ಷದಲ್ಲಿ ಅವನು ಯಾವ ಗುಣದೋಷಗಳಿಂದಲೂ ಬಂಧಿಸಲ್ಪಡುವುದಿಲ್ಲ. ॥೭೦॥ ಹೃದಯಕಮಲದಲ್ಲಿ ಪ್ರಕಾಶಿಸುವ ಜ್ಞಾನಸೂರ್ಯನನ್ನು ಯಾವಾಗಲೂ ಭಾವದಿಂದ ಆರಾಧಿಸುವುದು ಯಾವುದುಂಟೋ, ಅದನ್ನೇ ಜ್ಞಾನಿಗಳು ಸಂಧ್ಯಾವಂದನವೆಂದು ತಿಳಿಯುವರು. ॥೭೧॥ ಅಂತರ್ಮುಖವಾದ ಭಾವದಿಂದ ಆತ್ಮಾಗ್ನಿಯಲ್ಲಿ ಸಮಸ್ತವಿಷಯಗಳ ಸಮರ್ಪಣವಾವುದುಂಟೋ, ಅದೇ ಹೋಮಕರ್ಮವೆಂದು ಹೇಳಿಸಿಕೊಳ್ಳುವುದು. ॥೭೨॥ ಸಂಸಾರಸಂಬಂಧನಿವೃತ್ತಿಗಾಗಿ ನಿತ್ಯನೈಮಿತ್ತಿಕಾದಿಸರ್ವಕರ್ಮಗಳನ್ನು ಶಿವಪ್ರೀತಿಕರವನ್ನಾಗಿಯೇ ಭಾವಿಸಬೇಕು. ॥೭೩॥ ಯಾವ ಮಹಾತ್ಮನು ವಿವೇಕದಿಂದ ಸಕಲಕಾರ್ಯಾಕಾರ್ಯಗಳನ್ನು ಶಿವನಲ್ಲಿಯೇ ಸಮರ್ಪಿಸಿ ಇರುತ್ತಾನೆಯೋ, ಅವನೇ ಸಂಸಾರಸಂಬಂಧದೂರನಾಗುವನು. ॥೭೪॥ ತನ್ನನ್ನೂ, ಸಮಸ್ತವಸ್ತುಗಳನ್ನೂ, ಚಿದಾನಂದಸ್ವರೂಪನಾದ ಶಿವನನ್ನೂ ಯಾವಾಗಲೂ ಏಕರೂಪದಿಂದ ನೋಡುವವನೇ ಶಿವನನ್ನು ನೋಡುವನು. ಸರ್ವವನ್ನೂ ಶಿವಸ್ವರೂಪದಿಂದ ಕಾಣುವವನೇ ಶಿವಸ್ವರೂಪನಾಗುವನೆಂದು ಭಾವವು. ॥೭೫॥

೧೮ ಜ್ಞಾನಾಚಾರಸ್ಥಲಂ

ಅಸ್ಯ ಜ್ಞಾನಸಮಾಚಾರೋ ಯೋಗಿನಃ ಸರ್ವದೇಹಿನಾಂ ।
ಜ್ಞಾನಾಚಾರೋ ಯದುಕ್ತ್ರೋಽಯಂ ಜ್ಞಾನಾಚಾರಃ ಸ ಕಥ್ಯತೇ ॥೭೬॥

ಪರಿಪೂರ್ಣಂ ಮಹಾಜ್ಞಾನಂ ಪರತತ್ತ್ವಪ್ರಕಾಶಕಂ ।
ಅವಲಂಬ್ಯ ಪ್ರವೃತ್ತೋ ಯೋ ಜ್ಞಾನಾಚಾರಃ ಸ ಉಚ್ಯತೇ ॥೭೭॥

ನಿರ್ವಿಕಲ್ಪೇ ಪರೇ ಧಾಮ್ನಿ ನಿಷ್ಕಲೇ ಶಿವನಾಮನಿ ।
ಜ್ಞಾನೇನ ಯೋಜಯನ್ ಸರ್ವಂ ಜ್ಞಾನಾಚಾರೀ ಪ್ರಕೀರ್ತಿತಃ ॥೭೮॥

ಕರ್ಮ ಜ್ಞಾನಾಗ್ನಿನಾ ದಗ್ಧಂ ನ ಪ್ರರೋಹೇತ್ ಕಥಂಚನ ।
ಯದಾಹುಃ ಸಂಸೃತೇರ್ಮೂಲಂ ಪ್ರವಾಹಾನುಗತಂ ಬುಧಾಃ ॥೭೯॥

ಜ್ಞಾನೇನ ಹೀನಃ ಪುರುಷಃ ಕರ್ಮಣಾ ಬಧ್ಯತೇ ಸದಾ ।
ಜ್ಞಾನಿನಃ ಕರ್ಮಸಂಕಲ್ಪಾ ಭವಂತಿ ಕಿಲ ನಿಷ್ಫಲಾಃ ॥೮೦॥

ಜ್ಞಾನಂ ಮುಕ್ತಿಪ್ರದಂ ಪ್ರಾಪ್ಯ ಗುರುದೃಷ್ಟಿಪ್ರಸಾದತಃ ।
ಕಃ ಕುರ್ಯಾತ್ಕರ್ಮಕಾರ್ಪಣ್ಯೇ ವಾಂಛಾಂ ಸಂಸಾರವರ್ಧನೇ ॥೮೧॥

---

೧೮ ಜ್ಞಾನಾಚಾರಸ್ಥಲ

ಭಾವಾಚಾರಸಂಪನ್ನನಾದ ಈ ಶಿವಯೋಗಿಯ ಜ್ಞಾನಪೂರ್ವಕವಾದ ಆಚಾರವೇ ಸಮಸ್ತಮಾನವರ ಉದ್ಧಾರಕ್ಕೋಸ್ಕರ ಜ್ಞಾನಾಚಾರವೆಂದು ಹೇಳಿಸಿಕೊಳ್ಳುವುದು. ॥೭೬॥ ಪರತತ್ತ್ವಪ್ರಕಾಶಕವೂ, ಪರಿಪೂರ್ಣವೂ ಆದ ಶಿವಾದ್ವೈತಜ್ಞಾನವನ್ನು ಯಾವುದು ಅವಲಂಬಿಸಿ ಪ್ರವರ್ತಿಸುವುದೋ, ಅದು ಜ್ಞಾನಾಚಾರವೆಂದು ಹೇಳಿಸಿಕೊಳ್ಳುವದು. ॥೭೭॥ ನಿರ್ವಿಕಲ್ಪವೂ, ನಿಷ್ಕಲವೂ, ಶಿವನಾಮಕವೂ ಆದ ಪರಬ್ರಹ್ಮದಲ್ಲಿ ಸಮಸ್ತಜಗತ್ತನ್ನು ಅಭೇದಜ್ಞಾನದಿಂದ ಯೋಜಿಸುವವನು ಜ್ಞಾನಾಚಾರಿಯೆಂದು ಹೇಳಿಸಿಕೊಳ್ಳುವನು. ॥೭೮॥ ಜ್ಞಾನಿಗಳು ಅನಾದಿಕಾಲದಿಂದ ಪ್ರವಾಹರೂಪವಾಗಿ ಬಂದಿರುವ ಯಾವ ಕರ್ಮವನ್ನು ಸಂಸಾರಕ್ಕೆ ಮೂಲಕಾರಣವನ್ನಾಗಿ ಹೇಳುತ್ತಾರೆಯೋ, ಆ ಕರ್ಮವು ಜ್ಞಾನಾಗ್ನಿಯಿಂದ ಸುಡಲ್ಪಟ್ಟರೆ, ಯಾವ ರೀತಿಯಿಂದಲೂ ಅಂಕುರಿಸುವುದಿಲ್ಲ. ॥೭೯॥ ಜ್ಞಾನಶೂನ್ಯನಾದ ಪುರುಷನು ಯಾವಾಗಲೂ ಕರ್ಮದಿಂದ ಬಂಧಿಸಲ್ಪಡುತ್ತಾನೆ. ಜ್ಞಾನಿಗೆ ಕರ್ಮಸಂಕಲ್ಪಗಳು ನಿಷ್ಫಲವಾಗುವುವು. ॥೮೦॥ ಗುರುಕಟಾಕ್ಷಾನುಗ್ರಹದಿಂದ ಮೋಕ್ಷಪ್ರದವಾದ ಜ್ಞಾನವನ್ನು ಪಡೆದು, ಪುನಃ ಯಾವನು ತಾನೇ ಸಂಸಾರವನ್ನು ಅಭಿವೃದ್ಧಿಗೊಳಿಸುವ ಕರ್ಮದ ಗೊಂದಲದಲ್ಲಿ ಇಚ್ಛೆಯನ್ನು ಮಾಡುವನು? ಯಾವನೂ

ಶಿವಾದ್ವೈತಪರಂ ಜ್ಞಾನಂ ಜ್ಞಾನಮಿತ್ಯುಚ್ಯತೇ ಬುಧೈಃ ।
ಸಿದ್ಧೇನ ವಾಪ್ಯಸಿದ್ಧೇನ ಫಲಂ ಜ್ಞಾನಾಂತರೇಣ ಕಿಂ ॥೮೨॥

ನಿರ್ಮಲಂ ಹಿ ಶಿವಜ್ಞಾನಂ ನಿಃಶ್ರೇಯಸಕರಂ ಪರಂ ।
ರಾಗದ್ವೇಷಾದಿಕಲುಷಂ ಭೂಯಃ ಸಂಸೃತಿಕಾರಣಂ ॥೮೩॥

ಶುದ್ಧಾಚಾರಃ ಶುದ್ಧಭಾವೋ ವಿವೇಕೀ
ಜ್ಯೋತಿಃ ಪಶ್ಯನ್ ಸರ್ವತಃ ಶೈವಮೇಕಂ ।
ಜ್ಞಾನಧ್ವಸ್ತಪ್ರಾಕೃತಾತ್ಮಪ್ರಪಂಚೋ
ಜೀವನ್ಮುಕ್ತಶ್ಚೇಷ್ಟತೇ ದಿವ್ಯಯೋಗೀ ॥೮೪॥

ಇತಿ ಶ್ರೀಸಿದ್ಧಾಂತಶಿಖಾಮಣೌ ಲಿಂಗಸ್ಥಲೀಯಮಾಹೇಶ್ವರಸ್ಥಲೇ ಕ್ರಿಯಾಗಮಸ್ಥಲಾದಿನವವಿಧಸ್ಥಲಪ್ರಸಂಗೋ ನಾಮ

ಷೋಡಶಪರಿಚ್ಛೇದಃ ಪರಿಸಮಾಪ್ತಃ.

ಮಾಡುವುದಿಲ್ಲವೆಂದು ಭಾವವು. ॥೮೧॥ ಶಿವಾದ್ವೈತಪರವಾದ ಜ್ಞಾನವೇ ನಿಜವಾದ ಜ್ಞಾನವೆಂದು ಜ್ಞಾನಿಗಳು ಹೇಳುತ್ತಿರುವರು. ಶಾಸ್ತ್ರದಿಂದ ಸಿದ್ಧವಾಗಲಿ ಅಥವಾ ಸಿದ್ಧವಾಗದಿರಲಿ, ಶಿವಜ್ಞಾನೇತರಜ್ಞಾನದಿಂದ ಏನು ಪ್ರಯೋಜನವು? ಯಾವ ಪ್ರಯೋಜನವೂ ಇಲ್ಲವೆಂದು ಭಾವವು. ॥೮೨॥ ಶಿವಜ್ಞಾನವು ಆಣವಾದಿಮಲಸಂಬಂಧರಹಿತವಾಗಿದ್ದು ಮೋಕ್ಷವನ್ನುಂಟುಮಾಡತಕ್ಕುದಾಗಿರುವುದು. ಆದರೆ ಶಿವಜ್ಞಾನಭಿನ್ನವಾದ ಜ್ಞಾನವು ರಾಗದ್ವೇಷಾದಿಗಳಿಂದ ಮಿಶ್ರವಾಗಿದ್ದು ಪುನಃ ಪುನಃ ಸಂಸಾರಕ್ಕೆ ಕಾರಣವಾಗಿರುವುದು. ॥೮೩॥ ಶುದ್ಧಾಚಾರವುಳ್ಳವನೂ, ಶುದ್ಧಭಾವವುಳ್ಳವನೂ, ಜ್ಞಾನಿಯೂ, ಎಲ್ಲ ಕಡೆಯಲ್ಲೂ ಒಂದೇಒಂದಾದ ಶೈವತೇಜಸ್ಸನ್ನು ನೋಡುವವನೂ, ಶಿವಾದ್ವೈತಜ್ಞಾನಾಗ್ನಿಯಿಂದ ಪ್ರಕೃತಿಜನ್ಯವಾದ ದೇಹಪ್ರಪಂಚವನ್ನು ನಾಶಗೊಳಿಸಿದವನೂ ಆದ ಶಿವಯೋಗಿಯು ಜೀವನ್ಮುಕ್ತನಾಗಿ ಲೌಕಿಕರಂತೆ ವ್ಯವಹರಿಸುತ್ತಿರುವನು. ॥೮೪॥

ಇಂತು ಶ್ರೀಸಿದ್ಧಾಂತಶಿಖಾಮಣಿಯ ಲಿಂಗಸ್ಥಲೀಯಮಾಹೇಶ್ವರಸ್ಥಲದಲ್ಲಿ ಕ್ರಿಯಾಸ್ಥಲಾದಿನವವಿಧಸ್ಥಲವಿಚಾರಾತ್ಮಕವಾದ

ಹದಿನಾರನೆಯ ಪರಿಚ್ಛೇದವು ಪರಿಸಮಾಪ್ತವಾದುದು.

ಶ್ರೀಜಗದ್ಗುರುರೇಣುಕಾಚಾರ್ಯಃ ಪ್ರಸೀದತು.

ಸಪ್ತದಶಪರಿಚ್ಛೇದಃ

ಪ್ರಸಾದಿಸ್ಥಲಂ

॥ ಅಗಸ್ತ್ಯ ಉವಾಚ ॥

ಸ್ಥಲಾನಿ ತಾನಿ ಚೋಕ್ತಾನಿ ಯಾನಿ ಮಾಹೇಶ್ವರಸ್ಥಲೇ ।
ಕಥಯ ಸ್ಥಲಭೇದಂ ಮೇ ಪ್ರಸಾದಿಸ್ಥಲಸಂಶ್ರಿತಂ ॥೧॥

॥ ಶ್ರೀರೇಣುಕ ಉವಾಚ ॥

ಸ್ಥಲಭೇದಾ ನವ ಪ್ರೋಕ್ತಾಃ ಪ್ರಸಾದಿಸ್ಥಲಸಂಶ್ರಿತಾಃ ।
ಕಾಯಾನುಗ್ರಹಣಂ ಪೂರ್ವಮಿಂದ್ರಿಯಾನುಗ್ರಹಸ್ತತಃ ॥೨॥

ಪ್ರಾಣಾನುಗ್ರಹಣಂ ಪಶ್ಚಾತ್ತತಃ ಕಾಯಾರ್ಪಣಂ ಮತಂ ।
ಕರಣಾರ್ಪಣಮಾಖ್ಯಾತಂ ತತೋ ಭಾವಾರ್ಪಣಂ ಮತಂ ॥೩॥

ಶಿಷ್ಯಸ್ಥಲಂ ತತಃ ಪ್ರೋಕ್ತಂ ಶುಶ್ರೂಷುಸ್ಥಲಮೇವ ಚ ।
ತತಃ ಸೇವ್ಯಸ್ಥಲಂ ಚೈಷಾಂ ಕ್ರಮಶಃ ಶೃಣು ಲಕ್ಷಣಂ ॥೪॥

ಹದಿನೇಳನೆಯ ಪರಿಚ್ಛೇದ

ಪ್ರಸಾದಿಸ್ಥಲ

ವ್ಯಾಖ್ಯಾನ—ಎಲೈ, ಶ್ರೀರೇಣುಕಾಚಾರ್ಯನೇ! ಮಾಹೇಶ್ವರಸ್ಥಲದಲ್ಲಿ ಯಾವ ಸ್ಥಲಗಳುಂಟೋ, ಆ ಎಲ್ಲ ಸ್ಥಲಗಳೂ ನಿನ್ನಿಂದ ಉಪದೇಶಿಸಲ್ಪಟ್ಟವು; ಇನ್ನು ಪ್ರಸಾದಿಸ್ಥಲವನ್ನಾಶ್ರಯಿಸಿದ ಸ್ಥಲಭೇದವನ್ನು ನನಗೆ ಬೋಧಿಸೆಂದು ಅಗಸ್ತ್ಯ ಮಹರ್ಷಿಯು ಪ್ರಶ್ನೆಮಾಡಲು—ಅದಕ್ಕೆ ಶ್ರೀರೇಣುಕಾಚಾರ್ಯರು, ಪ್ರಸಾದಿಸ್ಥಲ ದಲ್ಲಿ—ಕಾಯಾನುಗ್ರಹಸ್ಥಲ, ಇಂದ್ರಿಯಾನುಗ್ರಹಸ್ಥಲ, ಪ್ರಾಣಾನುಗ್ರಹಸ್ಥಲ, ಕಾಯಾರ್ಪಣಸ್ಥಲ, ಕರಣಾರ್ಪಣಸ್ಥಲ, ಭಾವಾರ್ಪಣಸ್ಥಲ, ಶಿಷ್ಯಸ್ಥಲ, ಶುಶ್ರೂಷು ಸ್ಥಲ, ಸೇವ್ಯಸ್ಥಲಗಳೆಂಬ ಒಂಭತ್ತು ಸ್ಥಲಗಳಿರುವುವೆಂದೂ, ಅನುಕ್ರಮವಾಗಿ ಅವುಗಳ ಲಕ್ಷಣವನ್ನು ಕೇಳೆಂದೂ ಅಪ್ಪಣೆಕೊಡಿಸಿದರು. ॥೧-೨-೩-೪॥

೧೯ ಕಾಯಾನುಗ್ರಹಸ್ಥಲಂ

ಅನುಗೃಹ್ಣಾತಿ ಯಲ್ಲೋಕಾನ್ ಸ್ವಕಾಯಂ ದರ್ಶಯನ್ನಸೌ ।
ತಸ್ಮಾದೇವ ಸಮಾಖ್ಯಾತಃ ಕಾಯಾನುಗ್ರಹನಾಮಕಃ ॥೫॥

ಯಥಾ ಶಿವೋಽನುಗೃಹ್ಣಾತಿ ಮೂರ್ತಿಮಾವಿಶ್ಯ ದೇಹಿನಃ ।
ತಥಾ ಯೋಗೀ ಶರೀರಸ್ಥಃ ಸರ್ವಾನುಗ್ರಾಹಕೋ ಭವೇತ್ ॥೬॥

ಶಿವಃ ಶರೀರಯೋಗೇಽಪಿ ಯಥಾ ಸಂಗವಿವರ್ಜಿತಃ ।
ತಥಾ ಯೋಗೀ ಶರೀರಸ್ಥೋ ನಿಸ್ಸಂಗೋ ವರ್ತತೇ ಸದಾ ॥೭॥

ಶಿವಭಾವನಯಾ ಯುಕ್ತಃ ಸ್ಥಿರಯಾ ನಿರ್ವಿಕಲ್ಪಯಾ ।
ಶಿವೋ ಭವತಿ ನಿರ್ಧೂತಮಾಯಾವೇಶಪರಿಪ್ಲವಃ ॥೮॥

ಗಲಿತಾಹಂಕೃತಿಗ್ರಂಥಿಃ ಕ್ರೀಡಾಕಲ್ಪಿತವಿಗ್ರಹಃ ।
ಜೀವನ್ಮುಕ್ತಶ್ಚರೇದ್ಯೋಗೀ ದೇಹಿವನ್ನಿರುಪಾಧಿಕಃ ॥೯॥

---

೧೯ ಕಾಯಾನುಗ್ರಹಸ್ಥಲ

ಜ್ಞಾನಾಚಾರಸಂಪನ್ನನಾದ ಶಿವಯೋಗಿಯು ತನ್ನ ಶರೀರವನ್ನು ತೋರಿಸುವಂಥವನಾಗಿ ಪ್ರಾಕೃತಜನರನ್ನು ಅನುಗ್ರಹಿಸುವುದರಿಂದ, ಇವನು ಕಾಯಾನುಗ್ರಹನೆಂದು ಹೇಳಿಸಿಕೊಳ್ಳುವನು. ಇದೇ ಕಾಯಾನುಗ್ರಹಸ್ಥಲವೆನಿಸುವುದು. ॥೫॥ ಶಿವನು ನಾನಾವಿಧವಿಗ್ರಹಗಳನ್ನು ಪ್ರವೇಶಿಸಿ ಪ್ರಾಣಿಗಳನ್ನು ಹೇಗೆ ಅನುಗ್ರಹಿಸುತ್ತಾನೆಯೋ, ಹಾಗೆಯೇ ಶಿವಯೋಗಿಯು ಶರೀರಧಾರಿಯಾಗಿ ಸಕಲಮಾನವರನ್ನು ಅನುಗ್ರಹಿಸುವನು. ॥೬॥ ಶಿವನು ಶರೀರಸಂಬಂಧದಿಂದ ಕೂಡಿರುವಾಗಲೂ ಹೇಗೆ ಸಂಗದೂರನಾಗಿರುವನೋ, ಹಾಗೆಯೇ ಯೋಗಿಯು ಶರೀರಧಾರಿಯಾಗಿದ್ದರೂ ಯಾವಾಗಲೂ ಸುಖದುಃಖಾದಿಸಂಗದೂರನಾಗಿರುವನು. ॥೭॥ ವಿಕಲ್ಪಶೂನ್ಯವೂ ದೃಢತರವೂ ಆದ ಶಿವೋಽಹಂಭಾವನೆಯಿಂದ ಕೂಡಿದ ಶಿವಯೋಗಿಯು, ಮಾಯಿಕದುಃಖವನ್ನು ನಾಶಮಾಡುವವನಾಗಿ ಸಾಕ್ಷಾತ್ ಶಿವನೇ ಆಗುತ್ತಾನೆ. ॥೮॥ ಶರೀರಾದ್ಯಭಿಮಾನರೂಪಗ್ರಂಥಿಯನ್ನು ಛೇದಿಸಿದವನೂ, ಲೀಲೆಗೋಸುಗ ಶರೀರವನ್ನು ಧರಿಸಿದವನೂ, ಪ್ರತಿಬಂಧರಹಿತನೂ ಆದ ಶಿವಯೋಗಿಯು ಜೀವನ್ಮುಕ್ತನಾಗಿ ಮನುಷ್ಯನಂತೆ ಸಂಚರಿಸುತ್ತಿರುವನು. ॥೯॥

೨೦ ಇಂದ್ರಿಯಾನುಗ್ರಹಸ್ಥಲಂ

ದರ್ಶನಾತ್ ಪರಕಾಯಸ್ಯ ಕರಣಾನಾಂ ವಿವೇಕತಃ ।
ಇಂದ್ರಿಯಾನುಗ್ರಹಃ ಪ್ರೋಕ್ತಃ ಸರ್ವೇಷಾಂ ತತ್ತ್ವವೇದಿಭಿಃ ॥೧೦॥

ಇಂದ್ರಿಯಾಣಾಂ ಸಮಸ್ತಾನಾಂ ಸ್ವಾರ್ಥೇಷು ಸತಿ ಸಂಗಮೇ ।
ರಾಗೋ ವಾ ಜಾಯತೇ ದ್ವೇಷಸ್ತೌ ಯೋಗೀ ಪರಿವರ್ಜಯೇತ್ ॥೧೧॥

ಇಂದ್ರಿಯಾಣಾಂ ಬಹಿರ್ವೃತ್ತಿಃ ಪ್ರಪಂಚಸ್ಯ ಪ್ರಕಾಶಿನೀ ।
ಅಂತಃ ಶಿವೇ ಸಮಾವೇಶೋ ನಿಷ್ಪ್ರಪಂಚಸ್ಯ ಕಾರಣಂ ॥೧೨॥

ಕ್ಷಣಮಂತಃ ಶಿವಂ ಪಶ್ಯನ್ ಕೇವಲೇನೈವ ಚೇತಸಾ ।
ಬಾಹ್ಯಾರ್ಥಾನಾಮನುಭವಂ ಕ್ಷಣಂ ಕುರ್ವನ್ ದೃಗಾದಿಭಿಃ ॥೧೩॥

ಸರ್ವೇಂದ್ರಿಯನಿರೂಢೋಽಪಿ ಸರ್ವೇಂದ್ರಿಯವಿಹೀನವತ್ ।
ಶಿವಾಹಿತಮನಾ ಯೋಗೀ ಶಿವಂ ಪಶ್ಯತಿ ನಾಪರಂ ॥೧೪॥

---

೨೦ ಇಂದ್ರಿಯಾನುಗ್ರಹಸ್ಥಲ

ಶಿವಯೋಗಿಯ ದರ್ಶನದಿಂದಲೂ, ಇಂದ್ರಿಯಗಳ ವಿವೇಕದಿಂದಲೂ ಸಮಸ್ತ ಪ್ರಾಣಿಗಳಿಗೆ ಇಂದ್ರಿಯಾನುಗ್ರಹವುಂಟಾಗುವುದರಿಂದ, ತತ್ತ್ವಜ್ಞಾನಿಗಳು ಇದನ್ನು ಇಂದ್ರಿಯಾನುಗ್ರಹವೆಂದು ಹೇಳುವರು. ಇದೇ ಇಂದ್ರಿಯಾನುಗ್ರಹಸ್ಥಲವೆನಿಸುವುದು. ॥೧೦॥ ಶ್ರೋತ್ರಾದಿಸಮಸ್ತೇಂದ್ರಿಯಗಳಿಗೆ ಸ್ವಸ್ವವಿಷಯಗಳಲ್ಲಿ ಸಂಬಂಧವುಂಟಾಗಲು ಪ್ರೀತಿಯಾಗಲಿ ಅಥವಾ ದ್ವೇಷವಾಗಲಿ ಉತ್ಪನ್ನವಾಗುವುದು; ಆದುದರಿಂದ ಶಿವಯೋಗಿಯು ಅವೆರಡನ್ನೂ ಬಿಡಬೇಕು. ॥೧೧॥ ಇಂದ್ರಿಯಗಳ ಬಹಿರ್ವ್ಯಾಪಾರವು (ದುಃಖರೂಪವಾದ) ಪ್ರಪಂಚವನ್ನು ಪ್ರಕಾಶಪಡಿಸುವುದು; ಆ ಇಂದ್ರಿಯಗಳ ವೃತ್ತಿಯು ಅಂತರ್ಮುಖವಾಗಿ ಶಿವನಲ್ಲಿ ಸಂಬದ್ಧವಾಗಲು, ಅದೇ ಮೋಕ್ಷಕಾರಣವಾಗುವುದು. ॥೧೨॥ ಬಾಹ್ಯೇಂದ್ರಿಯಸಂಗಶೂನ್ಯವಾದ ನಿರ್ಮಲಮನಸ್ಸಿನಿಂದ ಅಂತರ್ಮುಖನಾಗಿ ಕ್ಷಣಕಾಲ ಶಿವನನ್ನು ನೋಡುವವನೂ, ಕ್ಷಣಕಾಲ ನೇತ್ರಾದಿ ಬಾಹ್ಯೇಂದ್ರಿಯಗಳಿಂದ ಬಾಹ್ಯವಿಷಯಗಳನ್ನು ಅನುಭವಿಸುವವನೂ, ಶಿವನಲ್ಲಿ ಮನಸ್ಸನ್ನು ನೆಲೆಗೊಳಿಸಿದವನೂ ಆದ ಶಿವಯೋಗಿಯು ಸಮಸ್ತೇಂದ್ರಿಯಗಳಿಂದ ಕೂಡಿದ್ದರೂ, ಸಮಸ್ತೇಂದ್ರಿಯಶೂನ್ಯನಂತಿದ್ದು, ಒಳಗೂ ಹೊರಗೂ ಕೇವಲ ಶಿವನನ್ನೇ ನೋಡುವನಲ್ಲದೆ ಶಿವೇತರವಸ್ತುಗಳನ್ನು ನೋಡುವುದಿಲ್ಲ. ॥೧೩-೧೪

ನ ಜರಾ ಮರಣಂ ನಾಸ್ತಿ ನ ಪಿಪಾಸಾ ನ ಚ ಕ್ಷುಧಾ ।
ಶಿವಾಹಿತೇಂದ್ರಿಯಸ್ಯಾಸ್ಯ ನಿರ್ಮಾನಸ್ಯ ಮಹಾತ್ಮನಃ ॥೧೫॥

ಮನೋ ಯತ್ರ ಪ್ರವರ್ತೇತ ತತ್ರ ಸರ್ವೇಂದ್ರಿಯಸ್ಥಿತಿಃ ।
ಶಿವೇ ಮನಸಿ ಸಂಲೀನೇ ಕ್ವ ಚೇಂದ್ರಿಯವಿಚಾರಣಾ ॥೧೬॥

ಯದ್ಯತ್ಪಶ್ಯನ್ ದೃಶಾ ಯೋಗೀ ಮನಸಾ ಚಿಂತಯತ್ಯಪಿ ।
ತತ್ತತ್ಸರ್ವಂ ಶಿವಾಕಾರಂ ಸಂವಿದ್ರೂಪಂ ಪ್ರಕಾಶತೇ ॥೧೭॥

ಕರಣೈಃ ಸಹಿತಂ ಪ್ರಾಣಂ ಮನಸ್ಯಾಧಾಯ ಸಂಯಮೀ ।
ಯೋಜಯೇತ್ತಚ್ಛಿವೇ ಸಾಕ್ಷಾದ್ಯತ್ರ ನಾಸ್ತಿ ಜಗದ್ಭ್ರಮಃ ॥೧೮॥

ಸರ್ವೇಂದ್ರಿಯಪ್ರವೃತ್ತ್ಯಾ ಚ ಬಹಿರಂತಃ ಶಿವಂ ಯಜನ್ ।
ಸ್ವಚ್ಛಂದಚಾರೀ ಸರ್ವತ್ರ ಸುಖೀ ಭವತಿ ಸಂಯಮೀ ॥೧೯॥

ಇಂದ್ರಿಯವ್ಯಾಪಾರವನ್ನು ಶಿವನಲ್ಲಿ ಸಂಬಂಧಿಸಿದವನೂ, ದೇಹಾಭಿಮಾನ ಶೂನ್ಯನೂ, ಮಹಾತ್ಮನೂ ಆದ ಈ ಶಿವಯೋಗಿಗೆ ಜರಾಮರಣಗಳಾಗಲಿ, ಹಸಿವು ನೀರಡಿಕೆಗಳಾಗಲಿ ಇರುವುದಿಲ್ಲ. ಸರ್ವೇಂದ್ರಿಯಗಳನ್ನು ಶಿವನಲ್ಲಿ ಲಯಗೊಳಿಸಿದ ಶಿವಯೋಗಿಯು ಕ್ಷುತ್ಪಿಪಾಸಾದಿಬಾಧೆಗಳಿಂದಲೂ, ಜರಾಮರಣಾದಿದುಃಖಗಳಿಂದಲೂ ದೂರನಾಗಿ ಸಾಕ್ಷಾತ್ ಶಿವನಂತೆ ವಿರಾಜಿಸುತ್ತಿರುವನೆಂದು ಭಾವವು. ॥೧೫॥ ಮನಸ್ಸು ಎಲ್ಲಿ ಪ್ರವರ್ತಿಸುವುದೋ ಅಲ್ಲಿಯೇ ಸರ್ವೇಂದ್ರಿಯಗಳೂ ನೆಲೆಗೊಳ್ಳುವುವು. ಮನಸ್ಸು ಶಿವನಲ್ಲಿ ಲಯವಾಗಲು, ಆಗ ಇಂದ್ರಿಯವ್ಯಾಪಾರವೆಲ್ಲಿಯದು ? ಇಂದ್ರಿಯ ಗಳೆಲ್ಲವೂ ಶಿವಸ್ವರೂಪವಾಗುವುವೆಂದು ಭಾವವು. ॥೧೬॥ ಶಿವಯೋಗಿಯು ಕಣ್ಣಿನಿಂದ ಆವುದಾವುದನ್ನು ನೋಡುವವನಾಗಿ, ಮನಸ್ಸಿನಿಂದಲೂ ಚಿಂತಿಸುತ್ತಾನೆಯೋ, ಅದೆಲ್ಲವೂ ಶಿವಾಕಾರವಾಗಿಯೂ ಜ್ಞಾನರೂಪವಾಗಿಯೂ ಪ್ರಕಾಶಿಸುತ್ತದೆ. ॥೧೭॥ ಶಿವಯೋಗಿಯು ನೇತ್ರಾದೀಂದ್ರಿಯಗಳಿಂದ ಕೂಡಿದ ಪ್ರಾಣವನ್ನು ಮನಸ್ಸಿನಲ್ಲಿ ಸ್ಥಾಪಿಸಿ, ಆ ಮನಸ್ಸನ್ನು ಸಾಕ್ಷಾತ್ ಶಿವನಲ್ಲಿ ಸ್ಥಾಪಿಸಬೇಕು. ಹೀಗೆ ಮಾಡುವವನಲ್ಲಿ ಜಗತ್ತಿನ ಚಾಪಲ್ಯವಿರುವುದಿಲ್ಲ. ॥೧೮॥ ಸರ್ವತ್ರ ಸ್ವೇಚ್ಛಾಚಾರಿಯಾದ ಶಿವಯೋಗಿಯು ಅಂತರ್ಬಾಹ್ಯೇಂದ್ರಿಯಪ್ರವೃತ್ತಿಯಿಂದ ಇಷ್ಟಪ್ರಾಣರೂಪಶಿವಲಿಂಗ ವನ್ನು ಒಳಗೂ ಹೊರಗೂ ಪೂಜಿಸುವವನಾಗಿ, ಶಿವಸುಖವನ್ನು ಅನುಭವಿಸುವವ ನಾಗುವನು. ॥೧೯॥

೨೧ ಪ್ರಾಣಾನುಗ್ರಹಸ್ಥಲಂ

ಶಿವಸ್ಯ ಪರಕಾಯಸ್ಯ ಯತ್ರಾತ್ಪರ್ಯಾವಲೋಕನಂ ।
ಸ ಪ್ರಾಣಾನುಗ್ರಹಃ ಪ್ರೋಕ್ತಃ ಸರ್ವೇಷಾಂ ತತ್ತ್ವದರ್ಶಿಭಿಃ ॥೨೦॥

ಪ್ರಾಣೋ ಯಸ್ಯ ಲಯಂ ಯಾತಿ ಶಿವೇ ಪರಮಕಾರಣೇ ।
ಕುತಸ್ತಸ್ಯೇಂದ್ರಿಯಸ್ಫೂರ್ತಿಃ ಕುತಃ ಸಂಸಾರದರ್ಶನಂ ॥೨೧॥

ಕರಣೇಷು ನಿವೃತ್ತೇಷು ಸ್ವಾರ್ಥಸಂಗಪ್ರಯತ್ನತಃ ।
ತೈಃ ಸಮಂ ಪ್ರಾಣಮಾರೋಪ್ಯ ಸ್ವಾಂತೇ ಶಾಂತಮತಿಃ ಸ್ವಯಂ ॥೨೨॥

ಶಾಂತತ್ವೇ ಪ್ರಾಣವೃತ್ತೀನಾಂ ಮನಃ ಶಾಮ್ಯತಿ ವೃತ್ತಿಭಿಃ ।
ತಚ್ಛಾಂತೌ ಯೋಗಿನಾಂ ಕಿಂಚಿಚ್ಛಿವಾದನ್ಯನ್ನ ದೃಶ್ಯತೇ ॥೨೩॥

ಪ್ರಾಣ ಏವ ಮನುಷ್ಯಾಣಾಂ ದೇಹಧಾರಣಕಾರಣಂ ।
ತದಾಧಾರಃ ಶಿವಃ ಪ್ರೋಕ್ತಃ ಸರ್ವಕಾರಣಕಾರಣಂ ॥೨೪॥

---

೨೧ ಪ್ರಾಣಾನುಗ್ರಹಸ್ಥಲಂ

ಸರ್ವೋತ್ಕೃಷ್ಟಶರೀರಧಾರಿಯಾದ ಶಿವಯೋಗಿಗೆ ಪ್ರಾಣವಾಯುನಿರೋಧದಿಂದ ಯಾವ ಶಿವಲಿಂಗದರ್ಶನವಾಗುವುದುಂಟೋ, ಅದನ್ನೇ ತತ್ತ್ವಜ್ಞಾನಿಗಳು ಪ್ರಾಣಾನುಗ್ರಹವೆಂದು ಹೇಳುವರು. ಇದೇ ಪ್ರಾಣಾನುಗ್ರಹಸ್ಥಲವೆನಿಸುವುದು. ॥೨೦॥ ಯಾವ ಶಿವಯೋಗಿಯ ಪ್ರಾಣವು ಕೇವಲಕುಂಭಕಯೋಗದಿಂದ ಬ್ರಹ್ಮಾದಿಸಕಲ ಪ್ರಪಂಚಮೂಲಕಾರಣೀಭೂತನಾದ ಶಿವನಲ್ಲಿ ಲಯವನ್ನು ಹೊಂದುವುದೋ, ಆ ಶಿವಯೋಗಿಗೆ ಇಂದ್ರಿಯಸ್ಫೂರ್ತಿಯಾಗಲಿ ಜನನಮರಣರೂಪಸಂಸಾರದರ್ಶನವಾಗಲಿ ಎಲ್ಲಿಯದು? ಇವೆರಡೂ ಇರುವುದಿಲ್ಲವೆಂದು ಭಾವವು. ॥೨೧॥ ಶ್ರೋತ್ರಾದೀಂದ್ರಿಯಗಳು ತಮ್ಮ ತಮ್ಮ ವಿಷಯಗಳೊಡನೆ ಸೇರುವ ಪ್ರಯತ್ನದಿಂದ ನಿವೃತ್ತವಾಗಲು, ಶಿವಯೋಗಿಯು ಆ ಇಂದ್ರಿಯಗಳೊಡನೆ ಪ್ರಾಣವನ್ನೂ ಮನಸ್ಸಿನಲ್ಲಿ ಸಂಯೋಜಿಸಿ ತಾನಾಗಿಯೇ ಶಾಂತಬುದ್ಧಿಯುಳ್ಳವನಾಗುವನು. ॥೨೨॥ ರೇಚಕಪೂರಕರೂಪಪ್ರಾಣವೃತ್ತಿಗಳು ಶಾಂತವಾಗಲು, ಮನಸ್ಸು ಸಂಕಲ್ಪವಿಕಲ್ಪರೂಪವೃತ್ತಿಗಳೊಡನೆ ಶಾಂತವಾಗುವುದು. ಆ ಮನಸ್ಸು ಶಾಂತವಾಗಲು ಯೋಗಿಗಳಿಗೆ ಶಿವನ ಹೊರತು ಮತ್ತಾವುದೂ ತೋರುವುದಿಲ್ಲ. ॥೨೩॥ ಪ್ರಾಣವೇ ಮನುಷ್ಯರ ಶರೀರಧಾರಣಕ್ಕೆ ಮುಖ್ಯಕಾರಣವಾಗಿರುವುದು; ಅಂತಹ ಪ್ರಾಣಕ್ಕೆ ಸರ್ವಕಾರಣಕಾರಣನಾದ ಶಿವನು ಆಧಾರಭೂತನಾಗಿರುವನು. ॥೨೪॥

ನಿರಾಧಾರಃ ಶಿವಃ ಸಾಕ್ಷಾತ್ ಪ್ರಾಣಸ್ತೇನ ಪ್ರತಿಷ್ಠಿತಃ ।
ತದಾಧಾರಾ ತನುರ್ಜ್ಞೇಯಾ ಜೀವೋ ಯೇನೈವ ಚೇಷ್ಟತೇ ॥೨೫॥

ಶಿವೇ ಪ್ರಾಣೋ ವಿಲೀನೋಽಪಿ ಯೋಗಿನೋ ಯೋಗಮಾರ್ಗತಃ ।
ಸ್ವಶಕ್ತಿವಾಸನಾಯೋಗಾದ್ಧಾರಯತ್ಯೇವ ವಿಗ್ರಹಂ ॥೨೬॥

ಸ ಚಾಭ್ಯಾಸವಶಾದ್ಭೂಯಃ ಸರ್ವತತ್ತ್ವಾತಿವರ್ತಿನಿ ।
ನಿಷ್ಕಲಂಕೇ ನಿರಾಕಾರೇ ನಿರಸ್ತಾಶೇಷವಿಕ್ಲವೇ ॥೨೭॥

ಚಿದ್ವಿಲಾಸಪರಿಸ್ಫೂರ್ತಿಪರಿಪೂರ್ಣಸುಖಾದ್ವಯೇ ।
ಶಿವೇ ವಿಲೀನಸರ್ವಾತ್ಮಾ ಯೋಗೀ ಚಲತಿ ನ ಕ್ವಚಿತ್ ॥೨೮॥

ಪ್ರಧ್ವಸ್ತವಾಸನಾಸಂಗಾತ್ ಪ್ರಾಣವೃತ್ತಿಪರಿಕ್ಷಯಾತ್ ।
ಶಿವೈಕೀಭೂತಸರ್ವಾತ್ಮಾ ಸ್ಥಾಣುವದ್ಭಾತಿ ಸಂಯಮೀ ॥೨೯॥

ಶಿವನು ನಿರಾಧಾರನಾಗಿರುವನು; ಪ್ರಾಣವು ಪ್ರತ್ಯಕ್ಷವಾಗಿ ಆ ಶಿವರೂಪವಾದ ಆಧಾರದಿಂದ ಪ್ರತಿಷ್ಠಿತವಾಗಿರುವುದು. ಜೀವನು ಯಾವ ಪ್ರಾಣದಿಂದ ಚಲನವಲನಾದಿಕ್ರಿಯೆಗಳುಳ್ಳವನಾಗಿರುವನೋ, ಆ ಪ್ರಾಣವೇ ಶರೀರಕ್ಕೆ ಆಧಾರಭೂತವಾಗಿರುವುದು.॥೨೫॥ ಶಿವಯೋಗಿಯ ಪ್ರಾಣವು ಕೇವಲ ಕುಂಭಕರೂಪಯೋಗಮಾರ್ಗದಿಂದ ಶಿವನಲ್ಲಿ ಲಯವನ್ನು ಹೊಂದಿದರೂ, ನಿಜಶಕ್ತಿಸಂಸ್ಕಾರಬಲದಿಂದ ಆ ಯೋಗಿಯು ಶರೀರಧಾರಣವನ್ನು ಮಾಡಿಕೊಂಡಿರುವನು. ॥೨೬॥ ಸರ್ವತತ್ತ್ವಗಳನ್ನುಮೀರಿರತಕ್ಕವನೂ, ನಿಷ್ಕಲಂಕನೂ, ಪ್ರಾಕೃತಾಕಾರಶೂನ್ಯನೂ, ಸಮಸ್ತವಿಪ್ಲವದೂರನೂ, ಜ್ಞಾನವಿಲಾಸಪರಿಸ್ಫುರಣದಿಂದ ಪರಿಪೂರ್ಣವಾದ ಆನಂದಸ್ವರೂಪನೂ, ಅದ್ವಯನೂ ಆದ ಪರಶಿವನಲ್ಲಿ, ವಿಶೇಷವಾದ ಶಿವಯೋಗಾಭ್ಯಾಸಬಲದಿಂದ ಲಯಗೊಂಡ ಸರ್ವೇಂದ್ರಿಯವ್ಯಾಪಾರವುಳ್ಳವನಾದ ಆ ಶಿವಯೋಗಿಯು ಎಲ್ಲಿಯೂ ಎಂದೂ ಚಲಿಸುವುದಿಲ್ಲ. ॥೨೭-೨೮॥ ಶಿವಯೋಗಿಯು ವಿನಷ್ಟವಾದ ವಾಸನಾಸಂಪರ್ಕದಿಂದಲೂ ಪ್ರಾಣವ್ಯಾಪಾರನಾಶದಿಂದಲೂ ಶಿವನಲ್ಲಿ ಸಮರಸಭೂತವಾದ ಸರ್ವೇಂದ್ರಿಯವ್ಯಾಪಾರವುಳ್ಳವನಾಗಿ, ಮೋಟುಮರದಂತೆ (ಕೊರಡಿನಂತೆ) ಅಚಲನಾಗಿ ಶೋಭಿಸುವನು. ವಿಷಯವಾಸನೆಯನ್ನಳಿದು, ಪ್ರಾಣವ್ಯಾಪಾರ-ಇಂದ್ರಿಯವ್ಯಾಪಾರ-ಮನೋವ್ಯಾಪಾರಗಳನ್ನು ನಾಶಮಾಡಿ, ಶಿವನಲ್ಲಿ ಏಕಾಕಾರನಾಗಿ ಬೆರೆತು, ಮೋಟುಮರದಂತೆ ಚಲನಶೂನ್ಯನಾಗಿ ಮೆರೆಯುತ್ತಿರುವವನೇ ನಿಜವಾದ ಶಿವಯೋಗಿಯೆನಿಸುವನೆಂದು ಭಾವವು. ॥೨೯॥

೨೨ ಕಾಯಾರ್ಪಣಸ್ಥಲಂ

ಶಿವಸ್ಯ ಪರರೂಪಸ್ಯ ಸರ್ವಾನುಗ್ರಾಹಿಣೋಽರ್ಚನೇ ।
ತ್ಯಾಗೋ ದೇಹಾಭಿಮಾನಸ್ಯ ಕಾಯಾರ್ಪಣಮುದಾಹೃತಂ ॥೩೦॥
ಯದಾ ಯೋಗೀ ನಿಜಂ ದೇಹಂ ಶಿವಾಯ ವಿನಿವೇದಯೇತ್ ।
ತದಾ ಭವತಿ ತದ್ರೂಪಂ ಶಿವರೂಪಂ ನ ಸಂಶಯಃ ॥೩೧॥
ಇಂದ್ರಿಯಪ್ರೀತಿಹೇತೂನಿ ವಿಷಯಾಸಂಗಜಾನಿ ಚ ।
ಸುಖಾನಿ ಸುಖಚಿದ್ರೂಪೇ ಶಿವಯೋಗೀ ನಿವೇದಯೇತ್ ॥೩೨॥
ದರ್ಶನಾತ್ ಸ್ಪರ್ಶನಾದ್ಭುಕ್ತೇಃ ಶ್ರವಣಾದ್ಘ್ರಾಣನಾದಪಿ ।
ವಿಷಯೇಭ್ಯೋ ಯದುತ್ಪನ್ನಂ ಶಿವೇ ತತ್ಸುಖಮರ್ಪಯೇತ್ ॥೩೩॥
ದೇಹದ್ವಾರೇಣ ಯದ್ಯತ್ ಸ್ಯಾತ್ ಸುಖಂ ಪ್ರಾಸಂಗಮಾತ್ಮನಃ ।
ತತ್ತನ್ನಿವೇದಯನ್ ಶಂಭೋರ್ಯೋಗೀ ಭವತಿ ನಿರ್ಮಲಃ ॥೩೪॥

---

೨೨ ಕಾಯಾರ್ಪಣಸ್ಥಲ

ಸರ್ವಾನುಗ್ರಾಹಕನೂ, ಪರಶಿವಸ್ವರೂಪನೂ ಆದ ಶಿವಯೋಗಿಗೆ ಶಿವಲಿಂಗ ಪೂಜೆಯಲ್ಲಿ ದೇಹಾಭಿಮಾನತ್ಯಾಗವು ಕಾಯಾರ್ಪಣವೆಂದು ಹೇಳಿಸಿಕೊಳ್ಳುವುದು. ॥೩೦॥ ಶಿವಯೋಗಿಯು ತನ್ನ ಶರೀರವನ್ನು ಯಾವ ಕಾಲದಲ್ಲಿ ಶಿವನಿಗೆ ಸಮರ್ಪಿಸುವನೋ, ಆಗ ಆ ಶಿವಯೋಗಿಯ ರೂಪವು ಶಿವಸ್ವರೂಪವೇ ಆಗುವುದು. ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲ. ॥೩೧॥ ಶಿವಯೋಗಿಯು ಇಂದ್ರಿಯ ಪ್ರೀತಿನಿಮಿತ್ತಕವಾಗಿ ವಿಷಯಸಂಬಂಧದಿಂದುತ್ಪನ್ನವಾದ ಸುಖಗಳನ್ನು ಚಿದಾನಂದ ಸ್ವರೂಪನಾದ ಶಿವನಲ್ಲಿ ಸಮರ್ಪಿಸಬೇಕು. ॥೩೨॥ ವಿಷಯಗಳ ದೆಶೆಯಿಂದ ಅವುಗಳ ದರ್ಶನದಿಂದಲೂ, ಸ್ಪರ್ಶನದಿಂದಲೂ, ಚರ್ವಣದಿಂದಲೂ, ಶ್ರವಣದಿಂದಲೂ, ಆಘ್ರಾಣನದಿಂದಲೂ ಯಾವ ಸುಖವು ಉತ್ಪನ್ನವಾಗುವುದೋ, ಆ ಸುಖವನ್ನು ಶಿವನಲ್ಲಿ ಸಮರ್ಪಿಸಬೇಕು. ॥೩೩॥ ಶರೀರಸಂಬದ್ಧಪಂಚಜ್ಞಾನೇಂದ್ರಿಯ-ಪಂಚ ಕರ್ಮೇಂದ್ರಿಯಸಂಬಂಧದಿಂದ ಯಾವ ಯಾವ ಸುಖವು ತನಗೆ ಸಂಬಂಧಿಸುವುದೋ, ಆ ಆ ಸುಖವನ್ನು ಶಿವಯೋಗಿಯು ಶಿವನಿಗೆ ಸಮರ್ಪಿಸುವವನಾಗಿ ನಿರ್ಮಲನಾಗುವನು. ಈ ರೀತಿಯಾಗಿ ಕಾಯಿಕಸುಖವನ್ನು ಸಮರ್ಪಿಸುವುದೇ ಕಾಯಾರ್ಪಣಸ್ಥಲವೆನಿಸುವುದೆಂದು ಭಾವವು. ॥೩೪॥

೨೩ ಕರಣಾರ್ಪಣಸ್ಥಲಂ

ಆಸಂಜನಂ ಸಮಸ್ತಾನಾಂ ಕರಣಾನಾಂ ಪರಾತ್ಪರೇ ।
ಶಿವೇ ಯತ್ತದಿದಂ ಪ್ರೋಕ್ತಂ ಕರಣಾರ್ಪಣಮಾಗಮೇ ॥೩೫॥

ಯದ್ಯತ್ಕರಣಮಾಲಂಬ್ಯ ಭುಂಕ್ತೇ ವಿಷಯಜಂ ಸುಖಂ ।
ತತ್ತಚ್ಛಿವೇ ಸಮರ್ಪ್ಯೈಷ ಕರಣಾರ್ಪಕ ಉಚ್ಯತೇ ॥೩೬॥

ಅಹಂಕಾರಮದೋದ್ರಿಕ್ತಮಂತಃಕರಣವಾರಣಂ ।
ಬಧ್ನೀಯಾದ್ಯಃ ಶಿವಾಲಾನೇ ಸ ಧೀರಃ ಸರ್ವಸಿದ್ಧಿಮಾನ್ ॥೩೭॥

ಇಂದ್ರಿಯಾಣಾಂ ಸಮಸ್ತಾನಾಂ ಮನಃ ಪ್ರಥಮಮುಚ್ಯತೇ ।
ವಶೀಕೃತೇ ಶಿವೇ ತಸ್ಮಿನ್ ಕಿಮನ್ಯೈಸ್ತದ್ವಶಾನುಗೈಃ ॥೩೮॥

ಇಂದ್ರಿಯಾಣಾಂ ವಶೀಕಾರೋ ನಿವೃತ್ತಿರಿತಿ ಗೀಯತೇ ।
ಲಕ್ಷ್ಯೀಕೃತೇ ಶಿವೇ ತೇಷಾಂ ಕುತಃ ಸಂಸಾರಗಾಹನಂ ॥೩೯॥

---

೨೩ ಕರಣಾರ್ಪಣಸ್ಥಲ

ಪರಾತ್ಪರನಾದ ಶಿವನಲ್ಲಿ ಸಮಸ್ತೇಂದ್ರಿಯಗಳ ಯಾವ ಸಂಯೋಜನಕರ್ತೃತ್ವ ವುಂಟೋ, ಅದು ಕರಣಾರ್ಪಣವೆಂದು ಶಿವಾಗಮಗಳಲ್ಲಿ ಹೇಳಲ್ಪಟ್ಟಿದೆ. ॥೩೫॥ ಯಾವ ಇಂದ್ರಿಯವನ್ನವಲಂಬಿಸಿ ಯಾವ ವಿಷಯಸುಖವನ್ನು ಅನುಭವಿಸುತ್ತಾನೆಯೋ, ಆ ಇಂದ್ರಿಯಸಂಬಂಧವಾದ ಆ ವಿಷಯಸುಖವನ್ನು ಶಿವನಲ್ಲಿ ಸಮರ್ಪಿಸಿ, ಇವನು ಕರಣಾರ್ಪಕನೆಂದು ಹೇಳಿಸಿಕೊಳ್ಳುವನು. ॥೩೬॥ ಅಹಂಕಾರಮಮಕಾರ ರೂಪಮದದಿಂದ ಉನ್ಮತ್ತವಾದ ಮನೋಬುದ್ಧಿಚಿತ್ತ (ಅಂತಃಕರಣ) ರೂಪಗಜವನ್ನು ಯಾವನು ಶಿವರೂಪಬಂಧನಸ್ತಂಭದಲ್ಲಿ ಕಟ್ಟುತ್ತಾನೆಯೋ, ಅವನು ಸರ್ವಸಿದ್ಧಿಗಳುಳ್ಳ ಜ್ಞಾನಿಯೆಂದು ಹೇಳಿಸಿಕೊಳ್ಳುವನು. ॥೩೭॥ ಸರ್ವೇಂದ್ರಿಯಗಳಿಗೆ ಮನಸ್ಸು ಮುಖ್ಯವಾಗಿರುವುದು. ಆ ಮನಸ್ಸು ಶಿವನಲ್ಲಿ ವಶವಾಗಲು, ಆ ಮನಸ್ಸನ್ನು ಅನುಸರಿಸುತ್ತಿರುವ ಇತರ ಇಂದ್ರಿಯಗಳಿಂದ ಏನು ಪ್ರಯೋಜನವು? ಮನಸ್ಸು ಶಿವನಲ್ಲಿ ಲೀನವಾಗಲು ಉಳಿದ ಎಲ್ಲ ಇಂದ್ರಿಯಗಳೂ ಲೀನವಾಗುವುವೆಂದುಭಾವವು. ॥೩೮॥ ಇಂದ್ರಿಯಗಳ ವಶೀಕರಣವೇ ನಿವೃತ್ತಿ (ಮುಕ್ತಿ) ಯೆಂದು ಹೇಳಲ್ಪಡುವುದು; ವಿಷಯಗ್ರಾಹಕವಾದ ಆ ಇಂದ್ರಿಯಗಳಿಗೆ ಶಿವನನ್ನೇ ವಿಷಯವನ್ನಾಗಿ ಮಾಡಿದರೆ ಸಂಸಾರಸಾಗರಮಜ್ಜನವೆಲ್ಲಿಯದು ? ॥೩೯॥

ಸಂಸಾರವಿಷಕಾಂತಾರಸಮುಚ್ಛೇದಕುಠಾರಿಕಾ ।
ಉಪಶಾಂತಿರ್ಭವೇತ್ ಪುಂಸಾಮಿಂದ್ರಿಯಾಣಾಂ ವಶೀಕೃತೌ ||೪೦||

ಇಂದ್ರಿಯೈರೈವ ಜಾಯಂತೇ ಪಾಪಾನಿ ಸುಕೃತಾನಿ ಚ ।
ತೇಷಾಂ ಸಮರ್ಪಣಾದೀಶೇ ಕುತಃ ಕರ್ಮನಿಬಂಧನಂ ||೪೧||

ಪ್ರಕಾಶಮಾನೇ ಚಿದ್ವಹ್ನೌ ಬಹಿರಂತರ್ಜಗನ್ಮಯೇ ।
ಸಮರ್ಪ್ಯ ವಿಷಯಾನ್ ಸರ್ವಾನ್ ಮುಕ್ತವಜ್ಜಾಯತೇ ಜನಃ ||೪೨||

ಚಿತ್ತದ್ರವ್ಯಂ ಸಮಾದಾಯ ಜಗಜ್ಜಾತಂ ಮಹಾಹವಿಃ ।
ಚಿದ್ವಹ್ನೌ ಜುಹ್ವತಾಮಂತಃ ಕುತಃ ಸಂಸಾರವಿಪ್ಲವಃ ||೪೩||

ಆತ್ಮಜ್ಯೋತಿಷಿ ಚಿದ್ರೂಪೇ ಪ್ರಾಣವಾಯುನಿಬೋಧಿತೇ ।
ಜುಹ್ವತ್ ಸಮಸ್ತವಿಷಯಾನ್ ತನ್ಮಯೋ ಭವತಿ ಧ್ರುವಂ ||೪೪||

ಇಂದ್ರಿಯಾಣಿ ಸಮಸ್ತಾನಿ ಶರೀರಂ ಭೋಗಸಾಧನಂ ।
ಶಿವಪೂಜಾಂಗಭಾವೇನ ಭಾವಯನ್ಮುಕ್ತಿಮಾಪ್ನುಯಾತ್ ||೪೫||

ಸಂಸಾರರೂಪವಿಷಾರಣ್ಯವನ್ನು ನಾಶಮಾಡುವುದರಲ್ಲಿ ಕೊಡಲಿಯಂತಿರುವ ಶಾಂತಿಯು, ಮಾನವರಿಗೆ ಇಂದ್ರಿಯಗಳ ವಶೀಕರಣದಿಂದ ಉತ್ಪನ್ನವಾಗುವುದು.||೪೦|| ಪಾಪಪುಣ್ಯಗಳು ಇಂದ್ರಿಯಗಳಿಂದಲೇ ಉತ್ಪನ್ನವಾಗುವುವು. ಅವುಗಳನ್ನು ಶಿವನಲ್ಲಿ ಸಮರ್ಪಿಸುವುದರಿಂದ ಕರ್ಮಬಂಧನವೆಲ್ಲಿಯದು ? ||೪೧|| ಒಳಗೂ ಹೊರಗೂ ಪ್ರಕಾಶಿಸುತ್ತಿರುವ ಶಿವಪರಿಣಾಮಭೂತಜಗದ್ರೂಪವಾದ ಜ್ಞಾನಾಗ್ನಿಯಲ್ಲಿ ಮಾನವನು ಸಮಸ್ತವಿಷಯಗಳನ್ನು ಸಮರ್ಪಿಸಿ ಮುಕ್ತನಾಗುವನು. ||೪೨|| ಚಿತ್ತರೂಪ ಹೋಮದ್ರವ್ಯವನ್ನೂ, ಸಕಲಚರಾಚರಪ್ರಪಂಚರೂಪಮಹಾಹವಿಸ್ಸನ್ನೂ ತೆಗೆದುಕೊಂಡು ಹೃದಯಕಮಲದಲ್ಲಿರುವ ಜ್ಞಾನಾಗ್ನಿಯಲ್ಲಿ ಹವನಮಾಡುವ ಶಿವಯೋಗಿಗಳಿಗೆ, ಸಂಸಾರಬಂಧನವೆಲ್ಲಿಯದು ? ಇಂತಹ ಜ್ಞಾನಿಗಳಿಗೆ ಜನನಮರಣರೂಪಸಂಸಾರಬಂಧನವಿಲ್ಲವೆಂದು ಭಾವವು. ||೪೩|| ಪ್ರಾಣವಾಯುಪ್ರಕಾಶಿತವೂ ಚಿದ್ರೂಪವೂ ಆದ ಶಿವಾಗ್ನಿಯಲ್ಲಿ ಇಂದ್ರಿಯಗ್ರಾಹ್ಯವಾದ ಸಕಲವಿಷಯಗಳನ್ನು ಹವನಮಾಡುವ ಯೋಗಿಯು, ನಿಶ್ಚಯವಾಗಿ ಚಿನ್ಮಯಶಿವರೂಪನೇ ಆಗುವನು. ||೪೪|| ಶಿವಯೋಗಿಯು ಸರ್ವೇಂದ್ರಿಯಗಳನ್ನೂ ಸುಖಸಾಧನವಾದ ಶರೀರವನ್ನೂ ಶಿವಪೂಜಾಂಗಭಾವದಿಂದ ತಿಳಿಯುವವನಾಗಿ ಮೋಕ್ಷವನ್ನು ಪಡೆಯುವನು. ಶಿವಯೋಗಿಯಾದವನು ಶರೀರ ಮತ್ತು ಇಂದ್ರಿಗಳನ್ನು ಶಿವಪೂಜೆಗೆ ಅಂಗವನ್ನಾಗಿ ತಿಳಿಯಬೇಕೆಂದು ಭಾವವು. ||೪೫||

೨೪ ಭಾವಾರ್ಪಣಸ್ಥಲಂ

ಶಿವೇ ನಿಶ್ಚಲಭಾವೇನ ಭಾವಾನಾಂ ಯತ್ಸಮರ್ಪಣಂ ।
ಭಾವಾರ್ಪಣಮಿದಂ ಪ್ರೋಕ್ತಂ ಶಿವಸದ್ಭಾವವೇದಿಭಿಃ ॥೪೬॥

ಚಿತ್ತಸ್ಥಸಕಲಾರ್ಥಾನಾಂ ಮನನಂ ಯತ್ತು ಮಾನಸೇ ।
ತದರ್ಪಣಂ ಶಿವೇ ಸಾಕ್ಷಾನ್ಮಾನಸೋ ಭಾವ ಉಚ್ಯತೇ ॥೪೭॥

ಭಾವ ಏವ ಹಿ ಜಂತೂನಾಂ ಕಾರಣಂ ಬಂಧಮೋಕ್ಷಯೋಃ ।
ಭಾವಶುದ್ಧೌ ಭವೇನ್ಮುಕ್ತಿರ್ವಿಪರೀತೇ ತು ಸಂಸೃತಿಃ ॥೪೮॥

ಭಾವಸ್ಯ ಶುದ್ಧಿರಾಖ್ಯಾತಾ ಶಿವೋಽಹಮಿತಿ ಯೋಜನಾ ।
ವಿಪರೀತಸಮಾಯೋಗೇ ಕುತೋ ದುಃಖನಿವರ್ತನಂ ॥೪೯॥

ಭೋಕ್ತಾ ಭೋಜ್ಯಂ ಪ್ರೇರಯಿತಾ ಸರ್ವಮೇತಚ್ಚರಾಚರಂ ।
ಭಾವಯನ್ ಶಿವರೂಪೇಣ ಶಿವೋ ಭವತಿ ವಸ್ತುತಃ ॥೫೦॥

---

೨೪ ಭಾವಾರ್ಪಣಸ್ಥಲ

ಶಿವಲಿಂಗವಿಷಯದಲ್ಲಿ ಭಾವಗಳ ಯಾವ ಸಮರ್ಪಣವುಂಟೋ, ಅದನ್ನು ಶಿವರಹಸ್ಯಜ್ಞಾನಿಗಳು ಭಾವಾರ್ಪಣವೆಂದು ಹೇಳುವರು. ॥೪೬॥ ಮನಸ್ಸಿನಲ್ಲಿ ಚಿತ್ತನಿಷ್ಠಸಕಲಪದಾರ್ಥಗಳ ಯಾವ ಅನುಭವಸ್ವರೂಪಚಿಂತನವುಂಟೋ, ಪ್ರತ್ಯಕ್ಷವಾಗಿ ಶಿವನಲ್ಲಿ ಆ ಅನುಭವಸ್ವರೂಪಚಿಂತನಸಮರ್ಪಣವೇ ಮನೋಭಾವಾರ್ಪಣವೆನಿವುದು. ॥೪೭॥ ಸಮಸ್ತಪ್ರಾಣಿಗಳ ಬಂಧಕ್ಕಾಗಲಿ ಅಥವಾ ಮೋಕ್ಷಕ್ಕಾಗಲಿ ಮನೋಭಾವವೇ ಮೂಲಕಾರಣೀಭೂತವಾಗಿರುವುದು. ಮನೋಭಾವವು ಶುದ್ಧವಾಗಲು ಮೋಕ್ಷಪ್ರಾಪ್ತಿಯಾಗುವುದು. ಅಶುದ್ಧವಾಗಲು ಜನನಮರಣರೂಪದುಃಖಮಯಸಂಸಾರಪ್ರಾಪ್ತಿಯಾಗುವುದು. ॥೪೮॥ "ಶಿವೋಽಹಂ" ನಾನು ಶಿವನೆಂಬ ಸ್ವಸ್ವರೂಪಾನುಭವಯೋಗವೇ ಭಾವಶುದ್ಧಿಯೆನಿಸುವುದು. 'ನಾಹಂ ಶಿವಃ' ನಾನು ಶಿವನಲ್ಲವೆಂಬ ವಿಪರೀತಭಾವವುಂಟಾಗಲು ಸಾಂಸಾರಿಕದುಃಖನಿವೃತ್ತಿಯೆಲ್ಲಿಯದು? ॥೪೯॥ ಉಪಭೋಗಮಾಡುವ ಜೀವನು, ಉಪಭೋಗಕ್ಕೆ ಯೋಗ್ಯವಾದ ವಸ್ತುವು, ಉಪಭೋಗಮಾಡಲು ಪ್ರೇರಿಸುವ ಶಿವನು ಮತ್ತು ಸಕಲಚರಾಚರಾತ್ಮಕವಾದ ಜಗತ್ತು ಇವೆಲ್ಲವನ್ನೂ ಶಿವಸ್ವರೂಪದಿಂದ ಭಾವಿಸುವವನು, ಪಾರಮಾರ್ಥಿಕವಾಗಿ ಶಿವನೇ ಆಗುವನು. ॥೫೦॥

ಸರ್ವಂ ಕರ್ಮಾರ್ಚನಂ ಶಂಭೋರ್ವಚನಂ ತಸ್ಯ ಕೀರ್ತನಂ ।
ಇತಿ ಭಾವಯತೋ ನಿತ್ಯಂ ಕಥಂ ಸ್ಯಾತ್ ಕರ್ಮಬಂಧನಂ ॥೫೧॥
ಸರ್ವೇಂದ್ರಿಯಗತಂ ಸೌಖ್ಯಂ ದುಃಖಂ ವಾ ಕರ್ಮಸಂಭವಂ ।
ಶಿವಾರ್ಥಂ ಭಾವಯನ್ ಯೋಗೀ ಜೀವನ್ಮುಕ್ತೋ ಭವಿಷ್ಯತಿ ॥೫೨॥

೨೫ ಶಿಷ್ಯಸ್ಥಲಂ

ಶಾಸನೀಯೋ ಭವೇದ್ಯಸ್ತು ಪರಕಾಯೇನ ಸರ್ವದಾ ।
ತತ್ಪ್ರಸಾದಾತ್ತು ಮೋಕ್ಷಾರ್ಥೀ ಸ ಶಿಷ್ಯ ಇತಿ ಕೀರ್ತಿತಃ ॥೫೩॥
ಭಾವೋ ಯಸ್ಯ ಸ್ಥಿರೋ ನಿತ್ಯಂ ಮನೋವಾಕ್ಕಾಯಕರ್ಮಭಿಃ ।
ಗುರೌ ನಿಜೇ ಗುಣೋದಾರೇ ಸ ಶಿಷ್ಯ ಇತಿ ಗೀಯತೇ ॥೫೪॥
ಶಾಂತೋ ದಾಂತಸ್ತಪಶ್ಶೀಲಃ ಸತ್ಯವಾಕ್ ಸಮದರ್ಶನಃ ।
ಗುರೌ ಶಿವೇ ಸಮಾನಸ್ಥಃ ಸ ಶಿಷ್ಯಾಣಾಮಿಹೋತ್ತಮಃ ॥೫೫॥

ತಾನು ಆಚರಿಸತಕ್ಕ ಕರ್ಮಗಳೆಲ್ಲವೂ ಶಿವನ ಪೂಜೆಯೆಂದೂ, ತಾನು ನುಡಿಯತಕ್ಕ ವಚನಗಳೆಲ್ಲವೂ ಶಿವನ ಸ್ತುತಿಯೆಂದೂ ಸದಾ ಭಾವಿಸುವವನಿಗೆ ಕರ್ಮಬಂಧವು ಹೇಗೆ ಉಂಟಾಗುವುದು ? ಈ ರೀತಿಯಾಗಿ ಸರ್ವವನ್ನೂ ಶಿವಸ್ವರೂಪ ದಿಂದ ಭಾವಿಸುವ ಮಹಾತ್ಮನಿಗೆ ಎಂದೂ ಕರ್ಮಬಂಧನವುಂಟಾಗುವುದಿಲ್ಲವೆಂದು ಭಾವವು. ॥೫೧॥ ಸರ್ವೇಂದ್ರಿಯಗಳಿಂದುತ್ಪನ್ನವಾದ ಸುಖವಾಗಲಿ ಅಥವಾ ಪಾಪ ಕರ್ಮಗಳಿಂದುತ್ಪನ್ನವಾದ ದುಃಖವಾಗಲಿ ಇವೆರಡೂ ಶಿವನಿಗೇ ಇರುವುವೆಂದು ಭಾವಿಸುವ ಶಿವಯೋಗಿಯು ಜೀವನ್ಮುಕ್ತನೆನಿಸುವನು. ॥೫೨॥

೨೫ ಶಿಷ್ಯಸ್ಥಲ

ಯಾವನು ಯಾವಾಗಲೂ ಶಿವಯೋಗಿಯಿಂದ ಪಾರಮಾರ್ಥಿಕಶಿಕ್ಷಣವನ್ನು ಪಡೆಯುವನೋ, ಮತ್ತು ಆ ಶಿವಯೋಗಿಯ ಪ್ರಸಾದದಿಂದ ಮೋಕ್ಷವನ್ನು ಬಯಸು ವನೋ, ಅವನೇ ಶಿಷ್ಯನೆಂದು ಹೇಳಿಸಿಕೊಳ್ಳುವನು. ॥೫೩॥ ಯಾವನ ಭಾವವು ಜ್ಞಾನವೈರಾಗ್ಯಾದಿಗುಣಗಳಿಂದ ಶ್ರೇಷ್ಠನೆನಿಸಿರುವ ತನ್ನ ಗುರುವಿನಲ್ಲಿ ಮನೋ ವಾಕ್ಕಾಯಜನ್ಯಧ್ಯಾನಸ್ತೋತ್ರಪೂಜಾರೂಪಕರ್ಮಗಳಿಂದ ಯಾವಾಗಲೂ ಸ್ಥಿರವಾಗಿರು ವುದೋ, ಅವನೇ ಶಿಷ್ಯನೆಂದು ಹೇಳಿಸಿಕೊಳ್ಳುವನು. ॥೫೪॥ ಯಾವನು ಅಂತರಿಂದ್ರಿಯ ನಿಗ್ರಹವುಳ್ಳವನಾಗಿಯೂ, ಬಹಿರಿಂದ್ರಿಯನಿಗ್ರಹವುಳ್ಳವನಾಗಿಯೂ, ಯಮನಿಯಮಾ ದ್ಯಷ್ಟಾಂಗಯೋಗನಿಷ್ಠನಾಗಿಯೂ, ಸತ್ಯವಾದಿಯಾಗಿಯೂ, ಲೋಷ್ಟಕಾಂಚನಾದಿ ಗಳಲ್ಲಿ ಸಮಾನಬುದ್ಧಿಯುಳ್ಳವನಾಗಿಯೂ, ಗುರುವಿನಲ್ಲಿಯೂ ಶಿವನಲ್ಲಿಯೂ ಸಮಾನ ಬುದ್ಧಿಯುಳ್ಳವನಾಗಿಯೂ ಇರುವನೋ, ಅವನೇ ಶಿಷ್ಯಶ್ರೇಷ್ಠನೆನಿಸುವನು. ॥೫೫॥

ಗುರುಮೇವ ಶಿವಂ ಪಶ್ಯೇಚ್ಛಿವಮೇವ ಗುರುಂ ತಥಾ ।
ನೈತಯೋರಂತರಂ ಕಿಂಚಿದ್ವಿಜಾನೀಯಾದ್ವಿಚಕ್ಷಣಃ ॥೫೬॥

ಶಿವಾಚಾರೇ ಶಿವಧ್ಯಾನೇ ಶಿವಜ್ಞಾನೇ ಚ ನಿರ್ಮಲೇ ।
ಗುರೋರಾದೇಶಮಾತ್ರೇಣ ಪರಾಂ ನಿಷ್ಠಾಮವಾಪ್ನುಯಾತ್ ॥೫೭॥

ನ ಲಂಘಯೇದ್ಗುರೋರಾಜ್ಞಾಂ ಜ್ಞಾನಮೇವ ಪ್ರಕಾಶಯನ್ ।
ಶಿವಾಸಕ್ತೇನ ಮನಸಾ ಸರ್ವಸಿದ್ಧಿಮವಾಪ್ನುಯಾತ್ ॥೫೮॥

ಗುರೋರ್ಲಬ್ಧ್ವಾ ಮಹಾಜ್ಞಾನಂ ಸಂಸಾರಾಮಯಭೇಷಜಂ ।
ಮೋದತೇ ಯಃ ಸುಖೀ ಶಾಂತಃ ಸ ಜೀವನ್ಮುಕ್ತ ಏವ ಹಿ ॥೫೯॥

೨೬ ಶುಶ್ರೂಷುಸ್ಥಲಂ

ಬೋಧ್ಯಮಾನಃ ಸ ಗುರುಣಾ ಪರಕಾಯೇನ ಸರ್ವದಾ ।
ತಚ್ಛುಶ್ರೂಷಾರತಃ ಶಿಷ್ಯಃ ಶುಶ್ರೂಷುರಿತಿ ಕೀರ್ತ್ಯತೇ ॥೬೦॥

ಬುದ್ಧಿಶಾಲಿಯಾದ ಶಿಷ್ಯನು ಗುರುವನ್ನೇ ಶಿವನನ್ನಾಗಿಯೂ, ಶಿವನನ್ನೇ ಗುರುವನ್ನಾಗಿಯೂ ತಿಳಿಯಬೇಕು. ಇವರಿಬ್ಬರಲ್ಲಿಯೂ ಯತ್ಕಿಂಚಿದ್ಭೇದವನ್ನಾದರೂ ಮಾಡಬಾರದು. ॥೫೬॥ ಶಿಷ್ಯನು ಶ್ರೀಗುರುವಿನ ಆಜ್ಞಾಮಾತ್ರದಿಂದಲೇ ಶಿವಾಚಾರದಲ್ಲಿಯೂ, ಶಿವಧ್ಯಾನದಲ್ಲಿಯೂ, ನಿರ್ಮಲವಾದ ಶಿವಜ್ಞಾನದಲ್ಲಿಯೂ ಅತ್ಯಂತವಿಶ್ವಾಸವನ್ನಿಡಬೇಕು. ॥೫೭॥ ಕೇವಲಜ್ಞಾನವನ್ನೇ ಪ್ರಕಾಶಗೊಳಿಸುವ ಶಿಷ್ಯನು ಶ್ರೀಗುರುವಿನ ಆಜ್ಞೆಯನ್ನು ಮೀರಬಾರದು. ಶಿಷ್ಯನು ಶಿವಸಂಬಂಧವಾದ ಮನಸ್ಸಿನಿಂದ ಸರ್ವಸಿದ್ಧಿಗಳನ್ನು ಪಡೆಯುವನು. ॥೫೮॥ ಯಾವನು ಭವರೋಗಕ್ಕೆ ಔಷಧಸ್ವರೂಪವಾದ ಮಹಾಜ್ಞಾನವನ್ನು ಶ್ರೀಗುರುವಿನಿಂದ ಪಡೆದು ಸುಖಿಯೂ ಶಾಂತನೂ ಆಗಿ ಸಂತೋಷಿಸುವನೋ ಅವನೇ ಜೀವನ್ಮುಕ್ತನೆನಿಸುವನು. ॥೫೯॥

೨೬ ಶುಶ್ರೂಷುಸ್ಥಲ

ಪರಶಿವಶರೀರಧಾರಿಯಾದ ಶ್ರೀಗುರುವಿನಿಂದ ಯಾವಾಗಲೂ ಬೋಧಿಸಲ್ಪಡುವವನೂ, ಆ ಗುರುವಿನ ಸೇವೆಯಲ್ಲಿ ನಿರತನಾದವನೂ ಆದ ಶಿಷ್ಯನು 'ಶುಶ್ರೂಷು' ಎಂದು ಹೇಳಿಸಿಕೊಳ್ಳುವನು. ॥೬೦॥

ಶ್ರುತ್ವಾ ಶ್ರುತ್ವಾ ಗುರೋರ್ವಾಕ್ಯಂ ಶಿವಸಾಕ್ಷಾತ್ಕ್ರಿಯಾವಹಂ ।
ಉಪಶಾಮ್ಯತಿ ಯಃ ಸ್ವಾಂತೇ ಸ ಮುಕ್ತಿಪದಮಾಪ್ನುಯಾತ್ ॥೬೧॥

ನ ಬುಧ್ಯತಿ ಗುರೋರ್ವಾಕ್ಯಂ ವಿನಾ ಶಿಷ್ಯಸ್ಯ ಮಾನಸಂ ।
ತೇಜೋ ವಿನಾ ಸಹಸ್ರಾಂಶೋಃ ಕಥಂ ಸ್ಫುರತಿ ಪಂಕಜಂ ॥೬೨॥

ಸೂರ್ಯಸ್ಯೋದಯಮಾತ್ರೇಣ ಸೂರ್ಯಕಾಂತಃ ಪ್ರಕಾಶತೇ ।
ಗುರೋರಾಲೋಕನಮಾತ್ರೇಣ ಶಿಷ್ಯೋ ಬೋಧೇನ ಭಾಸತೇ ॥೬೩॥

ಅದ್ವೈತಪರಮಾನಂದಪ್ರಬೋಧೈಕಪ್ರಕಾಶಕಂ ।
ಉಪಾಯಂ ಶ್ರುಣುಯಾಚ್ಛಿಷ್ಯಃ ಸದ್ಗುರುಂ ಪ್ರಾಪ್ಯ ಸಾಂಜಲಿಃ ॥೬೪॥

ಕಿಂ ತತ್ತ್ವಂ ಪರಮಂ ಜ್ಞೇಯಂ ಕೇನ ಸರ್ವೇ ಪ್ರತಿಷ್ಠಿತಾಃ ।
ಕಸ್ಯ ಸಾಕ್ಷಾತ್ಕ್ರಿಯಾ ಮುಕ್ತಿಃ ಕಥಯೇತಿ ಸಮಾಸತಃ ॥೬೫॥

ಇತಿ ಪ್ರಶ್ನೇ ಕೃತೇ ಪೂರ್ವಂ ಶಿಷ್ಯೇಣ ನಿಯತಾತ್ಮನಾ ।
ಬ್ರೂಯಾತ್ತತ್ತ್ವಂ ಗುರುಸ್ತಸ್ಮೈ ಯೇನ ಸ್ಯಾತ್ಸಂಸೃತೇರ್ಲಯಃ ॥೬೬॥

ಯಾವ ಶಿಷ್ಯನು ಶಿವಸಾಕ್ಷಾತ್ಕಾರಕಾರಕವಾದ ಶ್ರುತಿವಾಕ್ಯಗಳನ್ನು ಶ್ರೀಗುರುವಿನಿಂದ ಕೇಳಿಕೇಳಿ ಮನಸ್ಸಿನಲ್ಲಿ ಶಾಂತನಾಗುವನೋ, ಆ ಶಿಷ್ಯನು ಮೋಕ್ಷವನ್ನು ಪಡೆಯುವನು. ॥೬೧॥ ಸೂರ್ಯನ ತೇಜಸ್ಸಿಲ್ಲದೆ ಕಮಲವು ಹೇಗೆ ವಿಕಸಿತವಾಗುವುದಿಲ್ಲವೋ, ಹಾಗೆಯೇ ಶ್ರೀಗುರುವಿನ ಉಪದೇಶವಾಕ್ಯವಿಲ್ಲದೆ, ಶಿಷ್ಯನ ಹೃದಯಕಮಲವು ವಿಕಸಿತವಾಗುವುದಿಲ್ಲ. ॥೬೨॥ ಸೂರ್ಯೋದಯಮಾತ್ರದಿಂದ ಸೂರ್ಯಕಾಂತಶಿಲೆಯು ಹೇಗೆ ಪ್ರಕಾಶಿಸುವುದೋ, ಹಾಗೆಯೇ ಶ್ರೀಗುರುವಿನ ಕೃಪಾಕಟಾಕ್ಷವೀಕ್ಷಣಮಾತ್ರದಿಂದ ಶಿಷ್ಯನು ಜ್ಞಾನದಿಂದ ಪ್ರಕಾಶಿಸುವನು. ॥೬೩॥ ಶಿಷ್ಯನು ಸದ್ಗುರುವನ್ನಾಶ್ರಯಿಸಿ ಹಸ್ತಗಳನ್ನು ಜೋಡಿಸಿಕೊಂಡು, ಶಿವಾದ್ವೈತಪರಮಾನಂದಜ್ಞಾನವನ್ನು ಮುಖ್ಯವಾಗಿ ಪ್ರಕಾಶಗೊಳಿಸುವ ಉಪಾಯವನ್ನು ಪ್ರಶ್ನಪೂರ್ವಕವಾಗಿ ಕೇಳಬೇಕು. ॥೬೪॥ ಎಲೈ, ಶ್ರೀಗುರುವೇ! ತಿಳಿಯಲು ಯೋಗ್ಯವಾದ ಶ್ರೇಷ್ಠತತ್ತ್ವವಾವುದು? ಯಾವುದರಿಂದ ಸಮಸ್ತವಸ್ತುಗಳು ಪ್ರತಿಷ್ಠಿತವಾಗಿವೆ? ಯಾವುದರ ಸಾಕ್ಷಾತ್ಕಾರದಿಂದ ಮೋಕ್ಷವು ಲಭಿಸುವುದು? ಎಂಬುದನ್ನು ಬೋಧಿಸು; ಎಂದು ಪ್ರಶ್ನಮಾಡಬೇಕು. ॥೬೫॥ ಏಕಾಗ್ರಮನಸ್ಸುಳ್ಳ ಶಿಷ್ಯನು ಈ ರೀತಿಯಾಗಿ ಪ್ರಶ್ನಮಾಡಲು—ಶ್ರೀಗುರುವು ಅವನಿಗೆ ಯಾವುದರಿಂದ ಸಂಸಾರನಾಶವಾಗುವುದೋ, ಆ ತತ್ತ್ವವನ್ನು ಬೋಧಿಸಬೇಕು. ॥೬೬॥

ಶಿವ ಏವ ಪರಂ ತತ್ತ್ವಂ ಚಿದಾನಂದಸದಾಕೃತಿಃ ।
ಸ ಯಥಾರ್ಥಸ್ತದನ್ಯಸ್ಯ ಜಗತೋ ನಾಸ್ತಿ ನಿತ್ಯತಾ ॥೬೭॥

ಶಿವೋಽಹಮಿತಿ ಭಾವೇನ ಶಿವೇ ಸಾಕ್ಷಾತ್ಕೃತೇ ಸ್ಥಿರಂ ।
ಮುಕ್ತೋ ಭವತಿ ಸಂಸಾರಮೋಹಗ್ರಂಥಿವಿಭೇದತಃ ॥೬೮॥

ಶಿವಂ ಭಾವಯ ಚಾತ್ಮಾನಂ ಶಿವಾದನ್ಯನ್ನ ಚಿಂತಯ ।
ಏವಂ ಸ್ಥಿರೇ ಶಿವಾದ್ವೈತೇ ಜೀವನ್ಮುಕ್ತೋ ಭವಿಷ್ಯಸಿ ॥೬೯॥

ಏವಂ ಪ್ರಬೋಧಿತಃ ಶಿಷ್ಯೋ ಗುರುಣಾ ಗುಣಶಾಲಿನಾ ।
ಶಿವಮೇವ ಜಗತ್ ಪಶ್ಯನ್ ಜೀವನ್ಮುಕ್ತೋಽಭಿಜಾಯತೇ ॥೭೦॥

೨೭ ಸೇವ್ಯಸ್ಥಲಂ

ಗುರುವಾಕ್ಯಾಮೃತಾಸ್ವಾದಾತ್ ಪ್ರಾಪ್ತಬೋಧಮಹಾಫಲಃ ।
ಶುಶ್ರೂಷುರೇವ ಸರ್ವೇಷಾಂ ಸೇವ್ಯತ್ವಾತ್ ಸೇವ್ಯ ಉಚ್ಯತೇ ॥೭೧॥

ಸಚ್ಚಿದಾನಂದಸ್ವರೂಪನಾದ ಶಿವನೇ ಶ್ರೇಷ್ಠವಾದ ತತ್ತ್ವವು; ಆ ಶಿವನೇ ನಿತ್ಯನು; ಆ ಶಿವನಿಗೆ ಹೊರತಾದ ಜಗತ್ತಿಗೆ ನಿರಂತರಪರಿಣಾಮವೇ ಇದ್ದು ಏಕರೂಪತ್ವವಿಲ್ಲವಾದುದರಿಂದ ಅದಕ್ಕೆ ನಿತ್ಯತ್ವವಿರುವುದಿಲ್ಲ. ॥೬೭॥ 'ಶಿವೋಽಹಂ' ನಾನೇ ಶಿವನು, ಎಂಬ ದೃಢಭಾವದಿಂದ ಶಿವನು ಸಾಕ್ಷಾತ್ಕರಿಸಲ್ಪಡಲು, ಶಿಷ್ಯನು ಸಂಸಾರರೂಪಮೋಹಗ್ರಂಥಿಯ ಭೇದನದಿಂದ ಮುಕ್ತನಾಗುವನು. ॥೬೮॥ ಎಲೈ, ಶಿಷ್ಯನೇ! ನೀನು ನಿನ್ನನ್ನು ಶಿವನನ್ನಾಗಿ ಭಾವಿಸು; ಶಿವನಿಗೆ ಅನ್ಯವಾದುದಾವುದನ್ನೂ ಭಾವಿಸಬೇಡ; ಅರ್ಥಾತ್ ಸರ್ವವನ್ನೂ ಶಿವಸ್ವರೂಪವನ್ನಾಗಿ ಭಾವಿಸಬೇಕೆಂದು ಭಾವವು. ಈ ರೀತಿಯಾಗಿ ನಿನ್ನಲ್ಲಿ ಶಿವಾದ್ವೈತವು ಸ್ಥಿರವಾಗಲು ಜೀವನ್ಮುಕ್ತನಾಗುವಿ. ॥೬೯॥ ಜ್ಞಾನವೈರಾಗ್ಯಾದಿಗುಣಶಾಲಿಯಾದ ಶ್ರೀಗುರುವಿನಿಂದ ಈ ರೀತಿಯಾಗಿ ಬೋಧಿಸಲ್ಪಟ್ಟ ಶಿಷ್ಯನು ಸಮಸ್ತಜಗಜ್ಜಾಲವನ್ನು ಶಿವಮಯವನ್ನಾಗಿಯೇ ನೋಡುವವನಾಗಿ ಜೀವನ್ಮುಕ್ತನಾಗುವನು. ॥೭೦॥

೨೭ ಸೇವ್ಯಸ್ಥಲ

ಗುರೂಪದೇಶವಾಕ್ಯಾಮೃತಾಸ್ವಾದನದಿಂದ ಶಿವಾದ್ವೈತಜ್ಞಾನರೂಪಮಹಾಫಲವನ್ನು ಸಂಪಾದಿಸಿಕೊಂಡ ಶುಶ್ರೂಷುವು (ಶಿಷ್ಯನು) ಸರ್ವರಿಗೂ ಸೇವ್ಯನಾಗುವುದರಿಂದ ಅವನು 'ಸೇವ್ಯ' ನೆಂದು ಹೇಳಿಸಿಕೊಳ್ಳುವನು. ॥೭೧॥

ಗುರೂಪದಿಷ್ಟೇ ವಿಜ್ಞಾನೇ ಚೇತಸಿ ಸ್ಥಿರತಾಂ ಗತೇ ।
ಸಾಕ್ಷಾತ್ಕೃತಶಿವಃ ಶಿಷ್ಯೋ ಗುರುವತ್ಪೂಜ್ಯತೇ ಸದಾ ॥೭೨॥

ಜ್ಞಾನಾದಾಧಿಕ್ಯಸಂಪತ್ತಿರ್ಗುರೋರ್ಯಸ್ಮಾದುಪಸ್ಥಿತಾ ।
ತಸ್ಮಾದ್ ಜ್ಞಾನಾಗಮಾಚ್ಛಿಷ್ಯೋ ಗುರುವತ್ಪೂಜ್ಯತಾಂ ವ್ರಜೇತ್ ॥೭೩॥

ಶಿವೋಽಹಮಿತಿ ಭಾವಸ್ಯ ನೈರಂತರ್ಯವಿಶೇಷತಃ ।
ಶಿವಭಾವೇ ಸಮುತ್ಪನ್ನೇ ಶಿವವತ್ಪೂಜ್ಯ ಏವ ಸಃ ॥೭೪॥

ಬ್ರಹ್ಮಾಂಡಬುದ್ಬುದೋದ್ಭಾಸಿಮಾಯಾಸಿಂಧುಂ ಮಹತ್ತರಂ ।
ಗುರೋಃ ಕವಲಯತ್ಯಾಶು ಕಟಾಕ್ಷವಡವಾನಲಃ ॥೭೫॥

ಗುರೋಃ ಕಟಾಕ್ಷವೇಧೇನ ಶಿವೋ ಭವತಿ ಮಾನವಃ ।
ರಸವೇಧಾದ್ಯಥಾ ಲೋಹೋ ಹೇಮತಾಂ ಪ್ರತಿಪದ್ಯತೇ ॥೭೬॥

ವಿಷಯಾಸಕ್ತಚಿತ್ತೋಽಪಿ ವಿಷಯಾಸಂಗವರ್ಜಿತಃ ।
ಶಿವಭಾವಯುತೋ ಯೋಗೀ ಸೇವ್ಯಃ ಶಿವ ಇವಾಪರಃ ॥೭೭॥

ಶ್ರೀಗುರುವಿನಿಂದುಪದಿಷ್ಟವಾದ ಶಿವಾದ್ವೈತಜ್ಞಾನವು ಮನಸ್ಸಿನಲ್ಲಿ ಸ್ಥಿರವಾಗಲು, ಶಿವನನ್ನು ಸಾಕ್ಷಾತ್ಕರಿಸಿಕೊಂಡ ಶಿಷ್ಯನು, ಗುರುವಿನಂತೆ ಸದಾ ಪೂಜ್ಯನಾಗುವನು. ॥೭೨॥ ಶ್ರೀಗುರುವಿನಿಂದ ಪ್ರಾಪ್ತವಾದ ಯಾವ ಜ್ಞಾನದಿಂದ ಜ್ಞಾನಾಧಿಕ್ಯಸಂಪತ್ತು ಪ್ರಾಪ್ತವಾಗುವುದೋ, ಆ ಜ್ಞಾನದ ಪ್ರಾಪ್ತಿಯಿಂದ ಶಿಷ್ಯನು ಗುರುವಿನಂತೆ ಪೂಜ್ಯತ್ವವನ್ನು ಪಡೆಯುವನು. ॥೭೩॥ 'ಶಿವೋಽಹಂ' ನಾನು ಶಿವನು, ಎಂಬ ಭಾವನೆಯ ನಿರಂತರಾಭ್ಯಾಸವಿಶೇಷದಿಂದ ಶಿವಭಾವವು ಬಲಿಯಲು, ಆ ಶಿಷ್ಯನು ಶಿವನಂತೆ ಪೂಜ್ಯನಾಗುವನು. ॥೭೪॥ ಮಹತ್ತರವಾದ, ಅನಂತಬ್ರಹ್ಮಾಂಡಗಳೆಂಬ ಬುದ್ಬುದಗಳಿಂದ ಪ್ರಕಾಶಿಸುತ್ತಿರುವ ಮಾಯಾಸಮುದ್ರವನ್ನು ಶ್ರೀಗುರುವಿನ ಕೃಪಾಕಟಾಕ್ಷವೆಂಬ ವಡವಾಗ್ನಿಯು ಅತ್ಯಂತಶೀಘ್ರವಾಗಿ ನುಂಗಿಬಿಡುವುದು. ಶ್ರೀಗುರುಕೃಪಾಕಟಾಕ್ಷವೀಕ್ಷಣಮಾತ್ರದಿಂದ ಮಾಯೆಯು ನಾಶವಾಗುವುದೆಂದು ಭಾವವು. ॥೭೫॥ ತಾಮ್ರಲೋಹವು ಪಾದರಸದ ಸಂಬಂಧದಿಂದ ಹೇಗೆ ಸುವರ್ಣವಾಗುವುದೋ, ಹಾಗೆಯೇ ಶಿಷ್ಯನು ಶ್ರೀಗುರುವಿನ ಕೃಪಾಕಟಾಕ್ಷಪಾತಮಾತ್ರದಿಂದ ಶಿವನಾಗುವನು. ॥೭೬॥ ಶಿವಭಾವದಿಂದ ಕೂಡಿದ ಸೇವ್ಯನಾಮಕಶಿವಯೋಗಿಯು ವಿಷಯಾಸಕ್ತಚಿತ್ತವುಳ್ಳವನಾದರೂ ವಿಷಯಸಂಬಂಧದಿಂದ ದೂರನಾಗಿ ಎರಡನೆಯ ಶಿವನಂತೆ ಪೂಜ್ಯನಾಗುವನು. ॥೭೭॥

ಮುಕ್ತಃ ಸಂಶಯಪಾಶತಃ ಸ್ಥಿರಮನಾ ಬೋಧೇ ಚ ಮುಕ್ತಿಪ್ರದೇ
ಮೋಹಂ ದೇಹಭೃತಾಂ ದೃಶಾ ವಿಘಟಯನ್ ಮೂಲಂ ಮಹಾಸಂಸೃತೇಃ।
ಸತ್ತಾನಂದಚಿದಾತ್ಮಕೇ ನಿರುಪಮೇ ಶೈವೇ ಪರಸ್ಮಿನ್ ಪದೇ
ಲೀನಾತ್ಮಾ ವಿದಿತಪ್ರಪಂಚವಿಭವೋ ಯೋಗೀ ಜನೈಃ ಸೇವ್ಯತೇ ॥೭೮॥

ಇತಿ ಶ್ರೀಸಿದ್ಧಾಂತಶಿಖಾಮಣೌ ಲಿಂಗಸ್ಥಲೀಯಪ್ರಸಾದಿಸ್ಥಲೇ
ಕಾಯಾನುಗ್ರಹಾದಿನವವಿಧಸ್ಥಲಪ್ರಸಂಗೋ ನಾಮ

ಸಪ್ತದಶಪರಿಚ್ಛೇದಃ ಪರಿಸಮಾಪ್ತಃ.

ನಾನು ಶಿವನಹುದೋ ಅಲ್ಲವೋ ಎಂಬ ಸಂಶಯಪಾಶದಿಂದ ಬಿಡಲ್ಪಟ್ಟವನೂ, ಮೋಕ್ಷದಾಯಕವಾದ ಶಿವಜ್ಞಾನದಲ್ಲಿ ಧೃಢವಾದ ಮನಸ್ಸುಳ್ಳವನೂ, ಮಹಾ ಸಂಸಾರಕ್ಕೆ ಮೂಲಕಾರಣೀಭೂತವಾದ ಮಾನವರ ಅಜ್ಞಾನವನ್ನು ಕೃಪಾದೃಷ್ಟಿಯಿಂದ ನಿವಾರಿಸುವವನೂ, ಸಚ್ಚಿದಾನಂದಸ್ವರೂಪವೂ ಉಪಮಾತೀತವೂ ಶಿವಸಂಬಂಧವುಳ್ಳದೂ ಆದ ಪರಾತ್ಪರಪದದಲ್ಲಿ (ಪರಬ್ರಹ್ಮದಲ್ಲಿ) ಆತ್ಮನನ್ನು ಲಯಗೊಳಿಸಿದವನೂ, ವಿಶ್ವಪ್ರಪಂಚವೈಭವವನ್ನು ತಿಳಿದವನೂ ಆದ ಶಿವಯೋಗಿಯು ಸಮಸ್ತಜನರಿಂದಲೂ ಪೂಜಿಸಲ್ಪಡುವನು. ॥೭೮॥

ಇಂತು ಶ್ರೀ ಸಿದ್ಧಾಂತಶಿಖಾಮಣಿಯ ಲಿಂಗಸ್ಥಲೀಯಪ್ರಸಾದಿಸ್ಥಲದಲ್ಲಿ
ಕಾಯಾನುಗ್ರಹಾದಿನವವಿಧಸ್ಥಲವಿಚಾರಾತ್ಮಕವಾದ

ಹದಿನೇಳನೆಯ ಪರಿಚ್ಛೇದವು ಪರಿಸಮಾಪ್ತವಾದುದು.

ಶ್ರೀಜಗದ್ಗುರುರೇಣುಕಾಚಾರ್ಯಃ ಪ್ರಸೀದತು.

ಅಷ್ಟಾದಶಪರಿಚ್ಛೇದಃ

ಪ್ರಾಣಲಿಂಗಿಸ್ಥಲಂ

|| ಅಗಸ್ತ್ಯ ಉವಾಚ ||

ಪ್ರಸಾದಿಸ್ಥಲಸಂಬದ್ಧಾಃ ಸ್ಥಲಭೇದಾಃ ಪ್ರಕೀರ್ತಿತಾಃ |
ಪ್ರಾಣಲಿಂಗಿಸ್ಥಲಾರೂಢಾನ್ ಸ್ಥಲಭೇದಾನ್ನಿರೂಪಯ ||೧||

|| ಶ್ರೀರೇಣುಕ ಉವಾಚ ||

ಸ್ಥಲಾನಾಂ ನವಕಂ ಪ್ರೋಕ್ತಂ ಪ್ರಾಣಲಿಂಗಿಸ್ಥಲಾಶ್ರಿತಂ |
ಆದಾವಾತ್ಮಸ್ಥಲಂ ಪ್ರೋಕ್ತಮಂತರಾತ್ಮಸ್ಥಲಂ ತತಃ ||೨||

ಪರಮಾತ್ಮಸ್ಥಲಂ ಪಶ್ಚಾನ್ನಿರ್ದೇಹಾಗಮಸಂಜ್ಞಕಂ |
ನಿರ್ಭಾವಾಗಮಸಂಜ್ಞಂ ಚ ತತೋ ನಷ್ಟಾಗಮಸ್ಥಲಂ ||೩||

ಆದಿಪ್ರಸಾದಿನಾಮಾಥ ತತಶ್ಚಾಂತ್ಯಪ್ರಸಾದಿಕಂ |
ಸೇವ್ಯಪ್ರಸಾದಿಕಂ ಚಾಥ ಶೃಣು ತೇಷಾಂ ಹಿ ಲಕ್ಷಣಂ ||೪||

ಹದಿನೆಂಟನೆಯ ಪರಿಚ್ಛೇದ

ಪ್ರಾಣಲಿಂಗಿಸ್ಥಲ

ವ್ಯಾಖ್ಯಾನ—ಎಲೈ, ಶ್ರೀರೇಣುಕಾಚಾರ್ಯನೇ! ಪ್ರಸಾದಿಸ್ಥಲವನ್ನು ಸಂಬಂಧಿಸಿದ ಸ್ಥಲಭೇದಗಳು ನಿನ್ನಿಂದ ಉಪದೇಶಿಸಲ್ಪಟ್ಟವು; ಇನ್ನು ಪ್ರಾಣಲಿಂಗಿಸ್ಥಲವನ್ನು ಸಂಬಂಧಿಸಿದ ಸ್ಥಲಭೇದಗಳನ್ನು ಉಪದೇಶಿಸು. ಎಂದು ಅಗಸ್ತ್ಯಮಹರ್ಷಿಯು ಪ್ರಶ್ನಮಾಡಲು—ಅದಕ್ಕೆ ಶ್ರೀರೇಣುಕಾಚಾರ್ಯರು ಪ್ರಾಣಲಿಂಗಿಸ್ಥಲದಲ್ಲಿ—ಆತ್ಮಸ್ಥಲ, ಅಂತರಾತ್ಮಸ್ಥಲ, ಪರಮಾತ್ಮಸ್ಥಲ, ನಿರ್ದೇಹಾಗಮಸ್ಥಲ, ನಿರ್ಭಾವಾಗಮಸ್ಥಲ, ನಷ್ಟಾಗಮಸ್ಥಲ, ಆದಿಪ್ರಸಾದಿಸ್ಥಲ, ಅಂತ್ಯಪ್ರಸಾದಿಸ್ಥಲ, ಸೇವ್ಯಪ್ರಸಾದಿಸ್ಥಲಗಳೆಂಬ ಒಂಭತ್ತು ಸ್ಥಲಗಳಿರುವುವೆಂದೂ, ಅವುಗಳ ಲಕ್ಷಣವನ್ನು ಕೇಳೆಂದೂ ಅಪ್ಪಣೆಕೊಡಿಸಿದರು. ||೧-೨-೩-೪||

೨೮ ಆತ್ಮಸ್ಥಲಂ

ಜೀವಭಾವಂ ಪರಿತ್ಯಜ್ಯ ಯದಾ ತತ್ತ್ವಂ ವಿಭಾವ್ಯತೇ ।
ಗುರೋಶ್ಚ ಬೋಧಯೋಗೇನ ತದಾತ್ಮಾಽಯಂ ಪ್ರಕೀರ್ತಿತಃ ॥೫॥

ವಾಲಾಗ್ರಶತಭಾಗೇನ ಸದೃಶೋ ಹೃದಯೇ ಸ್ಥಿತಃ ।
ಅಶ್ನನ್ ಕರ್ಮಫಲಂ ಸರ್ವಮಾತ್ಮಾ ಸ್ಫುರತಿ ದೀಪವತ್ ॥೬॥

ಆತ್ಮಾಽಪಿ ಸರ್ವಭೂತಾನಾಮಂತಃಕರಣಮಾಶ್ರಿತಃ ।
ಅಣುಭೂತೋ ಮಲಾಸಂಗಾದಾದಿಕರ್ಮನಿಯಂತ್ರಿತಃ ॥೭॥

ಅಶರೀರೋಽಪಿ ಸರ್ವತ್ರ ವ್ಯಾಪಕೋಽಪಿ ನಿರಂಜನಃ ।
ಆತ್ಮಾ ಮಾಯಾಶರೀರಸ್ಥಃ ಪರಿಭ್ರಮತಿ ಸಂಸೃತೌ ॥೮॥

---

೨೮ ಆತ್ಮಸ್ಥಲ

ಶ್ರೀಗುರುವಿನ ಉಪದೇಶಯೋಗದಿಂದ ಜೀವಭಾವವನ್ನು ತ್ಯಜಿಸಿ, ಯಾವಾಗ ಶಿವತತ್ತ್ವವು ಅನುಭವಿಸಲ್ಪಡುವುದೋ, ಆಗ ಇವನು ಆತ್ಮನೆಂದು ಹೇಳಿಸಿಕೊಳ್ಳುವನು. ॥೫॥ ಕೂದಲಿನ ಅಗ್ರಭಾಗದ ನೂರರಲ್ಲೊಂದು ಭಾಗಕ್ಕೆ ಸಮಾನನಾಗಿ ಅತ್ಯಂತಸೂಕ್ಷ್ಮನೆನಿಸಿರುವ ಆತ್ಮನು ಸಮಸ್ತಪ್ರಾಣಿಗಳ ಹೃದಯದಲ್ಲಿದ್ದುಕೊಂಡು, ಸ್ವಾರ್ಜಿತಸರ್ವಕರ್ಮಫಲವನ್ನು ಅನುಭವಿಸುವವನಾಗಿ, ದೀಪದಂತೆ ಪ್ರಕಾಶಿಸುತ್ತಿರುವನು. ದೀಪವು ಮನೆಯ ಯಾವುದಾದರೊಂದು ಭಾಗದಲ್ಲಿದ್ದರೂ ತನ್ನ ಪ್ರಭೆಯಿಂದ ಮನೆಯನ್ನೆಲ್ಲ ಪ್ರಕಾಶಪಡಿಸುವಂತೆ, ಆತ್ಮನು ಹೃದಯಸ್ಥಾನದಲ್ಲಿದ್ದರೂ ತನ್ನ ಜ್ಞಾನಪ್ರಭೆಯಿಂದ ಶರೀರವನ್ನೆಲ್ಲ ವ್ಯಾಪಿಸಿ, ಸರ್ವಾವಯವಚೈತನ್ಯವನ್ನು ಅನುಭವಿಸುವವನಾಗಿ ಪ್ರಕಾಶಿಸುತ್ತಿರುವನೆಂದು ಭಾವವು. ॥೬॥ ಅಣುರೂಪನಾದ ಆತ್ಮನು ಸಮಸ್ತಪ್ರಾಣಿಗಳ ಅಂತಃಕರಣವನ್ನು ಆಶ್ರಯಿಸುವವನಾಗಿ, ಆಣವಾದಿಮಲತ್ರಯಸಂಬಂಧದಿಂದ ಪ್ರಾಚೀನಕರ್ಮಪಾಶಬದ್ಧನಾಗಿರುವನು. ಪ್ರಾಚೀನಕರ್ಮಪಾಶಬಂಧನವೇ ಆತ್ಮನನ್ನು ಸದಾ ಸಂಸಾರದಲ್ಲಿ ಮುಳುಗಿಸುತ್ತಿರುವುದೆಂದು ಭಾವವು. ॥೭॥ ಶರೀರರಹಿತನಾಗಿದ್ದರೂ ಸರ್ವತ್ರ ವ್ಯಾಪಕನೂ, ಸರ್ವತ್ರ ವ್ಯಾಪಕನಾಗಿದ್ದರೂ ನಿರ್ಲಿಪ್ತನೂ ಆದ ಆತ್ಮನು, ಮಾಯಾಮಯಶರೀರದಲ್ಲಿರುವವನಾಗಿ ಜನನಮರಣರೂಪಸಂಸಾರದಲ್ಲಿ ಸುತ್ತುತ್ತಿರುವನು. ॥೮॥

ಆತ್ಮಸ್ವರೂಪವಿಜ್ಞಾನಂ ದೇಹೇಂದ್ರಿಯವಿಭಾಗತಃ ।
ಅಖಂಡಬ್ರಹ್ಮರೂಪೇಣ ತದಾಽಽತ್ಮಪ್ರಾಪ್ತಿರುಚ್ಯತೇ ॥೯॥

ಜಪಾಯೋಗಾದ್ಯಥಾ ರಾಗಃ ಸ್ಫಟಿಕಸ್ಯ ಮಣೇರ್ಭವೇತ್ ।
ತಥಾಽಹಂಕಾರಸಂಬಂಧಾದಾತ್ಮನೋ ದೇಹಮಾನಿತಾ ॥೧೦॥

ನ ಚಾಸ್ತಿ ದೇಹಸಂಬಂಧೋ ನಿರ್ದೇಹಸ್ಯ ಸ್ವಭಾವತಃ ।
ಅಜ್ಞಾನಕರ್ಮಯೋಗೇನ ದೇಹೀ ಭವತಿ ಭುಕ್ತಯೇ ॥೧೧॥

ನಾಸೌ ದೇವೋ ನ ಗಂಧರ್ವೋ ನ ಯಕ್ಷೋ ನೈವ ರಾಕ್ಷಸಃ ।
ನ ಮನುಷ್ಯೋ ನ ತಿರ್ಯಕ್ಚ ನ ಚ ಸ್ಥಾವರವಿಗ್ರಹಃ ॥
ತತ್ತಚ್ಛರೀರಯೋಗೇನ ತತ್ತನ್ನಾಮ್ನಾ ವಿರಾಜತೇ ॥೧೨॥

ನಾನಾಕರ್ಮವಿಪಾಕಾಚ್ಚ ನಾನಾಯೋನಿಸಮಾಶ್ರಿತಾಃ ।
ನಾನಾಯೋಗಸಮಾಪನ್ನಾ ನಾನಾಬುದ್ಧಿವಿಚೇಷ್ಟಿತಾಃ ॥೧೩॥

ದೇಹವೂ ಆತ್ಮನಲ್ಲ; ಇಂದ್ರಿಯವೂ ಆತ್ಮನಲ್ಲ; ಬುದ್ಧಿಯೂ ಆತ್ಮನಲ್ಲ; ಇವೆಲ್ಲವುಗಳಿಗಿಂತಲೂ ಆತ್ಮನು ಭಿನ್ನನಾಗಿದ್ದಾನೆಂದು ತಿಳಿದು, ಅಪರಿಚ್ಛಿನ್ನ ಪರಬ್ರಹ್ಮರೂಪದಿಂದ ಸ್ವಸ್ವರೂಪಜ್ಞಾನವು ಯಾವಾಗ ಆಗುವುದೋ, ಆಗಲೇ ಆತ್ಮಪ್ರಾಪ್ತಿಯು ಹೇಳಲ್ಪಡುವುದು. ॥೯॥ ಸ್ಫಟಿಕಮಣಿಗೆ ಜಪಾಕುಸುಮದ (ಕೆಂಪು ದಾಸಿವಾಳಹೂವಿನ) ಸಂಬಂಧದಿಂದ ಕೆಂಪುಬಣ್ಣವು ಹೇಗೆ ಪ್ರಾಪ್ತವಾಗುವುದೋ, ಹಾಗೆಯೇ ಅಹಂಕಾರಸಂಬಂಧದಿಂದ ಆತ್ಮನಿಗೆ ದೇಹಾಭಿಮಾನವು ಪ್ರಾಪ್ತವಾಗುವುದು. ॥೧೦॥ ಶರೀರರಹಿತನಾದ ಆತ್ಮನಿಗೆ ಸ್ವಾಭಾವಿಕವಾಗಿ ದೇಹಸಂಬಂಧವಿರುವುದಿಲ್ಲ; ಅಜ್ಞಾನಕರ್ಮಸಂಬಂಧದಿಂದ ಕರ್ಮಫಲವನ್ನು ಅನುಭವಿಸುವುದಕ್ಕಾಗಿ ಶರೀರವುಳ್ಳವನಾಗುವನು. ॥೧೧॥ ಆತ್ಮನು ದೇವನಲ್ಲ; ಗಂಧರ್ವನಲ್ಲ; ಯಕ್ಷನಲ್ಲ; ರಾಕ್ಷಸನಲ್ಲ; ಮನುಷ್ಯನಲ್ಲ; ಪಶುಪಕ್ಷಿರೂಪತಿರ್ಯಕ್ಪ್ರಾಣಿಯಲ್ಲ; ಶಿಲಾದಿಸ್ಥಾವರವಸ್ತುವಲ್ಲ; ಆದರೆ ಆಯಾ ಶರೀರಸಂಬಂಧದಿಂದ ಆಯಾ ಹೆಸರಿನಿಂದ ಪ್ರಕಾಶಿಸುತ್ತಿರುವನು. ॥೧೨॥ ಜೀವರು ನಾನಾವಿಧಪ್ರಾಚೀನಕರ್ಮವಿಪಾಕದಿಂದ ದೇವತಿರ್ಯಙ್ಮನುಷ್ಯಾದಿ ನಾನಾವಿಧಯೋನಿಗಳಲ್ಲಿ ಜನಿಸುವವರಾಗಿಯೂ, ನಾನಾವಿಧಕೃತಿಗಳಿಂದ ಕೂಡಿದವರಾಗಿಯೂ, ನಾನಾವಿಧಬುದ್ಧಿಗಳಿಂದ ಚಂಚಲರಾಗಿಯೂ, ನಾನಾವಿಧಶಾಸ್ತ್ರಮಾರ್ಗಪ್ರವಿಷ್ಟರಾಗಿಯೂ, ನಾನಾವಿಧಸಂಕಲ್ಪಕಾರಿಗಳಾಗಿಯೂ, ಅಸ್ವತಂತ್ರರಾಗಿಯೂ

ನಾನಾಮಾರ್ಗಸಮಾರೂಢಾ ನಾನಾಸಂಕಲ್ಪಕಾರಿಣಃ ।
ಅಸ್ವತಂತ್ರಾಶ್ಚ ಕಿಂಚಿದ್‌ಜ್ಞಾಃ ಕಿಂಚಿತ್ಕರ್ತೃತ್ವಹೇತವಃ ॥
ಲೀಲಾಭಾಜನತಾಂ ಪ್ರಾಪ್ತಾಃ ಶಿವಸ್ಯ ಪರಮಾತ್ಮನಃ ॥೧೪॥
ಚೋದಿತಾಃ ಪರಮೇಶೇನ ಸ್ವಸ್ವಕರ್ಮಾನುರೂಪತಃ ।
ಸ್ವರ್ಗಂ ವಾ ನರಕಂ ವಾಪಿ ಪ್ರಾಣಿನೋ ಯಾಂತಿ ಕರ್ಮಿಣಃ ॥೧೫॥
ಪುನಃ ಕರ್ಮಾವಶೇಷೇಣ ಜಾಯಂತೇ ಗರ್ಭಕೋಟರಾತ್ ।
ಜಾತಾ ಮೃತಾಃ ಪುನರ್ಜಾತಾಃ ಪುನರ್ಮರಣಭಾಜನಾಃ ॥
ಭ್ರಮಂತಿ ಘೋರಸಂಸಾರೇ ವಿಶ್ರಾಂತಿಕಥಯಾ ವಿನಾ ॥೧೬॥
ಜೀವತ್ವಂ ದುಃಖಸರ್ವಸ್ವಂ ತದಿದಂ ಮಲಕಲ್ಪಿತಂ ।
ನಿರಸ್ಯತೇ ಗುರೋರ್ಬೋಧಾತ್ ಜ್ಞಾನಶಕ್ತಿಃ ಪ್ರಕಾಶತೇ ॥೧೭॥

೨೯ ಅಂತರಾತ್ಮಸ್ಥಲಂ

ಯದಾ ನಿರಸ್ತಂ ಜೀವತ್ವಂ ಭವೇದ್ಗುರ್ವನುಬೋಧತಃ ।
ತದಾಂತರಾತ್ಮಭಾವೋ ಹಿ ನಿರಸ್ತಸ್ಯ ಭವೇದ್ಧ್ರುವಂ ॥೧೮॥

ಕಿಂಚಿದ್‌ಜ್ಞರಾಗಿಯೂ, ಕಿಂಚಿತ್ಕರ್ತೃತ್ವಶಾಲಿಗಳಾಗಿಯೂ ಇದ್ದುಕೊಂಡು, ಶಿವ ಪರಮಾತ್ಮನಿಗೆ ಕ್ರೀಡಾಭಾಂಡಸ್ವರೂಪರಾಗಿರುವರು. ॥೧೩-೧೪॥ ತಮ್ಮ ತಮ್ಮ ಕರ್ಮಾನುಗುಣವಾಗಿ ಪರಮೇಶ್ವರನಿಂದ ಪ್ರೇರಿತರಾದ ಜೀವರು, ಸ್ವರ್ಗವನ್ನಾಗಲಿ ಅಥವಾ ನರಕವನ್ನಾಗಲಿ ಪಡೆಯುವರು. ॥೧೫॥ ಸ್ವರ್ಗನರಕಫಲಾನುಭವಾನಂತರದಲ್ಲಿ ಅಲ್ಪಾವಶಿಷ್ಟವಾಗಿರುವ ಆ ಕರ್ಮದಫಲವನ್ನು ಅನುಭವಿಸುವುದಕ್ಕಾಗಿ ಪುನಃ ಗರ್ಭದಿಂದ ಹುಟ್ಟುವರು; ಮತ್ತು ಸಾಯುವರು; ಸತ್ತು ಪುನಃ ಹುಟ್ಟುವರು; ಪುನಃ ಸಾಯುವರು; ಇದೇರೀತಿಯಾಗಿ ವಿಶ್ರಾಂತಿವಾರ್ತೆಯೇ ಇಲ್ಲದೆ ಘೋರವಾದ ಸಂಸಾರದಲ್ಲಿ ಸದಾ ಸುತ್ತುತ್ತಿರುವರು. ॥೧೬॥ ಆಣವಾದಿಮಲಬದ್ಧವೂ ದುಃಖಮಯವೂ ಆದ ಜೀವತ್ವವು (ಜೀವಭಾವವು) ಶ್ರೀಗುರುವಿನ ಬೋಧೆಯಿಂದ ತೊಲಗಿ ಜ್ಞಾನಶಕ್ತಿಯು ಪ್ರಕಾಶಿಸುವುದು. ॥೧೭॥

೨೯ ಅಂತರಾತ್ಮಸ್ಥಲ

ಶ್ರೀಗುರುವಿನ ಬೋಧೆಯಿಂದ ಜೀವಭಾವವು ಯಾವಾಗ ತೊಲಗುವುದೋ, ಆಗ ಜೀವಭಾವಶೂನ್ಯನಾದ ಆತ್ಮನಿಗೆ ನಿಶ್ಚಯವಾಗಿ ಅಂತರಾತ್ಮಭಾವವುಂಟಾಗುವುದು. ॥೧೮॥

ದೇಹಸ್ಥಿತೋಽಪ್ಯಯಂ ಜೀವೋ ದೇಹಸಂಗವಿವರ್ಜಿತಃ ।
ಬೋಧಾತ್ ಪರಾತ್ಮಭಾವಿತ್ವಾದಂತರಾತ್ಮೇತಿ ಕೀರ್ತಿತಃ ॥೧೯॥

ಆತ್ಮಾಂತರಾಲವರ್ತಿತ್ವಾಜ್ಜೀವಾತ್ಮಪರಮಾತ್ಮನೋಃ ।
ಯೋಗಾದುಭಯಧರ್ಮಾಣಾಮಂತರಾತ್ಮೇತಿ ಕೀರ್ತಿತಃ ॥೨೦॥

ಅಹಂಕಾರಸ್ಯ ಸಂಬಂಧಾನ್ಮನುಷ್ಯತ್ವಾದಿವಿಭ್ರಮಃ ।
ನ ಸ್ವಭಾವ ಇತಿ ಜ್ಞಾನಾದಂತರಾತ್ಮೇತಿ ಕಥ್ಯತೇ ॥೨೧॥

ಯಥಾ ಪದ್ಮಪಲಾಶಸ್ಯ ನ ಸಂಗೋ ವಾರಿಣಾ ಭವೇತ್ ।
ತಥಾ ದೇಹಜುಷೋಽಪ್ಯಸ್ಯ ನ ಶರೀರೇಣ ಸಂಗತಿಃ ॥೨೨॥

ನೀಡಸ್ಥಿತೋ ಯಥಾ ಪಕ್ಷೀ ನೀಡಾದ್ಭಿನ್ನಃ ಪ್ರಕಾಶತೇ ।
ದೇಹಸ್ಥಿತಸ್ತಥಾಽಽತ್ಮಾಽಯಂ ದೇಹಾದನ್ಯಃ ಪ್ರಕಾಶತೇ ॥೨೩॥

ಆಚ್ಛಾದ್ಯತೇ ಯಥಾ ಚಂದ್ರೋ ಮೇಘೈರಾಸಂಗವರ್ಜಿತಃ ।
ತಥಾಽಽತ್ಮಾ ದೇಹಸಂಘಾತೈರಸಂಗಃ ಪರಿವೇಷ್ಟಿತಃ ॥೨೪॥

ಈ ಜೀವಾತ್ಮನು ದೇಹದಲ್ಲಿದ್ದವನಾಗಿದ್ದರೂ ದೇಹಸಂಬಂಧದಿಂದ ದೂರನಾಗಿ, ಸ್ವಸ್ವರೂಪಜ್ಞಾನದಿಂದಲೂ, ಪರಮಾತ್ಮಭಾವವುಳ್ಳವನಾದುದರಿಂದಲೂ ಅಂತರಾತ್ಮನೆಂದು ಹೇಳಿಸಿಕೊಳ್ಳುವನು. ॥೧೯॥ ಜೀವಭಾವದಿಂದ ದೂರನಾದ ಆತ್ಮನು ಜೀವಾತ್ಮತ್ವ ಮತ್ತು ಪರಮಾತ್ಮತ್ವಗಳೆಂಬ ಎರಡು ಅವಸ್ಥೆಗಳ ಮಧ್ಯದಲ್ಲಿದ್ದು, ಜೀವಧರ್ಮ ಮತ್ತು ಶಿವಧರ್ಮಗಳೆಂಬ ಉಭಯವಿಧಧರ್ಮಗಳ ಸಂಬಂಧದಿಂದ ಅಂತರಾತ್ಮನೆಂದು ಹೇಳಿಸಿಕೊಳ್ಳುವನು. ॥೨೦॥ ನಾನು ಮನುಷ್ಯನು, ನಾನು ಶ್ರೇಷ್ಠನು, ನಾನು ಕನಿಷ್ಠನು ಎಂಬ ಕಲ್ಪನೆಯು ಅಹಂಕಾರಸಂಬಂಧದಿಂದ ಬಂದುದು; ಇದು ಸ್ವಾಭಾವಿಕವಾದುದಲ್ಲ; ಎಂಬ ಜ್ಞಾನದಿಂದ ಅಂತರಾತ್ಮನೆಂದು ಹೇಳಿಸಿಕೊಳ್ಳುವನು. ॥೨೧॥ ಕಮಲದ ಎಲೆಯು ನೀರಿನಲ್ಲಿದ್ದರೂ ಅದಕ್ಕೆ ನೀರಿನ ಸಂಬಂಧವು ಹೇಗೆ ಇರುವುದಿಲ್ಲವೋ, ಹಾಗೆಯೇ ಆತ್ಮನು ಶರೀರದಲ್ಲಿದ್ದರೂ ಶರೀರಸಂಬಂಧದಿಂದ ದೂರನಾಗಿರುವನು. ॥೨೨॥ ಪಕ್ಷಿಯು ಗೂಡಿನಲ್ಲಿದ್ದರೂ ಗೂಡಿಗಿಂತಲೂ ಹೇಗೆ ಭಿನ್ನವಾಗಿ ಪ್ರಕಾಶಿಸುತ್ತಿರುವುದೋ, ಹಾಗೆಯೇ ಆತ್ಮನು ಶರೀರದಲ್ಲಿದ್ದರೂ ಶರೀರಕ್ಕಿಂತಲೂ ಭಿನ್ನನಾಗಿ ಪ್ರಕಾಶಿಸುತ್ತಿರುವನು. ॥೨೩॥ ಮೇಘಗಳೊಡನೆ ಸಂಬಂಧವನ್ನು ಪಡೆಯದ ಚಂದ್ರನು ಮೇಘಗಳಿಂದ ಹೇಗೆ ಆಚ್ಛಾದಿಸಲ್ಪಡುವನೋ, ಹಾಗೆಯೇ ಆತ್ಮನು ಶರೀರಸಂಬಂಧವಿಲ್ಲದವನಾಗಿದ್ದರೂ ನಾನಾವಿಧದೇಹಸಮುದಾಯದಿಂದ ಪರಿವೇಷ್ಟಿತನಾಗುವನು. ॥೨೪॥

ನಿರ್ಮಮೋ ನಿರಹಂಕಾರೋ ನಿರಸ್ತೋಪಾಧಿವಿಪ್ಲವಃ ।
ದೇಹಸ್ಥೋಽಪಿ ಸದಾ ಹ್ಯಾತ್ಮಾ ಶಿವಂ ಪಶ್ಯತಿ ಯೋಗತಃ ॥೨೫॥
ಭೋಕ್ತುರ್ಭೋಜ್ಯಪರಿತ್ಯಾಗಾತ್ ಪ್ರೇರಕಸ್ಯ ಪ್ರಸಾದತಃ ।
ಭೋಕ್ತೃತಾಭೋಗಗಲಿತಃ ಸ್ಫುರತ್ಯಾತ್ಮಾ ಸ್ವಭಾವತಃ ॥೨೬॥
ಸರ್ವೇಷಾಂ ಪ್ರೇರಕತ್ವೇನ ಶಂಭುರಂತಃಸ್ಥಿತಃ ಸದಾ ।
ತತ್ಪರಜ್ಞಾನಯೋಗೇನ ಯೋಗೀ ನಂದತಿ ಮುಕ್ತವತ್ ॥೨೭॥

೩೦ ಪರಮಾತ್ಮಸ್ಥಲಂ

ನಿರ್ಧೂತೇ ತತ್ತ್ವಬೋಧೇನ ಮಲೇ ಸಂಸಾರಕಾರಣೇ ।
ಸಾಮರಸ್ಯಾತ್ ಪರಾತ್ಮಸ್ಥಃ ಪರಮಾತ್ಮಾಽಯಮುಚ್ಯತೇ ॥೨೮॥

ಮಮತಾದೂರನೂ, ಅಹಂಕಾರಶೂನ್ಯನೂ, ಉಪಾಧಿಬಾಧರಹಿತನೂ ಆದ ಆತ್ಮನು ದೇಹದಲ್ಲಿದ್ದರೂ, ಯೋಗಸಾಧನದಿಂದ ಯಾವಾಗಲೂ ಶಿವನನ್ನು ನೋಡುತ್ತಿರುವನು. ॥೨೫॥ ಭೋಕ್ತೃವಾದ ಆತ್ಮನಿಗೆ, ಪ್ರೇರಕನಾದ ಶಿವನ ಅನುಗ್ರಹದಿಂದ ಭೋಗ್ಯವಸ್ತುಗಳಪರಿತ್ಯಾಗವಾಗುವುದರಿಂದ, ಅವನು ಭೋಕ್ತೃತಾರೂಪಭೋಗದಿಂದ ದೂರನಾಗಿ ಸ್ವಸ್ವರೂಪದಿಂದ ಪ್ರಕಾಶಿಸುತ್ತಿರುವನು. ॥೨೬॥ ಶಿವನು ಸಮಸ್ತ ಪ್ರಾಣಿಗಳಿಗೆ ಪ್ರೇರಕನಾಗಿರುವುದರಿಂದ, ಸರ್ವಪ್ರಾಣಿಗಳ ಹೃದಯದಲ್ಲಿ ಯಾವಾಗಲೂ ವಾಸವಾಗಿರುವನು. ಅಂಥ ಪರಶಿವನ ಯಥಾರ್ಥಜ್ಞಾನಸಂಬಂಧದಿಂದ ಯೋಗಿಯು ಮುಕ್ತನಂತೆ ಸಂತುಷ್ಟನಾಗಿರುವನು. ಶಿವಯೋಗಿಯು ಶಿವಜ್ಞಾನಸಂಬಂಧದಿಂದ ಆನಂದಮಯನಾಗುವನೆಂದು ಭಾವವು. ॥೨೭॥

೩೦ ಪರಮಾತ್ಮಸ್ಥಲ

ಜನನಮರಣರೂಪಸಂಸಾರಕ್ಕೆ ಮೂಲಕಾರಣೀಭೂತವಾದ ಅಜ್ಞಾನವು ಶಿವಾದ್ವೈತಜ್ಞಾನದಿಂದ ನಷ್ಟವಾಗಲು, ಈ ಅಂತರಾತ್ಮನಿಗೆ ಪರಮಾತ್ಮನಲ್ಲಿ ಸಾಮರಸ್ಯವುಂಟಾಗುವುದರಿಂದ, ಪರಮಾತ್ಮಸ್ಥನಾದ (ಪರಮಾತ್ಮನಲ್ಲಿ ಸಮರಸೀಭೂತನಾದ) ಇವನು ಪರಮಾತ್ಮನೆಂದು ಹೇಳಿಸಿಕೊಳ್ಳುವನು. "ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇ ಅಸ್ತಂ ಗಚ್ಛಂತಿ ನಾಮರೂಪೇ ವಿಹಾಯ ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಂ" ಎಂಬ ಮುಂಡಕಶ್ರುತಿವಾಕ್ಯವು ಇದೇ ಅಭಿಪ್ರಾಯವನ್ನು ಬೋಧಿಸುತ್ತಿರುವುದು. ॥೨೮॥

ಸರ್ವೇಷಾಮಾತ್ಮಭೇದಾನಾಮುತ್ಕೃಷ್ಟತ್ವಾತ್ ಸ್ವತೇಜಸಾ ।
ಪರಮಾತ್ಮಾ ಶಿವಃ ಪ್ರೋಕ್ತಃ ಸರ್ವಗೋಽಪಿ ಪ್ರಕಾಶವಾನ್ ॥೨೯॥

ಬ್ರಹ್ಮಾಂಡಬುದ್ಬುದಸ್ತೋಮಾ ಯಸ್ಯ ಮಾಯಾಮಹೋದಧೌ ।
ಉನ್ಮಜ್ಜಂತಿ ನಿಮಜ್ಜಂತಿ ಪರಮಾತ್ಮಾ ಸ ಉಚ್ಯತೇ ॥೩೦॥

ಯಸ್ಮಿನ್ ಜ್ಯೋತಿರ್ಗಣಾಃ ಸರ್ವೇ ಸ್ಫುಲಿಂಗಾ ಇವ ಪಾವಕಾತ್ ।
ಉತ್ಪದ್ಯ ವಿಲಯಂ ಯಾಂತಿ ತದ್ರೂಪಂ ಪರಮಾತ್ಮನಃ ॥೩೧॥

ಯಸ್ಮಿನ್ ಸಮಸ್ತತತ್ತ್ವಾನಿ ಕಲ್ಲೋಲಾ ಇವ ವಾರಿಧೌ ।
ಸಂಭೂಯ ಲಯಮಾಯಾಂತಿ ತದ್ರೂಪಂ ಪರಮಾತ್ಮನಃ ॥೩೨॥

ನಿರಸ್ತಮಲಸಂಬಂಧಮಶೇಷಜಗದಾತ್ಮಕಂ ।
ಸರ್ವತತ್ತ್ವೋಪರಿ ಪ್ರೋಕ್ತಂ ಸ್ವರೂಪಂ ಪರಮಾತ್ಮನಃ ॥೩೩॥

ಶಿವನು ತನ್ನ ಅಪ್ರತಿಹತತೇಜಸ್ಸಿನಿಂದ ಅನಂತಾನಂತಾತ್ಮರಲ್ಲಿ ಉತ್ಕೃಷ್ಟನಾಗಿರುವುದರಿಂದ, ಪರಮಾತ್ಮನೆಂದು ಹೇಳಿಸಿಕೊಳ್ಳುವನು. ಈ ಪರಮಾತ್ಮನು ಸಕಲಚರಾಚರಪ್ರಪಂಚದಲ್ಲಿ ವ್ಯಾಪಿಸಿದ್ದರೂ, ಉಳಿದ ಆತ್ಮರಂತೆ ತೇಜೋಹೀನನಾಗದೆ ಉಜ್ವಲನಾಗಿಯೇ ಪ್ರಕಾಶಿಸುತ್ತಿರುವನು. "ಸ ಉ ಶ್ರೇಯಾನ್ ಭವತಿ ಜಾಯಮಾನಃ" ಎಂಬ ಶ್ರುತಿಯು ಇದೇ ಅಭಿಪ್ರಾಯವನ್ನು ಬೋಧಿಸುತ್ತಿರುವುದು. ॥೨೯॥ ಅನೇಕಬ್ರಹ್ಮಾಂಡಗಳೆಂಬ ಬುದ್ಬುದಸ್ತೋಮಗಳು ಯಾವನ ಮಾಯಾರೂಪ ಮಹಾಸಮುದ್ರದಲ್ಲಿ ಏಳುತ್ತವೆಯೋ ಮತ್ತು ಮುಳುಗುತ್ತವೆಯೋ, ಅವನು ಪರಮಾತ್ಮನೆಂದು ಹೇಳಿಸಿಕೊಳ್ಳುವನು. ॥೩೦॥ ಅಗ್ನಿಯಿಂದ ಕಿಡಿಗಳು ಉತ್ಪನ್ನವಾಗಿ ಅದರಲ್ಲಿಯೇ ಲಯವನ್ನು ಹೊಂದುವಂತೆ, ಯಾವುದರಿಂದ ಜೀವಸಮುದಾಯಗಳು ಉತ್ಪನ್ನವಾಗಿ ಯಾವುದರಲ್ಲಿ ಲಯವನ್ನು ಹೊಂದುವುವೋ, ಅದೇ ಪರಮಾತ್ಮನ ಸ್ವರೂಪವೆನಿಸುವುದು. ॥೩೧॥ ಸಮುದ್ರದಲ್ಲಿ ತೆರೆಗಳು ಉತ್ಪನ್ನವಾಗಿ ಲಯವನ್ನು ಹೊಂದುವಂತೆ, ಯಾವುದರಲ್ಲಿ ಪೃಥಿವ್ಯಾದಿಸಮಸ್ತತತ್ತ್ವಗಳು ಉತ್ಪನ್ನವಾಗಿ ಲಯವನ್ನು ಹೊಂದುವವೋ, ಅದೇ ಪರಮಾತ್ಮನ ಸ್ವರೂಪವೆನಿಸುವುದು. ॥೩೨॥ ಆಣವಾದಿಮಲಸಂಬಂಧಶೂನ್ಯವಾದುದೂ ಅರ್ಥಾತ್ ಅತ್ಯಂತಪವಿತ್ರವಾದುದೂ, ಸಕಲಚರಾಚರಪ್ರಪಂಚರೂಪವಾದುದೂ ಆದ ಪರಮಾತ್ಮನ ಸ್ವರೂಪವು ಭೂಮ್ಯಾದಿ ಸಮಸ್ತತತ್ತ್ವಗಳಿಗಿಂತಲೂ ಶ್ರೇಷ್ಠವಾಗಿರುವುದು. ॥೩೩॥

ಯಥಾ ವ್ಯಾಪ್ಯ ಜಗತ್ಸರ್ವಂ ಸ್ವಭಾಸಾ ಭಾತಿ ಭಾಸ್ಕರಃ ।
ತಥಾ ಸ್ವಶಕ್ತಿಭಿರ್ವ್ಯಾಪ್ಯ ಪರಮಾತ್ಮಾ ಪ್ರಕಾಶತೇ ॥೩೪॥
ವಿಶ್ವತೋ ಭಾಸಮಾನೋಽಪಿ ವಿಶ್ವಮಾಯಾವಿಲಕ್ಷಣಃ ।
ಪರಮಾತ್ಮಾ ಸ್ವಯಂಜ್ಯೋತೀರೂಪೋ ಜೀವಾತ್ಮನಾಂ ಭವೇತ್ ॥೩೫॥

೩೧ ನಿರ್ದೇಹಾಗಮಸ್ಥಲಂ

ದೇಹಿನೋಽಪಿ ಪರಾತ್ಮತ್ವಭಾವಿನೋ ನಿರಹಂಕೃತೇಃ ।
ನಿರಸ್ತದೇಹಧರ್ಮಸ್ಯ ನಿರ್ದೇಹಾಗಮ ಉಚ್ಯತೇ ॥೩೬॥
ಶಿವೋಽಹಮಿತಿ ಯಸ್ಯಾಸ್ತಿ ಭಾವನಾ ಸರ್ವಗಾಮಿನೀ ।
ತಸ್ಯ ದೇಹೇನ ಸಂಬಂಧಃ ಕಥಂ ಸ್ಯಾದಮಿತಾತ್ಮನಃ ॥೩೭॥
ಗಲಿತೇ ಕೃತ್ರಿಮಾಹಂತ್ವೇ ಸಂಸಾರಭ್ರಮಕಾರಣೇ ।
ಪರಾಹಂತಾಂ ಪ್ರವಿಷ್ಟಸ್ಯ ಕುತೋ ದೇಹಃ ಕುತೋ ರತಿಃ ॥೩೮॥

ಸೂರ್ಯನು ತನ್ನ ತೇಜಸ್ಸಿನಿಂದ ಸಮಸ್ತಜಗತ್ತನ್ನು ವ್ಯಾಪಿಸಿ ಹೇಗೆ ಪ್ರಕಾಶಿಸುತ್ತಿರುವನೋ, ಹಾಗೆಯೇ ಪರಮಾತ್ಮನು ತನ್ನಲ್ಲಿರುವ ಅನಂತಶಕ್ತಿಗಳಿಂದ ಸಮಸ್ತಜಗತ್ತನ್ನು ವ್ಯಾಪಿಸಿ ಪ್ರಕಾಶಿಸುತ್ತಿರುವನು. ॥೩೪॥ ವಿಶ್ವಮಾಯಾವಿಲಕ್ಷಣನಾದ ಪರಮಾತ್ಮನು ಜೀವಾತ್ಮರಲ್ಲಿ ಸರ್ವತ್ರ ಪ್ರಕಾಶಮಾನನಾದರೂ, ಸ್ವಯಂಜ್ಯೋತಿಃ ಸ್ವರೂಪನಾಗಿಯೇ ಪ್ರಕಾಶಿಸುವನು. "ಅನಶ್ನನ್ನನ್ಯೋ ಅಭಿಚಾಕಶೀತಿ" ಎಂಬ ಶ್ರುತಿಯು ಇದೇ ಅಭಿಪ್ರಾಯವನ್ನು ಬೋಧಿಸುತ್ತಿರುವುದು. ॥೩೫॥

೩೧ ನಿರ್ದೇಹಾಗಮಸ್ಥಲ

ಪರಮಾತ್ಮಸ್ವರೂಪವನ್ನು ಭಾವಿಸುವವನೂ, ಅಹಂಕಾರಶೂನ್ಯನೂ, ದೇಹವುಳ್ಳವನಾಗಿದ್ದರೂ ದೇಹಧರ್ಮಗಳಿಂದ ವಿಮುಕ್ತನಾದವನೂ ಆದ ಶಿವಯೋಗಿಗೆ ನಿರ್ದೇಹತ್ವಪ್ರಾಪ್ತಿಯು ಹೇಳಲ್ಪಡುವುದು. ॥೩೬॥ 'ಶಿವೋಽಹಂ' ನಾನು ಶಿವನೆಂಬ ಸರ್ವವ್ಯಾಪಕವಾದ ಭಾವನೆಯು ಯಾವನಲ್ಲಿರುವುದೋ, ಮಹಾತ್ಮನಾದ ಆ ಶಿವಯೋಗಿಗೆ ಶರೀರಸಂಬಂಧವು ಹೇಗೆ ಉಂಟಾಗುವುದು? ಎಂದೂ ಉಂಟಾಗುವುದಿಲ್ಲವೆಂದು ಭಾವವು. ॥೩೭॥ ಸಂಸಾರಭ್ರಾಂತಿಗೆ ಮೂಲಕಾರಣೀಭೂತವಾದ ಕೃತ್ರಿಮಾಹಂಕಾರವು ನಷ್ಟವಾಗಲು, ಪರಾಹಂತೆಯನ್ನು (ಶಿವಭಾವವನ್ನು) ಪಡೆದ ಶಿವಯೋಗಿಗೆ ಶರೀರವೆಲ್ಲಿಯದು? ಮತ್ತು ಶರೀರಸಂಬಂಧವಾದ ಪ್ರೀತಿಯೆಲ್ಲಿಯದು? ಇವೆರಡೂ ಇರುವುದಿಲ್ಲವೆಂದು ಭಾವವು. ॥೩೮॥

ನಿಷ್ಕಲೇ ನಿಷ್ಪ್ರಪಂಚೌಘೇ ಗಭೀರೇ ಚಿನ್ಮಹೋದಧೌ ।
ನಿಮಗ್ನಮಾನಸೋ ಯೋಗೀ ಕಥಂ ದೇಹಂ ವಿಚಿಂತಯೇತ್ ॥೩೯॥

ಅಪರಿಚ್ಛೇದ್ಯಮಾತ್ಮಾನಂ ಚಿದಂಬರಮಿತಿ ಸ್ಮರನ್ ।
ದೇಹಯೋಗೇಽಪಿ ದೇಹಸ್ಥೈರ್ವಿಕಾರೈರ್ನ ವಿಲಿಪ್ಯತೇ ॥೪೦॥

ಅಖಂಡಸಂವಿದಾಕಾರಮದ್ವಿತೀಯಂ ಸುಖಾತ್ಮಕಂ ।
ಪರಮಾಕಾಶಮಾತ್ಮಾನಂ ಮನ್ವಾನಃ ಕುತ್ರ ಮುಹ್ಯತಿ ॥೪೧॥

ಉಪಾಧಿವಿಹಿತಾ ಭೇದಾ ದೃಶ್ಯಂತೇ ಚೈಕವಸ್ತುನಿ ।
ಇತಿ ಯಸ್ಯ ಮತಿಃ ಸೋಽಯಂ ಕಥಂ ದೇಹಮಿತೋ ಭವೇತ್ ॥೪೨॥

ಭೇದಬುದ್ಧಿಃ ಸಮಸ್ತಾನಾಂ ಪರಿಚ್ಛೇದಸ್ಯ ಕಾರಣಂ ।
ಅಭೇದಬುದ್ಧೌ ಜಾತಾಯಾಂ ಪರಿಚ್ಛೇದಸ್ಯ ಕಾ ಕಥಾ? ॥೪೩॥

ನಿಷ್ಕಲವೂ, ಚರಾಚರಪ್ರಪಂಚಸಮೂಹಶೂನ್ಯವೂ, ಅತ್ಯಂತಗಭೀರವೂ ಆದ ಜ್ಞಾನಸಮುದ್ರದಲ್ಲಿ ಮನಸ್ಸನ್ನು ಮುಳುಗಿಸಿದ ಶಿವಯೋಗಿಯು ದೇಹವನ್ನು ಹೇಗೆ ಚಿಂತಿಸುವನು? ಇಂತಹ ಶಿವಯೋಗಿಗೆ ತನ್ನ ದೇಹದ ವಿಷಯದಲ್ಲಿ ಸ್ಮರಣ ವಿರುವುದಿಲ್ಲವೆಂದು ಭಾವವು. ॥೩೯॥ ತನ್ನನ್ನು ಅಪರಿಚ್ಛಿನ್ನಜ್ಞಾನಾಕಾಶಸ್ವರೂಪ ನನ್ನಾಗಿ ಭಾವಿಸುವ ಶಿವಯೋಗಿಯು ದೇಹದಿಂದ ಕೂಡಿದ್ದರೂ, ದೇಹದಲ್ಲಿರುವ ಇಂದ್ರಿಯವಿಕಾರಗಳಿಂದ ಲಿಪ್ತನಾಗುವುದಿಲ್ಲ. ॥೪೦॥ ತನ್ನನ್ನು ಅಖಂಡಜ್ಞಾನ ಸ್ವರೂಪನನ್ನಾಗಿಯೂ, ಅದ್ವಿತೀಯನನ್ನಾಗಿಯೂ, ಆನಂದಸ್ವರೂಪನನ್ನಾಗಿಯೂ ತಿಳಿಯುವ ಶಿವಯೋಗಿಯು ಎಲ್ಲಿ ಮೋಹವನ್ನು ಹೊಂದುವನು? ಎಲ್ಲಿಯೂ ಮೋಹವನ್ನು ಹೊಂದುವುದಿಲ್ಲವೆಂದು ಭಾವವು. ॥೪೧॥ ಒಂದೇ ವಸ್ತುವಿನಲ್ಲಿ ನಾನಾ ಪ್ರಕಾರವಾದ ಭೇದಗಳು ಉಪಾಧಿಗಳಿಂದ ಕೂಡಿದವುಗಳಾಗಿ ತೋರುತ್ತಿರುವುವೆಂಬ ಜ್ಞಾನವು ಯಾವನಿಗುಂಟೋ, ಅವನು ಹೇಗೆ ದೇಹಸಂಬಂಧವುಳ್ಳವನಾಗುವನು? ಸರ್ವವನ್ನೂ ಅಭೇದಬುದ್ಧಿಯಿಂದ ನೋಡುತ್ತ ಸಾಕ್ಷಾತ್ ಶಿವಸ್ವರೂಪನಾಗಿರುವ ಶಿವಯೋಗಿಗೆ ದೇಹಸಂಬಂಧವು ಇಲ್ಲವೇ ಇಲ್ಲವೆಂದು ಭಾವವು. ॥೪೨॥ ಭೇದ ಬುದ್ಧಿಯೇ ಸಮಸ್ತವಸ್ತುಗಳ ಪರಿಚ್ಛೇದಕ್ಕೆ (ಭಿನ್ನಭಿನ್ನತೆಗೆ) ಮೂಲಕಾರಣೀಭೂತ ವಾಗಿರುವುದು. ಅಭೇದಬುದ್ಧಿಯು ಉತ್ಪನ್ನವಾಗಲು ಪರಿಚ್ಛೇದದ ವಾರ್ತೆಯೆಲ್ಲಿ ಯದು? ಅಭೇದಬುದ್ಧಿಯುಳ್ಳವನು ಯಾವ ವಸ್ತುವನ್ನೂ ಭಿನ್ನಭಿನ್ನವಾಗಿ ಕಾಣದೆ, ಸರ್ವವನ್ನೂ ಶಿವಸ್ವರೂಪವನ್ನಾಗಿಯೇ ಕಾಣುವನೆಂದು ಭಾವವು. ॥೪೩॥

೩೨ ನಿರ್ಭಾವಾಗಮಸ್ಥಲಂ

ವ್ಯತಿರೇಕಾತ್ ಸ್ವರೂಪಸ್ಯ ಭಾವಾಂತರನಿರಾಕೃತೇಃ ।
ಭಾವೋ ವಿಕಾರನಿರ್ಮುಕ್ತೋ ನಿರ್ಭಾವಾಗಮ ಉಚ್ಯತೇ ॥೪೪॥
ಅಹಂಬ್ರಹ್ಮೇತಿ ಭಾವಸ್ಯ ವಸ್ತುದ್ವಯಸಮಾಶ್ರಯಃ ।
ಏಕೀಭೂತಸ್ಯ ಚಿದ್ವ್ಯೋಮ್ನಿ ತದಭಾವೋ ವಿನಿಶ್ಚಿತಃ ॥೪೫॥
ಏಕಭಾವೇನ ರೂಢಸ್ಯ ನಿಷ್ಕಲಂಕೇ ಚಿದಂಬರೇ ।
ಕ್ವ ಜಾತಿವಾಸನಾಯೋಗಃ ಕ್ವ ದೇಹಿತ್ವಂ ಪರಿಭ್ರಮಃ ॥೪೬॥
ಶೂನ್ಯೇ ಚಿದಂಬರೇ ಸ್ಥಾನೇ ದೂರೇ ವಾಙ್ಮನಸಾಧ್ವನಃ ।
ವಿಲೀನಾತ್ಮಾ ಮಹಾಯೋಗೀ ಕೇನ ಕಿಂ ವಾಽಪಿ ಭಾವಯೇತ್ ॥೪೭॥

---

೩೨ ನಿರ್ಭಾವಾಗಮಸ್ಥಲ

ನಾನುಬೇರೆ-ಶಿವನುಬೇರೆ-ಜಗತ್ತುಬೇರೆ ಎಂಬ ಭಾವನೆಯನ್ನು ನಿರಾಕರಿಸುವುದರಿಂದಲೂ, ಆದುದರಿಂದಲೇ ಪೂರ್ವಸ್ವರೂಪದ ವೈಲಕ್ಷಣ್ಯದಿಂದಲೂ, ಇಂದ್ರಿಯ ವಿಕಾರಗಳಿಂದ ಬಿಡುಗಡೆಯನ್ನುಹೊಂದಿದ ಮನೋಭಾವವೇ ನಿರ್ಭಾವಾಗಮವೆನಿಸುವುದು. ॥೪೪॥ 'ಅಹಂ ಬ್ರಹ್ಮ' ಎಂಬ ಭಾವನೆಗೆ ನಾನು ಮತ್ತು ಬ್ರಹ್ಮ ಎಂಬ ಎರಡು ವಸ್ತುಗಳ ಸಂಬಂಧವುಂಟಾಗುವುದು. ಚಿದಾಕಾಶದಲ್ಲಿ ಸಮರಸೀಭೂತವಾದ ಭಾವನೆಗೆ 'ಅಹಂ-ಬ್ರಹ್ಮ' ಎಂಬ ಎರಡು ವಸ್ತುಗಳ ಅಭಾವವು ಉಕ್ತವಾಗಿರುವುದು. ಶಿವೋಽಹಂಭಾವನೆಯೂ ಕೂಡ ಅಳಿದುಹೋಗಿ ತಾನೇತಾನಾಗಿ ಬೆಳಗುತ್ತಿರುವುದೇ ನಿರ್ಭಾವಾಗಮವೆನಿಸುವುದು. ॥೪೫॥ ನಿಷ್ಕಲಂಕವಾದ ಚಿದಾಕಾಶದಲ್ಲಿ ಏಕತ್ವ (ಸಾಮರಸ್ಯ)ಭಾವದಿಂದ ದೃಢನಾದ ಶಿವಯೋಗಿಗೆ ವರ್ಣಾಶ್ರಮವಾಸನಾಸಂಬಂಧವೂ, ಶರೀರವುಳ್ಳೋಣವೂ, ಸಂಸಾರಚಕ್ರಭ್ರಮಣವೂ ಎಲ್ಲಿಯದು? ಇವು ಯಾವುವೂ ಇರುವುದಿಲ್ಲವೆಂದು ಭಾವವು. ॥೪೬॥ ವಾಙ್ಮನೋಮಾರ್ಗಕ್ಕೆ ಅತೀತವೂ, ನೀಲ ಪೀತಾದ್ಯಾಕಾರಶೂನ್ಯವೂ ಆದ ಚಿದಾಕಾಶಸ್ಥಾನದಲ್ಲಿ ಆತ್ಮನನ್ನು ಲಯಗೊಳಿಸಿದ ಅರ್ಥಾತ್ ತಾದಾತ್ಮ್ಯವನ್ನು ಹೊಂದಿದ ಶಿವಯೋಗಿಯು ಯಾವುದರಿಂದ ಯಾವ ವಸ್ತುವನ್ನು ಭಾವಿಸುವನು? ಅವನು ತಾನೇತಾನಾಗಿ ಬೆಳಗುತ್ತಿರುವಾಗ ಯಾವ ಪ್ರಕಾರದಿಂದ ಯಾವ ವಸ್ತುವನ್ನೂ ಭಾವಿಸುವುದಿಲ್ಲವೆಂದು ಭಾವವು. ॥೪೭॥

ಅವಿಶುದ್ಧೇ ವಿಶುದ್ಧೇ ವಾ ಸ್ಥಲೇ ದೀಪ್ತಿರ್ಯಥಾ ರವೇಃ ।
ಪತತ್ಯೇವಂ ಸದಾಽದ್ವೈತೀ ಸರ್ವತ್ರ ಸಮವೃತ್ತಿಮಾನ್ ॥೪೮॥

ನ ಬಿಭೇತಿ ಜರಾಮೃತ್ಯೋರ್ನಕ್ಷುಧಾಯಾ ವಶಂ ವ್ರಜೇತ್ ।
ಪರಿಪೂರ್ಣನಿಜಾನಂದಸಮಾಸ್ವಾದಾನ್ಮಹಾಸುಖೀ ॥೪೯॥

೩೩ ನಷ್ಟಾಗಮಸ್ಥಲಂ

ಭೇದಶೂನ್ಯೇ ಮಹಾಬೋಧೇ ಜ್ಞಾತ್ರಾದಿತ್ರಯಹಾನಿತಃ ।
ಜ್ಞಾನಸ್ಯ ನಷ್ಟಭಾವೇನ ನಷ್ಟಾಗಮ ಇಹೋಚ್ಯತೇ ॥೫೦॥

ಅದ್ವೈತವಾಸನಾವಿಷ್ಟಚೇತಸಾಂ ಪರಯೋಗಿನಾಂ ।
ಪಶ್ಯತಾಮಂತರಾತ್ಮಾನಂ ಜ್ಞಾತೃತ್ವಂ ಕಥಮನ್ಯಥಾ ॥೫೧॥

ಅಕರ್ತಾಽಹಮವೇತ್ತಾಽಹಮದೇಹೋಽಹಂ ನಿರಂಜನಃ ।
ಇತಿ ಚಿಂತಯತಃ ಸಾಕ್ಷಾತ್ ಸಂವಿದೇವ ಪ್ರಕಾಶತೇ ॥೫೨॥

ಸೂರ್ಯನ ಪ್ರಕಾಶವು ಪವಿತ್ರಸ್ಥಳದಲ್ಲಾಗಲಿ ಅಥವಾ ಅಪವಿತ್ರಸ್ಥಳದಲ್ಲಾಗಲಿ ಭೇದಭಾವವಿಲ್ಲದೆ ಹೇಗೆ ಬೀಳುತ್ತಿರುವುದೋ, ಹಾಗೆಯೇ ಶಿವಾದ್ವೈತಿಯು ಸಮಸ್ತ ವಸ್ತುಗಳಲ್ಲಿ ಇದು ಉತ್ತಮವಾದುದು, ಇದು ಕನಿಷ್ಠವಾದುದು ಎಂಬ ಭೇದವನ್ನಿಡದೆ ಸಮಾನಬುದ್ಧಿಯುಳ್ಳವನಾಗಿರುವನು. ॥೪೮॥ ಇಂತಹ ಶಿವಯೋಗಿಯು ಜರಾಮರಣ ಗಳಿಗೆ ಹೆದರುವುದಿಲ್ಲ; ಮತ್ತು ಹಸಿವಿನ ಬಾಧೆಗೆ ಒಳಗಾಗುವುದಿಲ್ಲ; ಇವನು ಪರಿಪೂರ್ಣಾತ್ಮಾನಂದವನ್ನು ಅನುಭವಿಸುವುದರಿಂದ ಮಹಾಸುಖಿಯಾಗಿರುವನು.॥೪೯॥

೩೩ ನಷ್ಟಾಗಮಸ್ಥಲ

ಭೇದಶೂನ್ಯವಾದ ಮಹಾಜ್ಞಾನದಲ್ಲಿ ಜ್ಞಾತೃಜ್ಞಾನಜ್ಞೇಯರೂಪತ್ರಿಪುಟೀ ಮಯಪ್ರಪಂಚವು ಶೂನ್ಯವಾಗಿರುವುದರಿಂದ, ನಿರ್ಭಾವಾಗಮಸ್ಥಲಸಂಪನ್ನನಾದ ಈ ಶಿವಯೋಗಿಯ ವಿಷಯದಲ್ಲಿ ಭೇದಜ್ಞಾನವು ನಷ್ಟವಾಗುವಕಾರಣ ಇದು ನಷ್ಟಾಗಮ ವೆನಿಸಿಕೊಳ್ಳುವುದು. ॥೫೦॥ ಶಿವಾದ್ವೈತವಾಸನೆಯಿಂದ ಯುಕ್ತರಾದವರೂ, ತಮ್ಮ ಹೃದಯಕಮಲದಲ್ಲಿ ಪರಮೇಶ್ವರನನ್ನು ನೋಡುತ್ತಿರುವವರೂ ಆದ ಶಿವಯೋಗಿಗಳಿಗೆ ಸ್ವಾತಿರಿಕ್ತಪದಾರ್ಥಾಂತರಜ್ಞಾತೃತ್ವವು ಹೇಗೆ ಸಂಭವಿಸುವುದು? ಶಿವಯೋಗಿಗಳು ತಮಗೆ ಹೊರತಾದ ಯಾವ ಪದಾರ್ಥಗಳನ್ನೂ ನೋಡದೆ, ಸರ್ವಪದಾರ್ಥಗಳನ್ನೂ ಸ್ವಸ್ವರೂಪದಿಂದಲೇ ನೋಡುವರೆಂದು ಭಾವವು. ॥೫೧॥ನಾನು ಕರ್ತನಲ್ಲ, ನಾನು ತಿಳಿ ಯುವವನಲ್ಲ, ನಾನು ದೇಹವುಳ್ಳವನಲ್ಲ, ನಾನು ನಿರಂಜನನಾಗಿದ್ದೇನೆ, ಎಂದು ಚಿಂತಿಸು ತ್ತಿರುವ ಶಿವಯೋಗಿಗೆ ಸಾಕ್ಷಾತ್ ಶಿವಾದ್ವೈತಜ್ಞಾನವೇ ಪ್ರಕಾಶಿಸುತ್ತದೆ. ॥೫೨॥

ನಿರಸ್ತಭೇದಜಲ್ಪಸ್ಯ ನಿರೀಹಸ್ಯ ಪ್ರಶಾಮ್ಯತಃ ।
ಸ್ವೇ ಮಹಿಮ್ನಿ ವಿಲೀನಸ್ಯ ಕಿಮನ್ಯದ್ ಜ್ಞೇಯಮುಚ್ಯತೇ ॥೫೩॥
ಏಕೀಭೂತೇ ನಿಜಾಕಾರೇ ಸಂವಿದಾ ನಿಷ್ಪ್ರಪಂಚಯಾ ।
ಕೇನ ಕಿಂ ವೇದನೀಯಂ ಸ್ಯಾದ್ವೇತ್ತಾ ಕಃ ಪರಿಭಾಷ್ಯತೇ ॥೫೪॥
ಮಹಾಸತ್ತಾ ಮಹಾಸಂವಿದ್ವಿಶ್ವರೂಪಾ ಪ್ರಕಾಶತೇ ।
ತದ್ವಿನಾ ನಾಸ್ತಿ ವಸ್ತ್ವೇಕಂ ಭೇದಬುದ್ಧಿಂ ವಿಮುಂಚತಃ ॥೫೫॥

೩೪ ಆದಿಪ್ರಸಾದಿಸ್ಥಲಂ

ಸರ್ವಾಧಿಷ್ಠಾತೃಕಃ ಶಂಭುರಾದಿಸ್ತಸ್ಯ ಪ್ರಸಾದತಃ ।
ಆದಿಪ್ರಸಾದೀತ್ಯುಕ್ತೋಽಯಂ ನಿರ್ವಿಕಾರಪದೇ ಸ್ಥಿತಃ ॥೫೬॥

ಭೇದಭಾವವನ್ನು ನಿರಾಕರಿಸಿದವನೂ, ರಾಗದ್ವೇಷರಹಿತನೂ, ವಿರಕ್ತನೂ, ನೈಜವಾದ ಮಹಿಮೆಯಲ್ಲಿಯೇ ಲೀನನಾದವನೂ ಆದ ಶಿವಯೋಗಿಗೆ ತನಗೆ ಅನ್ಯವಾದ ಜ್ಞೇಯವಸ್ತುವು ಯಾವುದಿರುವುದು? ಯಾವುದೂ ಇರುವುದಿಲ್ಲವೆಂದು ಭಾವವು. ॥೫೩॥ ಸ್ವಸ್ವರೂಪವು ಭೇದರಹಿತವಾದ ಶಿವಾದ್ವೈತಜ್ಞಾನದಿಂದ ಸಮರಸ ಭಾವವನ್ನು ಹೊಂದಲು, ಯಾವುದರಿಂದ ಯಾವ ವಸ್ತುವನ್ನು ತಿಳಿಯಬೇಕು? ಅದನ್ನು ತಿಳಿಯುವವನು ಯಾವನೆಂದು ಹೇಳಲ್ಪಡುವುದು? "ನಾತಃಪರಂ ವೇದಿತವ್ಯಂ ಹಿ ಕಿಂಚಿತ್" ಎಂಬ ಶ್ರುತಿವಾಕ್ಯಾಭಿಪ್ರಾಯಾನುಸಾರವಾಗಿ ಶಿವಯೋಗಿಗೆ ಜ್ಞಾತೃ ಜ್ಞಾನಜ್ಞೇಯಗಳಾವುವೂ ಇರುವುದಿಲ್ಲವೆಂದು ಭಾವವು. ॥೫೪॥ ಮಹಾಸತ್ತಾರೂಪ ವಾದ ಮಹಾಜ್ಞಾನವು ಜಗದ್ರೂಪವಾಗಿ ಪ್ರಕಾಶಿಸುತ್ತದೆ. ಔಪಾಧಿಕಭೇದಬುದ್ಧಿಯನ್ನು ಬಿಟ್ಟಿರುವವನಿಗೆ ಆ ಮಹಾಸತ್ತಾರೂಪಮಹಾಜ್ಞಾನವನ್ನು ಬಿಟ್ಟು ಆವುದೊಂದು ವಸ್ತುವೂ ಕಂಡುಬರುವುದಿಲ್ಲ. ॥೫೫॥

೩೪ ಆದಿಪ್ರಸಾದಿಸ್ಥಲ

ಸರ್ವಕ್ಕೂ ಆಧಾರಭೂತನಾದ ಶಿವನು ಸೃಷ್ಟ್ಯಾದಿಪಂಚಕೃತ್ಯಗಳಿಗೆ ಆದಿ ಕಾರಣನಾಗಿರುವನು. ಸರ್ವಾದಿಭೂತನಾದ ಆ ಪರಶಿವನ ಪ್ರಸಾದದಿಂದ ವಿಕಾರ ರಹಿತವಾದ ನಷ್ಟಾಗಮಸ್ಥಲದಲ್ಲಿದ್ದ ಶಿವಯೋಗಿಯು ಆದಿಪ್ರಸಾದಿಯೆಂದು ಹೇಳಿಸಿ ಕೊಳ್ಳುವನು. ॥೫೬॥

ಅನೇಕಜನ್ಮಶುದ್ಧಸ್ಯ ನಿರಹಂಕಾರಭಾವಿನಃ ।
ಪ್ರಸನ್ನಸ್ಯ ಮಹಾದೇವಃ ಪ್ರಸೀದತಿ ವಿಮುಕ್ತಯೇ ॥೫೭॥
ಶಿವಪ್ರಸಾದಸಂಪತ್ತ್ಯಾ ಶಿವಭಾವಮುಪೇಯುಷಾ ।
ಶಿವಾದನ್ಯಜ್ಜಗಜ್ಜಾಲಂ ದೃಶ್ಯಂ ತೇನ ನ ದೃಶ್ಯತೇ ॥೫೮॥
ಶಂಭೋರೇವ ಪ್ರಸಾದೇನ ಸಂಸಾರಚ್ಛೇದಕಾರಿಣಾ ।
ಮೋಹಗ್ರಂಥಿಂ ವಿನಿರ್ಭಿದ್ಯ ಮುಕ್ತಿಂ ಯಾಂತಿ ವಿವೇಕಿನಃ ॥೫೯॥
ವಿನಾ ಪ್ರಸಾದಮೀಶಸ್ಯ ಸಂಸಾರೋ ನ ನಿವರ್ತತೇ ।
ವಿನಾ ಸೂರ್ಯೋದಯಂ ಲೋಕೇ ಕುತಃಸ್ಯಾತ್ತಮಸೋ ಲಯಃ ॥೬೦॥
ಸರ್ವಾನುಗ್ರಾಹಕಃ ಶಂಭುಃ ಕೇವಲಂ ಕೃಪಯಾ ಪ್ರಭುಃ ।
ಮೋಚಯೇತ್ ಸಕಲಾನ್ ಜಂತೂನ್ನಕಿಂಚಿದಿಹ ಕಾರಣಂ ॥೬೧॥

ಅನೇಕಜನ್ಮಪರಿಶುದ್ಧನೂ, ದೇಹಾದ್ಯಭಿಮಾನಶೂನ್ಯನೂ, ನಿರ್ಮಲಚಿತ್ತನೂ ಆದ ಶಿವಯೋಗಿಗೆ ಮೋಕ್ಷವನ್ನು ಅನುಗ್ರಹಿಸುವುದಕ್ಕಾಗಿ ಶಿವನು ಪ್ರಸನ್ನನಾಗುವನು. ॥೫೭॥ ಶಿವಪ್ರಸಾದಸಂಪತ್ತಿಯಿಂದ ಶಿವಸ್ವರೂಪವನ್ನು ಹೊಂದಿದ ಆ ಶಿವಯೋಗಿಯು, ದೃಶ್ಯವಾದ ಈ ಚರಾಚರಪ್ರಪಂಚಸಮೂಹವನ್ನು ಶಿವನಿಗೆ ಅನ್ಯವನ್ನಾಗಿ ಕಾಣುವುದಿಲ್ಲ. ಸಾಗರತರಂಗನ್ಯಾಯದಂತೆ, ಎಂದರೆ ಸಮುದ್ರಕ್ಕೂ ಅದರಿಂದ ಉತ್ಪನ್ನವಾಗುವ ತೆರೆಗಳಿಗೂ ಅಭೇದವಿರುವಂತೆ, ಶಿವನಿಗೂ ಶಿವನಿಂದ ಉತ್ಪನ್ನವಾದ ಚರಾಚರಪ್ರಪಂಚಕ್ಕೂ ಅಭೇದವಿರುವುದಾಗಿ ತಿಳಿಯುವನೆಂದು ಭಾವವು. ॥೫೮॥ ವಿವೇಕಿಗಳು ಸಂಸಾರನಾಶಕ್ಕೆ ಮೂಲಕಾರಣೀಭೂತವಾದ ಶಿವಪ್ರಸಾದದಿಂದಲೇ ಅಜ್ಞಾನಗ್ರಂಥಿಯನ್ನು ಭೇದಿಸಿ, ಮೋಕ್ಷವನ್ನು ಪಡೆಯುವರು. ॥೫೯॥ ಶಿವನ ಪ್ರಸಾದವಿಲ್ಲದೆ ಸಂಸಾರವು ನಿವೃತ್ತಿಯನ್ನು ಹೊಂದುವುದಿಲ್ಲ. ಲೋಕದಲ್ಲಿ ಸೂರ್ಯೋದಯವಿಲ್ಲದೆ ಅಂಧಕಾರನಾಶವು ಎಲ್ಲಿಂದ ಆಗುವುದು? ಸೂರ್ಯೋದಯದಿಂದ ಅಂಧಕಾರವು ನಾಶವಾಗುವಂತೆ, ಶಿವಪ್ರಸಾದದಿಂದ ಸಂಸಾರಬಂಧವು ನಾಶವಾಗುವುದೆಂದು ಭಾವವು. ॥೬೦॥ ಅನಂತಬ್ರಹ್ಮಾಂಡನಾಯಕನೂ, ಸರ್ವಾನುಗ್ರಾಹಕನೂ ಆದ ಶಿವನು, ಕೇವಲ ತನ್ನ ಕೃಪೆಯಿಂದಲೇ ಸಮಸ್ತಪ್ರಾಣಿಗಳನ್ನು ಸಂಸಾರಬಂಧನದಿಂದ ಬಿಡಿಸುವನು. ಈ ವಿಷಯದಲ್ಲಿ ಅವನ ಅನುಗ್ರಹವೇ ಕಾರಣವಲ್ಲದೆ ಮತ್ತಾವ ಕಾರಣವೂ ಇರುವುದಿಲ್ಲ. ಸರ್ವಪ್ರಾಣಿಗಳ ಸಂಸಾರಬಂಧನಿವೃತ್ತಿಗೆ ಪರಶಿವಮೂರ್ತಿಯ ಕೃಪೆಯೇ ಮುಖ್ಯಕಾರಣವೆಂದು ಭಾವವು. ॥೬೧॥

೩೫ ಅಂತ್ಯಪ್ರಸಾದಿಸ್ಥಲಂ

ಲಯಃ ಸರ್ವಪದಾರ್ಥಾನಾಮಂತ್ಯ ಇತ್ಯುಚ್ಯತೇ ಬುಧೈಃ ।
ಪ್ರಸಾದೋಽನುಭವಸ್ತಸ್ಯ ತದ್ವಾನಂತ್ಯಪ್ರಸಾದವಾನ್ ॥೬೨॥

ದೇವತಿರ್ಯಙ್ಮನುಷ್ಯಾದಿವ್ಯವಹಾರವಿಕಲ್ಪನಾ ।
ಮಾಯಾಕೃತಾ ಪರೇ ತತ್ತ್ವೇ ತಲ್ಲಯೇ ತತ್ ಕ್ಷಯೋ ಭವೇತ್ ॥೬೩॥

ಸಾಕ್ಷಾತ್ಕೃತೇ ಪರೇ ತತ್ತ್ವೇ ಸಚ್ಚಿದಾನಂದಲಕ್ಷಣೇ ।
ಕ್ವ ಪದಾರ್ಥಪರಿಜ್ಞಾನಂ ಕುತೋ ಜ್ಞಾತೃತ್ವಸಂಭವಃ ॥೬೪॥

ಸುಷುಪ್ತಸ್ಯ ಯಥಾ ವಸ್ತು ನ ಕಿಂಚಿದಪಿ ಭಾಸತೇ ।
ತಥಾ ಮುಕ್ತಸ್ಯ ಜೀವಸ್ಯ ನ ಕಿಂಚಿದ್ವಸ್ತು ದೃಶ್ಯತೇ ॥೬೫॥

ಯಥಾಽಽಕಾಶಮವಿಚ್ಛಿನ್ನಂ ನಿರ್ವಿಕಾರಂ ಸ್ವರೂಪತಃ ।
ತಥಾ ಮುಕ್ತಸ್ಯ ಜೀವಸ್ಯ ಸ್ವರೂಪಮವಶಿಷ್ಯತೇ ॥೬೬॥

---

೩೫ ಅಂತ್ಯಪ್ರಸಾದಿಸ್ಥಲ

ಭೂಮ್ಯಾದಿಶಿವಾಂತವಾದ ಸಮಸ್ತಪದಾರ್ಥ (ತತ್ತ್ವ) ಗಳ ಲಯಕ್ಕೆ ಆಶ್ರಯನಾದ ಶಿವನು ಅಂತ್ಯನೆಂದು ಹೇಳಿಸಿಕೊಳ್ಳುವನು. ಆ ಶಿವನ ಸಾಕ್ಷಾತ್ಕಾರವೇ ಪ್ರಸಾದವೆನಿಸುವುದು. ಅಂತಹ ಪ್ರಸಾದವುಳ್ಳ ಆದಿಪ್ರಸಾದಿಯೇ ಅಂತ್ಯಪ್ರಸಾದಿಯೆನಿಸುವನು. ॥೬೨॥ ದೇವ-ಪಶು-ಪಕ್ಷಿ-ಮನುಷ್ಯ ಮೊದಲಾದ ವ್ಯವಹಾರಕಲ್ಪನೆಯು ಮಾಯೆಯಿಂದ ಉತ್ಪನ್ನವಾಗಿರುವುದು. ಪರತತ್ತ್ವದಲ್ಲಿ ಆ ಮಾಯೆಯು ಲೀನವಾಗಲು, ದೇವಮನುಷ್ಯಾದಿಕಲ್ಪನೆಯು ಕೂಡಲೇ ನಷ್ಟವಾಗುವುದು. ॥೬೩॥ ಸಚ್ಚಿದಾನಂದಸ್ವರೂಪವಾದ ಪರಶಿವತತ್ತ್ವವು ಪ್ರತ್ಯಕ್ಷವಾಗಲು, ಪೃಥಿವ್ಯಾದಿ ಪದಾರ್ಥಪರಿಜ್ಞಾನವೆಲ್ಲಿಯದು ? ತಿಳಿಯುವವನಾದರೂ ಯಾವನು ? ಆಗ ಜ್ಞಾತೃ-ಜ್ಞಾನ-ಜ್ಞೇಯ ಇವು ಮೂರೂ ಇರುವುದಿಲ್ಲವೆಂದು ಭಾವವು. ॥೬೪॥ ಗಾಢನಿದ್ರೆಯಿಂದ ಮಲಗಿದವನಿಗೆ ಯಾವ ವಸ್ತುವೂ ಹೇಗೆ ತೋರುವುದಿಲ್ಲವೋ, ಹಾಗೆಯೇ ಜೀವನ್ಮುಕ್ತನಿಗೆ ಯಾವ ವಸ್ತುವೂ ತೋರುವುದಿಲ್ಲ. ಜೀವನ್ಮುಕ್ತನಿಗೆ ಸರ್ವವೂ ಶಿವಸ್ವರೂಪವಾಗಿ ತೋರುವುದೆಂದು ಭಾವವು. ॥೬೫॥ ಆಕಾಶವು ಸ್ವಾಭಾವಿಕವಾಗಿ ಹೇಗೆ ವ್ಯಾಪಕವೂ ವಿಕಾರರಹಿತವೂ ಆಗಿರುವುದೋ, ಹಾಗೆಯೇ ಜೀವನ್ಮುಕ್ತನು ಸರ್ವವಿಕಾರಗಳಿಂದ ದೂರನಾಗಿ ಸ್ವರೂಪಮಾತ್ರದಿಂದಲೇ ಉಳಿಯುವನು. ॥೬೬॥

ನ ಕಿಂಚಿದಪಿ ಮುಕ್ತಸ್ಯ ದೃಶ್ಯಂ ಕರ್ತವ್ಯಮೇವ ವಾ ।
ಸುಖಸ್ಫೂರ್ತಿಸ್ವರೂಪಸ್ಯ ನಿಶ್ಚಲಾ ಸ್ಥಿತಿರುಚ್ಯತೇ ॥೬೭॥
ಶಿವಾದ್ವೈತಪರಿಜ್ಞಾನಶಿಥಿಲಾಶೇಷವಸ್ತುನಃ ।
ಕೇವಲಂ ಸಂವಿದುಲ್ಲಾಸದರ್ಶಿನಃ ಕೇನ ಕಿಂ ಭವೇತ್ ॥೬೮॥

೩೬ ಸೇವ್ಯಪ್ರಸಾದಿಸ್ಥಲಂ

ಸೇವ್ಯೋ ಗುರುಃ ಸ್ಮೃತೋ ಹ್ಯಸ್ಯ ಪ್ರಸಾದೋಽನುಭವೋ ಮತಃ ।
ತದೇಕಾವೇಶರೂಪೇಣ ತದ್ವಾನ್ ಸೇವ್ಯಪ್ರಸಾದವಾನ್ ॥೬೯॥
ಸೇವ್ಯೋ ಗುರುಃ ಸಮಸ್ತಾನಾಂ ಶಿವ ಏವ ನ ಸಂಶಯಃ ।
ಪ್ರಸಾದೋಽಸ್ಯ ಪರಾನಂದಪ್ರಕಾಶಃ ಪರಿಕೀರ್ತ್ಯತೇ ॥೭೦॥
ಗುರುರೇವ ಪರಂ ತತ್ತ್ವಂ ಪರತತ್ತ್ವಂ ಗುರುಃ ಸ್ಮೃತಃ ।
ತದೇಕತ್ವಾನುಭಾವೇನ ನ ಕಿಂಚಿದವಶಿಷ್ಯತೇ ॥೭೧॥

ಜೀವನ್ಮುಕ್ತನಿಗೆ ನೋಡತಕ್ಕದ್ದಾಗಲಿ ಅಥವಾ ಮಾಡತಕ್ಕದ್ದಾಗಲಿ ಯಾವುದೂ ಇರುವುದಿಲ್ಲ. ಆನಂದಸ್ವರೂಪನಾದ ಜೀವನ್ಮುಕ್ತನ ಸ್ಥಿತಿಯು ನಿಶ್ಚಲವಾಗಿರುವುದು. ॥೬೭॥ ಶಿವಾದ್ವೈತಜ್ಞಾನದಿಂದ ನಿವೃತ್ತಿಗೊಳಿಸಲ್ಪಟ್ಟ ಸಮಸ್ತ ವಸ್ತುಗಳುಳ್ಳವನೂ, ಕೇವಲವಾಗಿ ಚಿದ್ವಿಲಾಸವನ್ನೇ ನೋಡುತ್ತಿರುವವನೂ ಆದ ಶಿವಯೋಗಿಗೆ ಯಾವುದರಿಂದ ಏನು ಆಗುವುದು? ಯಾವ ಪ್ರಯೋಜನವೂ ಆಗುವುದಿಲ್ಲವೆಂದು ಭಾವವು. ॥೬೮॥

೩೬ ಸೇವ್ಯಪ್ರಸಾದಿಸ್ಥಲ

ಶಿವಸ್ವರೂಪನಾದ ಶ್ರೀಗುರುವು ಸೇವ್ಯನೆಂದು ಹೇಳಿಸಿಕೊಳ್ಳುವನು. ಇಂತಹ ಶ್ರೀಗುರುವಿನ ಉಪದೇಶಾನುಭವವೇ ಪ್ರಸಾದವೆನಿಸುವುದು. ಗುರು ಮತ್ತು ಪ್ರಸಾದ ಈ ಎರಡರ ಏಕೀಭಾವ (ಸಂಬಂಧ) ವು ಶಿಷ್ಯನಲ್ಲುಂಟಾಗುವುದರಿಂದ, ಇಂತಹ ಏಕೀಭಾವವುಳ್ಳವನೇ ಸೇವ್ಯಪ್ರಸಾದಿಯೆನಿಸುವನು. ॥೬೯॥ ಸರ್ವರಿಗೂ ಪೂಜ್ಯನಾದ ಶ್ರೀಗುರುವು ಸಾಕ್ಷಾತ್ ಶಿವನೇ ಆಗಿರುವನು. ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲ. ಇಂತಹ ಶಿವಸ್ವರೂಪನಾದ ಶ್ರೀಗುರುವಿನ ಪ್ರಸಾದವು ಪರಾನಂದಪ್ರಕಾಶವೆಂದು ಹೇಳಿಸಿಕೊಳ್ಳುವುದು. ॥೭೦॥ ಶ್ರೀಗುರುವೇ ಪರತತ್ತ್ವ (ಶಿವತತ್ತ್ವ) ವಾಗಿರುವನು. ಪರತತ್ತ್ವವೇ ಶ್ರೀಗುರುವಾಗಿರುವುದು. ಆ ಗುರುತತ್ತ್ವಪರತತ್ತ್ವಗಳ ಐಕ್ಯಜ್ಞಾನದಿಂದ ಏನೂ ಉಳಿಯುವುದಿಲ್ಲ. ಅವೆರಡರಲ್ಲಿಯೂ ಯಾವ ಭೇದವೂ ಉಳಿಯದೆ ಒಂದೇ ಒಂದಾಗುವುದೆಂದು ಭಾವವು. ॥೭೧॥

ಅಪರಿಚ್ಛೇದ್ಯಮಾತ್ಮಸ್ಥಮವಾಙ್ಮನಸಗೋಚರಮ್ ।
ಆನಂದಂ ಪಶ್ಯತಾಂ ಪುಂಸಾಂ ರತಿರನ್ಯತ್ರ ಕಾ ಭವೇತ್ ॥೭೨॥

ಜ್ಞಾನಾಮೃತೇನ ತೃಪ್ತಸ್ಯ ಕಿಮನ್ಯೈರ್ಭೋಜ್ಯವಸ್ತುಭಿಃ ।
ಜ್ಞಾನಮೇವ ಪರಾನಂದಂ ಪ್ರಕಾಶಯತಿ ಯಚ್ಛಿವಮ್ ॥೭೩॥

ಮುಕ್ತಿರೇವ ಪರಾ ತೃಪ್ತಿಃ ಪರಮಾನಂದಲಕ್ಷಣಾ ।
ನಿತ್ಯತೃಪ್ತಸ್ಯ ಮುಕ್ತಸ್ಯ ಕಿಮನ್ಯೈರ್ಭೋಗಸಾಧನೈಃ ॥೭೪॥

ನ ಬಾಹ್ಯಕರ್ಮ ತಸ್ಯಾಸ್ತಿ ನಚಾಂತರ್ನೈವ ಕುತ್ರಚಿತ್ ।
ಶಿವೈಕ್ಯಜ್ಞಾನರೂಢಸ್ಯ ದೇಹಭ್ರಾಂತಿಂ ವಿಮುಂಚತಃ ॥೭೫॥

ಅಖಂಡವೂ, ಸ್ವಸ್ವರೂಪವೂ, ವಾಙ್ಮನಸ್ಸುಗಳಿಗೆ ಅಗೋಚರವೂ ಆದ ಪರಮಾನಂದವನ್ನು ಪ್ರತ್ಯಕ್ಷೀಕರಿಸುತ್ತಿರುವ ಶಿವಯೋಗಿಗಳಿಗೆ, ಬೇರೆ ವಿಷಯಗಳಲ್ಲಿ ಯಾವ ಪ್ರೀತಿಯುಂಟಾದೀತು? ಯಾವ ಪ್ರೀತಿಯೂ ಉಂಟಾಗುವುದಿಲ್ಲವೆಂದು ಭಾವವು. ॥೭೨॥ ಯಾವ ಜ್ಞಾನವು ಸಚ್ಚಿದಾನಂದಸ್ವರೂಪನಾದ ಶಿವನನ್ನು ಪ್ರಕಾಶಗೊಳಿಸುತ್ತದೆಯೋ, ಅಂತಹ ಜ್ಞಾನಾಮೃತದಿಂದ ತೃಪ್ತನಾದ ಶಿವಯೋಗಿಗೆ ಬೇರೆಯಾಗಿರುವ ಭೋಜ್ಯವಸ್ತುಗಳಿಂದ ಏನು ಪ್ರಯೋಜನವು ? ಯಾವ ಪ್ರಯೋಜನವೂ ಇಲ್ಲವೆಂದು ಭಾವವು. ॥೭೩॥ ಪರಮಾನಂದಸ್ವರೂಪವಾದ ಮುಕ್ತಿಯೇ ಶ್ರೇಷ್ಠವಾದ ತೃಪ್ತಿಯೆನಿಸುವುದು. ನಿತ್ಯತೃಪ್ತನಾದ ಜೀವನ್ಮುಕ್ತನಿಗೆ ಬೇರೆಯಾಗಿರುವ ಭೋಗಸಾಧನಗಳಿಂದ ಏನು ಪ್ರಯೋಜನವು ? ॥೭೪॥ ಶಿವೈಕ್ಯ ಜ್ಞಾನಸಂಪನ್ನನೂ ದೇಹಭ್ರಾಂತಿವಿಮುಕ್ತನೂ ಆಗಿರುವ ಆ ಶಿವಯೋಗಿಗೆ, ಬಾಹ್ಯಪೂಜಾಕರ್ಮವಾಗಲಿ ಅಥವಾ ಅಂತರಂಗದಲ್ಲಿ ಮಾಡುವ ಧ್ಯಾನವಾಗಲಿ ಯಾವುದೂ ಇರುವುದಿಲ್ಲ. ಶಿವಜ್ಞಾನಸಂಪನ್ನನಾದ ಶಿವಯೋಗಿಯು ಸರ್ವವನ್ನೂ ಶಿವಸ್ವರೂಪವನ್ನಾಗಿ ಭಾವಿಸುತ್ತ, ತಾನೇತಾನಾಗಿ ಬೆಳಗುತ್ತಿರುವಾಗ, ಅಂತಹ ಶಿವಯೋಗಿಗೆ ಬಾಹ್ಯಕ್ರಿಯೆಯಿಂದಾಗಲಿ ಅಥವಾ ಆಂತರಂಗಿಕಧ್ಯಾನದಿಂದಾಗಲಿ ಯಾವ ಫಲವೂ ಇರುವುದಿಲ್ಲ. ಒಂದುವೇಳೆ ಶಿವಯೋಗಿಯು ಪೂಜಾದಿಕ್ರಿಯೆಗಳನ್ನು ಆಚರಿಸಿದನಾದರೆ, ಆ ಆಚರಣೆಯು ಇತರರ ಉದ್ಧಾರಕ್ಕೋಸ್ಕರ ಅನುಷ್ಠಿಸಲ್ಪಡುವುದೆಂದು ಭಾವಿಸಬೇಕಲ್ಲದೆ, ಅವನ ಉದ್ಧಾರಕ್ಕೋಸ್ಕರ ಅನುಷ್ಠಿಸಲ್ಪಡುವುದೆಂದು ಭಾವಿಸಬಾರದು. ಆದುದರಿಂದಲೇ ಶ್ರೀರೇಣುಕಭಗವತ್ಪಾದರು ಅಂತಹ ಶಿವಯೋಗಿಗೆ ಬಾಹ್ಯಪೂಜೆಯಾಗಲಿ ಅಥವಾ ಆಂತರಂಗಿಕಧ್ಯಾನವಾಗಲಿ ಯಾವುದೂ ಇರುವುದಿಲ್ಲವೆಂದು ಅಪ್ಪಣೆಕೊಡಿಸಿರುವರು. ॥೭೫॥

ನ ಕರ್ಮಬಂಧೇ ನ ತಪೋವಿಶೇಷೇ
ನ ಮಂತ್ರಯೋಗಾಭ್ಯಸನೇ ತಥೈವ।
ಧ್ಯಾನೇ ನ ಬೋಧೇ ಚ ತಥಾಽತ್ಮತತ್ತ್ವೇ
ಮನಃಪ್ರವೃತ್ತಿಃ ಪರಯೋಗಭಾಜಾಂ ॥೭೬॥

ಇತಿ ಶ್ರೀಸಿದ್ಧಾಂತಶಿಖಾಮಣೌ ಲಿಂಗಸ್ಥಲೀಯಪ್ರಾಣಲಿಂಗಿಸ್ಥಲೇ
ಆತ್ಮಸ್ಥಲಾದಿನವವಿಧಸ್ಥಲಪ್ರಸಂಗೋ ನಾಮ

ಅಷ್ಟಾದಶಪರಿಚ್ಛೇದಃ ಪರಿಸಮಾಪ್ತಃ.

ಶ್ರೇಷ್ಠವಾದ ಶಿವಯೋಗವನ್ನು ಪಡೆದ ಶಿವಯೋಗಿಗಳ ಚಿತ್ತವೃತ್ತಿಯು ಷಟ್ಕರ್ಮಾದಿರೂಪಹಠಯೋಗದಲ್ಲಿಯಾಗಲಿ, ತಪೋವಿಶೇಷವೆನಿಸಿದ ರಾಜಯೋಗದಲ್ಲಿಯಾಗಲಿ, ಅಜಪಗಾಯತ್ರೀರೂಪಸೋಹಂಮಂತ್ರಯೋಗಾಭ್ಯಾಸದಲ್ಲಿಯಾಗಲಿ, ಅಥವಾ ಅನಾಹತಬ್ರಹ್ಮಧ್ಯಾನರೂಪಲಯಯೋಗದಲ್ಲಿಯಾಗಲಿ ಇರುವುದಿಲ್ಲ. ಆದರೆ ಆ ನಾಲ್ಕುಪ್ರಕಾರವಾಗಿರುವ ಯೋಗಗಳಿಗೆ ಆತ್ಮಸ್ವರೂಪವಾಗಿರುವ ಸ್ವಸ್ವರೂಪಜ್ಞಾನದಲ್ಲಿ ಇರುವುದು. ॥೭೬॥

ಇಂತು ಶ್ರೀಸಿದ್ಧಾಂತಶಿಖಾಮಣಿಯ ಲಿಂಗಸ್ಥಲೀಯಪ್ರಾಣಲಿಂಗಿಸ್ಥಲದಲ್ಲಿ
ಆತ್ಮಸ್ಥಲಾದಿನವವಿಧಸ್ಥಲವಿಚಾರಾತ್ಮಕವಾದ

ಹದಿನೆಂಟನೆಯ ಪರಿಚ್ಛೇದವು ಪರಿಸಮಾಪ್ತವಾದುದು.

ಶ್ರೀಜಗದ್ಗುರುರೇಣುಕಾಚಾರ್ಯಃ ಪ್ರಸೀದತು.

ಏಕೋನವಿಂಶತಿತಮಪರಿಚ್ಛೇದಃ

ಶರಣಸ್ಥಲಂ

॥ ಅಗಸ್ತ್ಯ ಉವಾಚ ॥

ಸ್ಥಲಭೇದಾಃ ಸಮಾಖ್ಯಾತಾಃ ಪ್ರಾಣಲಿಂಗಿಸ್ಥಲಾಶ್ರಯಾಃ ।
ಕಥಯ ಸ್ಥಲಭೇದಂ ಮೇ ಶರಣಸ್ಥಲಸಂಶ್ರಿತಂ ॥೧॥

॥ ಶ್ರೀರೇಣುಕ ಉವಾಚ ॥

ಶರಣಸ್ಥಲಮಾಶ್ರಿತ್ಯ ಸ್ಥಲದ್ವಾದಶಕಂ ಮಯಾ ।
ಉಚ್ಯತೇ ನಾಮ ಸರ್ವೇಷಾಂ ಸ್ಥಲಾನಾಂ ಶೃಣು ತಾಪಸ ॥೨॥

ದೀಕ್ಷಾಪಾದೋದಕಂ ಪೂರ್ವಂ ಶಿಕ್ಷಾಪಾದೋದಕಂ ತತಃ ।
ಜ್ಞಾನಪಾದೋದಕಂ ಚಾಥ ಕ್ರಿಯಾನಿಷ್ಪತ್ತಿಕಂ ತತಃ ॥೩॥

ಭಾವನಿಷ್ಪತ್ತಿಕಂ ಚಾಥ ಜ್ಞಾನನಿಷ್ಪತ್ತಿಕಂ ತತಃ ।
ಪಿಂಡಾಕಾಶಸ್ಥಲಂ ಚಾಥ ಬಿಂದ್ವಾಕಾಶಸ್ಥಲಂ ತತಃ ॥೪॥

ಹತ್ತೊಂಭತ್ತನೆಯ ಪರಿಚ್ಛೇದ

ಶರಣಸ್ಥಲ

ವ್ಯಾಖ್ಯಾನ—ಎಲೈ, ಶ್ರೀರೇಣುಕಾಚಾರ್ಯನೇ! ಪ್ರಾಣಲಿಂಗಿಸ್ಥಲಸಂಬಂಧವಾದ ಭೇದಗಳು ನಿನ್ನಿಂದ ಉಪದೇಶಿಸಲ್ಪಟ್ಟವು; ಇನ್ನು ಶರಣಸ್ಥಲಸಂಬಂಧವಾದ ಭೇದಗಳನ್ನು ಉಪದೇಶಿಸು. ಎಂದು ಅಗಸ್ತ್ಯಮಹರ್ಷಿಯು ಪ್ರಶ್ನಮಾಡಲು—ಅದಕ್ಕೆ ಶ್ರೀರೇಣುಕಾಚಾರ್ಯರು ಶರಣಸ್ಥಲದಲ್ಲಿ—ದೀಕ್ಷಾಪಾದೋದಕಸ್ಥಲ, ಶಿಕ್ಷಾಪಾದೋದಕಸ್ಥಲ, ಜ್ಞಾನಪಾದೋದಕಸ್ಥಲ, ಕ್ರಿಯಾನಿಷ್ಪತ್ತಿಸ್ಥಲ, ಭಾವನಿಷ್ಪತ್ತಿಸ್ಥಲ, ಜ್ಞಾನನಿಷ್ಪತ್ತಿಸ್ಥಲ, ಪಿಂಡಾಕಾಶಸ್ಥಲ, ಬಿಂದ್ವಾಕಾಶಸ್ಥಲ, ಮಹಾಕಾಶಸ್ಥಲ, ಕ್ರಿಯಾಪ್ರಕಾಶಸ್ಥಲ, ಭಾವಪ್ರಕಾಶಸ್ಥಲ, ಜ್ಞಾನಪ್ರಕಾಶಸ್ಥಲಗಳೆಂಬ ಹನ್ನೆರಡು ಸ್ಥಲಗಳಿರು

ಮಹಾಕಾಶಸ್ಥಲಂ ಚಾಥ ಕ್ರಿಯಾಯಾಶ್ಚ ಪ್ರಕಾಶನಂ ।
ಭಾವಪ್ರಕಾಶನಂ ಪಶ್ಚಾತ್ತತೋ ಜ್ಞಾನಪ್ರಕಾಶನಂ ॥
ಸ್ವರೂಪಂ ಪೃಥಗೇತೇಷಾಂ ಕಥಯಾಮಿ ಯಥಾಕ್ರಮಂ ॥೫॥

೩೭ ದೀಕ್ಷಾಪಾದೋದಕಸ್ಥಲಂ

ದೀಕ್ಷಯೋಪಗತಾದ್ವೈತಂ ಯದ್‌ಜ್ಞಾನಂ ಗುರುಶಿಷ್ಯಯೋಃ ।
ಆನಂದಸ್ಯೈಕ್ಯಮೇತೇನ ದೀಕ್ಷಾಪಾದೋದಕಂ ಸ್ಮೃತಂ ॥೬॥

ಪರಮಾನಂದ ಏವೋಕ್ತಃ ಪಾದಶಬ್ದೇನ ನಿರ್ಮಲಃ ।
ಜ್ಞಾನಂ ಚೋದಕಶಬ್ದೇನ ಪಾದೋದಕಮಿತಿಸ್ಮೃತಂ ॥೭॥

ಅಥವಾ ಪಾದಶಬ್ದೇನ ಗುರುರೇವ ನಿಗದ್ಯತೇ ।
ಶಿಷ್ಯಶ್ಚೋದಕಶಬ್ದೇನ ತಯೋರೈಕ್ಯಂ ತು ದೀಕ್ಷಯಾ ॥೮॥

ಪರಸಂವಿತ್ಪ್ರಕಾಶಾತ್ಮಾ ಪರಮಾನಂದಭಾವನಾಂ ।
ಅಧಿಗಮ್ಯ ಮಹಾಯೋಗೀ ನ ಭೇದಂ ಕ್ವಾಪಿ ಪಶ್ಯತಿ ॥೯॥

ವುವೆಂದೂ, ಅವುಗಳ ಲಕ್ಷಣವನ್ನು ಅನುಕ್ರಮವಾಗಿ ಉಪದೇಶಿಸುತ್ತೇನೆ; ಕೇಳೆಂದೂ ಅಪ್ಪಣೆಕೊಡಿಸಿದರು. ॥೧-೨-೩-೪-೫॥

೩೭ ದೀಕ್ಷಾಪಾದೋದಕಸ್ಥಲ

ಚಿತ್ಕ್ರಿಯಾದೀಕ್ಷೆಯಿಂದ ಪ್ರಾಪ್ತವಾದ ಯಾವ ಅದ್ವೈತಜ್ಞಾನವುಂಟೋ, ಅಂತಹ ಜ್ಞಾನದೊಡನೆ ಗುರುಶಿಷ್ಯರ ಆನಂದದ ಐಕ್ಯವೇ ದೀಕ್ಷಾಪಾದೋದಕ ಸ್ಥಲವೆಂದು ಹೇಳಿಸಿಕೊಳ್ಳುವುದು. ॥೬॥ ಪಾದಶಬ್ದದಿಂದ ಮಹಾನಂದವು ಹೇಳಲ್ಪಡುತ್ತದೆ; ಉದಕಶಬ್ದದಿಂದ ಜ್ಞಾನವು ಹೇಳಲ್ಪಡುತ್ತದೆ; ಇವೆರಡರ ಸಂಬಂಧವುಳ್ಳುದೇ ಪಾದೋದಕವೆನಿಸುವುದು. ॥೭॥ ಅಥವಾ ಪಾದಶಬ್ದದಿಂದ ಗುರುವು ಹೇಳಲ್ಪಡುತ್ತಾನೆ; ಉದಕಶಬ್ದದಿಂದ ಶಿಷ್ಯನು ಹೇಳಲ್ಪಡುತ್ತಾನೆ; ಶಿಷ್ಯಮಸ್ತಕಾಘ್ರಾಣನಸ್ವರೂಪದೀಕ್ಷಾವಿಶೇಷದಿಂದ ಗುರುಶಿಷ್ಯರ ಐಕ್ಯವು ಹೇಳಲ್ಪಡುತ್ತದೆ. ॥೮॥ ಬ್ರಹ್ಮಜ್ಞಾನಪ್ರಕಾಶಸ್ವರೂಪನಾದ ಶಿವಯೋಗಿಯು ಪರಮಾನಂದ ಸ್ವರೂಪವನ್ನು ಹೊಂದಿ, ಭೇದವನ್ನು ಎಲ್ಲಿಯೂ ಕಾಣುವುದಿಲ್ಲ. ॥೯॥

ದೇಶಕಾಲಾದ್ಯವಚ್ಛೇದವಿಹೀನಂ ನಿತ್ಯನಿರ್ಮಲಂ ।
ಆನಂದಂ ಪ್ರಾಪ್ಯ ಬೋಧೇನ ನಾನ್ಯತ್ ಕಾಂಕ್ಷತಿ ಸಂಯಮೀ ॥೧೦॥

ಜ್ಞಾನಾಮೃತಮತಿಸ್ವಚ್ಛಂ ಗುರುಕಾರುಣ್ಯಸಂಭವಂ ।
ಆಸ್ವಾದ್ಯ ರಮತೇ ಯೋಗೀ ಸಂಸಾರಾಮಯವರ್ಜಿತಃ ॥೧೧॥

೩೮ ಶಿಕ್ಷಾಪಾದೋದಕಸ್ಥಲಂ

ಗುರುಶಿಷ್ಯಮಯಂ ಜ್ಞಾನಂ ಶಿಕ್ಷಾಮನನಮೀರ್ಯತೇ ।
ತಯೋಃ ಸಮರಸತ್ವಂ ಹಿ ಶಿಕ್ಷಾಪಾದೋದಕಂ ಸ್ಮೃತಂ ॥೧೨॥

ಮಥಿತಾಚ್ಛಾಸ್ತ್ರಜಲಧೇರ್ಯುಕ್ತಿಮಂಥಾನವೈಭವಾತ್ ।
ಗುರುಣಾ ಲಭ್ಯತೇ ಬೋಧಸುಧಾ ಸುಮನಸಾಂ ಗಣೈಃ ॥೧೩॥

ಜ್ಞಾನಚಂದ್ರಸಮುದ್ಭೂತಾಂ ಪರಮಾನಂದಚಂದ್ರಿಕಾಂ ।
ಪಶ್ಯಂತಿ ಪರಮಾಕಾಶೇ ಮುಕ್ತಿರಾತ್ರೌ ಮಹಾಧಿಯಃ ॥೧೪॥

ಶಿವಯೋಗಿಯು ದೇಶಕಾಲಾದಿವಿಚ್ಛಿತ್ತಿಶೂನ್ಯವಾದುದೂ, ನಿತ್ಯನಿರ್ಮಲವಾದುದೂ ಆದ ಬ್ರಹ್ಮಾನಂದವನ್ನುಹೊಂದಿ ಎರಡನೆಯದಾವುದನ್ನೂ ಇಚ್ಛಿಸುವುದಿಲ್ಲ. ಬ್ರಹ್ಮಾನಂದಕ್ಕೆ ಭಿನ್ನವಾದ ಎರಡನೆಯ ವಸ್ತುವಾವುದೂ ಇಲ್ಲದಿರುವುದರಿಂದ, ಶಿವಯೋಗಿಯು ಆ ಬ್ರಹ್ಮಾನಂದವನ್ನೇ ಅನುಭವಿಸುವನೆಂದು ಭಾವವು. ॥೧೦॥ ಭವರೋಗದೂರನಾದ ಶಿವಯೋಗಿಯು ಗುರುಕೃಪಾಪ್ರಾಪ್ತವೂ, ಅತ್ಯಂತನಿರ್ಮಲವೂ ಆದ ಜ್ಞಾನಾಮೃತವನ್ನು ಸೇವಿಸಿ, ಸ್ವಸ್ವರೂಪದಲ್ಲಿಯೇ ಕ್ರೀಡಿಸುತ್ತಿರುವನು. ॥೧೧॥

೩೮ ಶಿಕ್ಷಾಪಾದೋದಕಸ್ಥಲ

ಗುರುಶಿಷ್ಯಸ್ವರೂಪೈಕ್ಯಜ್ಞಾನವು ಶಿಕ್ಷಾಜ್ಞಾನವೆಂದು ಹೇಳಿಸಿಕೊಳ್ಳುವುದು. ಆ ಗುರುಶಿಷ್ಯರ ಸಾಮರಸ್ಯವೇ ಶಿಕ್ಷಾಪಾದೋದಕವೆನಿಸುವುದು. ॥೧೨॥ ಶ್ರೀಗುರುವಿನಿಂದ ಯುಕ್ತಿರೂಪಮಂಥನದಂಡಸಾಮರ್ಥ್ಯದಿಂದ ಕಡೆಯಲ್ಪಟ್ಟ ವೀರಶೈವಶಾಸ್ತ್ರರೂಪಸಮುದ್ರದಿಂದ ಪ್ರಾಪ್ತವಾದ ಜ್ಞಾನಾಮೃತವನ್ನು, ಶುದ್ಧಚಿತ್ತರಾದ ಶಿವಯೋಗಿಗಳ ಸಮುದಾಯವು ಮಾತ್ರ ಹೊಂದುವುದು. ॥೧೩॥ ಮಹಾಜ್ಞಾನಿಗಳಾದ ಶಿವಯೋಗಿಗಳು ಪರಮುಕ್ತಿರೂಪರಾತ್ರಿಯಿಂದೊಡಗೂಡಿದ ಹೃದಯಾಕಾಶದಲ್ಲಿ, ಜ್ಞಾನವೆಂಬ ಚಂದ್ರನಿಂದ ಉತ್ಪನ್ನವಾದ ಪರಮಾನಂದವೆಂಬ ಬೆಳದಿಂಗಳನ್ನು ನೋಡುವರು. ॥೧೪॥

ದೃಷ್ಟೇ ತಸ್ಮಿನ್ ಪರಾನಂದೇ ದೇಶಕಾಲಾದಿವರ್ಜಿತೇ ।
ದ್ರಷ್ಟವ್ಯಂ ವಿದ್ಯತೇ ನಾನ್ಯಚ್ಛ್ರೋತವ್ಯಂ ಜ್ಞೇಯಮೇವ ವಾ ॥೧೫॥

ಆತ್ಮಾನಂದೇನ ತೃಪ್ತಸ್ಯ ಕಾ ಸ್ಪೃಹಾ ವಿಷಯೇ ಸುಖೇ ।
ಗಂಗಾಜಲೇನ ತೃಪ್ತಸ್ಯ ಕೂಪತೋಯೇ ಕುತೋ ರತಿಃ ॥೧೬॥

ಯಸ್ಮಿನ್ನಪ್ರಾಪ್ತಕಲ್ಲೋಲೇ ಸುಖಸಿಂಧೌ ನಿಮಜ್ಜತಿ ।
ಸಾಮರಸ್ಯಾನ್ಮಹಾಯೋಗೀ ತಸ್ಯ ಸೀಮಾ ಕುತೋ ಭವೇತ್ ॥೧೭॥

ಗುರುಪ್ರಸಾದಚಂದ್ರೇಣ ನಿಷ್ಕಲಂಕೇನ ಚಾರುಣಾ ।
ಯನ್ಮನಃಕುಮುದಂ ನಿತ್ಯಂ ಬೋಧಿತಂ ತಸ್ಯ ಕೋ ಭ್ರಮಃ ॥೧೮॥

೩೯ ಜ್ಞಾನಪಾದೋದಕಸ್ಥಲಂ

ಸದ್ವೈಕ್ಯಸಂಪದಾನಂದೋ ಯೋಽಸೌ ಜ್ಞಾನಗುರುರ್ಮತಃ ।
ತತ್ಸಾಮರಸ್ಯಂ ಶಿಷ್ಯಸ್ಯ ಜ್ಞಾನಪಾದೋದಕಂ ವಿದುಃ ॥೧೯॥

ದೇಶಕಾಲಾದಿಶೂನ್ಯವಾದ ಆ ಪರಮಾನಂದವು ಕಾಣಲು, ಎರಡನೆಯ ದಾವುದೂ ನೋಡತಕ್ಕುದಾಗಲಿ, ಕೇಳತಕ್ಕುದಾಗಲಿ, ತಿಳಿಯತಕ್ಕುದಾಗಲಿ ಇರುವುದಿಲ್ಲ. ॥೧೫॥ ನಿತ್ಯವಾದ ಆತ್ಮಾನಂದದಿಂದ ತೃಪ್ತನಾದವನಿಗೆ ಕ್ಷಣಿಕವಾದ ವಿಷಯ ಸುಖದಲ್ಲಿ ಯಾವ ಇಚ್ಛೆಯುಂಟಾಗುವುದು ? ಯಾವ ಇಚ್ಛೆಯೂ ಉಂಟಾಗುವುದಿಲ್ಲ ವೆಂದು ಭಾವವು. ಗಂಗಾಜಲದಿಂದ ತೃಪ್ತನಾದವನಿಗೆ ಬಾವಿಯ ನೀರಿನಲ್ಲಿ ಪ್ರೀತಿ ಯೆಲ್ಲಿಯದು ? ॥೧೬॥ ಯಾವ ಶಿವಯೋಗಿಯು ತರಂಗಶೂನ್ಯವಾದ ಯಾವ ಆನಂದ ಸಮುದ್ರದಲ್ಲಿ ಸಮರಸಭಾವದಿಂದ ಮುಳುಗುತ್ತಾನೆಯೋ, ಅವನಿಗೆ ಆನಂದಸೀಮೆಯು ಎಲ್ಲಿರುವುದು ? ಅವನ ಆನಂದಕ್ಕೆ ಪಾರವೇ ಇರುವುದಿಲ್ಲವೆಂದು ಭಾವವು. ॥೧೭॥ ಕಲಂಕರಹಿತವೂ, ಮನೋಹರವೂ ಆದ ಗುರುಪ್ರಸಾದವೆಂಬ ಚಂದ್ರನಿಂದ, ಯಾವನ ಮನಸ್ಸೆಂಬ ಕನ್ನೈದಿಲೆಯು ಯಾವಾಗಲೂ ವಿಕಸಿತವಾಗಿರುವುದೋ, ಅವನಿಗೆ ಸಾಂಸಾರಿಕಭ್ರಾಂತಿಯೆಲ್ಲಿಯದು ? ॥೧೮॥

೩೯ ಜ್ಞಾನಪಾದೋದಕಸ್ಥಲ

ಯಾವನು ಸದ್ರೂಪಪರಬ್ರಹ್ಮಸಾಮರಸ್ಯಸಂಪತ್ತಿಯಿಂದುತ್ಪನ್ನವಾದ ಆನಂದ ವುಳ್ಳವನೋ, ಅವನೇ ಜ್ಞಾನಗುರುವೆಂದು ಹೇಳಿಸಿಕೊಳ್ಳುವನು. ಅಂತಹ ಜ್ಞಾನ ಗುರುವಿನೊಡನೆ ಶಿಷ್ಯನ ಸಾಮರಸ್ಯವೇ ಜ್ಞಾನಪಾದೋದಕವೆಂದು ಜ್ಞಾನಿಗಳು ತಿಳಿಯುವರು. ॥೧೯॥

ಅವಿದ್ಯಾರಾಹುನಿರ್ಮುಕ್ತೋ ಜೀವಚಂದ್ರಃ ಸುನಿರ್ಮಲಃ ।
ಪ್ರಕಾಶತೇ ಪರಾಕಾಶೇ ಪರಾನಂದಮಹಾದ್ಯುತಿಃ ॥೨೦॥

ಅಜ್ಞಾನಮೇಘನಿರ್ಮುಕ್ತಃ ಪೂರ್ಣೋ ಜೀವಸುಧಾಕರಃ ।
ಆನಂದಜಲಧೇರ್ವೃದ್ಧಿಮನುಪಶ್ಯನ್ ವಿಭಾಸತೇ ॥೨೧॥

ಜ್ಞಾನಚಂದ್ರೋದಯೇ ಜಾತೇ ಧ್ವಸ್ತಮೋಹತಮೋಭರಾಃ ।
ಪಶ್ಯಂತಿ ಪರಮಾಂ ಕಾಷ್ಠಾಂ ಯೋಗಿನಃ ಸುಖರೂಪಿಣೀಂ ॥೨೨॥

ಮಾಯಾರಜನ್ಯಾ ವಿರಮೇ ಬೋಧಸೂರ್ಯೇ ಪ್ರಕಾಶಿತೇ ।
ನಿರಸ್ತಸರ್ವವ್ಯಾಪಾರಶ್ಚಿತ್ರಂ ಸ್ವಪಿತಿ ಸಂಯಮೀ ॥೨೩॥

ಅನಾದ್ಯವಿದ್ಯಾವಿಚ್ಛಿತ್ತಿವೇಲಾಯಾಂ ಪರಯೋಗಿನಃ ।
ಪ್ರಕಾಶತೇ ಪರಾನಂದಃ ಪ್ರಪಂಚೇನ ವಿನಾ ಕೃತಃ ॥೨೪॥

ಅಜ್ಞಾನವೆಂಬ ರಾಹುವಿನಿಂದ ಬಿಡಲ್ಪಟ್ಟವನೂ, ಅತ್ಯಂತನಿರ್ಮಲನೂ, ಪರಮಾನಂದರೂಪಮಹಾಪ್ರಕಾಶವುಳ್ಳವನೂ ಆದ ಜೀವನೆಂಬ ಚಂದ್ರನು, ಸರ್ವೋತ್ಕೃಷ್ಟವಾದ ಹೃದಯಾಕಾಶದಲ್ಲಿ ಬೆಳಗುತ್ತಿರುವನು. ॥೨೦॥ ಅಜ್ಞಾನವೆಂಬ ಮೇಘಾವರಣದಿಂದ ಬಿಡಲ್ಪಟ್ಟವನಾದ ಜೀವನೆಂಬ ಪೂರ್ಣಿಮಾಚಂದ್ರನು, ಆನಂದ ವೆಂಬ ಸಮುದ್ರದ ವೃದ್ಧಿಯನ್ನು ನೋಡುವವನಾಗಿ ಪ್ರಕಾಶಿಸುತ್ತಿರುವನು. ॥೨೧॥ ಜ್ಞಾನರೂಪಚಂದ್ರನ ಉದಯವಾಗಲು, ಅಜ್ಞಾನಾಂಧಕಾರದಿಂದ ದೂರರಾದ ಶಿವಯೋಗಿಗಳು, ಪರಮಾನಂದಸ್ವರೂಪವಾದ ಸ್ವಸ್ವರೂಪಸ್ಥಿತಿಯನ್ನು ಕಾಣುವರು. ॥೨೨॥ ಮಾಯಾರೂಪರಾತ್ರಿಯ ಅಂತ್ಯಸಮಯದಲ್ಲಿ ಜ್ಞಾನರೂಪಸೂರ್ಯನು ಪ್ರಕಾಶಿಸಲು, ಯೋಗಿಯು ಸಮಸ್ತವ್ಯಾಪಾರಶೂನ್ಯನಾಗಿ ನಿದ್ರಿಸುವನು. ಇದು ವಿಚಿತ್ರವೇ ಸರಿ! ಏಕೆಂದರೆ–ಸರ್ವಪ್ರಾಣಿಗಳೂ ರಾತ್ರಿಯಲ್ಲಿ ಮಲಗಿ, ಸೂರ್ಯೋದಯ ವಾಗುತ್ತಲೇ ಎದ್ದು, ತಮ್ಮ ತಮ್ಮ ವ್ಯವಹಾರಗಳಲ್ಲಿ ನಿರತವಾಗುತ್ತಿರುವುದು ಸರ್ವಾನುಭವಸಿದ್ಧವಾಗಿದೆ. ಆದರೆ ಯೋಗಿಯ ಆಚರಣೆಯು ಇದಕ್ಕೆ ವಿರುದ್ಧವಾಗಿದ್ದು, ಅವನು ಜ್ಞಾನಸೂರ್ಯನು ಉದಯವಾಗುತ್ತಲೇ ಸರ್ವವ್ಯಾಪಾರದಿಂದಲೂ ದೂರ ನಾಗಿ ನಿದ್ರಿಸುವನು. ಇದೇ ವೈಚಿತ್ರ್ಯಕ್ಕೆ ಕಾರಣವಾಗಿದೆ. ಇದೇ ಅಭಿಪ್ರಾಯವನ್ನು ಗೀತೆಯು—“ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ । ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ॥” ಎಂಬೀ ಶ್ಲೋಕದಿಂದ ಸಮರ್ಥಿಸುತ್ತಿರುವುದು. ॥೨೩॥ ಪ್ರಪಂಚದಿಂದ ಭಿನ್ನವಾಗಿರುವ ನಿರುಪಾಧಿಕಪರಮಾನಂದವು ಶಿವಯೋಗಿಗೆ ಅನಾದಿಯಾದ ಅಜ್ಞಾನದ ನಾಶಸಮಯದಲ್ಲಿ ಪ್ರಕಾಶಿಸುವುದು. ॥೨೪॥

ನಿತ್ಯಾನಂದೇ ನಿಜಾಕಾರೇ ನಿರ್ಮಲೇ ಪರತೇಜಸಿ ।
ವಿಲೀನಚೇತಸಾಂ ಪುಂಸಾಂ ಕುತೋ ವಿಶ್ವವಿಕಲ್ಪನಾ ॥೨೫॥

ಕುತೋ ಬ್ರಹ್ಮಾ ಕುತೋ ವಿಷ್ಣುಃ ಕುತೋ ರುದ್ರಃ ಕುತೋ ರವಿಃ ।
ಸಾಕ್ಷಾತ್ಕೃತಪರಾನಂದಜ್ಯೋತಿಷಃ ಸಾಮ್ಯಕಲ್ಪನೇ ॥೨೬॥

ಅಪರೋಕ್ಷಪರಾನಂದವಿಲಾಸಸ್ಯ ಮಹಾತ್ಮನಃ ।
ಬ್ರಹ್ಮವಿಷ್ಣ್ವಾದಯೋ ದೇವಾ ವಿಶೇಷಾಃ ಸುಖಬಿಂದವಃ ॥೨೭॥

ಯನ್ಮಾತ್ರಾಸಹಿತಂ ಲೋಕೇ ವಾಂಛಂತಿ ವಿಷಯಂ ನರಾಃ ।
ತಮಪ್ರಮೇಯಮಾನಂದಂ ಪರಮಂ ಕೋ ನ ವಾಂಛತಿ ॥೨೮॥

೪೦ ಕ್ರಿಯಾನಿಷ್ಪತ್ತಿಸ್ಥಲಂ

ಜ್ಞಾನಿನೋ ಯಾನಿ ಕರ್ಮಾಣಿ ತಾನಿ ನೋ ಜನ್ಮಹೇತವಃ ।
ಅಗ್ನಿದಗ್ಧಾನಿ ಬೀಜಾನಿ ಯಥಾ ನಾಂಕುರಕಾರಣಂ ॥೨೯॥

ನಿತ್ಯಾನಂದರೂಪವಾದುದೂ, ನಿಜಸ್ವರೂಪವಾದುದೂ, ನಿರ್ಮಲವಾದುದೂ ಆದ ಜ್ಞಾನತೇಜಸ್ಸಿನಲ್ಲಿ ಮನಸ್ಸನ್ನು ಲಯಗೊಳಿಸಿದ ಶಿವಯೋಗಿಗಳಿಗೆ, ಸ್ಥೂಲ ಪ್ರಪಂಚಕಲ್ಪನೆಯೆಲ್ಲಿಯದು? ॥೨೫॥ ಬ್ರಹ್ಮಾನಂದಜ್ಯೋತಿಯನ್ನು ಸಾಕ್ಷಾತ್ಕರಿಸಿಕೊಂಡ ಶಿವಯೋಗಿಗೆ ಸಾಮ್ಯಕಲ್ಪನೆಯಲ್ಲಿ ಚತುರ್ಮುಖಬ್ರಹ್ಮನು ಎಲ್ಲಿಯವನು? ವಿಷ್ಣುವು ಎಲ್ಲಿಯವನು? ರುದ್ರನು ಎಲ್ಲಿಯವನು? ಸೂರ್ಯನು ಎಲ್ಲಿಯವನು? ಇವರಾರೂ ಶಿವಯೋಗಿಗೆ ಸಮಾನರಾಗುವುದಿಲ್ಲವೆಂದು ಭಾವವು. ॥೨೬॥ ಪ್ರತ್ಯಕ್ಷವಾಗಿ ಬ್ರಹ್ಮಾನಂದದಲ್ಲಿ ಕ್ರೀಡಿಸುತ್ತಿರುವ ಶಿವಯೋಗಿಗೆ, ಬ್ರಹ್ಮವಿಷ್ಣು ಮೊದಲಾದ ದೇವತೆಗಳು ಅತ್ಯಲ್ಪವಾದ ಸುಖವಿಶೇಷಗಳಾಗಿರುವುವು. ಶಿವಯೋಗಿಯ ದೃಷ್ಟಿಗೆ ಬ್ರಹ್ಮವಿಷ್ಣ್ವಾದಿದೇವತೆಗಳು ಅತ್ಯಲ್ಪಸುಖದಾಯಕರಾಗಿ ತೋರುವರೆಂದು ಭಾವವು. ॥೨೭॥ ಲೋಕದಲ್ಲಿ ಮನುಷ್ಯರು ಅತ್ಯಲ್ಪಪರಿಮಾಣವುಳ್ಳ ವಿಷಯಸುಖವನ್ನು ಇಚ್ಛಿಸುವರಷ್ಟೆ! ಆದರೆ ಪರಿಮಾಣಾತೀತವಾದ ಆ ಪರಮಾನಂದವನ್ನು ಯಾವನು ಇಚ್ಛಿಸುವುದಿಲ್ಲ? ಸರ್ವರೂ ಆ ಪರಮಾನಂದವನ್ನು ಇಚ್ಛಿಸುವರೆಂದು ಭಾವವು. ॥೨೮॥

೪೦ ಕ್ರಿಯಾನಿಷ್ಪತ್ತಿಸ್ಥಲ

ಬೆಂಕಿಯಿಂದ ಸುಡಲ್ಪಟ್ಟ ಬೀಜಗಳು ಅಂಕುರಕ್ಕೆ ಹೇಗೆ ಕಾರಣವಾಗುವುದಿಲ್ಲವೋ, ಹಾಗೆಯೇ ಶಿವಜ್ಞಾನಿಯ ಯಾವ ಕರ್ಮಗಳುಂಟೋ ಆ ಕರ್ಮಗಳು ಅವನ ಪುನರ್ಜನ್ಮಕ್ಕೆ ಕಾರಣವಾಗುವುದಿಲ್ಲವು. ॥೨೯॥

ಕರ್ಮಣಾ ಕಿಂ ಕೃತೇನಾಪಿ ಜ್ಞಾನಿನೋ ನಿರಹಂಕೃತೇಃ ।
ವಿಕ್ರಿಯಾ ಪ್ರತಿಬಿಂಬಸ್ಥಾ ಕಿಂ ಕರೋತಿ ಹಿಮದ್ಯುತೇಃ ॥೩೦॥

ಜ್ಞಾನೀ ಕರ್ಮನಿರೂಢೋಽಪಿ ಲಿಪ್ಯತೇ ನ ಕ್ರಿಯಾಫಲೈಃ ।
ಘೃತಾದಿನಾ ಯಥಾ ಜಿಹ್ವಾ ಭೋಕ್ತ್ರೀ ಚಾಪಿ ನ ಲಿಪ್ಯತೇ ॥೩೧॥

ನಿರಸ್ತೋಪಾಧಿಸಂಬಂಧೇ ಜೀವೇ ಯಾ ಯಾ ಕ್ರಿಯಾಸ್ಥಿತಿಃ ।
ಸಾ ಸಾ ಪ್ರತೀತಿಮಾತ್ರೇಣ ನಿಷ್ಫಲಾ ತತ್ರ ಲೀಯತೇ ॥೩೨॥

ಗಚ್ಛಂಸ್ತಿಷ್ಠನ್ ಸ್ವಪನ್ವಾಪಿ ನ ನಿಷ್ಕರ್ಮಾಸ್ತಿ ಕಶ್ಚನ ।
ಸ್ವಭಾವೋ ದೇಹಿನಾಂ ಕರ್ಮ ಜ್ಞಾನಿನಾಂ ತತ್ತು ನಿಷ್ಫಲಂ ॥೩೩॥

ಪರಿಪೂರ್ಣಮಹಾನಂದಭಾವಿನಃ ಶುದ್ಧಚೇತಸಃ ।
ನ ಭವೇತ್ ಕರ್ಮಕಾರ್ಪಣ್ಯಂ ನಾನಾಭೋಗಫಲಪ್ರದಂ ॥೩೪॥

ಮೂಲಾಹಂಕಾರಶೂನ್ಯನಾದ ಶಿವಜ್ಞಾನಿಯು ಕರ್ಮವನ್ನು ಮಾಡಿದರೂ ಏನು ಪ್ರಯೋಜನವು? ಚಂದ್ರನ ಪ್ರತಿಬಿಂಬದಲ್ಲಿದ್ದ ವಿಕಾರವು ಚಂದ್ರನನ್ನು ಏನು ಮಾಡುವುದು? ಜಲದಲ್ಲಿರುವ ಚಂದ್ರನ ಪ್ರತಿಬಿಂಬಕ್ಕೆ ಜಲಸಂಬಂಧದಿಂದ ಯಾವುದಾದರೂ ವಿಕಾರವು ಪ್ರಾಪ್ತವಾದರೆ, ಆ ವಿಕಾರವು ಚಂದ್ರನಿಗೆ ಹೇಗೆ ಸಂಬಂಧಿಸುವುದಿಲ್ಲವೋ, ಹಾಗೆಯೇ ಶಿವಜ್ಞಾನಿಯು ಯಾವ ಕರ್ಮವನ್ನು ಮಾಡಿದರೂ ಆ ಕರ್ಮಫಲವು ಅವನಿಗೆ ಸಂಬಂಧಿಸುವುದಿಲ್ಲವೆಂದು ಭಾವವು. ॥೩೦॥ ನಾಲಗೆಯು ತುಪ್ಪ ಮೊದಲಾದ ಪದಾರ್ಥಗಳನ್ನು ಸ್ವೀಕರಿಸಿದರೂ ಅವುಗಳಿಂದ ಅದು ಹೇಗೆ ಲಿಪ್ತವಾಗುವುದಿಲ್ಲವೋ, ಹಾಗೆಯೇ ಶಿವಜ್ಞಾನಿಯು ಕರ್ಮನಿರತನಾದರೂ ಆ ಕರ್ಮಫಲಗಳಿಂದ ಅವನು ಲಿಪ್ತನಾಗುವುದಿಲ್ಲ. ॥೩೧॥ ಉಪಾಧಿಸಂಬಂಧದಿಂದ ದೂರನಾದ ಜೀವನ್ಮುಕ್ತನಲ್ಲಿ ಯಾವ ಯಾವ ಕ್ರಿಯೆಯುಂಟೋ, ಆ ಆ ಕ್ರಿಯೆಯು ದಗ್ಧರಜ್ಜುನ್ಯಾಯಾನುಸಾರವಾಗಿ ತೋರಿಕೆಗೆ ಮಾತ್ರ ಇದ್ದುಕೊಂಡು, ಫಲರಹಿತವಾಗಿ ಅವನಲ್ಲಿಯೇ ಅಡಗುವುದು. ॥೩೨॥ ಮನುಷ್ಯನು—ಹೋಗುವುದು, ಕುಳಿತುಕೊಳ್ಳುವುದು ಅಥವಾ ಮಲಗುವುದು ಇತ್ಯಾದಿಕರ್ಮಗಳಲ್ಲಿ ಯಾವುದಾದರೊಂದು ಕರ್ಮದಿಂದ ಕೂಡಿಕೊಂಡವನಾಗಿರುವನು. ಯಾವನೂ ಕರ್ಮವಿಲ್ಲದೆ ಇರುವುದಿಲ್ಲ. ಕರ್ಮವು ಮನುಷ್ಯರಿಗೆ ಸ್ವಾಭಾವಿಕವಾದುದಾಗಿದೆ. ಆದರೆ ಜ್ಞಾನಿಗಳಿಗೆ ಆ ಕರ್ಮವು ನಿಷ್ಫಲವಾಗಿರುವುದು. ॥೩೩॥ ಪರಿಪೂರ್ಣವಾದ ಬ್ರಹ್ಮಾನಂದವನ್ನು ಅನುಭವಿಸುವವನೂ, ನಿರ್ಮಲಾಂತಃಕರಣನೂ ಆದ ಶಿವಯೋಗಿಗೆ ಪುಣ್ಯಪಾಪರೂಪನಾನಾವಿಧಭೋಗಫಲವನ್ನು ಕೊಡತಕ್ಕ ಕರ್ಮಬಾಧೆಯು ಉಂಟಾಗಲಾರದು. ॥೩೪॥

೪೧ ಭಾವನಿಷ್ಪತ್ತಿಸ್ಥಲಂ

ಭಾವೇನ ನಾಸ್ತಿ ಸಂಬಂಧಃ ಕೇವಲಜ್ಞಾನಯೋಗಿನಃ ।
ತಥಾಪಿ ಭಾವಂ ಕುರ್ವೀತ ಶಿವೇ ಸಂಸಾರಮೋಚಕೇ ॥೩೫॥

ಪರಿಪೂರ್ಣಪ್ರಬೋಧೋಽಪಿ ಭಾವಂ ಶಂಭೌ ನ ವರ್ಜಯೇತ್ ।
ಭಾವೋ ಹಿ ನಿಹಿತಸ್ತಸ್ಮಿನ್ ಭವಸಾಗರತಾರಕಃ ॥೩೬॥

ನಿವರ್ತ್ಯ ಜನ್ಮಜಂ ದುಃಖಂ ಭಾವಃ ಶೈವೋ ನಿವರ್ತತೇ ।
ಯಥಾ ಕಾಷ್ಠಾದಿಕಂ ದಗ್ಧ್ವಾ ಸ್ವಯಂ ಶಾಮ್ಯತಿ ಪಾವಕಃ ॥೩೭॥

ಪ್ರಕಾಶಿತೇ ಶಿವಾನಂದೇ ತದ್ಭಾವೈಃ ಕಿಂ ಪ್ರಯೋಜನಂ ।
ಸಾಧ್ಯೇ ಸಿದ್ಧೇಽಚಿರೇಣಾಪಿ ಸಾಧನೈಃ ಕಿಂ ಪ್ರಯೋಜನಂ ॥೩೮॥

ಏಕೀಕೃತೇ ಶಿವೇ ಭಾವೇ ಜ್ಞಾನೇನ ಸಹ ಸಂಯಮೀ ।
ವಿಸ್ಮೃತಾತ್ಮಸಮಾವೇಶಃ ಶಿವಭಾವೇ ವಿಭಾಸತೇ ॥೩೯॥

ನ ಭಾವೇನ ವಿನಾ ಜ್ಞಾನಂ ನ ಭಾವೋ ಜ್ಞಾನಮಂತರಾ ।
ಮೋಕ್ಷಾಯ ಕಾರಣಂ ಪ್ರೋಕ್ತಂ ತಸ್ಮಾದುಭಯಮಾಶ್ರಯೇತ್॥೪೦॥

---

೪೧ ಭಾವನಿಷ್ಪತ್ತಿಸ್ಥಲ

ಶಿವಜ್ಞಾನಿಯಾದ ಶಿವಯೋಗಿಗೆ ಭಾವದಿಂದ ಸಂಬಂಧವಿರುವುದಿಲ್ಲ. ಆದರೂ ಅವನು ಸಂಸಾರಮೋಚಕನಾದ ಶಿವನಲ್ಲಿ ಭಾವವನ್ನಿಡಬೇಕು. ॥೩೫॥ ಶಿವಯೋಗಿಯು ಪರಿಪೂರ್ಣಜ್ಞಾನವುಳ್ಳವನಾದರೂ ಶಿವನಲ್ಲಿ ಭಾವವನ್ನಿಡಬೇಕು. ಅವನಲ್ಲಿಡಲ್ಪಟ್ಟ ಭಾವವು ಸಂಸಾರಸಾಗರತಾರಕವಾಗಿರುವುದು. ॥೩೬॥ ಅಗ್ನಿಯು ಕಟ್ಟಿಗೆ ಮೊದಲಾದವುಗಳನ್ನು ಸುಟ್ಟು ತಾನೇ ಹೇಗೆ ಶಾಂತವಾಗುವುದೋ, ಹಾಗೆಯೇ ಶಿವಸಂಬಂಧವಾದ ಭಾವವು ಭವರೋಗದುಃಖವನ್ನು ನಿವೃತ್ತಿಗೊಳಿಸಿ, ತಾನೂ ನಿವೃತ್ತವಾಗುವುದು. ॥೩೭॥ ಶಿವಾನಂದವು ಪ್ರಕಾಶಿತವಾಗಲು, ಆ ಶಿವಭಾವಗಳಿಂದ ಏನು ಪ್ರಯೋಜನವು? ಸಾಧ್ಯವು ಶೀಘ್ರವಾಗಿ ಸಿದ್ಧವಾಗಲು, ಸಾಧನಗಳಿಂದ ಏನು ಪ್ರಯೋಜನವು? ॥೩೮॥ ಭಾವವು ಜ್ಞಾನದೊಡನೆ ಶಿವನಲ್ಲಿ ಸಮರಸವಾಗಲು, ಆತ್ಮಸಮಾವೇಶವನ್ನು ಮರೆತ ಶಿವಯೋಗಿಯು ಶಿವೋಽಹಂಭಾವನೆಯಲ್ಲಿ ಪ್ರಕಾಶಿಸುವನು. ॥೩೯॥ ಭಾವವನ್ನು ಬಿಟ್ಟು ಜ್ಞಾನವಿರುವುದಿಲ್ಲ; ಜ್ಞಾನವನ್ನು ಬಿಟ್ಟು ಭಾವವಿರುವುದಿಲ್ಲ. ಈ ಉಭಯವೂ ಮೋಕ್ಷಕ್ಕೆ ಕಾರಣವಾಗಿರುವುದರಿಂದ, ಶಿವಯೋಗಿಯು ಇವೆರಡನ್ನೂ ಆಶ್ರಯಿಸಬೇಕು. ॥೪೦॥

೪೨ ಜ್ಞಾನನಿಷ್ಪತ್ತಿಸ್ಥಲಂ

ಪರಿಪೂರ್ಣೇ ಮಹಾನಂದೇ ಪರಮಾಕಾಶಲಕ್ಷಣೇ ।
ಶಿವೇ ವಿಲೀನಚಿತ್ತಸ್ಯ ಕುತೋ ಜ್ಞೇಯಾಂತರೇ ಕಥಾ ॥೪೧॥

ಜ್ಞಾತಾ ಚಾಹಂ ಜ್ಞೇಯಮಿದಮಿತಿ ವ್ಯವಹೃತಿಃ ಕುತಃ ।
ಅಭೇದಬ್ರಹ್ಮಸಾರಸ್ಯೇ ನಿರಸ್ತಾಖಿಲವಸ್ತುನಿ ॥೪೨॥

೪೩ ಪಿಂಡಾಕಾಶಸ್ಥಲಂ

ಯಥಾ ಪಿಂಡಸ್ಥ ಆಕಾಶಸ್ತಥಾಽಽತ್ಮಾ ಪೂರ್ಣ ಉಚ್ಯತೇ ।
ಏತದರ್ಥವಿವೇಕೋ ಯಃ ಪಿಂಡಾಕಾಶಸ್ಥಲಂ ವಿದುಃ ॥೪೪॥

---

೪೨ ಜ್ಞಾನನಿಷ್ಪತ್ತಿಸ್ಥಲ

ಪರಿಪೂರ್ಣನೂ, ಮಹಾನಂದಸ್ವರೂಪನೂ, ಪರಮಾಕಾಶಸ್ವರೂಪನೂ ಆದ ಶಿವನಲ್ಲಿ ಚಿತ್ತವನ್ನು ಲಯಗೊಳಿಸಿದ ಶಿವಯೋಗಿಗೆ, ಇಂಥದನ್ನು ತಿಳಿಯಬೇಕೆನ್ನುವುದರಲ್ಲಿ ಬುದ್ಧಿಯೆಲ್ಲಿಯದು? ಅವನು ಸರ್ವಜ್ಞನೆನಿಸಿಕೊಂಡಿರುವ ಶಿವನಂತೆ ಸಾಕ್ಷಾತ್ ಸರ್ವಜ್ಞಮೂರ್ತಿಯಾಗಿ, ಸರ್ವವನ್ನೂ ತಿಳಿದುಕೊಂಡವನಾದುದರಿಂದ, ಅವನಿಗೆ ತಿಳಿಯತಕ್ಕ ವಿಷಯವಾವುದೂ ಇರುವುದಿಲ್ಲವೆಂದು ಭಾವವು. ॥೪೧॥ ಅದ್ವಿತೀಯವಾದ ಪರಬ್ರಹ್ಮದಲ್ಲಿ ಸಾಮರಸ್ಯವುಳ್ಳವನೂ, ಸಮಸ್ತಪ್ರಾಪಂಚಿಕಭೇದವನ್ನು ದೂರೀಕರಿಸಿದವನೂ ಆದ ಶಿವಯೋಗಿಯಲ್ಲಿ "ನಾನು ಜ್ಞಾತೃವು, ಇದು ಜ್ಞೇಯವು" ಎಂಬ ಭೇದವ್ಯವಹಾರವೆಲ್ಲಿಂದ ಬರುವುದು? ಪರಶಿವಬ್ರಹ್ಮದಲ್ಲಿ ಸಮರಸಭಾವವನ್ನು ಹೊಂದಿದ ಶಿವಯೋಗಿಯಲ್ಲಿ, ಜ್ಞಾತೃಜ್ಞೇಯರೂಪವಾದ ಭೇದಜ್ಞಾನವ್ಯವಹಾರವು ಸಂಪೂರ್ಣವಾಗಿ ನಷ್ಟವಾಗುವುದೆಂದು ಭಾವವು ॥೪೨॥

೪೩ ಪಿಂಡಾಕಾಶಸ್ಥಲ

ಶರೀರದಲ್ಲಿರುವ ಆಕಾಶವು ಶರೀರೋಪಾಧಿವಶದಿಂದ ಅಪೂರ್ಣವಾಗಿ ಕಂಡುಬಂದರೂ, ಉಪಾಧಿದೂರವಾದ ಮೇಲೆ ತನ್ನ ನೈಜವಾದ ಪೂರ್ಣತೆಯನ್ನು ಪಡೆಯುವಂತೆ, ಶರೀರದಲ್ಲಿರುವ ಆತ್ಮನಾದರೂ ಪೂರ್ಣನಾಗಿದ್ದುಕೊಂಡು ಪೂರ್ಣನೆಂದು ಹೇಳಿಸಿಕೊಳ್ಳುವನು. ಈ ಅರ್ಥದ ಜ್ಞಾನವಾವುದುಂಟೋ, ಅದನ್ನು ಜ್ಞಾನಿಗಳು ಪಿಂಡಾಕಾಶಸ್ಥಲವೆಂದು ತಿಳಿಯುವರು. ॥೪೪॥

ಘಟೋಪಾಧಿರ್ಯಥಾಽಽಕಾಶಃ ಪರಿಪೂರ್ಣಃ ಸ್ವರೂಪತಃ ।
ತಥಾ ಪಿಂಡಸ್ಥಿತೋ ಹ್ಯಾತ್ಮಾ ಪರಿಪೂರ್ಣಃ ಪ್ರಕಾಶತೇ ॥೪೫॥
ಅಂತಃಸ್ಥಿತಂ ಪರಾಕಾಶಂ ಶಿವಮದ್ವೈತಲಕ್ಷಣಂ ।
ಭಾವಯೇದ್ಯಃ ಸುಮನಸಾ ಪಿಂಡಾಕಾಶಃ ಸ ಉಚ್ಯತೇ ॥೪೬॥
ಶಿವಾಗಾರಮಿದಂ ಪ್ರೋಕ್ತಂ ಶರೀರಂ ಬೋಧದೀಪಿತಂ ।
ಷಟ್ತ್ರಿಂಶತ್ತತ್ತ್ವಘಟಿತಂ ಸುಮನಃಪದ್ಮಪೀಠಕಂ ॥೪೭॥
ಪರಾಕಾಶಸ್ವರೂಪೋ ಹಿ ಪ್ರಕಾಶಃ ಪರಮೇಶ್ವರಃ ।
ಹೃದಾಕಾಶಗುಹಾಲೀನೋ ದೃಶ್ಯತೇಽಂತಃಶರೀರಿಣಾಂ ॥೪೮॥
ಏತಚ್ಛಿವಪುರಂ ಪ್ರೋಕ್ತಂ ಸಪ್ತಧಾತುಸಮಾವೃತಂ ।
ಅತ್ರ ಹೃತ್ಪಂಕಜಂ ವೇಶ್ಮ ಸೂಕ್ಷ್ಮಾಂಬರಮನೋಹರಂ ॥೪೯॥
ತತ್ರ ಸನ್ನಿಹಿತಃ ಸಾಕ್ಷಾತ್ ಸಚ್ಚಿದಾನಂದಲಕ್ಷಣಃ ।
ನಿತ್ಯಸಿದ್ಧಃ ಪ್ರಕಾಶಾತ್ಮಾ ಜಲಸ್ಥಾಕಾಶವಚ್ಛಿವಃ ॥೫೦॥

ಘಟೋಪಾಧಿವಿಶಿಷ್ಟವಾದ ಆಕಾಶವು ಸ್ವಸ್ವರೂಪದಿಂದ ಹೇಗೆ ಪೂರ್ಣವಾಗಿರುವುದೋ, ಹಾಗೆಯೇ ಶರೀರದಲ್ಲಿರುವ ಆತ್ಮನು ತನ್ನ ಸಚ್ಚಿದಾನಂದಸ್ವರೂಪದಿಂದ ಪರಿಪೂರ್ಣನಾಗಿ ಪ್ರಕಾಶಿಸುತ್ತಿರುವನು. ॥೪೫॥ ಹೃದಯಾಕಾಶಸ್ಥಿತನೂ, ಮಹಾಚಿದಾಕಾಶಸ್ವರೂಪನೂ, ಅದ್ವಿತೀಯನೂ ಆದ ಶಿವನನ್ನು, ಶುದ್ಧವಾದ ಮನಸ್ಸಿನಿಂದ ಯಾವನು ಭಾವಿಸುವನೋ, ಅವನು ಪಿಂಡಾಕಾಶಸ್ವರೂಪನೆಂದು ಹೇಳಿಸಿಕೊಳ್ಳುವನು. ॥೪೬॥ ಶಿವಾದಿಭೂಮ್ಯಂತವಾದ ಮೂವತ್ತಾರು ತತ್ತ್ವರೂಪಸ್ತಂಭಾದಿಗಳಿಂದ ನಿರ್ಮಿತವಾದುದೂ, ಹೃತ್ಕಮಲರೂಪಪೀಠದಿಂದ ಯುಕ್ತವಾದುದೂ, ಜ್ಞಾನರೂಪದೀಪದಿಂದ ಪ್ರಕಾಶಿತವಾದುದೂ ಆದ ಈ ಶರೀರವು ಶಿವಮಂದಿರವೆಂದು ಹೇಳಿಸಿಕೊಳ್ಳುವುದು. ॥೪೭॥ ಚಿದಾಕಾಶಸ್ವರೂಪನೂ, ಪ್ರಕಾಶಮಾನನೂ ಆದ ಪರಮೇಶ್ವರನು ಸಮಸ್ತಪ್ರಾಣಿಗಳ ಹೃದಯಾಕಾಶರೂಪಗುಹೆಯಲ್ಲಿ ಅಡಗಿರುವವನಾಗಿ ಒಳಗೆ ತೋರುತ್ತಿರುವನು. ॥೪೮॥ ರಕ್ತ-ಮಜ್ಜಾ-ಮಾಂಸಾದಿಸಪ್ತಧಾತುಗಳಿಂದ ವ್ಯಾಪ್ತವಾದ ಈ ಶರೀರವು ಶಿವರಾಜಧಾನಿಯೆಂದು ಹೇಳಿಸಿಕೊಳ್ಳುವುದು. ಶರೀರರೂಪವಾದ ಈ ಶಿವರಾಜಧಾನಿಯಲ್ಲಿ ಸೂಕ್ಷ್ಮಾಕಾಶದಿಂದ ಶೋಭಿಸುತ್ತಿರುವ ಹೃದಯಕಮಲವು ಅಂತಃಪುರವಾಗಿರುವುದು. ಆ ಅಂತಃಪುರದಲ್ಲಿ ಸಚ್ಚಿದಾನಂದಸ್ವರೂಪನೂ, ನಿತ್ಯಪೂರ್ಣನೂ, ಪ್ರಕಾಶಸ್ವರೂಪನೂ ಆದ ಶಿವನು ಸ್ವಚ್ಛವಾದ ಜಲದಲ್ಲಿ ತೋರುವ ಆಕಾಶದಂತೆ ಪ್ರತ್ಯಕ್ಷವಾಗಿ ತೋರುತ್ತಿರುವನು. ॥೪೯-೫೦॥

ಅಂತರಾಕಾಶಮಧ್ಯಸ್ಥಮಶೇಷೋಪಾಧಿವರ್ಜಿತಂ ।
ಘಟಾಕಾಶಮಿವಾಚ್ಛಿನ್ನಂ ಭಾವಯೇಚ್ಚಿನ್ಮಯಂ ಶಿವಂ ॥೫೧॥

೪೪ ಬಿಂದ್ವಾಕಾಶಸ್ಥಲಂ

ಯಥಾಽಽಕಾಶೋ ವಿಭುರ್ಜ್ಞೇಯಃ ಸರ್ವಪ್ರಾಣ್ಯುಪರಿ ಸ್ಥಿತಃ ।
ತಥಾತ್ಮೇತ್ಯುಪಮಾನಾರ್ಥಂ ಬಿಂದ್ವಾಕಾಶಸ್ಥಲಂ ವಿದುಃ ॥೫೨॥

ಯಥೈಕೋ ವಾಯುರಾಖ್ಯಾತಃ ಸರ್ವಪ್ರಾಣಿಗತೋ ವಿಭುಃ ।
ತಥಾಽಽತ್ಮಾ ವ್ಯಾಪಕಃ ಸಾಕ್ಷಾತ್ ಸರ್ವಪ್ರಾಣಿಗತಃ ಸ್ವಯಂ ॥೫೩॥

ಯಥಾ ವಹ್ನಿರಮೇಯಾತ್ಮಾ ಸರ್ವತ್ರೈಕೋಽಪಿ ಭಾಸತೇ ।
ತಥಾ ಶಂಭುಃ ಸಮಸ್ತಾತ್ಮಾ ಪರಿಚ್ಛೇದವಿವರ್ಜಿತಃ ॥೫೪॥

ಉಪಾಧಿದೂರವಾದ ಘಟಾಕಾಶವು ಸ್ವಭಾವತಃ ಅಪರಿಚ್ಛಿನ್ನವಾಗಿರುವಂತೆ, ಹೃದಯಾಕಾಶಮಧ್ಯದಲ್ಲಿರುವವನೂ, ಸಮಸ್ತೋಪಾಧಿಗಳಿಂದ ದೂರನಾದವನೂ, ಚಿತ್ಸ್ವರೂಪನೂ ಆದ ಶಿವನನ್ನು, ಅಪರಿಚ್ಛಿನ್ನನನ್ನಾಗಿ ಭಾವಿಸಬೇಕು. ॥೫೧॥

೪೪ ಬಿಂದ್ವಾಕಾಶಸ್ಥಲ

ಆಕಾಶವು ಸರ್ವಪ್ರಾಣಿಗಳಲ್ಲಿದ್ದುಕೊಂಡು ಸರ್ವತ್ರ ವ್ಯಾಪಕವಾಗಿ ತಿಳಿಯಲಿಕ್ಕೆ ಹೇಗೆ ಯೋಗ್ಯವಾಗಿರುವುದೋ, ಹಾಗೆಯೇ ಆತ್ಮನು ಸರ್ವಪ್ರಾಣಿಗಳಲ್ಲಿ ಇದ್ದುಕೊಂಡು ಸರ್ವತ್ರ ವ್ಯಾಪಕನಾಗಿ ತಿಳಿಯಲಿಕ್ಕೆ ಯೋಗ್ಯನಾಗಿರುವನು. ಈ ಉಪಮಾನಕ್ಕೋಸ್ಕರವೇ ಜ್ಞಾನಿಗಳು ಇದನ್ನು ಬಿಂದ್ವಾಕಾಶಸ್ಥಲವೆಂದು ತಿಳಿಯುವರು. ॥೫೨॥ ಒಂದಾದ ವಾಯುವು ಸರ್ವಪ್ರಾಣಿಗಳಲ್ಲಿದ್ದುಕೊಂಡು ಹೇಗೆ ವ್ಯಾಪಕವೆಂದು ಹೇಳಿಸಿಕೊಳ್ಳುವುದೋ, ಹಾಗೆಯೇ ಆತ್ಮನು ತಾನು ಪ್ರತ್ಯಕ್ಷವಾಗಿ ಸರ್ವಪ್ರಾಣಿಗಳಲ್ಲಿದ್ದುಕೊಂಡು ವ್ಯಾಪಕನೆನಿಸಿರುವನು. ॥೫೩॥ ಅಪರಿಮಿತಸ್ವರೂಪವಾದ ಅಗ್ನಿಯು ಒಂದಾಗಿದ್ದರೂ, ವೈದ್ಯುತಾಗ್ನಿ-ದಾವಾಗ್ನಿ-ವಡವಾಗ್ನ್ಯಾದಿರೂಪದಿಂದ ವಿಶ್ವವ್ಯಾಪಕವಾಗಿ ಹೇಗೆ ಪ್ರಕಾಶಿಸುತ್ತಿರುವುದೋ, ಹಾಗೆಯೇ ಸಮಸ್ತಚೈತನ್ಯಸ್ವರೂಪನಾದ ಪರಶಿವನು ಒಬ್ಬನಾಗಿದ್ದರೂ ಪರಿಚ್ಛೇದರಹಿತನಾಗಿ ದೇವದಾನವಮಾನವ ಪಶುಪಕ್ಷಿರೂಪಚರಾಚರಪ್ರಪಂಚದಲ್ಲಿ ವ್ಯಕ್ತಾವ್ಯಕ್ತರೂಪದಿಂದ ವ್ಯಾಪಕನಾಗಿ ಪ್ರಕಾಶಿಸುತ್ತಿರುವನು. ॥೫೪॥

ಸರ್ವೇಷಾಂ ದೇಹಿನಾಮಂತಶ್ಚಿತ್ತತೋಽಯಂ ಪ್ರಕಾಶತೇ ।
ತಸ್ಮಿನ್ ಪ್ರತಿಫಲತ್ಯಾತ್ಮಾ ಶಿವೋ ದರ್ಪಣವದ್ವಿಭುಃ ॥೫೫॥

ಏಕಃ ಪರಿಮಿತಃ ಸಂವಿತ್ಪ್ರಕಾಶಾತ್ಮಾ ಪರಾತ್ಪರಃ ।
ಸರ್ವಪ್ರಾಣಿಗತೋ ಭಾತಿ ತಥಾಪಿ ವಿಭುರುಚ್ಯತೇ ॥೫೬॥

ಏಕ ಏವ ಯಥಾ ಸೂರ್ಯಸ್ತೇಜಸಾ ಭಾತಿ ಸರ್ವಗಃ ।
ತಥಾಽಽತ್ಮಾ ಶಕ್ತಿಭೇದೇನ ಶಿವಃ ಸರ್ವಗತೋ ಭವೇತ್ ॥೫೭॥

೪೫ ಮಹಾಕಾಶಸ್ಥಲಂ

ಪಿಂಡಾಂಡಸ್ಥಂ ಯಥಾಽಽಕಾಶಂ ನ ಭಿನ್ನಂ ತದ್ವದಾತ್ಮನಃ ।
ಅಭಿನ್ನಃ ಪರಮಾತ್ಮೇತಿ ಮಹಾಕಾಶಸ್ಥಲಂ ವಿದುಃ ॥೫೮॥

ಯಥಾ ನ ಭಿನ್ನಮಾಕಾಶಂ ಘಟೇಷು ಚ ಮಠೇಷು ಚ ।
ತಥಾಽಂಡೇಷು ಚ ಪಿಂಡೇಷು ಸ್ಥಿತೋ ಹ್ಯಾತ್ಮಾ ನ ಭಿದ್ಯತೇ ॥೫೯॥

ಸಮಸ್ತಪ್ರಾಣಿಗಳ ಅಂತರಂಗದಲ್ಲಿ ಸ್ವಚ್ಛವಾದ ಜಲದಂತಿರುವ ಚಿತ್ತವು ಪ್ರಕಾಶಿಸುತ್ತಿರುವುದು. ಕನ್ನಡಿಯಲ್ಲಿ ಮುಖಾದಿಗಳು ಪ್ರತಿಬಿಂಬಿಸುವಂತೆ, ನಿರ್ಮಲವಾದ ಆ ಚಿತ್ತದಲ್ಲಿ ವ್ಯಾಪಕನೂ ಆತ್ಮಸ್ವರೂಪನೂ ಆದ ಪರಶಿವನು ಪ್ರತಿಬಿಂಬಿಸಿರುವನು. ॥೫೫॥ ಪರಾತ್ಪರನೂ, ಚಿತ್ಪ್ರಕಾಶಸ್ವರೂಪನೂ ಆದ ಶಿವನೊಬ್ಬನೇ ಸಮಸ್ತ ಪ್ರಾಣಿಗಳ ಹೃದಯಕಮಲವನ್ನು ಆಶ್ರಯಿಸಿ ಪರಿಮಿತನಾಗಿ ಪ್ರಕಾಶಿಸುತ್ತಿರುವನು. ಆದರೂ ಶಿವನು ಸರ್ವತ್ರ ವ್ಯಾಪಕನಾಗಿರುವುದರಿಂದ ವಿಭುವೆಂದು ಹೇಳಿಸಿಕೊಳ್ಳುವನು. ॥೫೬॥ ಒಬ್ಬನೇ ಒಬ್ಬನಾದ ಸೂರ್ಯನು ತನ್ನ ತೇಜಸ್ಸಿನಿಂದ ಸರ್ವತ್ರ ವ್ಯಾಪಕನಾಗಿ ಹೇಗೆ ಪ್ರಕಾಶಿಸುತ್ತಿರುವನೋ, ಹಾಗೆಯೇ ಆತ್ಮಸ್ವರೂಪನಾದ ಶಿವನು ಇಚ್ಛಾಶಕ್ತಿ-ಜ್ಞಾನಶಕ್ತಿ-ಕ್ರಿಯಾಶಕ್ತ್ಯಾದಿಭೇದದಿಂದ ವಿಶ್ವವ್ಯಾಪಕನಾಗಿರುವನು. ॥೫೭॥

೪೫ ಮಹಾಕಾಶಸ್ಥಲ

ಬ್ರಹ್ಮಾಂಡ ಮತ್ತು ಪಿಂಡಾಂಡಗಳಲ್ಲಿರುವ ಆಕಾಶವು ಹೇಗೆ ಭಿನ್ನವಾಗಿರುವುದಿಲ್ಲವೋ, ಹಾಗೆಯೇ ಶಿವಯೋಗಿಯ ಆತ್ಮನಿಗಿಂತ ಪರಮಾತ್ಮನು ಭಿನ್ನನಾಗಿರುವುದಿಲ್ಲ. ಶಿವಯೋಗಿಯ ಆತ್ಮನು ಮತ್ತು ಪರಮಾತ್ಮನು ಇವರಿಬ್ಬರೂ ಒಂದೇ ಆಗಿರುವರೆಂಬ ಅಭೇದವನ್ನೇ ಜ್ಞಾನಿಗಳು ಮಹಾಕಾಶಸ್ಥಲವೆಂದು ತಿಳಿಯುವರು. ॥೫೮॥ ಘಟ ಮತ್ತು ಮಠಗಳಲ್ಲಿರುವ ಆಕಾಶವು ಹೇಗೆ ಭಿನ್ನವಾಗಿರುವುದಿಲ್ಲವೋ, ಹಾಗೆಯೇ ಬ್ರಹ್ಮಾಂಡ ಮತ್ತು ಪಿಂಡಾಂಡಗಳಲ್ಲಿರುವ ಆತ್ಮನು ಭಿನ್ನನಾಗಿರುವುದಿಲ್ಲ. ॥೫೯॥

ಅನಿರ್ದೇಶ್ಯಮನೌಪಮ್ಯಮವಾಙ್ಮನಸಗೋಚರಂ ।
ಸರ್ವತೋಮುಖಸಂಪನ್ನಂ ಸತ್ತಾನಂದಚಿದಾತ್ಮಕಂ ॥೬೦॥

ಕಾಲಾತೀತಂ ಕಲಾತೀತಂ ಕ್ರಮಯೋಗಾದಿವರ್ಜಿತಂ ।
ಸ್ವಾನುಭೂತಿಪ್ರಮಾಣಸ್ಥಂ ಜ್ಯೋತಿಷಾಮುದಯಸ್ಥಲಂ ॥೬೧॥

ಶಿವಾಖ್ಯಂ ಪರಮಂ ಬ್ರಹ್ಮ ಪರಮಾಕಾಶಲಕ್ಷಣಂ ।
ಲಿಂಗಮಿತ್ಯುಚ್ಯತೇ ಸದ್ಭಿರ್ಯದ್ವಿನಾ ನ ಜಗತ್ಸ್ಥಿತಿಃ ॥೬೨॥

ಪರಮಾಕಾಶಮವ್ಯಕ್ತಂ ಪ್ರಬೋಧಾನಂದಲಕ್ಷಣಂ ।
ಲಿಂಗಂ ಜ್ಯೋತಿರ್ಮಯಂ ಪ್ರಾಹುರ್ಲೀಯಂತೇ ಯತ್ರ ಯೋಗಿನಃ ॥೬೩॥

ಸಂವಿದೇವ ಪರಾ ಕಾಷ್ಠಾ ಪರಮಾನಂದರೂಪಿಣೀ ।
ತಾಮಾಹುಃ ಪರಮಾಕಾಶಂ ಮುನಯೋ ಮುಕ್ತಸಂಶಯಾಃ ॥೬೪॥

ತರಂಗಾದಿರ್ಯಥಾ ಸಿಂಧೋಃ ಸ್ವರೂಪಾನ್ನಾತಿರಿಚ್ಯತೇ ।
ತಥಾ ಶಿವಾತ್ ಪರಾಕಾಶಾದ್ವಿಶ್ವಮೇತನ್ನ ಭಿದ್ಯತೇ ॥೬೫॥

ಅನಿರ್ದೇಶ್ಯವೂ, ಉಪಮಾತೀತವೂ, ವಾಙ್ಮನಸ್ಸುಗಳಿಗೆ ಅಗೋಚರವೂ, ಸರ್ವತೋಮುಖಯುಕ್ತವೂ, ಸಚ್ಚಿದಾನಂದಸ್ವರೂಪವೂ, ಕಾಲಾತೀತವೂ, ಅಷ್ಟತ್ರಿಂಶತ್ಕಲಾತೀತವೂ, ಉತ್ಪತ್ತ್ಯಾದಿಕ್ರಮಯೋಗಶೂನ್ಯವೂ, ಸ್ವಾನುಭವಪ್ರಮಾಣಗಮ್ಯವೂ, ಸೂರ್ಯಚಂದ್ರಾದಿಸಮಸ್ತತೇಜೋವಸ್ತುಗಳ ಉತ್ಪತ್ತಿಗೆ ಸ್ಥಾನಭೂತವೂ, ಪರಮಾಕಾಶಸ್ವರೂಪವೂ ಆದ ಶಿವನಾಮಕವಾದ ಪರಬ್ರಹ್ಮವು ಲಿಂಗವೆಂದು ಹೇಳಿಸಿಕೊಳ್ಳುವುದು. ಇಂತಹ ಲಿಂಗವನ್ನು ಬಿಟ್ಟು ಚರಾಚರಪ್ರಪಂಚವು ಇರುವುದಿಲ್ಲ. ಸಮಸ್ತಚರಾಚರಪ್ರಪಂಚವು ಶಿವನ ಆಧಾರದಲ್ಲಿದ್ದು ಶಿವಸ್ವರೂಪವಾಗಿರುವುದೆಂದು ಭಾವವು. ॥೬೦-೬೧-೬೨॥ ಯೋಗಿಗಳು ಯಾವ ಪರಮಾಕಾಶದಲ್ಲಿ ಲಯವನ್ನು ಹೊಂದುವರೋ, ಅವ್ಯಕ್ತವಾದ ಆ ಪರಮಾಕಾಶವನ್ನು ಜ್ಞಾನಿಗಳು ಚಿದಾನಂದಸ್ವರೂಪವೂ ಜ್ಯೋತಿರ್ಮಯವೂ ಆದ ಲಿಂಗವನ್ನಾಗಿ ಹೇಳುತ್ತಾರೆ. ॥೬೩॥ ಪರಮಾನಂದಸ್ವರೂಪವಾದ ಜ್ಞಾನವೇ ಸರ್ವೋತ್ಕೃಷ್ಟವಾಗಿರುವುದು. ಸಂಶಯದಿಂದ ದೂರರಾದ ಮುನಿಗಳು ಅಂತಹ ಜ್ಞಾನವನ್ನೇ ಪರಮಾಕಾಶವೆಂದು ಹೇಳುತ್ತಾರೆ. ॥೬೪॥ ಸಮುದ್ರದಿಂದುತ್ಪನ್ನವಾದ ತರಂಗಾದಿಗಳು ಸಮುದ್ರಸ್ವರೂಪದಿಂದ ಹೇಗೆ ಭಿನ್ನವಾಗಿರುವುದಿಲ್ಲವೋ, ಹಾಗೆಯೇ ಪರಮಾನಂದಸ್ವರೂಪನಾದ ಶಿವನಿಂದುತ್ಪನ್ನವಾದೀ ಜಗತ್ತು, ಶಿವಸ್ವರೂಪದಿಂದ ಭಿನ್ನವಾಗಿರುವುದಿಲ್ಲವು. ॥೬೫॥

ಯಥಾ ಪುಷ್ಪಪಲಾಶಾದಿರ್ವೃಕ್ಷರೂಪಾನ್ನ ಭಿದ್ಯತೇ ।
ತಥಾ ಶಿವಾತ್ಪರಾಕಾಶಾಜ್ಜಗತೋ ನಾಸ್ತಿ ಭಿನ್ನತಾ ॥೬೬॥
ಯಥಾ ಜ್ಯೋತೀಂಷಿ ಭಾಸಂತೇ ಭೂತಾಕಾಶೇ ಪೃಥಕ್ ಪೃಥಕ್ ।
ತಥಾ ಭಾಂತಿ ಪರಾಕಾಶೇ ಬ್ರಹ್ಮಾಂಡಾನಿ ವಿಶೇಷತಃ ॥೬೭॥
ನಿರಸ್ತೋಪಾಧಿಸಂಬಂಧಂ ನಿರ್ಮಲಂ ಸಂವಿದಾತ್ಮಕಂ ।
ಪರಾಕಾಶಂ ಜಗಚ್ಚಿತ್ರವಿಲಾಸಾಲಂಬಭಿತ್ತಿಕಂ ॥೬೮॥

೪೬ ಕ್ರಿಯಾಪ್ರಕಾಶಸ್ಥಲಂ

ಶಿವಸ್ಯ ಪರಿಪೂರ್ಣಸ್ಯ ಪರಾಕಾಶಸ್ವರೂಪಿಣಃ ।
ಆತ್ಮತ್ವೇನಾನುಸಂಧಾನಾತ್ ಕ್ರಿಯಾದ್ಯೋತನವಾನ್ ಯಮೀ ॥೬೯॥
ನಿಷ್ಕಲಂಕಚಿದಾನಂದಗಗನೋಪಮರೂಪಿಣಃ ।
ಶಿವಸ್ಯ ಪರಿಪೂರ್ಣಸ್ಯ ವೃತ್ತಿಶ್ಚೈತನ್ಯರೂಪಿಣೀ ॥೭೦॥

ಪತ್ರಪುಷ್ಪಶಾಖಾದಿಗಳು ವೃಕ್ಷಸ್ವರೂಪದಿಂದ ಹೇಗೆ ಭಿನ್ನವಾಗಿರುವುದಿಲ್ಲವೋ, ಹಾಗೆಯೇ ಚರಾಚರಾತ್ಮಕವಾದೀ ಜಗತ್ತು ಪರಮಾನಂದರೂಪಶಿವಸ್ವರೂಪದಿಂದ ಭಿನ್ನವಾಗಿರುವುದಿಲ್ಲವು. ಚರಾಚರಾತ್ಮಕವಾದೀಜಗತ್ತು ಶಿವನಿಗೆ ಅಭಿನ್ನವಾಗಿದ್ದು, ಶಿವನಂತೆ ಸತ್ಯವೂ ನಿತ್ಯವೂ ಆಗಿರುವುದೆಂದು ಭಾವವು. ॥೬೬॥ ನಕ್ಷತ್ರಗಳು ಆಕಾಶದಲ್ಲಿ ಹೇಗೆ ಭಿನ್ನಭಿನ್ನವಾಗಿ ಪ್ರಕಾಶಿಸುತ್ತಿರುವುವೋ, ಹಾಗೆಯೇ ಅನಂತಬ್ರಹ್ಮಾಂಡಗಳು ಪರಾಕಾಶಸ್ವರೂಪನಾದ ಶಿವನಲ್ಲಿ ಭಿನ್ನಭಿನ್ನವಾಗಿ ಪ್ರಕಾಶಿಸುತ್ತಿರುವುವು. ॥೬೭॥ ಪರಾಕಾಶವು ಉಪಾಧಿಸಂಬಂಧದಿಂದ ದೂರವಾದುದೂ, ನಿರ್ಮಲವಾದುದೂ, ಜ್ಞಾನ ಸ್ವರೂಪವಾದುದೂ, ಜಗದ್ರೂಪವಾದ ಚಿತ್ರವಿಲಾಸಕ್ಕೆ ಆಧಾರಭೂತಭಿತ್ತಿಸ್ವರೂಪ ವಾದುದೂ ಆಗಿರುವುದು. ॥೬೮॥

೪೬ ಕ್ರಿಯಾಪ್ರಕಾಶಸ್ಥಲ

ಮಹಾಕಾಶಸ್ವರೂಪನಾದ ಶಿವಯೋಗಿಯು, ಪರಿಪೂರ್ಣನೂ ಪರಾಕಾಶ ಸ್ವರೂಪನೂ ಆದ ಶಿವನನ್ನು ಆತ್ಮಸ್ವರೂಪದಿಂದ (ಅವನೇ ನಾನೆಂಬ ಭಾವನೆಯಿಂದ) ಅನುಸಂಧಾನಮಾಡುವುದರಿಂದ ಕ್ರಿಯಾಪ್ರಕಾಶಕನೆನಿಸುವನು. ॥೬೯॥ ನಿಷ್ಕಲಂಕನೂ, ಚಿದಾನಂದಸ್ವರೂಪನೂ, ಪರಮಾಕಾಶಕ್ಕೆ ಸಮಾನವಾದ ಸ್ವರೂಪವುಳ್ಳವನೂ, ಪರಿಪೂರ್ಣನೂ ಆದ ಶಿವನ ವೃತ್ತಿಯು ಜ್ಞಾನಸ್ವರೂಪವಾಗಿರುವುದು. ಕ್ರಿಯಾವಿಶಿಷ್ಟ ಜ್ಞಾನಸ್ವರೂಪವಾಗಿರುವುದೆಂದು ಭಾವವು. ॥೭೦॥

ನಿಷ್ಕಲಂಕೇ ನಿರಾಕಾರೇ ನಿತ್ಯೇ ಪರಮತೇಜಸಿ ।
ವಿಲೀನಚಿತ್ತವೃತ್ತಸ್ಯ ತಥಾ ಶಕ್ತಿಃ ಕ್ರಿಯೋಚ್ಯತೇ ॥೨೧॥
ಸರ್ವಜ್ಞಃ ಸರ್ವಕರ್ತಾ ಚ ಸರ್ವಗಃ ಪರಮೇಶ್ವರಃ ।
ತದೈಕ್ಯಚಿಂತಯಾ ಯೋಗೀ ತಾದೃಶಾತ್ಮಾ ಪ್ರಕಾಶತೇ ॥೨೨॥
ಸರ್ವೇಂದ್ರಿಯಾಣಾಂ ವ್ಯಾಪಾರೇ ವಿದ್ಯಮಾನೇಽಪಿ ಸಂಯಮೀ ।
ಪ್ರತ್ಯಙ್ಮುಖೇನ ಮನಸಾ ಶಿವಂ ಪಶ್ಯನ್ ಪ್ರಮೋದತೇ ॥೨೩॥
ಕೂಟಸ್ಥಮಚಲಂ ಪ್ರಾಜ್ಞಂ ಗುಣಾತೀತಂ ಗುಣೋತ್ತರಂ ।
ಶಿವತತ್ತ್ವಂ ಸ್ವರೂಪೇಣ ಪಶ್ಯನ್ ಯೋಗೀ ಪ್ರಮೋದತೇ ॥೨೪॥

೪೭ ಭಾವಪ್ರಕಾಶಸ್ಥಲಂ

ತರಂಗಾದ್ಯಾ ಯಥಾ ಸಿಂಧೋರ್ನ ಭಿದ್ಯಂತೇ ತಥಾಽಽತ್ಮನಃ ।
ಭಾವಾ ಬುದ್ಧ್ಯಾದಯಃ ಸರ್ವೇ ಯತ್ತದ್ಭಾವಪ್ರಕಾಶನಂ ॥೨೫॥

ನಿಷ್ಕಲಂಕವೂ, ನಿರಾಕಾರವೂ, ನಿತ್ಯವೂ ಆದ ಪರಶಿವತೇಜಸ್ಸಿನಲ್ಲಿ ಚಿತ್ತವೃತ್ತಿಯನ್ನು ಲಯಗೊಳಿಸಿದ ಶಿವಯೋಗಿಯ ಶಕ್ತಿಯಾದರೂ, ಶಿವನ ಶಕ್ತಿಯಂತೆಯೇ ಜ್ಞಾನವಿಶಿಷ್ಟಕ್ರಿಯಾಸ್ವರೂಪವಾಗಿರುವುದೆಂದು ಹೇಳಲ್ಪಡುತ್ತದೆ. "ವೃತ್ತೋಽಧೀತೇಽಪ್ಯತೀತೇಽತಿ........ಛಂದಶ್ಚಾರಿತ್ರವೃತ್ತಿಷು ॥ ಇತಿ ಮೇದಿನೀ. ॥೨೧॥ ಪರಮೇಶ್ವರನು ಸರ್ವಜ್ಞನೂ, ಸರ್ವಕರ್ತನೂ, ಸರ್ವವ್ಯಾಪಕನೂ ಆಗಿರುವನು. ಶಿವಯೋಗಿಯು ಅಂತಹ ಶಿವನ ಸಾಮರಸ್ಯಧ್ಯಾನದಿಂದ ಆ ವಿಧವಾದ ಶಿವಸ್ವರೂಪನಾಗಿಯೇ ಪ್ರಕಾಶಿಸುವನು. ॥೨೨॥ ಶಿವಯೋಗಿಯಲ್ಲಿ ಶ್ರೋತ್ರಾದಿಸರ್ವೇಂದ್ರಿಯಗಳ ವ್ಯಾಪಾರವು ಇದ್ದರೂ, ಅವನು ಅಂತರ್ಮುಖವಾದ ಮನಸ್ಸಿನಿಂದ ಶಿವನನ್ನು ಸಾಕ್ಷಾತ್ಕರಿಸುವವನಾಗಿ ಸಂತೋಷಪಡುವನು.॥೨೩॥ ಕೂಟಸ್ಥವೂ (ಕೂಟವತ್ ತಿಷ್ಠತೀತಿ ಕೂಟಸ್ಥಂ–ಎಂದರೆ–ಅಕ್ಕಸಾಲಿಗನ ಅಡಿಗಲ್ಲಿನಂತೆ ವಿಕಾರಶೂನ್ಯವಾದುದೂ ಅರ್ಥಾತ್ ನಿರ್ವಿಕಾರವೂ) ನಿಶ್ಚಲವೂ, ಸರ್ವಜ್ಞವೂ, ಹೇಯಗುಣಾತೀತವೂ, ಕಲ್ಯಾಣಗುಣೋತ್ಕೃಷ್ಟವೂ ಆದ ಶಿವತತ್ತ್ವವನ್ನು ಶಿವಯೋಗಿಯು ಸ್ವಸ್ವರೂಪದಿಂದ ನೋಡುವವನಾಗಿ ಆನಂದಿಸುವನು. ॥೨೪॥

೪೭ ಭಾವಪ್ರಕಾಶಸ್ಥಲ

ತರಂಗಾದಿಗಳು ಸಮುದ್ರಕ್ಕಿಂತ ಹೇಗೆ ಭಿನ್ನವಾಗಿರುವುದಿಲ್ಲವೋ, ಹಾಗೆಯೇ ಬುದ್ಧಿ ಮೊದಲಾದ ಸಮಸ್ತಭಾವಗಳು ಆತ್ಮನಿಗಿಂತ ಭಿನ್ನವಾಗಿರುವುದಿಲ್ಲ ; ಹೀಗೆಂಬುದಾವುದುಂಟೋ ಅದೇ ಭಾವಪ್ರಕಾಶಸ್ಥಲವೆನಿಸುವುದು. ॥೨೫॥

ಶಿವ ಏವ ಜಗತ್ಸರ್ವಂ ಶಿವ ಏವಾಹಮಿತ್ಯಪಿ ।
ಭಾವಯನ್ ಪರಮೋ ಯೋಗೀ ಭವದೋಷೈರ್ನ ಬಾಧ್ಯತೇ ॥೭೬॥

ಶಿವಭಾವೇ ಸ್ಥಿರೇ ಜಾತೇ ನಿರ್ಲೇಪಸ್ಯ ಮಹಾತ್ಮನಃ ।
ಯೇ ಯೇ ಭಾವಾಃ ಸಮುತ್ಪನ್ನಾಸ್ತೇ ತೇ ಶಿವಮಯಾಃ ಸ್ಮೃತಾಃ ॥೭೭॥

ಅದ್ವಿತೀಯಶಿವಾಕಾರಭಾವನಾಧ್ವಸ್ತಕರ್ಮಣಾ ।
ನ ಕಿಂಚಿದ್ಭಾವ್ಯತೇ ಸಾಕ್ಷಾತ್ ಶಿವಾದನ್ಯನ್ಮಹಾತ್ಮನಾ ॥೭೮॥

ಗಲಿತಾಜ್ಞಾನಬಂಧಸ್ಯ ಕೇವಲಾತ್ಮಾನುಭಾವಿನಃ ।
ಯತ್ರ ಯತ್ರೇಂದ್ರಿಯಾಸಕ್ತಿಸ್ತತ್ರ ತತ್ರ ಶಿವಾತ್ಮತಾ ॥೭೯॥

ರಾಗದ್ವೇಷಾದಯೋ ಭಾವಾಃ ಸಂಸಾರಕ್ಲೇಶಕಾರಣಂ ।
ತೇಷಾಮುಪರಮೋ ಯತ್ರ ತತ್ರ ಭಾವಃ ಶಿವಾತ್ಮಕಃ ॥೮೦॥

ಯಥಾ ಸೂರ್ಯಸಮಾಕ್ರಾಂತೌ ನ ಶಕ್ನೋತಿ ತಮಃ ಸದಾ ।
ತಥಾ ಪ್ರಕಾಶಮಾತ್ಮಾನಂ ನಾಽವಿದ್ಯಾಽಽಕ್ರಮತಿ ಸ್ವಯಂ ॥೮೧॥

ಚರಾಚರಾತ್ಮಕವಾದೀ ಸಮಸ್ತಜಗತ್ತು ಶಿವಸ್ವರೂಪವಾಗಿರುವುದು; ನಾನಾದರೂ ಶಿವಸ್ವರೂಪನಾಗಿಯೇ ಇದ್ದೇನೆಂದು ಭಾವಿಸುವ ಶಿವಯೋಗಿಯು ಸಾಂಸಾರಿಕ ದೋಷಗಳಿಂದ ಬಾಧಿಸಲ್ಪಡುವುದಿಲ್ಲ. ॥೭೬॥ ವಿಷಯನಿರ್ಲಿಪ್ತನಾದ ಶಿವಯೋಗಿಗೆ ಶಿವಭಾವವು ದೃಢಗೊಳ್ಳಲಾಗಿ, ಯಾವ ಯಾವ ಭಾವಗಳು ಉತ್ಪನ್ನವಾಗುವುವೋ, ಆ ಆ ಭಾವಗಳು ಶಿವಸ್ವರೂಪವಾದವುಗಳೆಂದು ಹೇಳಿಸಿಕೊಳ್ಳುವುವು. ॥೭೭॥ ಅದ್ವಿತೀಯವಾದ ಶಿವಸ್ವರೂಪಭಾವನೆಯಿಂದ ಕರ್ಮಗಳನ್ನು ನಾಶಮಾಡಿದವನೂ ಮಹಾತ್ಮನೂ ಆದ ಶಿವಯೋಗಿಯು ಶಿವನಿಗೆ ಅನ್ಯವಾದುದಾವುದನ್ನೂ ಭಾವಿಸುವುದಿಲ್ಲ. ಸರ್ವವನ್ನೂ ಶಿವಸ್ವರೂಪವನ್ನಾಗಿಯೇ ಕಾಣುವನೆಂದು ಭಾವವು. ॥೭೮॥ ಅಜ್ಞಾನಬಂಧದೂರನೂ, ಕೇವಲಾತ್ಮಾನುಭಾವಿಯೂ ಆದ ಶಿವಯೋಗಿಗೆ, ಯಾವ ಯಾವ ವಿಷಯದಲ್ಲಿ ಇಂದ್ರಿಯಪ್ರವೃತ್ತಿಯುಂಟಾಗುವುದೋ, ಆ ಆ ವಿಷಯದಲ್ಲಿ ಶಿವಸ್ವರೂಪವೇ ತೋರುತ್ತಿರುವುದು. ॥೭೯॥ ರಾಗದ್ವೇಷಾದಿಭಾವಗಳು ಸಂಸಾರ ದುಃಖಕ್ಕೆ ಮೂಲಕಾರಣೀಭೂತವಾಗಿರುವುವು. ಯಾವ ಶಿವಯೋಗಿಯಲ್ಲಿ ರಾಗದ್ವೇಷಾದಿಗಳಿಗೆ ವಿಶ್ರಾಂತಿಯುಂಟಾಗುವುದೋ, ಆ ಶಿವಯೋಗಿಯಲ್ಲಿರುವ ಭಾವವು ಶಿವಸ್ವರೂಪವಾಗಿರುವುದು. ॥೮೦॥ ಅಂಧಕಾರವು ಸೂರ್ಯನನ್ನಾವರಿಸುವುದರಲ್ಲಿ ಯಾವಾಗಲೂ ಹೇಗೆ ಸಮರ್ಥವಾಗುವುದಿಲ್ಲವೋ, ಹಾಗೆಯೇ ಅವಿದ್ಯೆಯು (ಅಜ್ಞಾನವು) ಸ್ವಯಂಪ್ರಕಾಶನೂ ಆತ್ಮಸ್ವರೂಪನೂ ಆದ ಶಿವಯೋಗಿಯನ್ನಾವರಿಸುವುದರಲ್ಲಿ ಸಮರ್ಥವಾಗುವುದಿಲ್ಲವು. ॥೮೧॥

೪೮ ಜ್ಞಾನಪ್ರಕಾಶಸ್ಥಲಂ

ಮುಕ್ತಸ್ಯ ಜ್ಞಾನಸಂಬಂಧೋ ಜ್ಞೇಯಾಭಾವಃ ಸ್ವಭಾವತಃ ।
ಉಪಾಧಿಸಹಿತಂ ಜ್ಞಾನಂ ನ ಭೇದಮತಿವರ್ತತೇ ॥೮೨॥

ಜ್ಞಾನಸ್ಯ ವಿಷಯೋ ತತ್ತ್ವೇ ಶಿವಾಖ್ಯೇ ಚಿತ್ಸುಖಾತ್ಮನಿ ।
ಆತ್ಮೈಕತ್ವಾನುಸಂಧಾನಂ ಜ್ಞಾನಮಿತ್ಯುಚ್ಯತೇ ಬುಧೈಃ ॥೮೩॥

ಅಪರಿಚ್ಛಿನ್ನಮಾನಂದಂ ಸತ್ತಾಕಾರಂ ಜಗನ್ಮಯಂ ।
ಬ್ರಹ್ಮೇತಿ ಲಕ್ಷಣಜ್ಞಾನಂ ಬ್ರಹ್ಮಜ್ಞಾನಮಿಹೋಚ್ಯತೇ ॥೮೪॥

ಬ್ರಹ್ಮಜ್ಞಾನೇ ಸಮುತ್ಪನ್ನೇ ವಿಶ್ವೋಪಾಧಿವಿವರ್ಜಿತೇ ।
ಸರ್ವಂ ಸಂವಿನ್ಮಯಂ ಭಾತಿ ತದನ್ಯನ್ನೈವ ದೃಶ್ಯತೇ ॥೮೫॥

ತಸ್ಮಾದದ್ವೈತವಿಜ್ಞಾನಮಪವರ್ಗಸ್ಯ ಕಾರಣಂ ।
ಭಾವಯನ್ ಸತತಂ ಯೋಗೀ ಸಂಸಾರೇಣ ನ ಲಿಪ್ಯತೇ ॥೮೬॥

---

೪೮ ಜ್ಞಾನಪ್ರಕಾಶಸ್ಥಲ

ಮುಕ್ತನಾದ ಶಿವಯೋಗಿಯ ಜ್ಞಾನಸಂಬಂಧವು ಸ್ವಾಭಾವಿಕವಾಗಿ ಜ್ಞೇಯ ಶೂನ್ಯವಾಗಿರುವುದು. ಮಹಾಜ್ಞಾನಿಯಾದ ಶಿವಯೋಗಿಯ ಜ್ಞಾನವು ಉಪಾಧಿರಹಿತವಾದುದರಿಂದ ಜ್ಞೇಯಾದಿತ್ರಿಪುಟಿಭೇದಶೂನ್ಯವಾಗಿರುವುದೆಂದು ಭಾವವು. ಉಪಾಧಿ ವಿಶಿಷ್ಟವಾದ ಜ್ಞಾನವು ಆ ತ್ರಿಪುಟಿಭೇದವನ್ನು ಉಲ್ಲಂಘಿಸಿರುವುದಿಲ್ಲ. ॥೮೨॥ ಜ್ಞಾನಕ್ಕೆ ವಿಷಯವಾದುದೂ, ಚಿದಾನಂದಸ್ವರೂಪವಾದುದೂ ಆದ ಶಿವತತ್ತ್ವದಲ್ಲಿ, ಆತ್ಮೈಕ್ಯಾನುಸಂಧಾನವೇ ಜ್ಞಾನವೆನಿಸಿಕೊಳ್ಳುವುದೆಂದು ಜ್ಞಾನಿಗಳು ಹೇಳುವರು. ॥೮೩॥ ಬ್ರಹ್ಮವು ಪರಿಪೂರ್ಣವಾದುದು, ಆನಂದಸ್ವರೂಪವಾದುದು, ಸತ್ತಾರೂಪವಾದುದು, ಜಗತ್ಸ್ವರೂಪವಾದುದು, ಎಂಬ ಲಕ್ಷಣಜ್ಞಾನವೇ ಬ್ರಹ್ಮಜ್ಞಾನವೆಂದು ಹೇಳಿಸಿಕೊಳ್ಳುವುದು. ॥೮೪॥ ಸಮಸ್ತೋಪಾಧಿಶೂನ್ಯವಾದ ಬ್ರಹ್ಮಜ್ಞಾನವು ಉತ್ಪನ್ನವಾಗಲು, ಸರ್ವವೂ ಜ್ಞಾನಸ್ವರೂಪವಾಗಿಯೇ ತೋರುವುದು. ಅದಕ್ಕೆ ಭಿನ್ನವಾಗಿ ಯಾವುದೂ ತೋರುವುದಿಲ್ಲ. ॥೮೫॥ ಆದುದರಿಂದ ಮೋಕ್ಷಕ್ಕೆ ಮೂಲಕಾರಣೀಭೂತವಾದ ಶಿವಾದ್ವೈತಜ್ಞಾನವನ್ನು ಅನುಭವಿಸುವ ಶಿವಯೋಗಿಯು, ಯಾವಾಗಲೂ ಜನನಮರಣರೂಪವಾದ ಸಂಸಾರದಿಂದ ಲಿಪ್ತನಾಗುವುದಿಲ್ಲ. ॥೮೬॥

ನಿತ್ಯೇ ನಿರ್ಮಲಸತ್ತ್ವಯೋಗಿನಿ ಪರೇ ನಿರ್ವಾಸನೇ ನಿಷ್ಕಲೇ
ಸರ್ವಾತೀತಪದೇ ಚರಾಚರಮಯೇ ಸತ್ತಾತ್ಮನಿ ಜ್ಯೋತಿಷಿ ।
ಸಂವಿದ್ವ್ಯೋಮ್ನಿ ಶಿವೇ ವಿಲೀನಹೃದಯಸ್ತದ್ಭೇದನ್ಮೈಮುಖ್ಯತಃ
ಸಾಕ್ಷಾತ್ಸರ್ವಗತೋ ವಿಭಾತಿ ವಿಗಲದ್ವಿಶ್ವಃ ಸ್ವಯಂ ಸಂಯಮೀ ॥೮೭॥

ಇತಿ ಶ್ರೀಸಿದ್ಧಾಂತಶಿಖಾಮಣೌ ಲಿಂಗಸ್ಥಲೀಯಶರಣಸ್ಥಲೇ
ದೀಕ್ಷಾಪಾದೋದಕಸ್ಥಲಾದಿದ್ವಾದಶವಿಧಸ್ಥಲಪ್ರಸಂಗೋ ನಾಮ
ಏಕೋನವಿಂಶತಿತಮಪರಿಚ್ಛೇದಃ ಪರಿಸಮಾಪ್ತಃ.

ನಿತ್ಯನೂ, ಶುದ್ಧಸತ್ತ್ವಗುಣವಿಶಿಷ್ಟನೂ, ಸರ್ವಶ್ರೇಷ್ಠನೂ, ವಾಸನಾರಹಿತನೂ, ಹೇಯಕಲಾಶೂನ್ಯನೂ, ಸರ್ವಕ್ಕೂ ಮಿಗಿಲಾದ ಸ್ಥಾನವುಳ್ಳವನೂ, ಚರಾಚರಪ್ರಪಂಚ ಸ್ವರೂಪನೂ, ಪಾರಮಾರ್ಥಿಕಸತ್ತಾರೂಪನೂ, ಜ್ಯೋತಿಸ್ಸ್ವರೂಪನೂ, ಚಿದಾಕಾಶ ಸ್ವರೂಪನೂ ಆದ ಪರಶಿವನಲ್ಲಿ, ಶಿವೇತರಜ್ಞಾನಶೂನ್ಯತೆಯಿಂದ ಮನಸ್ಸನ್ನು ಲಯಗೊಳಿಸಿದ ವಿಶ್ವವ್ಯಾಪಕನಾದ ಶಿವಯೋಗಿಯು, ವಿಶ್ವಭೇದವನ್ನು ದೂರೀಕರಿಸಿದವನಾಗಿ ತಾನೇತಾನಾಗಿ ಪ್ರಕಾಶಿಸುವನು. ॥೮೭॥

ಇಂತು ಶ್ರೀಸಿದ್ಧಾಂತಶಿಖಾಮಣಿಯ ಲಿಂಗಸ್ಥಲೀಯಶರಣಸ್ಥಲದಲ್ಲಿ
ದೀಕ್ಷಾಪಾದೋದಕಸ್ಥಲಾದಿದ್ವಾದಶವಿಧಸ್ಥಲವಿಚಾರಾತ್ಮಕನಾದ

ಹತ್ತೊಂಭತ್ತನೆಯ ಪರಿಚ್ಛೇದವು ಪರಿಸಮಾಪ್ತವಾದುದು.

ಶ್ರೀಜಗದ್ಗುರುರೇಣುಕಾಚಾರ್ಯಃ ಪ್ರಸೀದತು.

ವಿಂಶತಿತಮಪರಿಚ್ಛೇದಃ

ಐಕ್ಯಸ್ಥಲಂ

|| ಅಗಸ್ತ್ಯ ಉವಾಚ ||

ಸ್ಥಲಭೇದಾಸ್ತ್ವಯಾ ಪ್ರೋಕ್ತಾಃ ಶರಣಸ್ಥಲಸಂಶ್ರಿತಾಃ |
ಐಕ್ಯಸ್ಥಲಗತಾನ್ ಬ್ರೂಹಿ ಸ್ಥಲಭೇದಾನ್ ಗಣೇಂದ್ರ ಮೇ ||೧||

|| ಶ್ರೀರೇಣುಕ ಉವಾಚ ||

ಸ್ಥಲಾನಾಂ ನವಕಂ ಚೈಕ್ಯಸ್ಥಲೇಽಸ್ಮಿನ್ ಪರಿಕೀರ್ತ್ಯತೇ |
ತತ್ರಿಸ್ವೀಕೃತಪ್ರಸಾದಾಖ್ಯಸ್ಥಲಮಾದೌ ಪ್ರಕೀರ್ತಿತಂ ||೨||
ಶಿಷ್ಟೌದನಸ್ಥಲಂ ಚಾಥ ಚರಾಚರಲಯಸ್ಥಲಂ |
ಭಾಂಡಸ್ಥಲಂ ತತಃ ಪ್ರೋಕ್ತಂ ಭಾಜನಸ್ಥಲಮುತ್ತಮಂ ||೩||
ಅಂಗಾಲೇಪಸ್ಥಲಂ ಪಶ್ಚಾತ್ ಸ್ವಪರಾಜ್ಞಸ್ಥಲಂ ತತಃ |
ಭಾವಾಭಾವವಿನಾಶಂ ಚ ಜ್ಞಾನಶೂನ್ಯಸ್ಥಲಂ ತತಃ ||
ತದೇಷಾಂ ಕ್ರಮಶೋ ವಕ್ಷ್ಯೇ ಶೃಣು ತಾಪಸ ಲಕ್ಷಣಂ ||೪||

ಇಪ್ಪತ್ತನೆಯ ಪರಿಚ್ಛೇದ

ಐಕ್ಯಸ್ಥಲ

ವ್ಯಾಖ್ಯಾನ—ಎಲೈ, ಶ್ರೀಗಣಾಧೀಶ್ವರನೇ ! ಶರಣಸ್ಥಲವನ್ನು ಸಂಬಂಧಿಸಿದ ಸ್ಥಲಭೇದಗಳು ನಿನ್ನಿಂದ ಉಪದೇಶಿಸಲ್ಪಟ್ಟವು ; ಇನ್ನು ಐಕ್ಯಸ್ಥಲವನ್ನು ಸಂಬಂಧಿಸಿದ ಸ್ಥಲಭೇದಗಳನ್ನು ಉಪದೇಶಿಸು ; ಎಂದು ಅಗಸ್ತ್ಯಮಹರ್ಷಿಯು ಪ್ರಶ್ನಮಾಡಲು— ಅದಕ್ಕೆ ಶ್ರೀರೇಣುಕಾಚಾರ್ಯರು, ಐಕ್ಯಸ್ಥಲದಲ್ಲಿ—ಸ್ವೀಕೃತಪ್ರಸಾದಸ್ಥಲ, ಶಿಷ್ಟೌದನಸ್ಥಲ, ಚರಾಚರಲಯಸ್ಥಲ, ಭಾಂಡಸ್ಥಲ, ಭಾಜನಸ್ಥಲ, ಅಂಗಾಲೇಪಸ್ಥಲ, ಸ್ವಪರಾಜ್ಞಸ್ಥಲ, ಭಾವಾಭಾವಲಯಸ್ಥಲ, ಜ್ಞಾನಶೂನ್ಯಸ್ಥಲಗಳೆಂಬ ಒಂಭತ್ತು ಸ್ಥಲಗಳಿರುವುವೆಂದೂ, ಅನುಕ್ರಮವಾಗಿ ಅವುಗಳ ಲಕ್ಷಣವನ್ನು ಉಪದೇಶಿಸುವೆನು, ಕೇಳೆಂದೂ ಅಪ್ಪಣೆಕೊಡಿಸಿದರು. ||೧-೨-೩-೪||

೪೯ ಸ್ವೀಕೃತಪ್ರಸಾದಸ್ಥಲಂ

ಮಾತೃಮೇಯಪ್ರಮಾಣಾದಿವ್ಯವಹಾರವಿಹಾರಿಣೀಂ ।
ಸಂವಿತ್ಸಾಕ್ಷಾತ್ಕೃತಿಂ ಲಬ್ಧ್ವಾ ಯೋಗೀ ಸ್ವಾತ್ಮನಿ ತಿಷ್ಠತಿ ॥೫॥

ಅದ್ವೈತಬೋಧನಿರ್ಧೂತಭೇದಾವೇಶಸ್ಯ ಯೋಗಿನಃ ।
ಸಾಕ್ಷಾತ್ಕೃತಮಹಾಸಂವಿತ್ಪ್ರಕಾಶಸ್ಯ ಕ್ವ ಬಂಧನಂ ॥೬॥

ಚಿದಾತ್ಮನಿ ಶಿವೇ ನ್ಯಸ್ತಂ ಜಗದೇತಚ್ಚರಾಚರಂ ।
ದೃಶ್ಯತೇ ತನ್ಮಯಂ ಸರ್ವಮಗ್ನೌ ಕಾಷ್ಠಾದಿಕಂ ಯಥಾ ॥೭॥

ನ ಭಾತಿ ಪೃಥ್ವೀ ನ ಜಲಂ ನ ತೇಜೋ ನೈವ ಮಾರುತಃ ।
ನಾಕಾಶೋ ನಾಪರಂ ತತ್ತ್ವಂ ಶಿವೇ ದೃಷ್ಟೇ ಚಿದಾತ್ಮನಿ ॥೮॥

ಜ್ಯೋತಿರ್ಲಿಂಗೇ ಚಿದಾಕಾರೇ ಜ್ವಲತ್ಯಂತರ್ನಿರಂತರಂ ।
ವಿಲೀನಂ ನಿಖಿಲಂ ತತ್ತ್ವಂ ಪಶ್ಯನ್ ಯೋಗೀ ನ ಲಿಪ್ಯತೇ ॥೯॥

---

೪೯ ಸ್ವೀಕೃತಪ್ರಸಾದಸ್ಥಲ

ಶಿವಯೋಗಿಯು ಪ್ರಮಾತೃ-ಪ್ರಮಾಣ-ಪ್ರಮೇಯಾದಿವ್ಯವಹಾರವನ್ನು ಲಯಗೊಳಿಸುವ ಬ್ರಹ್ಮಸಾಕ್ಷಾತ್ಕಾರವನ್ನು ಹೊಂದಿ ಸ್ವಸ್ವರೂಪದಲ್ಲಿರುವನು. ॥೫॥ ಶಿವಾದ್ವೈತಜ್ಞಾನದಿಂದ ಹೋಗಲಾಡಿಸಲ್ಪಟ್ಟ ಅಂಗಲಿಂಗರೂಪಜೀವೇಶ್ವರಭೇದಾಭಿನಿವೇಶವುಳ್ಳವನೂ, ಪೂರ್ಣಜ್ಞಾನಪ್ರಕಾಶವನ್ನು ಸಾಕ್ಷಾತ್ಕರಿಸಿಕೊಂಡವನೂ ಆದ ಶಿವಯೋಗಿಗೆ ಸಂಸಾರಬಂಧನವೆಲ್ಲಿಯದು? ॥೬॥ ಅಗ್ನಿಯಲ್ಲಿ ಹಾಕಿದ ಕಟ್ಟಿಗೆ ಮೊದಲಾದವುಗಳು ಹೇಗೆ ಅಗ್ನಿರೂಪವಾಗಿ ತೋರುವವೋ, ಹಾಗೆಯೇ ಜ್ಞಾನಸ್ವರೂಪನಾದ ಶಿವನಲ್ಲಿ ಸ್ಥಾಪಿತವಾದೀ ಚರಾಚರಾತ್ಮಕಜಗತ್ತು ಶಿವಸ್ವರೂಪವಾಗಿ ತೋರುವುದು. ॥೭॥ ಚಿತ್ಸ್ವರೂಪನಾದ ಶಿವನು ತೋರಲಾಗಿ, ಪೃಥ್ವೀತತ್ತ್ವವಾಗಲಿ, ಜಲತತ್ತ್ವವಾಗಲಿ, ತೇಜಸ್ತತ್ತ್ವವಾಗಲಿ, ವಾಯುತತ್ತ್ವವಾಗಲಿ, ಆಕಾಶತತ್ತ್ವವಾಗಲಿ ಅಥವಾ ಬೇರೊಂದು ಯಾವ ತತ್ತ್ವವಾಗಲಿ ತೋರುವುದಿಲ್ಲ. ಸಮಸ್ತತತ್ತ್ವಗಳೂ ಪರಶಿವನಿಂದಲೇ ಆವಿರ್ಭವಿಸಿರುವುದರಿಂದ, ಸರ್ವವೂ ಶಿವಸ್ವರೂಪವಾಗಿಯೇ ತೋರುವುವೆಂದು ಭಾವವು. ॥೮॥ ಜ್ಞಾನಸ್ವರೂಪವಾದುದೂ, ಯಾವಾಗಲೂ ಹೃದಯಕಮಲದಲ್ಲಿ ಪ್ರಕಾಶಿಸುತ್ತಿರುವುದೂ ಆದ ಮಹಾಲಿಂಗದಲ್ಲಿ ಸೂಕ್ಷ್ಮರೂಪದಿಂದ ಅಡಗಿರುವ ಪೃಥಿವ್ಯಾದಿಸಮಸ್ತತತ್ತ್ವಗಳನ್ನು ನೋಡುತ್ತಿರುವ ಶಿವಯೋಗಿಯು, ಸಂಸಾರದಿಂದ ಲಿಪ್ತನಾಗುವುದಿಲ್ಲ. ॥೯॥

ಅಂತರ್ಮುಖೇನ ಮನಸಾ ಸ್ವಾತ್ಮಜ್ಯೋತಿಷಿ ಚಿನ್ಮಯೇ ।
ಸರ್ವಾನಪ್ಯರ್ಥವಿಷಯಾನ್ ಜುಹ್ವದ್ಯೋಗೀ ಪ್ರಮೋದತೇ ॥೧೦॥
ಸಚ್ಚಿದಾನಂದಜಲಧೌ ಶಿವೇ ಸ್ವಾತ್ಮನಿ ನಿರ್ಮಲಃ ।
ಸಮರ್ಪ್ಯ ಸಕಲಾನ್ ಭುಂಕ್ತೇ ವಿಷಯಾಂಸ್ತತ್ಪ್ರಸಾದತಃ ॥೧೧॥

೫೦ ಶಿಷ್ಟೌದನಸ್ಥಲಂ

ಪ್ರಕಾಶತೇ ಯಾ ಸರ್ವೇಷಾಂ ಮಾಯಾ ಸೈವೌದನಾಕೃತಿಃ ।
ಲೀಯತೇ ಯತ್ರ ಚಿಲ್ಲಿಂಗೇ ಶಿಷ್ಟಂ ತತ್ಪರಿಕೀರ್ತಿತಂ ॥೧೨॥
ಜಗತ್ಯಸ್ಮಿನ್ ಪರಿಗ್ರಸ್ತೇ ಮಾಯಾಪಾಶವಿಜೃಂಭಿತೇ ।
ಸ್ವಾತ್ಮಜ್ಯೋತಿಷಿ ಬೋಧೇನ ತದೇಕಮವಶಿಷ್ಯತೇ ॥೧೩॥
ಅಖಂಡಸಚ್ಚಿದಾನಂದಪರಬ್ರಹ್ಮಸ್ವರೂಪಿಣಃ ।
ಜೀವನ್ಮುಕ್ತಸ್ಯ ಧೀರಸ್ಯ ಮಾಯಾ ಕೈಂಕರ್ಯವಾದಿನೀ ॥೧೪॥

ಶಿವಯೋಗಿಯು ಅಂತರ್ಮುಖವಾದ ಮನಸ್ಸಿನಿಂದ ಜ್ಞಾನರೂಪವಾದ ಸ್ವಸ್ವರೂಪಾಗ್ನಿಯಲ್ಲಿ ಸಮಸ್ತವಿಷಯಗಳನ್ನು ಹವನಮಾಡುವವನಾಗಿ ಸಂತೋಷ ಪಡುವನು. ಶಿವಯೋಗಿಯು ವಿಷಯಸುಖವನ್ನು ದೂರೀಕರಿಸಿ ಅಂತರ್ಮುಖನಾಗಿ ಮಹಾನಂದದಿಂದಿರುವನೆಂದುಭಾವವು. ॥೧೦॥ ಆಣವಾದಿಮಲತ್ರಯದೂರನಾದ ಶಿವಯೋಗಿಯು ಸತ್-ಚಿತ್-ಆನಂದಗಳಿಗೆ ಸಮುದ್ರಸ್ವರೂಪನಾಗಿರುವವನೂ, ಸ್ವಪ್ರಕಾಶರೂಪನೂ ಆಗಿರುವ ಶಿವನಲ್ಲಿ ಶಬ್ದಾದಿಸಕಲವಿಷಯಗಳನ್ನು ಸಮರ್ಪಿಸಿ, ಪರಿಶುದ್ಧವಾದ ಅವುಗಳನ್ನು ಶಿವಪ್ರಸಾದರೂಪದಿಂದ ಉಪಭೋಗಿಸುವನು. ॥೧೧॥

೫೦ ಶಿಷ್ಟೌದನಸ್ಥಲ

ಸರ್ವರಲ್ಲಿಯೂ ಯಾವ ಮಾಯೆಯು ಪ್ರಕಾಶಿಸುತ್ತದೆಯೋ, ಆ ಮಾಯೆಯೇ ಓದನಸ್ವರೂಪವಾಗಿರುವುದು. ಇಂತಹ ಓದನರೂಪವಾದ ಮಾಯೆಯು ಯಾವ ಚಿಚ್ಛಕ್ತಿವಿಶಿಷ್ಟಮಹಾಲಿಂಗಸ್ವರೂಪದಲ್ಲಿ ಅಡಗುವುದೋ, ಆ ಮಹಾಲಿಂಗಸ್ವರೂಪವೇ ಶಿಷ್ಟೌದನವೆನಿಸುವುದು. ॥೧೨॥ ಮಾಯಾಪಾಶಬದ್ಧವಾದ ಈ ಜಗತ್ತು ಜ್ಞಾನದಿಂದ ಆಕ್ರಾಂತವಾಗಲಾಗಿ, ಸ್ವಸ್ವರೂಪಪ್ರಕಾಶದಲ್ಲಿ ಆ ಮಾಯಾತತ್ತ್ವವೊಂದೇ ಉಳಿಯುವುದು. ॥೧೩॥ ಅಖಂಡಸಚ್ಚಿದಾನಂದರೂಪಪರಬ್ರಹ್ಮಸ್ವರೂಪನೂ, ಜಿತೇಂದ್ರಿಯನೂ, ಜೀವನ್ಮುಕ್ತನೂ ಆದ ಶಿವಯೋಗಿಯ ವಿಷಯದಲ್ಲಿ ಮಾಯೆಯು ದಾಸೀಭಾವವನ್ನು ವಹಿಸುವುದು. ॥೧೪॥

ವಿಶ್ವಸಂಮೋಹಿನೀ ಮಾಯಾ ಬಹುಶಕ್ತಿರ್ನಿರಂಕುಶಾ ।
ಶಿವೈಕತ್ವಮುಪೇತಸ್ಯ ನ ಪುರಃ ಸ್ಥಾತುಮಿಹತೇ ॥೧೫॥

ಜ್ಯೋತಿರ್ಲಿಂಗೇ ಚಿದಾಕಾರೇ ನಿಮಗ್ನೇನ ಮಹಾತ್ಮನಾ ।
ಭುಜ್ಯಮಾನಾ ಯಥಾಯೋಗಂ ನಶ್ಯಂತಿ ವಿಷಯಾಃ ಸ್ವತಃ ॥೧೬॥

ಶಬ್ದಾದಯೋಽಪಿ ವಿಷಯಾ ಭುಜ್ಯಮಾನಾಸ್ತದಿಂದ್ರಿಯೈಃ ।
ಆತ್ಮನ್ಯೇವ ವಿಲೀಯಂತೇ ಸರಿತಃ ಸಾಗರೇ ಯಥಾ ॥೧೭॥

ಅರ್ಥಜಾತಮಶೇಷಂ ತು ಗ್ರಸನ್ ಯೋಗೀ ಪ್ರಶಾಮ್ಯತಿ ।
ಸ್ವಾತ್ಮನೀವ ಸ್ಥಿತಂ ಭಾನುಸ್ತೇಜೋಜಾಲಮಶೇಷತಃ ॥೧೮॥

೫೧ ಚರಾಚರಲಯಸ್ಥಲಂ

ಲಿಂಗೈಕ್ಯೇ ತು ಸಮಾಪನ್ನೇ ಚರಾಚರಜಗಲ್ಲಯೇ ।
ನಿರ್ದೇಹೀ ಚ ಭವೇದ್ಯೋಗೀ ಚರಾಚರವಿನಾಶಕಃ ॥೧೯॥

ಜಗನ್ಮೋಹಕಾರಕವಾದುದೂ, ನಾನಾವಿಧಶಕ್ತಿಯುಳ್ಳುದೂ, ಪ್ರತಿಬಂಧ ರಹಿತವಾದುದೂ ಆದ ಮಾಯೆಯು, ಶಿವನಲ್ಲಿ ಸಾಮರಸ್ಯವನ್ನು ಹೊಂದಿದ ಶಿವಯೋಗಿಯ ಮುಂದೆ ನಿಲ್ಲಲು ಸಮರ್ಥವಾಗುವುದಿಲ್ಲ. ॥೧೫॥ ಜ್ಞಾನಸ್ವರೂಪವಾದ ಜ್ಯೋತಿರ್ಲಿಂಗದಲ್ಲಿ ಲೀನನಾದ ಶಿವಯೋಗಿಯಿಂದ ಲಬ್ಧಕ್ರಮದಲ್ಲಿ ಉಪಭೋಗಿಸಲ್ಪಡುವ ವಿಷಯಗಳು, ತಾವೇ ನಷ್ಟವಾಗುವುವು. ॥೧೬॥ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳೆಂಬ ವಿಷಯಗಳು, ಶ್ರೋತ್ರ-ತ್ವಕ್-ನೇತ್ರ-ಜಿಹ್ವಾ-ಘ್ರಾಣೇಂದ್ರಿಯಗಳಿಂದ ಉಪಭೋಗಿಸಲ್ಪಟ್ಟರೂ, ನದಿಗಳು ಸಮುದ್ರದಲ್ಲಿ ಅಡಗುವಂತೆ, (ಕೊನೆಗೆ) ಆತ್ಮಸ್ವರೂಪದಲ್ಲಿಯೇ ಅಡಗುವುವು. ॥೧೭॥ ಅಸ್ತಸಮಯದಲ್ಲಿ ಕಿರಣಸಮೂಹವನ್ನು ನಿಶ್ಶೇಷವಾಗಿ ತನ್ನಲ್ಲಿಯೇ ಅಡಗಿಸಿಕೊಳ್ಳುವ ಸೂರ್ಯನಂತೆ, ಶಿವಯೋಗಿಯು ಸಮಸ್ತವಿಷಯ ಸಮೂಹವನ್ನು ತನ್ನಲ್ಲಿಯೇ ಅಡಗಿಸಿಕೊಳ್ಳುವವನಾಗಿ ಶಾಂತನಾಗುವನು. ॥೧೮॥

೫೧ ಚರಾಚರಲಯಸ್ಥಲ

ಶಿವನಲ್ಲಿ ಸಾಮರಸ್ಯವನ್ನು ಹೊಂದಿದ ಶಿವಯೋಗಿಯಲ್ಲಿ ಚರಾಚರಪ್ರಪಂಚದ ಲಯವು ಪ್ರಾಪ್ತವಾಗಲು, ಆ ಶಿವಯೋಗಿಯು ವಿದೇಹಿಯಾಗಿ ಚರಾಚರಪ್ರಪಂಚ ವಿನಾಶಕನಾಗುವನು. ಇದೇ ಚರಾಚರಲಯಸ್ಥಲವೆನಿಸುವುದು. ॥೧೯॥

ಯಥಾ ಮೇಘಾಃ ಸಮುದ್ಭೂತಾ ವಿಲೀಯಂತೇ ನಭಸ್ಸ್ಥಲೇ ।
ತಥಾಽಽತ್ಮನಿ ವಿಲೀಯಂತೇ ವಿಷಯಾಃ ಸ್ವಾನುಭಾವಿನಃ ॥೨೦॥
ಜಾಗ್ರತ್ಸ್ವಪ್ನಸುಷುಪ್ತಿಭ್ಯಃ ಪರಾವಸ್ಥಾಮುಪೇಯುಷಃ ।
ಕಿಂ ವಾ ಪ್ರಮಾಣಂ ಕಿಂ ಜ್ಞೇಯಂ ಕಿಂ ವಾ ಜ್ಞಾನಸ್ಯ ಸಾಧನಂ ॥೨೧॥
ತುರ್ಯಾತೀತಪದಂ ಯತ್ತದ್ದೂರಂ ವಾಙ್ಮನಸಾಧ್ವನಃ ।
ಅನುಪ್ರವಿಶ್ಯ ತದ್ಯೋಗೀ ನ ಭೂಯೋ ವಿಶ್ವಮೀಕ್ಷತೇ ॥೨೨॥
ನಾನ್ಯತ್ಪಶ್ಯತಿ ಯೋಗೀಂದ್ರೋ ನಾನ್ಯಜ್ಜಾನಾತಿ ಕಿಂಚನ ।
ನಾನ್ಯಚ್ಛೃಣೋತಿ ಸಂದೃಷ್ಟೇ ಚಿದಾನಂದಮಯೇ ಶಿವೇ ॥೨೩॥

೫೨ ಭಾಂಡಸ್ಥಲಂ

ಬ್ರಹ್ಮಾಂಡಶತಕೋಟೀನಾಂ ಸರ್ಗಸ್ಥಿತಿಲಯಾನ್ ಪ್ರತಿ ।
ಸ್ಥಾನಭೂತೋ ವಿಮರ್ಶೋಽಯಸ್ತದ್ಭಾಂಡಸ್ಥಲಮುಚ್ಯತೇ ॥೨೪॥

ಆಕಾಶದಲ್ಲಿ ಉತ್ಪನ್ನವಾದ ಮೇಘಗಳು ಅಲ್ಲಿಯೇ ಹೇಗೆ ಲಯವನ್ನು ಹೊಂದುವುವೋ, ಹಾಗೆಯೇ ಸ್ವಸ್ವರೂಪಾನುಭವಿಯಾದ ಶಿವಯೋಗಿಯ ಆತ್ಮನಲ್ಲಿ ಉತ್ಪನ್ನವಾದ ಶಬ್ದಾದಿವಿಷಯಗಳು ಅಲ್ಲಿಯೇ ಲಯವನ್ನು ಹೊಂದುವುವು. ॥೨೦॥ ಜಾಗ್ರತ್-ಸ್ವಪ್ನ-ಸುಷುಪ್ತಿಗಳೆಂಬ ಮೂರು ಅವಸ್ಥೆಗಳಿಗಿಂತಲೂ ಶ್ರೇಷ್ಠವಾಗಿರುವ ತುರ್ಯಾವಸ್ಥೆಯನ್ನು ಹೊಂದಿದ ಶಿವಯೋಗಿಗೆ, ಪ್ರಮಾಣವೆಂದರೇನು? ಜ್ಞೇಯವೆಂದರೇನು? ಜ್ಞಾನದ ಸಾಧನವೆಂದರೇನು? ಇವು ಯಾವುವೂ ಇರುವುದಿಲ್ಲವೆಂದು ಭಾವವು. ॥೨೧॥ ಯಾವುದು ತುರ್ಯಾತೀತಸ್ಥಾನವೋ ಅದು ಸ್ತುತಿಧ್ಯಾನಗಳಿಗೆ ದೂರವಾಗಿರುವುದು. ಶಿವಯೋಗಿಯು ಅಂತಹ ಶ್ರೇಷ್ಠವಾದ ಸ್ಥಾನವನ್ನು ಪ್ರವೇಶಿಸಿ, ಪುನಃ ಪ್ರಪಂಚವನ್ನು ನೋಡುವುದಿಲ್ಲ. ॥೨೨॥ ಚಿದಾನಂದಸ್ವರೂಪನಾದ ಶಿವನು ಪ್ರತ್ಯಕ್ಷನಾಗಲು, ಶಿವಯೋಗೀಶ್ವರನು ತನಗೆ ಅನ್ಯವಾಗಿರುವ ಸ್ವರೂಪವನ್ನು ನೋಡುವುದಿಲ್ಲ; ತನಗೆ ಅನ್ಯವಾಗಿರುವ ವಸ್ತುವನ್ನು ತಿಳಿಯುವುದಿಲ್ಲ ; ತನಗೆ ಅನ್ಯವಾಗಿರುವ ವಿಷಯವನ್ನು ಕೇಳುವುದಿಲ್ಲ. ಸ್ವಸ್ವರೂಪವನ್ನು ಬಿಟ್ಟು ಇನ್ನಾವುದನ್ನೂ ಭಾವಿಸುವುದಿಲ್ಲವೆಂದು ಭಾವವು. ॥೨೩॥

೫೨ ಭಾಂಡಸ್ಥಲ

ಅನಂತಕೋಟಿಬ್ರಹ್ಮಾಂಡಗಳ ಸೃಷ್ಟಿಸ್ಥಿತಿಲಯಗಳಿಗೆ ಆಧಾರಭೂತವಾದ ಯಾವ ವಿಮರ್ಶಶಕ್ತಿರೂಪಜ್ಞಾನವಿಶೇಷ (ವಿಶ್ವಾತ್ಮಕನಾದ ಶಿವನೇ ನಾನೆಂಬ ಜ್ಞಾನವಿಶೇಷ) ವುಂಟೋ, ಅದೇ ಭಾಂಡಸ್ಥಲವೆಂದು ಹೇಳಿಸಿಕೊಳ್ಳುವುದು. ॥೨೪॥

ವಿಮರ್ಶಾಖ್ಯಾ ಪರಾಶಕ್ತಿರ್ವಿಶ್ವೋದ್ಭಾಸನಕಾರಿಣೀ ।
ಸಾಕ್ಷಿಣೀ ಸರ್ವತತ್ತ್ವಾನಾಂ ಸಮಿಂಧೇ ಸರ್ವತೋಮುಖೀ ॥೨೫॥
ವಿಶ್ವಂ ಯತ್ರ ಲಯಂ ಯಾತಿ ವಿಭಾತ್ಯಾತ್ಮಾ ಚಿದಾಕೃತಿಃ ।
ಸದಾನಂದಮಯಃ ಸಾಕ್ಷಾತ್ ಸಾ ವಿಮರ್ಶಮಯೀ ಕಲಾ ॥೨೬॥
ಪರಾಹಂತಾಸಮಾವೇಶಪರಿಪೂರ್ಣವಿಮರ್ಶವಾನ್ ।
ಸರ್ವಜ್ಞಃ ಸರ್ವಗಃ ಸಾಕ್ಷೀ ಸರ್ವಕರ್ತಾ ಮಹೇಶ್ವರಃ ॥೨೭॥
ವಿಶ್ವಾಧಾರಂ ಮಹಾಸಂವಿತ್ಪ್ರಕಾಶಪರಿಪೂರಿತಂ ।
ಪರಾಹಂತಾಮಯಂ ಪ್ರಾಹುರ್ವಿಮರ್ಶಂ ಪರಮಾತ್ಮನಃ ॥೨೮॥
ವಿಮರ್ಶಭಾಂಡವಿನ್ಯಸ್ತವಿಶ್ವತತ್ತ್ವವಿಜೃಂಭಣಃ ।
ಅನನ್ಯಮುಖಸಂಪ್ರೇಕ್ಷೀ ಮುಕ್ತಃ ಸ್ವಾತ್ಮನಿ ತಿಷ್ಠತಿ ॥೨೯॥

ವಿಮರ್ಶನಾಮಕಪರಾಶಕ್ತಿಯು, ಸಮಸ್ತತತ್ತ್ವಗಳಿಗೆ ಸಾಕ್ಷಿಭೂತವಾಗಿಯೂ, ವಿಶ್ವವನ್ನು ಪ್ರಕಾಶಪಡಿಸುವಂಥದಾಗಿಯೂ ಇದ್ದು, ಸರ್ವತೋಮುಖವಾಗಿ ಪ್ರಕಾಶಿಸುತ್ತಿರುವುದು. ॥೨೫॥ ಚರಾಚರಾತ್ಮಕವಾದ ಜಗತ್ತು ಯಾವುದರಲ್ಲಿ ಅಡಗುವುಮೋ, ಸಚ್ಚಿದಾನಂದಸ್ವರೂಪನಾದ ಪರಮಾತ್ಮನು ಯಾವುದರಲ್ಲಿ ಪ್ರತ್ಯಕ್ಷವಾಗಿ ಪ್ರಕಾಶಿಸುತ್ತಿರುವನೋ, ಅದೇ ವಿಮರ್ಶಶಕ್ತಿಯೆನಿಸುವುದು. ॥೨೬॥ ಶಿವಯೋಗಿಯು ಶಿವೋಹಂರೂಪಪರಾಹಂತೆಯ ಆಕ್ರಮಣದಿಂದ ವಿಮರ್ಶಶಕ್ತಿವಿಕಾಸವುಳ್ಳವನಾಗಿ, ಸರ್ವಜ್ಞನೂ, ಸರ್ವಕರ್ತನೂ, ಸರ್ವವ್ಯಾಪಕನೂ, ಸರ್ವಸಾಕ್ಷಿಭೂತನೂ, ಮಹೇಶ್ವರನೂ ಆಗುವನು. ॥೨೭॥ ಜಗದಾಧಾರಭೂತವೂ, ಮಹಾಜ್ಞಾನಪ್ರಕಾಶಪೂರ್ಣವೂ ಆದ ಪರಮಾತ್ಮನ ವಿಮರ್ಶನಾಮಕಜ್ಞಾನವಿಶೇಷವನ್ನು, ಜ್ಞಾನಿಗಳು ಪರಾಹಂತಾಸ್ವರೂಪವನ್ನಾಗಿ ಹೇಳುವರು. "ಓಂ ದೇವಾ ಹ ವೈ ಸ್ವರ್ಗಂ ಲೋಕಮಾಯಂಸ್ತೇ ರುದ್ರಮಪೃಚ್ಛನ್ ಕೋ ಭವಾನಿತಿ । ಸೋಽಬ್ರವೀದಹಮೇಕಃ ಪ್ರಥಮಮಾಸಂ ವರ್ತಾಮಿ ಚ ಭವಿಷ್ಯಾಮಿ ಚ ನಾನ್ಯಃ ಕಶ್ಚಿನ್ಮತ್ತೋ ವ್ಯತಿರಿಕ್ತ ಇತಿ ॥" ಇತ್ಯಾದಿವಾಕ್ಯಗಳಿಂದ ಅಥರ್ವಶಿರಶ್ಶ್ರುತಿಯೇ ಮೊದಲಾದ ಅನಂತಶ್ರುತಿಗಳು ಪರಬ್ರಹ್ಮವು "ಅಹಂ" ಪದವಾಚ್ಯವಾಗಿರುವುದೆಂದು ಬೋಧಿಸುತ್ತಿರುವುವು. ಅಹಂಪದವಾಚ್ಯವಾದ ಪರಬ್ರಹ್ಮದ ಅಸಾಧಾರಣಧರ್ಮವೇ ಪರಾಹಂತೆಯೆನಿಸುವುದು. ॥೨೮॥ ವಿಮರ್ಶಶಕ್ತಿರೂಪಜ್ಞಾನವಿಶೇಷವೆಂಬ ಪಾತ್ರೆಯಲ್ಲಿ ಸಮಸ್ತತತ್ತ್ವಗಳನ್ನಿಟ್ಟು ಆನಂದಿಸುತ್ತಿರುವ ಜೀವನ್ಮುಕ್ತನು, ತನ್ನಸ್ವರೂಪಕ್ಕೆ ಹೊರತಾದ ಬೇರೊಂದು ಸ್ವರೂಪವನ್ನು ನೋಡದವನಾಗಿ ಸ್ವಸ್ವರೂಪದಲ್ಲಿರುವನು. ॥೨೯॥

೫೩ ಭಾಜನಸ್ಥಲಂ

ಸಮಸ್ತಜಗದಂಡಾನಾಂ ಸರ್ಗಸ್ಥಿತ್ಯಂತಕಾರಣಂ ।
ವಿಮರ್ಶೋಽಭಾಸತೇ ಯತ್ರ ತದ್ಭಾಜನಮಿಹೋಚ್ಯತೇ ॥೩೦॥

ವಿಮರ್ಶಾಖ್ಯಾ ಪರಾಶಕ್ತಿರ್ವಿಶ್ವವೈಚಿತ್ರ್ಯಕಾರಿಣೀ ।
ಯಸ್ಮಿನ್ ಪ್ರತಿಷ್ಠಿತಾ ಬ್ರಹ್ಮ ತದಿದಂ ವಿಶ್ವಭಾಜನಂ ॥೩೧॥

ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತುಪ್ರಕಾಶಿನೀ ।
ತಥಾ ಶಕ್ತಿರ್ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿ ಸ್ಥಿರಾ ॥೩೨॥

ವೃಕ್ಷಸ್ಥಂ ಪತ್ರಪುಷ್ಪಾದಿ ವಟಬೀಜಸ್ಥಿತಂ ಯಥಾ ।
ತಥಾ ಹೃದಯಬೀಜಸ್ಥಂ ವಿಶ್ವಮೇತತ್ಪರಾತ್ಮನಃ ॥೩೩॥

---

೫೩ ಭಾಜನಸ್ಥಲ

ಸಮಸ್ತಭುವನಾಂಡಗಳ ಸೃಷ್ಟಿಸ್ಥಿತಿಲಯಗಳಿಗೆ ಕಾರಣೀಭೂತವಾದ ವಿಮರ್ಶ ಶಕ್ತಿರೂಪಜ್ಞಾನವಿಶೇಷವು ಯಾವ ಪರಶಿವಬ್ರಹ್ಮದಲ್ಲಿ ಪ್ರಕಾಶಿಸುತ್ತಿರುವುದೋ, ಆ ಪರಶಿವಬ್ರಹ್ಮವೇ ಭಾಜನವೆಂದು ಹೇಳಿಸಿಕೊಳ್ಳುವುದು. ॥೩೦॥ ಚಿತ್ರವಿಚಿತ್ರವಾದ ವಿಶ್ವಸೃಷ್ಟಿಯನ್ನುಂಟುಮಾಡುವ ವಿಮರ್ಶನಾಮಕವಾದ ಪರಾಶಕ್ತಿಯು ಯಾವುದರಲ್ಲಿ ಅವಿನಾಭಾವಸಂಬಂಧದಿಂದ ಪ್ರತಿಷ್ಠಿತವಾಗಿರುವುದೋ, ಆ ಬ್ರಹ್ಮವೇ ವಿಶ್ವಭಾಜನ ವೆನಿಸುವುದು. ॥೩೧॥ ಸಮಸ್ತ ವಸ್ತುಗಳನ್ನು ಪ್ರಕಾಶಪಡಿಸುವ ಚಂದ್ರಿಕೆಯು ಚಂದ್ರನಲ್ಲಿ ಹೇಗೆ ಸ್ಥಿರವಾಗಿರುವುದೋ, ಹಾಗೆಯೇ ವಿಮರ್ಶನಾಮಕವಾದ ಶಕ್ತಿಯು ಪ್ರಕಾಶಸ್ವರೂಪವಾದ ಪರಶಿವಬ್ರಹ್ಮದಲ್ಲಿ ಸ್ಥಿರವಾಗಿರುವುದು. ಚಂದ್ರನನ್ನು ಬಿಟ್ಟು ಚಂದ್ರಿಕೆಯೂ ಚಂದ್ರಿಕೆಯನ್ನು ಬಿಟ್ಟು ಚಂದ್ರನೂ ಹೇಗೆ ಇರುವುದಿಲ್ಲವೋ, ಹಾಗೆಯೇ ಶಿವನನ್ನು ಬಿಟ್ಟು ಶಕ್ತಿಯೂ ಶಕ್ತಿಯನ್ನು ಬಿಟ್ಟು ಶಿವನೂ ಇರುವುದಿಲ್ಲವೆಂದೂ, ಶಕ್ತಿಯು ಶಿವನಲ್ಲಿ ಅವಿನಾಭಾವಸಂಬಂಧದಿಂದ ಸ್ಥಿರವಾಗಿರುವುದೆಂದೂ ಭಾವವು. ॥೩೨॥ ಅತಿ ವಿಶಾಲವಾದ ಆಲದಮರದಲ್ಲಿರುವ ಎಲೆ, ಹೂ ಮೊದಲಾದವುಗಳು ಆಲದಬೀಜದಲ್ಲಿ ಹೇಗೆ ಸೂಕ್ಷ್ಮರೂಪದಿಂದಿರುವುವೋ, ಹಾಗೆಯೇ ಚರಾಚರಾತ್ಮಕವಾದೀ ಸಮಸ್ತ ಪ್ರಪಂಚವು ಪರಮಾತ್ಮನ ಹೃದಯ (ವಿಮರ್ಶಶಕ್ತಿ) ರೂಪಬೀಜದಲ್ಲಿ ಸೂಕ್ಷ್ಮರೂಪ ದಿಂದಿರುವುದು. ಇಂದ್ರಿಯಗೋಚರವಾದ ಸ್ಥೂಲಪ್ರಪಂಚವು ಲಯಿಸಿದಂತಾದರೂ, ಅದು ಪರಮೇಶ್ವರನಲ್ಲಿ ಅತಿಸೂಕ್ಷ್ಮರೂಪದಿಂದಿರುವುದರಿಂದ, ಅದ್ವೈತಿಗಳು ಹೇಳು ವಂತೆ ಈ ಪ್ರಪಂಚವು ಮಿಥ್ಯೆಯಾಗಿರದೆ, ಸತ್ಯವಾಗಿರುವುದೆಂದು ಭಾವವು. ॥೩೩॥

ಅಕಾರಃ ಶಿವ ಆಖ್ಯಾತೋ ಹಂಕಾರಃ ಶಕ್ತಿರುಚ್ಯತೇ ।
ಶಿವಶಕ್ತಿಮಯಂ ಬ್ರಹ್ಮ ಸ್ಥಿತಮೇಕಮಹಂಪದೇ ॥೩೪॥

ಅಹಂತಾಂ ಪರಮಾಂ ಪ್ರಾಪ್ಯ ಶಿವಶಕ್ತಿಮಯೀಂ ಸ್ಥಿರಾಂ ।
ಬ್ರಹ್ಮಭೂಯಂ ಗತೋ ಯೋಗೀ ವಿಶ್ವಾತ್ಮಾ ಪ್ರತಿಭಾಸತೇ ॥೩೫॥

ಅಂತಃಕರಣರೂಪೇಣ ಜಗದಂಕುರರೂಪತಃ ।
ಯಸ್ಮಿನ್ ವಿಭಾತಿ ಚಿಚ್ಛಕ್ತಿರ್ಬ್ರಹ್ಮಭೂತಃ ಸ ಉಚ್ಯತೇ ॥೩೬॥

೫೪ ಅಂಗಾಲೇಪಸ್ಥಲಂ

ದಿಕ್ಕಾಲಾದ್ಯನವಚ್ಛಿನ್ನಂ ಚಿದಾನಂದಮಯಂ ಮಹತ್ ।
ಯಸ್ಯ ರೂಪಮಿದಂ ಖ್ಯಾತಂ ಸೋಽಂಗಾಲೇಪ ಇಹೋಚ್ಯತೇ ॥೩೭॥

"ಅ"ಕಾರವು ಶಿವನೆಂದು ಹೇಳಿಸಿಕೊಳ್ಳುವುದು; "ಹಂ"ಕಾರವು ಶಕ್ತಿಯೆಂದು ಹೇಳಿಸಿಕೊಳ್ಳುವುದು. ಅಕಾರ-ಹಂಕಾರರೂಪಶಿವಶಕ್ತಿಸ್ವರೂಪವಾದ ಪರಬ್ರಹ್ಮವು "ಅಹಂ" ಎಂಬ ಪದದಲ್ಲಿ ನಿಂತಿರುವುದು. "ಅಹಂ" ಎಂದರೆ ಶಿವಶಕ್ತ್ಯಾತ್ಮಕ ಪರಬ್ರಹ್ಮವೆಂದು ಭಾವವು. ॥೩೪॥ ಪರಬ್ರಹ್ಮತ್ವವನ್ನು ಪಡೆದ ಶಿವಯೋಗಿಯು ಸರ್ವೋತ್ಕೃಷ್ಟವೂ, ನಿತ್ಯವೂ, ಶಿವಶಕ್ತ್ಯಾತ್ಮಕವೂ ಆದ ಅಹಂತೆಯನ್ನು ಹೊಂದಿ ಸಕಲಚರಾಚರಪ್ರಪಂಚಸ್ವರೂಪನಾಗಿ ಪ್ರಕಾಶಿಸುವನು. "ಸ್ಯಾದ್ಬ್ರಹ್ಮಭೂಯಂ ಬ್ರಹ್ಮತ್ವಂ ಬ್ರಹ್ಮಸಾಯುಜ್ಯಮಿತ್ಯಪಿ ॥" ಇತ್ಯಮರಃ ॥೩೫॥ ಚಿಚ್ಛಕ್ತಿಯು ಮೂಲಾಹಂಕಾರರೂಪದಿಂದಲೂ, ಸೂಕ್ಷ್ಮಜಗದ್ರೂಪದಿಂದಲೂ ಯಾವನಲ್ಲಿ ಪ್ರಕಾಶಿಸುತ್ತಿರುವುದೋ, ಆ ಶಿವಯೋಗಿಯೇ ಪರಬ್ರಹ್ಮಸ್ವರೂಪನೆಂದು ಹೇಳಿಸಿಕೊಳ್ಳುವನು. ಶಿವೈಕ್ಯನಾದ ಶಿವಯೋಗಿಯು ಪರಶಿವಬ್ರಹ್ಮದಂತೆ ಶಕ್ತಿವಿಕಾಸವುಳ್ಳವನಾಗುವನೆಂದು ಭಾವವು. ॥೩೬॥

೫೪ ಅಂಗಾಲೇಪಸ್ಥಲ

ಪರಬ್ರಹ್ಮತ್ವವನ್ನು ಪಡೆದ ಯಾವ ಶಿವಯೋಗಿಯ ಸ್ವರೂಪವು ದೇಶಕಾಲಾದಿ ಪರಿಚ್ಛೇದಶೂನ್ಯವಾಗಿಯೂ, ಚಿದಾನಂದಸ್ವರೂಪವಾಗಿಯೂ, ಮಹತ್ತ್ವವುಳ್ಳುದಾಗಿಯೂ ಆಗಿ ಪ್ರಸಿದ್ಧವಾಗಿರುವುದೋ, ಅವನು ಅಂಗಾಲೇಪ (ಶರೀರಸಂಬಂಧಕರ್ಮರಹಿತ) ನೆಂದು ಹೇಳಿಸಿಕೊಳ್ಳುವನು. ಇದೇ ಅಂಗಾಲೇಪಸ್ಥಲವೆನಿಸುವುದು. ॥೩೭॥

ಸಮಸ್ತಜಗದಾತ್ಮಾಽಪಿ ಸಂವಿದ್ರೂಪೋ ಮಹಾಮತಿಃ ।
ಲಿಪ್ಯತೇ ನೈವ ಸಂಸಾರೈರ್ಯಥಾ ಧೂಮಾದಿಭಿರ್ನಭಃ ॥೩೮॥

ನ ದೇವತ್ವಂ ನ ಮಾನುಷ್ಯಂ ನ ತಿರ್ಯಕ್ತ್ವಂ ನ ಚಾನ್ಯಥಾ ।
ಸರ್ವಾಕಾರತ್ವಮಾಖ್ಯಾತಂ ಜೀವನ್ಮುಕ್ತಸ್ಯ ಯೋಗಿನಃ ॥೩೯॥

ನ ವಿಧಿರ್ನನಿಷೇಧಶ್ಚ ನ ವಿಕಲ್ಪೋ ನ ವಾಸನಾ ।
ಕೇವಲಂ ಚಿತ್ಸ್ವರೂಪಸ್ಯ ಗಲಿತಪ್ರಾಕೃತಾತ್ಮನಃ ॥೪೦॥

ಅನಶ್ವರಮನಿರ್ದೇಶ್ಯಂ ಯಥಾ ವ್ಯೋಮ ಪ್ರಕಾಶತೇ ।
ತಥಾ ಬ್ರಹ್ಮಾಪಿ ಚೈತನ್ಯಮತ್ರ ವೈಶೇಷಿಕೀ ಕಲಾ ॥೪೧॥

ಘಟಾದಿಷು ಪೃಥಗ್ಭೂತಂ ಯಥಾಽಽಕಾಶಂ ನ ಭಿದ್ಯತೇ ।
ತಥೋಪಾಧಿಗತಂ ಬ್ರಹ್ಮ ನಾನಾರೂಪಂ ನ ಭಿದ್ಯತೇ ॥೪೨॥

ಆಕಾಶವು ಧೂಮಾದಿಗಳಿಂದ ಹೇಗೆ ಲಿಪ್ತವಾಗುವುದಿಲ್ಲವೋ, ಹಾಗೆಯೇ ಚಿತ್ಸ್ವರೂಪನಾದ ಶಿವಯೋಗಿಯು ಸಮಸ್ತಪ್ರಪಂಚಸ್ವರೂಪನಾದರೂ ಸಾಂಸಾರಿಕ ಕರ್ಮಫಲಗಳಿಂದ ಲಿಪ್ತನಾಗುವುದಿಲ್ಲ. ॥೩೮॥ ಜೀವನ್ಮುಕ್ತನಾದ ಶಿವಯೋಗಿಗೆ ಪುಣ್ಯಕರ್ಮಸಿದ್ಧವಾದ ದೇವತ್ವವೂ ಇರುವುದಿಲ್ಲ; ಪುಣ್ಯಪಾಪಮಿಶ್ರವಾದ ಮನುಷ್ಯತ್ವವೂ ಇರುವುದಿಲ್ಲ; ಪಾಪಮಯವಾದ ತಿರ್ಯಗ್ಜಾತಿತ್ವವೂ ಇರುವುದಿಲ್ಲ; ಇವುಗಳಿಗೆ ಬೇರೆಯಾದ ಇನ್ನಾವ ಸ್ವರೂಪವೂ ಇರುವುದಿಲ್ಲ. ಅವನಿಗೆ ವಿಶ್ವಾಕಾರತ್ವವು ಹೇಳಲ್ಪಟ್ಟಿರುವುದು. ॥೩೯॥ ಪ್ರಾಕೃತರೂಪದಿಂದ ದೂರನಾದವನೂ, ಕೇವಲ ಚಿತ್ಸ್ವರೂಪನೂ ಆಗಿರುವ ಶಿವಯೋಗಿಗೆ ವಿಧಿಯಾಗಲಿ, ನಿಷೇಧವಾಗಲಿ, ವಿಕಲ್ಪವಾಗಲಿ, ಸಂಸಾರವಾಸನೆಯಾಗಲಿ ಯಾವುದೂ ಇರುವುದಿಲ್ಲ. ॥೪೦॥ ಆಕಾಶವು ನಾಶರಹಿತವಾಗಿಯೂ ಅನಿರ್ದೇಶ್ಯವಾಗಿಯೂ ಹೇಗೆ ಪ್ರಕಾಶಿಸುತ್ತಿರುವುದೋ, ಹಾಗೆಯೇ ನಾಶರಹಿತವೂ ಅನಿರ್ದೇಶ್ಯವೂ ಆದ ಪರಬ್ರಹ್ಮವು ಪ್ರಕಾಶಿಸುತ್ತಿರುವುದು. ಜಡವಾದ ಭೂತಾಕಾಶಕ್ಕಿಂತಲೂ ಚಿದಾಕಾಶರೂಪವಾದ ಈ ಪರಬ್ರಹ್ಮದಲ್ಲಿ ಚೈತನ್ಯವೇ ವಿಶೇಷಕಲೆಯಾಗಿರುವುದು. ವೈಲಕ್ಷಣ್ಯದ್ಯೋತಕವಾಗಿರುವುದೆಂದು ಭಾವವು. ॥೪೧॥ ಆಕಾಶವು ಉಪಾಧಿಸಂಬಂಧದಿಂದ ಘಟಮಠಾದಿಗಳಲ್ಲಿ ಭಿನ್ನಭಿನ್ನವಾಗಿ ತೋರಿದರೂ, ನಿಜವಾಗಿಯೂ ಅದು ಹೇಗೆ ಭಿನ್ನವಾಗಿರುವುದಿಲ್ಲವೋ, ಹಾಗೆಯೇ ಪರಬ್ರಹ್ಮವು ಉಪಾಧಿಸಂಬಂಧದಿಂದ ದೇವದಾನವಮಾನವಾದಿನಾನಾರೂಪವಾಗಿ ತೋರಿದರೂ, ವಸ್ತುಸ್ಥಿತಿಯಲ್ಲಿ ಭಿನ್ನವಾಗಿರುವುದಿಲ್ಲ. ಒಂದೇಒಂದಾಗಿರುವುದೆಂದು ಭಾವವು. ॥೪೨॥

೫೫ ಸ್ವಪರಾಜ್ಞಸ್ಥಲಂ

ದಿಕ್ಕಾಲಾದ್ಯನವಚ್ಛಿನ್ನತೇಜೋರೂಪಸಮಾಶ್ರಯಾತ್ ।
ಸ್ವಪರಜ್ಞಾನವಿರಹಾತ್ ಸ್ವಪರಾಜ್ಞಸ್ಥಲಂ ವಿದುಃ ॥೪೩॥

ಅಪ್ರಮೇಯೇ ಚಿದಾಕಾರೇ ಬ್ರಹ್ಮಣ್ಯದ್ವೈತವೈಭವೇ ।
ವಿಲೀನಃ ಕಿಂ ನು ಜಾನಾತಿ ಸ್ವಾತ್ಮಾನಂ ಪರಮೇವ ವಾ ॥೪೪॥

ಯತ್ರ ನಾಸ್ತಿ ಭಿದಾ ಯೋಗಾದಹಂ ತ್ವಮಿತಿ ವಿಭ್ರಮಃ ।
ನ ಸಂಯೋಗೋ ವಿಯೋಗಶ್ಚ ನ ಜ್ಞೇಯಜ್ಞಾತೃಕಲ್ಪನಾ ॥೪೫॥

ನ ಬಂಧೋ ನ ಚ ಮುಕ್ತಿಶ್ಚ ನ ದೇವಾದ್ಯಭಿಮಾನಿತಾ ।
ನ ಸುಖಂ ನೈವ ದುಃಖಂ ಚ ನಾಜ್ಞಾನಂ ಜ್ಞಾನಮೇವ ವಾ ॥೪೬॥

ನೋತ್ಕೃಷ್ಟತ್ವಂ ನ ಹೀನತ್ವಂ ನೋಪರಿಷ್ಟಾನ್ನ ಚಾಪ್ಯಧಃ ।
ನ ಪಶ್ಚಾನ್ನೈವ ಪುರತೋ ನ ಬಾಹ್ಯಂ ಚ ನ ಚಾಂತರಂ ॥೪೭॥

---

೫೫ ಸ್ವಪರಾಜ್ಞಸ್ಥಲ

ಶಿವಯೋಗಿಯು ದೇಶಕಾಲಾದಿಪರಿಚ್ಛೇದಶೂನ್ಯವಾದ ಬ್ರಹ್ಮತೇಜಃಸ್ವರೂಪವನ್ನು ಆಶ್ರಯಿಸಿರುವುದರಿಂದಲೂ, ಸರ್ವವೂ ಚಿತ್ಸ್ವರೂಪವಾದುದರಿಂದ ತನ್ನ ಮತ್ತು ತನಗನ್ಯವಾದ ಪದಾರ್ಥದ ಜ್ಞಾನವಿಲ್ಲದವನಾಗಿರುವುದರಿಂದಲೂ, ಅವನು ಅನುಭವಿಸತಕ್ಕ ಈ ಸ್ಥಲವನ್ನು ಜ್ಞಾನಿಗಳು ಸ್ವಪರಾಜ್ಞಸ್ಥಲವೆಂದು ತಿಳಿಯುವರು. ॥೪೩॥ ಅಪ್ರಮೇಯವೂ, ಚಿತ್ಸ್ವರೂಪವೂ, "ಏಕಮೇವಾದ್ವಿತೀಯಂ" ಎಂಬ ಶ್ರುತಿವಾಕ್ಯಾಭಿಪ್ರಾಯಾನುಸಾರವಾಗಿ ಅದ್ವಿತೀಯವೈಭವಯುತವೂ ಆದ ಪರಬ್ರಹ್ಮದಲ್ಲಿ ಸಾಮರಸ್ಯವನ್ನು ಹೊಂದಿದ ಶಿವಯೋಗಿಯು, ತನ್ನನ್ನಾಗಲಿ ಅಥವಾ ತನಗೆ ಭಿನ್ನವಾದ ಪದಾರ್ಥವನ್ನಾಗಲಿ ತಿಳಿಯುವನೇನು ? ಯಾವುದನ್ನೂ ತಿಳಿಯುವುದಿಲ್ಲವೆಂದು ಭಾವವು. ॥೪೪॥ ಅದ್ವೈತವೈಭವವುಳ್ಳ ಯಾವ ವಸ್ತುವಿನಲ್ಲಿ ಸಾಮರಸ್ಯಯೋಗದಿಂದ ಜೀವಾತ್ಮನಿಗೆ ಭೇದವಿರುವುದಿಲ್ಲವೋ, ನಾನು-ನೀನೆಂಬ ಭ್ರಾಂತಿಯಾದರೂ ಇರುವುದಿಲ್ಲವೋ, ಸಂಯೋಗವಾಗಲಿ-ವಿಯೋಗವಾಗಲಿ, ಜ್ಞೇಯಕಲ್ಪನೆಯಾಗಲಿ-ಜ್ಞಾತೃಕಲ್ಪನೆಯಾಗಲಿ, ಬಂಧವಾಗಲಿ-ಮೋಕ್ಷವಾಗಲಿ, ನಾನು ದೇವನು-ನಾನು ಮನುಷ್ಯನು ಎಂಬ ಅಭಿಮಾನವಾಗಲಿ, ಸುಖವಾಗಲಿ-ದುಃಖವಾಗಲಿ, ಜ್ಞಾನವಾಗಲಿ-ಅಜ್ಞಾನವಾಗಲಿ, ನಾನು ಶ್ರೇಷ್ಠನು-ನಾನು ಕನಿಷ್ಠನು ಎಂಬ ಭಾವ

ಸರ್ವಾಕಾರೇ ಚಿದಾನಂದೇ ಸತ್ಯರೂಪಿಣಿ ಶಾಶ್ವತೇ ।
ಪರಾಕಾಶಮಯೇ ತಸ್ಮಿನ್ ಪರಬ್ರಹ್ಮಣಿ ನಿರ್ಮಲೇ ॥೪೮॥

ಏಕೀಭಾವಮುಪೇತಾನಾಂ ಯೋಗಿನಾಂ ಪರಮಾತ್ಮನಾಂ ।
ಪರಾಪರಪರಿಜ್ಞಾನಪರಿಹಾಸಕಥಾ ಕುತಃ ॥೪೯॥

೫೬ ಭಾವಾಭಾವಲಯಸ್ಥಲಂ

ಪ್ರತೀಯಮಾನೌ ವಿದ್ಯೇತೇ ಭಾವಾಭಾವೌ ನ ಕುತ್ರಚಿತ್ ।
ಲಿಂಗೈಕ್ಯೇ ಸತಿ ಯತ್ತಸ್ಮಾದ್ಭಾವಾಭಾವಲಯಸ್ಥಲಂ ॥೫೦॥

ಅಹಂಭಾವಸ್ಯ ಶೂನ್ಯತ್ವಾದಭಾವಸ್ಯ ತಥಾತ್ಮನಃ ।
ಭಾವಾಭಾವವಿನಿರ್ಮುಕ್ತೋ ಜೀವನ್ಮುಕ್ತಃ ಪ್ರಕಾಶತೇ ॥೫೧॥

ವಾಗಲಿ, ಊರ್ಧ್ವಭಾಗವಾಗಲಿ-ಅಧೋಭಾಗವಾಗಲಿ, ಪಶ್ಚಾದ್ಭಾಗವಾಗಲಿ-ಪುರೋಭಾಗವಾಗಲಿ, ಹೊರಭಾಗವಾಗಲಿ-ಒಳಭಾಗವಾಗಲಿ ಇರುವುದಿಲ್ಲವೋ, ಅಂತಹ ಚರಾಚರಪ್ರಪಂಚಸ್ವರೂಪವೂ, ಚಿತ್ಸ್ವರೂಪವೂ, ಆನಂದಸ್ವರೂಪವೂ, ಸತ್ಯಸ್ವರೂಪವೂ, ಶಾಶ್ವತವೂ, ನಿರ್ಮಲವೂ, ಪರಾಕಾಶಸ್ವರೂಪವೂ ಆದ ಪರಬ್ರಹ್ಮದಲ್ಲಿ ಸಾಮರಸ್ಯವನ್ನು ಹೊಂದಿ ಪರಬ್ರಹ್ಮಸ್ವರೂಪರಾದ ಶಿವಯೋಗಿಗಳಿಗೆ, ತಾವು ಮತ್ತು ತಮಗನ್ಯವಾದ ವಸ್ತುಗಳು ಎಂಬ ಪರಿಜ್ಞಾನದ ಪರಿಹಾಸಪ್ರಸಂಗವೆಲ್ಲಿಯದು? ಶಿವಯೋಗಿಗಳಿಗೆ ಸ್ವಪರಜ್ಞಾನವಿರುವುದೆಂದು ನುಡಿಯುವುದು ಕೇವಲ ಹಾಸ್ಯಾಸ್ಪದವಾಗಿರುವುದೆಂದು ಭಾವವು. ॥೪೫-೪೬-೪೭-೪೮-೪೯॥

೫೬ ಭಾವಾಭಾವಲಯಸ್ಥಲ

ಶಿವಯೋಗಿಯು ಶಿವನಲ್ಲಿ ಸಾಮರಸ್ಯವನ್ನು ಹೊಂದಲು, ಅವನಲ್ಲಿ ಸರ್ವರಲ್ಲಿಯೂ ಸಾಮಾನ್ಯವಾಗಿ ತೋರುತ್ತಿರುವ ನಾನು ಇದ್ದೇನೆಂಬ ಭಾವವಾಗಲಿ, ಇರುವುದಿಲ್ಲವೆಂಬ ಅಭಾವವಾಗಲಿ ಯಾವಕಾಲದಲ್ಲಿಯೂ ಇರುವುದಿಲ್ಲವಾದುದರಿಂದ, ಈ ಸ್ಥಲವು ಭಾವಾಭಾವಲಯಸ್ಥಲವೆಂದು ಹೇಳಿಸಿಕೊಳ್ಳುವುದು. ॥೫೦॥ ಜೀವನ್ಮುಕ್ತನಾದ ಶಿವಯೋಗಿಯು ನಾನು ಇದ್ದೇನೆಂಬ ಭಾವದಿಂದಲೂ, ನಾನು ಇರುವುದಿಲ್ಲವೆಂಬ ಅಭಾವದಿಂದಲೂ ದೂರನಾಗಿರುವುದರಿಂದ, ಇವನು ಭಾವಾಭಾವಗಳಿಂದ ಮುಕ್ತನಾಗಿ ಪ್ರಕಾಶಿಸುವನು. ॥೫೧॥

ಸುಖದುಃಖಾದಿಯೋಗೇಷು ನಾಭಾವೋ ಭಾವ ಏವ ವಾ ।
ವಿದ್ಯತೇ ಚಿತ್ಸ್ವರೂಪಸ್ಯ ನಿರ್ಲೇಪಸ್ಯ ಮಹಾತ್ಮನಃ ॥೫೨॥
ತ್ವಂತಾಹಂತಾವಿನಿರ್ಮುಕ್ತೇ ನಿರ್ವಿಕಲ್ಪೇ ಚಿದಂಬರೇ ।
ಏಕೀಭೂತಸ್ಯ ಸಿದ್ಧಸ್ಯ ಭಾವಾಭಾವಕಥಾ ಕುತಃ ॥೫೩॥

೫೭ ಜ್ಞಾನಶೂನ್ಯಸ್ಥಲಂ

ಪರಸ್ಪರಸಮಾಪೇಕ್ಷಭಾವಾಭಾವವಿವೇಚನಂ ।
ಜ್ಞಾನಂ ಬ್ರಹ್ಮಣಿ ಯನ್ನಾಸ್ತಿ ಜ್ಞಾನಶೂನ್ಯಸ್ಥಲಂ ವಿದುಃ ॥೫೪॥
ಸರ್ವಾತ್ಮನಿ ಪರೇ ತತ್ತ್ವೇ ಭೇದಶಂಕಾವಿವರ್ಜಿತೇ ।
ಜ್ಞಾತ್ರಾದಿವ್ಯವಹಾರೋತ್ಥಂ ಕುತೋ ಜ್ಞಾನಂ ವಿಭಾವ್ಯತೇ ॥೫೫॥
ನಿರ್ವಿಕಾರಂ ನಿರಾಕಾರಂ ನಿತ್ಯಂ ಸೀಮಾವಿವರ್ಜಿತಂ ।
ವ್ಯೋಮವತ್ಪರಮಂ ಬ್ರಹ್ಮ ನಿರ್ವಿಕಲ್ಪತಯಾ ಸ್ಥಿತಂ ॥೫೬॥

ಚಿತ್ಸ್ವರೂಪನೂ, ನಿರ್ಲಿಪ್ತನೂ, ಮಹಾತ್ಮನೂ ಆದ ಶಿವಯೋಗಿಗೆ ಸುಖದುಃಖಾದಿಸಂಬಂಧಗಳಲ್ಲಿ—ಸುಖದುಃಖಗಳು ನನಗುಂಟೆಂಬ ಭಾವವಾಗಲಿ, ನನಗಿಲ್ಲವೆಂಬ ಅಭಾವವಾಗಲಿ, ಯಾವುದೂ ಇರುವುದಿಲ್ಲ. ॥೫೨॥ ನೀನು ನಾನೆಂಬ ಭೇದಭಾವದಿಂದ ವಿಮುಕ್ತವೂ, ನಿರ್ವಿಕಲ್ಪವೂ, ಚಿದಾಕಾಶಸ್ವರೂಪವೂ ಆದ ಪರಬ್ರಹ್ಮದಲ್ಲಿ ಸಮರಸೀಭೂತನಾದ ಶಿವಯೋಗಿಗೆ ಭಾವಾಭಾವಪ್ರಸಂಗವೆಲ್ಲಿಯದು? ಅವನಿಗೆ ಇವೆರಡೂ ಇರುವುದಿಲ್ಲವೆಂದು ಭಾವವು. ॥೫೩॥

೫೭ ಜ್ಞಾನಶೂನ್ಯಸ್ಥಲ

ಪರಸ್ಪರಾಪೇಕ್ಷೆಯಿಂದ ಕೂಡಿದ ಅಸ್ತಿನಾಸ್ತಿರೂಪಭಾವಾಭಾವಗಳ ವಿವೇಚನವುಳ್ಳ ಯಾವ ಭೇದಜ್ಞಾನವು ಪರಬ್ರಹ್ಮಸ್ವರೂಪನಾದ ಶಿವಯೋಗಿಯಲ್ಲಿ ಇರುವುದಿಲ್ಲವೋ, ಅಂತಹ ಭೇದಜ್ಞಾನಶೂನ್ಯತೆಯನ್ನು ಪ್ರತಿಪಾದಿಸುವ ಸ್ಥಲವನ್ನು ಜ್ಞಾನಿಗಳು ಜ್ಞಾನಶೂನ್ಯಸ್ಥಲವೆಂದು ತಿಳಿಯುವರು. "ಜ್ಞಾನಂ ಬಂಧಃ" ಎಂಬ ಶಿವಸೂತ್ರದಲ್ಲಿರುವ "ಜ್ಞಾನ" ಪದಕ್ಕೆ ಭೇದಜ್ಞಾನವೆಂದು ತಿಳಿಯುವಂತೆ, ಇಲ್ಲಿಯೂ "ಜ್ಞಾನಶೂನ್ಯಸ್ಥಲ" ಪದಕ್ಕೆ ಭೇದಜ್ಞಾನಶೂನ್ಯಸ್ಥಲವೆಂದು ತಿಳಿಯಬೇಕು. ॥೫೪॥ ಭೇದಶಂಕಾವರ್ಜಿತವೂ, ಸಕಲಚರಾಚರಪ್ರಪಂಚಸ್ವರೂಪವೂ ಆದ ಪರತತ್ತ್ವದಲ್ಲಿ ಜ್ಞಾತೃಜ್ಞೇಯಾದಿವ್ಯವಹಾರದಿಂದುತ್ಪನ್ನವಾಗುವ ಭೇದಜ್ಞಾನವು ಎಲ್ಲಿಂದ ಭಾವಿಸಲ್ಪಡುವುದು? ॥೫೫॥ ವಿಕಾರರಹಿತವೂ, ಹೇಯಾಕಾರರಹಿತವೂ, ನಿತ್ಯವೂ, ಸೀಮಾತೀತವೂ ಆದ ಪರಬ್ರಹ್ಮವು ಆಕಾಶದಂತೆ ಭೇದಶೂನ್ಯತೆಯಿಂದಿರುವುದು. ॥೫೬॥

ನ ಪೃಥ್ವ್ಯಾದೀನಿ ಭೂತಾನಿ ನ ಗ್ರಹಾ ನೈವ ತಾರಕಾಃ ।
ನ ದೇವಾ ನ ಮನುಷ್ಯಾಶ್ಚ ನ ತಿರ್ಯಂಚೋ ನ ಚಾಪರೇ ॥೫೭॥

ತಸ್ಮಿನ್ ಕೇವಲಚಿನ್ಮಾತ್ರಸತ್ತಾನಂದೈಕಲಕ್ಷಣೇ ।
ತ್ವಂತಾಹಂತಾದಿಸಂರೂಢಂ ವಿಜ್ಞಾನಂ ಕೇನ ಭಾವ್ಯತೇ ॥೫೮॥

ಕೇವಲಂ ಸಚ್ಚಿದಾನಂದಪ್ರಕಾಶಾದ್ವಯಲಕ್ಷಣಂ ।
ನಿರ್ವಿಕಲ್ಪಂ ಪರಾಕಾಶಂ ಪರಬ್ರಹ್ಮ ಪ್ರಕಾಶತೇ ॥೫೯॥

ಜ್ಯೋತಿರ್ಲಿಂಗೇ ಚಿದಾಕಾರೇ ಸ್ವಪ್ರಕಾಶೇ ನಿರಂತರೇ ।
ಏಕೀಭಾವಮುಪೇತಸ್ಯ ಕಥಂ ಜ್ಞಾನಸ್ಯ ಸಂಭವಃ ॥೬೦॥

ಜಲೇ ಜಲಮಿವ ನ್ಯಸ್ತಂ ವಹ್ನೌ ವಹ್ನಿರಿವಾರ್ಪಿತಃ ।
ಪರಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೇ ॥೬೧॥

ಅಲ್ಲಿ ಸ್ಥೂಲವಾದ ಪೃಥಿವ್ಯಾದಿಭೂತಗಳಾಗಲಿ, ಸೂರ್ಯಾದಿಗ್ರಹಗಳಾಗಲಿ, ಅಶ್ವಿನ್ಯಾದಿನಕ್ಷತ್ರಗಳಾಗಲಿ, ದೇವತೆಗಳಾಗಲಿ, ಮನುಷ್ಯರಾಗಲಿ, ಪಶುಪಕ್ಷಿಗಳಾಗಲಿ ಅಥವಾ ಬೇರೆ ವಸ್ತುಗಳಾಗಲಿ ಯಾವುವೂ ಇರುವುದಿಲ್ಲ. ॥೫೭॥ ಕೇವಲಸಚ್ಚಿದಾನಂದ ಸ್ವರೂಪವಾದ ಆ ಪರಬ್ರಹ್ಮದಲ್ಲಿ, ತ್ವಂತಾಹಂತಾರೂಪಭಾವಾದಿಗಳಿಂದ ಕೂಡಿದ ಭೇದಜ್ಞಾನವು ಯಾವನಿಂದ ಭಾವಿಸಲ್ಪಡುವುದು? ಅಲ್ಲಿ ನೀನು-ನಾನೆಂಬ ಭೇದ ಜ್ಞಾನವೇ ಇರುವುದಿಲ್ಲವೆಂದು ಭಾವವು. ॥೫೮॥ ಕೇವಲಸಚ್ಚಿದಾನಂದಸ್ವರೂಪವೂ, ಅದ್ವಿತೀಯವೂ, ನಿರ್ವಿಕಲ್ಪವೂ ಆದ ಪರಬ್ರಹ್ಮವು ಮಹಾಕಾಶಸ್ವರೂಪವಾಗಿ ಪ್ರಕಾಶಿಸುತ್ತದೆ. ॥೫೯॥ ಜ್ಯೋತಿರ್ಲಿಂಗಸ್ವರೂಪವೂ, ಚಿತ್ಸ್ವರೂಪವೂ ಆದ ಸ್ವಪ್ರಕಾಶದಲ್ಲಿ ಸಮರಸಭಾವವನ್ನು ಹೊಂದಿದ ಶಿವಯೋಗಿಗೆ ಭೇದಜ್ಞಾನವು ಹೇಗೆ ಉಂಟಾಗುವುದು? ಎಂದೂ ಉಂಟಾಗುವುದಿಲ್ಲವೆಂದು ಭಾವವು. ॥೬೦॥ ನೀರಿನಲ್ಲಿ ನೀರನ್ನು ಬೆರೆಯಿಸಿದಂತೆಯೂ, ಬೆಂಕಿಯಲ್ಲಿ ಬೆಂಕಿಯನ್ನು ಬೆರೆಯಿಸಿದಂತೆಯೂ, ಪರಬ್ರಹ್ಮಸ್ವರೂಪಮಹಾಲಿಂಗದಲ್ಲಿ ಆತ್ಮನನ್ನು ಲಯಗೊಳಿಸಿದ ಶಿವಯೋಗಿಯು, ಜೀವಭಾವದಿಂದ ದೂರನಾಗಿ ಪರಬ್ರಹ್ಮದಲ್ಲಿ ಸಮರಸಭಾವವನ್ನು ಹೊಂದಿದ ಮೇಲೆ, ಪರಬ್ರಹ್ಮಸ್ವರೂಪಕ್ಕಿಂತ ಭಿನ್ನನಾಗಿ ತೋರುವುದಿಲ್ಲವು. ಇದೇ ಶಿವಾದ್ವೈತ (ಲಿಂಗಾಂಗಸಾಮರಸ್ಯ) ಸಿದ್ಧಾಂತದ ರಹಸ್ಯವು. "ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇ ಅಸ್ತಂ ಗಚ್ಛಂತಿ ನಾಮರೂಪೇ ವಿಹಾಯ । ತಥಾ ವಿದ್ವಾನ್ ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಂ ॥" (೩-೨-೮) ಎಂಬ ಮುಂಡಕಶ್ರುತಿಯೂ, "ಅವಿಭಾಗೇನ ದೃಷ್ಟತ್ವಾತ್" (೪-೪-೪) ಎಂಬ ಬ್ರಹ್ಮಸೂತ್ರವೂ ಇದೇ ಅಭಿಪ್ರಾಯವನ್ನು ಬೋಧಿಸುತ್ತಿರುವುವು. ॥೬೧॥

ಏತಾವದುಕ್ತ್ವಾ ಪರಮಪ್ರಬೋಧ
ಮದ್ವೈತಮಾನಂದಶಿವಪ್ರಕಾಶಂ ।
ದೇವ್ಯೈ ಪುರಾ ಭಾಷಿತಮೀಶ್ವರೇಣ
ತೂಷ್ಣೀಮಭೂದ್ಧ್ಯಾನಪರೋ ಗಣೇಂದ್ರಃ ॥೬೨॥

ಏವಮುಕ್ತ್ವಾ ಸಮಾಸೀನಂ ಶಿವಯೋಗಪರಾಯಣಂ ।
ರೇಣುಕಂ ತಂ ಸಮಾಲೋಕ್ಯ ಬಭಾಷೇ ಪ್ರಾಂಜಲಿರ್ಮುನಿಃ ॥೬೩॥

॥ ಅಗಸ್ತ್ಯ ಉವಾಚ ॥

ಶಿವಯೋಗವಿಶೇಷಜ್ಞ ಶಿವಜ್ಞಾನಮಹೋದಧೇ ।
ಸಮಸ್ತವೇದಶಾಸ್ತ್ರಾದಿವ್ಯವಹಾರಧುರಂಧರ ॥೬೪॥
ಆಲೋಕಮಾತ್ರನಿರ್ಧೂತಸರ್ವಸಂಸಾರಬಂಧನ ।
ಸ್ವಚ್ಛಂದಚರಿತೋಲ್ಲಾಸ ಸ್ವಪ್ರಕಾಶಾತ್ಮವಚ್ಛಿವ ॥೬೫॥

ಶ್ರೀರೇಣುಕಗಣಾಧೀಶ್ವರನು—ಪರಮೇಶ್ವರನು ಪೂರ್ವದಲ್ಲಿ ಪಾರ್ವತೀದೇವಿಗೆ ಉಪದೇಶಿಸಿದ ಪರಮಜ್ಞಾನಸ್ವರೂಪವಾದ, ಶಿವಾನಂದಪ್ರಕಾಶಕವಾದ, ಪಿಂಡಾದಿ ಜ್ಞಾನಶೂನ್ಯಾಂತವಾದ ೧೦೧ ಸ್ಥಲಗಳಿಂದೊಡಗೂಡಿದ ಶಿವಾದ್ವೈತ (ಲಿಂಗಾಂಗ ಸಾಮರಸ್ಯ) ಸಿದ್ಧಾಂತವನ್ನು ಈ ರೀತಿಯಾಗಿ ಬೋಧಿಸಿ, ಸ್ವಸ್ವರೂಪಧ್ಯಾನಾಸಕ್ತನಾಗಿ, ಮೌನಮುದ್ರೆಯನ್ನವಲಂಬಿಸಿದನು. ॥೬೨॥

ಈ ಪ್ರಕಾರವಾಗಿ ಬೋಧಿಸಿ ಮೌನಭಾವದಿಂದ ಕುಳಿತುಕೊಂಡ ಶಿವಯೋಗ ಪರಾಯಣನಾದ ಆ ಶ್ರೀರೇಣುಕಗಣಾಧೀಶ್ವರನನ್ನು ಅಗಸ್ತ್ಯಮಹರ್ಷಿಯು ನೋಡಿ, ಕರಗಳನ್ನು ಜೋಡಿಸಿಕೊಂಡು ಹೀಗೆ ನುಡಿದನು. ॥೬೩॥

ಶಿವಯೋಗರಹಸ್ಯವನ್ನು ಚನ್ನಾಗಿ ಬಲ್ಲವನೂ, ಶಿವಜ್ಞಾನಸಮುದ್ರನೂ, ಸಮಸ್ತವೇದಶಾಸ್ತ್ರಾದಿವ್ಯವಹಾರವಿಚಕ್ಷಣನೂ, ಕೃಪಾಕಟಾಕ್ಷವೀಕ್ಷಣಮಾತ್ರದಿಂದ ಸರ್ವಸಂಸಾರಬಂಧನವನ್ನು ನಾಶಗೊಳಿಸುವವನೂ, ಸ್ವೇಚ್ಛಾಲೀಲೋಲ್ಲಾಸನೂ, ಸ್ವಪ್ರಕಾಶಸ್ವರೂಪವುಳ್ಳವನೂ, ಶಿವಸ್ವರೂಪನೂ ಆದ ಎಲೈ ಶ್ರೀರೇಣುಕಗಣನಾಥನೇ!

ಅವತೀರ್ಣಮಿದಂ ಶಾಸ್ತ್ರಮನವದ್ಯಂ ತ್ವದಾನನಾತ್ ।
ಶ್ರುತ್ವಾ ಮೇ ಮೋದತೇ ಚಿತ್ತಂ ಜ್ಯೋತಿಃ ಪಶ್ಯಚ್ಛಿವಾಭಿಧಂ ॥೬೬॥

ಅದ್ಯ ಮೇ ಸಫಲಂ ಜನ್ಮ ಗತೋ ಮೇ ಚಿತ್ತವಿಭ್ರಮಃ ।
ಸಂಜಾತಾ ಪಾಶವಿಚ್ಛಿತ್ತಿಸ್ತಪಾಂಸಿ ಫಲಿತಾನಿ ಮೇ ॥೬೭॥

ಇದಾನೀಮೇವ ಮೇ ಜಾತಂ ಮುನಿರಾಜತ್ವಮುತ್ತಮಂ ।
ಇತಃಪರಂ ಮಯಾ ನಾಸ್ತಿ ಸದೃಶೋ ಭುವನತ್ರಯೇ ॥೬೮॥

ಶಾಸ್ತ್ರಂ ತವ ಮುಖೋದ್ಗೀರ್ಣಂ ಶಿವಾದ್ವೈತಪರಂ ವರಂ ।
ಮಾಂ ವಿನಾ ಕಸ್ಯ ಲೋಕೇಷು ಶ್ರೋತುಮಸ್ತಿ ತಪಃ ಶುಭಂ ॥೬೯॥

ತಪಸಃ ಪರಿಪಾಕೇನ ಶಂಕರಸ್ಯ ಪ್ರಸಾದತಃ ।
ಆಗತಸ್ತ್ವಂ ಮಹಾಭಾಗ ಮಾಂ ಕೃತಾರ್ಥಯಿತುಂ ಗಿರಾ ॥೭೦॥

ಇತಿ ಸ್ತುವಂತಂ ವಿನಯಾದಗಸ್ತ್ಯಂ ಮುನಿಪುಂಗವಂ ।
ಆಲೋಕ್ಯ ಕರುಣಾದೃಷ್ಟ್ಯಾ ಬಭಾಷೇ ಸ ಗಣೇಶ್ವರಃ ॥೭೧॥

ನಿನ್ನ ಮುಖದಿಂದ ಆವಿರ್ಭೂತವಾದ ಪರಮಪವಿತ್ರವಾದ ಈ ಶಿವಾದ್ವೈತಾತ್ಮಕ ವೀರಶೈವಮಹಾಶಾಸ್ತ್ರವನ್ನು ಶ್ರವಣಮಾಡಿ ಶಿವಪ್ರಕಾಶವನ್ನು ನೋಡುತ್ತಿರುವ ನನ್ನ ಮನಸ್ಸು ಸಂತೋಷಗೊಂಡಿರುತ್ತದೆ; ನನ್ನ ಜನ್ಮವು ಇಂದು ಸಫಲವಾಯಿತು; ನನ್ನ ಚಿತ್ತಭ್ರಾಂತಿಯು ಇಂದು ದೂರವಾಯಿತು; ನನಗೆ ಸಂಸಾರಪಾಶಚ್ಛೇದವು ಇಂದು ಉಂಟಾಯಿತು; ನನ್ನ ನಾನಾವಿಧವಾದ ತಪಸ್ಸುಗಳು ಇಂದು ಸಫಲವಾದುವು; ನನಗೆ ಅತ್ಯುತ್ತಮವಾದ ಮುನಿರಾಜತ್ವವು ಈಗ ಪ್ರಾಪ್ತವಾಯಿತು; ಇನ್ನುಮುಂದೆ ನನಗೆ ಸಮಾನನಾದವನು ಮೂರು ಲೋಕಗಳಲ್ಲಿ ಯಾವನೂ ಇರುವುದಿಲ್ಲ; ನಿನ್ನ ಮುಖದಿಂದ ಹೊರಹೊರಟ ಶಿವಾದ್ವೈತಪರವಾದ ಶ್ರೇಷ್ಠಶಾಸ್ತ್ರವನ್ನು ಶ್ರವಣಮಾಡಲಿಕ್ಕೆ, ಮೂರು ಲೋಕಗಳಲ್ಲಿ ನನ್ನ ಹೊರತು ಮಂಗಲಕರವಾದ ತಪಸ್ಸು ಯಾವನಿಗಿರುವುದು? ಎಲೈ, ಮಹಾತ್ಮನೇ! ನೀನು ನನ್ನ ತಪಸ್ಸಿನ ಪರಿಪಾಕದಿಂದಲೂ, ಶಿವಪ್ರಸಾದದಿಂದಲೂ ನನ್ನನ್ನು ವೇದಾಂತವಾಕ್ಯೋಪದೇಶದಿಂದ ಕೃತಾರ್ಥನನ್ನಾಗಿ ಮಾಡುವುದಕ್ಕೋಸ್ಕರವೇ ಬಂದೆ. ॥೬೪-೬೫-೬೬-೬೭-೬೮-೬೯-೭೦॥

ಈ ಪ್ರಕಾರವಾಗಿ ಅಸಾಧಾರಣಭಕ್ತಿಭಾವದಿಂದ ಸ್ತುತಿಸುತ್ತಿರುವ ಮುನಿಶ್ರೇಷ್ಠನಾದ ಅಗಸ್ತ್ಯಮಹರ್ಷಿಯನ್ನು, ಶ್ರೀರೇಣುಕಗಣಾಧೀಶ್ವರನು ಕೃಪಾದೃಷ್ಟಿಯಿಂದ ನೋಡಿ, ಈ ರೀತಿಯಾಗಿ ನುಡಿದನು. ॥೭೧॥

|| ಶ್ರೀರೇಣುಕ ಉವಾಚ ||

ಅಗಸ್ತ್ಯ ಮುನಿಶಾರ್ದೂಲ ತಪಸ್ಸಿದ್ಧಮನೋರಥ ।
ತ್ವಾಂ ವಿನಾ ಶಿವಶಾಸ್ತ್ರಸ್ಯ ಕಃ ಶ್ರೋತುಮಧಿಕಾರವಾನ್ ||೭೨||

ಪಾತ್ರಂ ಶಿವಪ್ರಸಾದಸ್ಯ ಭವಾನೇಕೋ ನ ಚಾಪರಃ ।
ಇತಿ ನಿಶ್ಚಿತ್ಯ ಕಥಿತಂ ಮಯಾ ತೇ ತಂತ್ರಮೀದೃಶಂ ||೭೩||

ಸ್ಥಾಪ್ಯತಾಂ ಸರ್ವಲೋಕೇಷು ತಂತ್ರಮೇತತ್ತ್ವಯಾ ಮುನೇ ।
ಈದೃಶಂ ಶಿವಬೋಧಸ್ಯ ಸಾಧನಂ ನಾಸ್ತಿ ಕುತ್ರಚಿತ್ ||೭೪||

ರಹಸ್ಯಮೇತತ್ ಸರ್ವಜ್ಞಃ ಸರ್ವಾನುಗ್ರಾಹಕಃ ಶಿವಃ ।
ಅವಾದೀತ್ ಸರ್ವಲೋಕಾನಾಂ ಸಿದ್ಧಯೇ ಪಾರ್ವತೀಪತಿಃ ||೭೫||

ತದಿದಂ ಸರ್ವಸಿದ್ಧಾಂತಸಾರಾಣಾಮುತ್ತಮೋತ್ತಮಂ ।
ವೇದವೇದಾಂತಸರ್ವಸ್ವಂ ವಿದ್ಯಾಚಾರಪ್ರಕಾಶಕಂ ||೭೬||

ವೀರಮಾಹೇಶ್ವರಗ್ರಾಹ್ಯಂ ಶಿವಾದ್ವೈತಪ್ರಕಾಶಕಂ ।
ಪರೀಕ್ಷಿತೇಭ್ಯೋ ದಾತವ್ಯಂ ಶಿಷ್ಯೇಭ್ಯೋ ನಾನ್ಯಥಾ ಕ್ವಚಿತ್ ||
ಏತಚ್ಛ್ರವಣಮಾತ್ರೇಣ ಸರ್ವೇಷಾಂ ಪಾಪಸಂಕ್ಷಯಃ ||೭೭||

ಮುನಿಶ್ರೇಷ್ಠನೂ, ತಪಸ್ಸಿದ್ಧಮನೋರಥನೂ ಆದ ಎಲೈ ಅಗಸ್ತ್ಯನೇ ! ಶಿವಾದ್ವೈತಶಾಸ್ತ್ರವನ್ನು ಶ್ರವಣಮಾಡುವುದಕ್ಕೋಸ್ಕರ ನಿನ್ನ ಹೊರತು ಯಾವನು ಅಧಿಕಾರಿಯಾಗಿರುವನು ? ||೭೨|| ಶಿವಾನುಗ್ರಹಕ್ಕೆ ನೀನೊಬ್ಬನೇ ಪಾತ್ರನೆಂದೂ, ಮತ್ತಾವನೂ ಪಾತ್ರನಲ್ಲವೆಂದೂ ನಿಶ್ಚಯಿಸಿ, ನಾನು ನಿನಗೆ ಈ ಶಾಸ್ತ್ರವನ್ನು ಉಪದೇಶಿಸಿದೆನು. ||೭೩|| ಆದುದರಿಂದ ಎಲೈ ಅಗಸ್ತ್ಯಮುನೀಶ್ವರನೇ! ನೀನು ಈ ವೀರಶೈವ ಶಾಸ್ತ್ರವನ್ನು ಸಮಸ್ತಪ್ರಪಂಚದಲ್ಲಿ ಪ್ರಕಾಶಪಡಿಸು; ಶಿವಜ್ಞಾನಕ್ಕೆ ಇಂತಹ ಸಾಧನವು ಎಲ್ಲಿಯೂ ಇರುವುದಿಲ್ಲ. ||೭೪|| ಸರ್ವಜ್ಞನೂ, ಸರ್ವಾನುಗ್ರಾಹಕನೂ, ಪಾರ್ವತೀಪತಿಯೂ ಆದ ಶಿವನು ಈ ವೀರಶೈವಶಾಸ್ತ್ರರಹಸ್ಯವನ್ನು ಸಮಸ್ತ ಜನರ ಮೋಕ್ಷಸಿದ್ಧಿಗಾಗಿ ಬೋಧಿಸಿರುವನು. ||೭೫|| ಸಮಸ್ತಸಿದ್ಧಾಂತಗಳಲ್ಲಿ ಉತ್ತಮೋತ್ತಮವಾದುದೂ, ವೇದವೇದಾಂತಗಳ ಸರ್ವಸ್ವರೂಪವಾದುದೂ, ಜ್ಞಾನಕ್ರಿಯೆಗಳನ್ನು ಪ್ರಕಾಶಪಡಿಸುವಂಥದೂ, ವೀರಮಾಹೇಶ್ವರಗ್ರಾಹ್ಯವಾದುದೂ, ಶಿವಾದ್ವೈತಪ್ರಕಾಶಕವಾದುದೂ ಆದ ಈ ವೀರಶೈವಷಟ್‌ಸ್ಥಲಶಾಸ್ತ್ರವನ್ನು ಶುದ್ಧವಂಶಸದ್ಗುಣಾದಿಗಳಿಂದ ಪರೀಕ್ಷಿಸಲ್ಪಟ್ಟ ಶಿಷ್ಯರಿಗೆ ಅನುಗ್ರಹಿಸಬೇಕಲ್ಲದೆ ಅನಧಿಕಾರಿಗಳಿಗೆ ಅನುಗ್ರಹಿಸಬಾರದು. ಈ ಶಾಸ್ತ್ರರಹಸ್ಯವನ್ನು ಶ್ರವಣಮಾಡಿದ ಮಾತ್ರದಿಂದ, ಸರ್ವರ ಪಾಪಗಳು ನಷ್ಟವಾಗುವುವು. ||೭೬-೭೭||

ಅವತೀರ್ಣಂ ಮಯಾ ಭೂಮೌ ಶಾಸ್ತ್ರಸ್ಯಾಸ್ಯ ಪ್ರವೃತ್ತಯೇ ।
ಪ್ರವರ್ತಯ ಶಿವಾದ್ವೈತಂ ತ್ವಮಪಿ ಜ್ಞಾನಮೀದೃಶಂ ||೭೮||
ಇತ್ಯುಕ್ತ್ವಾ ಪಶ್ಯತಸ್ತಸ್ಯ ಪುರಸ್ತಾದೇವ ರೇಣುಕಃ ।
ಅಂತರ್ದಧೇ ಮಹಾದೇವಂ ಚಿಂತಯನ್ನಂತರಾತ್ಮನಾ ||೭೯||
ಅಂತರ್ಹಿತೇ ತದಾ ತಸ್ಮಿನ್ ಮುನಿರಾಶ್ಚರ್ಯಸಂಕುಲಃ ।
ತಚ್ಛಾಸ್ತ್ರಪ್ರವಣೋ ಭೂತ್ವಾ ಸಮವರ್ತತ ಸಂಯಮೀ ||೮೦||
ಯ ಇದಂ ಶಿವಸಿದ್ಧಾಂತಂ ವೀರಶೈವಮತಾತ್ಮಕಂ ।
ಶೃಣೋತಿ ಶುದ್ಧಮನಸಾ ಸ ಯಾತಿ ಪರಮಾಂ ಗತಿಂ ||೮೧||

ಇತಿ ಶ್ರೀಸಿದ್ಧಾಂತಶಿಖಾಮಣೌ ಲಿಂಗಸ್ಥಲೀಯೈಕ್ಯಸ್ಥಲೇ ಸ್ವೀಕೃತ ಪ್ರಸಾದಸ್ಥಲಾದಿನವವಿಧಸ್ಥಲಪ್ರಸಂಗೋ ನಾಮ

ವಿಂಶತಿತಮಪರಿಚ್ಛೇದಃ ಪರಿಸಮಾಪ್ತಃ

ಈ ಷಟ್ಸ್ಥಲಶಾಸ್ತ್ರದ ಪ್ರಕಾಶಕ್ಕಾಗಿಯೇ ನಾನು ಈ ಭೂಮಂಡಲದಲ್ಲಿ ಅವತರಿಸಿದೆನು; ನೀನಾದರೂ ಈ ಶಿವಾದ್ವೈತಸಿದ್ಧಾಂತವನ್ನು ಸರ್ವತ್ರ ಪ್ರಕಾಶಪಡಿಸು. ||೭೮|| ಶ್ರೀರೇಣುಕಗಣಾಧೀಶ್ವರನು ಈ ಪ್ರಕಾರವಾಗಿ ಉಪದೇಶಿಸಿ, ಅಂತರಾತ್ಮನಿಂದ ಪರಮೇಶ್ವರನನ್ನು ಧ್ಯಾನಿಸುವವನಾಗಿ, ಅಗಸ್ತ್ಯಮಹರ್ಷಿಯು ನೋಡುತ್ತಿರಲು, ಆ ಮಹರ್ಷಿಯ ಮುಂಭಾಗದಲ್ಲಿಯೇ ಅಂತರ್ಧಾನವನ್ನು ಹೊಂದಿದನು. ||೭೯|| ಶ್ರೀರೇಣುಕಗಣೇಶ್ವರನು ಅಂತರ್ಧಾನವನ್ನು ಹೊಂದಲು, ಅಗಸ್ತ್ಯಮಹರ್ಷಿಯು ಆಶ್ಚರ್ಯಾನ್ವಿತನಾಗಿ, ಆ ಗಣಾಧೀಶ್ವರನಿಂದ ಉಪದಿಷ್ಟವಾದ ಶಿವಾದ್ವೈತಶಾಸ್ತ್ರದಲ್ಲಿ ದೃಢವಾದ ಆಸಕ್ತಿಯುಳ್ಳವನಾದನು. ||೮೦|| ವೀರಶೈವಮತಸ್ವರೂಪವಾದ ಈ ಶಿವಾದ್ವೈತಸಿದ್ಧಾಂತವನ್ನು ಯಾವನು ಶುದ್ಧಮನಸ್ಸಿನಿಂದ ಕೇಳುತ್ತಾನೆಯೋ, ಅವನು ಮೋಕ್ಷವನ್ನು ಪಡೆಯುವನು. ||೮೧||

ಇಂತು ಶ್ರೀಸಿದ್ಧಾಂತಶಿಖಾಮಣಿಯ ಲಿಂಗಸ್ಥಲೀಯೈಕ್ಯಸ್ಥಲದಲ್ಲಿ ಸ್ವೀಕೃತಪ್ರಸಾದಸ್ಥಲಾದಿನವವಿಧಸ್ಥಲವಿಚಾರಾತ್ಮಕವಾದ ಇಪ್ಪತ್ತನೆಯ ಪರಿಚ್ಛೇದವು ಪರಿಸಮಾಪ್ತವಾದುದು.

ಶ್ರೀಜಗದ್ಗುರುರೇಣುಕಾಚಾರ್ಯಃ ಪ್ರಸೀದತು.

ಏಕವಿಂಶತಿತಮಪರಿಚ್ಛೇದಃ

॥ ವಿಭೀಷಣಾಭೀಷ್ಟವರಪ್ರದಾನಂ ॥

ಸ್ವಚ್ಛಂದಾಚಾರರಸಿಕಃ ಸ್ವೇಚ್ಛಾನಿರ್ಮಿತವಿಗ್ರಹಃ ।
ಆಸಸಾದ ಪುರೀಂ ಲಂಕಾಂ ರೇಣುಕೋ ಗಣನಾಯಕಃ ॥೧॥

ತಮಾಗತಂ ಮಹಾಭಾಗಂ ಸರ್ವಾಗಮವಿಶಾರದಂ ।
ವಿಭೀಷಣಃ ಸಮಾಲೋಕ್ಯ ಸೌಧಂ ಪ್ರಾವೇಶಯನ್ನಿಜಂ ॥೨॥

ಭದ್ರಾಸನೇ ಮಹಾರಮ್ಯೇ ನಿವೇಶ್ಯ ಗಣನಾಯಕಂ ।
ಅರ್ಘ್ಯಪಾದ್ಯಾದಿಭಿಃ ಸರ್ವೈರುಪಚಾರೈರಪೂಜಯತ್ ॥೩॥

ಪೂಜಿತೇನ ಪ್ರಸನ್ನೇನ ರೇಣುಕೇನ ನಿರೂಪಿತಃ ।
ನಿಷಸಾದ ತದಭ್ಯಾಶೇ ಸ ನಿಜಾಸನಮಾಶ್ರಿತಃ ॥೪॥

ಇಪ್ಪತ್ತೊಂದನೆಯ ಪರಿಚ್ಛೇದ

ವಿಭೀಷಣಾಭೀಷ್ಟವರಪ್ರದಾನ

ವ್ಯಾಖ್ಯಾನ—ಸ್ವತಂತ್ರಾಚಾರಶೀಲನೂ, ಸ್ವೇಚ್ಛಾನಿರ್ಮಿತದಿವ್ಯತೇಜೋಮಯಶರೀರನೂ, ಪ್ರಮಥಪುಂಗವನೂ ಆದ ಶ್ರೀರೇಣುಕಾಚಾರ್ಯನು, ವಿಭೀಷಣನ ರಾಜಧಾನಿಯಾದ ಲಂಕಾನಗರಕ್ಕೆ ಆಗಮಿಸಿದನು. ॥೧॥ ವಿಭೀಷಣನು ತನ್ನ ನಗರಕ್ಕೆ ಆಗಮಿಸಿದ ಸಕಲಶಿವಾಗಮತತ್ತ್ವಜ್ಞನಾದ ಆ ಪೂಜ್ಯಪಾದನನ್ನು ನೋಡಿ, ತನ್ನ ಅರಮನೆಗೆ ಬಿಜಯಮಾಡಿಸಿಕೊಂಡು ಹೋದನು. ॥೨॥ ವಿಭೀಷಣನು ಆ ಪ್ರಮಥಪುಂಗವನನ್ನು ಅತ್ಯಂತಮನೋಹರವಾದ ಸಿಂಹಾಸನದಲ್ಲಿ ಮೂರ್ತಮಾಡಿಸಿ, ಅರ್ಘ್ಯ-ಪಾದ್ಯ-ಆಚಮನ ಮೊದಲಾದ ಷೋಡಶೋಪಚಾರಗಳಿಂದ ಪೂಜಿಸಿದನು. ॥೩॥ ಹೀಗೆ ಪೂಜಿತನಾದುದರಿಂದ ಪ್ರಸನ್ನನಾದ ಶ್ರೀರೇಣುಕಾಚಾರ್ಯನಿಂದ ಆಜ್ಞಾಪಿಸಲ್ಪಟ್ಟ ವಿಭೀಷಣನು ತನ್ನ ಆಸನವನ್ನು ಆಶ್ರಯಿಸುವವನಾಗಿ, ಶ್ರೀರೇಣುಕಾಚಾರ್ಯನ ಸಮೀಪದಲ್ಲಿ ಕುಳಿತುಕೊಂಡನು. ॥೪॥

ವಿಭೀಷಣೋ ಗಣೇಂದ್ರಂ ತಮಾಬಭಾಷೇ ಕೃತಾಂಜಲಿಃ ।
ಮಾನುಷಾಕಾರಸಂಪನ್ನಂ ಸಾಕ್ಷಾಚ್ಛಿವಮಿವಾಪರಂ ॥೫॥

ರೇಣುಕ ತ್ವಂ ಗಣಾಧೀಶ ಶಿವಜ್ಞಾನಪರಾಯಣ ।
ಅವತೀರ್ಣೋ ಮಹೀಮೇನಾಮಿತಿ ಸಮ್ಯಕ್ ಶ್ರುತಂ ಮಯಾ ॥೬॥

ಮದ್ಭಾಗ್ಯಗೌರವಾದದ್ಯ ಸಮಾಯಾಸ್ತ್ವಂ ಪುರೀಮಿಮಾಂ ।
ಕಥಂ ಭಾಗ್ಯವಿಹೀನಾನಾಂ ಸುಲಭಾಃ ಸ್ಯುರ್ಭವಾದೃಶಾಃ ॥೭॥

ಮತ್ಸಮೋ ನಾಸ್ತಿ ಲೋಕೇಷು ಭಾಗ್ಯಾತಿಶಯವತ್ತಯಾ ।
ಯಸ್ಯ ಸೌಧಂ ಸ್ವಯಂ ಪ್ರಾಪ್ತೋ ಭವಾನ್ ಸಾಕ್ಷಾನ್ಮಹೇಶ್ವರಃ ॥೮॥

ಕೃತಾರ್ಥಾ ಮೇ ಪುರೀ ಹ್ಯೇಷಾ ಕೃತಾರ್ಥೋ ರಾಕ್ಷಸಾನ್ವಯಃ ।
ಜೀವಿತಂ ಚ ಕೃತಾರ್ಥಂ ಮೇ ಯಸ್ಯ ತ್ವಂ ದೃಷ್ಟಿಗೋಚರಃ ॥೯॥

ಇತಿ ಬ್ರುವಾಣಂ ಕಲ್ಯಾಣಂ ರಾಕ್ಷಸೇಂದ್ರಂ ಗಣೇಶ್ವರಃ ।
ಬಭಾಷೇ ಸಸ್ಮಿತೋ ವಾಣೀಂ ವಿಶ್ವೋಲ್ಲಾಸಕರೀಂ ಶುಭಾಂ ॥೧೦॥

ಪ್ರತ್ಯಕ್ಷವಾಗಿ ದ್ವಿತೀಯಶಿವನಂತಿರುವವನೂ, ಮಾನವಾಕಾರದಿಂದ ಕೂಡಿದವನೂ, ಪ್ರಮಥಗಣಾಧೀಶ್ವರನೂ ಆದ ಶ್ರೀರೇಣುಕಾಚಾರ್ಯನನ್ನು ಕುರಿತು, ವಿಭೀಷಣನು ಕೈಜೋಡಿಸಿಕೊಂಡು ಈ ರೀತಿಯಾಗಿ ನುಡಿದನು. ॥೫॥ ಶಿವಜ್ಞಾನಪರಾಯಣನೂ, ಪ್ರಮಥಾಧೀಶ್ವರನೂ ಆದ ಎಲೈ ಶ್ರೀರೇಣುಕಾಚಾರ್ಯನೇ! ನೀನು ಈ ಭೂಮಂಡಲದಲ್ಲಿ ಸಮಸ್ತಪ್ರಾಣಿಗಳ ಉದ್ಧಾರಕ್ಕೋಸ್ಕರ, ಶಿವನ ಆಜ್ಞಾನುಸಾರವಾಗಿ ಅವತರಿಸಿರುವೆಯೆಂದು ನಾನು ಕೇಳಿದ್ದೆನು. ॥೬॥ ನೀನು ಈ ದಿವಸ ನನ್ನ ಭಾಗ್ಯಾತಿಶಯದಿಂದ ನನ್ನ ಲಂಕಾಪುರಿಗೆ ಆಗಮಿಸಿರುವೆ! ಭಾಗ್ಯಹೀನರಿಗೆ ನಿನ್ನಂತಹ ಮಹಾನುಭಾವರು ಹೇಗೆ ಸುಲಭಸಾಧ್ಯರಾಗುವರು? ॥೭॥ ಪ್ರತ್ಯಕ್ಷಶಿವನಾಗಿರುವ ನೀನು ಯಾವ ನನ್ನ ಅರಮನೆಯನ್ನು ಕುರಿತು ನೀನಾಗಿಯೇ ಆಗಮಿಸಿದೆಯೋ, ಆ ನನಗೆ ಭಾಗ್ಯಾತಿಶಯದಿಂದ ಸಮಾನನಾದವನು ಮೂರುಲೋಕಗಳಲ್ಲಿ ಯಾವನೂ ಇರುವುದಿಲ್ಲ. ॥೮॥ ಯಾವ ನನಗೆ ನೀನು ದೃಷ್ಟಿಗೋಚರನಾದೆಯೋ, ಆ ನನ್ನ ಲಂಕಾಪಟ್ಟಣವು ಕೃತಾರ್ಥವಾಯಿತು; ನನ್ನ ರಾಕ್ಷಸವಂಶವು ಕೃತಾರ್ಥವಾಯಿತು; ನನ್ನ ಜನ್ಮವು ಕೃತಾರ್ಥವಾಯಿತು. ॥೯॥ ಈ ರೀತಿಯಾಗಿ ಶುಭವಚನಗಳನ್ನು ನುಡಿಯುತ್ತಿರುವ ವಿಭೀಷಣನನ್ನು ಕುರಿತು—ಶ್ರೀರೇಣುಕಾಚಾರ್ಯನು ಮಂದಹಾಸದೊಡನೆ ಸರ್ವರಿಗೂ ಸಂತೋಷವನ್ನುಂಟುಮಾಡತಕ್ಕ ಮಂಗಲಮಯವಾಣಿಯಿಂದ ಈ ರೀತಿಯಾಗಿ ನುಡಿದನು. ॥೧೦॥

ವಿಭೀಷಣ ಮಹಾಭಾಗ ಜಾನೇ ತ್ವಾಂ ಧರ್ಮಕೋವಿದಂ ।
ತ್ವಾಂ ವಿನಾ ಕಸ್ಯ ಲೋಕೇಷು ಜಾಯತೇ ಭಕ್ತಿರೀದೃಶೀ ॥೧೧॥

ಸಮಸ್ತಶಾಸ್ತ್ರಸಾರಜ್ಞಂ ಸರ್ವಧರ್ಮಪರಾಯಣಂ ।
ಅಧ್ಯಾತ್ಮವಿದ್ಯಾನಿರತಮಾಹುಸ್ತ್ವಾಂ ರಾಕ್ಷಸೇಶ್ವರ ॥೧೨॥

ತ್ವದೀಯಧರ್ಮಸಂಪತ್ತಿಂ ಶ್ರುತ್ವಾಽಹಂ ವಿಸ್ಮಿತಾಶಯಃ ।
ವ್ರಜನ್ ಕೈಲಾಸಮಚಲಂ ತ್ವದಂತಿಕಮುಪಾಗತಃ ॥೧೩॥

ಪ್ರೀತೋಽಸ್ಮಿ ತವ ಚಾರಿತ್ರ್ಯೈಃ ಶೋಭನೈರ್ಲೋಕವಿಶ್ರುತೈಃ ।
ದಾಸ್ಯಾಮಿ ತೇ ವರಂ ಸಾಕ್ಷಾತ್ ಪ್ರಾರ್ಥಯಸ್ವ ಯಥೇಪ್ಸಿತಂ ॥೧೪॥

ಇತಿ ಪ್ರಸಾದಸುಮುಖೇ ಭಾಷಮಾಣೇ ಗಣೇಶ್ವರೇ ।
ಪ್ರಣಮ್ಯ ಪರಯಾ ಪ್ರೀತ್ಯಾ ವ್ಯಾಜಹಾರ ವಿಭೀಷಣಃ ॥೧೫॥

ಆಗಮಾನುಗ್ರಹಾದೇವ ಭವತಃ ಶಿವಯೋಗಿನಃ ।
ದುರ್ಲಭಾಃ ಸರ್ವಲೋಕಾನಾಂ ಸಮುಪದ್ಯಂತ ಸಂಪದಃ ॥೧೬॥

ಎಲೈ, ವಿಭೀಷಣನೇ! ನಾನು ನಿನ್ನನ್ನು ಧರ್ಮಪರಾಯಣನನ್ನಾಗಿ ತಿಳಿಯುತ್ತೇನೆ; ಇಂತಹ ಭಕ್ತಿಯು ನಿನ್ನ ಹೊರತು ಈ ಲೋಕಗಳಲ್ಲಿ ಯಾವನಿಗೆ ಉತ್ಪನ್ನವಾಗುವುದು? ॥೧೧॥ ಎಲೈ, ರಾಕ್ಷಸಸಾರ್ವಭೌಮನೇ! ಈ ಲೋಕದಲ್ಲಿರುವ ಸಕಲ ಮಾನವರು ನಿನ್ನನ್ನು ಸಮಸ್ತಶಾಸ್ತ್ರಗಳ ರಹಸ್ಯವನ್ನು ಬಲ್ಲವನನ್ನಾಗಿಯೂ, ಸಮಸ್ತ ಧರ್ಮಾಚಾರಪರಾಯಣನನ್ನಾಗಿಯೂ, ವೇದಾಂತವಿದ್ಯಾಸಕ್ತನನ್ನಾಗಿಯೂ ಹೇಳುತ್ತಾರೆ. ॥೧೨॥ ಕೈಲಾಸಪರ್ವತಕ್ಕೆ ಹೋದ ನಾನು ನಿನ್ನ ಧರ್ಮಸಂಪತ್ತಿಯನ್ನು ಕೇಳಿ ಆಶ್ಚರ್ಯಾನ್ವಿತನಾಗಿ ನಿನ್ನಲ್ಲಿಗೆ ಬಂದೆನು. ॥೧೩॥ ಜಗದ್ವಿಖ್ಯಾತವಾಗಿರುವ ನಿನ್ನ ಮಂಗಲಮಯಚರಿತ್ರಗಳಿಂದ ಸಂತುಷ್ಟನಾಗಿದ್ದೇನೆ; ನಿನಗೆ ಪ್ರತ್ಯಕ್ಷವಾಗಿ ವರವನ್ನು ಕೊಡುವೆನು; ಇಷ್ಟವಾದುದನ್ನು ಪ್ರಾರ್ಥಿಸು. ॥೧೪॥ ಈ ಪ್ರಕಾರವಾಗಿ ಪ್ರಸನ್ನಮುಖನಾದ ಶ್ರೀರೇಣುಕಾಚಾರ್ಯನು ನುಡಿಯಲು—ವಿಭೀಷಣನು ಅಸಾಧಾರಣವಾದ ಭಕ್ತಿಯಿಂದ ಸಾಷ್ಟಾಂಗಪ್ರಣಾಮವನ್ನು ಮಾಡಿ ಈ ರೀತಿಯಾಗಿ ವಿಜ್ಞಾಪಿಸಿಕೊಂಡನು. ॥೧೫॥ ಎಲೈ, ರೇಣುಕಾಚಾರ್ಯನೇ! ಶಿವಯೋಗಿಯಾದ ನಿನ್ನ ಆಗಮನರೂಪವಾದ ಅನುಗ್ರಹದಿಂದಲೇ, ಸರ್ವಜನರಿಗೂ ದುರ್ಲಭವಾದ ಸಂಪತ್ತುಗಳು ಪ್ರಾಪ್ತವಾದುವು. ॥೧೬॥

ತಥಾಪಿ ಪ್ರಾರ್ಥನೀಯಂ ಮೇ ಕಿಂಚಿದಸ್ತಿ ಗಣೇಶ್ವರ ।
ಸುಕೃತೇ ಪರಿಪಕ್ವೇ ಹಿ ಸ್ವಯಂ ಸಿದ್ಧ್ಯತಿ ವಾಂಛಿತಂ ॥೧೭॥
ರಾವಣೋ ಹಿ ಮಮ ಭ್ರಾತಾ ಶಿವಭಕ್ತಶಿಖಾಮಣಿಃ ।
ಅದೃಷ್ಟಶತ್ರುಸಂಬಾಧಂ ಶಶಾಸ ಹಿ ಜಗತ್ರಯಂ ॥೧೮॥
ಯಸ್ಯ ಪ್ರತಾಪಮತುಲಂ ಸೋಢುಮಕ್ಷಮಶಕ್ತಯಃ ।
ಇಂದ್ರಾದಯಃ ಸುರಾಃ ಸರ್ವೇ ರಾಜ್ಯಲಕ್ಷ್ಮ್ಯಾ ವಿಯೋಜಿತಾಃ ॥೧೯॥
ಸ ತು ಕಾಲವಶೇನೈವ ಸ್ವಚಾರಿತ್ರವಿಪರ್ಯಯಾತ್ ।
ರಣೇ ವಿಷ್ಣ್ವವತಾರೇಣ ರಾಮೇಣ ನಿಹತೋಽಭವತ್ ॥೨೦॥
ಸ ತು ರಾಮಶರಾವಿದ್ಧಃ ಕಂಠಸ್ಖಲಿತಜೀವಿತಃ ।
ಅವಶಿಷ್ಟಂ ಸಮಾಲೋಕ್ಯ ಮಾಮವಾದೀತ್ ಸುದುಃಖಿತಃ ॥೨೧॥
ವಿಭೀಷಣ ವಿಶೇಷಜ್ಞ ಮಹಾಬುದ್ಧೇ ಸುಧಾರ್ಮಿಕ ।
ಅವಶಿಷ್ಟೋಽಸಿ ವಂಶಸ್ಯ ರಕ್ಷಸಾಂ ಭಾಗ್ಯಗೌರವಾತ್ ॥೨೨॥

ಆದರೂ ನನಗೆ ಸ್ವಲ್ಪಮಟ್ಟಿಗೆ ಪ್ರಾರ್ಥಿಸಿಕೊಳ್ಳುವುದಿರುವುದು. ಪುಣ್ಯವು ಪರಿಪಕ್ವವಾಗಲು ಮನೋರಥವು ತಾನಾಗಿಯೇ ಸಿದ್ಧಿಸುವುದು. ॥೧೭॥ ಶಿವಭಕ್ತಶಿಖಾಮಣಿಯಾದ ನನ್ನ ಅಣ್ಣನಾದ ರಾವಣನು, ಮೂರುಲೋಕಗಳನ್ನೂ ಶತ್ರುಜನಬಾಧಾಶೂನ್ಯವಾಗಿ ಆಳಿದನು. ॥೧೮॥ ಯಾವನ ಅಸದೃಶವಾದ ಪರಾಕ್ರಮವನ್ನು ಸಹಿಸುವುದಕ್ಕೋಸ್ಕರ ಅಸಮರ್ಥರಾದ ಇಂದ್ರಾದಿಸಮಸ್ತದೇವತೆಗಳು ತಮ್ಮ ತಮ್ಮ ರಾಜ್ಯಲಕ್ಷ್ಮಿಯಿಂದ ದೂರರಾದರೋ, ಆ ಮಹಾಪರಾಕ್ರಮಶಾಲಿಯಾದ ರಾವಣನು ಕಾಲಾನುಸಾರವಾಗಿ ತನ್ನ ದುಶ್ಚರಿತ್ರದಿಂದ ವಿಷ್ಣುವಿನ ಅವತಾರರೂಪನಾದ ರಾಮಚಂದ್ರನಿಂದ ರಣರಂಗದಲ್ಲಿ ಕೊಲ್ಲಲ್ಪಟ್ಟನು. ॥೧೯-೨೦॥ ರಾಮನ ಬಾಣದಿಂದ ಹೊಡೆಯಲ್ಪಟ್ಟವನಾಗಿ ಕಂಠಗತಪ್ರಾಣನಾಗಿದ್ದ ರಾವಣನು, ರಾಕ್ಷಸಸಮೂಹದಲ್ಲಿ ಕೊಲ್ಲಲ್ಪಡದೆ ಉಳಿದಿದ್ದ ನನ್ನನ್ನು ನೋಡಿ, ಅತ್ಯಂತದುಃಖಿತನಾಗಿ, ಈ ರೀತಿಯಾಗಿ ನುಡಿದನು. ॥೨೧॥ ಮಹಾಬುದ್ಧಿಶಾಲಿಯೂ, ಧರ್ಮಾಚಾರಶೀಲನೂ, ವಿಚಕ್ಷಣನೂ ಆದ ಎಲೈ ವಿಭೀಷಣನೇ! ರಾಕ್ಷಸವಂಶದ ಭಾಗ್ಯಾತಿಶಯದಿಂದ ನೀನೊಬ್ಬನು ಮಾತ್ರ ಉಳಿದಿರುವೆ. ॥೨೨॥

ವಯಮಜ್ಞಾನಸಂಪನ್ನಾ ಮಹತ್ಸು ದ್ರೋಹಕಾರಿಣಃ ।
ಈದೃಶೀಂ ತು ಗತಿಂ ಪ್ರಾಪ್ತಾ ದುಸ್ತರಾ ಹಿ ವಿಧಿಸ್ಥಿತಿಃ ॥೨೩॥
ನವಕಂ ಲಿಂಗಕೋಟೀನಾಂ ಪ್ರತಿಷ್ಠಾಪ್ಯಮಿಹ ಸ್ಥಲೇ ।
ಇತಿ ಸಂಕಲ್ಪಿತಂ ಪೂರ್ವಂ ಮಯಾ ತದವಶಿಷ್ಯತೇ ॥೨೪॥
ಕೋಟಿಷಟ್ಕಂ ತು ಲಿಂಗಾನಾಂ ಮಯಾ ಸಾಧು ಪ್ರತಿಷ್ಠಿತಂ ।
ಕೋಟಿತ್ರಯಂ ತು ಲಿಂಗಾನಾಂ ಸ್ಥಾಪನೀಯಮತಸ್ತ್ವಯಾ ॥೨೫॥
ಇತಿ ತಸ್ಯ ವಚಃ ಶ್ರುತ್ವಾ ದೀನಬುದ್ಧೇರ್ಮರಿಷ್ಯತಃ ।
ತಥಾ ಸಾಧು ಕರೋಮೀತಿ ಪ್ರತಿಜ್ಞಾತಂ ಮಯಾ ತದಾ ॥೨೬॥
ಯುಗಪಚ್ಛಿವಲಿಂಗಾನಾಂ ಕೋಟಿತ್ರಯಮನುತ್ತಮಂ ।
ಪ್ರತಿಷ್ಠಾಪ್ಯಂ ಯಥಾಶಾಸ್ತ್ರಮಿತಿ ಮೇ ನಿಶ್ಚಯೋಽಭವತ್ ॥೨೭॥
ಲಿಂಗಕೋಟಿತ್ರಯಸ್ಯೇಹ ಯುಗಪತ್ ಸ್ಥಾಪನಾವಿಧೌ ।
ಅವಿದನ್ನೇಕಮಾಚಾರ್ಯಮಹಮೇವಮವಸ್ಥಿತಃ ॥೨೮॥

ಅಜ್ಞಾನದಿಂದೊಡಗೂಡಿದ ನಾವೆಲ್ಲರೂ ದೊಡ್ಡವರ ವಿಷಯದಲ್ಲಿ ದ್ರೋಹವನ್ನು ಮಾಡಿದವರಾಗಿ, ಇಂತಹ ದುರವಸ್ಥೆಯನ್ನು ಹೊಂದಿದೆವು. ದೈವಗತಿಯು ದುಸ್ತರವಾದುದಷ್ಟೆ! ॥೨೩॥ ಈ ಲಂಕಾಪಟ್ಟಣದಲ್ಲಿ ಒಂಭತ್ತುಕೋಟಿ ಶಿವಲಿಂಗಗಳನ್ನು ಸ್ಥಾಪಿಸಬೇಕೆಂದು ಪೂರ್ವದಲ್ಲಿ ನಾನು ಸಂಕಲ್ಪವನ್ನು ಮಾಡಿದ್ದೆನು; ಆದರೆ ಆ ಸಂಕಲ್ಪವು ಹಾಗೆಯೇ ಉಳಿದಿರುವುದು. ॥೨೪॥ ಆರುಕೋಟಿ ಶಿವಲಿಂಗಗಳನ್ನು ಶಾಸ್ತ್ರವಿಧಿಗನುಸಾರವಾಗಿ ಸ್ಥಾಪಿಸಿರುವೆನು; ಇನ್ನು ಉಳಿದಿರುವ ಮೂರುಕೋಟಿ ಶಿವಲಿಂಗಗಳನ್ನು ಮಾತ್ರ ನೀನು ಸ್ಥಾಪಿಸಬೇಕು. ॥೨೫॥ ಮರಣೋನ್ಮುಖನೂ ದೀನಬುದ್ಧಿಯುಳ್ಳವನೂ ಆದ ರಾವಣನ ಈ ಪ್ರಕಾರವಾದ ಮಾತುಗಳನ್ನು ಕೇಳಿ, ಹಾಗೆಯೇ ಆಗಲಿ; ಮೂರುಕೋಟಿಶಿವಲಿಂಗಗಳನ್ನು ಶಾಸ್ತ್ರವಿಧಿಗನುಸಾರವಾಗಿ ಸ್ಥಾಪಿಸುತ್ತೇನೆಂದು ನಾನು ಆಗ ಪ್ರತಿಜ್ಞೆಯನ್ನು ಮಾಡಿದೆನು. ॥೨೬॥ ಅತ್ಯಂತ ಶ್ರೇಷ್ಠವಾದ ಮೂರುಕೋಟಿಶಿವಲಿಂಗಗಳನ್ನು ಏಕಕಾಲದಲ್ಲಿಯೇ ವಿಧಿಗನುಸಾರವಾಗಿ ಸ್ಥಾಪಿಸಬೇಕೆಂದು ನಿಶ್ಚಯಿಸಿಕೊಂಡೆನು. ॥೨೭॥ ಈ ಭೂಮಂಡಲದಲ್ಲಿ ಏಕಕಾಲದಲ್ಲಿಯೇ ಮೂರುಕೋಟಿಶಿವಲಿಂಗಗಳ ಪ್ರತಿಷ್ಠಾವಿಧಿಯಲ್ಲಿ ಸಮರ್ಥನಾದ ಆಚಾರ್ಯನನ್ನು ಕಾಣದವನಾಗಿ, ನಾನು ಈವರೆಗೆ ಹೀಗೆಯೇ ನಿರಾಶನಾಗಿರುವೆನು. ॥೨೮॥

ಶಿವಶಾಸ್ತ್ರವಿಶೇಷಜ್ಞ ಶಿವಜ್ಞಾನನಿಧಿರ್ಭವಾನ್ ।
ಆಚಾರ್ಯಭಾವಮಾಸಾದ್ಯ ಮಮ ಪೂರಯ ವಾಂಛಿತಂ ॥೨೯॥

ತಸ್ಯೇತಿ ವಚನಂ ಶ್ರುತ್ವಾ ರಾಕ್ಷಸೇಂದ್ರಸ್ಯ ಧೀಮತಃ ।
ತಥೇತಿ ಪ್ರತಿಶುಶ್ರಾವ ಸರ್ವಜ್ಞೋ ಗಣನಾಯಕಃ ॥೩೦॥

ತತ್ರ ಸಂತುಷ್ಟಚಿತ್ತಸ್ಯ ಪೌಲಸ್ತ್ಯಸ್ಯೇಷ್ಟಸಿದ್ಧಯೇ ।
ಕೋಟಿತ್ರಯಂ ತು ಲಿಂಗಾನಾಂ ಯಥಾಶಾಸ್ತ್ರಂ ಯಥಾವಿಧಿ ॥
ತ್ರಿಕೋಟ್ಯಾಚಾರ್ಯರೂಪೇಣ ಸ್ಥಾಪಿತಂ ತೇನ ತತ್ಕ್ಷಣೇ ॥೩೧॥

ತಾದೃಶಂ ತಸ್ಯ ಮಾಹಾತ್ಮ್ಯಂ ಸಮಾಲೋಕ್ಯ ವಿಭೀಷಣಃ ।
ಪ್ರಣನಾಮ ಮುಹುರ್ಭಕ್ತ್ಯಾ ಪಾದಯೋಸ್ತಸ್ಯ ವಿಸ್ಮಿತಃ ॥೩೨॥

ಪ್ರಣತಂ ವಿನಯೋಪೇತಂ ಪ್ರಹೃಷ್ಟಂ ರಾಕ್ಷಸೇಶ್ವರಂ ।
ಅನುಗೃಹ್ಯ ಸ್ವಮಾಹಾತ್ಮ್ಯಾದ್ರೇಣುಕೋಽಂತರ್ಹಿತೋಽಭವತ್ ॥೩೩॥

ವಿಭೀಷಣೋಽಪಿ ಹೃಷ್ಟಾತ್ಮಾ ರೇಣುಕಸ್ಯ ಪ್ರಸಾದತಃ ।
ಶಿವಭಕ್ತಿರಸಾಸಕ್ತಃ ಸ್ಥಿರಂ ರಾಜ್ಯಮಪಾಲಯತ್ ॥೩೪॥

ಶಿವಶಾಸ್ತ್ರರಹಸ್ಯಜ್ಞನೂ, ಶಿವಜ್ಞಾನಸಮುದ್ರನೂ ಆದ ಎಲೈ ಶ್ರೀರೇಣುಕಾಚಾರ್ಯನೇ! ನೀನು ಮೂರುಕೋಟಿ ಗುರುರೂಪವನ್ನು ತಾಳಿ, ನನ್ನ ಮನೋರಥವನ್ನು ಪೂರ್ತಿಗೊಳಿಸು. ॥೨೯॥ ಸರ್ವಜ್ಞನೂ ಪ್ರಮಥಾಧಿಪತಿಯೂ ಆದ ಶ್ರೀರೇಣುಕಾಚಾರ್ಯನು, ರಾಕ್ಷಸೇಶ್ವರನಾದ ವಿಭೀಷಣನ ಮಾತುಗಳನ್ನು ಕೇಳಿ, ಹಾಗೆಯೇ ಆಗಲೆಂದು ಅಪ್ಪಣೆಕೊಡಿಸಿದನು. ॥೩೦॥ ಸಂತುಷ್ಟಚಿತ್ತನಾದ ವಿಭೀಷಣನ ಮನೋರಥಸಿದ್ಧಿಗಾಗಿ ಶ್ರೀರೇಣುಕಾಚಾರ್ಯನು ಮೂರುಕೋಟಿಗುರುರೂಪವನ್ನು ತಾಳಿ, ಆ ಲಂಕಾಪಟ್ಟಣದಲ್ಲಿ ಮೂರುಕೋಟಿಶಿವಲಿಂಗಗಳನ್ನು ಶಾಸ್ತ್ರವಿಧಿಗನುಸಾರವಾಗಿ, ಆ ಕ್ಷಣದಲ್ಲಿಯೇ ಸ್ಥಾಪಿಸಿದನು. ॥೩೧॥ ವಿಭೀಷಣನು ಈ ಪ್ರಕಾರವಾಗಿರುವ ಶ್ರೀರೇಣುಕಾಚಾರ್ಯನ ಮಹಿಮೆಯನ್ನು ನೋಡಿ ಆಶ್ಚರ್ಯಯುತನಾಗಿ, ಗುರುಸಾರ್ವಭೌಮನ ಪಾದಗಳಿಗೆ ಅಸಾಧಾರಣಭಕ್ತಿಯಿಂದ ಪುನಃಪುನಃ ನಮಸ್ಕರಿಸಿದನು. ॥೩೨॥ ಶ್ರೀರೇಣುಕಾಚಾರ್ಯನು ನಮನಶೀಲನೂ, ವಿನಯಾನ್ವಿತನೂ, ಸಂತುಷ್ಟನೂ, ರಾಕ್ಷಸಸಾರ್ವಭೌಮನೂ ಆದ ವಿಭೀಷಣನನ್ನು ಅನುಗ್ರಹಿಸಿ, ತನ್ನ ಮಹಿಮೆಯಿಂದ ಅಂತರ್ಧಾನವನ್ನು ಹೊಂದಿದನು. ॥೩೩॥ ಶ್ರೀರೇಣುಕಾಚಾರ್ಯನ ಅನುಗ್ರಹದಿಂದ ಸಂತುಷ್ಟಾತ್ಮನೂ, ಶಿವಭಕ್ತಿರೂಪರಸಸ್ವೀಕಾರನಿರತನೂ ಆದ ವಿಭೀಷಣನು ತನ್ನ ಸಾಮ್ರಾಜ್ಯವನ್ನು ಚಿರಕಾಲವಾಗಿ ಆಳಿದನು. ॥೩೪॥



ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ಮೂರುಕೋಟಿ
ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು
ಸ್ಥಾಪಿಸುವರು.

ರೇಣುಕೋಽಪಿ ಮಹಾತೇಜಾಃ ಸಂಚರನ್ ಕ್ಷಿತಿಮಂಡಲೇ ।
ಪ್ರಚ್ಛನ್ನಶ್ಚ ಪ್ರಕಾಶಶ್ಚ ಪರಮಾದ್ವೈತಭಾವತಃ ॥೩೫॥
ಕಾಂಶ್ಚಿದ್ದೃಷ್ಟಿನಿಪಾತೇನ ಕರುಣಾರಸವರ್ಷಿಣಾ ।
ಅಪರಾನುಪದೇಶೇನ ಶಿವಾದ್ವೈತಾಭಿಮರ್ಶಿನಾ ॥೩೬॥
ಅನ್ಯಾಂಶ್ಚ ಸಹವಾಸೇನ ಸಮಸ್ತಮಲಹಾರಿಣಾ ।
ಕೃತಾರ್ಥಯನ್ ಜನಾನ್ ಸರ್ವಾನ್ ಕೃತಿನಃ ಪಕ್ವಕರ್ಮಿಣಃ ॥೩೭॥
ದರ್ಶಯಿತ್ವಾ ನಿಜಾಧಿಕ್ಯಂ ಶಿವದರ್ಶನಲಾಲಸಃ ।
ಖಂಡಯಿತ್ವಾ ದುರಾಚಾರಾನ್ ಪಾಷಂಡಾನ್ ಭಿನ್ನದರ್ಶನಾನ್ ॥೩೮॥
ಯಂತ್ರಮಂತ್ರಕಲಾಸಿದ್ಧಾನ್ ವಿಮತಾನ್ ಸಿದ್ಧಮಂಡಲಾನ್ ।
ವಿಜಿತ್ಯ ಸ್ವಪ್ರಭಾವೇನ ಸ್ಥಾಪಯಿತ್ವಾ ಶಿವಾಗಮಾನ್ ॥
ಆಜಗಾಮ ನಿಜಾವಾಸಂ ಕುಲ್ಯಪಾಕಾಭಿಧಂ ಸ್ಥಲಂ ॥೩೯॥
ತತ್ರ ಸಂಭಾವಿತಃ ಸರ್ವೈರ್ಜನೈಃ ಶಿವಪರಾಯಣೈಃ ।
ಸೋಮನಾಥಾಭಿಧಾನಸ್ಯ ಶಿವಸ್ಯ ಪ್ರಾಪ ಮಂದಿರಂ ॥೪೦॥

ಇತ್ತ ಮಹಾತೇಜೋರೂಪಿಯಾದ ಶ್ರೀರೇಣುಕಾಚಾರ್ಯನಾದರೋ, ಭೂಮಂಡಲದಲ್ಲಿ ಅನೇಕವರ್ಷಗಳವರೆಗೆ ಗುಪ್ತವಾಗಿಯೂ, ಅನೇಕವರ್ಷಗಳವರೆಗೆ ಪ್ರಕಟವಾಗಿಯೂ ಶಿವಾದ್ವೈತಭಾವದಿಂದ ಸಂಚರಿಸುವವನಾಗಿ, ಕೆಲವರನ್ನು ಕೃಪಾರಸವರ್ಷಣಶೀಲವಾಗಿರುವ ಕಟಾಕ್ಷವೀಕ್ಷಣದಿಂದಲೂ, ಬೇರೆ ಕೆಲವರನ್ನು ಶಿವಾದ್ವೈತಪ್ರಕಾಶಕವಾದ ಉಪದೇಶದಿಂದಲೂ, ಸರ್ವಕಲಾಕುಶಲರೂ ಪರಿಪಕ್ವ ಕರ್ಮಿಗಳೂ ಆದ ಮಿಕ್ಕ ಸಮಸ್ತಜನರನ್ನು ಆಣವಾದಿಮಲನಾಶಕವಾದ ಸಹವಾಸ ದಿಂದಲೂ ಧನ್ಯರನ್ನಾಗಿ ಮಾಡಿದನು. ॥೩೫-೩೬-೩೭॥ ಶಿವಶಾಸ್ತ್ರಲೋಲುಪನಾದ ಶ್ರೀಜಗದ್ಗುರುರೇಣುಕಾಚಾರ್ಯನು ನಾನಾವಿಧವಾದ ಲೀಲಾವೈಭವದಿಂದ ತನ್ನ ಮಹತ್ತ್ವವನ್ನು ಸರ್ವತ್ರ ಪ್ರಕಾಶಪಡಿಸಿ, ದುರಾಚಾರಿಗಳೂ ನಾಸ್ತಿಕದರ್ಶನಾಸಕ್ತರೂ ಆದ ಪಾಷಂಡಿಗಳನ್ನು ಖಂಡಿಸಿ, ಯಂತ್ರಕಲಾಸಿದ್ಧರೂ, ಮಂತ್ರಕಲಾಸಿದ್ಧರೂ, ದುರ್ಮತಪ್ರವಿಷ್ಟರೂ ಆದ ಕುಟಿಲಸಿದ್ಧರನ್ನು ತನ್ನ ಮಹಿಮೆಯಿಂದ ಜಯಿಸಿ, ಶಿವಸಿದ್ಧಾಂತವನ್ನು ಸ್ಥಾಪಿಸಿ, ತನ್ನ ವಾಸಭೂಮಿಯಾದ ಕುಲ್ಯಪಾಕನಾಮಕ ಶಿವಕ್ಷೇತ್ರಕ್ಕೆ ಆಗಮಿಸಿದನು. ॥೩೮-೩೯॥ ಶ್ರೀರೇಣುಕಾಚಾರ್ಯನು ಆ ಕ್ಷೇತ್ರದಲ್ಲಿ ರುವ ಶಿವಭಕ್ತಿಪರಾಯಣರಾದ ಸಮಸ್ತಜನರಿಂದ ಸತ್ಕರಿಸಲ್ಪಟ್ಟವನಾಗಿ, ಸೋಮ ನಾಥನಾಮಕನಾದ ಶಿವನ ಮಂದಿರಕ್ಕಾಗಮಿಸಿದನು. ॥೪೦॥

ಪಶ್ಯತಾಂ ತತ್ರ ಸರ್ವೇಷಾಂ ಭಕ್ತಾನಾಂ ಶಿವಯೋಗಿನಾಂ |
ತನ್ವಾನೋ ವಿಸ್ಮಯಂ ಭಾವೈಸ್ತುಷ್ಟಾವ ಪರಮೇಶ್ವರಂ ||೪೧||
ದೇವದೇವ ಜಗನ್ನಾಥ ಜಗತ್ಕಾರಣಕಾರಣ |
ಬ್ರಹವಿಷ್ಣುಸುರಾಧೀಶವಂದ್ಯಮಾನಪದಾಂಬುಜ ||೪೨||
ಸಮಸ್ತವೇದವೇದಾಂತಪರಿಬೋಧಿತವೈಭವ |
ಸಂಸಾರವೈದ್ಯ ಸರ್ವಜ್ಞ ಸರ್ವಶಕ್ತಿನಿರಂಕುಶ ||೪೩||
ಸಚ್ಚಿದಾನಂದಸರ್ವಸ್ವ ಪರಮಾಕಾಶವಿಗ್ರಹ |
ಸಮಸ್ತಜಗದಾಧಾರ ಜ್ಯೋತಿರ್ಲಿಂಗವಿಜೃಂಭಣ ||೪೪||
ಗುಣತ್ರಯಪದಾತೀತ ಮಲತ್ರಯವಿನಾಶನ |
ಜಗತ್ರಯವಿಲಾಸಾತ್ಮನ್ ಶ್ರುತಿತ್ರಯವಿಲೋಚನ ||೪೫||
ಪಾಹಿ ಮಾಂ ಪರಮೇಶಾನ ಪಾಹಿ ಮಾಂ ಪಾರ್ವತೀಪತೇ |
ತ್ವದಾಜ್ಞಯಾ ಮಯೈತಾವತ್ಕಾಲಮಾತ್ರಂ ಮಹೀತಲೇ ||
ಅಚಾರಿ ಭವದುಕ್ತಾನಾಮಾಗಮಾನಾಂ ಪ್ರಸಿದ್ಧಯೇ ||೪೬||

ಆ ಸೋಮನಾಥದೇವಾಲಯದಲ್ಲಿ ಸಮಸ್ತಭಕ್ತರೂ ಶಿವಯೋಗಿಗಳೂ ನೋಡುತ್ತಿರಲು, ಶ್ರೀರೇಣುಕಾಚಾರ್ಯನು ಲೀಲಾಭಾವಗಳಿಂದ ಆಶ್ಚರ್ಯವನ್ನುಂಟು ಮಾಡುವವನಾಗಿ, ಪರಮೇಶ್ವರನನ್ನು ಈ ರೀತಿಯಾಗಿ ಸ್ತುತಿಸಿದನು. ||೪೧|| ದೇವದೇವನೂ, ಜಗನ್ನಾಥನೂ, ಜಗತ್ಕಾರಣಕಾರಣನೂ, ಬ್ರಹ್ಮ-ವಿಷ್ಣು-ಇಂದ್ರಾದಿ ಸಮಸ್ತದೇವತಾಸಮೂಹದಿಂದ ನಮಸ್ಕರಿಸಲ್ಪಡುತ್ತಿರುವ ಪಾದಕಮಲಗಳುಳ್ಳವನೂ, ಸಮಸ್ತವೇದವೇದಾಂತಾದಿಶಾಸ್ತ್ರಗಳಿಂದ ವರ್ಣಿಸಲ್ಪಡುತ್ತಿರುವ ಲೀಲಾವೈಭವವುಳ್ಳವನೂ, ಜನನಮರಣರೂಪಸಂಸಾರರೋಗಕ್ಕೆ ವೈದ್ಯನಂತಿರುವವನೂ, ಸರ್ವಜ್ಞನೂ, ಸಮಸ್ತಶಕ್ತಿಗಳಿಂದ ತಡೆಯಿಲ್ಲದವನೂ, ಸತ್-ಚಿತ್-ಆನಂದಗಳಿಗೆ ನಿಧಿಸ್ವರೂಪನೂ, ಚಿದಾಕಾಶಸ್ವರೂಪನೂ, ಸಮಸ್ತಜಗತ್ತುಗಳಿಗೆ ಆಧಾರಭೂತನೂ, ಜ್ಯೋತಿರ್ಲಿಂಗರೂಪದಿಂದ ಸರ್ವತ್ರ ವ್ಯಾಪಿಸಿರುವವನೂ, ಸತ್ತ್ವಾದಿತ್ರಿಗುಣಸ್ಥಾನಾತೀತನೂ, ಆಣವಾದಿಮಲತ್ರಯನಾಶಕನೂ, ಜಗತ್ರಯವಿಕಾಸವೇ ಸ್ವರೂಪವಾಗುಳ್ಳವನೂ, ಋಗ್ಯಜುಃಸಾಮಗಳೆಂಬ ಮೂರು ವೇದಗಳೇ ನೇತ್ರಗಳಾಗುಳ್ಳವನೂ, ಪಾರ್ವತೀಪತಿಯೂ ಆದ ಎಲೈ ಪರಮೇಶ್ವರನೇ! ನನ್ನನ್ನು ರಕ್ಷಿಸು; ನಿನ್ನ ಆಜ್ಞಾನುಸಾರವಾಗಿ ನಾನು ಇಲ್ಲಿಯವರೆಗೆ ಭೂಮಂಡಲದಲ್ಲಿ, ನಿನ್ನಿಂದುಕ್ತಗಳಾದ ಆಗಮಗಳ (ಶಿವಾಗಮಗಳ) ಪ್ರಸಿದ್ಧಿಗಾಗಿ ಸಂಚರಿಸಿದೆನು; ಎಲೈ ಶಂಕರನೇ! ಇನ್ನು ಮೇಲೆ

ಇತಃ ಪರಂ ಸ್ವರೂಪಂ ತೇ ಪ್ರಾಪ್ತುಕಾಮೋಽಸ್ಮಿ ಶಂಕರ।
ಅಂತರಂ ದೇಹಿ ಮೇ ಕಿಂಚಿದನುಕಂಪಾವಿಶೇಷತಃ ॥೪೭॥

ಇತ್ಯುಕ್ತೇ ಗಣನಾಯಕೇನ ಸಹಸಾ ಲಿಂಗಾತ್ತತಃ ಶಂಕರೋ
ವತ್ಸಾಗಚ್ಛ ಮಹಾನುಭಾವ ಭವತೋ ಭಕ್ತ್ಯಾ ಪ್ರಸನ್ನೋಽಸ್ಮ್ಯಹಂ।
ಇತ್ಯುಚ್ಚೈರಗದದ್ವಚಸ್ತನುಭೃತಾಮಾಶ್ಚರ್ಯಮಾಸೀತ್ತದಾ
ದಿವ್ಯೋ ದುಂದುಭಿರಾನನಾದ ಗಗನೇ ಪುಷ್ಪಂ ವವರ್ಷುರ್ಗಣಾಃ ॥೪೮॥

ಶ್ರುತ್ವಾ ಲಿಂಗಾದ್ವಚನಮುದಿತಂ ಶಾಂಕರಂ ಸಾನುಕಂಪಂ
ಸಂಹೃಷ್ಟಾತ್ಮಾ ಗಣಪತಿರಥೋ ಜ್ಯೋತಿಷಾ ದೀಪ್ಯಮಾನಃ।
ಜಾತೋತ್ಕಂಠೈಃ ಶಿವಮನುಪರೈರ್ಯೋಗಿಭಿಃ ಸ್ತೂಯಮಾನೋ
ಜ್ಯೋತಿರ್ಲಿಂಗಂ ಪರಮುಪವಿಶತ್ ಸ್ವಪ್ರಕಾಶಂ ತದಾನೀಂ ॥೪೯॥

ಲೀನೇ ತಸ್ಮಿನ್ ಶಾಂಕರೇ ಸ್ವಪ್ರಕಾಶೇ ದಿವ್ಯಾಕಾರೇ ರೇಣುಕೇ ಸಿದ್ಧನಾಥೇ।
ಸರ್ವೋ ಲೋಕೋ ವಿಸ್ಮಿತೋಽಭೂತ್ತದಾನೀಂ ಶೈವೀ ಭಕ್ತಿಃ ಸಪ್ರಮಾಣಾ ಬಭೂವ ॥೫೦॥

ನಿನ್ನ ಸ್ವರೂಪವನ್ನು ಪಡೆಯಲು ಇಚ್ಛೆಯುಳ್ಳವನಾಗಿದ್ದೇನೆ; ಕೃಪಾವಿಶೇಷದಿಂದ ನನಗೆ ಸ್ವಲ್ಪ ಸ್ಥಾನವನ್ನು ಅನುಗ್ರಹಿಸು. ॥೪೨-೪೩-೪೪-೪೫-೪೬-೪೭॥ ಈ ರೀತಿಯಾಗಿ ಪ್ರಮಥಪುಂಗವನಾದ ಶ್ರೀರೇಣುಕಾಚಾರ್ಯನು ಪ್ರಾರ್ಥಿಸಲಾಗಿ, ಆ ಕ್ಷಣದಲ್ಲಿಯೇ ಶಂಕರನು, ಆ ಸೋಮನಾಥಲಿಂಗಮುಖದಿಂದ—"ಮಹಾನುಭಾವನಾದ ಎಲೈ ಮುದ್ದುಮಗನೇ! ನಿನ್ನ ಭಕ್ತಿಯಿಂದ ಪ್ರಸನ್ನನಾಗಿರುವೆನು; ಬಾ." ಎಂಬೀ ವಾಕ್ಯವನ್ನು ಉನ್ನತಸ್ವರದಿಂದ ನುಡಿದನು. ಆಗ ಅಲ್ಲಿದ್ದ ಜನರಿಗೆ ಆಶ್ಚರ್ಯವಾಯಿತು; ದೇವದುಂದುಭಿಯು ಬಾರಿಸಿತು; ಆಕಾಶದಲ್ಲಿ ದೇವಗಣಪ್ರಮಥಗಣರೆಲ್ಲರೂ ಪುಷ್ಪವೃಷ್ಟಿಗರೆದರು. ॥೪೮॥ ಸೋಮನಾಥಲಿಂಗಮುಖದಿಂದ ಕೃಪಾಪೂರ್ವಕವಾಗಿ ನುಡಿದ ಶಿವಸಂಬಂಧಿಯಾದ ವಾಕ್ಯವನ್ನು ಕೇಳಿ ಸಂತುಷ್ಟಾತ್ಮನಾದವನೂ, ತೇಜೋಮಯಶರೀರಕಾಂತಿಯಿಂದ ಪ್ರಕಾಶಿಸುತ್ತಿರುವವನೂ, ಪ್ರಮಥಪುಂಗವನೂ, ಶಿವವಾಕ್ಯಶ್ರವಣದಿಂದ ಉತ್ಪನ್ನವಾದ ಉತ್ಕಟೇಚ್ಛೆಯುಳ್ಳವರೂ ಶಿವಮಂತ್ರಜಪನಿರತರೂ ಆದ ಶಿವಯೋಗಿಗಳಿಂದ ಸ್ತೋತ್ರಮಾಡಲ್ಪಟ್ಟವನೂ ಆದ ಶ್ರೀರೇಣುಕಗಣೇಶ್ವರನು—ಆ ಸಮಯದಲ್ಲಿಯೇ ಸರ್ವೋತ್ಕೃಷ್ಟವೂ ಸ್ವಪ್ರಕಾಶಸ್ವರೂಪವೂ ಆದ ಜ್ಯೋತಿರ್ಲಿಂಗವನ್ನು ಪ್ರವೇಶಿಸಿದನು. ॥೪೯॥ ತೇಜೋಮಯಶರೀರಧಾರಿಯೂ, ಸಿದ್ಧಕುಲಚಕ್ರವರ್ತಿಯೂ ಆದ ಶ್ರೀರೇಣುಕಗಣನಾಥನು ಸ್ವಪ್ರಕಾಶಸ್ವರೂಪವಾದ ಸೋಮನಾಥಲಿಂಗದಲ್ಲಿ ಅಡಗಲು, ಸಮಸ್ತಜನರು ಆಶ್ಚರ್ಯಯುತರಾದರು. ಆಗ ಶಿವಭಕ್ತಿಯು ಪ್ರಮಾಣಸಿದ್ಧವಾದುದಾಯಿತು. ॥೫೦॥

ಶ್ರೀವೇದಾಗಮವೀರಶೈವಸರಣಿಂ ಶ್ರೀಷಟ್ಸ್ಥಲೋದ್ಯನ್ಮಣಿಂ
ಶ್ರೀಜೀವೇಶ್ವರಯೋಗಪದ್ಮತರಣಿಂ ಶ್ರೀಗೋಪ್ಯಚಿಂತಾಮಣಿಂ ।
ಶ್ರೀಸಿದ್ಧಾಂತಶಿಖಾಮಣಿಂ ಲಿಖತಿ ಯಸ್ತಂ ಲೇಖಯತ್ಯಾದರಾತ್
ಶ್ರೋತಾ ಶ್ರಾವಯಿತಾ ಸ ಯಾತಿ ವಿಮಲಾಂ ಭುಕ್ತಿಂ ಚ ಮುಕ್ತಿಂ ಪರಾಂ ॥
॥೫೧॥

ಇತಿ ಶ್ರೀಸಿದ್ಧಾಂತಶಿಖಾಮಣೌ ವಿಭೀಷಣಾಭೀಷ್ಟ
ವರಪ್ರದಾನಪ್ರಸಂಗೋನಾಮ

ಏಕವಿಂಶತಿತಮಪರಿಚ್ಛೇದಃ ಪರಿಸಮಾಪ್ತಃ

ಶ್ರೀಸಿದ್ಧಾಂತಶಿಖಾಮಣಿಃ ಸಮಾಪ್ತಃ

ಶ್ರೀಮನ್ನಿಗಮಾಗಮಪ್ರಸಿದ್ಧವೀರಶೈವತತ್ತ್ವಪದ್ಧತಿಯುಕ್ತವಾದುದೂ, ಷಟ್‌ಸ್ಥಲಗಳೆಂಬ ಶ್ರೇಷ್ಠರತ್ನಗಳುಳ್ಳದೂ, ಲಿಂಗಾಂಗಸಾಮರಸ್ಯರೂಪಕಮಲಕ್ಕೆ ಸೂರ್ಯಸದೃಶವಾದುದೂ, ಶಿವರಹಸ್ಯಕ್ಕೆ ಚಿಂತಾರತ್ನದಂತಿರುವುದೂ ಆದ ಶ್ರೀಸಿದ್ಧಾಂತ ಶಿಖಾಮಣಿಯನ್ನು, ಯಾವನು ಪ್ರೀತಿಯಿಂದ ಬರೆಯುವನೋ ಮತ್ತು ಅನ್ಯರಿಂದ ಬರೆಯಿಸುವನೋ, ಯಾವನು ಶ್ರವಣಮಾಡುವನೋ ಮತ್ತು ಅನ್ಯರಿಗೆ ಶ್ರವಣ ಮಾಡಿಸುವನೋ, ಅವನು ನಿರ್ಮಲವಾದ ಭೋಗವನ್ನೂ, ಶ್ರೇಷ್ಠವಾದ ಮೋಕ್ಷವನ್ನೂ ಪಡೆಯುವನು. ॥೫೧॥

ಇಂತು ಶ್ರೀಸಿದ್ಧಾಂತಶಿಖಾಮಣಿಯಲ್ಲಿ ವಿಭೀಷಣಾಭೀಷ್ಟ
ವರಪ್ರದಾನವಿಚಾರಾತ್ಮಕವಾದ

ಇಪ್ಪತ್ತೊಂದನೆಯ ಪರಿಚ್ಛೇದವು ಪರಿಸಮಾಪ್ತವಾದುದು.

ಶ್ರೀಸಿದ್ಧಾಂತಶಿಖಾಮಣಿಯು ಸಮಾಪ್ತವಾದುದು

ಶಿವಂ ಭೂಯಾತ್ !

ಶ್ರೀಜಗದ್ಗುರುರೇಣುಕಾಚಾರ್ಯಃ ಪ್ರಸೀದತು.

ಸಿದ್ಧಾಂತಶಿಖಾಮಣಿಶ್ಲೋಕಾನುಕ್ರಮಣಿಕಾ.

ಶ್ಲೋಕಃ	ಪೃಷ್ಠಂ

ಆ

ಶ್ಲೋಕಃ ಪೃಷ್ಠಂ

ಭ

ಹ

ಶಿವಾಗಮಾಭಿಪ್ರಾಯಕ್ಕೂ ವೀರಶೈವಸಿದ್ಧಾಂತಕ್ಕೂ ಅತ್ಯಂತವಿರುದ್ಧವಾಗಿರುವ ಶ್ಲೋಕಗಳು ಈ ಗ್ರಂಥದಿಂದ ಬೇರ್ಪಡಿಸಲ್ಪಟ್ಟ ವಿವರ—

ತೇಷು ಪ್ರಮಥವರ್ಗೇಷು ಸೃಷ್ಟೇಷು ಪರಮಾತ್ಮನಾ । ರೇಣುಕೋದಾರುಕಶ್ಚೇತಿ ದ್ವಾವಭೂತಾಂ ಶಿವಪ್ರಿಯೌ ॥ ಸರ್ವವಿದ್ಯಾವಿಶೇಷಜ್ಞೌ ಸರ್ವಕಾರ್ಯವಿಚಕ್ಷಣೌ । ಮಾಯಾಮಲವಿನಿರ್ಮುಕ್ತೌ ಮಹಿಮಾತಿಶಯೋಜ್ಜ್ವಲೌ ॥ ಆತ್ಮಾನಂದಪರಿಸ್ಫೂರ್ತಿರಸಾಸ್ವಾದನಲಂಪಟೌ । ಶಿವತತ್ತ್ವಪರಿಜ್ಞಾನತಿರಸ್ಕೃತಭವಾಮಯೌ ॥ ನಾನಾಪಥಮಹಾಶೈವತಂತ್ರನಿರ್ವಾಹತತ್ಪರೌ । ವೇದಾಂತಸಾರಸರ್ವಸ್ವವಿವೇಚನವಿಚಕ್ಷಣೌ ॥ ನಿತ್ಯಸಿದ್ಧೌ ನಿರಾತಂಕೌ ನಿರಂಕುಶಪರಾಕ್ರಮೌ । ತಾದೃಶೌ ತೌ ಮಹಾಭಾಗೌ ಸಂವೀಕ್ಷ್ಯ ಪರಮೇಶ್ವರಃ ॥ ಸಮರ್ಥೌ ಸರ್ವಕಾರ್ಯೇಷು ವಿಶ್ವಾಸಪರಮಾಶ್ರಿತೌ । ಅಂತಃಪುರದ್ವಾರಪಾಲೌ ನಿರ್ಮಮೇ ನಿಯತೌ ವಿಭುಃ ॥ ಗಣೇಶ್ವರೌ ರೇಣುಕದಾರುಕಾವುಭೌ ವಿಶ್ವಾಸಭೂತೌ ನವಚಂದ್ರಮೌಲೇಃ । ಅಂತಃಪುರದ್ವಾರಗತೌ ಸದಾ ತೌ ವಿತೇನತುರ್ವಿಶ್ವಪತೇಸ್ತು ಸೇವಾಂ ॥ (ಪರಿ·೨) ಶಂಭೋರಾಹ್ವಾನಸಂತೋಷಸಂಭ್ರಮೇಣೈವ ದಾರುಕಂ। ಉಲ್ಲಂಘ್ಯ ಪಾರ್ಶ್ವಮಗಮಲ್ಲೋಕನಾಥಸ್ಯ ರೇಣುಕಃ ॥ ತಮಾಲೋಕ್ಯ ವಿಭುಸ್ತತ್ರ ಸಮುಲ್ಲಂಘಿತದಾರುಕಂ । ಮಾಹಾತ್ಮ್ಯಂ ನಿಜಭಕ್ತಾನಾಂ ದ್ಯೋತಯನ್ನಿದಮಬ್ರವೀತ್ ॥ ರೇರೇರೇಣುಕ ದುರ್ಬುದ್ಧೇ ಕಥಮೇಷ ತ್ವಯಾಧುನಾ । ಉಲ್ಲಂಘಿತಸ್ಸಭಾಮಧ್ಯೇ ಮಮಭಕ್ತೋ ಹಿ ದಾರುಕಃ ॥

ಲಂಘನಂ ಮಮಭಕ್ತಾನಾಂ ಪರಮಾನರ್ಥಕಾರಣಂ । ಆಯುಃಶ್ರಿಯಂಕುಲಂಕೀರ್ತಿಂ ನಿಹಂತಿ
ಹಿ ಶರೀರಿಣಾಂ ॥ ಮಮ ಭಕ್ತಮವಜ್ಞಾಯ ಮಾರ್ಕಂಡೇಯಂ ಪುರಾ ಯಮಃ । ಮತ್ಪಾದ
ತಾಡನಾದಾಸೀತ್ ಸ್ಮರಣೀಯಕಲೇವರಃ ॥ ಭೃಗೋಶ್ಚ ಶಂಕುಕರ್ಣಸ್ಯ ಮಮಭಕ್ತಿಮತೋ
ಸ್ತಯೋಃ । ಕೃತ್ವಾನಿಷ್ಟಮಭೂದ್ವಿಷ್ಣುರ್ವಿಕೇಶೋ ದಶಯೋನಿಭಾಕ್ ॥ ಮದ್ಭಕ್ತೇನ ದಧೀಚೇನ
ಕೃತ್ವಾಯುದ್ಧಂ ಜನಾರ್ದನಃ । ಭಗ್ನಚಕ್ರಾಯುಧಃಪೂರ್ವಂ ಪರಾಭವಮುಪಾಗಮತ್ ॥ ಕೃತಾ
ಶ್ವಮೇಧೋದಕ್ಷೋಪಿ ಮದ್ಭಕ್ತಾಂಶ್ಚ ಗಣೇಶ್ವರಾನ್ । ಅವಮತ್ಯ ಸಭಾಮಧ್ಯೇ ಮೇಷವಕ್ತ್ರೋಽ
ಭಾವತ್ಪುರಾ ॥ ಶ್ವೇತಸ್ಯಮಮಭಕ್ತಸ್ಯ ದುರತಿಕ್ರಮತೇಜಸಃ । ಔದಾಸೀನ್ಯೇನ ಕಾಲೋಪಿಮಯಾ
ದಗ್ಧಃಪುರಾಽಭವತ್ ॥ ಏಮಮನ್ಯೇಪಿ ಬಹವೋ ಮದ್ಭಕ್ತಾನಾಮತಿಕ್ರಮಾತ್ । ಪರಿಭೂತಾಹತಾ
ಶ್ಚಾಸನ್ ಭಕ್ತಾ ಮೇ ದುರತಿಕ್ರಮಾಃ ॥ ಅವಿಚಾರೇಣ ಮದ್ಭಕ್ತೋಲಂಘಿತೋ ದಾರುಕ
ಸ್ತ್ವಯಾ । ಏಷ ತ್ವಂ ರೇಣುಕಾನೇನ ಜನ್ಮವಾನ್ ಭವ ಭೂತಲೇ ॥ ಇತ್ಯುಕ್ತಃ ಪರಮೇಶೇನ
ಭಕ್ತಮಾಹಾತ್ಮ್ಯಶಂಸಿನಾ । ಪ್ರಾರ್ಥಯಾಮಾಸದೇವೇಶಂ ಪ್ರಣಿಪತ್ಯ ಸರೇಣುಕಃ ॥ ಮಾನುಷೀಂ
ಯೋನಿಮಾಸಾದ್ಯ ಮಹಾದುಃಖವಿವರ್ಧಿನೀಂ । ಜಾತ್ಯಾಯುರ್ಭೋಗವೈಷಮ್ಯಹೇತುಕರ್ಮೋಪ
ಪಾದಿನೀಂ ॥ ಸಮಸ್ತದೇವಕೈಂಕರ್ಯಕಾರ್ಪಣ್ಯಪ್ರಸವಸ್ಥಲೀಂ । ಮಹಾತಾಪತ್ರಯೋಪೇತಾಂ
ವರ್ಣಾಶ್ರಮನಿಯಂತ್ರಿತಾಂ ॥ ವಿಹಾಯತ್ವತ್ಪದಾಂಭೋಜಸೇವಾಂ ಕಿಂವಾ ವಸಾಮ್ಯಹಂ । ಯಥಾ
ಮೇ ಮಾನುಷೋ ಭಾವೋ ನಭವೇತ್ ಕ್ಷಿತಿಮಂಡಲೇ । ತಥಾ ಪ್ರಸಾದಂದೇವೇಶ ವಿಧೇಹಿ
ಕರುಣಾನಿಧೇ ॥ ಇತಿಸಂಪ್ರಾರ್ಥಿತೋ ದೇವೋ ರೇಣುಕೇನ ಮಹೇಶ್ವರಃ । ಮಾಭೈಷೀರ್ಮಮ
ಭಕ್ತಾನಾಂ ಕುತೋಭೀತಿರಿಹೇಷ್ಯತೇ ॥ (ಪರಿ-೩) ಆತ್ಮತ್ವಮೀಶ್ವರತ್ವಂಚ ಬ್ರಹ್ಮಣ್ಯೇಕತ್ರ ಕಲ್ಪಿ
ತಂ । ಬಿಂಬತ್ವಂಪ್ರತಿಬಿಂಬತ್ವಂ ಯಥಾ ಪೂಷಣಿ ಕಲ್ಪಿತಂ ॥ ಗುಣತ್ರಯವಿಭೇದೇನ ಪರತತ್ತ್ವೇ
ಚಿದಾತ್ಮನಿ । ಭೋಕ್ತೃತ್ವಂ ಚೈವ ಭೋಜ್ಯತ್ವಂ ಪ್ರೇರಕತ್ವಂಚ ಕಲ್ಪಿತಂ ॥ ಅಖಂಡೇಬ್ರಹ್ಮಚೈ
ತನ್ಯೇ ಕಲ್ಪಿತಂ ಗುಣಭೇದತಃ ॥ (ಪರಿ-೫) ತಸ್ಮಾಚ್ಛಿವಮಯಂ ಸರ್ವಂ ಜಗದೇಚ್ಚರಾಚರಂ ।
ತದಭಿನ್ನತಯಾ ಭಾತಿ ಸರ್ಪತ್ವಮಿವರಜ್ಜುತಃ ॥ ರಜ್ಜೌ ಸರ್ಪವದ್ಭಾತಿ ಶುಕ್ತೌಚ ರಜತತ್ವವತ್ ।
ಚೋರತ್ವವದಪಿ ಸ್ಥಾಣೌ ಮರೀಚ್ಯಾಂಚ ಜಲತ್ವವತ್ ॥ ಗಂಧರ್ವಪುರವದ್ವ್ಯೋಮ್ನಿ ಸಚ್ಚಿದಾ
ನಂದಲಕ್ಷಣೇ । ನಿರಸ್ತಭೇದಸದ್ಭಾವೇ ಶಿವೇವಿಶ್ವಂ ವಿರಾಜತೇ ॥ (ಪರಿ-೧೦) ಬ್ರಾಹ್ಮಣಃಕ್ಷತ್ರಿಯೋ
ವಾಪಿ ವೈಶ್ಯೋವಾಶೂದ್ರಏವವಾ । ಅಂತ್ಯಜೋವಾ ಶಿವೇಭಕ್ತಃ ಶಿವವನ್ಮಾನ್ಯಏವಸಃ ॥ ಶಿವಭಕ್ತಿ
ಸಮಾವೇಶೇ ಕ್ವಜಾತಿಪರಿಕಲ್ಪನಾ । ಇಂಧನೇಷ್ವಗ್ನಿದಗ್ಧೇಷು ಕೋವಾಭೇದಃ ಪ್ರಕೀರ್ತ್ಯತೇ ॥
(ಪರಿ-೧೧) ವೇದಾಂತವಾಕ್ಯಜಾಂವಿದ್ಯಾಂ ಲಿಂಗಮಾಹುಸ್ತಥಾಪರೇ । ತಪಸಜ್ಜ್ಞೇಯರೂಪತ್ವಾ
ಲ್ಲಿಂಗಸ್ಯ ಬ್ರಹ್ಮರೂಪಿಣಃ ॥ (ಪರಿ-೧೨) ಮಿಥ್ಯೇತಿ ಭಾವಯನ್ ವಿಶ್ವಂವಿಶ್ವಾತೀತಂ ಶಿವಂ
ಸ್ಮರನ್ । ಸತ್ತಾನಂದಚಿದಾಕಾರಂ ಕಥಂಬದ್ಧಮಿಹಾರ್ಹತಿ ॥ ಶಿವಾದನ್ಯಜ್ಜಗನ್ಮಿಥ್ಯಾ ಶಿವಸ್ಸಂ
ವಿತ್ಸ್ವರೂಪಕಃ । ಶಿವಸ್ತ್ವಮಿತಿ ನಿರ್ದಿಷ್ಟೋ ಗುರುಣಾಮುಕ್ತ ಏವಸಃ ॥ ಅಯಥಾರ್ಥಪ್ರಪಂ
ಚೋಽಯಂ ಪ್ರತಿತಿಷ್ಠತಿ ಶಂಕರೆ । ಸದಾತ್ಮನಿಯಥಾ ಶುಕ್ತೌರಜತತ್ತ್ವಂ ವ್ಯವಸ್ಥಿತಂ॥ (ಪರಿ-೧೭)
ಪರಕಾಯೇ ಕ್ರಿಯಾಪತ್ತಿಃ ಕಲ್ಪಿತೈವ ಪ್ರಕಾಶತೇ । ರಜ್ಜೌಭುಜಂಗವದ್ಯಸ್ಮಾತ್ ಕ್ರಿಯಾನಿಷ್ಪತ್ತಿ
ಮಾನಯಂ ॥ ಚಂದ್ರಸ್ಯ ಮೇಘಸಂಬಂಧಾತ್ ಯಥಾಗಮನಕಲ್ಪನಾ । ತಥಾ ದೇಹಸ್ಯ ಸಂಬಂ
ಧಾದಾರೋಪ್ಯಾ ಸ್ಯಾತ್ಕ್ರಿಯಾತ್ಮನಃ ॥ ಭಾನಃ ಪ್ರತೀಯಮಾನೋಪಿ ಪರಕಾಯೇತು ಕಲ್ಪಿತಃ ।
ಶುಕ್ತೌ ರಜತವದ್ಯಸ್ಮಾದ್ಭಾವನಿಷ್ಪತ್ತಿಮಾನಯಂ ॥ ಜ್ಞಾನಸ್ಯವ್ಯವಹಾರೇಪಿ ಜ್ಞೇಯಾಭಾವಾತ್
ಸ್ವಭಾವತಃ । ಸ್ವಪ್ನವದ್ಜ್ಞಾನನಿಷ್ಪತ್ತ್ಯಾ ಜ್ಞಾನನಿಷ್ಪನ್ನ ಇತ್ಯಸೌ ॥ ಸ್ವಪ್ನಜಾತಂಯಥಾಜ್ಞಾನಂ
ಸಹಸ್ವಾರ್ಥೈರ್ನಿವರ್ತತೇ । ತಥಾತ್ಮನಿ ಪ್ರಕಾಶೇತುಜ್ಞಾನಂ ಜ್ಞೇಯಂ ನಿವರ್ತತೇ ॥ ಅಖಂಡಾ
ನಂದಸಂವಿತ್ತಿಸ್ವರೂಪಂ ಬ್ರಹ್ಮಕೇವಲಂ । ಮಿಥ್ಯಾ ತದನ್ಯದಿತ್ಯೇಷಾಂ ಸ್ಥಿತಿರ್ಜ್ಞಾನಮಿಹೋಚ್ಯತೆ ॥
ಸತ್ತಾತ್ಮನಾನುವೃತ್ತಂ ಯದ್ಘಟಾದಿಷು ಪರಂಹಿ ತತ್ । ವ್ಯಾವರ್ತಮಾನಾ ಮಿಥ್ಯೇತಿ ಸ್ಥಿತಿರ್ಜ್ಞಾನ
ಮಿಹೋಚ್ಯತೇ ॥ ಅಕಾರಣಮಕಾರ್ಯಂ ಯದಶೇಷೋಪಾಧಿವರ್ಜಿತಂ । ತದ್ಬ್ರಹ್ಮತದಹಂ
ಚೇತಿ ನಿಷ್ಠಾ ಜ್ಞಾನಮುದೀರ್ಯತೇ ॥ ಪರಾತ್ಮನಿ ಕ್ರಿಯಾ ಸರ್ವಾ ಗಂಧರ್ವನಗರೀವ ಖೇ ।

ಪ್ರಕಾಶತ ಇತಿ ಪ್ರೋಕ್ತಂ ಕ್ರಿಯಾಯಾಸ್ತು ಪ್ರಕಾಶನಂ ॥ ಮುಖ್ಯಾರ್ಥೇ ಸಂಭವೇ ಜಾತೇ ಲಕ್ಷಣಾಯೋಗಸಂಶ್ರಯಾತ್ । ತದ್ಜ್ಞಾನಯೋಜನಂಯತ್ತದುಕ್ತಂ ಜ್ಞಾನಪ್ರಕಾಶನಂ ॥ (ಪರಿ-೧೯) ಮುಖ್ಯಾರ್ಥೋ ಲಕ್ಷಣಾರ್ಥಶ್ಚ ಯತ್ರನಾಸ್ತಿ ಚಿದಾತ್ಮನಿ । ವಿಶೃಂಖಲತಯಾ ತಸ್ಯ ಪ್ರಸಾದಃಸ್ವೀಕೃತೋಭವೇತ್ ॥ ಅನಾದ್ಯವಿದ್ಯಾಮೂಲಾಹಿ ಪ್ರತೀತಿರ್ಜಗತಾಮಿಯಂ । ಸ್ವಾತ್ಮೈಕಬೋಧಾತ್ತನ್ನಾಶೇ ಕುತೋವಿಶ್ವಪ್ರಕಾಶನಂ ॥ ಸ್ವಪ್ನೇದೃಷ್ಟಂ ಯಥಾವಸ್ತು ಪ್ರಬೋಧೇ ಲಯಮಶ್ನುತೇ । ತಥಾಸಾಂಸಾರಿಕಂ ಸರ್ವಮಾತ್ಮಜ್ಞಾನೇ ವಿನಶ್ಯತಿ ॥ ಅಸದೇವ ಜಗತ್ಸರ್ವಂ ಸದಿವ ಪ್ರತಿಭಾಸತೇ । ಜ್ಞಾತೇಶಿವೇ ತದಜ್ಞಾನಂ ಸ್ವರೂಪಮುಪಪದ್ಯತೇ ॥ ಯಸ್ಮಿನ್ಜ್ಯೋತಿಷಿ ಚಿದ್ರೂಪೇ ದೃಶ್ಯತೇ ನೈವಕಿಂಚನ । ಸದ್ರೂಪಂ ನಾಪ್ಯಸದ್ರೂಪಂ ಭಾವಾಭಾವಂವಿಮುಂಚತಃ ॥ ಜ್ಞೇಯಾಭಾವಾದ್ವಿಶೇಷೇಣ ಶೂನ್ಯಕಲ್ಪಂ ವಿಭಾವ್ಯತೇ । ಜ್ಞಾತೃಜ್ಞೇಯಾದಿಭಿಶ್ಶೂನ್ಯಂ ಶೂನ್ಯಂ ಜ್ಞಾನಾದಿಭಿರ್ಗುಣೈಃ ॥ ಆದಾವಂತೇಚ ಮಧ್ಯೇಚ ಶೂನ್ಯಂಸರ್ವತ್ರ ಸರ್ವದಾ । ದ್ವಿತೀಯೇನ ಪದಾರ್ಥೇನ ಶೂನ್ಯಂಶೂನ್ಯಂ ವಿಭಾವ್ಯತೇ ॥ ಶೂನ್ಯಜ್ಞಾನಾದಿಸಂಕಲ್ಪೇ ಶೂನ್ಯಸರ್ವಾರ್ಥಸಾಧನೇ ॥ ಯಸ್ಯ ಕಾರ್ಯದಶಾ ನಾಸ್ತಿ ಕಾರಣತ್ವಮಥಾಪಿವಾ । ಶೇಷತ್ವಂ ನೈವಶೇಷಿತ್ವಂ ಸ ಮುಕ್ತಃ ಪರ ಉಚ್ಯತೇ ॥ (ಪರಿ-೨೦)
